RA / BG-GPO /2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪ || ಬೆಂಗಳೂರು, ಗುರುವಾರ, ಜೂನ್ ೨೫, ೨೦೦೯ (ಆಷಾಡ -೪, ಶಕವರ್ಷ ೧೯೩೧) || ಸಂಚಿಕೆ ೨೬

ವಿಷಯಸೂಚಿ

ಸಂಖ್ಯೆ	ದಿನಾಂಕ	ಅಧಿಸೂಚನೆ ಸಂಖ್ಯೆ, ದಿನಾಂಕ ಮತ್ತು ವಿವರ
416	8.6.2009	ಸಂ. ಸಿಐ 160 ಎಸ್‌ಪಿಕ್ಯೂ 2009, ದಿ. 5.6.2009 – ಸುವರ್ಣ ಕರ್ನಾಟಕ ಕೈಗಾರಿಕೆ ಅಭಿವೃದ್ಧಿ ಕಾರಿಡಾರ್ ಯೋಜನೆಗಾಗಿ ಚಿತ್ರದುರ್ಗ ಜಿಲ್ಲೆಯ ಗುಂಡೇರಿ ಕಾವಲ್ ಗ್ರಾಮಕ್ಕೆ ಸಂಬಂಧಿಸಿದಂತೆ ಭೂಸ್ವಾಧೀನ ಅಧಿಸೂಚನೆ.
417	8.6.2009	ಸಂ. ಸಿಐ 161 ಎಸ್‌ಪಿಕ್ಯೂ 2009, ದಿ. 5.6.2009 – ಸುವರ್ಣ ಕರ್ನಾಟಕ ಕೈಗಾರಿಕೆ ಅಭಿವೃದ್ಧಿ ಕಾರಿಡಾರ್ ಯೋಜನೆಗಾಗಿ ಚಿತ್ರದುರ್ಗ ಜಿಲ್ಲೆಯ ಉಳ್ಳಾರ್ತಿ ಕಾವಲ್ ಗ್ರಾಮಕ್ಕೆ ಸಂಬಂಧಿಸಿದಂತೆ ಭೂಸ್ವಾಧೀನ ಅಧಿಸೂಚನೆ.
418	8.6.2009	ಸಂ. ಸಿಐ 177 ಎಸ್‌ಪಿಕ್ಯೂ 2009, ದಿ. 5.6.2009 – ಸುವರ್ಣ ಕರ್ನಾಟಕ ಕೈಗಾರಿಕೆ ಅಭಿವೃದ್ಧಿ ಕಾರಿಡಾರ್ ಯೋಜನೆಗಾಗಿ ಚಿತ್ರದುರ್ಗ ಜಿಲ್ಲೆಯ ಪಿಲಾಲ್ಲಿ ಗ್ರಾಮಕ್ಕೆ ಸಂಬಂಧಿಸಿದಂತೆ ಭೂಸ್ವಾಧೀನ ಅಧಿಸೂಚನೆ.
419	8.6.2009	ಸಂ. ಸಿಐ 178 ಎಸ್‌ಪಿಕ್ಯೂ 2009, ದಿ. 5.6.2009 – ಸುವರ್ಣ ಕರ್ನಾಟಕ ಕೈಗಾರಿಕೆ ಅಭಿವೃದ್ಧಿ ಕಾರಿಡಾರ್ ಯೋಜನೆಗಾಗಿ ಚಿತ್ರದುರ್ಗ ಜಿಲ್ಲೆಯ ಯಲ್ಲದಕೆರೆ ಗ್ರಾಮಕ್ಕೆ ಸಂಬಂಧಿಸಿದಂತೆ ಭೂಸ್ವಾಧೀನ ಅಧಿಸೂಚನೆ.
420	8.6.2009	ಸಂ. ಸಿಐ 143 ಎಸ್‌ಪಿಕ್ಯೂ 2009, ದಿ. 5.6.2009 – ಸುವರ್ಣ ಕರ್ನಾಟಕ ಕೈಗಾರಿಕೆ ಅಭಿವೃದ್ಧಿ ಕಾರಿಡಾರ್ ಯೋಜನೆಗಾಗಿ ಧಾರವಾಡ ಜಿಲ್ಲೆಯ ಗಾಮನಗಟ್ಟಿ ಮತ್ತು ಇಟಗಟ್ಟಿ ಗ್ರಾಮಗಳಿಗೆ ಸಂಬಂಧಿಸಿದಂತೆ ಭೂಸ್ವಾಧೀನ ಅಧಿಸೂಚನೆ.
421	8.6.2009	ಸಂ. ಸಿಐ 120 ಎಸ್‌ಪಿಕ್ಯೂ 2009, ದಿ. 5.6.2009 – ಸುವರ್ಣ ಕರ್ನಾಟಕ ಕೈಗಾರಿಕೆ ಅಭಿವೃದ್ಧಿ ಕಾರಿಡಾರ ಯೋಜನೆಗಾಗಿ ಧಾರವಾಡ ಜಿಲ್ಲೆಯ ಚಿಕ್ಕಮಲ್ಲಿಗವಾಡ ಗ್ರಾಮಕ್ಕೆ ಸಂಬಂಧಿಸಿದಂತೆ ಭೂಸ್ವಾಧೀನ ಅಧಿಸೂಚನೆ.
422	8.6.2009	ಸಂ. ಸಿಐ 144 ಎಸ್‌ಪಿಕ್ಯೂ 2009, ದಿ. 5.6.2009 – ಸುವರ್ಣ ಕರ್ನಾಟಕ ಕೈಗಾರಿಕೆ ಅಭಿವೃದ್ಧಿ ಕಾರಿಡಾರ್ ಯೋಜನೆಗಾಗಿ ಧಾರವಾಡ ಜಿಲ್ಲೆಯ ಕೆಲಗೇರಿ, ಹಿರೇಮಲ್ಲಿಗೆವಾಡ ಮತ್ತು ಮಮ್ಮಿಗಟ್ಟಿ ಗ್ರಾಮಕ್ಕೆ ಸಂಬಂಧಿಸಿದಂತೆ ಭೂಸ್ವಾಧೀನ ಅಧಿಸೂಚನೆ.
423	8.6.2009	No. LAS/LGA/21/LOLA/2008, Dt. 8.6.2009 – Hon'ble Speaker, KLA has recognized Sri Siddaramaiah, MLA as Leader of Opposition in the Karnataka Legislative Assembly.
424	8.6.2009	No. KLAS/ADM-1/105/Amendment/2009, Dt. 8.6.2009 – Karnataka Legislative Assembly Secretariat (Recruitment and Conditions of Service) (Amendment) Rules, 2009.
425	9.6.2009	No. PWD 77 EAP 2009, Dt. 6.6.2009 – Sandur Bypass Project – User fee Notification.
426	9.6.2009	No. HCE 221/2009, Dt. 9.6.2009 – The High Court Service (Conditions of Service and Recruitment) (III Amendment) Rules, 2009.
427	9.6.2009	ಸಂ. ಗ್ರಾಅಪ/83/ಜಿಪಸ/2009, ದಿ. 3.6.2009, ತಿದ್ದುಪಡಿ ಅಧಿಸೂಚನೆ.
428	9.6.2009	ಸಂ. ಕಂಇ 44 ಮುನೋಮು 2009, ದಿ. 18.4.2009 – ಜಿಲ್ಲಾ ನೋಂದಣಿ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಕಛೇರಿ ಕಾರ್ಯನಿರ್ವಹಿಸಲು ಖಾಸಗಿ ಕಟ್ಟಡದ ಬಾಡಿಗೆಯನ್ನು ನಿಗಧಿಪಡಿಸುವ ಕುರಿತು.
429	9.6.2009	No. HD 04 PND 2006, Dt. 15.5.2009 – Re-constitution of Review Committee to review the cases of under trial prisoners under NDPS Act, 1985.
430	9.6.2009	ಸಂ. ಆಕುಕ 80 ಎಂಪಿಎಸ್ 2009, ದಿ. 2.5.2009 – 2009–10ನೇ ಸಾಲಿನಲ್ಲಿ ರಾಜ್ಯದ ಖಾಸಗಿ ಫಾರ್ಮಸಿ, ನರ್ಸಿಂಗ್ ಮತ್ತು ಫಿಜಿಯೋಥೆರಪಿ ಮಹಾವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಮತ್ತು ಸ್ನಾತಕಪೂರ್ವ ಕೋರ್ಸುಗಳ ಪ್ರವೇಶಕ್ಕೆ ಸೀಟುಗಳ ಹಂಚಿಕೆ ಬಗ್ಗೆ.
431	9.6.2009	No. HD 11 PCE 2009, Dt. 7.5.2009 – Corrigendum – Dt. 4.4.2009 Notification.
432	9.6.2009	ಸಂ. ಸಿಆಸುಇ 49 ಶಿಸನೇ 2009, ದಿ. 20.5.2009 – ನ್ಯಾಯಮೂರ್ತಿ ಶ್ರೀ ವಿ.ಎಸ್.ಮಳೀಮಠ್, ಕಾನೂನು ಆಯೋಗದ ಅಧ್ಯಕ್ಷರು ಇವರಿಗೆ ಸಂಪುಟ ದರ್ಜೆ ಸಚಿವರ ಸ್ಥಾನಮಾನ ನೀಡುವ ಬಗ್ಗೆ.
433	9.6.2009	ಸಂ. ಇಡಿ 08 ಟಿಇಸಿ 2009, ದಿ. 28.5.2009 – 2009–10ನೇ ಸಾಲಿಗೆ ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶಾತಿಗೆ ಸಂಬಂಧಿಸಿದಂತೆ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿ ಬಗ್ಗೆ ಆದೇಶ.
434	10.6.2009	ಸಂ. ಇಡಿ 08 ಟಿಇಸಿ 2009 (2), ದಿ. 28.5.2009 – 2009–10ನೇ ಸಾಲಿಗೆ ಖಾಸಗಿ ಅನುದಾನರಹಿತ ಇಂಜಿನಿಯರಿಂಗ್/ಆರ್ಕಿಟೆಕ್ಚರ್ ಕಾಲೇಜುಗಳಲ್ಲಿ ಪ್ರವೇಶಾತಿಗೆ ಸಂಬಂಧಿಸಿದಂತೆ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿ ಬಗ್ಗೆ ಆದೇಶ.
435	10.6.2009	ಸಂ. ಸಇ 48 ಎಂಆರ್‌ಇ 2009, ದಿ. 22.5.2009 – ಗೌರಿಬಿದನೂರು ಕೃ.ಉ.ಮಾ. ಸಮಿತಿಗೆ ನಾಮನಿರ್ದೇಶನ ಮಾಡುವ ಕುರಿತು.

ಸಂಖ್ಯೆ	ದಿನಾಂಕ	ಅಧಿಸೂಚನೆ ಸಂಖ್ಯೆ, ದಿನಾಂಕ ಮತ್ತು ವಿವರ
436	10.6.2009	No. HD 18 PRA 2007, Dt. 23.5.2009 – Karnataka Prisons (Amendment) Rules, 2007 – Draft Rules.
437	10.6.2009	No. HFW 74 MPS 2009, Dt. 19.5.2009 – Determination of intake & Publication of the Addl. Seat Matrix of Post Graduate Medical Degree & Diploma Courses and Dental Degree courses.
438	10.6.2009	No. HFW 473 MPS 2008, Dt. 28.5.2009 – Seats to be allotted and fee chargeable for the academic year 2009-10 for the students selected for Medical and Dental courses.
439	11.6.2009	No. DPAR 7 SDE 2008, Dt. 9.6.2009 – Karnataka Civil Services (Classification Control and Appeal) (. . . . Amendment) Rules, 2009.
440	11.6.2009	No. DPAR 12 ARB 2008, Dt. 9.6.2009 – Karnataka Government (Allocation of Business) (Amendment) Rules, 2009.
441	12.6.2009	No. HFW 74 MPS 2009, Dt. 21.5.2009 – Corrigendum – No. HFW 74 MPS 2009, Dt.19.5.2009.
442	12.6.2009	ಸಂ. ಸಇ 108 ಎಂಆರ್‌ಇ 2009, ದಿ. 27.5.2009 – ಕುಷ್ಟಗಿ ಕೃ.ಉ.ಮಾ. ಸಮಿತಿಗೆ ನಾಮ ನಿರ್ದೇಶನ ಮಾಡುವ ಬಗ್ಗೆ.
443	12.6.2009	ಸಂ. ಆಇ 631 ವೆಚ್ಚ–12/09, ದಿ. 26.5.2009 – ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡುವ ಬಗ್ಗೆ.
444	12.6.2009	ಸಂ. ಆಇ 396 ವೆಚ್ಚ–12/09, ದಿ. 19.5.2009 – ಕರ್ನಾಟಕ ವಿಧಾನಸಭೆ ಸಚಿವಾಲಯಕ್ಕೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡುವ ಬಗ್ಗೆ.
445	12.6.2009	No. DPAR 51 GAM 2009, Dt. 22.5.2009 – ವಿ.ಧನಂಜಯ ಕುಮಾರ್ ರವರಿಗೆ ಸಂಪುಟ ದರ್ಜೆಯ ಸ್ಥಾನಮಾನ ನೀಡುವ ಬಗ್ಗೆ.
446	12.6.2009	ಸಂ. ಸಿಆಸುಇ 54 ಶಿಸನೇ 2009, ದಿ. 28.5.2009 – ಶ್ರೀ ಪುಟ್ಟಣ್ಣ, ವಿ.ಪ. ಉಪಸಭಾಪತಿಗಳು ಇವರಿಗೆ ಸಂಪುಟ ದರ್ಜೆಯ ಸ್ಥಾನಮಾನ ನೀಡುವ ಬಗ್ಗೆ.
447	12.6.2009	No. RDP 115 GPK 08, Dt. 12.6.2009 – Karnataka General Services (Development Branch and Local Government Branch) Recruitment of Panchayat Development Officers (Special) (Recruitment) Rules, 2009.
448	12.6.2009	No. HD 59 PCR 09, Dt. 4.6.2009 – Under Section 5 of the Karnataka Control of Organised Crimes, 2000.
449	15.6.2009	ಸಂ. ಸಿಒ 47 ಸಿಎಲ್‌ಎಂ 2009, ದಿ. 12.6.2009 – ಸಹಕಾರ ಸಂಘಗಳ ಚುನಾವಣೆಗಳನ್ನು ಮುಂದೂಡುವ ಬಗ್ಗೆ.
450	16.6.2009	ಸಂ. ಗ್ರಾಅಪ:280:ಜಿಪಸ:2008, ದಿ. 16.6.2009 – ದ.ಕ.ಜಿಲ್ಲಾ ಪಂಚಾಯತ್ ಕ್ಷೇತ್ರದ ಚುನಾವಣಾ ಫಲಿತಾಂಶ ಪ್ರಕಟಣೆ.
451	17.6.2009	No. UDD 59 MLR 2009, Dt. 17.6.2009 – Draft Delimitation of Wards – Bruhat Bangalore Mahanagara Palike
452	17.6.2009	No. UDD 59 MLR 2009 (Part-I), Dt. 16.6.2009 – Corrigendum.
453	17.6.2009	No. UDD 162 MNU 2009, Dt. 17.6.2009 – Bruhat Bangalore Mahanagara Palike Property Tax (Amendment) Rules, 2009 – Draft Rules.
454	17.6.2009	No. DCA 56 GAM 2008, Dt. 18.6.2009 – Acceptance the Resignation of Shri Es.En.Krishnaiah Shetty – Minister for Housing and Muzrai.
455	18.6.2009	No. DCA 56 GAM 2008, Dt. 18.6.2009 – Governor of Karnataka do hereby appoint Shri V.Somanna as Minister of Cabinet.
456	18.6.2009	No. DCA 56 GAM 2008, Dt. 18.6.2009 – Allocate the Portfolio of the Minister – Shri V.Somanna
457	19.6.2009	ಸಂ. ಸಿಆಸುಇ 55 ಶಿಸನೇ 2009, ದಿ. 5.6.2009 – ಡಾ.ಸುಭಾಷ ಭರಣಿ, ಅಧ್ಯಕ್ಷರು, ಕ.ರೇ.ಕೈ.ನಿ.ನಿಯಮಿತ ರವರಿಗೆ ಸಚಿವರ ಸ್ಥಾನಮಾನವನ್ನು ನೀಡುವ ಬಗ್ಗೆ.

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು
http//www.Kar.nic.in/gazette.

೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

ಕ್ರಮ ಸಂಖ್ಯೆ	ರಾಜ್ಯಪತ್ರದ ಭಾಗಗಳು	ಪ್ರತಿ ಒಂದಕ್ಕೆ ರೂ. ಪೈ.	ವಾರ್ಷಿಕ ಚಂದಾ ದರ ರೂ. ಪೈ.
1.	ಭಾಗ - 1	12-00	700-00
2.	ಭಾಗ - 2	4-00	208-00
3.	ಭಾಗ - 3	30-00	1075-00
4.	ಭಾಗ - 4	3-00	240-00
5.	ಭಾಗ - 4ಎ	8-00	285-00
6.	ಭಾಗ - 5	13-00	528-00
7.	ಭಾಗ - 6 (ಬೆಂಗಳೂರು)	7-00	325-00
8.	ಭಾಗ - 6ಎ (ಮೈಸೂರು)	50-00	1111-00
9.	ಭಾಗ - 6ಬಿ (ಧಾರವಾಡ)	25-00	1637-00
10.	ಭಾಗ - 6ಸಿ (ಗುಲ್ಬರ್ಗ)	29-00	1469-00
11.	ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ. ಸ. 1 ರಿಂದ 7 (ಭಾಗ-1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ	77-00	3360-00
12.	ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ.		

೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

ಕ್ರಮ ಸಂಖ್ಯೆ	ಪ್ರಕಟಣೆ ದರಗಳು		ಮೊತ್ತ ರೂ. ಪೈ.
1.	ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ4 ಅಳತೆಯ ಪ್ರತಿ ಪುಟಕ್ಕೆ	...	500-00
2.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	7-00
3.	ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ (ಕೆಪಿಟಿಸಿಎಲ್, ಕೆಎಸ್‌ಆರ್‌ಟಿಸಿ ತರಹ ಇತ್ಯಾದಿ ಪ್ರತಿ ಪುಟಕ್ಕೆ)	...	750-00
4.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	11-00
5.	ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ	...	½ ಅಥವಾ ¼ ಪುಟಕ್ಕೆ ದರ ನಿಗಧಿ
6.	ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ	...	ಕ್ರಮ ಸಂಖ್ಯೆ 1 ಮತ್ತು 3 ಕ್ರಮ ಸಂಖ್ಯೆ 2 ಮತ್ತು 4 ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗಧಿಪಡಿಸಿರುವುದು.
7.	ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ)	...	1-00

ಸೂಚನೆ :-
1. ಚಂದಾಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು " 0058 ಲೇಖನ ಸಾಮಗ್ರಿ ಮತ್ತು ಮುದ್ರಣ (1) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು " ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.
2. ಭಾಗ VI-ಎ, VI-ಬಿ, VI-ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.
3. ಕರ್ನಾಟಕ ರಾಜ್ಯ ಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು-59.

ಮುದ್ರಕರು :- ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು-59

KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಜೂನ್ ೨೫, ೨೦೦೯ (ಆಷಾಢ ೪, ಶಕ ವರ್ಷ ೧೯೩೧)	ಸಂಚಿಕೆ ೨೬

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಜಿ. ರುದ್ರೇಶ್, ಪಿ.ಐ., ಮೂಡಿಗೆರೆ ವೃತ್ತ, ಚಿಕ್ಕಮಗಳೂರು ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1. ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ, ಇವರ ಆದೇಶ ಸಂಖ್ಯೆ:04/ಪಿಆರ್/ಸಿಬ್ಬಂದಿ(2)2006–07 ದಿನಾಂಕ:30.06.2007
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಆದೇಶ ಸಂಖ್ಯೆ:ಸಿಬಿ(8)76/2007–08 ದಿ:31.05.2008
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 26.07.2008.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿಬಿ(8)76/2007–08 ದಿ:06.10.2008.
5. ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 214 ಸಿಎನ್ಎಸ್ 08 ದಿನಾಂಕ:28.03.2009

ಪ್ರಸ್ತಾವನೆ:

ಶ್ರೀ ಜಿ. ರುದ್ರೇಶ್, ಪಿ.ಐ., ಇವರು ಭದ್ರಾವತಿ ನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರ ವಿರುದ್ಧ ಕರ್ತವ್ಯ ನಿರ್ಲಕ್ಷತನ, ದುರ್ನಡತೆಯ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಿಯಮಗಳು) ನಿಯಮಾವಳಿ 1965ರ ನಿಯಮ 7ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:

1) ಕಾಸರಗೋಡು ಜಿಲ್ಲೆಯ ಶ್ರೀ ಕೆ.ಮೋಹನ್ ನಾಯಕ್ ಬಿನ್ ಬಾಬು ನಾಯಕ್ ಎಂಬುರಿಗೆ ಅಬ್ಬಿಗೆರೆ ಗ್ರಾಮದ ವಾಸಿಗಳಾದ ರಾಮ ಮತ್ತು ನಾಗರಾಜ ಎಂಬುವವರು ಚಿನ್ನದ ಗಟ್ಟಿಯನ್ನು ಕೊಡುತ್ತೇವೆಂದು ನಂಬಿಸಿ ರೂ.1,47,000–00 ಹಣವನ್ನು ಪಡೆದು ನಕಲಿ ಚಿನ್ನದ ಗಟ್ಟಿಯನ್ನು ಕೊಟ್ಟು ಮೋಸ ಮಾಡಿರುವ ಬಗ್ಗೆ ನೀವು ದಿ:23–11–2005 ರಂದು ಮಾಹಿತಿಯನ್ನು ಶ್ರೀ ಕೆ. ಮೋಹನ್ ನಾಯಕ್, ಇವರಿಂದ ಪಡೆದಿದು, ಈ ವಂಚನೆ ಘಟನೆಯ ಬಗ್ಗೆ ಸಮರ್ಪಕ ತನಿಖೆ ನಡೆಸಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳದೇ, ನಿಮ್ಮ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತೆಯನ್ನು ತೋರಿರುತ್ತೀರಿ.

I -F1 -(0)

2) ಮೇಲಿನ ವಂಚನೆ ಪ್ರಕರಣದ ಬಗ್ಗೆ ಮಾಹಿತಿಯನ್ನು ಪಡೆದ ನೀವು, ನಿಮ್ಮ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಲಕ್ಷ್ಮೀಕಾಂತ, ಸಿಪಿಸಿ-1442, ಇವರನ್ನು ಹೊರ ಜಿಲ್ಲೆಯ ಸಂತೆಬೆನ್ನೂರು ಠಾಣೆಗೆ ಕಳುಹಿಸಿದ್ದು, ಸದರಿಯವರು ಈ ಪ್ರಕರಣದಲ್ಲಿ ಅರ್ಜಿದಾರರು ಹಾಗೂ ಆರೋಪಿಗಳು ರಾಜಿಮಾಡಿಕೊಂಡಿರುವ ಬಗ್ಗೆ ನಿಮ್ಮ ಗಮನಕ್ಕೆ ತಂದರೂ, ಸದರಿ ವಂಚನೆ ಪ್ರಕರಣದ ಬಗ್ಗೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳದೇ, ಈ ಬಗ್ಗೆ ಮಾಹಿತಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸದೇ ನಿಮ್ಮ ಕರ್ತವ್ಯದಲ್ಲಿ ಅತೀವ ನಿರ್ಲಕ್ಷ್ಯತನ ತೋರಿ ದುರ್ನಡತೆಯನ್ನು ಪ್ರದರ್ಶಿಸಿರುತ್ತೀರಿ.

3) ಈ ಮೇಲಿನ ವಂಚನೆ ಪ್ರಕರಣದ ಬಗ್ಗೆ ಯಾವುದೇ ಕಾನೂನು ಕ್ರಮ ಕೈಗೊಳ್ಳದೇ, ಸದರಿ ಆರೋಪಿಗಳು ಇಂತಹದೇ ಇನ್ನೊಂದು ವಂಚನೆ ಪ್ರಕರಣದಲ್ಲಿ ದಿನಾಂಕ: 25.12.2005ರಂದು ಶ್ರೀ ಮಹಮದ್ ಆರೀಸ್ ಬಿನ್ ಅಬ್ದುಲ್ ಖಾದರ್, ಮಂಗಳೂರು, ಇವರಿಂದ ರೂ.1,50,000.00ಗಳನ್ನು ಪಡೆದು ಮೋಸ ಮಾಡಿರುವುದು ವರದಿಯಾಗಿದ್ದು, ಮೊದಲ ಮೋಸದ ಪ್ರಕರಣದಲ್ಲಿ ಸರಿಯಾದ ಆರೋಪಿಗಳ ವಿರುದ್ಧ ತನಿಖೆ ನಡೆಸಿ ಕ್ರಮ ಕೈಗೊಳ್ಳದ ಕಾರಣ ಆರೋಪಿಗಳು ಅಂತಹುದೇ ಇನ್ನೊಂದು ಮೋಸದ ಪ್ರಕರಣವನ್ನು ಎಸಗಿದ್ದು, ನಿಮ್ಮ ನಿರ್ಲಕ್ಷತೆ ಯಿಂದಾಗಿ ಆರೋಪಿಗಳು 2ನೇ ಮೋಸದ ಪ್ರಕರಣವನ್ನು ಎಸಗಲು ಪರೋಕ್ಷವಾಗಿ ಕಾರಣರಾಗಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ, ಇವರು ಮೇಲೆ ಕ್ರಮ ಸಂಖ್ಯೆ(1)ರಲ್ಲಿ ಓದಲಾದ ದಿನಾಂಕ:30-06-2007ರ ಆದೇಶದಲ್ಲಿ ಅರ್ಜಿದಾರರ "ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಅವರ ಮುಂದಿನ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ ಮೂರು ವರ್ಷಗಳ ಕಾಲ ಮುಂದೂಡುವ ದಂಡನೆಯನ್ನು" ವಿಧಿಸಿದ್ದಾರೆ.

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರು ಮೇಲ್ಮನವಿಯನ್ನು ಮೇಲೆ ಕ್ರಮ ಸಂಖ್ಯೆ(2)ರಲ್ಲಿ ಓದಲಾದ ದಿನಾಂಕ: 31.05.2008ರ ಆದೇಶದಲ್ಲಿ ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇವರ ಪಾತ್ರವನ್ನು ಗಮನಿಸಿದಲ್ಲಿ ದಂಡನೆಯ ಪ್ರಮಾಣವು ಅಧಿಕವಾಗಿದೆಯೆಂದು ಪರಿಗಣಿಸಿ, ಈ ಕುರಿತು ಕರ್ನಾಟಕ ಲೋಕ ಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು ಸರ್ಕಾರವು ಈ ಕೆಳಕಂಡತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 359 ಪೊಸಿಅ 2008, ಬೆಂಗಳೂರು, ದಿನಾಂಕ: 9ನೇ ಏಪ್ರಿಲ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಜಿ. ರುದ್ರೇಶ್, ಪಿ.ಐ., ಮೂಡಿಗೆರೆ ವೃತ್ತ, ಚಿಕ್ಕಮಗಳೂರು, ಇವರಿಗೆ ಶಿಸ್ತು ಪ್ರಾಧಿಕಾರ ವಿಧಿಸಿದ ದಂಡನೆಯ ಆದೇಶವನ್ನು ಭಾಗಶ: ಮಾರ್ಪಡಿಸಿ ಇವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮೂರು ತಿಂಗಳ ಕಾಲ ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಮುಂದೂಡುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1188

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಡಿ. ಪುಟ್ಟನಾಯ್ಕ, ಎ.ಎಚ್.ಸಿ.-14, ಡಿ.ಎ.ಆರ್, ದಾವಣಗೆರೆ ಜಿಲ್ಲೆ ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1. ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಅಧೀಕ್ಷಕರು, ದಾವಣಗೆರೆ ಇವರ ಆದೇಶ ಸಂಖ್ಯೆ: ಸಿಬ್ಬಂದಿ(5)/ಇವಿ/04/07/ಓ.ಬಿ : 379/07 ದಿನಾಂಕ: 14.02.2008.
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ, ಇವರ ಆದೇಶ ಸಂಖ್ಯೆ : 46/ಅಪೀಲು/ಸಿಬ್ಬಂದಿ-2007-08 ಓ.ಬಿ.6/2008-09 ದಿ: 10.04.2008
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿ: 10.03.2008.
4. ಮಹಾ ನಿರ್ದೇಶಕರು ಮತ್ತು ಅರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು (2) 25/2008-09 ದಿನಾಂಕ: 09.07.2008.

5. ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ : ಪಿ.ಎಸ್.ಸಿ. 121 ಸಿ.ಎನ್.ಎಸ್. 08 ದಿನಾಂಕ: 12.03.2009.

ಪ್ರಸ್ತಾವನೆ:

ಶ್ರೀ ಡಿ. ಪುಟ್ಟನಾಯಕ, ಎ.ಹೆಚ್.ಸಿ.–14, ಡಿ.ಎ.ಆರ್, ದಾವಣಗೆರೆ ಜಿಲ್ಲೆ, ಇವರು (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಈ ಹಿಂದೆ ಎ.ಪಿ.ಸಿ. ವಾಹನ ಚಾಲಕರಾಗಿ ದಾವಣಗೆರೆಯ ಆರ್.ಎಫ್.ಎಸ್.ಎಲ್.ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತನ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೋಲೀಸ್ (ಶಿಸ್ತು ನಿಯಮಗಳು) ನಿಯಾಮಾವಳಿ 1965 ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:–

"ನೀವು ಈ ಹಿಂದೆ ದಾವಣಗೆರೆಯ ಆರ್.ಎಫ್.ಎಸ್.ಎಲ್.ನಲ್ಲಿ 1996 ನೇ ಸಾಲಿನಿಂದ ಜೀಪ್ ನಂ. ಕೆ.ಎ.–01 ಜಿ.–2002 ರ ಚಾಲಕನಾಗಿ ಕರ್ತವ್ಯ ನಿರ್ವಹಿಸಿದ್ದು, ನೀವೊಬ್ಬ ಚಾಲಕ ಎನ್ನುವದನ್ನು ಮರೆತು ನಿಮಗೆ ನೀಡಲಾದ ಜೀಪನ್ನು ಬೇಕಾಬಿಟ್ಟಿಯಾಗಿ ನಿರ್ವಹಣೆ ಮಾಡಿ, ಜೀಪು ಚಾಲನೆ ಮಾಡುವಾಗ ಸರಿಯಾಗಿ ರಸ್ತೆ ಕಡೆ ಗಮನ ಕೊಡದೆ, ನಿಮಗೆ ಮನಬಂದಂತೆ ಅನ್ಯರ ವಿಚಾರ ಮಾತನಾಡುತ್ತಾ ಎತ್ತಲೋ ನೋಡುತ್ತಾ ಜೀಪನ್ನು ಅತೀ ವೇಗವಾಗಿ ಮತ್ತು ನಿರ್ಲಕ್ಷ್ಯತನದಿಂದ ಚಾಲನೆ ಮಾಡುತ್ತಾ ಬಂದಿರುತ್ತೀರಿ. ಈ ಸಂಬಂಧ ಶ್ರೀ.ಕೆ.ಟಿ.ವೆಂಕಟೇಶ್ ತಂದೆ ಕೆ.ತಿಮ್ಮೇಗೌಡ, ಉಪ ನಿರ್ದೇಶಕರು, ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ, ಇವರು ಜೀಪನ್ನು ಸರಿಯಾಗಿ ರಸ್ತೆ ಕಡೆ ಗಮನವಿಟ್ಟು ಚಾಲನೆ ಮಾಡುವಂತೆಯೂ ಮತ್ತು ಅನ್ಯರ ವಿಚಾರ ನನ್ನ ಹತ್ತಿರ ಜೀಪ್ ಚಾಲನೆ ಮಾಡುವಾಗ ಮಾತನಾಡಬಾರದು ಎಂದು ತಿಳಿಸಿದ್ದಾಗ್ಯೂ ಸಹ ನೀವು ಅವರನ್ನು ಅವರೊಬ್ಬ ಹಿರಿಯ ಅಧಿಕಾರಿಯೆನ್ನುವುದನ್ನು ಲಕ್ಷಿಸದೆ ಅವರೊಂದಿಗೆ ವಿನಾಃ ಕಾರಣ ವಾಗ್ವಾದಕ್ಕೆ ಇಳಿದು ಅನುಚಿತವಾಗಿ ವರ್ತಿಸಿರುತ್ತೀರ ಮತ್ತು ದಿ: 13.09.2006 ರಂದು 11–30 ಎ.ಎಂ.ಗೆ ನೀವು ಉಪ ನಿರ್ದೇಶಕರ ಅನುಮತಿಯಿಲ್ಲದೆ ಅವರ ಕೊಠಡಿಗೆ ಬಂದು ನಾನು ಫೋರ್ಜರಿ ಸಹಿ ಮಾಡಿದ್ದೇನೆಂದು ನೀವು ನನ್ನ ಮೇಲೆ ಮೇಲಾಧಿಕಾರಿಗಳಿಗೆ ವರದಿ ಕಳುಹಿಸಿರುತ್ತೀರಿ, ನೀವು ದಲಾಯತ್ತ ಸೂಳೇ ಮಕ್ಕಳಿಗೆ ಸಪೋರ್ಟ್ ಮಾಡುತ್ತಿದ್ದೀರಿ, ನನ್ನ ವಿರುದ್ಧ ಕೊಟ್ಟಿರುವ ವರದಿಯನ್ನು ಹಿಂದಕ್ಕೆ ಪಡೆಯದಿದ್ದರೆ ನಿಮ್ಮ ಮೇಲೆ ಎಸ್.ಸಿ. ಎಸ್.ಟಿ. ಕಾಯ್ದೆ ಅಡಿಯಲ್ಲಿ ಕೇಸು ಹಾಕಿಸುತ್ತೇನೆ ಮತ್ತು ಮಾನ ನಷ್ಟ ಮೊಕದ್ದಮೆ ಅರ್ಜಿ ಹಾಕುತ್ತೇನೆ" ಎಂದು ಏರು ಧ್ವನಿಯಲ್ಲಿ ಕೂಗಾಡಿ ಕಛೇರಿಯ ಶಾಂತ ವಾತಾವರಣವನ್ನು ಹಾಳು ಮಾಡಿ, ಕಛೇರಿಯ ಕೆಲಸ ಕಾರ್ಯಗಳಿಗೆ ಅಡ್ಡಿ ಪಡಿಸಿರುತ್ತೀರಿ.

ದಿನಾಂಕ 12.09.2006 ರಂದು ರಾತ್ರಿ ಆರ್.ಎಫ್.ಎಸ್.ಎಲ್.ಕಛೇರಿಯ ದಲಾಯತ್ ಶ್ರೀ ಸತೀಶ್‌ಕುಮಾರ್, ಅವರ ಮನೆಯ ಹತ್ತಿರ ಹೋಗಿ ಅವರ ಮನೆ ಬಾಗಿಲು ಬಡಿದು, ಸತೀಶ್ ಕುಮಾರ್ ಮತ್ತು ಅವರ ಮನೆಯವರ ಹತ್ತಿರ ವಿಪರೀತ ಗಲಾಟೆ ಮಾಡಿ ಭಯ ಹುಟ್ಟಿಸಿ ಅವರಿಗೆ ಜೀವ ಬೆದರಿಕೆಯನ್ನು ಒಡ್ಡಿರುತ್ತೀರಿ.

ನಿಮ್ಮ ನಡವಳಿಕೆಯ ಬಗ್ಗೆ ನಿರ್ದೇಶಕರು, ಆರ್.ಎಫ್.ಎಸ್.ಎಲ್. ಬೆಂಗಳೂರು ರವರು ವಿಶೇಷ ವರದಿಯನ್ನು ಸಲ್ಲಿಸುವಂತೆ ಉಪನಿರ್ದೇಶಕರಿಗೆ ಸೂಚಿಸಿದ ಮೇರೆಗೆ, ಉಪ ನಿರ್ದೇಶಕರು, ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ ದಾಣಗೆರೆ ರವರು ದಿ. 16.09.2006 ರಂದು ವಿಶೇಷ ವರದಿಯನ್ನು ಸಲ್ಲಿಸಿದಾಗ, ನೀವು ದಿ. 19.09.2006 ರಂದು 7–10 ಎ.ಎಂ.ಗೆ ಉಪನಿರ್ದೇಶಕರ ಮನೆಯ ದೂರವಾಣಿ ಸಂಖ್ಯೆ 236657 ಕ್ಕೆ ಕರೆ ಮಾಡಿ ನಾನು ಮಾನ್ಯ ಐ.ಜಿ.ಪಿ., ಸಾಹೇಬರಿಗೆ ಮತ್ತು ಇಲಾಖೆಯ ಮೇಲಾಧಿಕಾರಿಗಳಿಗೆ ಭೇಟಿ ಮಾಡುವ ಸಲುವಾಗಿ ರಜೆ ಅರ್ಜಿ ನಿವೇದಿಸಿದ್ದು, ನೀವು ಅನುಮತಿ ನೀಡಿ ರಜೆ ಕೊಟ್ಟಿರುವುದಿಲ್ಲ. ಆದ್ದರಿಂದ ನಾನು ವಾಪಸ್ ಡ್ಯೂಟಿಗೆ ಬರುತ್ತೇನೆ. ಪ್ರತಿ ದಿನದಂತೆ ಕಛೇರಿಯ ಸಿಬ್ಬಂದಿಯವರಿಗೆ ಮೊಬೈಲ್ ವ್ಯಾನ್‌ನಲ್ಲಿ ಹೋಗಲು ಹೇಳಿ ಎಂದು ಹಾಗೂ ನೀವು ನನಗೆ ಮೇಲಾಧಿಕಾರಿಗಳಿಗೆ ಭೇಟಿ ಮಾಡಲು ಅನುಮತಿ ನೀಡದೆ ಇರುವ ಬಗ್ಗೆ ಲಿಖಿತ ಉತ್ತರ ಕೊಡಬೇಕು ಎಂದು ಉಪ ನಿರ್ದೇಶಕರೊಂದಿಗೆ ಅಸಭ್ಯವಾಗಿ ವರ್ತಿಸಿರುತ್ತೀರಿ ಮತ್ತು ಅವರು ದಿ. 18.09.2006 ರಂದು ನಿರ್ದೇಶಕರೊಂದಿಗೆ ಫೋನ್‌ನಲ್ಲಿ ಮಾತಾಡಿ ನಿಮಗೆ ಅನುಮತಿ ನೀಡುವ ಬಗ್ಗೆ ಕೇಳಿರುವ ಬಗ್ಗೆ ಮತ್ತು ನಿರ್ದೇಶಕರು ಮೇಲಾಧಿಕಾರಿಗಳಿಗೆ ಭೇಟಿ ಮಾಡಲು ಅನುಮತಿ ನೀಡಬೇಕು ಎಂದು ಹೇಳಿರುವ ಬಗ್ಗೆ ತಿಳಿಸಿ ಫೋನ್ ಇಟ್ಟ ನಂತರ ಪುನಃ 8–15 ಎ.ಎಂ.ಗೆ ಫೋನ್ ಮಾಡಿ "ನೀವು ನನ್ನ ಹತ್ತಿರ ಕ್ಷಮಾಪಣೆ ಕೇಳಬೇಕು, ಇಲ್ಲವಾದಲ್ಲಿ ನಿಮ್ಮ ಮೇಲೆ ಎಸ್.ಸಿ./ ಎಸ್.ಟಿ. ಜಾತಿ ನಿಂದನೆ ಕೇಸು ದಾಖಲಿಸಿ ಸಸ್ಪೆಂಡ್ ಮಾಡಿಸಿ, ಹಾಯ್ ಬೆಂಗಳೂರು ಪತ್ರಿಕೆಯವರನ್ನು ಕರೆಯಿಸಿ ನಿಮ್ಮ ಬಗ್ಗೆ ಪತ್ರಿಕೆಯಲ್ಲಿ ಹಾಕಿಸುತ್ತೇನೆ." ಎಂದು ಫೋನ್‌ನಲ್ಲಿ ಬೆದರಿಕೆ ಹಾಕಿ, ಶಿಸ್ತಿನ ಇಲಾಖೆಯ ನೌಕರನಿಗೆ ಸಲ್ಲದ ಘೋರ ದುರ್ನಡತೆಯನ್ನು ಪ್ರದರ್ಶಿಸಿರುತ್ತೀರಿ.

ಪ್ರತಿನಿತ್ಯ ಒಂದಲ್ಲ ಒಂದು ಕಾರಣಕ್ಕಾಗಿ ನ್ಯಾಯ ವಿಜ್ಞಾನ ಪ್ರಯೋಗಾಲಯ ಕಛೇರಿಯ ಅಧಿಕಾರಿ ಮತ್ತು ಸಿಬ್ಬಂದಿಯವರೊಂದಿಗೆ ಕ್ಷುಲ್ಲಕ ಕಾರಣಕ್ಕಾಗಿ ಜಗಳವಾಡುತ್ತಾ ಅವರಿಗೆ ಕೊಲೆ ಬೆದರಿಕೆಯನ್ನು ಒಡ್ಡಿರುತ್ತೀರಿ. ಮೊಬೈಲ್ ವ್ಯಾನ್ ನಂ. ಕೆ.ಎ. 01–ಜಿ 8284 ಅನ್ನು ಪೂರ್ವ ವಲಯ ಪೊಲೀಸ್ ಅಧಿಕಾರಿಗಳು ಪೊಲೀಸ್ ಪ್ರಕರಣಗಳಲ್ಲಿ ಕೃತ್ಯ ನಡೆದ ಸ್ಥಳಕ್ಕೆ

ಭೇಟಿ ನೀಡುವ ಬಗ್ಗೆ ಎಫ್.ಎಸ್.ಎಲ್ ಅಧಿಕಾರಿಗಳಿಗೆ ಕರೆ ಬಂದಾಗ, ಸದರಿಯವರು ಮೊಬೈಲ್ ವ್ಯಾನ್‌ನಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡುವ ಸಲುವಾಗಿ ಒದಗಿಸಿದ್ದು, ಸದರಿ ಮೊಬೈಲ್ ವ್ಯಾನನ್ನು ಭದ್ರತೆಯ ದೃಷ್ಟಿಯಿಂದ ಕಛೇರಿಯ ವೇಳೆ ಮುಗಿದ ನಂತರ ಎಫ್.ಎಸ್.ಎಲ್. ಕಛೇರಿಯಿಂದ ಡಿ.ಎ.ಆರ್. ಆವರಣದಲ್ಲಿ ನಿಲ್ಲಿಸಿ ಪುನಃ ಕಛೇರಿಯ ಸಿಬ್ಬಂದಿಗಳನ್ನು ಕರೆತರುವ ಕರ್ತವ್ಯಕ್ಕೆ ನಿಯೋಜಿಸಿದಾಗ, ನೀವು ಮೊಬೈಲ್ ವ್ಯಾನನ್ನು ನಿಮ್ಮ ಮನ ಬಂದಂತೆ ಅತೀ ವೇಗವಾಗಿ ಒಳಗಡೆ ಕುಳಿತವರಿಗೆ ಭಯವಾಗುವ ರೀತಿಯಲ್ಲಿ ಚಾಲನೆ ಮಾಡಿ, ವ್ಯಾನನ್ನು ಆರ್.ಎಫ್.ಎಸ್.ಎಲ್. ಕಛೇರಿಯ ಕಾಂಪೌಂಡಿನ ಒಳಗೆ ತರುವಾಗ 2 ಸಲ ಕಾಂಪೌಂಡ್ ಗೋಡೆಗೆ ಡಿಕ್ಕಿ ಹೊಡೆಸಿ, ಮೊಬೈಲ್ ವ್ಯಾನನ್ನು ಕಿಟಕಿಯ ಗಾಜುಗಳು ಒಡೆದು ಹೋಗಿದ್ದರೂ ಅದನ್ನು ಮೇಲಾಧಿಕಾರಿಗಳ ಗಮನಕ್ಕೆ ತರದೆ, ನಿಮ್ಮ ಸ್ವಂತ ಖರ್ಚಿನಿಂದ ದುರಸ್ಥಿ ಮಾಡಿಸಿ ನಿಮ್ಮ ಕರ್ತವ್ಯದಲ್ಲಿ ಅತೀವ ನಿರ್ಲಕ್ಷ್ಯತನ ಮತ್ತು ಬೇಜವಾಬ್ದಾರಿತನವನ್ನು ಪ್ರದರ್ಶಿಸಿರುತ್ತೀರಿ.

ಅಲ್ಲದೇ ಆಗಾಗ್ಗೆ ಮೊಬೈಲ್ ವ್ಯಾನನ್ನು ದುರಸ್ಥಿ ನೆಪ ಹೇಳಿಕೊಂಡು ಮೊಬೈಲ್ ವ್ಯಾನಿನ ಲಾಗ್ ಪುಸ್ತಕವನ್ನು ಸಹ ಸರಿಯಾಗಿ ನಿಗದಿತ ಸಮಯಕ್ಕೆ ಬರೆಯದೆ ಮೊಬೈಲ್ ವ್ಯಾನನ್ನು ಡಿ.ಎ.ಆರ್. ಆವರಣದಲ್ಲಿ ನಿಲ್ಲಿಸಿ ಕಛೇರಿಗೆ ಸರಿಯಾಗಿ ದಿನ ನಿತ್ಯ ಹೋಗದೇ ನಿಮಗೆ ಇಷ್ಟ ಬಂದ ಹಾಗೆ ಹಾಜರಾತಿ ಪುಸ್ತಕಕ್ಕೆ ಸಹಿ ಮಾಡುವ ಹವ್ಯಾಸವನ್ನು ಬೆಳೆಸಿಕೊಂಡಿದ್ದು, ಈ ಬಗ್ಗೆ ದಿನಾಂಕ: 09.11.2006 ರಂದು 10–15 ಕ್ಕೆ ಸಹಿ ಮಾಡಲು ಕಛೇರಿ ಅಧೀಕ್ಷಕರಾದ ಶ್ರೀ ಬಿ.ವೆಂಕಟಪ್ಪ ನಿಮಗೆ ಇಷ್ಟ ಬಂದಾಗ ಕಛೇರಿಯ ಹಾಜರಿ ಪುಸ್ತಕಕ್ಕೆ ಸಹಿ ಹಾಕುವುದರಿಂದ, ಬೇರೆ ನೌಕರರು ನನಗೆ ಪುಟ್ಟನಾಯ್ಕರವರಿಗೆ ಒಂದು ಕಾನೂನು, ನಮಗೆ ಒಂದು ಕಾನೂನಾ ಎಂದು ಹೇಳುತ್ತಾರೆ. ಆದ್ದರಿಂದ ನೀವು ನಿಮಗೆ ಇಷ್ಟ ಬಂದಾಗ ಸಹಿ ಮಾಡುವುದನ್ನು ಬಿಟ್ಟು ಎಲ್ಲಾ ನೌಕರರು ಸಹಿ ಮಾಡುವ ಹಾಗೆ ನೀವು ಸಹ ನಿಗದಿತ ಸಮಯಕ್ಕೆ ಕಛೇರಿಗೆ ಹಾಜರಾಗಿ ಬಂದು ಸಹಿ ಮಾಡಿ ಎಂದು ಹೇಳಿದಾಗ, ಅವರೊಂದಿಗೆ ಸಹ ಜಗಳವಾಡಿ ಅವರಿಗೆ ಮಾನಸಿಕವಾಗಿ ನೋವಾಗುವ ರೀತಿಯಲ್ಲಿ ಸಂಬಂದವಿಲ್ಲದ ವಿಚಾರದಲ್ಲಿ ಏನೇನೋ ರಾಜಕೀಯವಾಗಿ ಮಾತನಾಡಿ ನಿಮ್ಮ ವಿರುದ್ಧ ಮೇಲಾಧಿಕಾರಿಗಳಿಗೆ ಮತ್ತು ಮಂತ್ರಿಗಳಿಗೆ ಪಿರ್ಯಾದು ನೀಡುತ್ತೇನೆ ಎಂದು ಬೆದರಿಕೆ ಹಾಕಿರುತ್ತೀರಿ, ಅಲ್ಲದೇ ಪ್ರತಿದಿನ ಕಛೇರಿಗೆ ಹೋಗಿ ನಿಮಗೆ ಸಂಬಂಧವಿಲ್ಲದ ವಿಚಾರದಲ್ಲಿ ಜಗಳ ತೆಗೆದು, ಉಪನಿರ್ದೇಶಕರು ಮತ್ತು ಕಛೇರಿಯ ಸಿಬ್ಬಂದಿಯವರಿಗೆ ಕೆಲಸ ಮಾಡಲು ಬಿಡದೇ ಕಛೇರಿಯ ಕರ್ತವ್ಯಕ್ಕೆ ಅಡಚಣೆಯುಂಟು ಮಾಡಿರುತ್ತೀರಿ".

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳೂ ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಅಧೀಕ್ಷಕರು, ದಾವಣಗೆರೆ ಜಿಲ್ಲೆ, ಇವರು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ : 14.02.2008 ರ ಆದೇಶದಲ್ಲಿ ಅರ್ಜಿದಾರರಿಗೆ "ಎ.ಹೆಚ್.ಸಿ. ಹುದ್ದೆಯ ಕನಿಷ್ಠ ವೇತನ ಮಟ್ಟಕ್ಕೆ 5 ವರ್ಷಗಳ ಕಾಲ ಇಳಿಸುವ ದಂಡನೆ ವಿಧಿಸಿರುತ್ತಾರೆ."

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ, ಇವರು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ 10.04.2008 ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಆರೋಪದ ಸ್ವರೂಪವನ್ನು ಗಮನಿಸಿದಲ್ಲಿ ದಂಡನೆಯ ಪ್ರಮಾಣವು ಅಧಿಕವೆಂದು ಪರಿಗಣಿಸಿ ಈ ಕುರಿತು ಕರ್ನಾಟಕ ಲೋಕ ಸೇವಾ ಆಯೋಗದ ಸಹಮತಿಯನ್ನು ಓದಲಾದ (5) ರ ಪತ್ರದಲ್ಲಿ ಪಡೆದು ಶಿಸ್ತುಪ್ರಾಧಿಕಾರದ ಆದೇಶವನ್ನು ಭಾಗಶಃ ಮಾರ್ಪಡಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 214 ಪೊಸಿಅ 2008, ಬೆಂಗಳೂರು, ದಿನಾಂಕ: 2ನೇ ಏಪ್ರಿಲ್ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963 ರ ಸೆಕ್ಷನ್ 25(2) (ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಡಿ. ಪುಟ್ಟನಾಯಕ, ಎ.ಹೆಚ್.ಸಿ. –14, ಡಿ.ಎ.ಆರ್., ದಾವಣಗೆರೆ ಇವರ ವಿರುದ್ಧ ಶಿಸ್ತು ಪ್ರಾಧಿಕಾರದ ಆದೇಶ ದಿನಾಂಕ: 14.02.2008 ನ್ನು ಭಾಗಶಃ ಮಾರ್ಪಡಿಸಿ, ಅದರ ಬದಲಾಗಿ "ಇವರ ಮುಂದಿನ ಎರಡು ವರ್ಷಗಳ ಕಾಲ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1189

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಎಂ. ಕೀರ್ತಿಕುಮಾರ್, ಪಿಎಸ್ಐ, ಮಿಡಿಗೇಶಿ ಪೊಲೀಸ್ ಠಾಣೆ, ತುಮಕೂರು ಜಿಲ್ಲೆ ಇವರ ಪರಿವೀಕ್ಷಣಾ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ: 1. ಡಿಜಿ ಮತ್ತು ಐಜಿಪಿ, ಬೆಂಗಳೂರು ರವರ ಪತ್ರ ಸಂಖ್ಯೆ:99/ಸಿಬ್ಬಂದಿ-1/2008-09 ದಿನಾಂಕ: 17.01.2009.

ಪ್ರಸ್ತಾವನೆ:

ಶ್ರೀ ಎಂ. ಕೀರ್ತಿಕುಮಾರ್, ಪಿಎಸ್ಐ, ಮಿಡಿಗೇಶಿ ಪೊಲೀಸ್ ಠಾಣೆ ಇವರು ದಿನಾಂಕ 31-12-2001 ರಂದು ಪಿಎಸ್ಐ ಆಗಿ ನೇಮಕಗೊಂಡಿದ್ದು, ದಿನಾಂಕ 30-06-2004 ರಂದು ಎರಡೂವರೆ ವರ್ಷಗಳ ಪ್ರೊಬೇಷನರಿ ಅವಧಿಯನ್ನು ಪೂರ್ಣಗೊಳಿಸಿರುತ್ತಾರೆ. ಆದರೆ ಹುದ್ದೆಗೆ ನಿಗಧಿಪಡಿಸಿದ ಅಕೌಂಟ್ಸ್ ಹೈಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿಲ್ಲವಾದ ಕಾರಣ ಇವರ ಖಾಯಂ ಪೂರ್ವ ಅವದಿಯನ್ನು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮ, 1977ರ ನಿಯಮ 4(ii) ರನ್ವಯ 1 ವರ್ಷ 3 ತಿಂಗಳವರೆಗೆ ಅಂದರೆ ದಿನಾಂಕ: 01.07.2004 ರಿಂದ 30.09.2005 ರವರೆಗೆ ಐ.ಜಿ.ಪಿ, ಕೇಂದ್ರ ವಲಯ, ಬೆಂಗಳೂರು ಇವರು ದಿನಾಂಕ: 19.09.2008 ರಲ್ಲಿ ವಿಸ್ತರಿಸಿರುತ್ತಾರೆ. ದಿನಾಂಕ: 09.06.2007 ರಂದು ಸದರಿಯವರು ಅಕೌಂಟ್ಸ್ ಹೈಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಆದ್ದರಿಂದ ಇಲಾಖಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ದಿನಾಂಕ 08.06.2007 ರವರೆಗೆ ಪ್ರೊಬೇಷನರಿ ಅವಧಿಯನ್ನು ವಿಸ್ತರಿಸಬೇಕೆಂದು ಡಿಜಿ ಮತ್ತು ಐಜಿಪಿ ರವರ ಮೇಲೆ ಓದಲಾದ (1)ರ ಪತ್ರದಲ್ಲಿ ಕೋರಲಾಗಿರುತ್ತದೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 38 ಪೊಸಇ 2009, ಬೆಂಗಳೂರು, ದಿನಾಂಕ: 22ನೇ ಏಪ್ರಿಲ್ 2009

ಶ್ರೀ ಎಂ. ಕೀರ್ತಿಕುಮಾರ್, ಪಿಎಸ್ಐ, ಮಿಡಿಗೇಶಿ ಪೊಲೀಸ್ ಠಾಣೆ, ತುಮಕೂರು ಜಿಲ್ಲೆ ಇವರ ಪರಿವೀಕ್ಷಣಾ ಅವಧಿಯನ್ನು ದಿನಾಂಕ: 01.10.2005 ರಿಂದ 08.06.2007 ವರೆಗೆ ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು, 1977ರ 4(1)ನೇ ನಿಯಮದ ಉಪ ನಿಯಮ (i) ರನ್ವಯ ವಿಸ್ತರಿಸಲಾಗಿದೆ.

ವಿಸ್ತರಿಸಿದ ಪರಿವೀಕ್ಷಣಾ ಅವಧಿಗೆ ಕ.ನಾ.ಸೇ (ಪರಿವೀಕ್ಷಣೆ) ನಿಯಮಗಳು 1977ರ ನಿಯಮ 10ರ ಪ್ರಕಾರ ವಾರ್ಷಿಕ ವೇತನ ಬಡ್ತಿಗಳನ್ನು ನೀಡುವಂತಿಲ್ಲ. ಕಾಲ್ಪನಿಕವಾಗಿ ವಾರ್ಷಿಕ ವೇತನ ಬಡ್ತಿಗಳನ್ನು ಬಿಡುಗಡೆ ಮಾಡಿ ವೇತನವನ್ನು ನಿಗಧಿಪಡಿಸುವುದು. ಹೀಗೆ ನಿಗಧಿಪಡಿಸಿದ ವೇತನದ ಬಾಕಿಯನ್ನು ನೀಡಲು ಅವಕಾಶವಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1190 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಬಾಸು ಚೌವ್ಹಾಣ್, ಪ್ರೊ.ಪಿ.ಎಸ್.ಐ. (ಸಿವಿಲ್) ರವರ ಪರಿವೀಕ್ಷಣಾ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ: 1. ಡಿಜಿ ಮತ್ತು ಐಜಿಪಿ, ಬೆಂಗಳೂರು ರವರ ಪತ್ರ ಸಂಖ್ಯೆ:58/ಸಿಬ್ಬಂದಿ-1/2007-08 ದಿನಾಂಕ: 05.01.2008 ಮತ್ತು 19-01-2009.

ಪ್ರಸ್ತಾವನೆ:

ಶ್ರೀ ಬಾಸು ಚೌವ್ಹಾಣ್, ಪ್ರೊ.ಪಿ.ಎಸ್.ಐ. (ಸಿವಿಲ್) ರವರು ಪಿ.ಎಸ್.ಐ. ಹುದ್ದೆಗೆ ದಿನಾಂಕ 15-09-2003 ರಂದು ನೇಮಕಾತಿ ಹೊಂದಿ $2^1/_2$ ವರ್ಷಗಳ ಖಾಯಂಪೂರ್ವ ಅವಧಿಯನ್ನು ದಿನಾಂಕ 15-03-2006ಕ್ಕೆ ಪೂರ್ಣಗೊಳಿಸಿದ್ದು, ಇವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇದ್ದುದರಿಂದ ಖಾಯಂ ಪೂರ್ವ ಅವಧಿಯನ್ನು ದಿನಾಂಕ 15-03-2006 ರಿಂದ 15-03-2007 ರವರೆಗೆ ವಿಸ್ತರಿಸಲಾಗಿರುತ್ತದೆ. ಸದರಿಯವರು ಕರ್ತವ್ಯ ನಿರ್ಲಕ್ಷತೆಯ ಆರೋಪದ ಮೇಲೆ ದಿನಾಂಕ 01.10.2009 ರವರೆಗೆ ಚಾಲ್ತಿ ಶಿಕ್ಷೆಯಲ್ಲಿರುವುದರಿಂದ ಸದರಿಯವರ ಖಾಯಂ ಪೂರ್ವ ಅವಧಿಯನ್ನು 1977ರ ಕೆ.ಸಿ.ಎಸ್. (ಪ್ರೊಬೇಷನ್) ನಿಯಮಾವಳಿ 4(1)(ii) ಮೇರೆಗೆ ದಿನಾಂಕ 16-03-2007 ರಿಂದ 15-06-2007 ರವರೆಗೆ ವಿಸ್ತರಿಸಲಾಗಿರುತ್ತದೆಯೆಂದು ಮೇಲೆ (1)ರಲ್ಲಿ ಓದಲಾದ ಡಿ.ಜಿ.ಪಿ. ರವರ ಪತ್ರದಲ್ಲಿ ವಿವರಿಸಲಾಗಿರುತ್ತದೆ. ಸದರಿ ಅಧಿಕಾರಿಯವರು ಕೆ.ಸಿ.ಎಸ್. ಪರಿವೀಕ್ಷಣೆ ನಿಯಮ 1977ರ ನಿಯಮ 4 & 5(1)ರನ್ವಯ ಪಿ.ಎಸ್.ಐ ಹುದ್ದೆಯ ಕಾರ್ಯಭಾರ ನಿರ್ವಹಿಸಲು ಸಮರ್ಥರಾಗಿರುತ್ತಾರೆಂದು ಹಾಗೂ ದಿನಾಂಕ 16-06-2007 ರಿಂದ 01-10-2009 ರವರೆಗೆ ಸದರಿ ಅಧಿಕಾರಿಯವರ ಖಾಯಂ ಪೂರ್ವ ಅವಧಿಯನ್ನು ವಿಸ್ತರಿಸುವಂತೆ ಮೇಲೆ(1)ರಲ್ಲಿ ಓದಲಾದ ಡಿಜಿ ಮತ್ತು ಐಜಿಪಿ ರವರ ಪತ್ರದಲ್ಲಿ ಕೋರಲಾಗಿರುತ್ತದೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 45 ಪೊಸಇ 2008, ಬೆಂಗಳೂರು, ದಿನಾಂಕ: 22ನೇ ಏಪ್ರಿಲ್ 2009

ಶ್ರೀ ಬಾಸು ಚೌವ್ಹಾಣ್, ಪ್ರೊ.ಪಿ.ಎಸ್.ಐ. (ಸಿವಿಲ್) ರವರ ಪರಿವೀಕ್ಷಣಾ ಅವಧಿಯನ್ನು ದಿನಾಂಕ 16.06.2007 ರಿಂದ 01.10.2009ರ ವರೆಗೆ ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು, 1977ರ ನಿಯಮ 4(1)(i) ರನ್ವಯ ವಿಸ್ತರಿಸಲಾಗಿದೆ.

ವಿಸ್ತರಿಸಿದ ಪರಿವೀಕ್ಷಣಾ ಅವಧಿಗೆ ಕ.ನಾ.ಸೇ (ಪರಿವೀಕ್ಷಣೆ) ನಿಯಮಗಳು 1977ರ ನಿಯಮ 10ರ ಪ್ರಕಾರ ವಾರ್ಷಿಕ ವೇತನ ಬಡ್ತಿಗಳನ್ನು ನೀಡುವಂತಿಲ್ಲ. ಕಾಲ್ಪನಿಕವಾಗಿ ವಾರ್ಷಿಕ ವೇತನ ಬಡ್ತಿಗಳನ್ನು ಬಿಡುಗಡೆ ಮಾಡಿ ವೇತನವನ್ನು ನಿಗಧಿಪಡಿಸುವುದು. ಹೀಗೆ ನಿಗಧಿಪಡಿಸಿದ ವೇತನದ ಬಾಕಿಯನ್ನು ನೀಡಲು ಅವಕಾಶವಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ರವಿಪ್ರಕಾಶ್

ಪಿ.ಆರ್. 1191

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ರಾಮನಗರ ಹಾಗೂ ಚಿಕ್ಕಬಳ್ಳಾಪುರ ಸರ್ಕಾರಿ ಅಭಿಯೋಜಕರ ಕಛೇರಿಗಳನ್ನು ಸಂಯುಕ್ತ ಕಛೇರಿಗಳೆಂದು ಘೋಷಿಸುವ ಬಗ್ಗೆ ಹಾಗೂ ಸರ್ಕಾರಿ ಅಭಿಯೋಜಕರನ್ನು ಕಛೇರಿ ಮುಖ್ಯಸ್ಥರು ಮತ್ತು ವೇತನ ಬಡವಾಡೆ ಅಧಿಕಾರಿ ಎಂದು ಘೋಷಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 27 ಭೂದಾಪು/2006 ದಿನಾಂಕ: 6–10–2007

2. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಪತ್ರ ಸಂಖ್ಯೆ:ಡಿಪಿಎನ್. ಸಿ.ಶಾ.1.59/2007–08 ದಿನಾಂಕ: 16–10–2008.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಅದೇಶದಲ್ಲಿ ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳನ್ನು ಹೊಸ ಜಿಲ್ಲೆಯೆಂದು ಘೋಷಿಸಿ ಆದೇಶಿಸಲಾಗಿರುತ್ತದೆ. ಮೇಲೆ ಓದಲಾದ (2)ರ ಪತ್ರದಲ್ಲಿ ಅಭೀಯೋಗ ನಿರ್ದೇಶಕರು ಸರ್ಕಾರಿ ಅಭಿಯೋಜಕರ ಕಛೇರಿ, ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ ಮತ್ತು ಚಿಕ್ಕಬಳ್ಳಾಪುರ ಕಛೇರಿಗಳು ಕಾರ್ಯ ನಿರ್ವಹಣೆ ಪ್ರಾರಂಭಿಸಿದ್ದು, ಮೇಲ್ಕಂಡ ಜಿಲ್ಲೆಗಳ ಸಿ.ಜೆ.ಎಂ. ನ್ಯಾಯಲಯಕ್ಕೆ ಹೊಂದಿಕೊಂಡಂತೆ ಕಾರ್ಯ ನಿರ್ವಹಿಸಲು ತಲಾ ಒಂದು ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಯನ್ನು ಮಂಜೂರು ಮಾಡಿದ್ದು, ಸದರಿ ಅಧಿಕಾರಿಗಳು ಹೊಸ ಜಿಲ್ಲೆಗಳು ಪ್ರಾರಂಭವಾಗುವುದಕ್ಕೆ ಮುಂಚಿನಿಂದಲೂ ಸದರಿ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಸದರಿ ಎರಡು ಸರ್ಕಾರಿ ಅಭಿಯೋಜಕರುಗಳ ಕಛೇರಿಗಳನ್ನು ಜಿಲ್ಲಾ ಮಟ್ಟದ ಸಂಯುಕ್ತ ಕಛೇರಿಗಳೆಂದು ಘೋಷಿಸಬೇಕೆಂದು ಮತ್ತು ಸದರಿ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿಗಳನ್ನು ಮತ್ತು ಸಿಬ್ಬಂದಿಯವರನ್ನು ಸರ್ಕಾರಿ ಅಭಿಯೋಜಕರ ಕಛೇರಿಯ ನಿಯಂತ್ರಣದಲ್ಲಿ ಬರುವ ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಎಂದು ಘೋಷಿಸಲು ಹಾಗೂ ಈ ಕಛೇರಿಗಳಿಗೆ ವೇತನ ಡ್ರಾ ಮಾಡಲು ಬಟವಾಡಾಧಿಕಾರತ್ವ ಮಂಜೂರಾತಿಯನ್ನು ನೀಡುವಂತೆ ಕೋರಿರುತ್ತಾರೆ.

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಒಇ 481 ಪಿಪಿಇ 2008, ಬೆಂಗಳೂರು, ದಿನಾಂಕ: 20ನೇ ಏಪ್ರಿಲ್ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಹೊಸದಾಗಿ ಸೃಜಿಸಲಾದ ರಾಮನಗರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ಸರ್ಕಾರಿ ಅಭಿಯೋಜಕರನ್ನು ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 17(ಸಿ) 49 ಮತ್ತು 50ರನ್ವಯ ಮಹಾಲೇಖಪಾಲರಿಂದ ಅಧಿಕರಿಸುವ (authorization) ಷರತ್ತಿಗೊಳಪಟ್ಟು ಹಣ ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರವನ್ನು ನೀಡಲು ಸರ್ಕಾರವು ಈ ಮೂಲಕ ಮಂಜೂರಾತಿಯನ್ನು ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 51 ವೆಚ್ಚ–11/2008 ದಿನಾಂಕ: 31.03.2009ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಸಿ. ಸಿದ್ದಪ್ಪ

ಪಿ.ಆರ್. 1192

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ,
(ಕಾನೂನು ಮತ್ತು ಸುವ್ಯವಸ್ಥೆ, ಕಾಫಿಪೋಸ ಮತ್ತು ಅಭಿಯೋಗಗಳು).

ವಿಷಯ: ಚಾಮರಾಜನಗರದ ಸಿವಿಲ್ ಜಡ್ಜ್(ಹಿರಿಯ ವಿಭಾಗ) ಮತ್ತು ಸಿ.ಜೆ.ಎಂ. ನ್ಯಾಯಾಲಯ ಹಾಗೂ ಚನ್ನರಾಯಪಟ್ಟಣದ ಹೆಚ್ಚುವರಿ ಸಿವಿಲ್ ನ್ಯಾಯಧೀಶರ(ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯಗಳಿಗೆ ಹೊಂದಿಕೊಂಡಂತೆ ಅಭಿಯೋಜಕರುಗಳ ಕಛೇರಿಗಳಲ್ಲಿ ಸಿಬ್ಬಂದಿಯ ಹುದ್ದೆಗಳ ಸೃಜಿಸುವ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂ:ಲಾ 309 ಎಲ್‌ಸಿಇ 2002, ದಿನಾಂಕ: 23.06.2005.

2. ಸರ್ಕಾರದ ಆದೇಶ ಸಂ:ಲಾ 292 ಎಲ್‌ಸಿಇ 2000, ದಿನಾಂಕ: 16–04–2001.

3. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರ ಸಂಖ್ಯೆ:ಡಿಪಿಎನ್/ ಸಿಶಾ1/186/2002–03, ದಿನಾಂಕ:27–04–2005.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಹೊಸದಾಗಿ ಪ್ರಾರಂಭವಾಗುವ ಸಿವಿಲ್ ಜಡ್ಜ್(ಹಿರಿಯ ವಿಭಾಗ) ನ್ಯಾಯಾಲಯವನ್ನು ಸಿವಿಲ್ ಜಡ್ಜ್ (ಹಿರಿಯ ವಿಭಾಗ) ಮತ್ತು ಸಿ.ಜೆ.ಎಂ. ನ್ಯಾಯಾಲಯ ಎಂದು ಪದನಾಮಗೊಳಿಸಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಚನ್ನರಾಯಪಟ್ಟಣದ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯವನ್ನು ಪ್ರಾರಂಭಿಸಲು ಮಂಜೂರಾತಿಯನ್ನು ನೀಡಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರ ಪತ್ರದಲ್ಲಿ, ಚಾಮರಾಜನಗರದ ಸಿವಿಲ್ ಜಡ್ಜ್(ಹಿರಿಯ ವಿಭಾಗ) ಮತ್ತು ಸಿ.ಜೆ.ಎಂ. ನ್ಯಾಯಾಲಯ ಹಾಗೂ ಚನ್ನರಾಯಪಟ್ಟಣದ ಹೆಚ್ಚುವರಿ ಸಿವಿಲ್ ನ್ಯಾಯಧೀಶರ(ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯಗಳನ್ನು ಮೇಲೆ ಕ್ರಮ ಸಂಖ್ಯೆ (1) ಮತ್ತು (2)ರಲ್ಲಿ ಓದಲಾದ ಸರ್ಕಾರದ ಆದೇಶಗಳನ್ವಯ ಸೃಜಿಸಲಾಗಿದೆ. ಸದರಿ ನ್ಯಾಯಾಲಯಗಳಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಪ್ರಕರಣಗಳನ್ನು ನಡೆಸಲು ಚಾಮರಾಜನಗರದ ಸದರಿ ನ್ಯಾಯಾಲಯಕ್ಕೆ ಹೊಂದಿಕೊಂಡ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರ ಕಛೇರಿಗೆ ಒಂದು ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರ, ಒಂದು ಬೆರಳಚ್ಚುಗಾರ–ವ–ಸಹಾಯಕರ ಮತ್ತು ಒಂದು ದಲಾಯತ್ ಹುದ್ದೆಯನ್ನು ಹಾಗೂ ಚನ್ನರಾಯಪಟ್ಟಣದ ಸದರಿ ನ್ಯಾಯಾಲಯಕ್ಕೆ ಹೊಂದಿಕೊಂಡು ಸಹಾಯಕ ಸರ್ಕಾರಿ ಅಭಿಯೋಜಕರ ಕಛೇರಿಗೆ ಒಂದು ಸಹಾಯಕ ಸರ್ಕಾರಿ ಅಭಿಯೋಜಕರ, ಬೆರಳಚ್ಚುಗಾರ–ವ–ಸಹಾಯಕರ ಮತ್ತು ಒಂದು ದಲಾಯತ್ ಹುದ್ದೆಯನ್ನು, ಇಲಾಖೆಗೆ ಸೃಜನೆ ಮಾಡುವಂತೆ ಕೋರಿರುತ್ತಾರೆ.

ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 48 ಪಿಪಿಇ 2008, ಬೆಂಗಳೂರು, ದಿನಾಂಕ: 22ನೇ ಏಪ್ರಿಲ್ 2009.

ಮೇಲಿನ ವಿವರಿಸಿರುವ ಹಿನ್ನಲೆಯಲ್ಲಿ, ಚಾಮರಾಜನಗರದ ಸಿವಿಲ್ ಜಡ್ಜ್(ಹಿರಿಯ ವಿಭಾಗ) ಮತ್ತು ಸಿ.ಜೆ.ಎಂ. ನ್ಯಾಯಾಲಯಕ್ಕೆ ಹೊಂದಿಕೊಂಡಂತೆ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರ ಕಛೇರಿಗೆ ಹಾಗೂ ಚನ್ನರಾಯಪಟ್ಟಣದ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ(ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ ಹೊಂದಿಕೊಂಡಂತೆ ಸಹಾಯಕ ಸರ್ಕಾರಿ ಅಭಿಯೋಜಕರ ಕಛೇರಿಗೆ ಇದಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನಮೂದಿಸಿರುವಂತೆ ಹುದ್ದೆಗಳನ್ನು ಮೊದಲಬಾರಿ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಸೃಜಿಸಲಾಗಿದೆ.

ಸದರಿ ಹುದ್ದೆಗಳನ್ನು ಬಾಹ್ಯಮೂಲಗಳಿಂದ ಭರ್ತಿಮಾಡಿಕೊಳ್ಳತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ: 10.07.1996ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹಾಗೂ ಆರ್ಥಿಕ ಇಲಾಖೆಯು ಟಿಪ್ಪಣಿ ಸಂ: ಎಫ್‌ಡಿ 918 ವೆಚ್ಚ–7/2008, ದಿನಾಂಕ: 06.12.2008 ಮತ್ತು ಎಫ್‌ಡಿ 82 ವೆಚ್ಚ–11/08, ದಿನಾಂಕ:28.01.2009ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಸಿ. ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ,

(ಕಾನೂನು ಮತ್ತು ಸುವ್ಯವಸ್ಥೆ, ಕಾಫಿಪೋಸ ಮತ್ತು ಅಭಿಯೋಗಗಳು).

ಸರ್ಕಾರದ ಆದೇಶ ಸಂಖ್ಯೆ: ಒಇ 48 ಪಿಪಿಇ 2006, ದಿನಾಂಕ: 22.04.2009

ಅನುಬಂಧ

ಚಾಮರಾಜನಗರ ಸಿವಿಲ್ ಜಡ್ಜ್ (ಹಿರಿಯ ವಿಭಾಗ) ಮತ್ತು ಸಿ.ಜೆ.ಎಂ. ನ್ಯಾಯಾಲಯಕ್ಕೆ ಹೊಂದಿಕೊಂಡಂತೆ ಹಿರಿಯ ಸಹಾಯ ಸರ್ಕಾರಿ ಅಭಿಯೋಜಕರ ಕಛೇರಿಗೆ ಸೃಜಿಸಲಾಗಿರುವ ಹುದ್ದೆಗಳ ವಿವರ:

ಕ್ರ. ಸಂ.	ಹುದ್ದೆಯ ವಿವರ	ಮಂಜೂರಾದ ಹುದ್ದೆಗಳು
1	ಬೆರಳಚ್ಚುಗಾರ–ವಾ–ಸಹಾಯಕ	01
2	ದಲಾಯತ್	01

ಚನ್ನರಾಯಪಟ್ಟಣದ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ ಹೊಂದಿಕೊಂಡಂತೆ ಸಹಾಯಕ ಸರ್ಕಾರಿ ಅಭಿಯೋಜಕರ ಕಛೇರಿಗೆ ಸೃಜಿಸಲಾಗಿರುವ ಹುದ್ದೆಗಳ ವಿವರ:

ಕ್ರ. ಸಂ.	ಹುದ್ದೆಯ ಹೆಸರು	ಮಂಜೂರಾದ ಹುದ್ದೆಗಳು
1	ಬೆರಳಚ್ಚುಗಾರ–ವಾ–ಸಹಾಯಕ	01
2	ದಲಾಯತ್	01

ಕೆ.ಸಿ. ಸಿದ್ದಪ್ಪ

ಪಿ.ಆರ್. 1193

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ,
(ಕಾನೂನು ಮತ್ತು ಸುವ್ಯವಸ್ಥೆ, ಕಾಫಿಪೋಸ ಮತ್ತು ಅಭಿಯೋಗಗಳು).

FOREST, ECOLOGY AND ENVIRONMENT SECRETARIAT

Sub: Transfer of lease of diversion of 27,193 ha. of Forest land in Alagilwada RF of Harapanahalli Range, Davanagere Division for establishment of 23.10 MW Wind Power Project Sanctioned in Favour of M/s Bellary Wind Power Private Ltd., to M/s. B.P. Energy India Pvt. Ltd., Mumbai

Read:

1. Letter No.4-KRC497/2008/BAN/3144, dated 24th October 2008 of Government of India, Ministry of Environment and Forests, Regional Office, Bangalore.
2. Government order No. FEE 96 FLL 2008, Bangalore dated 10.11.2008
3. Guide lines of G.O.I.F. No. 8-84/2002-FC, dated 14.05.2004 and 20.02.2006.
4. Letter No. A5(5)GFL.CR.3/07-08 dated 04.02.2009 of Principal Chief Conservator of Forests, Bangalore.
5. State Government letter No. FEE 16 FLL 2009, dated 13.02.2009.
6. Letter No. 4-KRC497/2008-BAN/3946, dated 11.3.2009 of Government of India, Ministry of Environment and Forests, Regional Office, Bangalore.

Preamble:

Government of India in its letter read at (1) above has accorded approval under Forest (Conservation) Act, 1980 for diversion of 27,193 ha. forest land in Alagilwada RF of Davanagere Division for establishment of 23.10 MW Wind Power Project in favour of M/s Bellary Wind Power Private Pvt. Ltd., Bangalore. Accordingly Government of Karnataka has issued Government order read at (2) above.

The Principal Chief Conservator of Forests, Bangalore vide his letter dated 04.02.2009 read at (4) above had submitted a proposal to obtain the approval of Government of India as per the Government of India's guidelines dated 14.05.2004 and 20.02.2006 (read at 3 above) issued under Forest (Conservation) Act, 1980 for transfer of lease for diversion of 27,193 ha. of forest land in Alagilwada Reserve Forest of Harapanahalli Range, Davanagere Division for establishment of 23.10 MW Wind Power Sanctioned in favour of M/s Bellary Wind Power Private Ltd., to M/s. B.P. Energy India Pvt. Ltd., Mumbai.

The original user agency M/s. Bellary Wind Power Private Ltd., Bangalore has proposed to transfer 27,193 ha. of forest land to the new user agency M/s. B.P. Energy India Private Limited, Mumbai. The original user agency has submitted no objection certificate for such transfer and the new user agencies have submitted an under taking that they will abide by the conditions stipulated by Government of India and Government of Karnataka.

Accordingly the proposal was recommended to Government of India vide State Government letter dated 13.02.2009 read at (5) above.

Government of India, Ministry of Environment and Forests, Regional Office, Bangalore vide their letter dated: 11th March 2009 read at (6) above has conveyed its approval guidelines issued under Forest (Conservation) Act, 1980 for transfer of lease of diverted Forest land of 27,193 ha. in Alagilwada RF of Harapanahalli Range, Davanagere Division for establishment of 23.10 MW Power Project from M/s. Bellary Wind Power Private Limited, Bangalore (the original user agency) to M/s. B.P. Energy India Private Limited, Mumbai (the Investor/Power Producer) subject to the condition that M/s. B.P.Energy India

Private Limited, Mumbai shall abide by all the conditions imposed by Central Government vide their letter dated : 24.10.2008 and any other conditions that may be stipulated by Government of India in future read at (1) above.

The proposal has been examined in detail and hence the order.

Government Order No. FEE 16 FLL 2009, Bangalore, Dated: 4th April 2009

In the circumstances explained above, Government are pleased to accord approval guidelines issued under Section 2 of Forest (Conservation) Act, 1980 for transfer of lease of diverted forest land of 27,193 ha. in Alagilwada RF of Harapanahalli Range, Davanagere Division for establishment of 23.10 MW Wind Power Project from M/s. Bellary Wind Power Private Limited, Bangalore, (the original User agency), to M/s. B.P. Energy India Private Limited, Mumbai (the Investor/Power Producer).

The transfer of lease is subject to the condition that the new user agencies, i.e., the investors/power producer, shall abide all the conditions imposed by the Central Government/State Government/Principal Chief Conservator of Forests, for diversion of 27,193 ha. of forest land in favour of M/s. B.P. Energy India Private Limited, Mumbai for establishment of 23.10 MW Wind Power Project in Alagilwada RF of Harapanahalli Range, Davanagere Division of Karnataka.

By Order and in the name of Governor of Karnataka,

H.M. MALLIKARJUNA SWAMY

P.R. 1194 Under Secretary to Government,

Forest, Ecology and Environment Department

ಕಂದಾಯ ಸಚಿವಾಲಯ

ವಿಷಯ: ಸೆಂಟ್ರಲ್ ರಿಸರ್ವ್ ಪೊಲೀಸ್ ಫೋರ್ಸ್ (ಸಿಆರ್‌ಪಿಎಫ್) ಇವರಿಗೆ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ತರಳು ಗ್ರಾಮದ ಸ.ನಂ.55ರಲ್ಲಿನ ಸರ್ಕಾರಿ ಜಮೀನು ಮಂಜೂರಾತಿ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 121 ಎಲ್‌ಜಿಬಿ 94, ದಿ.05.07.94.

2. ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 455 ಎಲ್‌ಜಿಬಿ 2001, ದಿ.16.12.2002.

3. ಇನ್ಸ್‌ಪೆಕ್ಟರ್ ಜನರಲ್, ಸಿಆರ್‌ಪಿಎಫ್, ದಕ್ಷಿಣ ವಲಯ, ಹೈದರಬಾದ್ ಇವರ ಪತ್ರ ಸಂಖ್ಯೆ. ಬಿ–ವಿ–7/2007–ಪಿಆರ್‌ಓವಿ (ಡಬ್ಲ್ಯೂ) ತರಳು, ದಿ.04.04.2008

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿನ ಸರ್ಕಾರದ ಆದೇಶ ದಿ:05.07.94ರಲ್ಲಿ ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಇವರಿಗೆ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ತರಳು ಗ್ರಾಮದ ಸ.ನಂ.55ರಲ್ಲಿ 253 ಎಕರೆ ಜಮೀನನ್ನು ರೈಫಲ್ ಫೈಯರಿಂಗ್ ರೇಂಜ್ ಉದ್ದೇಶಕ್ಕಾಗಿ ಪ್ರತಿ ಎಕರೆಗೆ ರೂ.30,000/– ಹಾಗೂ ಭೂ ಪರಿವರ್ತನೆ ಶುಲ್ಕ ಮತ್ತಿತರ ಶುಲ್ಕಗಳನ್ನು ವಿಧಿಸಿ ಮಂಜೂರು ಮಾಡಲು ಸರ್ಕಾರದ ಅನುಮೋದನೆ ನೀಡಲಾಗಿತ್ತು.

ವೈಲ್ಡ್‌ಲೈಫ್ ಆಫ್ ಇಂಡಿಯಾ ಇವರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ: 7301/2001 ಟ್ರಸ್ಟ್ ಅನ್ನು ರೈಫಲ್ ಫೈಯರಿಂಗ್ ರೇಂಜ್ ಉದ್ದೇಶಕ್ಕಾಗಿ ಸಿಆರ್‌ಪಿಎಫ್ ಇವರಿಗೆ ಸೂಕ್ತ ಜಮೀನು ಮಂಜೂರು ಮಾಡುವಂತೆ ನಿರ್ದೇಶನ ನೀಡಿ, ರಾಜ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿಯನ್ನು ಇತ್ಯರ್ಥ ಪಡಿಸಿರುತ್ತದೆ. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿ:01.09.2001ರಂದು ನಡೆದ ಸಭೆಯಲ್ಲಿ ಸದರಿ ಜಮೀನು ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿರುವ ಜಮೀನಿಗೆ ಹೊಂದಿಕೊಂಡಿದ್ದು, ಸದರಿ ಜಮೀನುಗಳು ಸೇಫ್ ಝೋನ್‌ನಲ್ಲಿ ಬರುತ್ತಿದ್ದು, ಸಿಆರ್‌ಪಿಎಫ್ ಇವರಿಗೆ ರೈಫಲ್ ಫೈಯರಿಂಗ್ ರೇಂಜ್ ಉದ್ದೇಶಕ್ಕಾಗಿ ನೀಡಿರುವುದರಿಂದ ವನ್ಯ ಜೀವಿಗಳಿಗೆ ತೊಂದರೆಯಾಗುವುದೆಂದು ತಿಳಿಸಿ ಮಂಜೂರಾತಿಯನ್ನು ರದ್ದುಪಡಿಸಲು ನಿರ್ಣಯಿಸಲಾಗಿರುತ್ತದೆ. ಅದರಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿನ ಸರ್ಕಾರದ ಆದೇಶ ದಿ: 16.12.2002ರಲ್ಲಿ ಸಿಆರ್‌ಪಿಎಫ್ ಇವರಿಗೆ 253 ಎಕರೆ ಜಮೀನನ್ನು ಮಂಜೂರು ಮಾಡಿರುವ ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 121 ಎಲ್‌ಜಿಬಿ 94, ದಿ: 05.07.94 ನ್ನು ರದ್ದುಪಡಿಸಿ, ಈ ರದ್ದುಗೊಳಿಸಿದ 253 ಎಕರೆ ಜಮೀನಿನ ಪೈಕಿ 100 ಎಕರೆ ಜಮೀನನ್ನು ವಿಜ್ಞಾನ ನಗರ ಮತ್ತು ಸ್ಪೇಸ್ ಮ್ಯೂಸಿಯಂ ಉದ್ದೇಶಗಳಿಗಾಗಿ ಯೋಜನಾ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ವರ್ಗಾಯಿಸಲು ಸರ್ಕಾರದ ಪೂರ್ವಾನುಮೋದನೆ ನೀಡಲಾಗಿರುತ್ತದೆ.

ಇನ್ಸ್‌ಪೆಕ್ಟರ್ ಜನರಲ್, ಸಿಆರ್‌ಪಿಎಫ್, ಹೈದರಬಾದ್ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿನ ಪತ್ರದಲ್ಲಿ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿ ಸದರಿ ಜಮೀನಿನಲ್ಲಿ ಬೆಟಾಲಿಯನ್ ಕ್ಯಾಪಿಂಗ್ ಸೈಟ್ ಹಾಗೂ ಸ್ಪೇಸ್ ಫಾರ್ ಫ್ರೀ ಇಂಡಕ್ಷನ್ ಟ್ರೈನಿಂಗ್ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳುವುದರಿಂದ ತರಳು ಗ್ರಾಮದ 253 ಎಕರೆ ಜಮೀನನ್ನು ಅವರಿಗೇ ಬಿಟ್ಟು ಕೊಡುವಂತೆ ಕೋರಿರುತ್ತಾರೆ. ದಿ:23.02.2005ರಂದು ನಡೆದ ಸಭೆಯಲ್ಲಿ ಈ ಹಿಂದಿನ ರಾಜ್ಯ ಸರ್ಕಾರದ ಬದ್ಧತೆಯನ್ನು ಭಾಗಶಃ ಗೌರವಿಸಲು ಸಿಆರ್‌ಪಿಎಫ್ ಇವರಿಗೆ ಸದರಿ ಜಮೀನಿನಲ್ಲಿ 100 ಎಕರೆಯನ್ನು ಹಾಗೂ ಫೈಯರಿಂಗ್ ರೇಂಜ್ ಉದ್ದೇಶಕ್ಕಾಗಿ ನೆಲಮಂಗಲ ಮತ್ತು ಮಾಗಡಿ ತಾಲ್ಲೂಕುಗಳಲ್ಲಿ ಮಂಜೂರು ಮಾಡಲು ಸಿಆರ್‌ಪಿಎಫ್ ಇವರ ಅಭಿಪ್ರಾಯವನ್ನು ಸರ್ಕಾರದ ಪತ್ರ ದಿ:24.09.05 ರಲ್ಲಿ ಕೋರಲಾಗಿತ್ತು. ಆದರೆ ಭಾರತ ಸರ್ಕಾರದ ಒಳಾಡಳಿತ ಸಚಿವಾಲಯವು ಮತ್ತು ಸಿಆರ್‌ಪಿಎಫ್ ಇವರು ತರಬೇತಿ ಸಂಬಂಧಿತ ಚಟುವಟಿಕೆಗಳಿಗೆ ಅಗತ್ಯ ಮೂಲ ಸೌಲಭ್ಯಗಳನ್ನು ಕಲ್ಪಿಸಲು ಅಪಾರ ಬಂಡವಾಳವನ್ನು ಈಗಾಗಲೇ ತೊಡಗಿಸಿರುವುದರಿಂದ ರಾಜ್ಯ ಸರ್ಕಾರದ 100 ಎಕರೆ ಜಮೀನನ್ನು ತರಳು ಗ್ರಾಮದಲ್ಲಿ ಹಾಗೂ 152 ಎಕರೆ ಜಮೀನನ್ನು ನೆಲಮಂಗಲ ಮತ್ತು ಮಾಗಡಿ ತಾಲ್ಲೂಕುಗಳಲ್ಲಿ ಮಂಜೂರು ಮಾಡುವ ಪ್ರಸ್ತಾವನೆಗೆ ಒಪ್ಪದೇ ಈ ಹಿಂದೆ ತರಳು ಗ್ರಾಮದಲ್ಲಿ 253 ಎಕರೆ ಮಂಜೂರು ಮಾಡಿರುವುದನ್ನೇ ನೀಡುವಂತೆ ಹಾಗೂ ಈ ಜಮೀನಿನಲ್ಲಿ ಸಿಆರ್‌ಪಿಎಫ್ ಈಗಾಗಲೇ ಫೈಯರಿಂಗ್ ಅಭ್ಯಾಸಗಳನ್ನು ಹೊರತುಪಡಿಸಿ ತರಭೇತಿ ಚಟುವಟಿಕೆಗಳನ್ನು ನಡೆಸುತ್ತಿರುವುದರಿಂದ ಈ ಜಮೀನನ್ನೇ ನೀಡುವಂತೆ ಕೋರಿರುತ್ತಾರೆ.

ಈ ನಡುವೆ ಮಾಹಿತಿ ತಂತ್ತಜ್ಞಾನ, ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವಿಜ್ಞಾನ ನಗರಕ್ಕಾಗಿ ಮಂಜೂರು ಮಾಡಿರುವ 100 ಎಕರೆ ಜಮೀನಿನ ಸ್ವಾಧೀನತೆ ನೀಡುವಂತೆ ಕಂದಾಯ ಇಲಾಖೆಯನ್ನು ಕೋರಿರುತ್ತದೆ. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿ:25.06.08 ರಂದು ನಡೆದ ಸಭೆಯಲ್ಲಿ ರಾಜ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ:7301/2001ರಲ್ಲಿ ಸಿಆರ್‌ಪಿಎಫ್‌ಗೆ ನೀಡಿರುವ ಜಮೀನನ್ನು ರದ್ದುಪಡಿಸಲು ಯಾವುದೇ ನಿರ್ದೇಶನ ನೀಡಿರುವುದಿಲ್ಲ ಎಂಬ ಅಂಶವನ್ನು ಸಭೆಯಲ್ಲಿ ಗಮನಿಸಲಾಯಿತು. ಸಭೆಗೆ ಹಾಜರಾಗಿದ್ದ ಸಿಆರ್‌ಪಿಎಫ್ ಅಧಿಕಾರಿಗಳು ಈ ಜಮೀನಿನಲ್ಲಿ ಸಿಆರ್‌ಪಿಎಫ್ ಯಾವುದೇ ಫೈಯರಿಂಗ್ ಚಟುವಟಿಕೆಗಳನ್ನು ನಡೆಸುವುದಿಲ್ಲವೆಂದು ಹಾಗೂ ಈ ಸಂಬಂಧವಾಗಿ ಕರ್ನಾಟಕ ಸರ್ಕಾರಕ್ಕೆ ಮುಚ್ಚಳಿಕೆ ನೀಡುವುದಾಗಿ ಸಭೇಯಲ್ಲಿ ತಿಳಿಸಿರುತ್ತಾರೆ. ಸರ್ಕಾರದ ಕಾರ್ಯದರ್ಶಿ, ಅರಣ್ಯ ಇಲಾಖೆ ಇವರು ಸರ್ವೋಚ್ಚ ನ್ಯಾಯಾಲಯವು ರಚಿಸಿರುವ ಸೆಂಟ್ರಲ್ ಎಂಪವರ್ಡ್ ಕಮಿಟಿಯ ಮುಂದೆ ವೈಲ್ಡ್‌ಲೈಫ್ ಆಫ್ ಇಂಡಿಯಾ ಇವರು ಸಲ್ಲಿಸಲಾಗಿರುವ ಅರ್ಜಿ ಸಂಖ್ಯೆ: 369ಕ್ಕೆ ಸಂಬಂಧಿಸಿದಂತೆ ವಿಜ್ಞಾನ ನಗರಕ್ಕೆ ಮಂಜೂರು ಮಾಡಿರುವ 100 ಎಕರೆ ಜಮೀನನ್ನು ರದ್ದುಪಡಿಸುವುದಾಗಿ ಪ್ರಮಾಣ ಪತ್ರ ಸಲ್ಲಿಸಿರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ. ಆದ್ದರಿಂದ ಮಾಹಿತಿ ತಂತ್ತಜ್ಞಾನ ಇಲಾಖೆಗೆ ಈ ಜಮೀನನ್ನು ನೀಡದಿರಲು ತಿಳಿಸಿರುತ್ತಾರೆ. ಆದ್ದರಿಂದ ದಿ: 25.06.2008ರಂದು ನಡೆದ ಸಭೆಯಲ್ಲಿ ಸಿಆರ್‌ಪಿಎಫ್‌ಗೆ ತರಳು ಗ್ರಾಮದಲ್ಲಿ 253 ಎಕರೆ ಜಮೀನನ್ನು ಮಂಜೂರು ಮಾಡಿರುವ ಸರ್ಕಾರಿ ಆದೇಶ ದಿ:05.07.94 ನ್ನು ಪುನರ್ ಸ್ಥಿತಿಗೆ ತರಲು ಹಾಗೂ ವಿಜ್ಞಾನ ನಗರ ಉದ್ದೇಶಕ್ಕಾಗಿ ಬದಲಿ ಜಮೀನನ್ನು ಮಂಜೂರು ಮಾಡಲು ತೀರ್ಮಾನಿಸಲಾಗಿರುತ್ತದೆ.

ಆದರೆ ಪ್ರಸ್ತುತ ತರಳು ಗ್ರಾಮದ ಸ.ನಂ.55 ರ ಜಮೀನಿನ ವಿವರವಾದ ಸರ್ವೆ ಮಾಡಿ ಸಲ್ಲಿಸಲಾಗಿರುವ ನಕ್ಷೆಯ ಪ್ರಕಾರ ಲಭ್ಯವಿರುವ ಜಮೀನಿನ ವಿವರ ಕೆಳಕಂಡಂತಿರುತ್ತದೆ.

1) ಸಿಆರ್‌ಪಿಎಫ್ ರವರಿಗೆ ಖಾಲಿ ಇರುವ ಜಮೀನು 220 ಎಕರೆ.
2) ರೈತರು ತಮಗೆ ಇನಾಂ ಅಬಾಲಿಷನ್ ವಿಶೇಷ ಜಿಲ್ಲಾಧಿಕಾರಿಗಳಿಂದ ಎಂಡಾರ್ಸ್‌ಮೆಂಟ್ ಆಗಿದೆ ಎಂದು ತಿಳಿಸುವ ಹಾಗೂ ಅನುಭವಿಸುತ್ತಿರುವ ವಿಸ್ತೀರ್ಣ 183.28 ಎಕರೆ.
3) ಗ್ರಾಮಠಾಣ, ಖರಾಬ್, ರಸ್ತೆ ವಗೈರೆ, ಹದ್ದಿಗೆ ಹಿಡಿದಹಳ್ಳ 47.37 ಎಕರೆ.

ಮೇಲ್ಕಂಡ ಸರ್ವೆ ನಕ್ಷೆಯಂತೆ ಖಾಲಿ ಇರುವ 220 ಎಕರೆ ಜಮೀನನ್ನು ಸಿಆರ್‌ಪಿಎಫ್ ಇವರಿಗೆ ಮಂಜೂರು ಮಾಡಲು ಸರ್ಕಾರವು ಪರಿಶೀಲಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 198 ಎಲ್‌ಜಿಬಿ 2000, ಬೆಂಗಳೂರು, ದಿನಾಂಕ: 17ನೇ ಡಿಸೆಂಬರ್ 2008

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸಿಆರ್‌ಪಿಎಫ್ ರವರ ಚಟುವಟಿಕೆಗಳು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿನ ವನ್ಯಜೀವಿಗಳಿಗೆ ಯಾವುದೇ ತೊಂದರೆಯಾಗಬಾರದು ಹಾಗೂ ಈ ಜಮೀನಿನಲ್ಲಿ ಫೈಯರಿಂಗ್ ರೇಂಜ್ ನಡೆಸಬಾರದೆಂಬ ಷರತ್ತಿಗೊಳಪಟ್ಟು ದಿ:05.07.94 ರ ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 121 ಎಲ್‌ಜಿಬಿ 94 ಅನ್ನು ಭಾಗಶಃ ಮಾರ್ಪಡಿಸಿ ಸ.ನಂ 55 ರಲ್ಲಿನ 253 ಎಕರೆ ಬದಲಿಗೆ ಸರ್ವೆ ನಕ್ಷೆ ಪ್ರಕಾರ ಯಾರದೇ ಸ್ವಾಧೀನದಲ್ಲಿ ಇರದೇ ಖಾಲಿ ಇರುವ 220 ಎಕರೆ ಜಮೀನನ್ನು ಮಾತ್ರ ಸಿಆರ್‌ಪಿಎಫ್ ಇವರಿಗೆ ಮಂಜೂರು ಮಾಡಲು ಆದೇಶಿಸಿದೆ. ಅಲ್ಲದೇ ದಿ:16.12.2002 ರ ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 455 ಎಲ್‌ಜಿಬಿ 2001 ರಲ್ಲಿ 100 ಎಕರೆ ಜಮೀನನ್ನು ವಿಜ್ಞಾನ ನಗರಕ್ಕೆ ಮಂಜೂರು ಮಾಡಿರುವುದನ್ನು ರದ್ದುಪಡಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1195

ಇ. ಈಶ್ವರ ನಾಯಕ್

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂ.ಮಂಜೂರಾತಿ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ: ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ (ಎಸ್‌ಜಿಎಸ್‌ವೈ) ಹಾಗೂ ಡಿಆರ್‌ಡಿಎ ಆಡಳಿತ ಕಾರ್ಯಕ್ರಮಗಳನ್ನು 2009-2010ನೇ ಸಾಲಿನಲ್ಲಿ ಮುಂದುವರೆಸುವ ಬಗ್ಗೆ.

ಓದಲಾಗಿದೆ: ಸರ್ಕಾರದ ನಡೆವಳಿ ಸಂಖ್ಯೆ: ಗ್ರಾಅಪ 28 ಯೋಉಮಾ 2009 ದಿನಾಂಕ: 03.04.2009.

ಪ್ರಸ್ತಾವನೆ:

2008-09ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿದ ಯೋಜನೆಗಳನ್ನು 2009-2010ನೇ ಸಾಲಿನಲ್ಲಿ ಮುಂದುವರಿಸುವ ಕುರಿತು ದಿನಾಂಕ 02-04-2009 ರಂದು ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮುಂದುವರೆಸಲು ತೀರ್ಮಾನಿಸಲಾಗಿದೆ. ಅದರಂತೆ, 2009-2010ನೇ ಸಾಲಿಗೆ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ (ಎಸ್‌ಜಿಎಸ್‌ವೈ) ಹಾಗೂ ಡಿಆರ್‌ಡಿಎ ಆಡಳಿತ ಕಾರ್ಯಕ್ರಮಗಳನ್ನು ಮುಂದುವರಿಸಲು ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 25 ಎಸ್‌ಜಿವೈ 2008, ಬೆಂಗಳೂರು, ದಿನಾಂಕ: 18ನೇ ಏಪ್ರಿಲ್ 2009

ಕರ್ನಾಟಕ ಸರ್ಕಾರವು ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ (ಎಸ್‌ಜಿಎಸ್‌ವೈ) ಹಾಗೂ ಡಿಆರ್‌ಡಿಎ ಆಡಳಿತ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರವು ಈ ಯೋಜನೆಗೆ ನಿಗದಿಪಡಿಸಬಹುದಾದ ಅನುದಾನ ಹಾಗೂ ವಿಧಿಸಬಹುದಾದ ಷರತ್ತುಗಳಿಗೆ ಒಳಪಟ್ಟು 2009-2010ನೇ ಸಾಲಿಗೆ ಮುಂದುವರಿಸಿದೆ.

2009-2010ನೇ ಸಾಲಿನಲ್ಲಿ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ (ಎಸ್‌ಜಿಎಸ್‌ವೈ) ಹಾಗೂ ಡಿಆರ್‌ಡಿಎ ಆಡಳಿತ ಕಾರ್ಯಕ್ರಮಗಳನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಯಲ್ಲಿ ಭರಿಸತಕ್ಕದ್ದು.

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ (ಎಸ್‌ಜಿಎಸ್‌ವೈ) ಲೆಕ್ಕ ಶೀರ್ಷಿಕೆ: "2501 ಗ್ರಾಮೀಣಾಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳು 01 ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು-198-ಗ್ರಾಮ ಪಂಚಾಯತ್‌ಗಳಿಗೆ ಸಹಾಯ-6-ಗ್ರಾಮ ಪಂಚಾಯತ್‌ಗಳು-01-ಬ್ಲಾಕ್ ಅನುದಾನ ಕೇಂದ್ರ ಪುರಸ್ಕೃತ ಯೋಜನೆ (ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ) 2009-2010 (2501-01-198-6-01)" (ಲಿಂಕ್ ಕೋಡ್ 2501-01-800-0-07)

ಡಿಆರ್‌ಡಿಎ (ಆಡಳಿತ) (ಜಿಲ್ಲಾವಲಯ) ಲೆಕ್ಕಶೀರ್ಷಿಕೆ:_"2515 ಇತರೆ ಗಾಮೀಣಾಭಿವೃದ್ಧಿ ಕಾರ್ಯಕ್ರಮಗಳು 00-196-ಜಿಲ್ಲಾ ಪಂಚಾಯತ್‌ಗಳಿಗೆ ಸಹಾಯ-6-ಜಿಲ್ಲಾ ಪಂಚಾಯತ್-06-ಡಿಆರ್‌ಡಿಎ ಆಡಳಿತಾತ್ಮಕ ವೆಚ್ಚ-(ಕೇಂದ್ರ ಪುರಸ್ಕೃತ ಯೋಜನೆ) 2009-2010 (2515-00-196-6-06)".

ಡಿಆರ್‌ಡಿಎ (ಆಡಳಿತ) ರಾಜ್ಯ ಕೋಶ ಲೆಕ್ಕಶೀರ್ಷಿಕೆ: "2515 ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು 00-800-ಇತರೆ ವೆಚ್ಚಗಳು-0-08 ಜಿಲ್ಲಾ ಗಾಮೀಣಾಭಿವೃದ್ಧಿ ಏಜೆನ್ಸಿ (ಯೋಜನೆ) (2515-00-800-0-08)".

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಸಹಮತಿ ಸಂಖ್ಯೆ:ಗ್ರಾಅಪ 130 ಪಿಬಿಎಸ್ 2009 ದಿನಾಂಕ 16-04-2009ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಡಾ: ಶಮ್ಲಾ ಇಕ್ಬಾಲ್

ಪಿ.ಆರ್. 1196

ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ. ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ವಿಷಯ: ಶ್ರೀ ಎಸ್.ಆರ್. ಮಿಟ್ಟಲಕೋಡ, ಕಿರಿಯ ಇಂಜಿನಿಯರ್ ಮತ್ತು ಎಂ.ಎಂ. ಕಲ್ಯಾಣಶೆಟ್ಟಿ, ಗ್ರಾಮ ಪಂಚಾಯತ್ ಕಾರ್ಯದರ್ಶಿ, ಮುಧೋಳ ಬಾಗಲಕೋಟೆ ಜಿಲ್ಲೆ ಇವರುಗಳು ಎಸೆಗಿದ ಅಕ್ರಮಗಳಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಉಪ ಲೋಕಾಯುಕ್ತರಿಗೆ ವಹಿಸುವ ಬಗ್ಗೆ ಆದೇಶ.

ಓದಲಾಗಿದೆ: 1. ಸರ್ಕಾರದ ಪತ್ರ ಸಂಖ್ಯೆ. ಗ್ರಾಅಪ 125 ಕೆಎಸ್‌ಎಸ್ 2005 (ಭಾಗ), ದಿನಾಂಕ, 13-02-2006.
2. ಉಪ ನಿಬಂಧಕರು, (ವಿಚಾರಣೆ-2), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂ. D.O.NO.COMPT/UPLOK/BGM-28/2006/DRE-2, ದಿ. 19-03-09.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ಶ್ರೀ ಎಸ್.ಆರ್. ಮಿಟ್ಟಲಕೋಡ, ಅಂದಿನ ಕಿರಿಯ ಇಂಜಿನಿಯರ್, ತಾಲ್ಲೂಕು ಪಂಚಾಯತ್, ಮುಧೋಳ, ಬಾಗಲಕೋಟೆ ಜಿಲ್ಲೆ ಮತ್ತು ಶ್ರೀ ಎಂ.ಎಂ.ಕಲ್ಯಾಣಶೆಟ್ಟಿ, ಅಂದಿನ ಕಾರ್ಯದರ್ಶಿ, ಗ್ರಾಮ ಪಂಚಾಯತ್, ನಾಗರಾಳ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಹಾಗೂ ಶ್ರೀ ಎ.ಪಿ.ಆಡಿನವರ, ಅಂದಿನ ಕಾರ್ಯದರ್ಶಿ, ಗ್ರಾಮ ಪಂಚಾಯತ್ ವತಿಯಿಂದ ಕಟ್ಟಿಸಿದ ನೀರಿನ ತೊಟ್ಟಿ ನಿರ್ಮಾಣದಲ್ಲಿ ಕಳಪೆ ಕಾಮಗಾರಿ

ನಿರ್ವಹಿಸಿರುತ್ತಾರೆಂಬ ಆಪಾದನೆಗಳ ಬಗ್ಗೆ ತನಿಖೆ ಮಾಡಿ ವರದಿ ಸಲ್ಲಿಸುವಂತೆ ಕೋರಿ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತಕ್ಕೆ ವಹಿಸಲಾಗಿತ್ತು.

ಉಪನಿಬಂಧಕರು (ವಿಚಾರಣೆಗಳು–2), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ತಮ್ಮ ಪತ್ರದೊಂದಿಗೆ ಮಾನ್ಯ ಉಪ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಸೆಕ್ಷನ್ 12(3) ರಡಿ ನೀಡಿರುವ ವರದಿಯನ್ನು ಕಳುಹಿಸುತ್ತಾ ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸಿನಂತೆ ಕ್ರಮ ವಹಿಸಲು ಕೋರಿರುತ್ತಾರೆ.

ಮಾನ್ಯ ಉಪ ಲೋಕಾಯುಕ್ತರು ತಮ್ಮ ವರದಿಯಲ್ಲಿ ಶ್ರೀ ಎಸ್.ಆರ್. ಮಿಟ್ಟಲಕೋಡ, ಕಿರಿಯ ಇಂಜಿನಿಯರ್, ತಾಲ್ಲೂಕು ಪಂಚಾಯತ್, ಮುಧೋಳ, ಬಾಗಲಕೋಟೆ ಜಿಲ್ಲೆ ಮತ್ತು ಶ್ರೀ ಎಂ.ಎಂ. ಕಲ್ಯಾಣಶಟ್ಟಿ, ಕಾರ್ಯದರ್ಶಿ, ಗ್ರಾಮ ಪಂಚಾಯತ್, ಮುಧೋಳ ಬಾಗಲಕೋಟೆ ಜಿಲ್ಲೆ ಇವರುಗಳು ನಾಗರಾಳ ಗ್ರಾಮದಲ್ಲಿ ಕೈಗೊಳ್ಳಲಾದ ನೀರಿನ ತೊಟ್ಟಿ ನಿರ್ಮಾಣದಲ್ಲಿ ಕಳಪೆ ಕಾಮಗಾರಿ ಎಸೆಗಿ, ಸದರಿ ನೀರಿನ ತೊಟ್ಟಿಯು ಕುಸಿಯಲು ಹಾಗೂ ಆ ಮೂಲಕ ಇಬ್ಬರು ಮಹಿಳೆಯುರು ಸಾವಿಗೀಡಾಗಲು ಮತ್ತು ಒಬ್ಬ ಬಾಲಕಿಯು ಗಾಯಗೊಳ್ಳಲು ಕಾರಣರಾಗಿದ್ದು, ಆ ಮೂಲಕ ಸರ್ಕಾರದ ಕರ್ತವ್ಯದಲ್ಲಿ ಆಸಕ್ತಿ, ನಿಷ್ಠೆ ಹಾಗೂ ಪ್ರಾಮಾಣಿಕತೆ ತೋರುವಲ್ಲಿ ಸಂಪೂರ್ಣ ವಿಫಲರಾಗಿದ್ದು, ತೀವ್ರತರವಾದ ದುರ್ನಡತೆ ಎಸೆಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ತಿಳಿಸುತ್ತಾ, ಆರೋಪಿತರ ವಿರುದ್ಧ ಶಿಸ್ತು ಕ್ರಮ ಪ್ರಾರಂಭಿಸಲು ಶಿಫಾರಸ್ಸು ಮಾಡಿ, ಅದಕ್ಕಾಗಿ ಪ್ರಕರಣದಲ್ಲಿ ವಿವರವಾದ ಇಲಾಖಾ ವಿಚಾರಣೆ ಕೈಗೊಳ್ಳಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14 (ಎ) ರಡಿಯಲ್ಲಿ ಪ್ರಕರಣವನ್ನು ಕರ್ನಾಟಕ ಉಪ ಲೋಕಯುಕ್ತಕ್ಕೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪ ಲೋಕಾಯುಕ್ತರ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸದರಿ ನೌಕರರು ಸರ್ಕಾರದ ಕರ್ತವ್ಯ ನಿರ್ವಹಿಸುವಲ್ಲಿ ತೀವ್ರತರಲೋಪ ಮತ್ತು ದುರ್ನಡತೆ ಎಸೆಗಿದ್ದಾರೆಂಬುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಸದರಿ ವರದಿಯನ್ನು ಒಪ್ಪಿ ಈ ಪ್ರಕರಣದಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ರೀತ್ಯ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಾಮಾವಳಿಗಳ ನಿಯಮ 14(ಎ)ರನ್ವಯ ಈ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಲು ನಿರ್ಣಯಿಸಿದೆ. ಆದ್ದರಿಂದ ಈ ಆದೇಶ.

ಆದೇಶ ಸಂಖ್ಯೆ: ಗ್ರಾಅಪ 2 ಇಎನ್‌ಕ್ಯೂ 09, ಬೆಂಗಳೂರು, ದಿನಾಂಕ: 25ನೇ ಏಪ್ರಿಲ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಶ್ರೀ ಎಸ್.ಆರ್. ಮಿಟ್ಟಲಕೋಡ, ಹಿಂದಿನ ಕಿರಿಯ ಇಂಜಿನಿಯರ್, ತಾಲ್ಲೂಕು ಪಂಚಾಯತ್, ಮುಧೋಳ, ಬಾಗಲಕೋಟೆ ಜಿಲ್ಲೆ (ಪ್ರಸ್ತುತ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಬೀಳಗಿ) ಮತ್ತು ಶ್ರೀ ಎಂ.ಎಂ.ಕಲ್ಯಾಣಶಟ್ಟಿ, ಹಿಂದಿನ ಕಾರ್ಯದರ್ಶಿ, ಗ್ರಾಮ ಪಂಚಾಯತ್, ಮುಧೋಳ ಬಾಗಲಕೋಟೆ ಜಿಲ್ಲೆ (ಪ್ರಸ್ತುತ ಕೋಲೂರು ಗ್ರಾಮ ಪಂಚಾಯತ್, ಬೀಳಗಿ ತಾಲ್ಲೂಕು) ಇವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ರೀತ್ಯ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಾಮಾಳಿಗಳ ನಿಯಮ 14(ಎ) ರನ್ವಯ ಈ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಿ ಆದೇಶಿಸಿದೆ.

ಸದರಿ ವಿಚಾರಣೆಯನ್ನು ಮೂರು ತಿಂಗಳೊಳಗಾಗಿ ಪೂರ್ಣಗೊಳಿಸಿ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಈ ಮೂಲಕ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್.ವೈ. ಸಾಗರ

ಪಿ.ಆರ್. 1197

ಸರ್ಕಾರದ ಅಧೀನ ಕಾರ್ಯದರ್ಶಿ, (ಸೇವೆಗಳು–ಎ),

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ: ಶ್ರೀ ಕೆ.ಬಿ.ಲೆಂಕಣ್ಣವರ್, ಜಿಲ್ಲಾ ನ್ಯಾಯಾಧೀಶರು ಅವರ ವಿರುದ್ಧ ಇಲಾಖಾ ವಿಚಾರಣೆ – ದಂಡನೆ ವಿಧಿಸಿ ಅಂತಿಮ ಆದೇಶವನ್ನು ಹೊರಡಿಸುವ ಬಗ್ಗೆ

ಓದಲಾಗಿದೆ:
1. ನೋಟೀಸ್ ಸಂಖ್ಯೆ ಡಿ.ಐ.10/2005 ದಿ: 6.09.2005 ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ ಅವರಿಂದ,
2. ವಿಚಾರಣಾ ವರದಿ ದಿನಾಂಕ: 30.07.2007 ನ್ಯಾಯಮೂರ್ತಿ ಆರ್.ಗುರುರಾಜನ್, ವಿಚಾರಣಾಧಿಕಾರಿಗಳಿಂದ.
3. ನೋಟೀಸ್ ಸಂಖ್ಯೆ ಡಿ.ಐ.10/2005 ದಿ: 11.10.2007 ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ ಅವರಿಂದ,

4. ಶ್ರೀ ಕೆ.ಬಿ.ಲೆಂಕಣ್ಣವರ್, ಜಿಲ್ಲಾ ನ್ಯಾಯಾಧೀಶರ ಉತ್ತರ ದಿನಾಂಕ: 26.10.2007
5. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು ಅವರ ಪತ್ರ ಸಂಖ್ಯೆ ಡಿ.ಐ. 10/2005 ದಿನಾಂಕ: 18.10.2008 ಹಾಗೂ 19.02.2009

ಪ್ರಸ್ತಾವನೆ:

ಶ್ರೀ ಕೆ.ಬಿ. ಲೆಂಕಣ್ಣವರ್, ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯವು ಮೇಲೆ (1)ರಲ್ಲಿ ಓದಲಾದ ದಿನಾಂಕ: 06.09.2005 ರ ದೋಷಾರೋಪಣೆ ಮಾಡುವ ಮೂಲಕ ಈ ಕೆಳಕಂಡ ಆರೋಪಗಳನ್ನು ಕುರಿತು ವಿವರವಾದ ವಿಚಾರಣೆ ನಡೆಸಿತು.

(1) 29ನೇ ಹೆಚ್ಚುವರಿ ಸಿಟಿ ಸಿವಿಲ್ ಅಂಡ್ ಸೆಷನ್ಸ್ ನ್ಯಾಯಾಧೀಶರು, ಬೆಂಗಳೂರು ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಕಾವೇರಿ ಭವನ ಶಾಖೆಯಿಂದ ರೂ. 1.00 ಲಕ್ಷ ; ಜೀವನಭೀಮಾ ನಗರ ಶಾಖೆಯಿಂದ 2.00 ಲಕ್ಷ ಸಾಲಗಳನ್ನು 2002 ಮತ್ತು 2003 ರಲ್ಲಿ ಪಡೆದು ಜೀವನಭೀಮಾ ನಗರ ಶಾಖೆಗೆ ರೂ. 1,78,000/– ಗಳನ್ನು ಕಾವೇರಿ ಭವನ ಶಾಖೆಗೆ ರೂ.1,10,000/–ಗಳನ್ನು 2005 ರ ಜುಲೈನಲ್ಲಿ ಒಟ್ಟಿಗೆ ಪಾವತಿಸಿ ಆ ಹಣದ ಮೂಲವನ್ನು ತಿಳಿಸಲು ವಿಫಲರಾಗಿದ್ದು.

(2) ನ್ಯಾಯಾಂಗ ಅಧಿಕಾರಿಗಳ ಸಹಕಾರ ಸಂಘದಿಂದ ಸಾಲ ಪಡೆದು ಹಾಗೂ ತನ್ನ ಉಳಿತಾಯದೊಡನೆ ಮಾರುತಿ ಎಸ್ಟೀಂ ಕಾರನ್ನು ಖರೀದಿಸಲು ಅನುಮತಿ ಪಡೆದು ಆ ರೀತಿ ಮಾಡದೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಡಿಕೇರಿ ಶಾಖೆಯಿಂದ 4.65 ಲಕ್ಷ ರೂಪಾಯಿಗಳ ವಾಹನ ಸಾಲ ಪಡೆದು ಆ ಮಾಹಿತಿಯನ್ನು ನೇಮಕಾತಿ ಪ್ರಾಧಿಕಾರಿಯಿಂದ ಮುಚ್ಚಿಟ್ಟಿದ್ದು.

(3) ಪ್ರಿನ್ಸಿಪಲ್ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಮಡಿಕೇರಿ ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ 2004–05 ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕಾರ್ಪೋರೇಷನ್ ಬ್ಯಾಂಕ್ ಮತ್ತು ಕೆನರಾ ಬ್ಯಾಂಕ್‌ಗಳ ಮಡಿಕೇರಿ ಶಾಖೆಗಳಿಂದ ಸಕ್ಷಮ ಪ್ರಾಧಿಕಾರಿಯ ಅನುಮತಿ ಪಡೆಯದೆ ಒಟ್ಟು 10.50 ಲಕ್ಷ ರೂಪಾಯಿಗಳ ವಿವಿಧ ರೀತಿಯ ಸಾಲವನ್ನು ಪಡೆದಿದ್ದು.

(4) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಡಿಕೇರಿ ಶಾಖೆಯ ಅವರ ಉಳಿತಾಯ ಖಾತೆಯಲ್ಲಿ 2003 ರಿಂದ 2005 ರವರೆಗಿನ 2 ವರ್ಷಗಳ ಅವಧಿಯಲ್ಲಿ ಸತತವಾಗಿ ಅಪಾರ ಮೊತ್ತವು ಜಮೆಯಾಗಿದ್ದು, ಅದನ್ನು ಅವರ ಆಸ್ತಿ/ಋಣ ಪಟ್ಟಿಯಲ್ಲಿ ತೋರಿಸದೆ ಉಳಿದಿದ್ದು.

(5) ಅವರ ಸಾರ್ವಜನಿಕ ಭವಿಷ್ಯ ನಿಧಿ ಖಾತೆಯಿಂದ 3 ಭಾರಿ ಮುಂಗಡವನ್ನು ಪಡೆದು ಯಾವ ಉದ್ದೇಶಕ್ಕಾಗಿ ಪಡಿದಿದ್ದರೋ, ಆ ಉದ್ದೇಶಕ್ಕೆ ವೆಚ್ಚ ಮಾಡಿರುವುದರ ಬಗ್ಗೆ ಮಾಹಿತಿ ನೀಡದೆ ಇದ್ದದ್ದು.

(6) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಜೀವನ ಭೀಮ ನಗರ ಶಾಖೆ ಹಾಗೂ ಕಾವೇರಿ ಭವನ ಶಾಖೆಗಳನ್ನುಳಿದು ಇತರ ಯಾವುದೇ ಬ್ಯಾಂಕ್‌ಗಳಲ್ಲಿನ ಯಾವುದೇ ಶಾಖೆಗಳಿಂದ ಯಾವುದೇ ಮುಂಗಡವನ್ನು ಪಡೆದಿಲ್ಲವೆಂಬ ಸುಳ್ಳು ಮಾಹಿತಿಯನ್ನು ಸಕ್ಷಮ ಪ್ರಾಧಿಕಾರಿಗೆ ನೀಡುವ ಮೂಲಕ ಆಸ್ತಿ ಮತ್ತು ಋಣ ಪಟ್ಟಿಯಲ್ಲಿ ತಪ್ಪು ಮಾಹಿತಿಯನ್ನು ನೀಡಿದ್ದು..

(7) ಮಡಿಕೇರಿಯಲ್ಲಿ ಪ್ರಧಾನ ಜಿಲ್ಲಾ ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ಕೊಲೆ ಆರೋಪಿಗಳು ಸಲ್ಲಿಸಿದ ಜಾಮೀನು ಅರ್ಜಿಯು ಅವರಿಂದ ಹಾಗೂ ರಾಜ್ಯ ಉಚ್ಚ ನ್ಯಾಯಾಲಯದಿಂದ ಒಮ್ಮೆ ತಿರಸ್ಕೃತಗೊಂಡಿದ್ದರೂ ಸಹ ವೈದ್ಯಕೀಯ ಕಾರಣಗಳ ಮೇಲೆ ಆರೋಪಿಗಳು ಮತ್ತೇ ನಿಮಗೆ ಅರ್ಜಿ ಸಲ್ಲಿಸಿದಾಗ ಜಾಮೀನು ನೀಡಿ ಅದು ಜಾರಿಯಲ್ಲಿದ್ದರೂ ಸಹ ಅವರು ಕಾರವಾರಕ್ಕೆ ವರ್ಗಾವಣೆಗೊಂಡ ನಂತರ ಅನಗತ್ಯವಾಗಿ ಸದರಿ ಜಾಮೀನು ಅವಧಿಯನ್ನು ಮೃತರ ಪತ್ನಿಯ ವಿರೋಧದ ನಡುವೆಯೂ ವಿಸ್ತರಿಸಿದ್ದು.

(8) ಶನಿವಾರ ಸಂತೆಯಲ್ಲಿ ವ್ಯಕ್ತಿಯೊಬ್ಬನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ಆರೋಪಿಗಳು ನೀವು ಕಾರವಾರಕ್ಕೆ ವರ್ಗಾವಣೆಗೊಂಡ ನಂತರ ಸಲ್ಲಿಸಿದ ಜಾಮೀನು ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಂಡು ಆಕ್ಷೇಪಣೆಗಳನ್ನು ಅಂದೇ ಸಲ್ಲಿಸುವಂತೆ ಸರ್ಕಾರಿ ಅಭಿಯೋಜಕರ ಮೇಲೆ ಒತ್ತಡ ತಂದು ಸಂಬಂಧಪಟ್ಟ ಪೊಲೀಸರಿಗೆ ಮಾಹಿತಿ ನೀಡದೆ, ಗಾಯದ ಕುರಿತು ಪ್ರಮಾಣ ಪತ್ರ ಪಡೆಯದೆ, ಸಾಕ್ಷಿಗಳ ಹೇಳಿಕೆ ಕುರಿತ ಕಾಗದ ಪತ್ರಗಳನ್ನು ಪಡೆಯದೆ, ಆರೋಪಿತರ ಕ್ರಿಮಿನಲ್ ಹಿನ್ನೆಲೆಯನ್ನು ತಿಳಿದುಕೊಳ್ಳದೆ ಸದರಿ ಹುದ್ದೆಯಿಂದ ಬಿಡುಗಡೆ ಹೊಂದುವ ಮುನ್ನಾ ದಿನ ಅವರುಗಳಿಗೆ ಜಾಮೀನು ನೀಡಿದ್ದು ಅದಾದ ಕೆಲವೇ ದಿನಗಳಲ್ಲಿ ಬೆಂಗಳೂರಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕಾವೇರಿ ಭವನ ಹಾಗೂ ಜೀವನ ಭೀಮ ನಗರ ಶಾಖೆಗಳ ಸಾಲದ ಖಾತೆಗೆ ರೂ. 2.88 ಲಕ್ಷ ರೂ.ಗಳನ್ನು ಮತ್ತು ರೂ. 44,347–00 ಗಳನ್ನು ಮಡಿಕೇರಿ ಶಾಖೆಗೆ ಜಮೆ ಮಾಡಿದ

ಹೀಗಿದ್ದು ಆ ಸಾಲಿನ ಆಸ್ತಿ ವಿವರಣೆಯಲ್ಲಿ ಬ್ಯಾಂಕ್ ಖಾತೆಯಲ್ಲಿ ಕೇವಲ 9,821–00 ರೂ. ಜಮೆ ಇರುವುದಾಗಿ ತಪ್ಪು ಮಾಹಿತಿ ನೀಡಿದ್ದು.

(9) ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯಿದೆ 1986 ರ ಸೆಕ್ಷನ್ 3 ಮತ್ತು 14 ರಡಿ ಅಪರಾಧವೆಸಗಿದ ದಂಪತಿಗಳು ವಿರಾಜಪೇಟೆ ಜೆ.ಎಂ.ಎಫ್.ಸಿ. ಅವರ ಮುಂದೆ ಇರುವ ಮೊಕದ್ದಮೆಯನ್ನು ಪ್ರಶ್ನಿಸಿ ಉಚ್ಚ ನ್ಯಾಯಾಲಯದಲ್ಲಿ ಹೂಡಿದ್ದ ರಿಟ್ ಅರ್ಜಿಯನ್ನು ಹಿಂದಕ್ಕೆ ಪಡೆದು ಮತ್ತೇ ಆರೋಪಿಯ ಮುಂದೆ ಮರುಪರಿಶೀಲನಾ ಅರ್ಜಿಯನ್ನು ಸಲ್ಲಿಸಿದಾಗ ಆರೋಪಿಯು ಅವರುಗಳೊಡನೆ ಶಾಮೀಲಾಗಿ ಕ್ರಿಮಿನಲ್ ಮರುಪರಿಶೀಲನಾ ಅರ್ಜಿಯನ್ನು ಸಲ್ಲಿಸಲು ಕಾಲಾವಧಿಯು ಮುಗಿದಿದ್ದರೂ ಸಹ ಅದನ್ನು ವಿಚಾರಣೆಗೆ ಅಂಗೀಕರಿಸಿ ಪಕ್ಷಪಾತ ಹಾಗೂ ಹಣ ಪಡೆದು ಸದರಿ ಮೊಕದ್ದಮೆಯನ್ನು ಅಸಿಂಧುಗೊಳಿಸಿದ್ದು ಹಾಗೂ ಅದಾದ ಸ್ವಲ್ಪ ದಿನಗಳಲ್ಲಿಯೇ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಡಿಕೇರಿ ಶಾಖೆಯ ತನ್ನ ಸಾಲದ ಖಾತೆಗೆ ರೂ. 60,483–00 ಗಳನ್ನು ಜಮಾ ಮಾಡಿದ್ದು ಹಾಗೂ ತನ್ನ ಆಸ್ತಿ ಮತ್ತು ಋಣ ಪಟ್ಟಿಯಲ್ಲಿ ಬ್ಯಾಕ್ ಖಾತೆಯಲ್ಲಿ ಕೇವಲ ರೂ. 9,821–00 ಗಳಿರುವುದಾಗಿ ತಪ್ಪು ಘೋಷಣೆ ಮಾಡಿದ್ದು.

ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳು ಮೇಲೆ (2) ರಲ್ಲಿ ಓದಲಾದ ದಿನಾಂಕ:30.4.2007 ರ ವಿಚಾರಣಾ ವರದಿಯನ್ನು ಸಲ್ಲಿಸಿ ಆರೋಪಗಳ ಕುರಿತು ಈ ಕೆಳಕಂಡಂತೆ ನಿರ್ಣಯ ನೀಡಿದರು.

1ನೇ ಸಾಕ್ಷಿಯಾದ ಬ್ಯಾಂಕ್‌ನ ಚೀಫ್ ಮ್ಯಾನೇಜರ್ ಅವರು ಆರೋಪಿ ನ್ಯಾಯಾಂಗ ಅಧಿಕಾರಿಯು ದಿನಾಂಕ 6.3.2003 ರಂದು 2.00 ಲಕ್ಷ ರೂ.ಗಳ ಸಾಲವನ್ನು ಕೋರಿ ಅರ್ಜಿ ಸಲ್ಲಿಸಿದ್ದು, ಕೃಷ್ಣಪ್ಪ ಎಂಬ ಆರೋಪಿಯ ಸಹಾಯಕರ ಖಾತರಿಯೊಡನೆ ಸಾಲವನ್ನು ನೀಡಿದ್ದು ಕಂತುಗಳ ಮೂಲಕ ಮರು ಪಾವತಿ ಮಾಡಿ ಸಾಲವನ್ನು ತೀರಿಸಲಾಗಿದೆಯೆಂದು ತಿಳಿಸಿದ್ದಾರೆ. ಈ ರೀತಿ ಸಾಕ್ಷ್ಯ ನೀಡುವಲ್ಲಿ ದಿನಾಂಕ 9.7.2005 ರಂದು ಆರೋಪಿಯು ಒಮ್ಮೆಗೆ ರೂ. 1,78,000 ಗಳನ್ನು ಜಮೆ ಮಾಡಿರುವುದಾಗಿ ತಿಳಿಸಿದ್ದಾರೆ. ಕೆಲವು ತಿಂಗಳು ಆರೋಪಿಯು ಸಾಲವನ್ನು ಮರುಪಾವತಿ ಮಾಡದಿದ್ದಾಗ ನೋಟೀಸ್ ಕೂಡ ನೀಡಿರುವುದಾಗಿ ತಿಳಿಸಿದ್ದಾರೆ, ಆರೋಪಿ ನ್ಯಾಯಾಂಗ ಅಧಿಕಾರಿ ತಮ್ಮ ವಾದದಲ್ಲಿ ತಮ್ಮ ಪತ್ನಿಗೆ ತೀವ್ರ ಸ್ವರೂಪದ ಖಾಯಿಲೆಯಿದ್ದು ಆಗಾಗ್ಗೆ ಆಸ್ಪತ್ರೆಗಳಲ್ಲಿ ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆಯಬೇಕಾದ ಕಾರಣ ಹಣದ ಅನಿವಾರ್ಯತೆ ಉಂಟಾಗುತ್ತಿದ್ದು, ಈ ಕಾರಣದಿಂದಾಗಿ ತಾವು ಈ ರೀತಿ ಸಾಲವನ್ನು ಪಡೆಯಬೇಕಾಯಿತು ಎಂದು ವಾದಿಸುತ್ತಾರೆ. ಆದರೆ, ಇಷ್ಟೆಲ್ಲಾ ಸಾಲದ ವ್ಯವಹಾರವನ್ನು ತನ್ನ ನಿಯಂತ್ರಣಾ ಪ್ರಾಧಿಕಾರಿಗೆ ತಿಳಿಸುವುದು ಆರೋಪಿಯ ಕರ್ತವ್ಯವಾಗಿತ್ತು, ಅದನ್ನು ಮಾಡದ ಕಾರಣ ನಡತೆ ನಿಯಮಗಳ ನಿಯಮ 21 ರ ಉಲ್ಲಂಘನೆಯಾಗಿದೆ. 1ನೇ ಆರೋಪ ಸಾಬೀತಾಗಿದೆ.

ಶಿಸ್ತು ಪ್ರಾಧಿಕಾರದ ಪರ ಸಾಕ್ಷಿ ನುಡಿದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಡಿಕೇರಿ ಶಾಖೆಯ ಮ್ಯಾನೇಜರ್ ಅವರು ಆರೋಪಿಯು ತಮ್ಮಲ್ಲಿ ಉಳಿತಾಯ ಖಾತೆಯನ್ನು ಹೊಂದಿದ್ದು ಈ ಆಧಾರದ ಮೇಲೆ ಅವರಿಗೆ ವಾಹನ ಸಾಲ ಮತ್ತು ವೈಯಕ್ತಿಕ ಸಾಲವನ್ನು ಮಂಜೂರು ಮಾಡಲಾಗಿತ್ತು. ಅದನ್ನು ಅವರು ಮರುಪಾವತಿ ಮಾಡಿದ್ದಾರೆ. ಅಷ್ಟೇ ಅಲ್ಲದೆ ವಾಹನ ಸಾಲದ ಮರುಪಾವತಿಯಲ್ಲಿ ಉಳಿದಿದ್ದ ರೂ. 31,870–00 ಗಳನ್ನು ಉಳಿತಾಯ ಖಾತೆಗೆ ವರ್ಗ ಮಾಡಿರುವುದಾಗಿ ನುಡಿದಿದ್ದಾರೆ. ಆರೋಪಿಯು ತಮ್ಮ ವಾದದಲ್ಲಿ ತಮ್ಮ ಉಳಿತಾಯ ಹಾಗೂ ನ್ಯಾಯಾಂಗ ಅಧಿಕಾರಿಗಳ ಸಹಕಾರ ಸಂಘದಿಂದ ಸಾಲ ಪಡೆದು ಕಾರು ಖರೀದಿಸಲು ಅನುಮತಿ ಪಡೆದಿದ್ದರೂ ಸಹ ಸಂಘವು ಕೇವಲ 3.00 ಲಕ್ಷ ರೂ.ಗಳನ್ನು ನೀಡುವುದಾಗಿ ತಿಳಿಸಿತ್ತು. ಆದರೆ ಕಾರಿನ ಬೆಲೆಯು ರೂ. 5,51,488–00 ಆಗಿತ್ತು, ಅದಕ್ಕೆ ಈಗಾಗಲೇ ತಾನು ಮೈಸೂರು ಮಾಂಡವಿ ಮೋಟಾರ್ಸ್‌ನಲ್ಲಿ ಬುಕ್ಕಿಂಗ್ ಮಾಡಿದ್ದು, ಅದನ್ನು ಖರೀದಿಸಲೇಬೇಕೆಂಬ ಕಾರಣ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಡಿಕೇರಿ ಶಾಖೆಯು ವಾಹನ ಸಾಲವನ್ನು ಕೊಡಲು ಒಪ್ಪದ್ದ ಕಾರಣ ಅನಿವಾರ್ಯವಾಗಿ ಅದನ್ನು ಪಡೆಯಬೇಕಾಯಿತೆಂದು ತಿಳಿಸಿದ್ದಾರೆ. ಹಾಗಿದ್ದ ಪಕ್ಷದಲ್ಲಿ ಆರೋಪಿಯು ಈ ವಿಷಯವನ್ನು ತನ್ನ ನಿಯಂತ್ರಣಾಧಿಕಾರಿಗೆ ತಿಳಿಸಿ ಪರಿಷ್ಕೃತ ಅನುಮತಿಯನ್ನು ಪಡೆಯಬೇಕಾಗಿತ್ತು. ಅದನ್ನು ಮಾಡಿರುವುದಿಲ್ಲ, ಅದ್ದರಿಂದ 2 ನೇ ಆರೋಪ ಸಾಬೀತಾಗಿದೆ.

ವಿಚಾರಣೆ ಸಂದರ್ಭದಲ್ಲಿ ಹಾಜರುಪಡಿಸಲಾದ ಕಾಗದ ಪತ್ರಗಳಂತೆ ಆರೋಪಿ ಜಿಲ್ಲಾ ನ್ಯಾಯಾಧೀಶರು 10.50 ಲಕ್ಷ ರೂಪಾಯಿಗಳ ಸಾಲವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕಾರ್ಪೋರೇಷನ್ ಬ್ಯಾಂಕ್ ಹಾಗೂ ಕೆನರಾ ಬ್ಯಾಂಕಿನ ಮಡಿಕೇರಿ ಶಾಖೆಗಳಿಂದ ಪಡೆದಿರುವುದು ಮೂಡಿಬಂದಿದೆ, ಶಿಸ್ತು ಪ್ರಾಧಿಕಾರದ ಪರ ಸಾಕ್ಷ್ಯ ನೀಡಿದ ಅಧಿಕಾರಿಯ ಹೇಳಿಕೆಯಂತೆ ಅವರು ಈ ಎಲ್ಲಾ ಸಾಲದ ವ್ಯವಹಾರವನ್ನು ಉಚ್ಚ ನ್ಯಾಯಾಲಯಕ್ಕೆ ತಿಳಿಸಿಲ್ಲ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಕಾವೇರಿ ಭವನ ಹಾಗೂ ಜೀವನ ಭೀಮ ನಗರ ಶಾಖೆಗಳಲ್ಲಿನ ಸಾಲದ ವಿವರವನ್ನು ಮಾತ್ರ ಸಲ್ಲಿಸಿದ್ದಾರೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಡಿಕೇರಿ ಶಾಖೆಯಲ್ಲಿ ಜಮಾ ಮಾಡಲಾದ ಮೊತ್ತಕ್ಕೂ ಹಾಗೂ ಅಧಿಕಾರಿಯು ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಯಲ್ಲಿ ನೀಡಿರುವ ಮೊತ್ತಕ್ಕೂ ತಾಳೆಯಾಗುತ್ತಿಲ್ಲ. ವಿಚಾರಣೆ ಸಂದರ್ಭದಲ್ಲಿ ಹಾಜರುಪಡಿಸಿದ ಕಾಗದ ಪತ್ರಗಳಿಂದಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಡಿಕೇರಿ ಶಾಖೆಯಿಂದ 4 ಸಾಲಗಳನ್ನು, ಕಾರ್ಪೋರೇಷನ್ ಬ್ಯಾಂಕ್ ಹಾಗೂ ಕೆನರಾ ಬ್ಯಾಂಕಿನ ಮಡಿಕೇರಿ ಶಾಖೆಗಳಿಂದ ತಲಾ 1 ಸಾಲವನ್ನು ಆರೋಪಿಯು ಪಡೆದಿರುವುದು ಕಂಡುಬರುತ್ತದೆ.

ಇವುಗಳಿಗೆ ಆರೋಪಿಯು ಪೂರ್ವಾನುಮತಿ ಪಡೆದಿರುವುದಿಲ್ಲ. ಅದು ನಡತೆ ನಿಯಮಗಳ ನಿಯಮ 21 ರ ಉಲ್ಲಂಘನೆ ಆಗಿದ್ದು 3 ನೇ ಆರೋಪ ಸಾಬೀತಾಗಿರುತ್ತದೆ.

ಆರೋಪಿಗೆ 1.00 ಲಕ್ಷ ರೂ.ಗಳ ಸಾಲವನ್ನು ನೀಡಿದ್ದು, ಆರೋಪಿಯು ಅದನ್ನು ದಿನಾಂಕ: 11.7.2005 ರಂದು ಮರುಪಾವತಿ ಮಾಡಿದ್ದಾರೆಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕಾವೇರಿ ಭವನ ಶಾಖೆಯ ಉಪ ವ್ಯವಸ್ಥಾಪಕರು ನೀಡಿದ ಸಾಕ್ಷ್ಯದಲ್ಲಿ ತಿಳಿಸಿದ್ದಾರೆ. ಆರೋಪಿಯು ತನ್ನ ಸಾಕ್ಷ್ಯದಲ್ಲಿ ತಾನು 30.5.2003 ರಿಂದ 20.5.2005 ರ ವರೆಗಿನ ಅವಧಿಯಲ್ಲಿ ವಿವಿಧ ಮೂಲಗಳಿಂದ ತಾನು ಪಡೆದ ಒಟ್ಟು 5,16,553–00 ರೂ.ಗಳನ್ನು ಖಾತೆಗೆ ಜಮಾ ಮಾಡಿರುವುದಾಗಿ ತಿಳಿಸಿದ್ದಾರೆ. ಸಾಲದ ಕಂತುಗಳನ್ನು ನಗದು ರೂಪದಲ್ಲಿ ಪಾವತಿ ಮಾಡಿದ್ದು, ಈ ಮೊತ್ತವನ್ನು ಗಳಿಸಿದ ಕುರಿತು ಉಚ್ಚ ನ್ಯಾಯಾಲಯಕ್ಕೆ ತಿಳಿಸಿಲ್ಲವೆಂದು ಪಾಟೀ ಸವಾಲಿಗೆ ಉತ್ತರಿಸುವಾಗ ಆರೋಪಿಯು ತಿಳಿಸಿದ್ದಾರೆ. ಇದು ನಡತೆ ನಿಯಮ 23 ರ ಉಲ್ಲಂಘನೆಯಾಗಿದೆ. ಆದ್ದರಿಂದ 4ನೇ ಆರೋಪ ಸಾಬೀತಾಗಿದೆ.

ಪೂಜೆಗಾಗಿ 50,000/– ರೂ.ಗಳನ್ನು (10.5.2004 ರಂದು) ಮಗನ ಹುಟ್ಟು ಹಬ್ಬ ಆಚರಣೆಗಾಗಿ ರೂ. 50,000/– (28.9.2004 ರಂದು) ಹಾಗೂ ರೂ. 25,000/– ಗಳನ್ನು (9.3.2005 ರಂದು) ತನ್ನ ಸಾಮಾನ್ಯ ಭವಿಷ್ಯ ನಿಧಿಯಿಂದ ಹಿಂದಕ್ಕೆ ಪಡೆದಿರುವುದಾಗಿ ಹೇಳಿಕೆ ನೀಡಿದ್ದಾರೆ. ಈ ರೀತಿ ಭಾಗಶಃ ಹಿಂಪಡೆದಿದ್ದಕ್ಕೆ ಬಳಕೆ ಪ್ರಮಾಣ ಪತ್ರ ನೀಡಿಲ್ಲವೆಂದು ಶಿಸ್ತು ಪ್ರಾಧಿಕಾರ ಪರ ಸಾಕ್ಷ್ಯಿಯೂ ನುಡಿದಿದ್ದಾರೆ. ಹುಟ್ಟು ಹಬ್ಬ ಆಚರಣೆಗೆ ಹಾಗೂ ಪೂಜೆಗೆ ಇಷ್ಟೊಂದು ಹಣ ವೆಚ್ಚವಾಗುತ್ತದೆಯೆಂಬ ಅಂಶವೇ ಆಶ್ಚರ್ಯಕರವಾಗಿದೆ. ಅದು ಹೇಗೆ ಇದ್ದರು ಸಹ ಈ ವಿಷಯವನ್ನು ಆರೋಪಿಯು ಉಚ್ಚ ನ್ಯಾಯಾಲಯಕ್ಕೆ ತಿಳಿಸಿಲ್ಲ, 5 ನೇ ಆರೋಪ ಸಾಬೀತಾಗಿದೆ.

ಆರೋಪಿ ನ್ಯಾಯಾಂಗ ಅಧಿಕಾರಿಯು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕಾವೇರಿ ಭವನ ಶಾಖೆ ಮತ್ತು ಜೀವನ ಭೀಮ ನಗರ ಶಾಖೆಗಳಲ್ಲಿ ಬಿಟ್ಟರೇ ಬೇರೆ ಎಲ್ಲೂ ತಾನು ಸಾಲವನ್ನು ಪಡೆದಿಲ್ಲವೆಂದು ಉಚ್ಚ ನ್ಯಾಯಾಲಯಕ್ಕೆ ಮಾಹಿತಿ ನೀಡಿದ್ದಾರೆ, ಆದರೆ ನಾಲ್ಕನೇ ಆರೋಪದಲ್ಲಿ ಚರ್ಚಿಸಿರುವಂತೆ ಬ್ಯಾಂಕ್ ಅಧಿಕಾರಿಗಳು ತಮ್ಮ ಸಾಕ್ಷ್ಯದಲ್ಲಿ ಆರೋಪಿಯು ಮಾಡಿರುವ ಸಾಲದ ವ್ಯವಹಾರದ ವಿವರಗಳನ್ನು ನೀಡಿದ್ದಾರೆ. ಅವುಗಳನ್ನು ಆರೋಪಿಯು ಒಪ್ಪಿಕೊಂಡಿದ್ದಾರೆ. ಹಾಗೂ ಬೆಂಗಳೂರಿನಲ್ಲಿ ತಾನು ಪಡೆದಿರುವ ಸಾಲಕ್ಕೆ ಮಾತ್ರ ಮಾಹಿತಿಯನ್ನು ಸೀಮಿತಗೊಳಿಸಿರುವುದಾಗಿ ತಿಳಿಸಿದ್ದಾರೆ. ಆದರೆ ತಾನು ಪಡೆದ ಎಲ್ಲಾ ಸಾಲಗಳ ವಿವರವನ್ನು ಆರೋಪಿಯು ನೀಡಬೇಕಿತ್ತು, ಸದರಿ ಸಾಲಗಳನ್ನು ಮರುಪಾವತಿಸಲು ತನಗೆ ಇದ್ದ ಆದಾಯದ ಮೂಲ ತಿಳಿಸಲು 2 ದಾಖಲೆಗಳನ್ನು ಹಾಜರು ಪಡಿಸಿದ್ದಾರೆ. ಅದರಲ್ಲಿ 1 ಸೂರ್ಯಕಾಂತಿ ಬೀಜವನ್ನು ರೂ. 1,72,715/– ಗಳಿಗೆ ಮತ್ತೊಂದು ನೆಲಗಡಲೆಯನ್ನು ರೂ. 1,67,900/–ಗಳಿಗೆ ಮಾರಾಟ ಮಾಡಿದ ರಸೀದಿ ಅವುಗಳನ್ನು ಆರೋಪಿಯ ಸಹೋದರನ ಹೆಸರಿಗೆ ನೀಡಲಾಗಿದೆ. ಈ ರಸೀದಿಗಳ ಸಾಛಾತನ ಕುರಿತು ವಾಣಿಜ್ಯ ತೆರಿಗೆ ಇಲಾಖೆಯ ಬೆಳಗಾವಿ ವಿಭಾಗೀಯ ಜಂಟೀ ಆಯುಕ್ತರು ಬರೆದ ಪತ್ರ ಹಾಗೂ ಗೋಕಾಕದ ವ್ಯಾಟ್ ಉಪ ಅಧಿಕಾರಿ ನೀಡಿದ ಪತ್ರದಂತೆ ಯದವಾಡದ ಮೆಸರ್ಸ್ ಮಂಜುನಾಥ ಆಯಿಲ್ ಮಿಲ್ 2003–04 ನೇ ಸಾಲಿನಿಂದಲೇ ತನ್ನ ವಹಿವಾಟನ್ನು ಸ್ಥಗಿತಗೊಳಿಸಿದೆ, ಅದ್ದರಿಂದ ಆರೋಪಿಯು ತನ್ನ ಸ್ವಂತ ಗ್ರಾಮದಲ್ಲಿ ಕೆಲವು ಆಸ್ತಿ, ಚಿನ್ನಾಭರಣ ಇತ್ಯಾದಿಗಳನ್ನು ಹೊಂದಿದ್ದಾರೆ, ಆದರೆ, ಅವುಗಳನ್ನು ನಿಯಂತ್ರಣ ಪ್ರಾಧಿಕಾರಿಗೆ ತಿಳಿಸಬೇಕೆಂಬ ಕರ್ತವ್ಯವನ್ನು ಪಾಲಿಸಲು ವಿಫಲರಾಗಿದ್ದಾರೆ. ಆದ್ದರಿಂದ 6 ನೇ ಆರೋಪ ಸಾಬೀತಾಗಿದೆ.

ಗನ್ ಮತ್ತು ರೈಫಲ್‌ಗಳಿಂದ ಗುಂಡು ಹಾರಿಸಿ ವ್ಯಕ್ತಿಯೊಬ್ಬನನ್ನು ಕೊಂದ ಆರೋಪ ಹೊತ್ತ ವ್ಯಕ್ತಿಗಳು ಆರೋಪಿಯು ನ್ಯಾಯಾಲಯದಲ್ಲಿ ಜಾಮೀನು ಅರ್ಜಿ ಹಾಗೂ ಉಚ್ಚನ್ಯಾಯಾಲಯದಲ್ಲಿ ಕ್ರಿಮಿನಲ್ ಅರ್ಜಿ ಸಲ್ಲಿಸಿದ್ದು 2 ಸಹ ತಿರಸ್ಕೃತಗೊಂಡಿದೆ, ಅನಂತರ ಆರೋಪಿಯು ವೈದ್ಯಕೀಯ ಕಾರಣಗಳ ಮೇಲೆ ಜಾಮೀನು ಅರ್ಜಿ ಸಲ್ಲಿಸಲಾಗಿ ಆರೋಪಿಯು ಅದನ್ನು ಮಂಜೂರು ಮಾಡಿದ್ದಾರೆ. ಆರೋಪಿಯನ್ನು ಮಡಿಕೇರಿಯಿಂದ ಕಾರವಾರಕ್ಕೆ ವರ್ಗಾಯಿಸಿ ಕಾರವಾರಕ್ಕೆ ತೆರಳುವ ಮುನ್ನ ದಿನ ಸದರಿ ಜಾಮೀನಿನ ಅವಧಿಯನ್ನು ವಿಸ್ತರಿಸಿದ್ದಾರೆ. ಸದರಿ ವಿಸ್ತರಣೆಯನ್ನು ಬಾಹ್ಯ ಸನ್ನಿವೇಶಗಳಿಂದ ಹಣಕಾಸಿನ ಲಾಭಕ್ಕಾಗಿ ಮಾಡಲಾಗಿದೆ ಎಂಬುದು ಆರೋಪ, ಈ ಬಗ್ಗೆ ಸಾಕ್ಷ್ಯ ನುಡಿದ ಸಾಕ್ಷಿದಾರರು ಆರೋಪಿಯು ವರ್ಗಾವಣೆಗೊಂಡಿದ್ದು ಮಡಿಕೇರಿಯನ್ನು ಬಿಡುವ ಮುನ್ನ ಅರ್ಜಿಯನ್ನು ವಿಲೇವಾರಿ ಮಾಡುವ ಆತುರದಲ್ಲಿದ್ದರು ಎಂದು ತಿಳಿಸುತ್ತಾರಾದರೂ ಪ್ರಕರಣವು ದಿನಾಂಕ: 28.3.2005 ರಿಂದಲೂ ವಿಚಾರಣೆಯಲ್ಲಿತ್ತು, ಪ್ರತಿದಿನ ವಿಚಾರಣೆ ನಡೆಯುತ್ತಿತ್ತು ಎಂಬುದನ್ನು ಪಾಟೀ ಸವಾಲಿಗೆ ಉತ್ತರಿಸುವಾಗ ಒಪ್ಪಿಕೊಳ್ಳುತ್ತಾರೆ. ಜಾಮೀನು ನೀಡಿದಾಗ ಆರೋಪಿಯು ವರ್ಗಾ ಆಗಿರಲಿಲ್ಲವೆಂದು ಜಾಮೀನಿಗೆ ತಾವು ವಿರೋಧವನ್ನು ಸಲ್ಲಿಸಲಿಲ್ಲ ಹಾಗೂ ಜಾಮೀನನ್ನು ಮೇಲಿನ ನ್ಯಾಯಾಲಯದಲ್ಲಿ ಪ್ರಶ್ನಿಸಲಿಲ್ಲ ಎನ್ನುತ್ತಾರೆ. ಆರೋಪಿಯು ತನ್ನ ಸಾಕ್ಷ್ಯದಲ್ಲಿ ಜಾಮೀನನ್ನು ಆರು ತಿಂಗಳಿಗೆ ವಿಸ್ತರಿಸಲು ಕೋರಲಾಗಿತ್ತು, ಆದರೆ ತಾನು ವೈದ್ಯಕೀಯ ಕಾರಣಕ್ಕಾಗಿ 4 ತಿಂಗಳಿಗೆ ಮಾತ್ರ ವಿಸ್ತರಿಸಿದಾಗಿ ತಿಳಿಸಿದ್ದಾರೆ. ಮಡಿಕೇರಿಯನ್ನು ಬಿಡುವ ಒಂದು ದಿನದ ಮುಂಚೆ ಪ್ರಶ್ನಿತ ಆದೇಶ ಮಾಡಿದ್ದಾಗಿ ಹಾಗೂ ಅನಂತರ ತಮ್ಮ ಬ್ಯಾಂಕ್ ಖಾತೆ ಮೊತ್ತ ಜಮಾ ಮಾಡಿದ್ದಾರೆ ಎಂಬ ಕಾರಣಕ್ಕಾಗಿ ಅದನ್ನು ಸಂಶಯಿಸಲು ಸಾಧ್ಯವಿಲ್ಲ.

ಹಾಗೆಯೇ ಐವರು ತೀವ್ರವಾಗಿ ಗಾಯಗೊಂಡ ಪ್ರಕರಣದಲ್ಲಿ ಹೇಳಿಕೆ ನೀಡಿದ ಸಾಕ್ಷಿಯೂ ಅಪರಾಧಿಗಳ ವಿರುದ್ಧ ತನ್ನ ಮಗ ಪೊಲೀಸರಿಗೆ ಫಿರ್ಯಾದು ನೀಡಿದ್ದಾಗಿ ತಿಳಿಸಿದ್ದಾರೆ. ಆರೋಪಿಗಳು ಒಂದು ವಾರದ ಒಳಗಾಗಿಯೇ ಜಾಮೀನಿನ ಮೇಲೆ ಹೊರ ಬಂದಿದ್ದಾರೆ. ಆರೋಪಿಯಿಂದ ಜಾಮೀನು ನೀಡಿದ್ದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಿಲ್ಲ, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಸಾಕ್ಷ್ಯ ನೀಡಿ, ಪೊಲೀಸ್ ಡೈರಿಯನ್ನು ನ್ಯಾಯಾಲಯವಾಗಲೀ ಸಾರ್ವಜನಿಕ ಅಭಿಯೋಜಕರಾಗಲೀ ಪಡೆಯಲಿಲ್ಲ ಎಂದು ತಿಳಿಸುತ್ತಾರೆ.

ಪಬ್ಲಿಕ್ ಪ್ರಾಸಿಕ್ಯೂಟರ್ ತಮ್ಮ ಸಾಕ್ಷ್ಯದಲ್ಲಿ ಆಕ್ಷೇಪಣೆ ಸಲ್ಲಿಸಲು ಸಮಯಾವಕಾಶವನ್ನು ಕೇಳಿದಾಗ್ಯೂ ಸಹ ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದ ಮಹಿಳಾ ವಕೀಲರು ಆರೋಪಿಯ ಮನೆಯಲ್ಲಿರುವ ಮಹಿಳೆಯೊಬ್ಬಳು ಸೇರಿದಂತೆ ಮನೆಯ ಎಲ್ಲರನ್ನೂ ಆರೋಪಿಗಳನ್ನಾಗಿ ಮಾಡಿ ಪ್ರತಿ ದಿನವು ಅವರ ಮನೆಗೆ ಎಡತಾಕುತ್ತಿದ್ದ ಕಾರಣ ಜಾಮೀನನ್ನು ಅಂದೇ ಪಡೆವ ಅನಿವಾರ್ಯವಿತ್ತು, ನ್ಯಾಯಾಧೀಶರು ಅಂದು ಸಂಜೆವರೆವಿಗೂ ಕಾಲಾವಾಕಾಶ ನೀಡಿದ್ದು, ಅಂದೇ ಆಕ್ಷೇಪಣೆ ಸಲ್ಲಿಸಲಾಯಿತು. ಅವೆಲ್ಲವನ್ನು ಪರಿಗಣಿಸಿದ ನಂತರ ಜಾಮೀನು ಮಂಜೂರು ಮಾಡಿದ್ದಾರೆ ಎಂದು ತಿಳಿಸಿದ್ದಾರೆ. ಆದ್ದರಿಂದ ಆರೋಪಿಯ ಕ್ರಮವನ್ನು ಸಂಶಯಿಸಲು ಕಾರಣಗಳಿಲ್ಲ.

ಹಾಗೆಯೇ ಬಾಲ ಕಾರ್ಮಿಕ (ನಿಷೇದ ಮತ್ತು ನಿಯಂತ್ರಣ)ಕಾಯಿದೆ 1986 ರ ಅಡಿಯಲ್ಲಿ ಅಪರಾಧವೆಸಗುವ ವ್ಯಕ್ತಿಗಳು ಮೊಕದ್ದಮೆ ದಾಖಲಿಸಿರುವುದನ್ನು ಪ್ರಶ್ನಿಸಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ಹಿಂದಕ್ಕೆ ಪಡೆದ ನಂತರವೇ ಅಪರಾಧಿಗಳು ಮರುಪರಿಶೀಲನಾ ಅರ್ಜಿಯನ್ನು ಸಲ್ಲಿಸಿದ್ದಾರೆ ಎಂದು ಶಿಸ್ತು ಪ್ರಾಧಿಕಾರದ ಪರ ಸಾಕ್ಷಿಯು ತಿಳಿಸಿ ಸದರಿ ಅರ್ಜಿ ಮೇಲೆ ಆರೋಪಿಯು ಹೊರಡಿಸಿರುವ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ ತಮಗೆ ತಿಳಿದಿಲ್ಲವೆಂದು ಹೇಳುತ್ತಾರೆ. ಈ ಪ್ರಕರಣದ ನಡೆವಳಿಗಳು ಶುದ್ಧ ನ್ಯಾಯಾಂಗ ನಡೆವಳಿಗಳಾಗಿದ್ದು ಕ್ರಿಮಿನಲ್ ಮೊಕದ್ದಮೆಯನ್ನು ಅಸಿಂಧುಗೊಳಿಸಿ ಆರೋಪಿಯು ಹೊರಡಿಸಿದ ಆದೇಶದಲ್ಲಿ ಕಾನೂನಿಗೆ ವ್ಯತಿರಿಕ್ತವಾದ ಅಂಶಗಳು ಇದ್ದಲ್ಲಿ ಸದರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಬಹುದಾಗಿತ್ತು. ಆದೇಶ ಹೊರಡಿಸಿದ ನಂತರ ಆರೋಪಿಯ ಖಾತೆಗೆ ಹಣ ಜಮಾ ಮಾಡಿದೆ ಎಂಬುದು ಪ್ರಾಸಿಕ್ಯೂಷನ್ ವಾದ ಆಗಿದ್ದರೂ ಸಹ ಆರೋಪಿಯು ಹಣ ಪಡೆದು ಆದೇಶ ಮಾಡಿದ್ದಾರೆಂಬುದನ್ನು ಸಾಬೀತು ಪಡಿಸಲು ಸಾಕ್ಷ್ಯಾದಾರಗಳೂ ಹಾಜರುಪಡಿಸಿಲ್ಲ. ಆದ್ದರಿಂದ 7 ರಿಂದ 9 ರವರೆಗಿನ ಆರೋಪಗಳು ಸಾಬೀತಾಗಿಲ್ಲ.

ವಿಚಾರಣಾ ವರದಿಯ ಪ್ರತಿಯನ್ನು ಲಗತ್ತಿಸಿ ಶ್ರೀ ಕೆ.ಬಿ.ಲೆಂಕಣ್ಣವರ್ ಅವರಿಗೆ ಮೇಲೆ (3) ರಲ್ಲಿ ಓದಲಾದ ದಿನಾಂಕ 11-10-2007 ರ ಎರಡನೇ ನೋಟೀಸ್ ನೀಡಿ ವಿಚಾರಣಾ ವರದಿಯ ಬಗ್ಗೆ ಹೇಳುವುದು ಏನಾದರೂ ಇದ್ದಲ್ಲಿ ಸಲ್ಲಿಸಲು ಅವಕಾಶ ಕಲ್ಪಿಸಲಾಯಿತು. ಶ್ರೀ ಕೆ.ಬಿ.ಲೆಂಕಣ್ಣವರ್ ಅವರು ಮೇಲೆ (4) ರಲ್ಲಿ ಓದಲಾದ ದಿನಾಂಕ: 26.10.2007 ರ ಉತ್ತರ ಸಲ್ಲಿಸಿ 1 ರಿಂದ 6 ರವರೆಗಿನ ಆರೋಪಗಳು ಸಾಬೀತಾಗಿವೆ ಎಂಬ ವಿಚಾರಣಾಧಿಕಾರಿಗಳ ನಿರ್ಣಯವನ್ನು ನಿರಾಕರಿಸಿದ್ದಾರೆ ಅವರ ಉತ್ತರವನ್ನು ಪರಿಶೀಲಿಸಲಾಗಿ ಅವರು ಈ ಹಿಂದೆ ವಿಚಾರಣೆ ಸಮಯದಲ್ಲಿ ಮಂಡಿಸಿದ ಅಂಶಗಳೇ ಆಗಿವೆ. ಅವುಗಳಲ್ಲಿ ಪರಿಶೀಲನಾರ್ಹ ಅಂಶಗಳು ಯಾವುವೂ ಇರುವುದಿಲ್ಲ. ಆದ್ದರಿಂದ 1 ರಿಂದ 6 ರ ವರೆಗಿನ ಆರೋಪಗಳು ಸಾಬೀತಾಗಿವೆ ಎಂಬ ವಿಚಾರಣಾ ವರದಿಯನ್ನು ಒಪ್ಪಿಕೊಂಡು ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 80 ಸೇಲುನ್ಯಾ 2008, ಬೆಂಗಳೂರು, ದಿನಾಂಕ: 28ನೇ ಏಪ್ರಿಲ್ 2008

ಘನವೆತ್ತ ಕರ್ನಾಟಕ ರಾಜ್ಯಪಾಲರು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 9 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಕೆ.ಬಿ.ಲೆಂಕಣ್ಣವರ್, ಜಿಲ್ಲಾ ನ್ಯಾಯಾಧೀಶರು ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅದೇ ನಿಯಮಾವಳಿಯ ನಿಯಮ 8 (viii) ರ ಅನ್ವಯ ಸೇವೆಯಿಂದ ವಜಾಗೊಳಿಸಿದ್ದಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಾ. ಎಂ.ಟಿ. ರೇಜು

ಪಿ.ಆರ್. 1198

ಸರ್ಕಾರದ ಉಪ ಕಾರ್ಯದರ್ಶಿ(ಸೇವೆಗಳು),

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.

ಜಲಸಂಪನ್ಮೂಲ ಸಚಿವಾಲಯ

ವಿಷಯ: ಬೆಳಗಾಂ ಜಿಲ್ಲೆ, ಹುಕ್ಕೇರಿ ತಾಲ್ಲೂಕು ರಾಶಿಂಗ್ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿ ಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 05/12/2009ರಂದು ಕೊನೆಗೊಂಡ ಪತ್ರ ಸಂಖ್ಯೆ:ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2008-09/62.

ಪ್ರಸ್ತಾವನೆ:

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರದಲ್ಲಿ ಬೆಳಗಾಂ ಜಿಲ್ಲೆ, ಹುಕ್ಕೇರಿ ತಾಲ್ಲೂಕು ರಾಶಿಂಗ್ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಹಾರಧನ ಪಾವತಿಸಲು ರೂ.36,25,592-00ಗಳ ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕಾಗಿ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 03/101996
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ 22/10/1999

ಭೂಸ್ವಾಧೀನಕ್ಕೊಳ್ಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆಯ ಕಲಂ 18(1)ರಡಿ ಹುಕ್ಕೇರಿ ಸಿವಿಲ್ ನ್ಯಾಯಾಲಯ (ಹಿರಿಯ ಶ್ರೇಣಿ)ದಲ್ಲಿ ಭೂಸ್ವಾಧೀನ ಪ್ರಕರಣವನ್ನು ದಾಖಲಿಸಿದ್ದು, ಈ ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ.

ಸಿವಿಲ್ ನ್ಯಾಯಾಲಯದ ತೀರ್ಪುಗಳ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸರ್ಕಾರದ ಪರ ದಾಖಲಿಸಿದ್ದ ಎಂಎಫ್ಎ ಪ್ರಕರಣಗಳಲ್ಲಿ ಮಧ್ಯಂತರ ಆದೇಶದಂತೆ ಸಿವಿಲ್ ನ್ಯಾಯಾಲಯದ ತೀರ್ಪಿನಂತೆ ಲೆಕ್ಕ ಹಾಕಿದ ಶೇ.50ರಷ್ಟು ಮೊತ್ತವನ್ನು ನ್ಯಾಯಾಲಯದಲ್ಲಿ ಠೇವಣಿ ಮಾಡಲಾಗಿದೆ. ಎಂಎಫ್ಎ ಪ್ರಕರಣಗಳಲ್ಲಿ ಅಂತಿಮ ತೀರ್ಪು ಆಗಿದ್ದು, ಮೇಲ್ಮನವಿಗಳು ವಜಾಗೊಂಡಿವೆ. ಈ ತೀರ್ಪುಗಳ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಾನೂನು ಇಲಾಖೆಯು ಈ ಕೆಳಕಂಡ ಪತ್ರಗಳಲ್ಲಿ ಅಭಿಪ್ರಾಯ ನೀಡಿದೆ.

ಎಂಎಫ್ಎ	ಪತ್ರ ಸಂಖ್ಯೆ/ದಿನಾಂಕ
6266/04	ಲಾ 1476 ಎಲ್‌ಬಿಎಸ್ 2007, ದಿನಾಂಕ 06/09/07
6265/04	ಲಾ 1474 ಎಲ್‌ಬಿಎಸ್ 2007, ದಿನಾಂಕ 27/08/07
6255/04	ಲಾ 1472 ಎಲ್‌ಬಿಎಸ್ 2007, ದಿನಾಂಕ 06/09/07
6268/04	ಲಾ 1473 ಎಲ್‌ಬಿಎಸ್ 2007, ದಿನಾಂಕ 06/09/07
6267/04	ಲಾ 1475 ಎಲ್‌ಬಿಎಸ್ 2007, ದಿನಾಂಕ 06/09/07

ಸಿವಿಲ್ ನ್ಯಾಯಾಲಯ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣಗಳ ವಿವರ ಕೆಳಕಂಡಂತಿದೆ:

ಕ್ರ. ಸಂ.	ಎಲ್‌ಎಸಿ ಸಂಖ್ಯೆ	ಎಂಎಫ್ಎ ಸಂಖ್ಯೆ	ಸ.ನಂ.	ವಿಸ್ತೀರ್ಣ ಎ-ಗುಂ.	ಪರಿಹಾರ ಮೊತ್ತ ರೂ.ಗಳಲ್ಲಿ
1	165/03	6267/04	299	1-10	368454
2	04/03	6268/04	278	2-09	655849
3	10/03	6255/04	296/297	4-12	1267484
4	07/03	6265/04	290 292 294	0-15 1-25 0-22	751648
5	06/03	6266/04	280	1-39	582157
	ಒಟ್ಟು				**3625592**

- ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಸನೀಇ 80 ಭೂಸ್ವಾಪ್ರ 2008, ಬೆಂಗಳೂರು, ದಿನಾಂಕ: 25ನೇ ಏಪ್ರಿಲ್ 2009.

ಬೆಳಗಾಂ ಜಿಲ್ಲೆ, ಹುಕ್ಕೇರಿ ತಾಲ್ಲೂಕು ರಾಶಿಂಗ್ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ರಾಶಿಂಗ್ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ.36,25,592-00ಳನ್ನು (ಮೂವತ್ತಾರು ಲಕ್ಷದ ಇಪ್ಪತ್ತೈದು ಸಾವಿರದ ಐನೂರ ತೊಂಭತ್ತೆರೆಡು ರೂ.ಗಳು ಮಾತ್ರ)

ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತ:ಪ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009–10 ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂ:ಎಫ್‌ಡಿ 01 ಟಿಎಫ್‌ಪಿ 2008, ದಿನಾಂಕ 16/05/08ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಸುಧಾಕರ ಶೆಟ್ಟಿ

ಪಿ.ಆರ್. 1199 ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ವಿಷಯ: ಬೆಳಗಾಂ ಜಿಲ್ಲೆ, ಸೌದತ್ತಿ ತಾಲ್ಲೂಕು ಬೂದಿಗೊಪ್ಪ ಮತ್ತು ಯರಝುರವಿ ಗ್ರಾಮಗಳ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 08/12/2008ರ ಪತ್ರ ಸಂಖ್ಯೆ:ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/ 2008–09/6532.

ಪ್ರಸ್ತಾವನೆ:

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರದಲ್ಲಿ ಬೆಳಗಾಂ ಜಿಲ್ಲೆ, ಸೌದತ್ತಿ ತಾಲ್ಲೂಕು ಬೂದಿಗೊಪ್ಪ ಮತ್ತು ಯರಝುರವಿ ಗ್ರಾಮಗಳ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸೌದತ್ತಿ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯವು ಎಲ್.ಎ.ಸಿ. ಪ್ರಕರಣದಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 05/07/2001.
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ 24/02/2003
- ಸ್ವಾಧೀನಕ್ಕೊಳಪಟ್ಟ ಜಮೀನುಗಳ ಕಬ್ಜೆ ಪಡೆದ ದಿನಾಂಕ 29/02/1968.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಸೌದತ್ತಿ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣಗಳನ್ನು ದಾಖಲಿಸಿದ್ದು, ಈ ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯವು ಪ್ರತಿ ಎಕರೆಗೆ ಪರಿಹಾರ ಧನವನ್ನು ರೂ.96,000/–ಗಳಿಗೆ ನಿಗದಿಪಡಿಸಿ, ಪರಿಹಾರ ಧನದ ಮೇಲೆ ಕಬ್ಜೆ ದಿನಾಂಕದಿಂದ ಒಂದು ವರ್ಷದ ಅವಧಿಗೆ ಶೇ.9ರಂತೆ ಮತ್ತು ನಂತರದ ಅವಧಿಗೆ ಶೇ.15ರಂತೆ ಬಡ್ಡಿಯನ್ನು ಪಾವತಿಸುವಂತೆ ತೀರ್ಪು ನೀಡಿದೆ.

ಸಿವಿಲ್ ನ್ಯಾಯಾಲಯದ ಮೇಲ್ಕಂಡ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಗಳನ್ನು (ಎಂಎಫ್‌ಎ) ಸಲ್ಲಿಸಲಾಗಿತ್ತು. ಈ ಮೇಲ್ಮನವಿಗಳಲ್ಲಿ ಇದೇ ಕೆರೆಗೆ ಸ್ವಾಧೀನಪಡಿಸಿಕೊಳ್ಳಲಾಗಿದ್ದ ಬೂದಿಗೊಪ್ಪ ಗ್ರಾಮದ ಸ.ನಂ.216ರ 5–14 ಎಕರೆ ಜಮೀನಿಗೆ ಹೆಚ್ಚಿನ ಪರಿಹಾರ ಪಾವತಿ ವಿಷಯದಲ್ಲಿ ಎಂಎಫ್‌ಎ ಸಂಖ್ಯೆ:811/04ರಲ್ಲಿ ದಿನಾಂಕ 06/02/04ರಂದು ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪನ್ನು ಉಲ್ಲೇಖಿಸಿ ಸಿವಿಲ್ ನ್ಯಾಯಾಲಯದ ತೀರ್ಪನ್ನು ಪುರಸ್ಕರಿಸಿದೆ.

ಕಾನೂನು ಇಲಾಖೆಯು ಎಂಎಫ್‌ಎ ತೀರ್ಪುಗಳ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕೆಳಕಂಡ ಪತ್ರಗಳಲ್ಲಿ ಅಭಿಪ್ರಾಯ ನೀಡಿರುವುದರಿಂದ, ಸಿವಿಲ್ ನ್ಯಾಯಾಲಯದ ತೀರ್ಪನ್ನು ಜಾರಿಗೊಳಿಸುವುದು ಅನಿವಾರ್ಯವಾಗಿದೆ.

1	ಲಾ 1329 ಎಲ್‌ಬಿಎಸ್ 2005, ದಿನಾಂಕ 04/02/06
2	ಲಾ 1369 ಎಲ್‌ಬಿಎಸ್ 2005, ದಿನಾಂಕ 04/02/06
3	ಲಾ 1653 ಎಲ್‌ಬಿಎಸ್ 2005, ದಿನಾಂಕ 04/02/06

4	ಲಾ 486 ಎಲ್‌ಬಿಎಸ್ 2006, ದಿನಾಂಕ 06/03/06
5	ಲಾ 1499 ಎಲ್‌ಬಿಎಸ್ 2005, ದಿನಾಂಕ 04/02/06
6	ಲಾ 1918 ಎಲ್‌ಬಿಎಸ್ 2005, ದಿನಾಂಕ 04/02/06
7	ಲಾ 1368 ಎಲ್‌ಬಿಎಸ್ 2005, ದಿನಾಂಕ 04/02/06
8	ಲಾ 359 ಎಲ್‌ಬಿಎಸ್ 2006, ದಿನಾಂಕ 01/03/06
9	ಲಾ 351 ಎಲ್‌ಬಿಎಸ್ 2006, ದಿನಾಂಕ 01/03/06
10	ಲಾ 1069 ಎಲ್‌ಬಿಎಸ್ 2007, ದಿನಾಂಕ 05/07/07

ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ಲೆಕ್ಕಾಚಾರ ತ:ಖ್ತೆ ತಯಾರಿಸಿದ್ದು, ಪಾವತಿಸಬೇಕಾಗಿರುವ ಮೊತ್ತದ ವಿವರ ಕೆಳಕಂಡಂತಿದೆ:

ಕ್ರ. ಸಂ.	ಎಲ್‌ಎಸಿ ಸಂಖ್ಯೆ	ಎಂಎಫ್‌ಎ ಸಂಖ್ಯೆ	ಸ.ನಂ.	ವಿಸ್ತೀರ್ಣ ಎ–ಗುಂ	ಪರಿಹಾರ ಮೊತ್ತ (ಲಕ್ಷ ರೂ.ಗಳಲ್ಲಿ)
1	127/03	810/04	214/2	0–28	655960
2	121/03	120/04	219	0–19	360677
3	123/03	1202/04	222	2–24	1973329
4	124/03	1203/04	153	1–30	1452008
5	125/03	1204/04	154/1&2	1–12	986764
6	126/03	1208/04	214/1	0–37	822379
7	128/03	1211/04	271,272	2–34	2173593
8	129/03	1214/04	273/1,2,3	4–34	4543683
9	130/03	1205/04	274/B1	4–08	3934763
10	131/03	1207/04	274/A	7–13	5561042
11	132/03	1210/04	275	0–21	492021
12	133/03	1213/04	282	1–04	1030681
13	146/03	1206/04	215	0–29	673918
14	147/03	1209/04	278	0–17	398341
15	159/03	1212/04	217&218	0–23	538861
	ಒಟ್ಟು				**25598020**

- ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಸನೀಇ 162 ಭೂಸ್ವಾಪ್ರ 2008, ಬೆಂಗಳೂರು, ದಿನಾಂಕ: 24ನೇ ಏಪ್ರಿಲ್ 2009.

ಬೆಳಗಾಂ ಜಿಲ್ಲೆ, ಸೌದತ್ತಿ ತಾಲ್ಲೂಕು ಬೂದಿಗೊಪ್ಪ ಮತ್ತು ಯರಝರವಿ ಗ್ರಾಮಗಳ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣದಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ.2,55,98,020–00 ಗಳನ್ನು (ಎರಡು ಕೋಟಿ ಐವತ್ತೈದು ಲಕ್ಷದ ತೊಂಭತ್ತೆಂಟು ಸಾವಿರದ ಇಪ್ಪತ್ತು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವುಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತೊಮ್ಮೆ ಲೆಕ್ಕಾಚಾರ ತ:ಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂ:ಲೋಇ 27 ಆಕೋ–1/08, ದಿನಾಂಕ 30/01/2009ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಸುಧಾಕರ ಶೆಟ್ಟಿ

ಪಿ.ಆರ್. 1200 ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ: 2009–10ನೇ ಸಾಲಿನಲ್ಲಿ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯನ್ನು ಮುಂದುವರಿಸುವ ಬಗ್ಗೆ.

ಪ್ರಸ್ತಾವನೆ:

ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ 2009–10ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2575–60–265–0–02–059 (ಯೋಜನೆ) ಅಡಿಯಲ್ಲಿ ಒಟ್ಟು ರೂ.20000.00 ಲಕ್ಷಗಳನ್ನು ಒದಗಿಸಲಾಗಿದೆ.

ಈ ಯೋಜನೆಯಡಿ ಯಾವುದೇ ಮಾರ್ಪಾಟು ಇಲ್ಲದ್ದಿರುವುದರಿಂದ, ಸರ್ಕಾರಿ ಆದೇಶ ಸಂಖ್ಯೆ:ಪಿಡಿ 17 ಐಎಂಎಂ 2005, ದಿನಾಂಕ: 10.08.2005 ರನ್ವಯ ಹಾಗೂ ದಿನಾಂಕ: 21.04.2009 ರಂದು ಪ್ರಧಾನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಯೋಜನೆಯನ್ನು 2009–10 ನೇ ಸಾಲಿನಲ್ಲಿ ಮುಂದುವರೆಸಲು ನಿರ್ಣಯಿಸಲಾಯಿತು. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಯೋಇ 32 ಯೋವಿವಿ 2009, ಬೆಂಗಳೂರು, ದಿನಾಂಕ: 25ನೇ ಏಪ್ರಿಲ್ 2009

2009–10ನೇ ಸಾಲಿನ ಆಯವ್ಯಯದಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಗಾಗಿ ಲೆಕ್ಕಶೀರ್ಷಿಕೆ 2575–60–265–0–02–059 (ಯೋಜನೆ) ಅಡಿ ಒದಗಿಸಲಾದ ರೂ.20000.00 ಲಕ್ಷಗಳ ಯೋಜನೆಗೆ ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಚಿಕ್ಕರಾಜು

ಪಿ.ಆರ್. 1201 ಸರ್ಕಾರದ ಅಧೀನ ಕಾರ್ಯದರ್ಶಿ 1 & 2,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಂಖ್ಯಿಕ ಇಲಾಖೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ: ಹೊಸದಾಗಿ ರಚಿಸಲಾಗಿರುವ ಆಯೋಗ/ಸಮಿತಿ/ಪ್ರಾಧಿಕಾರ/ಮಿಷನ್/ಕಾರ್ಯಪಡೆಗಳಿಗೆ ಸೌಲಭ್ಯಗಳನ್ನು ನೀಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 41 ಶಿಸನೇ 2002, ದಿನಾಂಕ 17.06.2002.

2. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 68 ಶಿವಾನೀ 2008, ದಿನಾಂಕ: 22.08.2008

ಪ್ರಸ್ತಾವನೆ:

ಮೇಲೆ ಓದಲಾದ ಸರ್ಕಾರಿ ಆದೇಶದಲ್ಲಿ ಸಚಿವರ ಸ್ಥಾನಮಾನ ಹೊಂದಿರುವ ಕಾರ್ಯನಿರ್ವಾಹಕ ಪ್ರಾಧಿಕಾರಗಳಿಗೆ ನೀಡಬೇಕಾಗಿರುವ ವೇತನ ಭತ್ಯೆ ಇನ್ನಿತರ ಸೌಲಭ್ಯಗಳನ್ನು ನಿಗದಿಪಡಿಸಲಾಗಿದೆ.

ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ರಾಜ್ಯದ ಸಂಪೂರ್ಣ ಸಾಮರ್ಥ್ಯವನ್ನು ಸಂಪೂರ್ಣ ಸದ್ಬಳಕೆ ಮಾಡುವ ಉದ್ದೇಶದಿಂದ ವಿವಿಧ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರವು ವಿವಿಧ ಆಯೋಗ/ಸಮಿತಿ/ಪ್ರಾಧಿಕಾರ/ಮಿಷನ್/ಕಾರ್ಯಪಡೆಗಳನ್ನು ಹೊಸದಾಗಿ ರಚಿಸಿದ್ದು, ಅಧ್ಯಕ್ಷರುಗಳನ್ನು ನೇಮಿಸಿ ಅವರುಗಳಿಗೆ ಸೂಕ್ತ ಸ್ಥಾನಮಾನವನ್ನು ಸಹ ನೀಡಲಾಗಿದೆ. ಅವುಗಳಲ್ಲಿ ಕೆಲವು ಸಂಸ್ಥೆಗಳ ವಿವರ ಕೆಳಕಂಡಂತಿರುತ್ತದೆ.

ಕ್ರ. ಸಂ.	ಅಧ್ಯಕ್ಷರ ಹೆಸರು	ಸಂಸ್ಥೆಗಳ ಹೆಸರು	ಆಡಳಿತ ಇಲಾಖೆ
1	ಶ್ರೀ ನಾಗರಾಜ್ ಶೆಟ್ಟಿ	ಕರ್ನಾಟಕ ಕರಾವಳಿ ಅಭಿವೃದ್ಧಿ ಪ್ರಾಧಿಕಾರ	ನಗರಾಭಿವೃದ್ಧಿ ಇಲಾಖೆ
2	ಡಾ. ಕಸ್ತೂರಿ ರಂಗನ್	ಕರ್ನಾಟಕ ಜ್ಞಾನ (ಅರಿವು) ಆಯೋಗ	ಶಿಕ್ಷಣ ಇಲಾಖೆ
3	ಶ್ರೀ ಶಶಿಲ್ ನಮೋಶಿ	ನಂಜುಡಪ್ಪ ವರದಿಯ ಶಿಫಾರಸ್ಸಿನ ಅನುಷ್ಠಾನ ಸಮಿತಿ	ಯೋಜನಾ ಇಲಾಖೆ
4	ಪ್ರೊ.ಸಿ.ಎನ್.ಆರ್. ರಾವ್	ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ	ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ
5	ಶ್ರೀ ಆನಂದ್ ಎ.ಎಸ್	ಸಾವಯವ ಕೃಷಿ ಮಿಷನ್	ಕೃಷಿ ಇಲಾಖೆ

ಕ್ರ. ಸಂ.	ಅಧ್ಯಕ್ಷರ ಹೆಸರು	ಸಂಸ್ಥೆಗಳ ಹೆಸರು	ಆಡಳಿತ ಇಲಾಖೆ
6	ಡಾ: ಎಸ್.ಎ. ಪಾಟೀಲ್	ಕರ್ನಾಟಕ ಕೃಷಿ ಮಿಷನ್	ಕೃಷಿ ಇಲಾಖೆ
7	ಶ್ರೀ ಅನಂತ ಹೆಗಡೆ ಅಶೀಸರ	ಪಶ್ಚಿಮ ಘಟ್ಟ (ಸಹ್ಯಾದ್ರಿ) ಕಾರ್ಯಪಡೆ	ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
8	ಶ್ರೀ ವೈ. ಬಿ. ರಾಮಕೃಷ್ಣ	ಜೈವಿಕ ಇಂಧನ ಪಡೆ	ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
9	ಶ್ರೀ ಸಿ.ಎಸ್. ವಿಶ್ವನಾಥ್	ಕಾಮಗಾರಿಗಳ ಗುಣಮಟ್ಟ ನಿಯಂತ್ರಣ ಕಾರ್ಯಪಡೆ	ಲೋಕೋಪಯೋಗಿ ಇಲಾಖೆ

ಹೊಸದಾಗಿ ರಚಿಸಲಾಗಿರುವ ಆಯೋಗ/ಸಮಿತಿ/ಪ್ರಾಧಿಕಾರ/ಮಿಷನ್/ಕಾರ್ಯಪಡೆಗಳಿಗೆ ಸಂಬಂಧಿಸಿದ ಆಡಳಿತ ಇಲಾಖೆಗಳಿಂದ ವೇತನ ಭತ್ಯೆ ಹಾಗೂ ಇನ್ನಿತರ ಸೌಲಭ್ಯಗಳನ್ನು ನೀಡದಿರುವ ಬಗ್ಗೆ ಸಮಸ್ಯೆಗಳಿರುತ್ತವೆ. ಇವುಗಳ ಅಧ್ಯಕ್ಷರುಗಳಿಗೆ ಸಂಪುಟ ದರ್ಜೆ ಸಚಿವರ/ರಾಜ್ಯ ಸಚಿವರ ಸ್ಥಾನಮಾನ ನೀಡಿರುವುದರಿಂದ ಇವರುಗಳಿಗೆ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 41 ಶಿಸನೇ 2002, ದಿನಾಂಕ 17.06.2002ರಲ್ಲಿ ಕಲ್ಪಿಸಿರುವ ಆರ್ಥಿಕ ಸೌಲಭ್ಯಗಳನ್ನು ಸಂಬಂಧಪಟ್ಟ ಆಡಳಿತ ಇಲಾಖೆಗಳು ನೀಡಬೇಕಾಗುತ್ತದೆ. ಸದರಿ ಅವಕಾಶದಂತೆ ಅಧ್ಯಕ್ಷರುಗಳ ವೇತನ, ದಿನ ಭತ್ಯೆ, ಪ್ರವಾಸ ಭತ್ಯೆ, ಮನೆ ಬಾಡಿಗೆ ಭತ್ಯೆ, ವಾಹನ ಸೌಲಭ್ಯ, ಜೊತೆಗೆ ಆಪ್ತ ಸಿಬ್ಬಂದಿಗಳ ವೇತನ ಇತ್ಯಾದಿ ಸೇರಿ ವಾರ್ಷಿಕ ಸುಮಾರು ರೂ. 70.00ರಿಂದ ರೂ 80.00 ಲಕ್ಷಗಳ ವೆಚ್ಚ ಬರುವ ಸಾಧ್ಯತೆ ಇರುತ್ತದೆ. ಈ ವೆಚ್ಚವನ್ನು ಭರಿಸಲು ಸಂಬಂಧಪಟ್ಟ ಆಡಳಿತ ಇಲಾಖೆಗಳು ಆಯವ್ಯಯದಲ್ಲಿ ಸೂಕ್ತ ಹಣಾವಕಾಶವನ್ನು ಕಲ್ಪಿಸಿಕೊಂಡು ಭರಿಸಬೇಕಾಗುತ್ತದೆ.

ಈ ಸಂಸ್ಥೆಗಳ ಅಧ್ಯಕ್ಷರುಗಳಿಗೆ ಸಂಬಂಧಪಟ್ಟ ಆಡಳಿತ ಇಲಾಖೆಗಳಿಂದ ನೀಡುತ್ತಿರುವ ಸೌಲಭ್ಯಗಳ ಬಗ್ಗೆ ಪರಿಶೀಲಿಸಲು ದಿನಾಂಕ:29.01.2009 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆದಿದ್ದು. ಸದರಿ ಸಭೆಯಲ್ಲಿ ಸಂಬಂಧಪಟ್ಟ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಪ್ರಸ್ತುತ ಆ ಇಲಾಖೆಗಳಲ್ಲಿ ರಚಿಸಲಾಗಿರುವ ಅಧ್ಯಕ್ಷರುಗಳಿಗೆ ಸೌಲಭ್ಯಗಳನ್ನು ಒದಗಿಸುವಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಮುಖ್ಯ ಕಾರ್ಯದರ್ಶಿಗಳ ಗಮನಕ್ಕೆ ತಂದಿದ್ದು, ಈ ಅಧ್ಯಕ್ಷರುಗಳಿಗೆ ಸಚಿವ ಸ್ಥಾನಮಾನ ನೀಡಿರುವುದರಿಂದ ಸರ್ಕಾರಿ ಆದೇಶ ದಿನಾಂಕ: 17.06.2002 ರಲ್ಲಿ ಕಲ್ಪಿಸಿರುವ ಆರ್ಥಿಕ ಸೌಲಭ್ಯಗಳನ್ನು ನೀಡಲು ಅವಶ್ಯಕ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ. ಈ ಸಂಸ್ಥೆಗಳ ಅಧ್ಯಕ್ಷರುಗಳಿಗೆ ಆಪ್ತ ಸಿಬ್ಬಂದಿ ನೇಮಿಸುವ ಸಂಬಂಧ ಇಲಾಖೆಗಳಲ್ಲಿ ಸಿಬ್ಬಂದಿ ಕೊರತೆಯಿದ್ದು, ಗ್ರೂಪ್–ಸಿ ಮತ್ತು ಗ್ರೂಪ್–ಡಿ ವರ್ಗದ ಸಿಬ್ಬಂದಿಯನ್ನು ಸಚಿವರುಗಳ ಆಪ್ತ ಶಾಖೆಯಲ್ಲಿ ನೇಮಿಸುವಂತೆ ಗುತ್ತಿಗೆ ಆಧಾರದ ಮೇಲೆ ನೇಮಿಸಲು ಅವಕಾಶ ಕಲ್ಪಿಸುವಂತೆ ಕೋರಿದ್ದರ ಹಿನ್ನೆಲೆಯಲ್ಲಿ ಈ ಬಗ್ಗೆ ಪರಿಶೀಲಿಸಿ ಸೂಕ್ತ ಅವಕಾಶವನ್ನು ಕಲ್ಪಿಸುವಂತೆ ಹಾಗೂ ಕಾರ್ಯಪಡೆಗಳ ಅಧಿಕಾರ ಅವಧಿ ಅವುಗಳ ಅಧಿಕಾರ ಮತ್ತು ಕರ್ತವ್ಯಗಳ ಬಗ್ಗೆ ಸಮರ್ಪಕವಾಗಿ ಮಾರ್ಗಸೂಚಿಯನ್ನು ಹೊರಡಿಸಲು ಮುಖ್ಯ ಕಾರ್ಯದರ್ಶಿಯವರು ಸೂಚಿಸಿರುತ್ತಾರೆ.

ಮೇಲೆ ವಿವರಿಸಿರುವ ಕಾರಣ ಹಿನ್ನೆಲೆಯಲ್ಲಿ ಈ ಸಂಸ್ಥೆಗಳ ಅಧ್ಯಕ್ಷರುಗಳಿಗೆ ಸಮರ್ಪಕವಾಗಿ ಕಾರ್ಯನಿರ್ವಹಿಸುವ ದೃಷ್ಟಿಯಿಂದ ಉಲ್ಲೇಖಿತ ಆದೇಶದಲ್ಲಿ ಕಲ್ಪಿಸಿರುವ ಸೌಲಭ್ಯಗಳನ್ನು ಹಾಗೂ ಅಗತ್ಯ ಸಿಬ್ಬಂದಿ ವರ್ಗ, ಕಛೇರಿ ಮತ್ತು ಪೀಠೋಪಕರಣಗಳನ್ನು ಸಂಬಂಧಪಟ್ಟ ಆಡಳಿತ ಇಲಾಖೆಗಳು ಒದಗಿಸುವ ದೃಷ್ಟಿಯಿಂದ ಮಾರ್ಗಸೂಚಿಯನ್ನು ಹೊರಡಿಸುವುದು ಅವಶ್ಯವೆಂದು ಸರ್ಕಾರವು ನಿರ್ಧರಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 06 ಶಿಸನೇ 2009, ದಿನಾಂಕ: 28ನೇ ಏಪ್ರಿಲ್ 2009

1. ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಹೊಸದಾಗಿ ರಚಿಸಲಾಗಿರುವ ಆಯೋಗ/ಸಮಿತಿ/ಪ್ರಾಧಿಕಾರ/ಮಿಷನ್/ಕಾರ್ಯಪಡೆಗಳ ಅಧ್ಯಕ್ಷರುಗಳಿಗೆ ಸಂಪುಟ ದರ್ಜೆ ಸಚಿವರ/ರಾಜ್ಯ ಸಚಿವರ ಸ್ಥಾನಮಾನ ನೀಡಿರುವುದರಿಂದ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 41 ಶಿಸನೇ 2002, ದಿನಾಂಕ 17.06.2002ರಲ್ಲಿ ಕಲ್ಪಿಸಿರುವ ಸೌಲಭ್ಯಗಳನ್ನು ಯಥಾವತ್ತಾಗಿ ನೀಡಲು ಆದೇಶಿಸಿದೆ.

2. ಈ ಅಧ್ಯಕ್ಷರುಗಳಿಗೆ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 68 ಶಿವಾನೀ 2008, ದಿನಾಂಕ 22.08.2008ರಲ್ಲಿ ನಿಗದಿಪಡಿಸಿರುವ ರೂ. 11.00 ಲಕ್ಷ ಆರ್ಥಿಕ ಮಿತಿಯೊಳಗೆ ವಾಹನ ಖರೀದಿ ಒದಗಿಸತಕ್ಕದ್ದು. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಈಗಾಗಲೇ ಅಧ್ಯಕ್ಷರುಗಳ ಉಪಯೋಗಕ್ಕೆ ತಾತ್ಕಾಲಿಕವಾಗಿ ನೀಡಿರುವ ವಾಹನವನ್ನು ಆಡಳಿತ ಇಲಾಖೆಯಿಂದ ಹೊಸ ವಾಹನಗಳನ್ನು ಖರೀದಿಸಿದ ನಂತರ ಅತಿಥಿ ಗೃಹಕ್ಕೆ ಹಿಂದಿರುಗಿಸತಕ್ಕದ್ದು.

3. ಮಾನ್ಯ ಮುಖ್ಯ ಮಂತ್ರಿಯವರ ಪೂರ್ವಾನುಮೋದನೆಯೊಂದಿಗೆ ಸಂಬಂಧಪಟ್ಟ ಆಡಳಿತ ಇಲಾಖೆಗಳು ಕೆಳಕಂಡಂತೆ ಕ್ರಮ ವಹಿಸತಕ್ಕದ್ದು.

(1) ಇವುಗಳ ಅಧ್ಯಕ್ಷರುಗಳಿಗೆ ಕಛೇರಿ ಸ್ಥಳಾವಕಾಶ, ಪೀಠೋಪಕರಣ ಲೇಖನ ಸಾಮಗ್ರಿ ಇನ್ನಿತರ ಯಂತ್ರೋಪಕರಣಗಳನ್ನು ಮತ್ತು ಇತ್ಯಾದಿ ಸೌಲಭ್ಯಗಳನ್ನು ಆಡಳಿತ ಇಲಾಖೆಗಳೇ ಒದಗಿಸತಕ್ಕದ್ದು.

(2) ಅಧ್ಯಕ್ಷರುಗಳಿಗೆ ಆಪ್ತ ಸಿಬ್ಬಂದಿಯನ್ನು ಸರ್ಕಾರಿ ಆದೇಶದ ದಿನಾಂಕ: 17.06.2002 ರಲ್ಲಿ ತಿಳಿಸಿರುವಂತೆ ಆಪ್ತ ಕಾರ್ಯದರ್ಶಿ ಹುದ್ದೆಯನ್ನು ಗ್ರೂಪ್–ಎ ಅಥವಾ ಗ್ರೂಪ್–ಬಿ ಶ್ರೇಣಿಯ ಅಧಿಕಾರಿಗಳನ್ನು ನಿಯೋಜನೆ ಮೂಲಕ ಭರ್ತಿ ಮಾಡಿಕೊಳ್ಳತಕ್ಕದ್ದು. ಉಳಿದ ಸಿಬ್ಬಂದಿ ಅಂದರೆ ಗ್ರೂಪ್–ಸಿ ಮತ್ತು ಗ್ರೂಪ್–ಡಿ ವರ್ಗದ ನೌಕರರನ್ನು ಆಡಳಿತ ಹಾಗೂ ಇನ್ನಿತರ ಇಲಾಖೆಗಳಲ್ಲಿ ಸೂಕ್ತ ಸಿಬ್ಬಂದಿ ಇಲ್ಲದಿದ್ದ ಪಕ್ಷದಲ್ಲಿ ಗುತ್ತಿಗೆ ಆಧಾರದ ಮೇಲೆ ಅಧ್ಯಕ್ಷರ ಕಾರ್ಯಾವಧಿವರೆಗೆ ಮಾತ್ರ ನೇಮಿಸಿಕೊಳ್ಳತಕ್ಕದ್ದು.

(3) ಯಾವ ಉದ್ದೇಶಗಳಿಗೆ ಕಾರ್ಯಪಡೆ ರಚನೆಯಾಗಿದೆಯೋ ಆ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ನಿಗಧಿಪಡಿಸಿದ ಅವಧಿಯೊಳಗೆ ಗುರಿ ಸಾಧಿಸಲು ಸಂಬಂಧಪಟ್ಟ ಆಡಳಿತ ಇಲಾಖೆಗಳು ಎಲ್ಲಾ ರೀತಿಯ ಸಹಕಾರ ಮಾಹಿತಿ ಹಾಗೂ ಸೌಲಭ್ಯಗಳನ್ನು ಇವುಗಳಿಗೆ ಒದಗಿಸತಕ್ಕದ್ದು.

(4) ಇವುಗಳ ನಿರ್ವಹಣೆಗಾಗಿ ಬೇಕಾಗುವ ಸಂಪನ್ಮೂಲವನ್ನು ಆಯವ್ಯಯದಲ್ಲಿ ಸೂಕ್ತ ಹಣಾವಕಾಶ ಕಲ್ಪಿಸಿಕೊಂಡು ಆಡಳಿತ ಇಲಾಖೆಗಳು ನಿಯಮಾನುಸಾರ ವೆಚ್ಚವನ್ನು ಭರಿಸತಕ್ಕದ್ದು. ಸರ್ಕಾರವು ಆಗಿಂದ್ದಾಗ್ಗೆ ಹೊರಡಿಸಿರುವ ಮಿತವ್ಯಯ ಆದೇಶವನ್ನು ಪಾಲಿಸಲು ಕ್ರಮ ಕೈಗೊಳ್ಳುವುದು.

(5) ಅಧಿಕಾರೇತ ಸದಸ್ಯರುಗಳಿಗೆ ಪ್ರವಾಸ ಭತ್ಯೆಯನ್ನು ಗ್ರೂಪ್–ಎ ಹಿರಿಯ ಶ್ರೇಣಿಯ ಅಧಿಕಾರಿಯು ಪಡೆಯುವ ದರದಲ್ಲಿ ನೀಡತಕ್ಕದ್ದು. (ಪ್ರಥಮ ದರ್ಜೆ/ಹವಾ ನಿಯಂತ್ರಿತ 2ನೇ ದರ್ಜೆ ರೈಲಿನಲ್ಲಿ ಪ್ರಯಾಣ, ಆದರೆ ವಿಮಾನಯಾನ ದರ ಪಡೆಯುವಂತಿಲ್ಲ First class/Ac-II in train; but not airfare). ಸಭೆಗೆ ಹಾಜರಾಗುವ ಅಧಿಕಾರೇತರ ಸದಸ್ಯರುಗಳಿಗೆ ತಂಗಿದ ಪ್ರಯುಕ್ತ ದಿನ ಭತ್ಯೆಯನ್ನು ಪಡೆದಲ್ಲಿ ಸಭಾ ಭತ್ಯೆಯನ್ನು ರೂ.250/–ಗಳಿಗೆ ಸೀಮಿತಗೊಳಿಸಿದೆ ಹಾಗೂ ಯಾವುದೇ ದಿನ ಭತ್ಯೆಯನ್ನು ಪಡೆಯದಿದ್ದಲ್ಲಿ ಅವರುಗಳಿಗೆ ರೂ.500/– ಗಳ ಸಭಾ ಭತ್ಯೆಯನ್ನು ನೀಡತಕ್ಕದ್ದು.

(6) ಪ್ರಸ್ತುತ ವಿಧಾನಸೌಧ, ವಿಕಾಸ ಸೌಧ ಮತ್ತು ಬಹುಮಹಡಿ ಕಟ್ಟಡಗಳಲ್ಲಿ ಸ್ಥಳಾವಕಾಶ ಲಭ್ಯವಿಲ್ಲದಿದ್ದಲ್ಲಿ ಈ ಸಂಸ್ಥೆಗಳಿಗೆ ಅಗತ್ಯವಾದ ಕಛೇರಿ ಸ್ಥಳಾವಕಾಶವನ್ನು ಸಂಬಂಧಪಟ್ಟ ಇಲಾಖೆಗಳ ವ್ಯಾಪ್ತಿಗೊಳಪಡುವ ಕಛೇರಿ ಕಟ್ಟಡಗಳಲ್ಲಿ ಒದಗಿಸತಕ್ಕದ್ದು.

(7) ಸರ್ಕಾರವು ಈಗಾಗಲೇ ರಚಿಸಲಾಗಿರುವ ಹಾಗೂ ಮುಂದೆ ರಚಿಸಲಿರುವ ಇಂತಹ ಎಲ್ಲಾ ಸಂಸ್ಥೆಗಳಿಗೂ ಮೇಲ್ಕಂಡ ಸೌಲಭ್ಯಗಳು, ಷರತ್ತು ಮತ್ತು ನಿಬಂಧನೆಗಳು ಅನ್ವಯವಾಗುತ್ತವೆ.

4. ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 188 ವೆಚ್ಚ–12 2009, ದಿನಾಂಕ:24.04.2009 ರಲ್ಲಿ ನೀಡಿರುವ ಸಹಮತಿರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್. ತಿಪ್ಪೇಸ್ವಾಮಿ

ಪಿ.ಆರ್. 1202

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ರಾಜ್ಯ ಶಿಷ್ಟಾಚಾರ).

HEALTH AND FAMILY WELFARE SECRETARIAT

Sub: Deputation of Dr. Jayaraju, DPMO,KHSDRP, Tumkur, for the WHO Fellowship-reg.

Read: 1) Application of Dr. Jayaraju, DPMO,KHSDRP, Tumkur dt. 02.02.2008

2) Letter from WHO No. FS SE 0540-49/08 dated 23.02.2009.

Preamble:

It is necessary that the Officers of the Department of Health and Family Welfare are regularly trained and oriented in better skills that will help improve service delivery. The name of Dr. Jayaraju, DPMO Tumkur was communicated by this Office to the Ministry of Health and Family Welfare. Govt. of India (Ref-1) for recommending the same to the World Health Organisation that is conduting different courses in 2009-10. The World Health Organisation have communicated acceptance of nomination to Dr. Jayaraju vide Letter No. FS SE 0540-49/08 dated 23.2.2009 (ref-2). The WHO will meet all expenses relating to the Fellowship.

Hence, the following order.

Govt.Order No.HFW(PR) 64 WBA 2009 Bangalore, Dated: 25th April 2009

Under the circumstances mentioned in the Preamble, the Government are pleased to nominate Dr. Jayaraju Devikoppa, District Project Management Officer, Tumkur as a Fellow for the 4-week

Fellowship by WHO, to study Community Health Care and Research at Khon Kaen University, Department of Community Medicine, 123, Mitrapart Road, Mueang District, Khon Kaen Province, 40002, Thailand from 4.5.2009 to 29.5.2009.

The officer shall get in touch with Associate Professor Dr. Sompong Srisaenpang, Course Co-ordinator for all relevant purposes.

As per the letter received by WHO referred above, the following conditions shall apply to the Fellow selected for the Course.

a) Submission of the Fellowship Termination of Studies Report (FTSR) within one month of the completion of the studies.

b) The Fellowship Termination Allowance (FTA), as applicable under WHO Rules will be released by WHO/SEARO only on receipt of the FTSR from the Fellow, duly endorsed by the Fellow's employer (Head of Department/Institution).

By Order and in the name of Governor of Karnataka,

P.R. 1203

SUSHAMA GODBOLE

Deputy Secretary to Govt, KHSDRP, Health and Family Welfare Department.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ: ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯ ಮುಖ್ಯ ಹಣಕಾಸು ಅಧಿಕಾರಿಯವರಿಗೆ ಎ.ಸಿ. ಬಿಲ್ ಮೂಲಕ ಖಜಾನೆಯಿಂದ ಹಣ ಸೆಳೆಯಲು ಅಧಿಕಾರ ನೀಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂ: ಹೆಚ್‌ಎಫ್‌ಡಬ್ಲ್ಯೂ/ಕೆಹೆಚ್‌ಎಸ್‌ಡಿಆರ್‌ಪಿ/ಎಸ್‌ಇಸಿಟಿ–1/2006 ದಿ:30.12.2006

2. ಸರ್ಕಾರದ ಆದೇಶ ಸಂ: ಹೆಚ್‌ಎಫ್‌ಡಬ್ಲ್ಯೂ/ಕೆಹೆಚ್‌ಎಸ್‌ಡಿಆರ್‌ಪಿ/ಎಸ್‌ಇಸಿಟಿ–1/2007 ದಿ:31.07.2008

3. ಸರ್ಕಾರದ ಆದೇಶ ಸಂ: ಹೆಚ್‌ಎಫ್‌ಡಬ್ಲ್ಯೂ/ ಕೆಹೆಚ್‌ಎಸ್‌ಡಿಆರ್‌ಪಿ/ ಎಸ್‌ಇಸಿಟಿ/ಜಿಓ–1/2007 ದಿ:31.07.2008

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ. ಯೋಜನೆ ಕಛೇರಿಯಲ್ಲಿ ತುರ್ತು ಸಂದರ್ಭಗಳಲ್ಲಿ ಕಛೇರಿ ವೆಚ್ಚವನ್ನು ಭರಿಸಲು ಸಾಧ್ಯವಾಗುವಂತೆ ರೂ.75,000.00 ಗಳು ಅಥವಾ ಕಡಿಮೆ ಹಣವನ್ನು ಎ.ಸಿ. ಎಲ್ ಮೂಲಕ ಖಜಾನೆಯಿಂದ ಸೆಳೆಯಲು ಯೋಜನೆಯ ಮುಖ್ಯ ಹಣಕಾಸು ಅಧಿಕಾರಿಯವರಿಗೆ ಮೇಲೆ (2) ಮತ್ತು (3)ರಲ್ಲಿ ಓದಲಾದ ಸರ್ಕಾರಿ ಆದೇಶಗಳನ್ವಯ ಕ್ರಮವಾಗಿ 2007–08 ಮತ್ತು 2008–09ನೇ ಸಾಲಿನಲ್ಲಿ ಅಧಿಕಾರ ನೀಡಲಾಗಿತ್ತು. ಪ್ರಸ್ತುತ ವರ್ಷದಲ್ಲಿಯೂ ಸದರಿ ಅಧಿಕಾರವನ್ನು ಮುಂದುವರೆಸುವುದು ಅಗತ್ಯವೆಂದು ಕಂಡುಬಂದಿರುತ್ತದೆ.

ಆದ್ದರಿಂದ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಎಫ್‌ಡಬ್ಲ್ಯೂ(ಪಿಆರ್) 63 ಡಬ್ಲ್ಯೂಬಿಎ 2009, ಬೆಂಗಳೂರು, ದಿನಾಂಕ: 21ನೇ ಏಪ್ರಿಲ್ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ, ಸರ್ಕಾರವು, ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯ ಕಾರ್ಯಚಟುವಟಿಕೆಗಳ ಸಂಬಂಧ ತುರ್ತು ಸಂದರ್ಭಗಳಲ್ಲಿ ವೆಚ್ಚವನ್ನು ಭರಿಸುವ ಸಲುವಾಗಿ 2009–10ನೇ ಸಾಲಿನಲ್ಲಿ ರೂ. 75,000.00 (ಎಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಅಥವಾ ಕಡಿಮೆ ಹಣವನ್ನು ಎ.ಸಿ.ಬಿಲ್ ಮೂಲಕ ಲೆಕ್ಕ ಶೀರ್ಷಿಕೆ "2210–06–800–0–84–051 (ಸಾಮಾನ್ಯ ವೆಚ್ಚಗಳು)" ಅಡಿಯಲ್ಲಿ ಖಜಾನೆಯಿಂದ ಸೆಳೆಯಲು ಯೋಜನಾ ಕಛೇರಿಯ ಮುಖ್ಯ ಹಣಕಾಸು ಅಧಿಕಾರಿ ಇವರಿಗೆ ಅಧಿಕಾರ ನೀಡಿದೆ. ಈ ಸೌಲಭ್ಯವು 31.03.2010 ರವರೆಗೆ ಜಾರಿಯಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸುಷಮಾ ಗೋಡಬೋಲೆ

ಪಿ.ಆರ್. 1204

ಸರ್ಕಾರದ ಉಪ ಕಾರ್ಯದರ್ಶಿ, ಕೆಹೆಚ್‌ಎಸ್‌ಡಿಆರ್‌ಪಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ವಿಷಯ: ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯ ವಾಹನಗಳ ದಿನನಿತ್ಯದ ನಿರ್ವಹಣೆಗೆ ಸಾರಿಗೆ ವಿಭಾಗ, ಕೆಹೆಚ್‌ಎಸ್‌ಡಿಆರ್‌ಪಿ ಇವರಿಗೆ ರೂ. 25,000/– ಮುಂಗಡ ಹಣ ನೀಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂ: ಹೆಚ್‌ಎಫ್‌ಡಬ್ಲ್ಯೂ/ಕೆಹೆಚ್‌ಎಸ್‌ಡಿಆರ್‌ಪಿ/ಎಸ್‌ಇಸಿಟಿ–1/2006 ದಿನಾಂಕ:30.12.2006

2. ಸರ್ಕಾರದ ಆದೇಶ ಸಂ: ಹೆಚ್‌ಎಫ್‌ಡಬ್ಲ್ಯೂ/ಕೆಹೆಚ್‌ಎಸ್‌ಡಿಆರ್‌ಪಿ/ಎಸ್‌ಇಸಿಟಿ–23/2007 ದಿನಾಂಕ:31.07.2007
3. ಸರ್ಕಾರದ ಆದೇಶ ಸಂ: ಹೆಚ್‌ಎಫ್‌ಡಬ್ಲ್ಯೂ/ಕೆಹೆಚ್‌ಎಸ್‌ಡಿಆರ್‌ಪಿ/ಎಸ್‌ಇಸಿಟಿ–23/2007 ದಿನಾಂಕ:16.08.2007
4. ಸರ್ಕಾರದ ಆದೇಶ ಸಂ: ಹೆಚ್‌ಎಫ್‌ಡಬ್ಲ್ಯೂ/ಕೆಹೆಚ್‌ಎಸ್‌ಡಿಆರ್‌ಪಿ/ಎಸ್‌ಇಸಿಟಿ–23/2007 ದಿನಾಂಕ:29.04.2008

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ. ಮೇಲೆ (2) ರಿಂದ (4) ರಲ್ಲಿ ಓದಲಾದ ಸರ್ಕಾರದ ಆದೇಶಗಳಲ್ಲಿ ಯೋಜನಾ ಕಛೇರಿಯ ವಾಹನಗಳ ನಿರ್ವಹಣೆ ಹಾಗೂ ದುರಸ್ತಿಯ ವೆಚ್ಚಗಳನ್ನು ಭರಿಸಲು ಒಂದು ಬಾರಿಗೆ ರೂ. 25,000.00 ಗಳ ಮುಂಗಡ ಹಣವನ್ನು ಸಾರಿಗೆ ವಿಭಾಗ, ಕೆಹೆಚ್‌ಎಸ್‌ಡಿಆರ್‌ಪಿ ಇವರಿಗೆ ನೀಡಲು ಹಿಂದಿನ ವರ್ಷಗಳಲ್ಲಿ ಮಂಜೂರಾತಿ ನೀಡಲಾಗಿದೆ. ಸದರಿ ಸೌಲಭ್ಯವನ್ನು 2009–10ನೇ ಸಾಲಿನಲ್ಲಿ ಮುಂದುವರಿಸಲು ಪ್ರಸ್ತಾಪಿಸಲಾಗಿದೆ.

ಆದ್ದರಿಂದ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಎಫ್‌ಡಬ್ಲ್ಯೂ(ಪಿಆರ್) 63(ಎ) ಡಬ್ಲ್ಯೂಬಿಎ 2009, ಬೆಂಗಳೂರು, ದಿನಾಂಕ: 21ನೇ ಏಪ್ರಿಲ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನಾ ಕಛೇರಿಯ ವಾಹನಗಳ ದಿನನಿತ್ಯದ ನಿರ್ವಹಣೆ ಮತ್ತು ದುರಸ್ತಿ ವೆಚ್ಚಗಳನ್ನು ಭರಿಸಲು 2009–10ನೇ ಸಾಲಿನಲ್ಲಿ ರೂ.25,000.00 (ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಮುಂಗಡ ಹಣವಾಗಿ ಸಾರಿಗೆ ವಿಭಾಗ, ಕೆಹೆಚ್‌ಎಸ್‌ಡಿಆರ್‌ಪಿ ಇವರಿಗೆ ಒದಗಿಸಲು ಮಂಜೂರಾತಿ ನೀಡಿದೆ.

ಈ ಮೊತ್ತವನ್ನು ಲೆಕ್ಕ ಶಿರ್ಷಿಕೆ "2210–06–800–0–84 (ಯೋ) 195" (ಸಾರಿಗೆ ವೆಚ್ಚ) ಅಡಿಯಲ್ಲಿ ಎ.ಸಿ. ಬಿಲ್ ಮೂಲಕ ಖಜಾನೆಯಿಂದ ಸೆಳೆಯಲು ಯೋಜನಾ ಕಛೇರಿಯ ಮುಖ್ಯ ಹಣಕಾಸು ಅಧಿಕಾರಿ ಇವರಿಗೆ ಅಧಿಕಾರ ನೀಡಿದೆ. ಈ ಸೌಲಭ್ಯವು 31.03.2010 ರವರೆಗೆ ಜಾರಿಯಲ್ಲಿರುತ್ತದೆ.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ ಅಡಿಯಲ್ಲಿ 2009–10ನೇ ಸಾಲಿನಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸುಷಮಾ ಗೋಡಬೋಲೆ

ಪಿ.ಆರ್. 1205 ಸರ್ಕಾರದ ಉಪ ಕಾರ್ಯದರ್ಶಿ, ಕೆಹೆಚ್‌ಎಸ್‌ಡಿಆರ್‌ಪಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ವಿಷಯ: ಡಾ. ಹೆಚ್. ನಾಗರಾಜು, ವೈದ್ಯರು ದರ್ಜೆ–2 (ಆ), ಸರ್ಕಾರಿ ಆಯುರ್ವೇದ ಆಸ್ಪತ್ರೆ, ನಿಂಬೆಗುಂದಿ, ಶಿವಮೊಗ್ಗ ಜಿಲ್ಲೆ ಇವರು ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಿ ಆಗಿರುವುದಕ್ಕೆ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ಬಗ್ಗೆ.

ಓದಲಾಗಿದೆ:
1. ಕಾರಣ ಕೇಳುವ ನೋಟಿಸ್ ಸಂಖ್ಯೆ : ಆಕುಕ 199 ಪಿಐಎಂ 2007, ದಿನಾಂಕ: 03.10.2007
2. ಆಪಾದಿತರ ಹೇಳಿಕೆ ದಿನಾಂಕ : 08.01.2008.
3. ಸರ್ಕಾರದ ಆದೇಶ ಸಂಖ್ಯೆ: ಆಕುಕ 199 ಪಿಐಎಂ 2007, ದಿನಾಂಕ: 11.04.2008
4. ವಿಚಾರಣಾಧಿಕಾರಿಯವರ ವರದಿ ದಿನಾಂಕ: 18.11.2008.
5. ಎರಡನೇ ಕಾರಣ ಕೇಳುವ ಸೂಚನಾ ಪತ್ರ ಸಂಖ್ಯೆ: ಆಕುಕ 199 ಪಿಐಎಂ 2007, ದಿನಾಂಕ:26.12.2008
6. ಡಾ: ಹೆಚ್. ನಾಗರಾಜು ಇವರ ಹೇಳಿಕೆ ದಿನಾಂಕ: 05.03.2009.

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ. (1) ರಲ್ಲಿ, ಡಾ: ಹೆಚ್. ನಾಗರಾಜು, ವೈದ್ಯರು ದರ್ಜೆ–2 (ಆ), ಸರ್ಕಾರಿ ಆಯುರ್ವೇದ ಆಸ್ಪತ್ರೆ, ನಿಂಬೆಗುಂದಿ, ಶಿವಮೊಗ್ಗ ಜಿಲ್ಲೆ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಇವರು ತಮ್ಮ ಕರ್ತವ್ಯದಲ್ಲಿ ಅಸಮರ್ಪಕತೆ, ಅಸಡ್ಡೆ ಮತ್ತು ನಿರ್ಲಕ್ಷತೆ ಹಾಗೂ ಸಾರ್ವಜನಿಕರಿಗೆ ತೊಂದರೆಯನ್ನು ಉಂಟು ಮಾಡಿರುವ ಬಗ್ಗೆ ಮತ್ತು ಸದರಿಯವರು ಸುದೀರ್ಘ ಅವಧಿಗೆ ಅನಧಿಕೃತ ಗೈರುಹಾಜರಿ ಆಗಿರುವ ಬಗ್ಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 11 ರಡಿಯಲ್ಲಿ ಕಾರಣ ಕೇಳುವ ಸೂಚನಾ ಪತ್ರವನ್ನು ನೀಡಿ ಅವರಿಂದ ವಿವರಣೆಯನ್ನು ಕೋರಲಾಯಿತು.

ಮೇಲೆ ಓದಲಾದ ಕ್ರ.ಸಂ. (2) ರಲ್ಲಿ, ಡಾ: ಹೆಚ್. ನಾಗರಾಜು, ವೈದ್ಯರು ದರ್ಜೆ-2 (ಅ), ಸರ್ಕಾರಿ ಆಯುರ್ವೇದ ಆಸ್ಪತ್ರೆ, ನಿಂಬೆಗುಂದಿ, ಶಿವಮೊಗ್ಗ ಜಿಲ್ಲೆ ಇವರು ಲಿಖಿತ ಹೇಳಿಕೆಯನ್ನು ಸಲ್ಲಿಸಿ ಆಪಾದನೆಗಳನ್ನು ತಿರಸ್ಕರಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಸದರಿ ಪ್ರಕರಣದಲ್ಲಿ ಈ ಕೆಳಕಂಡ ಆಪಾದನೆಯ ಬಗ್ಗೆ ಸತ್ಯಾಸತ್ಯತೆಯನ್ನು ತಿಳಿಯುವ ಸಲುವಾಗಿ ಇಲಾಖಾ ವಿಚಾರಣೆಯನ್ನು ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 11(2) ರನ್ವಯ ಶ್ರೀ ವಿಜಯಮೂರ್ತಿ, ನಿವೃತ್ತ ನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಸದರಿ ನಿಯಮಾವಳಿಗಳ ನಿಯಮ 11(5)(ಸಿ) ರನ್ವಯ ಆಯುಷ್ ಇಲಾಖೆಯ ಮುಖ್ಯ ಆಡಳಿತಾಧಿಕಾರಿಯವರನ್ನು ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಿ ಆದೇಶಿಸಲಾಗಿರುತ್ತದೆ.

ಆರೋಪ:

ಡಾ: ಹೆಚ್. ನಾಗರಾಜು, ವೈದ್ಯರು ದರ್ಜೆ-2, ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ನಿಂಬೆಗುಂದಿ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಆದ ನೀವು ಕೆಲಸ ಮಾಡುತ್ತಿದ್ದಾಗ ನಿಮ್ಮ ಅಸಮರ್ಪಕ ಕರ್ತವ್ಯ ನಿರ್ವಹಣೆ, ನಿರ್ಲಕ್ಷತೆಯ ಕಾರಣದಿಂದಾಗಿ ಶಿವಮೊಗ್ಗ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆದೇಶ ದಿನಾಂಕ: 08.07.1999 ರನ್ವಯ ದಿನಾಂಕ: 08.07.1999 ರ ಅಪರಾಹ್ನ ಕರ್ತವ್ಯದಿಂದ ವಿಮುಕ್ತಿಗೊಳಿಸಿ, ನಿರ್ದೇಶನಾಲಯದಲ್ಲಿ ವರದಿ ಮಾಡಿಕೊಂಡಿದ್ದು, ತದನಂತರ ಮರುನೇಮಕಾತಿ ಆದೇಶ ಬರುವವರೆಗೆ ತಾತ್ಕಾಲಿಕವಾಗಿ ಕೆಲಸ ನಿರ್ವಹಿಸಲು ನಿರ್ದೇಶನಾಲಯದ ಅಧಿಕೃತ ಜ್ಞಾಪನ ದಿನಾಂಕ: 30.07.1999 ರಂದು ಶ್ರೀ ಜಯಚಾಮರಾಜೇಂದ್ರ ಭಾರತೀಯ ವೈದ್ಯಕೀಯ ಸಂಸ್ಥೆಗೆ ನೇಮಕ ಮಾಡಿದ್ದರೂ ಸಹ ಅನಧಿಕೃತವಾಗಿ ಗೈರುಹಾಜರಾಗಿರುತ್ತೀರಿ. ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 441 ಪಿಐಎಂ 1999. ದಿನಾಂಕ: 04.05.2000 ರಲ್ಲಿ ನಿಮ್ಮನ್ನು ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲ್ಲೂಕು, ಹಾದಿಕೆರೆಯಲ್ಲಿರುವ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಕ್ಕೆ ವರ್ಗಾವಣೆ ಮಾಡಿದ್ದರೂ, ಸದರಿ ಆದೇಶದಂತೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ಅನಧಿಕೃತ ಗೈರುಹಾಜರಿಯನ್ನು ಮುಂದುವರೆಸಿದ್ದು, ನಿರ್ದೇಶನಾಲಯದಿಂದ ದಿನಾಂಕ: 25.08.2000, 26.02.2001 ರಂದು ನೋಟೀಸ್‌ನ್ನು ನೋಂದಾಯಿತ ಅಂಚೆ ಮೂಲಕ ಕಳುಹಿಸಿದ್ದರೂ ದಿನಾಂಕ: 04.03.2001 ರಂದು ನಿರ್ದೇಶನಾಲಯದಲ್ಲಿ ವರದಿ ಮಾಡಿಕೊಂಡು ಪುನಃ ಅನಧಿಕೃತ ಗೈರುಹಾಜರಿಯನ್ನು ಮುಂದುವರೆಸಿರುತ್ತೀರಿ. ದಿನಾಂಕ: 16.04.2004 ರಂದು ನಿರ್ದೇಶನಾಲಯದಿಂದ ತಿಳುವಳಿಕೆಯ ನೋಟೀಸ್‌ನ್ನು ನೋದಾಯಿತ ಅಂಚೆ ಮೂಲಕ ಕಳುಹಿಸಿದಾಗ ದಿನಾಂಕ: 27.05.2004 ರಂದು ಇಲಾಖಾ ಮುಖ್ಯಸ್ಥರ ಬಳಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದು, ಮುಂದಿನ ನೇಮಕಾತಿ ಆದೇಶ ಬರುವವರೆಗೆ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸಲು ದಿನಾಂಕ: 01.06.2004 ರಂದು ಮಾಡಿದ್ದರೂ, ಪುನಃ ಅನಧಿಕೃತ ಗೈರು ಹಾಜರಿಯನ್ನು ಮುಂದುವರಿಸುತ್ತೀರಿ.

ದಿನಾಂಕ: 30.07.1999 ರಿಂದಲೂ ಅನಧಿಕೃತ ಗೈರುಹಾಜರಿಯು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 108 ರ ಮೇರೆಗೆ 4 ತಿಂಗಳಿಗಿಂತ ಮೀರಿ ಅನಧಿಕೃತ ಗೈರುಹಾಜರಿಯಾಗಿರುವುದರಿಂದ ಮತ್ತು ನೀವು ಕೆಲಸದಲ್ಲಿ ಅಸಡ್ಡೆ, ನಿರ್ಲಕ್ಷತೆಯಿಂದ ಹಾಗೂ ದೀರ್ಘ ಅನಧಿಕೃತ ಗೈರು ಹಾಜರಿ ಆಗಿರುತ್ತೀರಿ. ಆ ಎಲ್ಲಾ ನಿಮ್ಮ ವರ್ತನೆಗಳು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ (3)(i) ಉಪನಿಯಮಗಳನ್ನು ಉಲ್ಲಂಘಿಸಿರುವುದರಿಂದ, ಗಂಭೀರ ಸ್ವರೂಪದ ದುರ್ನಡತೆ ಮಾಡಿರುತ್ತೀರಿ. ಆದ್ದರಿಂದ ಈ ಆರೋಪ

ಆಪಾದಿತರ ಪರವಾಗಿ ಹೇಳಿಕೆ:

ವಿಚಾರಣಾ ವೇಳೆಯಲ್ಲಿ ವಿಚಾರಣಾಧಿಕಾರಿಯವರ ಮುಂದೆ ಆಪಾದಿತ ನೌಕರರು ಹಾಜರಾಗದೇ ಅವರ ಪರವಾಗಿ ಅವರ ಮಗಳು ಶ್ವೇತಾ ಎಂಬುವರು ಹಾಜರಾಗಿ ಈ ಕೆಳಕಂಡಂತೆ ತಮ್ಮ ಹೇಳಿಕೆಯನ್ನು ಮಂಡಿಸಿರುತ್ತಾರೆ.

ಡಾ: ಹೆಚ್.ನಾಗರಾಜು ಇವರು ನನ್ನ ತಂದೆಯಾಗಿದ್ದು, ಅವರು ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ನಿಂಬೆಗುಂದಿ, ಭದ್ರಾವತಿ ತಾಲ್ಲೂಕು ಇಲ್ಲಿ ಕೆಲಸ ಮಾಡುತ್ತಿದ್ದರು. ನಂತರ ಇವರಿಗೆ ಉಪಾಧ್ಯಕ್ಷರು, ತಾಲ್ಲೂಕು ಪಂಚಾಯತ್, ಆನವೇರಿ ಕ್ಷೇತ್ರ, ಭದ್ರಾವತಿ ಇವರಿಂದ ಮಾನಸಿಕವಾಗಿ ಹಿಂಸೆಯಾಗುತ್ತಿದೆಯೆಂದು ಮನೆಯಲ್ಲಿ ಹೇಳುತ್ತಿದ್ದರು. ಅನಂತರ, ಇವರ ಮೇಲೆ ವಿಚಾರಣೆ ನಡೆಯುತ್ತಿರುವ ವಿಷಯವು ನಮಗೆ ತಿಳಿದಾಗ ಈ ಬಗ್ಗೆ ವಿಚಾರಿಸಿ ಅವರ ಮನೋಸ್ಥಿತಿ ಬಗ್ಗೆ ಪರಿಶೀಲಿಸಲು ಸ್ಪಂದನಾ ಆಸ್ಪತ್ರೆ, ರಾಜಾಜಿನಗರದಲ್ಲಿ ತೋರಿಸಲಾಗಿ, ಅವರು ಸಿಜೋಫೆನಿಯಾ ಕಾಯಿಲೆಯಿಂದ ಬಳಲುತ್ತಿದ್ದು, ತಕ್ಷಣಕ್ಕೆ ತಮ್ಮ ಕರ್ತವ್ಯವನ್ನು ನಿರ್ವಹಿಸಲು ಅಸಾಧ್ಯವಾಗುವುದೆಂದು ಇವರಿಗೆ ಚಿಕಿತ್ಸೆ ನೀಡುತ್ತಿರುವ ಡಾ: ಶ್ರೀನಿವಾಸ್ ರವರು ತಿಳಿಸಿರುತ್ತಾರೆ. ನನ್ನ ತಂದೆಯವರ ಮಾನಸಿಕ ಸ್ಥಿತಿಯನ್ನು ಪರಿಗಣಿಸಿ ಇಲಾಖಾ ವಿಚಾರಣೆಯನ್ನು ಕೈಬಿಟ್ಟು The persons with (Equal opportunities), protection of Rights and Full Participation Act, 1995 ಇದರ 47ನೇ ಪ್ರಕರಣದ ಅನ್ವಯ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಪ್ರಸ್ತುತ ವಿಷಯವು ವಿಚಾರಣೆಯಲ್ಲಿರುವುದರಿಂದ, ವಿಚಾರಣಾಧಿಕಾರಿಗಳ ಮುಂದೆ ಮನವಿ ಸಲ್ಲಿಸಲು ಸರ್ಕಾರವು ತಮ್ಮ ಪತ್ರದಲ್ಲಿ ತಿಳಿಸಿರುತ್ತಾರೆ.

ನನ್ನ ತಂದೆಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರು ನೀಡಿರುವ ಪ್ರಮಾಣ ಪತ್ರ ದಿನಾಂಕ: 12.06.2008 ಹಾಗೂ ನಾನು ಸರ್ಕಾರಕ್ಕೆ ನೀಡಿರುವ ಮನವಿ ದಿನಾಂಕ: 18.08.2008 ಮತ್ತು ಸರ್ಕಾರದಿಂದ ನನಗೆ ನೀಡಿರುವ ಪತ್ರ ದಿನಾಂಕ: 12.09.2008 ಇವುಗಳನ್ನು ಹಾಜರುಪಡಿಸಿರುತ್ತೇನೆ. ವಿಷಯವನ್ನು ಪರಿಗಣಿಸಿ ನನ್ನ ತಂದೆಯವರಿಗೆ ಕಾನೂನು ರೀತಿಯ ಬರಬೇಕಾದ ಸಲವತ್ತನ್ನು ಒದಗಿಸಿ ಕೊಟ್ಟು ಅವರು ಯಾವುದೇ ದುರ್ನಡತೆ ಎಸಗಿಲ್ಲ ಎಂಬುದನ್ನು ವರದಿ ನೀಡಲು ಕೋರಲಾಗಿದೆ.

ವಿಚಾರಣಾಧಿಕಾರಿಯವರ ಅಪಾದಿತ ನೌಕರರ ವಿರುದ್ಧದ ಅಪಾದನೆಯನ್ನು ಮತ್ತು ಅವರ ಪರವಾಗಿ ನೀಡಿರುವ ಅವರ ಮಗಳ ಹೇಳಿಕೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ತಮ್ಮ ವಿಚಾರಣಾವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

"According to the Section 47 of the Act, no establishment shall dispense with, or reduce in rank, an employee who acquires a disability during his service. Therefore, it is clear that to come within the purview of this Section, the disability should have been acquired during the service of the D.O. As at present, the medical certificate produced is silent on this aspect. Further, it is outside the scope of this Enquiry to give any finding on this point. The provisions of the Act make it amply clear that it is for the Government to consider the claim of the D.O. according to the Act.

The charge is very clear that the D.O. has remained unauthorized absent from the after noon of 08.07.1999. Further, it is also stated in the charge that the D.O. has written letters giving explanations for his absence, which are not satisfactory. Therefore, it has to be presumed that the D.O. was, at that point of time, in a position to put forth his case before the authorities. It is not his case that he has submitted any application seeking any kind of leave it is aso not his case that he was suffering from any mental illness, as sought to be made out now. Further, there is not much force in the contention that conducting an Enquiry against a person who is suffering from disability of mental illness is violative of Section 47 of the Act and also amounts of violation of human rights as the D.O. is not able to understand the proceedings. All that can be said is that the D.O. has appeared in the Enquiry and has denied the charges framed against him, on 04.06.2008. Again he has filed his written arguments in the Enquiry". Further, the charge relates to past conduct and the same is based on documentary evidence, the veracity of which is not questioned by the D.O. at any point of time. Further, it is seen that the D.O. has furnished his reply to Ex. p 3 regarding the unauthorized absence, and the same has been found to be irrelevant. Further the D.O. has furnished his reply dated 28.04.2004 to Ex. P 5 and this reply has also been found to be irrelevant. Thus, it is seen that the D.O. has responded by giving replies to his superior authorities. No such contention regarding his mental illness appears to have been taken up, at any point of time earlier.

Thus, on a thorough consideration of the entire oral and documentary evidence and the arguments submitted by the concerned. I hold that the charge framed against the delinquent official Dr. H. Nagaraju is proved".

ಮೇಲೆ ಓದಲಾದ ಕ್ರಮ ಸಂಖ್ಯೆ(5)ರಲ್ಲಿ ಆಪಾದಿತ ನೌಕರರಿಗೆ ದಂಡನೆಯನ್ನು ವಿಧಿಸುವ ಪೂರ್ವದಲ್ಲಿ ವಿಚಾರಣಾ ವರದಿಯನ್ನು ಲಗತ್ತಿಸಿ ಕಳುಹಿಸಿ ವಿಚಾರಣಾ ವರದಿಯ ಬಗ್ಗೆ, ಅವರ ಹೇಳಿಕೆಯನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರಲ್ಲಿ ಅಪಾದಿತ ನೌಕರರು ಈ ಕೆಳಕಂಡಂತೆ ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ:–

"ವಿಚಾರಣೆಯನ್ನು ನಡೆಸಿದ ಅಧಿಕಾರಿಗಳು ವಿಷಯವನ್ನು ಪುನಃ ಮಾರ್ಪಾಡಿಸಿದ್ದ ತಿದ್ದುಪಡಿಯೊಂದಿಗೆ ನನಗೆ ಮುಂಬಡ್ತಿ ನಿಯಮದಂತೆ ಹೊಸದಾಗಿ ಸೃಷ್ಟಿಸಿದ ಖಾಲಿ ಇರುವ ಹುದ್ದೆಗೆ ನಿಯೋಜನೆ ಮತ್ತು ವರ್ಗಾವಣೆ ಕೋರಿ ಸಲ್ಲಿಸಿರುತ್ತೇನೆ. ನಾನು ಕರ್ತವ್ಯವನ್ನು ನಿರ್ವಹಿಸಿದ ಎಸ್.ಜೆ.ಐ.ಎಂ. ಬೆಂಗಳೂರು ಇಲ್ಲಿ ಹೊಸದಾಗಿ ಸೃಷ್ಟಿಸಿದ ಹುದ್ದೆಗೆ ಮುಂಬಡ್ತಿ ಅಥವಾ ಶಿವಮೊಗ್ಗ ಜಿಲ್ಲೆಯ ಸರ್ಕಾರಿ ಆಯುರ್ವೇದ ಆಸ್ಪತ್ರೆ ಜಿಲ್ಲಾ ಮಟ್ಟದ ಆಸ್ಪತ್ರೆಯಲ್ಲಿ ಹಾಜರಿ ಮತ್ತು ಕರ್ತವ್ಯ ಪ್ರಾಚಾರ್ಯರಿಂದ ನಿಯಂತ್ರಣ ಮಾಡದೇ, ನಿಯೋಜನೆ ಕೋರಿ ವಿನಂತಿಸಿಕೊಳ್ಳುತ್ತೇನೆ. ಈ ಅವಧಿಯ ಹಾಜರಾತಿಯನ್ನು ಹೊಸದಾಗಿ ಸೃಷ್ಟಿ ಮಾಡುವ ಹುದ್ದೆಯ ಮಂಜೂರಾತಿ ಯೋಜನೆಯ ಅನುಷ್ಠಾನ ಅನುಮತಿ, ಅಂಗೀಕಾರ ಎಂದು ತಿಳಿದು ಮತ್ತು ನಿರೀಕ್ಷಣಾ ಅವಧಿ ಎಂದು ಪರಿಗಣಿಸಿ, ಉಳಿದ ಎರಡು ವರ್ಷಗಳ ಸೇವೆಯನ್ನು ಸರ್ಕಾರದಿಂದ ಆದೇಶ ಕೋರಿ ವೇತನ ಸಹಿತ ಅವಧಿ ಎಂದು ಮತ್ತು ಮಂಜೂರಾತಿಗಾಗಿ ಇತರೇ ಸೇವೆಗಳಲ್ಲಿರುವಂತೆ ಪರಿಶೀಲಿಸಿ ಈ ನನ್ನ ಮನವಿಯನ್ನು ಅಂಗೀಕರಿಸಿ ವೇತನ ಪಡೆಯಲು ಸಹಕರಿಸುತ್ತೀರೆಂದು ನಂಬಿರುತ್ತೇನೆ."

ಆಪಾದಿತ ಸೌಕರರ ಮೇಲೆ ಮಾಡಿರುವ ಆಪಾದನೆ ಮತ್ತು ವಿಚಾರಣಾಧಿಕಾರಿಯವರ ವಿಚಾರಣಾ ವರದಿಯನ್ನು ಹಾಗೂ ಆಪಾದಿತ ಸೌಕರರು ನೀಡಿರುವ ಅಂತಿಮ ಹೇಳಿಕೆಯನ್ನು ಸರ್ಕಾರವು ಪರಿಶೀಲಿಸಿ ಸೌಕರರು ದಿ: 08.07.1999 ರಿಂದ ಇಲ್ಲಿಯವರೆಗೂ ಸರ್ಕಾರಿ ಕೆಲಸಕ್ಕೆ ಅನಧಿಕೃತ ಗೈರುಹಾಜರಿಯಾಗಿರುವುದು, ಧೃಡಪಟ್ಟಿರುತ್ತದೆ ಮತ್ತು ವಿಚಾರಣೆಯ ಸಂದರ್ಭದಲ್ಲಿ ಇವರಿಗೆ ಮಾನಸಿಕ ಅಸ್ವಸ್ಥತೆ (Mental illness) ಇತ್ತು ಎಂಬ ವಾದವನ್ನು ವಿಚಾರಣಾಧಿಕಾರಿಗಳು ಒಪ್ಪದೆ, ಈ ಅಂಶವನ್ನು ವಿಶ್ಲೇಷಿಸಿ, ಇವರ ಮೇಲಿನ ಆರೋಪವು ಸಾಬೀತಾಗಿದೆಯೆಂದು ವರದಿ ಮಾಡಿರುತ್ತಾರೆ. ಅಲ್ಲದೇ, ಎರಡನೇ ಕಾರಣ ಕೇಳುವ ಸೂಚನಾ ಪತ್ರಕ್ಕೆ ಸ್ವತಃ ಅಪಾದಿತ ನೌಕರರೇ ಉತ್ತರ ನೀಡಿರುವುದನ್ನು ಅವಲೋಕಿಸಿದಾಗ, ಇವರಿಗೆ ಮಾನಸಿಕ ಅಸ್ವಸ್ಥತೆಯನ್ನು ಇತ್ತು ಎಂಬುವುದು ಈಗಲೂ ಧೃಡಪಡುವುದಿಲ್ಲ ಮತ್ತು ಇಂತಹ ಪ್ರಕರಣಗಳಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಮೆಹಮೂದ್ ಕೆ. ವಿರುದ್ಧ ರಾಜ್ಯ ಮತ್ತು ಇತರರು ಪ್ರಕರಣದಲ್ಲಿ (1996) ಕೆ.ಎಸ್.ಎಲ್.ಜೆ 1016 ಅರ್ಜಿ ಸಂಖ್ಯೆ: 3351/94 ರಲ್ಲಿ ದಿನಾಂಕ: 11.09.1996 ರಂದು ನೀಡಿದ ತೀರ್ಪಿನ ಉದ್ಧೃತ ಭಾಗದಲ್ಲಿ ಈ ಕೆಳಕಂಡಂತಿದೆ.

"We are of the view that the relationship between the Government employee nd the State involves mutual rights and obligations. The rights cannot vest in the Government employee without a corresponding obligation to attend to the duties. The service under the State Government is not open house for anybody to walk in and get out as he pleases"

ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಸದರಿಯವರ ವಿರುದ್ಧ ಮಾಡಲಾದ ಕರ್ತವ್ಯದಲ್ಲಿ ಅಸಮರ್ಪಕತೆ ಹಾಗೂ ಅಸಡ್ಡೆ ಮತ್ತು ನಿರ್ಲಕ್ಷತೆ ಹಾಗೂ ಸಾರ್ವಜನಿಕರಿಗೆ ತೊಂದರೆಯನ್ನು ಉಂಟು ಮಾಡಿರುವುದಲ್ಲದೇ ಸದರಿಯವರ ಸುದೀರ್ಘವಾಗಿ ಕಛೇರಿ ಕೆಲಸಕ್ಕೆ ಅನಧಿಕೃತ ಗೈರು ಹಾಜರಿ ಆಗಿರುವ ಆರೋಪವು ನಿಸ್ಸಂಶಯವಾಗಿ ಸಾಬೀತು ಆಗಿರುವ ಕಾರಣ ಡಾ: ಹೆಚ್. ನಾಗರಾಜ್, ವೈದ್ಯರ ದರ್ಜೆ –2 (ಆಯುರ್ವೇದ) ಇವರನ್ನು ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ) ನಿಯಮಗಳ, ನಿಯಮ 8 (vi)ರನ್ವಯ ಸರ್ಕಾರದ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 199 ಪಿಐಎಂ 2007, ಬೆಂಗಳೂರು, ದಿನಾಂಕ: 24ನೇ ಏಪ್ರಿಲ್ 2008

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಡಾ: ಹೆಚ್.ನಾಗರಾಜ್, ವೈದ್ಯರ ದರ್ಜೆ–2, (ಆಯುರ್ವೇದ) ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ನಿಂಬೆಗುಂದಿ, ಶಿವಮೊಗ್ಗ ಜಿಲ್ಲೆ, ಇವರನ್ನು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8 (vi)ರನ್ವಯ ಸರ್ಕಾರದ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎನ್. ಮಹಾಲಕ್ಷ್ಮಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾರತೀಯ ವೈದ್ಯ ಪದ್ಧತಿ)

ಪಿ.ಆರ್. 1206

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ: ಕರ್ನಾಟಕ ರಾಜ್ಯದ ಉದ್ದಗಲಕ್ಕೂ ಕೈಗಾರಿಕಾಭಿವೃದ್ಧಿಗೆ ಸುವರ್ಣ ಕರ್ನಾಟಕ ಅಭಿವೃದ್ಧಿ ಕಾರಿಡಾರ್ ಯೋಜನೆ ಮತ್ತು ಕೈಗಾರಿಕಾ ಕಾರಿಡಾರ್ ಯೋಜನೆಯನ್ನು ಜಾರಿಗೊಳಿಸಲು ಜಿಲ್ಲಾ ಮಟ್ಟದ ಕಾರ್ಯಪಡೆ ಸಮಿತಿ ರಚಿಸುವ ಕುರಿತು.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ:ಸಿಐ 194 ಎಸ್‌ಪಿಐ 2008 ದಿನಾಂಕ 2.8.2008.
2. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ರವರ ಪತ್ರ ಸಂಖ್ಯೆ: ಕೆ.ಐ.ಎ.ಡಿ.ಬಿ./ಕೇಂ.ಕ/ಭೂಸ್ವಾ/1976/13082 ದಿನಾಂಕ 13.02.2009.

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ.1ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ರಾಜ್ಯದ ಉದ್ದಗಲಕ್ಕೂ ಕೈಗಾರಿಕಾಭಿವೃದ್ಧಿಗೆ ಸುವರ್ಣ ಕರ್ನಾಟಕ ಅಭಿವೃದ್ಧಿ ಕಾರಿಡಾರ್ ಯೋಜನೆ ಮತ್ತು ಕೈಗಾರಿಕಾ ಕಾರಿಡಾರ್ ಯೋಜನೆಯನ್ನು ಈ ಕೆಳಕಂಡ ಸ್ಥಳಗಳ ಮತ್ತು ಅವುಗಳ ನಡುವೆ ಬರುವ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲು ತೀರ್ಮಾನಿಸಿ ಯೋಜನೆ ಅನುಷ್ಠಾನಕ್ಕೆ ನುರಿತ ತಜ್ಞ ಸಂಸ್ಥೆಯನ್ನು ಗುರುತಿಸಿ ಅವರಿಂದ ಸಾಧ್ಯತಾ ವರದಿಯನ್ನು ತಯಾರಿಸಲು ಅನುವಾಗುವಂತೆ ಅಧಿಕಾರಿಗಳನ್ನೊಳಗೊಂಡ ಕಾರ್ಯಪಡೆ ಸಮಿತಿ ರಚಿಸಲಾಗಿದೆ.

1. ಬೆಂಗಳೂರು-ಬೆಳಗಾವಿ ವಯಾ ದಾವಣಗೆರೆ, ಹುಬ್ಬಳ್ಳಿ ಕಾರಿಡಾರ್
2. ತುಮಕೂರು-ಹೊನ್ನಾವರ ವಯಾ ಶಿವಮೊಗ್ಗ
3. ಚಿತ್ರದುರ್ಗ-ಮಂಗಳೂರು ವಯಾ ಶಿವಮೊಗ್ಗ-ಉಡುಪಿ
4. ಬೀದರ್-ಬೆಂಗಳೂರು ವಯಾ ಚಿತ್ರದುರ್ಗ

ಈ ಹಿನ್ನೆಲೆಯಲ್ಲಿ ಕರ್ನಾಟಕದ ಮೇಲ್ಕಂಡ ಸ್ಥಳಗಳಲ್ಲಿ ಕೈಗಾರಿಕಾ ಕಾರಿಡಾರ್ ಯೋಜನೆಯನ್ನು ಅನುಷ್ಠಾನಗೊಳಿಸಲು ಜಿಲ್ಲಾಧಿಕಾರಿಗಳು ಗುರುತಿಸಿ ವರದಿ ಮಾಡಿರುತ್ತಾರೆ.

ಗುರುತಿಸಲಾದ ಜಮೀನಿನಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿಪಡಿಸುವ ಬಗ್ಗೆ ಜಿಲ್ಲಾಮಟ್ಟದಲ್ಲಿ ಕಾರ್ಯಪಡೆ ಸಮಿತಿ ಮೇಲೆ ಓದಲಾದ ಕ್ರ.ಸಂ.2ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ರವರು ಕೋರಿರುತ್ತಾರೆ.

ಆದುದರಿಂದ ಈ ಕೆಳಕಂಡಂತೆ ಆದೇಶ.

ಸರ್ಕಾರಿ ಆದೇಶ ಸಂಖ್ಯೆ:ಸಿಐ 232 ಎಸ್‌ಪಿಐ 2008, ಬೆಂಗಳೂರು, ದಿನಾಂಕ: 24ನೇ ಏಪ್ರಿಲ್ 2009

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ, ಸುವರ್ಣ ಕರ್ನಾಟಕ ಅಭಿವೃದ್ಧಿ ಕಾರಿಡಾರ್ ಯೋಜನೆ ಮತ್ತು ಕೈಗಾರಿಕಾ ಕಾರಿಡಾರ್ ಯೋಜನೆಯನ್ನು ಕಾರ್ಯಗತಗೊಳಿಸಲು ಗುರುತಿಸಲಾದ ಜಮೀನಿನಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿಪಡಿಸುವ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಈ ಕೆಳಕಂಡ ಕಾರ್ಯಪಡೆ ಸಮಿತಿಯನ್ನು ರಚಿಸಲಾಗಿದೆ:

1. ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ – ಅಧ್ಯಕ್ಷರು
2. ಜಿಲ್ಲೆಯ ನಗರ ಯೋಜನಾ ಅಧಿಕಾರಿ – ಸದಸ್ಯರು
3. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಅಭಿವೃದ್ಧಿ ಅಧಿಕಾರಿ – ಸದಸ್ಯರು
4. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವಿಶೇಷ ಭೂಸ್ವಾಧೀನಾಧಿಕಾರಿ – ಸದಸ್ಯರು
5. ಕೈಗಾರಿಕಾ ಸಂಘದ ಪ್ರತಿನಿಧಿ – ಸದಸ್ಯರು
6. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಉಪ ಅಭಿವೃದ್ಧಿ ಅಧಿಕಾರಿ – ಸದಸ್ಯ ಕಾರ್ಯದರ್ಶಿ

ಸದರಿ ಸಮಿತಿಯು ಈ ಕೆಳಕಂಡ ಅಂಶಗಳ ಬಗ್ಗೆ ವರದಿಗಳನ್ನು ತಯಾರಿಸಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಸಲ್ಲಿಸುವುದು.

ಅ. ಗುರುತಿಸಲಾಗಿರುವ ಪ್ರದೇಶ ಕೈಗಾರಿಕಾ ಅಭಿವೃದ್ಧಿಗೆ ಸೂಕ್ತವೇ.
ಆ. ಪರಿಸರ ಮಾಲಿನ್ಯ.
ಇ. ಪ್ರದೇಶಕ್ಕೆ ನೀರಿನ ಸೌಕರ್ಯದ ಮೂಲಗಳು.
ಈ. ವಿದ್ಯುತ್ ಸೌಕರ್ಯ.
ಉ. ರಸ್ತೆ ಸಂಪರ್ಕ.
ಊ.ಕೈಗಾರಿಕಾ ಸ್ಥಾಪನೆಗೆ ಉದ್ದಿಮೆಗಳಿಂದ ಬೇಡಿಕೆ.
ಋ. ಯಾವ ಕೈಗಾರಿಕೆಗೆ ಉತ್ತೇಜನವಿರುತ್ತದೆ.
ಎ. ಭೂಮಾಲೀಕರ ಒಪ್ಪಿಗೆ.

ಜಂಟಿ ನಿರ್ದೇಶಕರುಗಳಿಗೆ ಅನ್ವಯವಾಗುವ ಜಿಲ್ಲೆಗಳು

ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಹಾವೇರಿ, ಧಾರವಾಡ, ಬೆಳಗಾವಿ, ಬಳ್ಳಾರಿ, ರಾಯಚೂರು, ಗುಲ್ಬರ್ಗಾ, ಬೀದರ

ಜಿಲ್ಲಾ ನಗರ ಯೋಜನಾ ಅಧಿಕಾರಿಗಳಿಗೆ ಅನ್ವಯವಾಗುವ ಜಿಲ್ಲೆಗಳು.

ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು ಚಿತ್ರದುರ್ಗ, ದಾವಣಗೆರೆ, ಹಾವೇರಿ, ಧಾರವಾಡ, ಬೆಳಗಾವಿ, ಬಳ್ಳಾರಿ, ರಾಯಚೂರು, ಗುಲ್ಬರ್ಗಾ, ಬೀದರ

ಅಭಿವೃದ್ಧಿ ಅಧಿಕಾರಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ರವರುಗಳಿಗೆ ಅನ್ವಯವಾಗುವ ಜಿಲ್ಲೆಗಳು.

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದಾವಣಗೆರೆ, ಧಾರವಾಡ, ಗುಲ್ಬರ್ಗಾ, ಹಾಸನ

ವಿಶೇಷ ಭೂಸ್ವಾಧೀನಾಧಿಕಾರಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ರವರುಗಳಿಗೆ ಅನ್ವಯವಾಗುವ ಜಿಲ್ಲೆಗಳು.

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಧಾರವಾಡ, ಮಂಗಳೂರು

ಕೈಗಾರಿಕಾ ಸಂಘದ ಪ್ರತಿನಿಧಿಗಳಿಗೆ ಅನ್ವಯವಾಗುವ ಜಿಲ್ಲೆಗಳು.

ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಹಾವೇರಿ, ಧಾರವಾಡ, ಬೆಳಗಾವಿ, ಬಳ್ಳಾರಿ, ರಾಯಚೂರು, ಗುಲ್ಬರ್ಗಾ, ಬೀದರ

ಉಪ ಅಭಿವೃದ್ಧಿ ಅಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ರವರುಗಳಿಗೆ ಅನ್ವಯವಾಗುವ ಜಿಲ್ಲೆಗಳು.
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಹಾವೇರಿ. ಧಾರವಾಡ, ಬೆಳಗಾವಿ, ಬಳ್ಳಾರಿ, ರಾಯಚೂರು, ಗುಲ್ಬರ್ಗಾ, ಬೀದರ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1207

ಅಪರ್ಣ ಪಾವಟೆ

ಪೀಠಾಧಿಕಾರಿ (ತಾಂತ್ರಿಕ ಕೋಶ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ: ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿ ಇದರ ಉನ್ನತೀಕರಣ-ಹುದ್ದೆಗಳ ಸೃಜನೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ:ಆಕುಕ 264 ಎಂಪಿಎಸ್ 2009 ದಿನಾಂಕ 29-03-2008

2. ಪತ್ರ ಸಂಖ್ಯೆ:ವಿಮ್ಸ್/ಜಿಎಸ್ಎಲ್- II/143/08-09 ದಿನಾಂಕ 29-12-2008.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಆದೇಶದನ್ವಯ ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿ ಇದರ ವಾರ್ಷಿಕ ಸ್ನಾತಕ(ಎಂಬಿಬಿಎಸ್) ದಾಖಲಾತಿ ಸಾಮರ್ಥ್ಯವನ್ನು 100 (ಒಂದು ನೂರು ಮಾತ್ರ) ಸೀಟುಗಳಿಂದ 150(ಒಂದು ನೂರು ಐವತ್ತು ಮಾತ್ರ) ಸೀಟುಗಳಿಗೆ ಹೆಚ್ಚಿಸಲು ಸಂಸ್ಥೆಯನ್ನು ರೂ: 25-00(ರೂಪಾಯಿ ಇಪ್ಪತ್ತೈದು ಕೋಟಿ ಮಾತ್ರ) ಕೋಟಿಗಳ ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲು ಮತ್ತು ಹಣವನ್ನು ಬಿಡುಗಡೆ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

ನಿರ್ದೇಶಕರು, ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿ ಈ ಸಂಸ್ಥೆಯಲ್ಲಿ ಎಂಬಿಬಿಎಸ್ ಕೋರ್ಸಿಗೆ 100 ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಹೊಂದಿದ್ದು ಇದನ್ನು 150 ವಿದ್ಯಾರ್ಥಿಗಳ ಸಾಮರ್ಥ್ಯಕ್ಕೆ ಹೆಚ್ಚಿಸಲು ಸಂಬಂಧ ಕೆಳಕಂಡ ಹುದ್ದೆಗಳನ್ನು ಸೃಜಿಸಲು ಕೋರಿರುತಾರೆ.

ಕ್ರ.ಸಂ.	ಹುದ್ದೆಯ ಹೆಸರು	ಸೃಜಿಸಬೇಕಾಗಿರುವ ಹುದ್ದೆಗಳು
1	ಪ್ರಾಧ್ಯಾಪಕರು - 1	ಡೆಂಟಿಸ್ಟ್ರಿ ವಿಭಾಗ-1
2	ಸಹ ಪ್ರಾಧ್ಯಾಪಕರು - 12	1. ಅನಾಟಮಿ-1 2. ಫಿಜಿಯಾಲಜಿ-1 3. ಪೇಥಾಲಜಿ-1 4. ಮೈಕ್ರೋಬಯಾಲಜಿ-1 5. ಫೊರೆನ್ಸಿಕ್ ಮೆಡಿಸಿನ್-1 6. ಜನರಲ್ ಮೆಡಿಸಿನ್-1 7. ಪೀಡಿಯಾಟ್ರಿಕ್ಸ್-2 8. ಜನರಲ್ ಸರ್ಜರಿ-1 9. ಆರ್ಥೋಪೆಡಿಕ್ಸ್-1 10. ರೇಡಿಯೋ ಡಯಾಗ್ನಿಸಿಸ್-1 11. ಡೆಂಟಿಸ್ಟ್ರಿ-1
3	ಸಹಾಯಕ ಪ್ರಾಧ್ಯಾಪಕರು - 10	1. ಅನಾಟಮಿ-1 2. ಪೇಥಾಲಜಿ-1 3. ಫಾರ್ಮಕಾಲಜಿ-1 4. ಕಮ್ಯುನಿಟಿ ಮೆಡಿಸಿನ್-2 5. ಪೀಡಿಯಾಟ್ರಿಕ್ಸ್-1 6. ಆರ್ಥೋಪೆಡಿಕ್ಸ್-1 7. ರೇಡಿಯೋ ಡಯಾಗ್ನಿಸಿಸ್-1 8. ಬಯೋಫಿಜಿಕ್ಸ್-1 9. ಎಪಿಡೆಮೊಲಜಿಸ್ಟ್-1
4	ಸೀನಿಯರ್ ರೆಸಿಡೆಂಟ್ - 1	ರೇಡಿಯೋ ಡಯೋಗ್ನೊಸಿಸ್ ವಿಭಾಗ-1

ಕ್ರ.ಸಂ.	ಹುದ್ದೆಯ ಹೆಸರು	ಸೃಜಿಸಬೇಕಾಗಿರುವ ಹುದ್ದೆಗಳು
5	ವಿಶೇಷ ಹುದ್ದೆಗಳು - 4	1. ಫಾರ್ಮಾಸ್ಯೂಟಿಕಲ್ ಕೆಮಿಸ್ಟ್-1 2. ಸ್ಟ್ಯಾಟಿಸ್ಟಿಯನ್-1 3. ಮೆಡಿಕೋ ಸೋಷಿಯಲ್ ವರ್ಕರ್ಸ್-2

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಮೇಲ್ಕಂಡ ಹುದ್ದೆಗಳನ್ನು ಸೃಜಿಸಲು ಸರ್ಕಾರವು ತೀರ್ಮಾನಿಸಿ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಶ 14 ಕೆವಿಎಂ 2009, ಬೆಂಗಳೂರು, ದಿನಾಂಕ: 25ನೇ ಏಪ್ರಿಲ್ 2009

ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿ ಈ ಸಂಸ್ಥೆಯ ಎಂಬಿಬಿಎಸ್ ವ್ಯಾಸಂಗದ ಪ್ರವೇಶ ಸಾಮರ್ಥ್ಯವನ್ನು 100 ರಿಂದ 150 ಸೀಟುಗಳಿಗೆ ಹೆಚ್ಚಿಸಲು ಕೆಳಕಂಡ ಹುದ್ದೆಗಳನ್ನು ಈ ಕೂಡಲೇ ಜಾರಿಗೆ ಬರುವಂತೆ ಸೃಜಿಸಲಾಗಿದೆ.

ಕ್ರ.ಸಂ.	ಹುದ್ದೆಯ ಹೆಸರು	ಸೃಜಿಸಬೇಕಾಗಿರುವ ಹುದ್ದೆಗಳು
1	ಪ್ರಾಧ್ಯಾಪಕರು - 1	ಡೆಂಟಿಸ್ಟ್ರಿ ವಿಭಾಗ-1
2	ಸಹ ಪ್ರಾಧ್ಯಾಪಕರು - 12	1. ಅನಾಟಮಿ-1 2. ಫಿಜಿಯಾಲಜಿ-1 3. ಪೇಥಾಲಜಿ-1 4. ಮೈಕ್ರೋಬಯಾಲಜಿ-1 5. ಫೊರೆನ್ಸಿಕ್ ಮೆಡಿಸಿನ್-1 6. ಜನರಲ್ ಮೆಡಿಸಿನ್-1 7. ಪೀಡಿಯಾಟ್ರಿಕ್ಸ್-2 8. ಜನರಲ್ ಸರ್ಜರಿ-1 9. ಆರ್ಥೋಪೆಡಿಕ್ಸ್-1 10. ರೇಡಿಯೋ ಡಯಾಗ್ನಿಸಿಸ್-1 11. ಡೆಂಟಿಸ್ಟ್ರಿ-1
3	ಸಹಾಯಕ ಪ್ರಾಧ್ಯಾಪಕರು - 10	1. ಅನಾಟಮಿ-1 2. ಪೇಥಾಲಜಿ-1 3. ಫಾರ್ಮಕಾಲಜಿ-1 4. ಕಮ್ಯುನಿಟಿ ಮೆಡಿಸಿನ್-2 5. ಪೀಡಿಯಾಟ್ರಿಕ್ಸ್-1 6. ಆರ್ಥೋಪೆಡಿಕ್ಸ್-1 7. ರೇಡಿಯೋ ಡಯಾಗ್ನಿಸಿಸ್-1 8. ಬಯೋಫಿಜಿಕ್ಸ್-1 9. ಎಪಿಡೆಮೋಲಜಿಸ್ಟ್-1
4	ಸೀನಿಯರ್ ರೆಸಿಡೆಂಟ್ - 1	ರೇಡಿಯೋ ಡಯೋಗ್ನೊಸಿಸ್ ವಿಭಾಗ-1
5	ವಿಶೇಷ ಹುದ್ದೆಗಳು - 4	1. ಫಾರ್ಮಾಸ್ಯೂಟಿಕಲ್ ಕೆಮಿಸ್ಟ್-1 2. ಸ್ಟ್ಯಾಟಿಸ್ಟಿಯನ್-1 3. ಮೆಡಿಕೋ ಸೋಷಿಯಲ್ ವರ್ಕರ್ಸ್-2

ಮೇಲ್ಕಂಡ ಹುದ್ದೆಗಳ ಸೃಜನೆಯು ಕೆಳಕಂಡ ಷರತ್ತುಗಳಿಗೊಳಪಟ್ಟಿರುತ್ತದೆ:

(1) ಈ ಹುದ್ದೆಗಳನ್ನು ನಿಯಮಾನುಸಾರ ತುಂಬತಕ್ಕದ್ದು.

(2) ಈ ಹುದ್ದೆಗಳನ್ನು ವಿವಿಧ ಹಂತಗಳಲ್ಲಿ ಅವುಗಳ ಅಗತ್ಯಕ್ಕೆ ಅನುಗುಣವಾಗಿ ಮಾತ್ರ ನೇಮಕಾತಿ ಮಾಡಿಕೊಳ್ಳತಕ್ಕದ್ದು

(3) ಈ ಹುದ್ದೆಗಳನ್ನು ಸೃಜನೆ ಮಾಡುವಾಗ ಸಂಸ್ಥೆಯು ಸಂಪನ್ಮೂಲಗಳ ಸಾಮರ್ಥ್ಯತೆಯನ್ನು ಹೆಚ್ಚಿಸಲು ಶುಲ್ಕ ಮತ್ತು ಬಳಕೆದಾರರ ಶುಲ್ಕಗಳನ್ನು ಸೂಕ್ತವಾಗಿ ಪರಿಷ್ಕರಿಸುವ ಸಾಧ್ಯತೆಗಳನ್ನು ಪರಿಶೀಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 332 ವೆಚ್ಚ 5/2009 ದಿನಾಂಕ 17.03.2009ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ವಿ. ಶ್ರೀರಾಮರೆಡ್ಡಿ
ಪಿ.ಆರ್. 1208 ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ: ಶ್ರೀ ಪಿ.ಎಸ್.ಇಟಕಂಪಳ್ಳಿ, ನಿರೂಪಣಾಧಿಕಾರಿ, ಸಹಾಯಕ ನಿರ್ದೇಶಕರ ಕಛೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್, ಇವರ ಅಮಾನತ್ತಿನ ಅವಧಿಯನ್ನು ಕ್ರಮಬದ್ಧಗೊಳಿಸುವ ಬಗ್ಗೆ –ಆದೇಶ

ಓದಲಾಗಿದೆ:
1. ಜಿಲ್ಲಾಧಿಕಾರಿಗಳು, ಬೀದರ್, ಕಛೇರಿಯ ಆದೇಶ ಸಂಖ್ಯೆ ಕಂ/ಸಿಬ್ಬಂದಿ/ಸಿ.ಆರ್/ಜಿಎ/2008–09/4770 ದಿ: 16–8–2008.
2. ಜಿಲ್ಲಾಧಿಕಾರಿಗಳು, ಬೀದರ್, ಕಛೇರಿಯ ಆದೇಶ ಸಂಖ್ಯೆ ಕಂ/ಸಿಬ್ಬಂದಿ/ಸಿ.ಆರ್/ಜಿಎ/2008–09/5598 ದಿ: 16–8–2008.
3. ಸರ್ಕಾರದ ಆದೇಶ ಸಂಖ್ಯೆ : ಮಮಇ460 ಎಸ್‌ಜೆಡಿ 2008 ದಿ: 23–12–2008
4. ಸರ್ಕಾರದ ಆದೇಶ ಸಂಖ್ಯೆ : ಮಮಇ460 ಎಸ್‌ಜೆಡಿ 2008 (ಭಾಗ–1) ದಿ: 03–01–2009
5. ಸರ್ಕಾರದ ಆದೇಶ ಸಂಖ್ಯೆ : ಮಮಇ460 ಎಸ್‌ಜೆಡಿ 2008 (ಭಾಗ–1) ದಿ: 18–03–2009
6. ಶ್ರೀ ಪಿ.ಎಸ್.ಇಟಕಂಪಳ್ಳಿ, ನಿರೂಪಣಾಧಿಕಾರಿಗಳು, ಸಹಾಯಕ ನಿರ್ದೇಶಕರ ಕಛೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್‌ರವರ ಮನವಿ ದಿ: 23–9–2009

ಪ್ರಸ್ತಾವನೆ:

ಬೀದರ್ ನಗರದಲ್ಲಿ ನಡೆಯುತ್ತಿರುವ ಅಂಗನವಾಡಿ ಕೇಂದ್ರಗಳ ಕಾರ್ಯನಿರ್ವಹಣೆ ಬಗ್ಗೆ ಸಾರ್ವಜನಿಕರಿಂದ ಹಾಗೂ ಚುನಾಯಿತ ಪ್ರತಿನಿಧಿಗಳಿಂದ ಅನೇಕ ಬಾರಿ ದೂರುಗಳು ಬಂದ ಹಿನ್ನೆಲೆಯಲ್ಲಿ, ಅಂಗನವಾಡಿ ಕೇಂದ್ರಗಳ ತಪಾಸಣೆಯನ್ನು ಹಿರಿಯ ಅಧಿಕಾರಿಗಳಿಂದ ನಡೆಸಿ ಕೇಂದ್ರಗಳ ತಪಾಸಣೆ ಬಳಿಕೆ ನ್ಯೂನತೆಗಳು ಇರುವುದು ವರದಿಯಾಗಿರುವ ಕುರಿತು ದಿ:16.8.2008 ರ ಜನಸ್ಪಂದನ ಸಮಿತಿ ಸಭೆಯಲ್ಲಿ ವಿವರವಾಗಿ ಚರ್ಚಿಸಿ ತಪಾಸಣೆ ತಂಡದವರ ಅಭಿಪ್ರಾಯದ ಪ್ರಕಾರ ಅಂಗನವಾಡಿ ಕೇಂದ್ರಗಳ ಕಾರ್ಯನಿರ್ವಹಣೆ ತೃಪ್ತಿಕರವಾಗಿಲ್ಲದಿರುವುದನ್ನು ಮನಗಂಡು, ಅನೇಕ ಅಂಗನವಾಡಿ ಕೇಂದ್ರಗಳಿಗೆ ವರ್ಷ ಕಳೆದರು ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ, ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ಮತ್ತು ಶ್ರೀ ಪಿ.ಎಸ್. ಇಟಕಂಪಳ್ಳಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಬೀದರ್, ಇವರುಗಳು ನಿಯಮಿತವಾಗಿ ಭೇಟಿ ನೀಡಿ ಮೇಲ್ವಿಚಾರಣೆ ಮಾಡದೆ ಇರುವುದರಿಂದ ಕಾರ್ಯಕ್ರಮವು ಒಂದು ಖೋಟಾ ಕಾರ್ಯಕ್ರಮವಾಗಿ ಪರಿಗಣಿಸಿದ್ದು, ಮಕ್ಕಳು ಹಾಗೂ ಸ್ತ್ರೀಯರಿಗಾಗಿ ರೂಪಿಸಿದ ಕಾರ್ಯಕ್ರಮವನ್ನು ಬುಡಮೇಲು ಮಾಡಿದಂತಾಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ, ಬೀದರ್‌ರವರು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿ: 16–8–2008 ರ ಆದೇಶದಲ್ಲಿ ಶ್ರೀ ರಾಮಕೃಷ್ಣ ಟಿ.ಪಡಗಣ್ಣನವರ, ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್, ಇವರುಗಳನ್ನು ಅಮಾನತ್ತುಗೊಳಿಸಿ ಆದೇಶ ಹೊರಡಿಸಿರುತ್ತಾರೆ.

ಜಿಲ್ಲಾಧಿಕಾರಿ, ಬೀದರ್ ರವರು ಅಮಾನತ್ತುಗೊಳಿಸಿ ಹೊರಡಿಸಿರುವ ದಿ: 16.08.2008 ರ ಆದೇಶವನ್ನು ಪ್ರಶ್ನಿಸಿ ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ, ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ರವರು ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ: 4069/2008 ರಲ್ಲಿ ಮೊಕದ್ದಮೆ ಹೂಡಿ, ಜಿಲ್ಲಾಧಿಕಾರಿ, ಬೀದರ್ ರವರು ಅಮಾನತ್ತುಗೊಳಿಸಿ ಹೊರಡಿಸಿರುವ ದಿ :16.8.2008 ರ ಆದೇಶವನ್ನು ರದ್ದುಗೊಳಿಸುವಂತೆ ಕೋರಲಾಗಿದ್ದು, ಸದರಿ ಪ್ರಕರಣವನ್ನು ಮಾನ್ಯ ನ್ಯಾಯಮಂಡಳಿಯು ದಿ: 13.10.2008 ರಂದು ವಿಚಾರಣೆ ನಡೆಸಿ ಶಿಸ್ತು ಪ್ರಾಧಿಕಾರವಲ್ಲದ ಹಾಗೂ ಜಿಲ್ಲಾಧಿಕಾರಿಗಳಿಗೆ ಗ್ರೂಪ್ 'ಎ' ಅಧಿಕಾರಿಯನ್ನು ಅಮಾನತ್ತುಗೊಳಿಸಲು ಅಧಿಕಾರವಿಲ್ಲದಿದ್ದರೂ ಸಹ ಜಿಲ್ಲಾಧಿಕಾರಿಗಳು, ಬೀದರ್‌ರವರು ದಿ: 16.8.2008 ರಂದು ಅಮಾನತ್ತುಗೊಳಿಸಿ ಹೊರಡಿಸಿರುವ ಆದೇಶವನ್ನು ಗಂಭೀರವಾಗಿ ಪರಿಗಣಿಸಿ ಜಿಲ್ಲಾಧಿಕಾರಿಗಳಿಗೆ ರೂ. 5,000/– ಗಳನ್ನು ದಂಡವನ್ನಾಗಿ ಪಾವತಿಸುವಂತೆ ಹಾಗೂ ಜಿಲ್ಲಾಧಿಕಾರಿಗಳು ಹೊರಡಿಸಿರುವ ಅಮಾನತ್ತಿನ ಆದೇಶವನ್ನು ರದ್ದುಪಡಿಸಿ ತೀರ್ಪನ್ನು ನೀಡಿರುತ್ತದೆ. ಮಾನ್ಯ ನ್ಯಾಯಮಂಡಳಿಯು ದಿ. 13.10.2008 ರಂದು ನೀಡಿರುವ ತೀರ್ಪನ್ನು ಕಾನೂನು ಕೋಶದ ಮುಖ್ಯಸ್ಥರು ಪರಿಶೀಲಿಸಿ ಸದರಿ ತೀರ್ಪು ಮೇಲ್ಮನವಿಗೆ ಅರ್ಹ ಪ್ರಕರಣವಲ್ಲವೆಂದು ತಿಳಿಸಿರುತ್ತಾರೆ. ಸರ್ಕಾರವು ಕರ್ನಾಟಕ ಆಡಳಿತ ನ್ಯಾಯಮಂಡಳಿಯ ದಿ: 13.10.2008 ರ ತೀರ್ಪು ಹಾಗೂ ಕಾನೂನು ಕೋಶದ ಮುಖ್ಯಸ್ಥರು ನೀಡಿರುವ ಅಭಿಪ್ರಾಯ ಹಾಗೂ ಪ್ರಕರಣದ ವಾಸ್ತವಾಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಮೇಲೆ

ಕ್ರಮ ಸಂಖ್ಯೆ (3) ರಲ್ಲಿ ಓದಲಾದ ದಿ: 23.12.2008 ರ ಆದೇಶದಲ್ಲಿ ಜಿಲ್ಲಾಧಿಕಾರಿಗಳು ಬೀದರ್ ರವರು ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ, ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ಇವರನ್ನು ಕಛೇರಿ ಆದೇಶ ಸಂಖ್ಯೆ: ಸಿಬ್ಬಂದಿ/ಸಿ.ಆರ್/ಜಿಎ/2008-09/4770 ದಿ: 16.08.2008 ರಂದು ಅಮಾನತ್ತಿಗೊಳಿಸಿ ಹೊರಡಿಸಿರುವ ಆದೇಶವನ್ನು ರದ್ದುಪಡಿಸಿ ಇವರ ವಿರುದ್ಧ ಇರುವ ಆರೋಪಗಳನ್ನು ಹಿಂಪಡೆದು ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಗೆ ಪುನರ್‌ಸ್ಥಾಪಿಸಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಗುಲ್ಬರ್ಗ ಇಲ್ಲಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಖಾಲಿ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿ ಅವರು ಇನ್ನು ಮುಂದೆ ಅವರ ಕಾರ್ಯನಿರ್ವಹಣೆಯಲ್ಲಿ ಎಚ್ಚರಿಕೆ ವಹಿಸುವಂತೆ ಅವರಿಗೆ ಒಂದು ಆಡಳಿತಾತ್ಮಕ ಎಚ್ಚರಿಕೆಯನ್ನು ನೀಡಿದೆ.

ಶ್ರೀ ಪಿ.ಎಸ್.ಇಟಕಂಪಳ್ಳಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಬೀದರ್, ಹಾಗೂ ಶ್ರೀ ರಾಮಕೃಷ್ಣ ಟಿ.ಪಡಗಣ್ಣನವರ, ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ಇವರುಗಳ ಪ್ರಕರಣ ಒಂದೇ ಆಗಿದ್ದು ಈ ಇಬ್ಬರು ಅಧಿಕಾರಿಗಳನ್ನು ಜಿಲ್ಲಾಧಿಕಾರಿ, ಬೀದರ್ ರವರು ಅಮಾನತ್ತಿಗೊಳಿಸಿದ್ದು, ಇವರುಗಳ ಪೈಕಿ ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ, ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ಇವರನ್ನು ಜಿಲ್ಲಾದಿಕಾರಿಗಳು, ಬೀದರ್ ರವರು ದಿನಾಂಕ: 16.8.2008 ರಂದು ಅಮಾನತ್ತುಗೊಳಿಸಿ ಆದೇಶವನ್ನು ರದ್ದು ಪಡಿಸಿ ಇವರ ವಿರುದ್ಧ ಇರುವ ಆರೋಪಗಳನ್ನು ಹಿಂಪಡೆದು ದಿ: 23.12.2008 ರಂದು ಆದೇಶ ಹೊರಡಿಸಿರುವ ಹಿನ್ನೆಲೆಯಲ್ಲಿ, ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ದಿ: 3.1.2009 ರ ಆದೇಶದಲ್ಲಿ ಜಿಲ್ಲಾಧಿಕಾರಿಗಳು, ಬೀದರ್ ರವರು ಶ್ರೀ ಪಿ.ಎಸ್.ಇಟಕಂಪಳ್ಳಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಬೀದರ್ ಇವರನ್ನು ಆದೇಶ ಸಂಖ್ಯೆ ಸಿಬ್ಬಂದಿ/ಜಿಎ/2008-09/5598 ದಿ: 16-08-2008 ರಲ್ಲಿ ಅಮಾನತ್ತುಗೊಳಿಸಿ ಹೊರಡಿಸಿರುವ ಆದೇಶವನ್ನು ರದ್ದುಪಡಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ದಿ:18.03.2009ರ ಆದೇಶದಲ್ಲಿ ಶ್ರೀ ಪಿ.ಎಸ್.ಇಟಕಂಪಳ್ಳಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಬೀದರ್ ಹಾಲಿ ನಿರೂಪಣಾಧಿಕಾರಿ, ಸಹಾಯಕ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಬೀದರ್ ಇವರ ವಿರುದ್ಧದ ಆರೋಪಗಳನ್ನು ಹಿಂಪಡೆದು ಸದರಿಯವರು ಇನ್ನು ಮುಂದೆ ಅವರ ಕಾರ್ಯನಿರ್ವಹಣೆಯಲ್ಲಿ ಎಚ್ಚರಿಕೆ ವಹಿಸುವಂತೆ ಸೂಚಿಸಿ ಒಂದು ಆಡಳಿತಾತ್ಮಕ ಎಚ್ಚರಿಕೆಯನ್ನು ನೀಡಿದೆ.

ಮೇಲೆ ಕ್ರಮ ಸಂಖ್ಯೆ (6) ರಲ್ಲಿ ಓದಲಾದ ದಿ: 20.03.2009 ರ ಮನವಿಯಲ್ಲಿ ಶ್ರೀ ಪಿ.ಎಸ್.ಇಟಕಂಪಳ್ಳಿ, ನಿರೂಪಣಾಧಿಕಾರಿಗಳು, ಸಹಾಯಕ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಬೀದರ್ ಅವರು ದಿ:01.09.2008 ರಿಂದ ಅವರು ಪುನಃ ದಿನಾಂಕ: 05.01.2009 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡ ಹಿಂದಿನ ದಿನಾಂಕದವರೆಗೆ ಅಂದರೆ ದಿನಾಂಕ: 04.01.2009 ರವರೆವಿಗೆ ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಕರ್ತವ್ಯದ ಅವಧಿಯೆಂದು ಪರಿಗಣಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಸರ್ಕಾರವು ಶ್ರೀ ಪಿ.ಎಸ್.ಇಟಕಂಪಳ್ಳಿ, ನಿರೂಪಣಾಧಿಕಾರಿಗಳು, ಸಹಾಯಕ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ಇವರ ಮನವಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಮಮಇ 460 ಎಸ್‌ಜಿಡಿ 2008, (ಭಾಗ-1), ಬೆಂಗಳೂರು ದಿನಾಂಕ: 30ನೇ ಏಪ್ರಿಲ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಪಿ.ಎಸ್.ಇಟಕಂಪಳ್ಳಿ, ನಿರೂಪಣಾಧಿಕಾರಿಗಳು, ಸಹಾಯಕ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೀದರ್ ಇವರು ದಿನಾಂಕ: 01.09.2008 ರಿಂದ ಇವರು ಪುನಃ ದಿನಾಂಕ: 05.01.2009 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡ ಹಿಂದಿನ ದಿನಾಂಕದವರೆಗೆ ಅಂದರೆ ದಿನಾಂಕ: 04.01.2009 ರ ವರೆಗೆ ಅಮಾನತ್ತಿಲ್ಲಿ ಕಳೆದ ಅವಧಿಯನ್ನು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ 100 (1) ರ ಅನ್ವಯ ಕರ್ತವ್ಯದಲ್ಲಿ ಕಳೆದ ಅವಧಿಯೆಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್. ನರಸಿಂಹಯ್ಯ

ಪಿ.ಆರ್. 1209

ಸರ್ಕಾರದ ಅಧೀನ ಕಾರ್ಯದರ್ಶಿ-2 (ಪ್ರಭಾರ),

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ವಿಷಯ: ಶ್ರೀ ಸಿ.ಪಿ.ರವೀಂದ್ರ ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಮಂಗಳೂರು ಗ್ರಾಮಾಂತರ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸುವ ಕುರಿತು ಆದೇಶ.

ಓದಲಾಗಿದೆ: 1. ಸಹಾಯಕ ಚುನಾವಣಾಧಿಕಾರಿಗಳು ಹಾಗೂ ಸಹಾಯಕ ಆಯುಕ್ತರು, ಮಂಗಳೂರು ರವರ ಕಛೇರಿಯು ಜಿಲ್ಲಾಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ರವರಿಗೆ ಹೆಸರಿಸಿರುವ ಪತ್ರ ಸಂಖ್ಯೆ ಇ.ಎಲ್.ಎನ್./ಸಿಆರ್.(3)/2009-2010 ದಿ.24-4-2009.

2. ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ರವರ ಕಛೇರಿಯ ಪತ್ರ ಸಂಖ್ಯೆ:ಇ.ಎಲ್.ಎನ್.(1) ಸಿ.ಆರ್./15/2008–09 ದಿ: 24–4–2009 ರ ಫ್ಯಾಕ್ಸ್ ಸಂದೇಶ.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿ: 24.4.2009ರ ಸಹಾಯಕ ಚುನಾವಣಾಧಿಕಾರಿಗಳು ಹಾಗೂ ಸಹಾಯಕ ಆಯುಕ್ತರು ಮಂಗಳೂರು ರವರ ಪತ್ರದಲ್ಲಿ 204 ಮಂಗಳೂರು ವಿಧಾನಸಭಾ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂಟ್ರೋಲ್ ರೂಂನಿಂದ ಮತಗಟ್ಟೆ ಸಂಖ್ಯೆ 41 ರ ಪಿ.ಎಲ್.ಓ ಆದ ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ ಶಶಿಕಲಾ ರವರಿಂದ ಮಾಹಿತಿ ಸಂಗ್ರಹಿಸುತ್ತಿರುವ ಸಂದರ್ಭದಲ್ಲಿ ಶ್ರೀಮತಿ ಶಶಿಕಲಾ, ಅಂಗನವಾಡಿ ಕಾರ್ಯಕರ್ತೆ ರವರ ಮೇಲಾಧಿಕಾರಿಯಾದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ರವರು ಅಂಗನವಾಡಿಗೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ಮೊದಲು ನಿರ್ವಹಿಸಿ ಚುನಾವಣಾ ಕೆಲಸ ಕಾರ್ಯಗಳನ್ನು ನಂತರ ನಿರ್ವಹಿಸಲು ಮತ್ತು ಚುನಾವಣಾ ಕೆಲಸ ನಿರ್ವಹಿಸಲು ನೀಡಿದ ಆದೇಶ ಒದಗಿಸಲು ತಿಳಿಸಿರುವುದಾಗಿ ಮಾಹಿತಿ ಸಂಗ್ರಹಿಸುತ್ತಿರುವ ಶ್ರೀಮತಿ ಚಂದ್ರಕಲಾ ರವರಲ್ಲಿ ಹೇಳಿಕೊಂಡಿರುತ್ತಾರೆಂದು, ಅಂಗನವಾಡಿ ಕಾರ್ಯಕರ್ತೆಯವರಿಗೆ ಸಿ.ಡಿ.ಪಿ.ಓ. ರವರಲ್ಲಿ ಈ ರೀತಿ ಒತ್ತಡ ಹೇರುತ್ತಿರುವುದರಿಂದ ಚುನಾವಣಾ ಕೆಲಸ ಕಾರ್ಯಗಳಿಗೆ ತೊಂದರೆಯಾಗುವ ಸಂದರ್ಭವಿರುವುದರಿಂದ, ಸಂಬಂಧಪಟ್ಟ ಗ್ರಾಮಾಂತರ ಶಿಶು ಅಭಿವೃದ್ಧಿ ಯೋಜನಾಧಿಕಾರಿರವರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಜಿಲ್ಲಾಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ರವರನ್ನು ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿ: 24.4.2009ರ ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ರವರ ಫ್ಯಾಕ್ಸ್ ಸಂದೇಶದಲ್ಲಿ ಸಹಾಯಕ ಚುನಾವಣಾಧಿಕಾರಿಗಳು, ಹಾಗೂ ಸಹಾಯಕ ಆಯುಕ್ತರು ಮಂಗಳೂರು ರವರ ಪ್ರಸ್ತಾವನೆಯಂತೆ, ಶ್ರೀ ಸಿ.ಪಿ. ರವೀಂದ್ರ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಇವರು ಚುನಾವಣೆ ಕೆಲಸಕ್ಕೆ ಆದ್ಯತೆ ನೀಡದೆ ಕರ್ತವ್ಯ ದುರ್ನಡತೆ ಎಸಗಿರುವುದರಿಂದ ಸದರಿಯವರನ್ನು ಅವರ ಮೇಲಿನ ಇಲಾಖಾ ವಿಚಾರಣೆಯನ್ನು ಬಾಕಿಯಿಟ್ಟು ಅವರನ್ನು ಕೂಡಲೇ ಸೇವೆಯಿಂದ ಅಮಾನತ್ತುಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ. ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ಇವರ ಪ್ರಸ್ತಾವನೆ/ಶಿಫಾರಸ್ಸನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ ಶ್ರೀ ಸಿ.ಪಿ.ರವೀಂದ್ರ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮಂಗಳೂರು ಗ್ರಾಮಾಂತರ ರವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅವರ ಮೇಲಿನ ಇಲಾಖಾ ವಿಚಾರಣೆಯನ್ನು ಬಾಕಿಯಿಟ್ಟು ಸೇವೆಯಿಂದ ಅಮಾನತ್ತುಗೊಳಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಮಮಇ 214 ಎಸ್‌ಜಿಡಿ 2009 ಬೆಂಗಳೂರು, ದಿನಾಂಕ: 28ನೇ ಏಪ್ರಿಲ್ 2009

ಮೇಲೆ ವಿವರಿಸಿರುವ ವಾಸ್ತವಾಂಶಗಳ ಹಿನ್ನಲೆಯಲ್ಲಿ, ಶ್ರೀ ಸಿ.ಪಿ.ರವೀಂದ್ರ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮಂಗಳೂರು ಗ್ರಾಮಾಂತರ ರವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅವರ ಮೇಲಿನ ಇಲಾಖಾ ವಿಚಾರಣೆಯನ್ನು ಬಾಕಿಯಿಟ್ಟು ಇವರನ್ನು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳು 1957 ರ ನಿಯಮ 10(1)(ಡಿ) ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿದೆ.

ಅಮಾನತ್ತಿನಲ್ಲಿನ ಅವಧಿಯಲ್ಲಿ ಸದರಿ ಅಧಿಕಾರಿಯು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳೂ 1957ರ ನಿಯಮ 98(1) ರನ್ವಯ ಜೀವನಾಂಶ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ. ಅಲ್ಲದೆ ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಯು ಲಿಖಿತ ಅನುಮೋದನೆ ಪಡೆಯದೇ ಕೇಂದ್ರ ಸ್ಥಾನ ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್. ನರಸಿಂಹಯ್ಯ

ಪಿ.ಆರ್. 1210

ಸರ್ಕಾರದ ಅಧೀನ ಕಾರ್ಯದರ್ಶಿ–2 (ಪ್ರಭಾರ),
ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಕೆ.ಎಸ್. ರವೀಂದ್ರಗೌಡ, ಸಹಾಯಕ ಸರ್ಕಾರಿ ಅಭಿಯೋಜಕರು, 3ನೇ ಅಧಿಕ ಸಿ.ಜೆ.ಎಂ. ನ್ಯಾಯಾಲಯ, ಮೈಸೂರು ಇವರ ವಿರುದ್ಧದ ಲೋಕಾಯುಕ್ತರ ಟ್ರ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಗೆ ಆದೇಶಿಸುವ ಕುರಿತು.

ಓದಲಾಗಿದೆ: ಉಪ ನಿಬಂಧಕರು ವಿಚಾರಣೆ–4, ಕರ್ನಾಟಕ ಲೋಕಾಯುಕ್ತ ಇವರ ಅರೆಸರ್ಕಾರಿ ಪತ್ರ ಸಂ: Compt/Uplok/Mys-717/2008/DRE-4, ದಿನಾಂಕ: 20.03.2009.

ಪ್ರಸ್ತಾವನೆ:

ಮೇಲೆ (i)ರಲ್ಲಿ ಓದಲಾದ ಅರೆಸರ್ಕಾರಿ ಪತ್ರದಲ್ಲಿ, ಶ್ರೀ ಬಷೀರ್ ಅಹಮದ್ ಖಾನ್‌ರ ದೂರಿನ ಮೇರೆಗೆ, ಶ್ರೀ ಕೆ.ಎಸ್. ರವೀಂದ್ರಗೌಡ, ಸಹಾಯಕ ಸರ್ಕಾರಿ ಅಭಿಯೋಜಕರು, 3ನೇ ಅಧಿಕ ಸಿ.ಜೆ.ಎಂ. ನ್ಯಾಯಾಲಯ, ಮೈಸೂರು ರವರನ್ನು ದಿನಾಂಕ:10.08.2005ರಂದು ಫಿರ್ಯಾದುದಾರರಿಂದ ರೂ.5000–00ಗಳನ್ನು ಲಂಚವನ್ನಾಗಿ ಸ್ವೀಕರಿಸುತ್ತಿದ್ದಾಗ, ಲೋಕಾಯುಕ್ತರ ವಿಚಾರಣಾ ತಂಡವು ಹಿಡಿದಿರುವುದರಿಂದ ಕರ್ನಾಟಕ ನಾಗರೀಕಾ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14(ಎ)ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಕ್ರಮಕೈಗೊಳ್ಳುವಂತೆ ಮಾನ್ಯ ಉಪ ಲೋಕಾಯುಕ್ತರು ಸರ್ಕಾರಕ್ಕೆ ಶಿಫಾರಸ್ಸನ್ನು ಮಾಡಿರುತ್ತಾರೆ.

ಈ ಹಿನ್ನಲೆಯಲ್ಲಿ ಪ್ರಸ್ತಾವನೆಯುನ್ನು ಕೂಲಂಕಷವಾಗಿ ಪರಿಶೀಲಿಸಿ ಆಪಾದಿತ ಸರ್ಕಾರಿ ಅಧಿಕಾರಿಯ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರು ಇವರಿಗೆ ವಹಿಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 200 ಪಿಪಿಇ 2009, ಬೆಂಗಳೂರು, ದಿನಾಂಕ: 2ನೇ ಮೇ 2009

ಪ್ರಸ್ತಾವನೆಯಲ್ಲಿರುವ ಅಂಶಗಳ ಹಿನ್ನಲೆಯಲ್ಲಿ, ಶ್ರೀ ಕೆ.ಎಸ್. ರವೀಂದ್ರಗೌಡ, ಸಹಾಯಕ ಸರ್ಕಾರಿ ಅಭಿಯೋಜಕರು, 3ನೇ ಅಧಿಕ ಸಿ.ಜೆ.ಎಂ. ನ್ಯಾಯಾಲಯ, ಮೈಸೂರು ಇವರ ವಿರುದ್ಧದ ಟ್ರ್ಯಾಪ್ ಪ್ರಕರಣಕ್ಕೆ ಸಂಬಂದಿಸಿದಂತೆ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–(ಎ)ರನ್ವಯ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರಿಗೆ ಸರ್ಕಾರವು ವಹಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಸಿ. ಸಿದ್ದಪ್ಪ

ಪಿ.ಆರ್. 1211

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ
(ಕಾ ಮತ್ತು ಸು ಹಾಗೂ ಕಾಫಿಪೋಸಾ ಮತ್ತು ಅಭಿಯೋಗಗಳು)

ವಿಷಯ: ಬಾಂಬ್ ಬ್ಲಾಸ್ಟ್ ಪ್ರಕರಣಗಳಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರಾಗಿ ನೇಮಕಗೊಂಡಿದ್ದ ಶ್ರೀ ಹೆಚ್.ಎನ್. ನಿಲೋಗಲ್, ವಕೀಲರು ಇವರಿಗೆ ಸಂಭಾವನೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಅಧಿಸೂಚನೆ ಸಂ: ಒಇ 510 ಪಿಪಿಇ 2005 ದಿನಾಂಕ: 27.05.2005.
2. ಸರ್ಕಾರದ ತಿದ್ದುಪಡಿ ಸಂ: ಒಇ 510 ಪಿಪಿಇ 2005 ದಿನಾಂಕ: 28.10.2005.
3. ಸರ್ಕಾರದ ಆದೇಶ ಸಂ: ಒಇ 614 ಪಿಪಿಇ 2005 ದಿನಾಂಕ: 18.08.2006.
4. ಸರ್ಕಾರದ ಆದೇಶ ಸಂ: ಒಇ 382 ಪಿಪಿಇ 2006 ದಿನಾಂಕ: 9.02.2007.
5. ಶ್ರೀ ಹೆಚ್.ಎನ್. ನಿಲೋಗಲ್, ವಿಶೇಷ ಸರ್ಕಾರಿ ಅಭಿಯೋಜಕರು ಇವರ ಪತ್ರ ದಿನಾಂಕ: 05.01.2009.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆ ದಿನಾಂಕ: 27.07.2005ರಲ್ಲಿ ಶ್ರೀ ಹೆಚ್.ಎನ್. ನಿಲೋಗಲ್, ವಕೀಲರು ಇವರನ್ನು ಬಾಂಬ್ ಬ್ಲಾಸ್ಟ್ ಪ್ರಕರಣಗಳಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರಾಗಿ ನೇಮಿಸಲಾಗಿತ್ತು.

ಮೇಲೆ (3) ರಲ್ಲಿ ಓದಲಾದ ಸರ್ಕಾರದ ಆದೇಶ ದಿನಾಂಕ: 18.08.2006ರಲ್ಲಿ ಅವರಿಗೆ ಈ ಕೆಳಗಿನಂತೆ ಸಂಭಾವನೆಯನ್ನು ನಿಗಧಿಗೊಳಿಸಲಾಗಿತ್ತು.

ರೀಡಿಂಗ್ ಫೀ	ರೂ.20,000/– (ಇಪ್ಪತ್ತು ಸಾವಿರ ರೂಪಾಯಿ ಮಾತ್ರ)
ಪರಿಣಾಮಕಾರಿ ವಿಚಾರಣೆ	ರೂ.3,000/– (ಎರಡು ಸಾವಿರ ರೂಪಾಯಿ ಮಾತ್ರ)
ಪರಿಣಾಮಕಾರಿಯಲ್ಲದ ವಿಚಾರಣೆ	ರೂ.1,000/– (ಒಂದು ಸಾವಿರ ರೂಪಾಯಿ ಮಾತ್ರ)

ಪ್ರಯಾಣ ಮತ್ತು ದಿನಭತ್ಯೆ: ಕ.ನಾ.ಸೇ.ನಿಯಮಗಳಲ್ಲಿ 1ನೇ ವರ್ಗದ ಅಧಿಕಾರಿಗಳಿಗೆ ಅನುಮತಿಸಿದ ದರದಲ್ಲಿ

ಮೇಲೆ (4)ರಲ್ಲಿ ಓದಲಾದ ಸರ್ಕಾರದ ಆದೇಶ ದಿನಾಂಕ: 9.02.2007ರಲ್ಲಿ ಶ್ರೀ ಹೆಚ್.ಎನ್. ನಿಲೋಗಲ್ ಇವರಿಗೆ ಅವರ ಕೋರಿಕೆಯಂತೆ ಮಧ್ಯಂತರ ಸಂಭಾವನೆಯನ್ನು ಪಾವತಿಸಲಾಗಿತ್ತು.

ಈಗ ಮೇಲೆ (5)ರಲ್ಲಿ ಓದಲಾದ ಪತ್ರ ದಿನಾಂಕ: 05.01.2009ರಲ್ಲಿ ಶ್ರೀ ಹೆಚ್.ಎನ್.ನಿಲೋಗಲ್ ಇವರು ಅಂತಿಮ ಬಿಲ್ಲುಗಳನ್ನು ಈ ಕೆಳಗಿನಂತೆ ಪಾವತಿ ಕೋರಿ ಸಲ್ಲಿಸಿದ್ದಾರೆ.

ಪ್ರಕರಣ ಸಂಖ್ಯೆ	ಪರಿಣಾಮಕಾರಿ ವಿಚಾರಣೆ	ಪರಿಣಾಮಕಾರಿಯಲ್ಲದ ವಿಚಾರಣೆ
ಎಸ್.ಸಿ.423/01	74	33
ಎಸ್.ಸಿ.580/03	79	28
ಎಸ್.ಸಿ.570/03	73	30
ಎಸ್.ಸಿ.696/05	73	29
ಒಟ್ಟು	294	120

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 532 ಪಿಪಿಇ 2008, ಬೆಂಗಳೂರು, ದಿನಾಂಕ: 29ನೇ ಏಪ್ರಿಲ್ 2009

ಬಾಂಬ್ ಬ್ಲಾಸ್ಟ್ ಪ್ರಕರಣಗಳಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರಾಗಿ ನೇಮಕಗೊಂಡಿದ್ದ ಶ್ರೀ ಹೆಚ್.ಎನ್. ನಿಲೋಗಲ್, ವಕೀಲರು ಇವರಿಗೆ ಪ್ರತಿಯೊಂದು ಪ್ರಕರಣಗಳಿಗೆ ಅಂತಿಮ ಬಿಲ್ಲುಗಳ ಸಂಭಾವನೆಯನ್ನು ಈ ಕೆಳಗಿನಂತೆ ಪಾವತಿಸಲು ಮಂಜೂರಾತಿ ನೀಡಲಾಗಿದೆ.

ಪ್ರಕರಣ ಸಂಖ್ಯೆ	ಪರಿಣಾಮಕಾರಿ ವಿಚಾರಣೆ	ಪರಿಣಾಮಕಾರಿಯಲ್ಲದ ವಿಚಾರಣೆ
ಎಸ್.ಸಿ.423/01	58	39
ಎಸ್.ಸಿ.580/03	57	41
ಎಸ್.ಸಿ.570/03	72	33
ಎಸ್.ಸಿ.696/05	72	34
	259x3,000=7,77,000/–	147x1,000=1,47,000
ಒಟ್ಟು	ರೂ.9,24,000/– (ಒಂಬತ್ತು ಲಕ್ಷದ ಇಪ್ಪತ್ನಾಲ್ಕು ಸಾವಿರ ರೂಪಾಯಿ ಮಾತ್ರ)	

ಇದಕ್ಕೆ ತಗಲುವ ವೆಚ್ಚವನ್ನು "ಲೆಕ್ಕಶೀರ್ಷಿಕೆ 2014–ನ್ಯಾಯಾಡಳಿತ–114–ಲೀಗಲ್ ಅಡ್ವೈಸರ್ಸ್ ಅಂಡ್ ಕೌನ್ಸಿಲ್–01–ಅಡ್ವೋಕೇಟ್ ಜನರಲ್ (Payment for Professional and Special Services in the budget)" ರಡಿಯಲ್ಲಿ ಭರಿಸತಕ್ಕದ್ದು.

ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಆಇ 324 ವೆಚ್ಚ–7/2006 ದಿನಾಂಕ:17.5.2006ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಕೆ.ಸಿ. ಸಿದ್ದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ
(ಕಾ ಮತ್ತು ಸು ಹಾಗೂ ಕಾಫಿಪೋಸಾ ಮತ್ತು ಅಭಿಯೋಗಗಳು)

ಪಿ.ಆರ್. 1212

FOREST, ECOLOGY AND ENVIRONMENT SECRETARIAT

Sub: Diversion of 0.40 ha. of forest land in Dubare Reserve Forest for construction of Government School building in Kushalnagar Range, Madikeri in favour of the Deputy Director of Public Instruction, Kodagu, Madikeri.

Read: 1. Letter No. A5(3)GFI CR.20/07-08 dated: 30/04/2008 of the Principal Chief Conservator of Forests, Bangalore.

Preamble:

The Principal Chief Conservator of Forests, Bangalore vide his letter dated: 30.04.2008 read at above has submitted the proposal to obtain the approval under Section 2 of the Forest (Conservation) Act, 1980 for diversion of 0.40 ha. of forest land in Dubare Reserve Forest for construction of Government school building in Kushalnagar Range, Madikeri in favour of the Deputy Director of Public Instruction, Kodagu, Madikeri.

The proposal has been examined in detail and hence the order.

Government Order No. FEE 109 FLL 2008, Bangalore, Dated: 6th April 2009

In the circumstances explained in the preamble above, Government are pleased to accord sanction under section (2) of Forest (Conservation) Act 1980 for diversion of 0.40 ha. of forest land in Dubare Reserve Forest for construction of Government school building in Kushalnagar Range, Madikeri in favour of the Deputy Director of Public Instruction, Kodagu, Madikeri subject to the following conditions

1. The legal status of forest land shall remain unchanged.
2. The land shall be utilized only for the purpose for which it is released.
3. If the land is not required for the purpose for which it is granted the same should be resumed back to the Forest Department by the Conservator of Forests under section 82 of Karnataka Forest Act, 1963.
4. The user agency has to pay the lase rent as fixed by the Government at the time of sanction and any subsequent orders in this regard.
5. The lease is granted for thirty (30) years.
6. The Karnataka Forest Act, 1963 and Rules, 1969 will be applicable for any violation.
7. Any other conditions to be imposed by the Government of India/Government of Karnataka /Principal Chief Conservator of Forests will be abided by the lessee.

By Order and in the name of Governor of Karnataka,

H.M. MALLIKARJUNA SWAMY

P.R. 1213

Under Secretary to Government,
Forest, Ecology and Environment Department.

ಕಂದಾಯ ಸಚಿವಾಲಯ

ವಿಷಯ: ಶ್ರೀ ಆರ್.ಡಿ. ಪಾಟೀಲ್, ಹಿಂದಿನ ತಹಶೀಲ್ದಾರ್, ಚಿಕ್ಕೋಡಿ, ಪ್ರಸ್ತುತ ನಿವೃತ್ತರು ಇವರ ವಿರುದ್ಧ ಇಲಾಖಾ ವಿಚಾರಣೆ ಜರುಗಿಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿಕೊಡುವ ಬಗ್ಗೆ.

ಓದಲಾಗಿದೆ: ಉಪ ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ಇವರ ಅ.ಸ.ಪತ್ರ ಸಂ: ಕಂಪ್ಲೇಂಟ್/ಉಪಲೋಕ್/ಬಿಜಿಎಂ–1343/06, ಎಆರ್ಎಲ್ಒ–4, ದಿನಾಂಕ: 22.12.2008.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದೊಂದಿಗೆ ಉಪ ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ಇವರು ಚಿಕ್ಕೋಡಿ ತಾಲ್ಲೂಕಿನ ಅಂದಿನ ತಹಶೀಲ್ದಾರರಾದ ಶ್ರೀ ಆರ್.ಡಿ.ಪಾಟೀಲ್, ಇವರ ವಿರುದ್ಧ ಶ್ರೀ ಮಾಳಪ್ಪ ಸಿದ್ರಾಮ ಹಡಕರ್ ಇವರು ಮಾನ್ಯ ಲೋಕಾಯುಕ್ತರಿಗೆ ಸಲ್ಲಿಸಿರುವ ದೂರಿನ ಬಗ್ಗೆ ಪ್ರಾಥಮಿಕ ವಿಚಾರಣೆ ನಡೆಸಿ, ಮಾನ್ಯ ಉಪಲೋಕಾಯುಕ್ತರು ನೀಡಿರುವ ವರದಿಯನ್ನು ಕಳುಹಿಸಿ ವರದಿಯ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ.

ಸದರಿ ವರದಿಯನ್ನು ಪರಿಶೀಲಿಸಲಾಗಿದೆ. ಶ್ರೀ ಮಾಳಪ್ಪ ಸಿದ್ರಾಮ ಹಡಕರ್, ಅಕ್ಕೋಳ ಪೋಸ್ಟ್, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಮಾನ್ಯ ಲೋಕಾಯುಕ್ತರಿಗೆ ಶ್ರೀ ಆರ್.ಡಿ. ಪಾಟೀಲ್, ಹಿಂದಿನ ತಹಶೀಲ್ದಾರ್, ಚಿಕ್ಕೋಡಿ ತಾಲ್ಲೂಕು ಇವರ ವಿರುದ್ಧ ದೂರು ನೀಡಿರುತ್ತಾರೆ. ಕಾರಣ ಅರ್ಜಿದಾರರಾದ ಶ್ರೀ ಮಾಳಪ್ಪ ಸಿದ್ರಾಮ ಹಡಕರ್, ಇವರು ಶ್ರೀ ಚೇತನ್ ಈರಣ್ಣ ಸ್ವಾಮಿ ಇವರು ಶಾಲಾ ದಾಖಲಾತಿ ಪ್ರಕಾರ ಹಿಂದು–ಲಿಂಗಾಯುತ ಜಾತಿಗೆ ಸೇರಿದವರಾಗಿದ್ದು, ಜಿಲ್ಲಾ ಪರಿಷತ್ ಚುನಾವಣೆ ಸಂದರ್ಭದಲ್ಲಿ 'ಹಿಂದು–ಗುರುವ' ಜಾತಿಗೆ ಸೇರಿದವರೆಂದು ಸುಳ್ಳು ಜಾತಿ ದೃಢೀಕರಣ ಪತ್ರವನ್ನು ನೀಡಲಾಗಿದೆ. ಈ ರೀತಿ ಜಾತಿ ಪ್ರಮಾಣ ಪತ್ರದ ಬಗ್ಗೆ ವಿಚಾರಣೆ ಮಾಡದೇ, ಖೋಟಾ ಸರ್ಟಿಫಿಕೇಟ್ ನೀಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

ಈ ಹಿನ್ನಲೆಯಲ್ಲಿ, ಅರ್ಜಿದಾರರಾದ ಶ್ರೀ ಮಾಳಪ್ಪ ಸಿದ್ರಾಮ ಹಡಕರ್, ಚಿಕ್ಕೋಡಿ ತಾಲ್ಲೂಕು ಇವರು ತಹಶೀಲ್ದಾರರಾದ ಶ್ರೀ ಆರ್.ಡಿ. ಪಾಟೀಲ್ ಇವರ ವಿರುದ್ಧ ಮಾನ್ಯ ಲೋಕಾಯುಕ್ತರಿಗೆ ದೂರು ಸಲ್ಲಿಸಿರುತ್ತಾರೆ ಹಾಗೂ ಈ ರೀತಿ ಕರ್ತವ್ಯಚ್ಯುತಿ ಎಸಗಿರುವ ಸದರಿ ಅಧಿಕಾರಿಯವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಕಾಯಿದೆ ಅಧಿನಿಯಮ 12(3) ರನ್ವಯ ಶಿಫಾರಸ್ಸು ಮಾಡಿರುತ್ತಾರೆ ಹಾಗೂ ಅಂತಹ ಕ್ರಮಗಳನ್ನು ಕೈಗೊಂಡ ಬಗ್ಗೆ ಸದರಿ ಕಾಯಿದೆಯ 12(4)ರನ್ವಯ 3 ತಿಂಗಳೊಳಗೆ ಮಾನ್ಯ ಲೋಕಾಯುಕ್ತರಿಗೆ ಮಾಹಿತಿ ನೀಡುವಂತೆ ಕೋರಿರುತ್ತಾರೆ.

ತನಿಖಾ ವರದಿಯಲ್ಲಿನ ಶಿಫಾರಸ್ಸನ್ನು ಪರಿಶೀಲಿಸಿದ ಸರ್ಕಾರವು ಈ ಪ್ರಕರಣದಲ್ಲಿ ಆರೋಪಿತರೆಂದು ಹೇಳಲಾಗಿರುವ ಶ್ರೀ ಆರ್.ಡಿ. ಪಾಟೀಲ್, ಹಿಂದಿನ ತಹಶೀಲ್ದಾರ್, ಚಿಕ್ಕೋಡಿ ತಾಲ್ಲೂಕು, ಪ್ರಸ್ತುತ ನಿವೃತ್ತರು ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1957ರ ನಿಯಮ 214ನ್ನು ಓದಿಕೊಂಡು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 14(ಎ)ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರು, ಬೆಂಗಳೂರು ಇವರಿಗೆ ವಹಿಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ: ಕಂಇ 02 ಎಡಿಇ 2009, ಬೆಂಗಳೂರು, ದಿನಾಂಕ: 30ನೇ ಏಪ್ರಿಲ್ 2009

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳಿಂದ ಶ್ರೀ ಆರ್.ಡಿ. ಪಾಟೀಲ್, ಹಿಂದಿನ ತಹಶೀಲ್ದಾರ್, ಚಿಕ್ಕೋಡಿ ತಾಲ್ಲೂಕು (ಪ್ರಸ್ತುತ ನಿವೃತ್ತರು) ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214ರಲ್ಲಿ ಪ್ರದತ್ತವಾದ ಅಧಿಕಾರಗಳಂತೆ ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ) ನಿಯಮಾವಳಿಗಳ ನಿಯಮ 11ಎ ರನ್ವಯ ಕೂಲಂಕಷ ವಿಚಾರಣೆ ನಡೆಸುವ ಸಲುವಾಗಿ ಸದರಿ ನಿಯಮಾವಳಿಯ ನಿಯಮ 14(ಎ)ರ ಅಡಿಯಲ್ಲಿ ವಿಚಾರಣೆ ಕೈಗೊಳ್ಳಲು ಮಾನ್ಯ ಉಪಲೋಕಾಯುಕ್ತರು, ಬೆಂಗಳೂರು ಇವರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1214 **ಬಿ.ವಿ. ಚೌಕಿಮಠ**

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಸೇವೆಗಳು–3)

ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ತಿದ್ದುಪಡಿ

ಸಂಖ್ಯೆ:ಕಸಂವಾಪ್ರ:4ಪ್ರವಾನಿ:2009, ಬೆಂಗಳೂರು, ದಿನಾಂಕ: 5ನೇ ಮೇ 2009

ಸರ್ಕಾರದ ಅಧಿಸೂಚನೆ ಸಂಖ್ಯೆ:ಕಸಂವಾಪ್ರ 4 ಪ್ರವಾನಿ 2009, ದಿನಾಂಕ:11.02.2009ರ ಅಧಿಸೂಚನೆಯ ಐದನೇ ಪಂಕ್ತಿಯಿಂದ ತಾಜ್ ಕರ್ನಾಟಕ ಹೋಟೆಲ್ ಮತ್ತು ರೆಸಾರ್ಟ್ಸ್ ಸಂಸ್ಥೆಯ ನಿರ್ದೇಶಕರ ಮಂಡಳಿಗೆ ಎಂಬ ಪದಗಳ ನಂತರ "ಶ್ರೀ ಅನಿಲ್ ಕುಮಾರ್ ಝಾ, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ) ಇವರ ಸ್ಥಾನದಲ್ಲಿ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್. ನಾರಾಯಣಪ್ಪ

ಪಿ.ಆರ್. 1216 ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಸೇವೆಗಳು–3)

FOREST, ECOLOGY AND ENVIRONMENT SECRETARIAT

Sub: Diversion of 2.56 ha. of forest land for development of 15 MW Mini Hydel Scheme in Sy.No.66 of Jarkala Villae, Karkala Taluk across Yennehole Stream in Udupi District in favour of M/s GVP Infra Projects Private Limited, Bangaore.

Read:
1. Letter No.A5(3)GFL.CR.07/07-08, Dated: 13.03.2008 of Principal Chief Conservator of Forests, Bangalore.
2. State Government letter No. FEE 67 FLL 2008, dated: 28.03.2008.
3. Letter No. 4-KRB486/2008/BAN/2243, dated: 09.04.2008 of Government of India, Ministry of Environment and Forests, Regional Office, Southern Zone, Bangalore.
4. Letter No. A5(3)GFL.CR.7/07-08, Dated:16.10.2008 of Principal Chief Conservator of Forests, Bangalore.
5. State Government letter No. FEE 67 FLL 2008, dated: 31.03.2009.
6. Letter No.4-KRB486/2008-BAN/4287, dated: 20.04.2009 of Government of India, Ministry of Environment and Forests, Regional Office, Southern Zone, Bangalore.

Preamble:

The Principal Chief Conservator of Forests, Bangalore vide his letter dated:13.03.2008 read at (1) above has submitted the proposal to obtain the approval of Government of India under Section 2 of the Forest (Conservation) Act, 1980 for diversion of 2.56 ha. of deemed forest land in Sy.No.66 of Jarkala Village, Karkala Taluk across Yennehole Stream in Udupi District for development of 15 MW Mini Hydel Scheme in favour of M/s GVP Infra Projects Private Limited, Bangalore subject to certain conditions.

Accordingly the proposal was recommended to Government of India vide State Government letter date 28.03.2008 read at (2) above.

The Government of India, Ministry of Environment and Forests, Regional office, Bangalore vide their letter dated 09.04.2008 read at (3) above has given its approval in Principle (Stage-I) for diversion of

2.56 ha. of forest land subject to fulfillment of certain conditions and the same was communicated to the Principal Chief Conservator of Forests, Bangalore for compliance.

The Principal Chief Conservator of Forests, Bangalore vide his letter dated: 16.10.2008 furnished the compliance report read at (4) above and the same has been sent to Government of India vide State Government letter dated: 31.03.2008 read at (5) above.

Government of India Ministry of Environment and Forests, Regional Office, South Zone, Bangalore vide their letter dated 29/04/2009 read at (6) above has conveyed its approval (Stage-II) under Section 2 of the Forest (Conservation) Act, 1980 for diversion of 2.56 ha. of deemed forest land in Sy.No.66 of Jarkala Village, Karkala Taluk across Yennehole Stream in Udupi District for development of 15 MW Mini Hydel Scheme in favour of M/s GVP Infra Projects Private Limited, Bangalore subject to certain conditions.

The proposal has been examined in detail and hence the order.

Government Order No. FEE 67 FLL 2008, Bangalore, Dated: 6th May 2009

In the circumstances explained in the preamble above, Government are pleased to accord sanction under Section 2 of the Forest (Conservation) Act, 1980 for diversion of 2.56 ha. of deemed forest land in Sy.No.66 of Jarkala Village, Karkala Taluk across Yennehole Stream in Udupi District for development of 15 MW Mini Hydel Scheme in favour of M/s GVP Infra Projects Private Limited, Bangalore subject to the following conditions:-

1. The legal Status of the forest land shall remain unchanged.
2. The Compensatory Afforestation shall be raised over 5.12 ha.of degraded forest land at the cost of user agency.
3. The Catchment Area Treatment Plan shall be executed at the cost of user agency as per the plan under supervision of State Forest Department.
4. The funds received from the user agency towards Net Present Value and Catchment Area Treatment Plan and Compensatory afforestation under this project shall be transferred to Ad-hoc CAMPA in account number CA 1582 of Corporation Bank, Block-II, CGO Complex, Phase-I, Lodhi Road, New Dehi-110 003.
5. The additional amount of the Net Present Value (NPV) of the diverted forest land if any, due as per the orders of the Hon'ble Supreme Court dated: 28.03.2008 and 09.05.2008 in IA Nos. 826 in 566 with related IA's in W.P.(Civil) No.202/1995 shall be realised from the user agency and transferred to Ad-hoc CAMPA in account number CA-1582 of Corporation Bank, Block-II, CGO Complex, Phase-I, Lodhi Road, New Delhi-110 003 under intimation to the Government of India.
6. Adequate fire protection measures, measures, including employment of fire watchers and maintenance of the fire line, etc., shall be undertaken by the user agency in and around the project area at its own cost.
7. The total forest are utilised for the project shall not exceed 2.56 ha. The forest area shall be utilised only for the purpose for which it is diverted. In case the land is not taken over by the user agency or the same is not used for the stipulated purpose within a period of two years, then the area shall be taken back by the Forest Department.
8. The lease period is for a period of 20 years.
9. The user agency has to pay the lease rent as fixed by the Government at the time of sanction and any subsequent orders in this regard.
10. The Karnataka Forest Act 1963 and Rules 1969 will be applicable for any violation.
11. If the land is not utilized for the purpose with in 2 years, and also is any violation is found of the stipulated conditions, the forest land shall be forfeited to Department after due approval from

Government by the Conservator of Forests under section 82 of (read with section 69 of Karnataka Forest Rules) of the Karnataka Foest Act 1963.

12. Only minimum number of trees shall be cut based on actual requirement for laying the KV line.
13. The user agency shall pay the extraction and transportation charges of trees as estimated by the Deputy Conservator of Forests from the proposed land.
14. The user agency shall pay the cost of raising compensatory afforestation over an extent of 5.25 ha. of forest land at the rate prevailing at the time of approval (at present it is Rs. 84,000.00 per ha.)
15. The user agency shall pay the Net present vaue (NPV) as per the Government Notification dated: 17.1.2004 at Rs.5.80 lakhs to Rs. 9.20 lakhs per ha. depending upon the quantity and density of the land as determined by the Deputy Conservator of Forests, Kundapur Division, Kundapur.
16. Any other condition imposed by the Government of India/Government of Karnataka and Principal Chief Conservator of Forests will have to be abided by the lessee.

By Order and in the name of Governor of Karnataka,

H.M. MALLIKARJUNA SWAMY

P.R. 1217

Under Secretary to Government,

Forest, Ecology and Environment Department.

ಕನ್ನಡ ಮತ್ತು ಸಂಸ್ಕೃತಿ ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ತಿದ್ದೋಲೆ

ಸಂಖ್ಯೆ: ಕಸಂವಾಪ್ರ 159 ಸ್ವೀಮರ 2008, ಬೆಂಗಳೂರು, ದಿನಾಂಕ: 4ನೇ ಮೇ 2009

ಸಚಿವಾಲಯದ ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗೆ ವಾರ್ಷಿಕವಾಗಿ ಬೇಕಾಗುವ ಲೇಖನ ಸಾಮಗ್ರಿ ಮತ್ತು ಪೀಠೋಪಕರಣಗಳ ಖರೀದಿಯ ಬಗ್ಗೆ ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ ಕಸಂವಾಪ್ರ 159 ಸ್ವೀಮರ 2008 ದಿನಾಂಕ: 19.03.2009 ಮತ್ತು 04.04.2009ರ ಆದೇಶ ಭಾಗದಲ್ಲಿ ನಮೂದಿಸಿಲಾದ ಈ ಕೆಳಕಂಡ ವಾಕ್ಯವನ್ನು ಆದೇಶ ಹೊರಡಿಸಿದ ದಿನದಿಂದಲೇ ಜಾರಿಗೆ ಬರುವಂತೆ ತೆಗೆದು ಹಾಕಲಾಗಿದೆ.

"ಈ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 6 ಡಿಎಸ್‌ವೈ 2008 ದಿನಾಂಕ: 10.10.2008ರಲ್ಲಿ ತಿಳಿಸಿರುವ"

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಕೆ. ಧರ್ಮರಾಜಪ್ಪ

ಪಿ.ಆರ್. 1218

ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ)

ವಸತಿ ಸಚಿವಾಲಯ

ವಿಷಯ: ನಿರ್ಮಲಜ್ಯೋತಿ ಯೋಜನೆಯಡಿಯಲ್ಲಿ ದಾವಣಗೆರೆ ನಗರದ ಕೊಳಚೆ ಪ್ರದೇಶಗಳಲ್ಲಿ ಉನ್ನತೀಕರಣ ಮತ್ತು ಅಭಿವೃದ್ಧಿ ಪಡಿಸುವ ಕಾಮಗಾರಿಗಳಲ್ಲಿ ವರ್ಕ್‌ಸ್ಲಿಪ್‌ಗೆ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಮತ್ತು ತಿದ್ದುಪಡಿ ಸಂಖ್ಯೆ:ವಇ 23 ಕೊಮಂಲೆ 04, ದಿನಾಂಕ: 19.10.2006.

2. ಆಯುಕ್ತರು, ಕಕೊನಿಮ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಕೊನಿಮ/ಆಯುಕ್ತರು/ನಿಜ್ಯೋ/ದಾವಣಗೆರೆ/2008-09/1016, ದಿನಾಂಕ:27.02.2009.

ಪ್ರಸ್ತಾವನೆ:

ಮೇಲೆ ಉಲ್ಲೇಖ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ದಾವಣಗೆರೆ ನಗರದ ವ್ಯಾಪ್ತಿಯಲ್ಲಿ ಬರುವ ಕೊಳಚೆ ಪ್ರದೇಶಗಳಲ್ಲಿನ ಕೊಳಚೆ ನಿವಾಸಿಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ನಿರ್ಮಲಜ್ಯೋತಿ ಯೋಜನೆಯಡಿಯಲ್ಲಿ ರೂ.322.81 ಲಕ್ಷಗಳು ಸಕ್ರಮ ಪ್ರಾಧಿಕಾರದಿಂದ ತಾಂತ್ರಿಕ ಹಾಗೂ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಈ ಕಾಮಗಾರಿಯನ್ನು ನಿರ್ವಹಿಸಲು ಟೆಂಡರ್ ಕರೆಯಲಾಗಿ ರೂ.333.51 ಲಕ್ಷಗಳಿಗೆ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ಟೆಂಡರ್ ಅಧಿಸೂಚನೆ ದಿನಾಂಕ: 14.03.2006ರಲ್ಲಿ ಟೆಂಡರ್ ಷೆಡ್ಯೂಲ್‌ಗಳ ಷರತ್ತುಗಳಂತೆ ಕಾಮಗಾರಿಗಳನ್ನು ನಿರ್ವಹಿಸಲು ಗುತ್ತಿಗೆದಾರರಾದ ಮೆ: ಪ್ರಕಾಶ್ ಕನ್‌ಸ್ಟ್ರಕ್ಷನ್ ಇವರಿಗೆ ನೀಡಲು ಸರ್ಕಾರ ಮಂಜೂರಾತಿ ನೀಡಿರುತ್ತದೆ.

ಮೇಲೆ ಕ್ರಮ ಸಂಖ್ಯೆ 2ರಲ್ಲಿ ಓದಲಾದ ಆಯುಕ್ತರು, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಇವರ ಪ್ರಸ್ತಾವನೆಯಲ್ಲಿ ನಿರ್ಮಲ ಜ್ಯೋತಿ 2ನೇ ಹಂತದಲ್ಲಿ ದಾವಣಗೆರೆ ನಗರದ 14 ಕೊಳಚೆ ಪ್ರದೇಶಗಳಲ್ಲಿ ಸಮಗ್ರವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ರೂ. 333.51 ಲಕ್ಷಗಳಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದ್ದು, ಪ್ರಾಯೋಜನಾ ವ್ಯವಸ್ಥಾಪಕರು (ತಾಂ) ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ದಾವಣಗೆರೆ ವಿಭಾಗದವರು ಕಾಮಗಾರಿಯು ಪ್ರಗತಿಯಲ್ಲಿರುವಂತೆ ಟೆಂಡರ್ ಷೆಡ್ಯೂಲ್–ಬಿ ನಲ್ಲಿರುವ ಕೆಲವು ಕಾಮಗಾರಿಗಳ ಪರಿಮಾಣಗಳಲ್ಲಿ ಅಗತ್ಯಕ್ಕೆ ಮತ್ತು ಸ್ಥಳಕ್ಕನುಗುಣವಾಗಿ ಸಿ.ಸಿ. ನೆಲಹಾಸು, ಸಿ.ಸಿ.ಬ್ಲಾಕ್ ಚರಂಡಿ ಹಾಗೂ ಮಣ್ಣುಸಾಗಣೆ ನಿರ್ಮಾಣದಲ್ಲಿ ಹೆಚ್ಚುವರಿ ಪರಿಮಾಣಗಳನ್ನು ನಿರ್ವಹಿಸಬೇಕಾಗಿದ್ದರಿಂದ ಪ್ರಸ್ತಾಪಿತ ಹೆಚ್ಚುವರಿ ಕಾಮಗಾರಿಗಳನ್ನು ಇಲ್ಲಿನ ಜನಪ್ರತಿನಿಧಿಗಳು ಹಾಗೂ ಕೊಳಚೆ ನಿವಾಸಿಗಳ ಒತ್ತಾಯದ ಹಿನ್ನಲೆಯಲ್ಲಿ ದಿನಾಂಕ:19.12.2007ರಂದು ಪ್ರಾಯೋಜನ ವ್ಯವಸ್ಥಾಪಕರು, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ದಾವಣಗೆರೆ ರವರು ಪ್ರಸ್ತಾಪಿತ ಕಾಮಗಾರಿಗಳ ಸ್ಥಳದ ಅಗತ್ಯತೆಗಳಿಗನುಗುಣವಾಗಿ ಕಾಮಗಾರಿಗಳಲ್ಲಿ ಹೆಚ್ಚುವರಿ ಮತ್ತು ಕಡಿಮೆ ಪರಿಮಾಣಗಳು ಅಥವಾ ಬದಲಾವಣೆಗಳು ಆಗಿರುವ ಬಗ್ಗೆ ಸ್ಥಳಪರಿಶೀಲನೆ ವರದಿ ಮಾಡಿರುತ್ತಾರೆ. ಅದರಂತೆ ಪ್ರಸ್ತುತ ತಯಾರಿಸಿರುವ ರೂ. 1,58,42,640/– ರ ವರ್ಕ್‌ಸ್ಲಿಪ್‌ನ ಮೊತ್ತವು ಅಂದಾಜು ಮೊತ್ತ ರೂ.322.88 ಲಕ್ಷಗಳಿಗೆ ಹೋಲಿಸಿದಾಗ ಶೇಕಡ 49.07 ರಷ್ಟು ಹೆಚ್ಚಾಗಿರುತ್ತದೆ.

ಈ ಹೆಚ್ಚುವರಿ ಮೊತ್ತವನ್ನು ಉಳಿತಾಯವಾಗಲಿರುವ ರೂ. 159.00 ಲಕ್ಷಗಳಲ್ಲಿ ಭರಿಸಲಾಗುವುದೆಂದು ಹಾಗೂ ಈ ಯೋಜನೆ ಪೂರ್ಣಗೊಂಡಾಗ ಗುತ್ತಿಗೆದಾರರಿಗೆ ವಹಿಸಿರುವ ಈಗಾಗಲೇ ಅನುಮೋದನೆಯಾಗಿರುವ ಟೆಂಡರ್ ಮೊತ್ತ ರೂ.333.51 ಲಕ್ಷಗಳಿಗಿಂತ ಹೆಚ್ಚುವರಿಯಾಗದಂತೆ ನೋಡಿಕೊಳ್ಳಲಾಗುವುದರಿಂದ ಮಂಡಳಿಗೆ ಯಾವುದೇ ಹೆಚ್ಚಿನ ಆರ್ಥಿಕವು ಹೊರೆಯಾಗುವುದಿಲ್ಲವೆಂದು ಪ್ರಾಯೋಜನಾ ವ್ಯವಸ್ಥಾಪಕರು (ತಾಂ) ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ದಾವಣಗೆರೆ ವಿಭಾಗದವರು ತುಲನಾತ್ಮಕ ಪಟ್ಟಿಯೊಂದಿಗೆ ವರದಿ ಮಾಡಿರುತ್ತಾರೆ. ಸದರಿ ವರ್ಕ್‌ಸ್ಲಿಪ್‌ನ್ನು ದಿನಾಂಕ: 10.02.2009ರಂದು ನಡೆದ ಮಂಡಳಿ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ 28ರಲ್ಲಿ ಪ್ರಸ್ತಾವನೆ ಅನುಮೋದಿಸಿ, ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ಪ್ರಸ್ತುತ ತಯಾರಿಸಿರುವ ರೂ. 1,58,42,640/– ವರ್ಕ್‌ಸ್ಲಿಪ್‌ನ ಮೊತ್ತವು ಪ್ರಸ್ತುತ ಅಂದಾಜು ಮೊತ್ತ ರೂ.322.88 ಲಕ್ಷಗಳಿಗೆ ಹೋಲಿಸಿದಾಗಿ ಶೇಕಡ 49.07 ರಷ್ಟು ಹೆಚ್ಚುವರಿಯಾಗಿದ್ದು, ಈ ಹೆಚ್ಚುವರಿ ಅಧಿಕಾರವು ಸರ್ಕಾರದ ವ್ಯಾಪ್ತಿಗೆ ಬರುವುದರಿಂದ ಮಂಜೂರಾತಿ ನೀಡಲು ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ವಇ 5 ಕೊಮಂಲೆ 2009, ಬೆಂಗಳೂರು, ದಿನಾಂಕ: 2ನೇ ಮೇ 2009

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ದಾವಣಗೆರೆ ನಗರದಲ್ಲಿ ನಿರ್ಮಲ್ ಜ್ಯೋತಿ ಯೋಜನೆಯಡಿಯಲ್ಲಿ ರೂ.333.51 ಲಕ್ಷಗಳ ಟೆಂಡರ್ ಪಟ್ಟಿಯ ಕಾಮಗಾರಿಗಳಿಗೆ ಮಂಜೂರಾತಿ ನೀಡಿದ್ದು, ಪ್ರಸ್ತಾಪಿತ ಕಾಮಗಾರಿಗಳಲ್ಲಿ ಹೆಚ್ಚುವರಿ ಪರಿಮಾಣಗಳ ವರ್ಕ್‌ಸ್ಲಿಪ್‌ನ್ನು ಟೆಂಡರ್ ಗುತ್ತಿಗೆ ಕರಾರಿನ ಕಂಡಿಕೆ 3,12,3ರನ್ವಯ (ಪಿ.ಡಬ್ಲ್ಯು.ಜಿ 13ಎ) ಸ್ಥಳದ ಅಗತ್ಯತೆ ಮತ್ತು ಅವಶ್ಯಕತೆಗನುಗುಣವಾಗಿ ಕಾಮಗಾರಿಗಳಲ್ಲಿ ಹೆಚ್ಚುವರಿ ಪರಿಮಾಣಗಳು, ಕಡಿಮೆ ಪರಿಮಣಗಳು ಅಥವಾ ಬದಲಾವಣೆ ಅಂಶಗಳನ್ನು ಕೈಗೊಳ್ಳಲು ಅವಕಾಶವಿರುವುದರಿಂದ, ಈ ಕಾಮಗಾರಿಯಲ್ಲಿ ಉಳಿತಾಯವಾಗಲಿರುವ ಹಣದಿಂದ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿರುವುದರಿಂದ, ಕಾಮಗಾರಿ ಇತರೆ ಬಾಬ್ತುಗಳಿಂದ ಪೂರ್ಣಗೊಂಡಾಗ ಒಟ್ಟಾರೆ ಗುತ್ತಿಗೆದಾರರಿಗೆ ವಹಿಸಿರುವ ಮೊತ್ತಕ್ಕಿಂತ ಯಾವುದೇ ಆರ್ಥಿಕ ಹೆಚ್ಚುವರಿಯಾಗದಂತೆ ನಿರ್ವಹಿಸುವ ಕಾಮಗಾರಿಗೆ ತಯಾರಿಸಿರುವ ವರ್ಕ್‌ಸ್ಲಿಪ್‌ನ ಮೊತ್ತ ರೂ.1,58,42,640/– ಗಳಾಗಿದ್ದು, ಇದು ಮೂಲ ಅಂದಾಜು ಮೊತ್ತಕ್ಕೆ ಹೋಲಿಸಿದಾಗ ಪ್ರ[illegible] ಅಂದಾಜು ಮೊತ್ತವಾದ ರೂ.322.88 ಲಕ್ಷಗಳಿಗೆ ಶೇ. 49.07 ರಷ್ಟು ಹೆಚ್ಚುವರಿಯಾಗಿದ್ದು, ಮಂಡಳಿಯ ಅಧಿಕಾರ ವ್ಯಾಪ್ತಿ ಮೀರಿರುವುದರಿಂದ ಹಾಗೂ ಇದು ಒಟ್ಟಾರೆ ಗುತ್ತಿಗೆದಾರರಿಗೆ ವಹಿಸುವ ಮೊತ್ತಕ್ಕೆ ಮೀರದೇ ಇರುವುದರಿಂದ ಹಾಗೂ ದಿನಾಂಕ: 19.10.2006ರ ಆದೇಶದಲ್ಲಿ ವಿಧಿಸಿರುವ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಷರತ್ತಿಗೆ ಒಳಪಟ್ಟು ರೂ.1,58,42,640/– ಗಳ ವರ್ಕ್‌ಸ್ಲಿಪ್‌ಗೆ ಸರ್ಕಾರ ಮಂಜೂರಾತಿ ನೀಡಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 08, ದಿನಾಂಕ: 16.05.2008ರಲ್ಲಿ ಆಡಳಿತ ಇಲಾಖೆಯ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದಂತೆ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರ ಹಿಂಬರಹ ಸಂಖ್ಯೆ: ವಇ 113 ಆಂಆಸ 2009, ದಿನಾಂಕ: 23.03.2009ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1219

ಜಿ.ಆರ್. ನಾಗರಾಜ

ಪೀಠಾಧಿಕಾರಿ–4, ವಸತಿ ಇಲಾಖೆ.

HEALTH AND FAMILY WELFARE SECRETARIAT

CORRIGENDUM

No.HFW 52 IMM 2009, Bangalore, Dated: 30th April 2009

In partial modifications of Notification-I, III, and IV bearing No. HFW/152/IMM/07, dated: 12.2.2008, in Column No. 3 of Sl.No. 22 the words appearing as "Area comprising the entire Bangalore Rural District including Anekal Taluk" shall be read as **"Area comprising the entire Bangalore Rural District".**

This is deemed to have come into effect from 16.06.2008 i.e., The date of the earlier Notifications (I,III & IV) No. HFW 53 IMM 2008 date: 16.06.2008.

By Order and in the name of Governor of Karnataka,

N. MAHALAKSHMAMMA

P.R. 1220

Under Secretary to Government,

Health & Family Welfare Department (Indian Medicine Department)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಆಕುಕ 199 ಪಿಐಎಂ 2007, ಬೆಂಗಳೂರು, ದಿನಾಂಕ: 12ನೇ ಮೇ 2009

ಸರ್ಕಾರದ ಆದೇಶ ಸಂಖ್ಯೆ: ಆಕುಕ 199 ಪಿಐಎಂ 2007, ದಿನಾಂಕ: 24.04.2008 ಎಂಬುದರ ಬದಲಾಗಿ ಸರ್ಕಾರದ ಆದೇಶ ಸಂಖ್ಯೆ:ಆಕುಕ 199 ಪಿಐಎಂ 2007, ದಿನಾಂಕ: 24.04.2009 ಎಂದು ತಿದ್ದಿ ಓದಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಮಹಾಲಕ್ಷ್ಮಮ್ಮ

ಪಿ.ಆರ್. 1221

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾರತೀಯ ವೈದ್ಯ ಪದ್ಧತಿ)

ಆರ್ಥಿಕ ಸಚಿವಾಲಯ

ವಿಷಯ: ಶ್ರೀ ಬಿ. ಗಂಗಣ್ಣ, ಮುಖ್ಯ ಲೆಕ್ಕಾಧಿಕಾರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಇವರನ್ನು ಸೇವೆಯಿಂದ ಅಮಾನತ್ತುಗೊಳಿಸುವ ಬಗ್ಗೆ.

ಓದಲಾಗಿದೆ: ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಇವರ ಪತ್ರ ಸಂ:ಲೋಕ್/ಐಎನ್‌ವಿ(ಜಿ)/ಸಿಟಿ/ಕ್ರೈಂ.15/2009, ದಿ:6.3.09.

ಪ್ರಸ್ತಾವನೆ:

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರು ಮೇಲೆ ಓದಲಾದ ಪತ್ರದಲ್ಲಿ ಶ್ರೀ ಗಂಗಣ್ಣ, ಮುಖ್ಯ ಲೆಕ್ಕಾಧಿಕಾರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರಧಾನ ಕಚೇರಿ, ಬೆಂಗಳೂರು ಇವರು ಗುತ್ತಿಗೆದಾರರಿಂದ ಎಲ್.ಓ.ಸಿ.ಗಳನ್ನು ನೀಡುವ ಬಗ್ಗೆ ಅಪಾರ ಪ್ರಮಾಣದಲ್ಲಿ ಲಂಚದ ಹಣವನ್ನು ಸ್ವೀಕರಿಸುತ್ತಿದ್ದಾರೆಂಬ ದಿ:20.2.2009ರಂದು ದೊರೆತ ಖಚಿತ ಮಾಹಿತಿಯನ್ನಾಧರಿಸಿ, ಶ್ರೀ ಬಿ.ಪರಮೇಶ್ವರಪ್ಪ, ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ನಗರ ಪೊಲೀಸ್ ಠಾಣೆ ಇವರು ಶ್ರೀ ಬಿ.ಗಂಗಣ್ಣ, ಮುಖ್ಯ ಲೆಕ್ಕಾಧಿಕಾರಿ, ಬಿ.ಬಿ.ಎಂ.ಪಿ. ಬೆಂಗಳೂರು ಹಾಗೂ ಶ್ರೀ ಹೊಂಬೇಗೌಡ, ಗುತ್ತಿಗೆದಾರರು ಬೆಂಗಳೂರು ಇವರುಗಳ ವಿರುದ್ಧ ಭ್ರಷ್ಟಾಚಾರ ನಿರೋಧ ಕಾಯ್ದೆ – 1988ರ ಕಲಂ 7, 12, 13(1)(ಡಿ)ಸಹವಾಚನ ಕಲಂ 13(2)ರ ರೀತ್ಯ, ದಿ:20.2.09ರಂದು ಬೆಂಗಳೂರು ನಗರ ಲೋಕಾಯುಕ್ತ ಪೊಲೀಸ್ ಠಾಣೆಯ ಮೊಕದ್ದಮೆ ಸಂ:15/2009ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿದ್ದು, ಔಚಿತ್ಯ ಪೂರ್ವ ಕಾರ್ಯಗಳನ್ನು ನೆರವೇರಿಸಿದ ನಂತರ, ಲೋಕಾಯುಕ್ತದ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿ ಹಾಗೂ ಪಂಚ ಸಾಕ್ಷಿಗಳ ಸಮೇತ ದಿ:20.2.09ರಂದು ಬೆಂಗಳೂರು ಮಹಾನಗರ ಪಾಲಿಕೆಯ ಕೇಂದ್ರ ಕಚೇರಿಯ ಆವರಣದೊಳಗೆ ವಾಹನ ನಿಲುಗಡೆ ಸ್ಥಳದಲ್ಲಿ ಗೋಲ್ಡ್ ಕಲರಿನ ಜೆನ್ ಕಾರ್ ನೋಂದಣಿ ಸಂ:ಕೆಎ–012–ಜೆಡ್–4448 ನಿಂತಿದ್ದು, ಸದರಿ ಕಾರಿನ ಬಳಿ ಬರುವ ಮತ್ತು ಕಾರಿನೊಳಗೆ ಪ್ರವೇಶಿಸುವ ವ್ಯಕ್ತಿಗಳ ಬಗ್ಗೆ ನಿಗಾವಹಿಸಿ ಕಾಯುತ್ತಿರುವಾಗ, ಸುಮಾರು 1–45 ಗಂಟೆ ಮಧ್ಯಾಹ್ನದ ಸಮಯದಲ್ಲಿ ಆರೋಪಿತರಾದ ಶ್ರೀ ಬಿ.ಗಂಗಣ್ಣ ಮುಖ್ಯ ಲೆಕ್ಕಾಧಿಕಾರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರಧಾನ ಕಚೇರಿ, ಬೆಂಗಳೂರು ಹಾಗೂ ಅವರ ವಾಹನ ಚಾಲಕ ಶ್ರೀ ಗೋಪಾಲಕೃಷ್ಣಾಚಾರಿ ರವರುಗಳು ಮೇಲೆ ತಿಳಿಸಿದ ಕಾರಿನೊಳಗೆ ಪ್ರವೇಶಿಸಿ, ಹಿಂಬದಿಯ ಸೀಟಿನಲ್ಲಿ ಕುಳಿತುಕೊಂಡು ಮುಂಭಾಗದ ಸೀಟಿನ ಹಿಂದೆ ಅಳವಡಿಸಲಾಗಿದ್ದ ರೆಕ್ಸಿನ್ ಬ್ಯಾಗ್‌ನಲ್ಲಿ

ಕೈಹಾಕಿ ಒಂದು ಪ್ಲಾಸ್ಟಿಕ್ ಬ್ಯಾಗ್‌ನ್ನು ಹೊರಗೆ ತೆಗೆದು, ಸದರಿ ಬ್ಯಾಗ್‌ನ್ನು ಪರಿಶೀಲಿಸುತ್ತಿದ್ದ ಆರೋಪಿ ಶ್ರೀ ಗಂಗಣ್ಣನವರನ್ನು ಕಾರ್ ಬಾಗಿಲಿನ ಗ್ಲಾಸ್‌ಗಳನ್ನು ತೆರೆದಿದ್ದುದರಿಂದ ಗಮನಿಸಿದ ತನಿಖಾಧಿಕಾರಿಯವರು ಸದರಿ ಕಾರಿನಲ್ಲಿ ಸಂಗ್ರಹಿಸಿದ್ದ ಲಂಚದ ಹಣ ರೂ.5,03,000/-ಗಳ ಸಮೇತ ಆರೋಪಿತರಾದ ಶ್ರೀ ಗಂಗಣ್ಣ ರವರನ್ನು ಪಂಚಸಾಕ್ಷಿಗಳೊಂದಿಗೆ ಸುತ್ತುವರೆದು ಹಿಡಿದಿರುತ್ತಾರೆ. ಸದರಿ ಕಾರಿನಲ್ಲಿದ್ದ ಚಾಲಕ ಶ್ರೀ ಗೋಪಾಲಕೃಷ್ಣಾಚಾರಿಯವರನ್ನು ತನಿಖಾಧಿಕಾರಿಯವರು ವಿಚಾರಣೆ ಮಾಡಿದಾಗ, ಅವರು ಸದರಿ ಲಂಚ ಹಣವನ್ನು ಕಾರಿನಲ್ಲಿಡಲು ಆರೋಪಿ ಶ್ರೀ ಗಂಗಣ್ಣರವರು ತಮಗೆ ತಿಳಿಸಿದ್ದಾಗಿ ಹೇಳಿರುತ್ತಾರೆ. ಲಂಚದ ಹಣವನ್ನು ತನಿಖಾಧಿಕಾರಿಯವರು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ.

ಆರೋಪಿ-1 ಶ್ರೀ ಗಂಗಣ್ಣ, ಮುಖ್ಯ ಲೆಕ್ಕಾಧಿಕಾರಿ ಯವರನ್ನು ಲಂಚ ಸ್ವೀಕಾರದ ಆರೋಪದ ಮೇಲೆ ಭ್ರಷ್ಟಾಚಾರ ನಿರೋಧ ಕಾಯ್ದೆ – 1988ರ ಕಲಂ 7, 12, 13(1) (ಡಿ) ಸಹವಾಚನ 13(2) ರೀತ್ಯ ತನಿಖಾಧಿಕಾರಿಯವರು ದಿ:20.2.2009ರಂದು ದಸ್ತಗಿರಿ ಮಾಡಿ, ಘನ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದು, ಘನ ನ್ಯಾಯಾಲಯವು ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಹಾಲಿ ಆರೋಪಿ-1 ರವರು ದಿ:25.2.2009ರಂದು ಜಾಮೀನಿನ ಮೇಲೆ ಬಿಡುಗಡೆ ಹೊಂದಿರುವುದಾಗಿ ತಿಳಿಸಿರುತ್ತಾರೆ.

ಮೇಲೆ ವಿವರಿಸಿದಂತೆ, ಆರೋಪಿ-1 ಶ್ರೀ ಗಂಗಣ್ಣರವರು ಭ್ರಷಾಚಾರ ನಿರೋಧ ಕಾಯ್ದೆ – 1988ರ ಕಲಂ 7, 12, 13(1)ಡಿ ಜೊತೆಗೆ 13(2)ರ ರೀತ್ಯ ಶಿಕ್ಷಾರ್ಹ ಅಪರಾಧವೆಸಗಿರುವುದು ಪ್ರಾಥಮಿಕ ತನಿಖಾ ಸಮಯದಲ್ಲಿ ದೊರೆತ ಸಾಕ್ಷ್ಯಾಧಾರಗಳಿಂದ ದೃಢಪಟ್ಟಿರುತ್ತದೆ.

ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳು 1957ರ ನಿಯಮ 10ರನ್ವಯ ಆರೋಪಿ-1 ಶ್ರೀ ಗಂಗಣ್ಣನವರನ್ನು ದಸ್ತಗಿರಿಯಾದ ದಿನಾಂಕದಿಂದ ಅಂದರೆ, 20.2.2009 ರಿಂದಲೇ ಅಮಾನತ್ತಿನಲ್ಲಿಟ್ಟಿರುವಂತೆ ಪರಿಗಣಿಸಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಕರ್ನಾಟಕ ಲೋಕಾಯುಕ್ತರ ಶಿಫಾರಸ್ಸನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಆಇ 89 ರಾಲೆಪ 2009, ಬೆಂಗಳೂರು, ದಿನಾಂಕ: 14ನೇ ಮೇ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಬಿ.ಗಂಗಣ್ಣ, ಜಂಟಿ ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಖೆ ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ & ಮೇಲ್ಮನವಿ) ನಿಯಮಗಳು 1957ರ ನಿಯಮ 10(2)(a) ರನ್ವಯ ದಿನಾಂಕ:20.2.2009ರಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಅಮಾನತ್ತಿನಲ್ಲಿಡಲಾಗಿದೆ.

ಅಮಾನತ್ತಿನಲ್ಲಿರುವ ಅವಧಿಯಲ್ಲಿ ಶ್ರೀ ಬಿ.ಗಂಗಣ್ಣ, ಜಂಟಿ ನಿಯಂತ್ರಕರು ಇವರಿಗೆ ನಿಯಮಾನುಸಾರ ಜೀವನಾಧಾರ ಭತ್ಯೆಯನ್ನು ಸಂದಾಯ ಮಾಡತಕ್ಕದ್ದು. ಅಮಾನತ್ತಿನಲ್ಲಿರುವ ಅವಧಿಯಲ್ಲಿ ಇವರು ನಿಯಮಗಳ ಪ್ರಕಾರ ಸಕ್ಷಮ ಪ್ರಾಧಿಕಾರಿಯ ಲಿಖಿತ ಅನುಮತಿಯಿಲ್ಲದೆ ತಮ್ಮ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1222

ಎನ್. ಶ್ರೀನಿವಾಸ ಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಆಡಳಿತ & ಮುಂಗಡ)

HOME SECRETARIAT

Sub: General Elections to Loksabha, 2009 from the State of Karnataka – dereliction of duty on the part of D.S.P, Channapatna – suspension of Sri Prakash Gowda, Dy.SP, Channapatna.

Read: Letter No.437/KT-HP/2009, dated 04.05.2009 from Sri Tapas Kumar, Principal Secretary, Election Commission of India, New Delhi, addressed to Chief Secretary to Government of Karnataka.

Preamble:

In the letter read at (1) above, Principal Secretary, Election Commission of India has stated that the Commission has come to know that Sri Prakash Gowda, D.S.P. Channapatna and Police Sub-Inspector, Channapatna were handed over search warrants under section 94 of the Cr. P.C. by SDM, Ramanagara for carrying out search of house of one Mr.Dinesh against whom there was a credible information that more than Rs.1.5 Crores was stored at his house for distribution in the electorate, including some counterfeit money also. The officer delayed the search warrants and even told that he will not do the search as the search involved breaking up of the door of the said premises and he also stated

that he could not do the search even if he is placed under suspension or departmental action is initiated against him. The Commission is of the considered view that refusal to carry out lawful directions of the Magistrate amounts to gross negligence of duties. The Commission has also reiterated that under Section 28A of the Representation of People's Act, 1951 all officers of the State, civil and police departments, are under deputation with Election Commission of India till completion of poll.

The Commission has directed that the officer should be placed under suspension forth with and compliance report be sent to the Commission by 3.00 PM of 04.05.2009 and disciplinary action under the rules governing the services of the officer should also be initiated immediately under intimation to the Commission.

Government Order No. OE 194 POSIPA 2009, Bangalore, Dated: 4th May 2009

In the circumstances explained above, Sri Prakash Gowda, Deputy Superintendent of Police (civil), Channapatna Sub-division is placed under suspension with immediate effect s per rule 5 of the Karnataka State Police (Disciplinary proceedings) Rules, 1965 pending institution of disciplinary enquiry under rule 6 of the Karnataka State Police (Disciplinary proceedings) Rules, 1965.

During the period of suspension the officer is eligible for subsistence allowance as per rules.

Sri Prakash Gowda, Dy.SP should not leave head quarters during the period of suspension without permission of higher officers.

By Order and in the name of Governor of Karnataka

P.R. 1223

T.N. RAVIPRAKASH

Under Secretary to Government, Home Department (Police services)

ಇಂಧನ ಸಚಿವಾಲಯ

ವಿಷಯ: ಮೆ:: ಬಳ್ಳಾರಿ ವಿಂಡ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹಂಚಿಕೆ ಮಾಡಲಾಗಿರುವ 24.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ರದ್ದು ಪಡಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಇಂಇ 243 ಎನ್‌ಸಿಇ 2002 ದಿನಾಂಕ: 5.3.2003 ಮತ್ತು 13.7.2005.

2) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/Vol IV/2008/2028 ದಿನಾಂಕ: 2/3.12.2008.

3) ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಎನ್ 465 ಎನ್‌ಸಿಇ 2008 ದಿನಾಂಕ: 27.12.2008.

ಪ್ರಸ್ತಾವನೆ:–

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ :: ಬಳ್ಳಾರಿ ವಿಂಡ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಬಳ್ಳಾರಿ ಜಿಲ್ಲೆಯ ಗುರುಸಿದ್ದಾಪುರ ಹಳ್ಳಿಯಲ್ಲಿ 10.00 ಮೆಗಾ ವ್ಯಾಟ್, ಗೊಲ್ಲರಹಟ್ಟಿ ಮತ್ತು ಜರಮಲೈನಲ್ಲಿ 6.00 ಮೆಗಾ ವ್ಯಾಟ್, ಮುನಿರಾಬಾದ್‌ನಲ್ಲಿ 8.00 ಮೆಗಾ ವ್ಯಾಟ್ ಒಟ್ಟು 24.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಒಡಂಬಡಿಕೆ ಮಾಡಿಕೊಂಡ ದಿನಾಂಕದಿಂದ 4 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಸದರಿ ಅಭಿವೃದ್ಧಿದಾರರಿಗೆ ಯೋಜನೆ ಹಂಚಿಕೆಯಾಗಿ 6 ವರ್ಷ ಕಳೆದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಿರುವುದಿಲ್ಲವೆಂದು ತಿಳಿಸುತ್ತಾ, ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದು ಪಡಿಸುವಂತೆ ಹಾಗೂ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಯೋಜನೆಯ ಅನುಷ್ಠಾನಕ್ಕಾಗಿ ಅನುಮತಿ ನೀಡಿ 6 ವರ್ಷ ಕಳೆದರೂ ಇದುವರೆಗೂ ಅನುಷ್ಠಾನದ ನಿಟ್ಟಿನಲ್ಲಿ ಮೆ:: ಬಳ್ಳಾರಿ ವಿಂಡ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ನೋಂದಾಯಿತ ಅಂಚೆ ಮೂಲಕ ತಿಳಿಸಲಾಗಿತ್ತು. ಆದರೆ, ಕಾರಣ ಕೇಳುವ ನೋಟೀಸು ಲಕೋಟೆಯು 'No such firm in this address, return to sender' ಎಂದು ವಾಪಸ್ ಬಂದಿರುತ್ತದೆ. ಇದರಿಂದಾಗಿ ಅಭಿವೃದ್ಧಿದಾರರು ಸದರಿ ವಿಳಾಸದಲ್ಲಿ ವಾಸ್ತವ್ಯ ಇಲ್ಲದಿರುವುದು ಹಾಗೂ ಸುಮಾರು 6 ವರ್ಷಗಳಿಂದ ಯೋಜನೆಯ

ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೆ:: ಬಳ್ಳಾರಿ ವಿಂಡ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರು ಯಾವುದೇ ಪ್ರಗತಿ ಸಾಧಿಸಿಲ್ಲದಿರುವುದು ಸ್ಪಷ್ಟವಾಗುತ್ತದೆ.

ಸದರಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ :–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 465 ಎನ್‌ಸಿಇ 2008, ಬೆಂಗಳೂರು, ದಿನಾಂಕ: 8ನೇ ಮೇ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ: ಇಂಇ 243 ಎನ್‌ಸಿಇ 2002 ದಿನಾಂಕ: 5.3.2003 ಮತ್ತು 13.7.2005 ರಲ್ಲಿ ಮೆ :: ಬಳ್ಳಾರಿ ವಿಂಡ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಬಳ್ಳಾರಿ ಜಿಲ್ಲೆಯ ಗುರುಸಿದ್ದಾಪುರ ಹಳ್ಳಿಯಲ್ಲಿ 10.00 ಮೆಗಾ ವ್ಯಾಟ್, ಗೊಲ್ಲರಹಟ್ಟಿ ಮತ್ತು ಜರಮಲೈನಲ್ಲಿ 6.00 ಮೆಗಾ ವ್ಯಾಟ್, ಮುನಿರಾಬಾದ್‌ನಲ್ಲಿ 8.00 ಮೆಗಾ ವ್ಯಾಟ್ ಒಟ್ಟು 24.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1224 **ಎಸ್.ಜೆ. ಸಂಪತ್ ಕುಮಾರ್**

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ,

ವಿಷಯ: ಮೆ:: ಕ್ರಾಂತಿ ಎನರ್ಜಿ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹಂಚಿಕೆ ಮಾಡಲಾಗಿರುವ 0.7 ಮೆಗಾ ವ್ಯಾಟ್ ಸಾಮರ್ಥ್ಯದ ಸಿಂಧನೂರ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದು ಪಡಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಡಿಇ 5 ಎನ್‌ಸಿಇ 2002 ದಿನಾಂಕ: 15.7.2002.

2) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/ಎಸ್‌ಹೆಚ್‌ಪಿ/08/2029 ದಿನಾಂಕ: 2/3.12.2008.

3) ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಎನ್ 525 ಎನ್‌ಸಿಇ 2008 ದಿನಾಂಕ: 27.12.2008.

ಪ್ರಸ್ತಾವನೆ:–

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ :: ಕ್ರಾಂತಿ ಎನರ್ಜಿ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಟಿ.ಎಲ್.ಬಿ.ಸಿ. ಡಿ–36, ಬಸಪುರ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆಯಲ್ಲಿ 0.7 ಮೆಗಾ ವ್ಯಾಟ್ ಸಾಮರ್ಥ್ಯದ ಸಿಂಧನೂರು ಕಿರು ಜಲ ವಿದ್ಯುತ್ ಯೋಜನೆಯನ್ನು ಒಡಂಬಡಿಕೆ ಮಾಡಿಕೊಂಡ ದಿನಾಂಕದಿಂದ 3 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಸದರಿ ಅಭಿವೃದ್ಧಿದಾರರಿಗೆ ಯೋಜನೆ ಹಂಚಿಕೆಯಾಗಿ 6 ವರ್ಷ ಕಳೆದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಿರುವುದಿಲ್ಲವೆಂದು ತಿಳಿಸುತ್ತಾ, ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದು ಪಡಿಸುವಂತೆ ಹಾಗೂ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಯೋಜನೆಯ ಅನುಷ್ಠಾನಕ್ಕಾಗಿ ಅನುಮತಿ ನೀಡಿ 6 ವರ್ಷ ಕಳೆದರೂ ಇದುವರೆಗೂ ಅನುಷ್ಠಾನನಿಟ್ಟಿನಲ್ಲಿ ಮೆ:: ಕ್ರಾಂತಿ ಎನರ್ಜಿ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಕಾರಣ ಕೇಲುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ನೋಂದಾಯಿತ ಅಂಚೆ ಮೂಲಕ ತಿಳಿಸಲಾಗಿತ್ತು. ಆದರೆ, ಕಾರಣ ಕೇಳುವ ನೋಟೀಸು ಲಕೋಟೆಯು 'No such addressee, not known' ಎಂದು ವಾಪಸ್ ಬಂದಿರುತ್ತದೆ. ಇದರಿಂದಾಗಿ ಅಭಿವೃದ್ಧಿದಾರರು ಸದರಿ ವಿಳಾಸದಲ್ಲಿ ವಾಸ್ತವ್ಯ ಇಲ್ಲದಿರುವುದು ಹಾಗೂ ಸುಮಾರು 6 ವರ್ಷಗಳಿಂದ ಯೋಜನೆಯ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೆ:: ಕ್ರಾಂತಿ ಎನರ್ಜಿ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರು ಯಾವುದೇ ಪ್ರಗತಿಯನ್ನು ಸಾಧಿಸುವ ನಿಟ್ಟಿನಲ್ಲಿ ಕ್ರಮ ಕೈಗೊಂಡಿಲ್ಲದಿರುವುದು ಸ್ಪಷ್ಟವಾಗುತ್ತದೆ.

ಸದರಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ :–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 525 ಎನ್‌ಸಿಇ 2008, ಬೆಂಗಳೂರು, ದಿನಾಂಕ: 8ನೇ ಮೇ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ: ಡಿಇ 5 ಎನ್‌ಸಿಇ 2002 ದಿನಾಂಕ:15.7.2002 ರಲ್ಲಿ ಮೆ:: ಕ್ರಾಂತಿ ಎನರ್ಜಿ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಟಿ.ಎಲ್.ಬಿ.ಸಿ. ಡಿ–36, ಬಸಪುರ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆಯಲ್ಲಿ 0.7 ಮೆಗಾ ವ್ಯಾಟ್ ಸಾಮರ್ಥ್ಯದ ಸಿಂಧನೂರು ಕಿರು ಜಲ ವಿದ್ಯುತ್

ಯೋಜನೆಯ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1225

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ,

ವಿಷಯ: ಮೆ:: ಎಸ್.ಕೆ. ಫಾರ್ಮ್ಸ್ ಲಿಮಿಟೆಡ್ ಕಂಪನಿಗೆ ಹಂಚಿಕೆ ಮಾಡಲಾಗಿರುವ 3.5 ಮೆಗಾ ವ್ಯಾಟ್ ಸಾಮರ್ಥ್ಯದ ಹೊರಿಅಬ್ಬೆ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದು ಪಡಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಡಿಇ 182 ಎನ್‌ಸಿಇ 2001 ದಿನಾಂಕ: 19.11.2001.

2) ಸರ್ಕಾರಿ ಆದೇಶ ಸಂಖ್ಯೆ: ಡಿಇ 165 ಎನ್‌ಸಿಇ 2003 ದಿನಾಂಕ : 10.10.2003.

3) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/ಎಸ್‌ಹೆಚ್‌ಪಿ/08/2029 ದಿನಾಂಕ: 2/3.12.2008.

4) ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಎನ್ 515 ಎನ್‌ಸಿಇ 2008 ದಿನಾಂಕ: 27.12.2008.

ಪ್ರಸ್ತಾವನೆ :–

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ :: ಎಸ್.ಕೆ. ಫಾರ್ಮ್ಸ್ ಲಿಮಿಟೆಡ್ ಕಂಪನಿಗೆ ಉಡುಪಿ ಜಿಲ್ಲೆಯ, ಕುಂದಾಪುರ ತಾಲ್ಲೂಕಿನ ವರಾಹಿ ನದಿಗೆ ಅಡ್ಡಲಾಗಿ 3.5 ಮೆಗಾ ವ್ಯಾಟ್ ಸಾಮರ್ಥ್ಯದ ಹೊರಿಅಬ್ಬೆ ಕಿರು ಜಲ ವಿದ್ಯುತ್ ಯೋಜನೆಯನ್ನು ಒಡಂಬಡಿಕೆ ಮಾಡಿಕೊಂಡ ದಿನಾಂಕದಿಂದ 3 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಸದರಿ ಅಭಿವೃದ್ಧಿದಾರರಿಗೆ ಯೋಜನೆ ಹಂಚಿಕೆಯಾಗಿ 7 ವರ್ಷ ಕಳೆದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಿರುವುದಿಲ್ಲವೆಂದು ತಿಳಿಸುತ್ತಾ, ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದು ಪಡಿಸುವಂತೆ ಹಾಗೂ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಯೋಜನೆಯ ಅನುಷ್ಠಾನಕ್ಕಾಗಿ ಅನುಮತಿ ನೀಡಿ 7 ವರ್ಷ ಕಳೆದರೂ ಇದುವರೆಗೂ ಅನುಷ್ಠಾನನಿಟ್ಟಿನಲ್ಲಿ ಮೆ:: ಎಸ್.ಕೆ. ಫಾರ್ಮ್ಸ್ ಲಿಮಿಟೆಡ್ ಕಂಪನಿಯು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ನೋಂದಾಯಿತ ಅಂಚೆ ಮೂಲಕ ತಿಳಿಸಲಾಗಿತ್ತು. ಆದರೆ, ಕಾರಣ ಕೇಳುವ ನೋಟೀಸು ಲಕೋಟೆಯು 'Adress insufficient, Return to sender' ಎಂದು ವಾಪಸ್ ಬಂದಿರುತ್ತದೆ. ಇದರಿಂದಾಗಿ ಅಭಿವೃದ್ಧಿದಾರರು ಸದರಿ ವಿಳಾಸದಲ್ಲಿ ವಾಸ್ತವ್ಯ ಇಲ್ಲದಿರುವುದು ಹಾಗೂ ಸುಮಾರು 7 ವರ್ಷಗಳಿಂದ ಯೋಜನೆಯ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೆ:: ಎಸ್.ಕೆ. ಫಾರ್ಮ್ಸ್ ಲಿಮಿಟೆಡ್ ಕಂಪನಿಯವರು ಯಾವುದೇ ಪ್ರಗತಿ ಸಾಧಿಸಿಲ್ಲದಿರುವುದು ಸ್ಪಷ್ಟವಾಗುತ್ತದೆ.

ಸದರಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ :–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 515 ಎನ್‌ಸಿಇ 2008, ಬೆಂಗಳೂರು, ದಿನಾಂಕ: 8ನೇ ಮೇ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ: ಡಿಇ 182 ಎನ್‌ಸಿಇ 2001 ದಿನಾಂಕ:19.11.2001 ಹಾಗೂ ಸಂಖ್ಯೆ: ಡಿಇ 165 ಎನ್‌ಸಿಇ 2003 ದಿನಾಂಕ : 10.10.2003 ರಲ್ಲಿ ಮೆ :: ಎಸ್.ಕೆ. ಫಾರ್ಮ್ಸ್ ಲಿಮಿಟೆಡ್ ಕಂಪನಿಗೆ ಉಡುಪಿ ಜಿಲ್ಲೆಯ, ಕುಂದಾಪುರ ತಾಲ್ಲೂಕಿನ ವರಾಹಿ ನದಿಗೆ ಅಡ್ಡಲಾಗಿ 3.5 ಮೆಗಾ ವ್ಯಾಟ್ ಸಾಮರ್ಥ್ಯದ ಹೊರಿಅಬ್ಬೆ ಕಿರು ಜಲ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1226

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ,

ವಿಷಯ: ಮೆ:: ಫ್ಲಾಕ್ಸ್ ಹೈಡ್ರೊ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹಂಚಿಕೆ ಮಾಡಲಾಗಿರುವ 1.5 ಮೆಗಾ ವ್ಯಾಟ್ ಸಾಮರ್ಥ್ಯದ ಅರೆಮಾದನಹಳ್ಳಿ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದು ಪಡಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಡಿಇ 122 ಎನ್‌ಸಿಇ 2001 ದಿನಾಂಕ: 29.11.2001.

2) ಸರ್ಕಾರಿ ಆದೇಶ ಸಂಖ್ಯೆ: ಡಿಇ 180 ಎನ್‌ಸಿಇ 2004 ದಿನಾಂಕ : 4.6.2004.

3) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/ಎಸ್‌ಹೆಚ್‌ಪಿ/08/2029 ದಿನಾಂಕ: 2/3.12.2008.

4) ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಎನ್ 517 ಎನ್‌ಸಿಇ 2008 ದಿನಾಂಕ: 27.12.2008.

ಪ್ರಸ್ತಾವನೆ :–

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ :: ಫ್ಲಾಕ್ಸ್ ಹೈಡ್ರೊ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನಲ್ಲಿ 1.00 ಮೆಗಾ ವ್ಯಾಟ್ ಸಾಮರ್ಥ್ಯದ ಅರೆಮಾದನಹಳ್ಳಿ ಕಿರು ಜಲ ವಿದ್ಯುತ್ ಯೋಜನೆಯನ್ನು ಒಡಂಬಡಿಕೆ ಮಾಡಿಕೊಂಡ ದಿನಾಂಕದಿಂದ 3 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಆದೇಶದಲ್ಲಿ ಸದರಿ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 1.00 ಮೆಗಾ ವ್ಯಾಟ್‌ನಿಂದ 1.5 ಮೆಗಾ ವ್ಯಾಟ್‌ಗೆ ಹೆಚ್ಚಿಸಿ ಅನುಷ್ಠಾನಗೊಳಿಸಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಸದರಿ ಅಭಿವೃದ್ಧಿದಾರರಿಗೆ ಯೋಜನೆ ಹಂಚಿಕೆಯಾಗಿ 8 ವರ್ಷ ಕಳೆದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಿರುವುದಿಲ್ಲವೆಂದು ತಿಳಿಸುತ್ತಾ, ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದು ಪಡಿಸುವಂತೆ ಹಾಗೂ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಯೋಜನೆಯ ಅನುಷ್ಠಾನಕ್ಕಾಗಿ ಅನುಮತಿ ನೀಡಿ 8 ವರ್ಷ ಕಳೆದರೂ ಇದುವರೆಗೂ ಅನುಷ್ಠಾನನಿಟ್ಟಿನಲ್ಲಿ ಮೆ:: ಫ್ಲಾಕ್ಸ್ ಹೈಡ್ರೊ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಯು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ನೋಂದಾಯಿತ ಅಂಚೆ ಮೂಲಕ ತಿಳಿಸಲಾಗಿತ್ತು. ಆದರೆ, ಕಾರಣ ಕೇಳುವ ನೋಟೀಸು ಲಕೋಟೆಯು 'No such office in this address, R/S' ಎಂದು ವಾಪಸ್ ಬಂದಿರುತ್ತದೆ. ಇದರಿಂದಾಗಿ ಅಭಿವೃದ್ಧಿದಾರರು ಸದರಿ ವಿಳಾಸದಲ್ಲಿ ವಾಸ್ತವ್ಯ ಇರುವುದಿಲ್ಲವೆಂದು ಸ್ಪಷ್ಟವಾಗುತ್ತದೆ. ಈಗಾಗಲೇ ಸುಮಾರು 8 ವರ್ಷಗಳಿಂದ ಯೋಜನೆಯ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೆ:: ಫ್ಲಾಕ್ಸ್ ಹೈಡ್ರೊ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಯವರು ಯಾವುದೇ ಪ್ರಗತಿ ಸಾಧಿಸಿಲ್ಲದಿರುವುದು ಸ್ಪಷ್ಟವಾಗುತ್ತದೆ.

ಸದರಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ :–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 517 ಎನ್‌ಸಿಇ 2008, ಬೆಂಗಳೂರು, ದಿನಾಂಕ: 8.5.2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ: ಡಿಇ 122 ಎನ್‌ಸಿಇ 2001 ದಿನಾಂಕ:29.11.2001 ಹಾಗೂ ಡಿಇ 180 ಎನ್‌ಸಿಇ 2004 ದಿನಾಂಕ: 4.6.2004 ರಲ್ಲಿ ಮೆ:: ಫ್ಲಾಕ್ಸ್ ಹೈಡ್ರೊ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನಲ್ಲಿ 1.5 ಮೆಗಾ ವ್ಯಾಟ್ ಸಾಮರ್ಥ್ಯದ ಅರೆಮಾದನಹಳ್ಳಿ ಕಿರು ಜಲ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1227

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ,

ಸಹಕಾರ ಸಚಿವಾಲಯ

ವಿಷಯ: ಅರಸೀಕೆರೆ ತಾಲ್ಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ. ಇದರ 2007–08ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸಲು ಕಾಲಾವಧಿ ವಿಸ್ತರಿಸುವ ಬಗ್ಗೆ.

ಓದಲಾಗಿದೆ: ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) ಕೇಂದ್ರ ಕಛೇರಿ, ಬೆಂಗಳೂರು, ಇವರ ಪತ್ರ ಸಂಖ್ಯೆ:ಎಲ್‌ಡಿಬಿ–2/102/ವಾಮಸಭೆ/2008–09 ದಿನಾಂಕ: 30.03.2009.

ಪ್ರಸ್ತಾವನೆ:

ಅರಸೀಕೆರೆ ತಾಲ್ಲೂಕು ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ. ಅರಸೀಕೆರೆ ಇದರಲ್ಲಿ ಸುಮಾರು 12,000 ಸದಸ್ಯರಿದ್ದು ಮಾರ್ಚ್, ಏಪ್ರಿಲ್ ಮತ್ತು ಮೇ 2009ರಲ್ಲಿ ಲೋಕಸಭಾ ಚುನಾವಣೆ ಇರುವುದರಿಂದ ಬ್ಯಾಂಕಿನ ವಸೂಲಾತಿಗೆ ತೀವ್ರ ಹಿನ್ನೆಡೆಯಾಗಿದ್ದು, ಸದರಿ ಬ್ಯಾಂಕಿನ 2007–08ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಸೆಪ್ಟೆಂಬರ್

2009ರ ಅಂತ್ಯದಲ್ಲಿ ನಡೆಸಲು ಅನುಮತಿಯನ್ನು ನೀಡುವಂತೆ ಮೇಲೆ ಓದಲಾದ ಪತ್ರದಲ್ಲಿ ಸಹಕಾರ ಸಂಘಗಳ ಅಪರ ನಿಬಂಧಕರು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 65 ಸಿಎಲ್‌ಎಂ 2009, ಬೆಂಗಳೂರು, ದಿನಾಂಕ: 7ನೇ ಮೇ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ, ಅರಸೀಕೆರೆ ತಾಲ್ಲೂಕು, ಇದರ 2007-08ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸಲು ದಿನಾಂಕ:30.09.2009 ವರೆಗೆ ಕಾಲಾವಕಾಶ ನೀಡಲು ಅನುವಾಗುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 27 ಸದರಿ ಸಂಸ್ಥೆಗೆ ಕೆಳಗಿನ ಮಾರ್ಪಾಟಿನೊಂದಿಗೆ ಅನ್ವಯವಾಗುತ್ತದೆಂದು ನಿರ್ದೇಶಿಸುತ್ತದೆ ಎಂದರೆ:

27ರ ಪ್ರಕರಣದಲ್ಲಿ:

27ನೇ ಪ್ರಕರಣ ಉಪಪ್ರಕರಣ (1)ರ ಪರಂತುಕದಲ್ಲಿನ **"ಆರು ತಿಂಗಳು"** ಎಂಬ ಪದಗಳಿಗೆ ಬದಲಾಗಿ **"ಹನ್ನೆರಡು ತಿಂಗಳು"** ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಸೂಚನೆ:

ಪ್ರಕರಣ 27(1)ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ: 30.09.2009 ವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣ 27(1)ರ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ಹುಚ್ಚಾಚಾರಿ

ಪಿ.ಆರ್. 1228 ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ.

ಒಳಾಡಳಿತ ಸಚಿವಾಲಯ

ತಿದ್ದುಪಡಿ

ನಂ. ಒಇ 21 ಪಿಪಿಇ 2009, ಬೆಂಗಳೂರು, ದಿನಾಂಕ: 13ನೇ ಮೇ 2009

ಸರ್ಕಾರದ ಆದೇಶ ನಂ. ಒಇ 21 ಪಿಪಿಇ 2009, ದಿನಾಂಕ: 09.04.2009ರ ಆದೇಶ ಭಾಗದ ಕ್ರಮ ಸಂಖ್ಯೆ 13ರ ಅಂಕಣ 3ರಲ್ಲಿ "15.03.2007 ಪೂರ್ವಹ್ನ," ಅಂಕಣ 4ರಲ್ಲಿ "14.03.2008" ಎಂದೂ ಮತ್ತು ಅಂಕಣ 5ರಲ್ಲಿ "15.03.2008" ಎಂಬುದರ ಬದಲಾಗಿ ಅಂಕಣ 3ರಲ್ಲಿ "15.02.2007 ಪೂರ್ವಾಹ್ನ", ಅಂಕಣ 4ರಲ್ಲಿ "14.02.2008" ಎಂದೂ ಹಾಗೂ ಅಂಕಣ 5ರಲ್ಲಿ '15.02.2008" ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳುವುದು. ಉಳಿದಂತೆ ದಿನಾಂಕ: 09.04.2009ರ ಸರ್ಕಾರದ ಆದೇಶದಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಸಿ. ಸಿದ್ದಪ್ಪ

ಪಿ.ಆರ್. 1229 ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ

(ಕಾ ಮತ್ತು ಸು ಹಾಗೂ ಕಾಫಿಪೋಸಾ ಮತ್ತು ಅಭಿಯೋಗಗಳು)

ವಿಷಯ: ನಕಲಿ ಛಾಪಾಕಾಗದದ ಹಗರಣಗಳಿಗೆ ಸಂಬಂಧಿಸಿದಂತೆ ಕರ್ತವ್ಯ ಲೋಪವೆಸಗಿರುವ ಪೊಲೀಸ್ ಅಧಿಕಾರಿಗಳ ವಿರುದ್ಧ ವಿಚಾರಣಾಧಿಕಾರಿಗಳನ್ನು ಬದಲಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ:ಒಇ 23 ಪೊಸಿಪ 2004 ದಿನಾಂಕ: 23.01.2004, 07.01.2005.

2. ಸರ್ಕಾರದ ಆದೇಶ ಸಂಖ್ಯೆ:ಒಇ 23 ಪೊಸಿಪ 2004 ದಿನಾಂಕ ಮತ್ತು 11.12.2006.

3. ಪೊಲೀಸ್ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ರವರ ಕಚೇರಿ ಪತ್ರ ಸಂಖ್ಯೆ:ಸಿಬಿ(5)24.03.04 ದಿನಾಂಕ: 02.02.2009.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಶ್ರೀ ರಾಘವೇಂದ್ರ ಔರಾದ್‌ಕರ್, ಡಿ.ಐ.ಜಿ. ಇಂಟೆಲಿಜೆನ್ಸ್ ರವರು ರಾಜ್ಯದಲ್ಲಿನ ನಕಲಿ ಛಾಪಾ ಕಾಗದದ ಹಗರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಇಲಾಖೆಯ ಅಧಿಕಾರಿಗಳು ಎಸಗಿರುವ ಕರ್ತವ್ಯಲೋಪಗಳು ಮೇಲ್ನೋಟಕ್ಕೆ ಸಾಭೀತಾಗುವಂತೆ ಕಂಡು ಬಂದಿರುವ ಕಾರಣ ಈ ಕೆಳಕಂಡ ಅಧಿಕಾರಿಗಳ ವಿರುದ್ಧ ಕೆ.ಎಸ್.ಪಿ (ಡಿ.ಪಿ)

ನಿಯಮಗಳು, 1965ರ ನಿಯಮ 6 ಮತ್ತು 8ರಡಿಯಲ್ಲಿ ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಲು ತೀರ್ಮಾನಿಸಿ ಎ.ಡಿ.ಜಿ.ಪಿ. (ನೇಮಕಾತಿ ಮತ್ತು ತರಬೇತಿ) ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

1. ಶ್ರೀ ಟಿ.ಜಿ. ಸಂಗ್ರಾಮ್ ಸಿಂಗ್, ಎ.ಸಿ.ಪಿ, ಹಲಸೂರು ಉಪ ವಿಭಾಗ, ಬೆಂಗಳೂರು ನಗರ.
2. ಶ್ರೀ ವಾಲಿ ಬಾಷಾ, ಪೊಲೀಸ್ ಇನ್ಸ್‌ಪೆಕ್ಟರ್, ಸಿ.ಸಿ.ಬಿ. ಬೆಂಗಳೂರು.
3. ಶ್ರೀ ವಜೀರ್ ಅಹಮ್ಮದ್ ಖಾನ್, ಪಿ.ಎಸ್.ಐ, ಕೆ.ಜಿ.ಹಳ್ಳಿ, ಬೆಂಗಳೂರು.
4. ಶ್ರೀ ಕೆ.ಎಂ. ಮುದ್ದಯ್ಯ, ಡಿವೈ.ಎಸ್.ಪಿ.
5. ಶ್ರೀ ಜಿ.ಎ.ಬಾವ, ಎ.ಸಿ.ಪಿ, ಸಿ.ಸಿ.ಬಿ, ಬೆಂಗಳೂರು.
6. ಶ್ರೀ ಮರಿಸ್ವಾಮಿ ಗೌಡ, ಪೊಲೀಸ್ ಇನ್ಸ್‌ಪೆಕ್ಟರ್, ಅಶೋಕನಗರ ಪೊಲೀಸ್ ಠಾಣೆ, ಬೆಂಗಳೂರು ನಗರ.
7. ಶ್ರೀ ಕೆ. ನಂಜುಂಡೇಗೌಡ, ಪೊಲೀಸ್ ಇನ್ಸ್‌ಪೆಕ್ಟರ್, ಸಿ.ಸಿ.ಬಿ, ಬೆಂಗಳೂರು.
8. ಶ್ರೀ ಎಂ.ಎಂ. ಸೌದಾಗರ, ಡಿವೈ.ಎಸ್.ಪಿ, ಸಿ.ಒ.ಡಿ, ಬೆಂಗಳೂರು.

ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ ಪೊಲೀಸ್ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ರವರು ವಿಚಾರಣಾಧಿಕಾರಿಯವರು ರಾಜ್ಯ ಗುಪ್ತಚರದಳದ ಮುಖ್ಯಸ್ಥನಾಗಿದ್ದ ಸಮಯದಲ್ಲಿ ಈ ಪ್ರಕರಣದ ಬಗ್ಗೆ ಸರ್ಕಾರಕ್ಕೆ ಹಲವಾರು ಗೌಪ್ಯ ಮಾಹಿತಿಗಳನ್ನು ನೀಡಿದ್ದು ವಿಚಾರಣೆಯನ್ನು ನಡೆಸಿದರೆ ದೋಷಿತ ಅಧಿಕಾರಿಗಳು ಆಕ್ಷೇಪಣೆ ಮಾಡುವ ಸಂಭವವಿರುವುದರಿಂದ ಎ.ಡಿ.ಜಿ.ಪಿ ಮತ್ತು ಐ.ಜಿ (ಪ್ರಿಸನ್ಸ್) ಬೆಂಗಳೂರು ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸುವಂತೆ ಕೋರಿದ್ದರ ಮೇರೆಗೆ ದಿನಾಂಕ: 11.12.2006ರ ಆದೇಶದಲ್ಲಿ ಶ್ರೀ ಎಸ್.ಟಿ.ರಮೇಶ್, ಎ.ಡಿ.ಜಿ.ಪಿ ಮತ್ತು ಡಿ.ಜಿ (ಪ್ರಿಸನ್ಸ್) ಬೆಂಗಳೂರು ರವರನ್ನು ವಿಶೇಷ ಅಧಿಕಾರ ಹೊಂದಿದ ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ದಿನಾಂಕ: 10.02.2005ರ ಆದೇಶದಲ್ಲಿನ ಉಳಿದ ಇತರೆ ಅಂಶಗಳ ಬಗ್ಗೆ ಯಥಾವತ್ತಾಗಿ ಮುಂದುವರಿಸಲಾಗಿತ್ತು. ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರದ ಆದೇಶ ಸಂಖ್ಯೆ:ಡಿಪಿಎಆರ್ 76:ಎಸ್‌ಪಿಎಸ್ 08 ದಿನಾಂಕ: 10.07.2008 ರನ್ವಯ ಎ.ಡಿ.ಜಿ.ಪಿ, ಅಪರಾಧ ಮತ್ತು ತಾಂತ್ರಿಕ ಸೇವೆಗಳು ಇಲ್ಲಿಗೆ ವರ್ಗಾವಣೆಯಾಗಿದ್ದರಿಂದ ಹಾಗೂ ಪ್ರಸ್ತುತ ಹುದ್ದೆಯಲ್ಲಿನ ಅಧಿಕ ಕೆಲಸದ ಒತ್ತಡದಿಂದ ಸದರಿ ಪ್ರಕರಣಕ್ಕೆ ಸಂಬಂಧಿಸಿದ ಇಲಾಖೆ ವಿಚಾರಣೆಯ ಕಡತವನ್ನು ಅವರ ಉತ್ತರಾಧಿಕಾರಿಯವರಿಂದ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರ ಮತ್ತು ಕಾರಾಗೃಹಗಳ ಮಹಾ ನಿರೀಕ್ಷಕರು, ಬೆಂಗಳೂರು ರವರಿಗೆ ಹಸ್ತಾಂತರ ಮಾಡಿ ಅವರೊಂದಿಗೆ ಪತ್ರ ವ್ಯವಹಾರ ನಡೆಸುವಂತೆ ಕೋರುತ್ತಾ ಪ್ರಕರಣದಲ್ಲಿ ಶ್ರೀ ಪ್ರಭಾಕರ ಗಣಪತಿ ಕುಲಕರ್ಣಿ (ನಿ) ನ್ಯಾಯಾಧೀಶರು, ಬೆಳಗಾಂ ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಈ ಇಲಾಖಾ ವಿಚಾರಣೆಯಲ್ಲಿ ಇನ್ನೂ ಮಾಡಬೇಕಾದ ಕೆಲಸದ ಗಾತ್ರವನ್ನು ಗಮನಿಸಿದರೆ ಸೇವೆಯಲ್ಲಿರುವ ಮತ್ತೊಬ್ಬ ಅಧಿಕಾರಿಯನ್ನು ಶ್ರೀ ಎಸ್.ಟಿ. ರಮೇಶ್ ಅವರ ಜಾಗದಲ್ಲಿ ವಿಚಾರಣಾಧಿಕಾರಿಯನ್ನಾಗಿ ನೇಮಿಸಿದರೆ ತನ್ನ ಕೆಲಸದ ಜೊತೆಗೆ ಈ ಇಲಾಖಾ ವಿಚಾರಣೆಯನ್ನು ಕಾಲಮಿತಿಯೊಳಗಾಗಿ ಪೂರ್ಣಗೊಳಿಸಿ ವಿಚಾರಣಾ ವರದಿಯನ್ನು ಸಲ್ಲಿಸುವುದು ಕಷ್ಟಸಾಧ್ಯವಾಗಿರುತ್ತದೆ. ಆದ್ದರಿಂದ ಡಿ.ಜಿ.ಪಿ ಯವರ ಶಿಫಾರಸ್ಸಿನಂತೆ ಒಬ್ಬ ನಿವೃತ್ತ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯಾಗಿ ನೇಮಿಸಿದರೆ ಅವರು ಈ ಇಲಾಖಾ ವಿಚಾರಣೆಯನ್ನು on a day-to-day basis ಮೇಲೆ ನಡೆಸಿ ಬೇಗನೆ ವಿಚಾರಣಾ ವರದಿಯನ್ನು ಸಲ್ಲಿಸಬಹುದು. ಅದೂ ಅಲ್ಲದೆ ಇಂತಹ ಜಟಿಲವಾದ ವಿಚಾರಣೆಗಳಲ್ಲಿ ಉಪಯೋಗಿಸಿಕೊಳ್ಳುವ ಉದ್ದೇಶದಿಂದಲೇ ಸಿ.ಆ.ಸು ಇಲಾಖೆ ವಿಚಾರಣಾ ಅಧಿಕಾರಿಯನ್ನಾಗಿ ನೇಮಿಸಿಕೊಳ್ಳಬಹುದಾದ ನಿವೃತ್ತ ಜಿಲ್ಲಾ ನ್ಯಾಯಾಧೀಶರುಗಳ ಪಟ್ಟಿಯನ್ನು ಹೊರಡಿಸಿದೆ.

ನಕಲಿ ಛಾಪಾ ಕಾಗದಗಳ ಪ್ರಕರಣದಲ್ಲಿ ಶ್ರೀ ಎಸ್.ಟಿ. ರಮೇಶ್, ಎ.ಡಿ.ಜಿ.ಪಿ ರವರ ಬದಲಾಗಿ ಶ್ರೀ ಕೆ. ರಾಮಕೃಷ್ಣ ಭಟ್ (ನಿ) ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲು ತೀರ್ಮಾನಿಸಿದೆ. ಕಾರಣ ಈ ಕೆಳಕಂಡಂತೆ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಒಇ 23 ಪೊಸಿಪ 2004, ಬೆಂಗಳೂರು, ದಿನಾಂಕ: 13ನೇ ಮೇ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ:ಒಇ 23 ಪೊಸಿಪ 2004 ದಿನಾಂಕ: 11.12.2006ರಲ್ಲಿ ನಕಲಿ ಛಾಪಾ ಕಾಗದಗಳ ಪ್ರಕರಣದಲ್ಲಿ ವಿಚಾರಣೆಯನ್ನು ನಡೆಸಲು ಶ್ರೀ ಎಸ್.ಟಿ. ರಮೇಶ್, ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾ ನಿರೀಕ್ಷಕರು ಇವರನ್ನು ನೇಮಿಸಲಾಗಿದ್ದು ಈಗ ಇವರ ಬದಲಾಗಿ ಈ ಪ್ರಕರಣದ ವಿಚಾರಣೆಯನ್ನು ನಡೆಸಲು ಶ್ರೀ ಕೆ.ರಾಮಕೃಷ್ಣ ಭಟ್ (ನಿವೃತ್ತ) ನ್ಯಾಯಾಧೀಶರು, ಸಂಜಯನಗರ, ಬೆಂಗಳೂರು ಇವರನ್ನು ವಿಶೇಷ ಅಧಿಕಾರ ಹೊಂದಿದ ನಕಲಿ ಛಾಪಾಕಾಗದಗಳ ಪ್ರಕರಣದ ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಸರ್ಕಾರ ಆದೇಶಿಸಿದೆ. ದಿನಾಂಕ: 10.02.2005ರ ಆದೇಶದಲ್ಲಿನ ಉಳಿದ ಇತರೆ ಆದೇಶಗಳು ಯಥಾವತ್ತಾಗಿ ಮುಂದುವರೆಯುತ್ತದೆ.

ವಿಚಾರಣಾಧಿಕಾರಿಗಳಿಗೆ ವಿಚಾರಣೆ ನಡೆಸಲು ಅನುಕೂಲವಾಗುವಂತೆ ಸೂಕ್ತ ಸ್ಥಳಾವಕಾಶ/ಕಟ್ಟಡ/ಪೀಠೋಪಕರಣಗಳು ಮತ್ತು ಪೂರಕ ಸಿಬ್ಬಂದಿ ಇತ್ಯಾದಿ ಮೂಲ ಸೌಲಭ್ಯಗಳನ್ನು ಒದಗಿಸಲು ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಇವರಿಗೆ ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1230 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ಇಂಧನ ಸಚಿವಾಲಯ

ವಿಷಯ: ಮೆ:: ವಿಜಯನಗರ ಶುಗರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 31.5 ಮೆಗಾ ವ್ಯಾಟ್ **(gross) ಮತ್ತು 18.5 ಮೆಗಾ ವ್ಯಾಟ್ (exportable)** ಸಾಮರ್ಥ್ಯದ Co-generation ಯೋಜನೆ ಸ್ಥಾಪನೆಗೆ ನಿರಾಕ್ಷೇಪಣೆ ನೀಡುವ ಬಗ್ಗೆ.

ಓದಲಾಗಿದೆ: ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/04/ವಿಜಯನಗರ/09/895 ದಿನಾಂಕ: 16/19.2.2009.

ಪ್ರಸ್ತಾವನೆ:–

ಮೇಲೆ ಓದಲಾದ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ:: ವಿಜಯನಗರ ಶುಗರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಶಿರನಹಳ್ಳಿ ಮತ್ತು ಗಂಗಾನಗರ ಗ್ರಾಮಗಳಲ್ಲಿ **31.5 ಮೆಗಾ ವ್ಯಾಟ್ (gross) ಮತ್ತು 18.5 ಮೆಗಾ ವ್ಯಾಟ್ (exportable)** ಸಾಮರ್ಥ್ಯದ Co-generation ಯೋಜನೆ ಸ್ಥಾಪನೆಗೆ ಅಭಿವೃದ್ಧಿದಾರರು ಉತ್ಪಾದಿಸಿದ ವಿದ್ಯುತ್‌ನ್ನು ರಾಜ್ಯ ವಿದ್ಯುತ್ ಜಾಲಕ್ಕೆ ಪೂರೈಸತಕ್ಕದೆಂಬ ಷರತ್ತಿಗೊಳಪಟ್ಟು ನಿರಾಕ್ಷೇಪಣೆ ನೀಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರದ ಆದೇಶ ಸಂಖ್ಯೆ: ಇಎನ್ 189 ಎನ್‌ಸಿಇ 2009, ಬೆಂಗಳೂರು, ದಿನಾಂಕ: 11ನೇ ಮೇ 2009.

ಮೆ:: ವಿಜಯನಗರ ಶುಗರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಶಿರನಹಳ್ಳಿ ಮತ್ತು ಗಂಗಾನಗರ ಗ್ರಾಮಗಳಲ್ಲಿ **31.5 ಮೆಗಾ ವ್ಯಾಟ್ (gross) ಮತ್ತು 18.5 ಮೆಗಾ ವ್ಯಾಟ್ (exportable)** ಸಾಮರ್ಥ್ಯದ Co-generation ಯೋಜನೆ ಸ್ಥಾಪನೆಗೆ ಈ ಕೆಳಗಿನ ಷರತ್ತಿಗೊಳಪಟ್ಟು ನಿರಾಕ್ಷೇಪಣೆಯನ್ನು ನೀಡಿದೆ:–

1. The company shall obtain separate clearance from Karnataka Power Transmission Corporation Limited in respect of evacuation of power.
2. The company shall enter into power purchase agreement for selling of power to Karnataka Power Transmission Corporation Limited.
3. The company shall obtain necessary statutory clearance wherever required from the respective Departments / Organizations such as Forest Department, Revenue Department, & Karnataka State Pollution Control Board, etc. for the Power plant.
4. The Detailed Project Report (D.P.R.) for the power plant shall be got approved by Karnataka Renewable Energy Development Limited, before the commencement of the power plant.
5. The Company shall supply the power to state grid.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1231 **ಎಸ್.ಜಿ. ಸಂಪತ್ ಕುಮಾರ್**

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ,

ವಿಷಯ: ಮೆ:: ಸ್ಮಾರ್ಟ್ ಬೈ ಇನ್‌ಕಾರ್ಪೊರೇಷನ್ ಕಂಪನಿಗೆ ಹಂಚಿಕೆ ಮಾಡಲಾಗಿರುವ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ರದ್ದು ಪಡಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಡಿಇ 26 ಎನ್‌ಸಿಇ 99 ದಿನಾಂಕ: 13.5.1999.

2) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/Vol IV/2008/2028 ದಿನಾಂಕ: 2/3.12.2008.

3) ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಎನ್ 493 ಎನ್‌ಸಿಇ 2008 ದಿನಾಂಕ: 27.12.2008.

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ:: ಸ್ಮಾರ್ಟ್ ಬೈ ಇನ್‌ಕಾರ್ಪೊರೇಷನ್ ಕಂಪನಿಗೆ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಚಿತ್ರದುರ್ಗ ಜಿಲ್ಲೆಯ, ಕಣವಹಟ್ಟಿ ಎಂಬಲ್ಲಿ ಒಡಂಬಡಿಕೆ ಮಾಡಿಕೊಂಡ ದಿನಾಂಕದಿಂದ 3 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಸದರಿ ಅಭಿವೃದ್ಧಿದಾರರಿಗೆ ಯೋಜನೆ ಹಂಚಿಕೆಯಾಗಿ 9 ವರ್ಷ ಕಳೆದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಿರುವುದಿಲ್ಲವೆಂದು ತಿಳಿಸುತ್ತಾ, ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದು ಪಡಿಸುವಂತೆ ಹಾಗೂ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಯೋಜನೆಯ ಅನುಷ್ಠಾನಕ್ಕಾಗಿ ಅನುಮತಿ ನೀಡಿ 9 ವರ್ಷ ಕಳೆದರೂ ಇದುವರೆಗೂ ಅನುಷ್ಠಾನನಿಟ್ಟಿನಲ್ಲಿ ಮೆ:: ಸ್ಮಾರ್ಟ್ ಬೈ ಇನ್‌ಕಾರ್ಪೊರೇಷನ್ ಕಂಪನಿಯು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ನೋಂದಾಯಿತ ಅಂಚೆ ಮೂಲಕ ತಿಳಿಸಲಾಗಿತ್ತು.

ಆದರೆ, ಕಾರಣ ಕೇಳುವ ನೋಟೀಸು ಲಕೋಟೆಯು 'Door lock, No such company in this address return to sender' ಎಂದು ವಾಪಸ್ ಬಂದಿರುತ್ತದೆ. ಇದರಿಂದಾಗಿ ಅಭಿವೃದ್ಧಿದಾರರು ಸದರಿ ವಿಳಾಸವಲ್ಲಿ ವಾಸ್ತವ್ಯ ಇಲ್ಲದಿರುವುದು ಹಾಗೂ ಸುಮಾರು 9 ವರ್ಷಗಳಿಂದ ಯೋಜನೆಯ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೆ:: ಸ್ಮಾರ್ಟ್ ಬೈ ಇನ್‌ಕಾರ್ಪೊರೇಷನ್ ಕಂಪನಿಯವರು ಯಾವುದೇ ಪ್ರಗತಿ ಸಾಧಿಸಿಲ್ಲದಿರುವುದು ಸ್ಪಷ್ಟವಾಗುತ್ತದೆ.

ಸದರಿ ವಿಷಯವನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ :–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 493 ಎನ್‌ಸಿಇ 2008, ಬೆಂಗಳೂರು, ದಿನಾಂಕ: 8ನೇ ಮೇ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ: ಡಿಇ 26 ಎನ್‌ಸಿಇ 99 ದಿನಾಂಕ: 13.5.1999 ರಲ್ಲಿ ಮೆ:: ಸ್ಮಾರ್ಟ್ ಬೈ ಇನ್‌ಕಾರ್ಪೊರೇಷನ್ ಕಂಪನಿಗೆ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಚಿತ್ರದುರ್ಗ ಜಿಲ್ಲೆಯ ಕಣವಹಟ್ಟಿಯಲ್ಲಿ ಮಾಡಿರುವ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1232 **ಎಸ್.ಜೆ. ಸಂಪತ್ ಕುಮಾರ್**

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ,

ವಿಷಯ: ಮೆ:: ವಾಲ್‌ಡೆಲ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹಂಚಿಕೆ ಮಾಡಲಾಗಿರುವ 10.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ರದ್ದು ಪಡಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಇಂಇ 246 ಎನ್‌ಸಿಇ 2003 ದಿನಾಂಕ: 12.6.2003.

2) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/Vol IV/2008/2028 ದಿನಾಂಕ: 2/3.12.2008.

3) ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಎನ್ 497 ಎನ್‌ಸಿಇ 2008 ದಿನಾಂಕ: 27.12.2008.

ಪ್ರಸ್ತಾವನೆ :–

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ:: ವಾಲ್‌ಡೆಲ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 10.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ತುಮಕೂರು ಜಿಲ್ಲೆಯ ಮಾಲೇನಹಳ್ಳಿಯಲ್ಲಿ ಒಡಂಬಡಿಕೆ ಮಾಡಿಕೊಂಡ ದಿನಾಂಕದಿಂದ 3 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಸದರಿ ಅಭಿವೃದ್ಧಿದಾರರಿಗೆ ಯೋಜನೆ ಹಂಚಿಕೆಯಾಗಿ 6 ವರ್ಷ ಕಳೆದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಿರುವುದಿಲ್ಲವೆಂದು ತಿಳಿಸುತ್ತಾ, ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದು ಪಡಿಸುವಂತೆ ಹಾಗೂ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಯೋಜನೆಯ ಅನುಷ್ಠಾನಕ್ಕಾಗಿ ಅನುಮತಿ ನೀಡಿ 6 ವರ್ಷ ಕಳೆದರೂ ಇದುವರೆಗೂ ಅನುಷ್ಠಾನನಿಟ್ಟಿನಲ್ಲಿ ಮೆ:: ವಾಲ್‌ಡಲ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ನೋಂದಾಯಿತ ಅಂಚೆ ಮೂಲಕ ತಿಳಿಸಲಾಗಿತ್ತು.

ಆದರೆ, ಕಾರಣ ಕೇಳುವ ನೋಟೀಸು ಲಕೋಟೆಯು ಅಭಿವೃದ್ಧಿದಾರರಿಗೆ ತಲುಪದೆ ವಾಪಸ್ ಬಂದಿರುತ್ತವೆ. ಇದರಿಂದಾಗಿ ಅಭಿವೃದ್ಧಿದಾರರು ಸದರಿ ವಿಳಾಸದಲ್ಲಿ ವಾಸ್ತವ್ಯ ಇಲ್ಲದಿರುವುದು ಹಾಗೂ ಸುಮಾರು 6 ವರ್ಷಗಳಿಂದ ಯೋಜನೆಯ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೆ:: ವಾಲ್‌ಡೆಲ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರು ಯಾವುದೇ ಪ್ರಗತಿ ಸಾಧಿಸಿಲ್ಲದಿರುವುದು ಸ್ಪಷ್ಟವಾಗುತ್ತದೆ.

ಸದರಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ :-

ಸರ್ಕಾರಿ ಆದೇಶ ಸಂಖ್ಯೆ: ಇಎನ್ 497 ಎನ್‌ಸಿಇ 2008, ಬೆಂಗಳೂರು, ದಿನಾಂಕ: 8ನೇ ಮೇ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ: ಇಂಇ 246 ಎನ್‌ಸಿಇ 2003 ದಿನಾಂಕ: 12.6.2003 ರಲ್ಲಿ ಮೆ:: ವಾಲ್‌ಡೆಲ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 10.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ತುಮಕೂರು ಜಿಲ್ಲೆಯ ಮಾಲೇನಹಳ್ಳಿಯಲ್ಲಿ ಮಾಡಿರುವ ಪಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1233

ಎಸ್.ಜಿ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ,

ವಿಷಯ: ಮೆ:: ಮಂಗಳಂ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹಂಚಿಕೆ ಮಾಡಲಾಗಿರುವ 10.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ರದ್ದು ಪಡಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಡಿಇ 48 ಎನ್‌ಸಿಇ 2002 ದಿನಾಂಕ : 20.6.2002.

2) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/Vol IV/2008/2028 ದಿನಾಂಕ: 2/3.12.2008.

3) ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಎನ್ 453 ಎನ್‌ಸಿಇ 2008 ದಿನಾಂಕ: 27.12.2008.

ಪ್ರಸ್ತಾವನೆ :-

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ:: ಮಂಗಳಂ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 10.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಚಿಕ್ಕಮಗಳೂರು ಜಿಲ್ಲೆಯ ಲಿಂಗದಹಳ್ಳಿ ಗ್ರಾಮದಲ್ಲಿ ಒಡಂಬಡಿಕೆ ಮಾಡಿಕೊಂಡ ದಿನಾಂಕದಿಂದ 3 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಸದರಿ ಅಭಿವೃದ್ಧಿದಾರರಿಗೆ ಯೋಜನೆ ಹಂಚಿಕೆಯಾಗಿ 6 ವರ್ಷ ಕಳೆದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಿರುವುದಿಲ್ಲವೆಂದು ತಿಳಿಸುತ್ತಾ, ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದು ಪಡಿಸುವಂತೆ ಹಾಗೂ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಯೋಜನೆಯ ಅನುಷ್ಠಾನಕ್ಕಾಗಿ ಅನುಮತಿ ನೀಡಿ 6 ವರ್ಷ ಕಳೆದರೂ ಇದುವರೆಗೂ ಅನುಷ್ಠಾನನಿಟ್ಟಿನಲ್ಲಿ ಮೆ:: ಮಂಗಳಂ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಯು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ನೋಂದಾಯಿತ ಅಂಚೆ ಮೂಲಕ ತಿಳಿಸಲಾಗಿತ್ತು. ಆದರೆ, ಕಾರಣ ಕೇಳುವ ನೋಟೀಸು ಲಕೋಟೆಯು 'Addresse left return to sender' ಎಂದು ವಾಪಸ್ ಬಂದಿರುತ್ತದೆ. ಇದರಿಂದಾಗಿ ಅಭಿವೃದ್ಧಿದಾರರು ಸದರಿ ವಿಳಾಸದಲ್ಲಿ ವಾಸ್ತವ್ಯ ಇಲ್ಲದಿರುವುದು ಹಾಗೂ ಸುಮಾರು 6 ವರ್ಷಗಳಿಂದ ಯೋಜನೆಯ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೆ:: ಮಂಗಳಂ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಯವರು ಯಾವುದೇ ಪ್ರಗತಿ ಸಾಧಿಸಿಲ್ಲದಿರುವುದು ಸ್ಪಷ್ಟವಾಗುತ್ತದೆ.

ಸದರಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ :-

ಸರ್ಕಾರಿ ಆದೇಶ ಸಂಖ್ಯೆ: ಇಎನ್ 453 ಎನ್‌ಸಿಇ 2008, ಬೆಂಗಳೂರು, ದಿನಾಂಕ: 8ನೇ ಮೇ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ: ಡಿಇ 48 ಎನ್‌ಸಿಇ 2002 ದಿನಾಂಕ:20.6.2002 ರಲ್ಲಿ ಮೆ:: ಮಂಗಳಂ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 10.00 ಮೆಗಾ ವ್ಯಾಟ್ ಸಾಮರ್ಥ್ಯದ

ಪವನ ವಿದ್ಯುತ್ ಯೋಜನೆಯನ್ನು ಚಿಕ್ಕಮಗಳೂರು ಜಿಲ್ಲೆಯ ಲಿಂಗದಹಳ್ಳಿ ಗ್ರಾಮದಲ್ಲಿ ಮಾಡಿರುವ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1234

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ,

ವಿಷಯ: ಮೆ:: ಶ್ರೀ ಸ್ವರ್ಣ ಎನರ್ಜಿ ಲಿಮಿಟೆಡ್ ಕಂಪನಿಗೆ ಹಂಚಿಕೆ ಮಾಡಲಾಗಿರುವ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದು ಪಡಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಡಿಇ 64 ಎನ್‌ಸಿಇ 2002 (1) ದಿನಾಂಕ: 4.6.2002.

2) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/ಎಸ್‌ಹೆಚ್‌ಪಿ/08/2029 ದಿನಾಂಕ: 2/3.12.2008.

3) ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಎನ್ 523 ಎನ್‌ಸಿಇ 2008 ದಿನಾಂಕ: 27.12.2008.

ಪ್ರಸ್ತಾವನೆ :–

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ :: ಶ್ರೀ ಸ್ವರ್ಣ ಎನರ್ಜಿ ಲಿಮಿಟೆಡ್ ಕಂಪನಿಗೆ ಉತ್ತರ ಕನ್ನಡ ಜಿಲ್ಲೆಯ ಕುಂಭಾರವಾಡ ಗ್ರಾಮದ ಬಳಿ ಅಪ್ಪರ್ ಕನೇರಿ ಮತ್ತು ಸುಪಾ ಜಲಾಶಯದ ಮಧ್ಯೆ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಅಪ್ಪರ್ ಕನೇರಿ ಕಿರು ಜಲ ವಿದ್ಯುತ್ ಯೋಜನೆಯನ್ನು ಒಡಂಬಡಿಕೆ ಮಾಡಿಕೊಂಡ ದಿನಾಂಕದಿಂದ 3 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಸದರಿ ಅಭಿವೃದ್ಧಿದಾರರಿಗೆ ಯೋಜನೆ ಹಂಚಿಕೆಯಾಗಿ 6 ವರ್ಷ ಕಳೆದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಿರುವುದಿಲ್ಲವೆಂದು ತಿಳಿಸುತ್ತಾ, ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದು ಪಡಿಸುವಂತೆ ಹಾಗೂ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಯೋಜನೆಯ ಅನುಷ್ಠಾನಕ್ಕಾಗಿ ಅನುಮತಿ ನೀಡಿ 6 ವರ್ಷ ಕಳೆದರೂ ಇದುವರೆಗೂ ಅನುಷ್ಠಾನದ ನಿಟ್ಟಿನಲ್ಲಿ ಮೆ:: ಶ್ರೀ ಸ್ವರ್ಣ ಎನರ್ಜಿ ಲಿಮಿಟೆಡ್ ಕಂಪನಿಯು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೋಂದಾಯಿತ ಅಂಚೆ ಮೂಲಕ ತಿಳಿಸಲಾಗಿತ್ತು. ಕಾರಣ ಕೇಳುವ ನೋಟೀಸನ್ನು ಅಭಿವೃದ್ಧಿದಾರರು ಸ್ವೀಕರಿಸಿರುವುದಕ್ಕೆ ಸ್ವೀಕೃತಿಯು ಇಂಧನ ಇಲಾಖೆಗೆ ಬಂದಿರುತ್ತದೆ. ಆದರೆ, ಸದರಿ ಕಾರಣ ಕೇಳುವ ನೋಟೀಸಿಗೆ ಅಭಿವೃದ್ಧಿದಾರರಿಂದ ಯಾವುದೇ ಉತ್ತರ ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ಇದರಿಂದ ಅಭಿವೃದ್ಧಿದಾರರಿಗೆ ಸದರಿ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಿಲ್ಲದಿರುವುದು ಸ್ಪಷ್ಟವಾಗುತ್ತದೆ.

ಸದರಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ :–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 523 ಎನ್‌ಸಿಇ 2008, ಬೆಂಗಳೂರು, ದಿನಾಂಕ: 8ನೇ ಮೇ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ: ಡಿಇ 64 ಎನ್‌ಸಿಇ 2002 (1) ದಿನಾಂಕ: 4.6.2002 ರಲ್ಲಿ ಮೆ :: ಶ್ರೀ ಸ್ವರ್ಣ ಎನರ್ಜಿ ಲಿಮಿಟೆಡ್ ಕಂಪನಿಗೆ ಉತ್ತರ ಕನ್ನಡ ಜಿಲ್ಲೆಯ ಕುಂಭಾರವಾಡ ಗ್ರಾಮದ ಬಳಿ ಅಪ್ಪರ್ ಕನೇರಿ ಮತ್ತು ಸುಪಾ ಜಲಾಶಯದ ಮಧ್ಯೆ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಅಪ್ಪರ್ ಕನೇರಿ ಕಿರು ಜಲ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1235

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ,

ವಿಷಯ: ಮೆ:: ಮಾಲಗಟ್ಟಿ ವಿಂಡ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹಂಚಿಕೆ ಮಾಡಲಾಗಿರುವ 40.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ರದ್ದು ಪಡಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಇಎನ್ 248 ಎನ್‌ಸಿಇ 2002 ದಿನಾಂಕ: 5.3.2003.

2) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/Vol IV/2008/2028 ದಿನಾಂಕ: 2/3.12.2008.

3) ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಎನ್ 466 ಎನ್‌ಸಿಇ 2008 ದಿನಾಂಕ: 27.12.2008.

ಪ್ರಸ್ತಾವನೆ:–

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ :: ಮಾಲಗಟ್ಟಿ ವಿಂಡ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 40.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ತುಮಕೂರು ಜಿಲ್ಲೆಯ, ತುಮಕೂರು ತಾಲ್ಲೂಕಿನಲ್ಲಿ ಒಡಂಬಡಿಕೆ ಮಾಡಿಕೊಂಡ ದಿನಾಂಕದಿಂದ 4 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಸದರಿ ಅಭಿವೃದ್ಧಿದಾರರಿಗೆ ಯೋಜನೆ ಹಂಚಿಕೆಯಾಗಿ 6 ವರ್ಷ ಕಳೆದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಿರುವುದಿಲ್ಲವೆಂದು ತಿಳಿಸುತ್ತಾ, ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದು ಪಡಿಸುವಂತೆ ಹಾಗೂ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಯೋಜನೆಯ ಅನುಷ್ಠಾನಕ್ಕಾಗಿ ಅನುಮತಿ ನೀಡಿ 6 ವರ್ಷ ಕಳೆದರೂ ಇದುವರೆಗೂ ಅನುಷ್ಠಾನನಿಟ್ಟಿನಲ್ಲಿ ಮೆ:: ಮಾಲಗಟ್ಟಿ ವಿಂಡ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ನೋಂದಾಯಿತ ಅಂಚೆ ಮೂಲಕ ತಿಳಿಸಲಾಗಿತ್ತು. ಆದರೆ, ಕಾರಣ ಕೇಳುವ ನೋಟೀಸು ಲಕೋಟೆಯು 'No such firm in this address return to sender' ಎಂದು ವಾಪಸ್ ಬಂದಿರುತ್ತದೆ. ಇದರಿಂದಾಗಿ ಅಭಿವೃದ್ಧಿದಾರರು ಸದರಿ ವಿಳಾಸದಲ್ಲಿ ವಾಸ್ತವ್ಯ ಇಲ್ಲದಿರುವುದು ಹಾಗೂ ಸುಮಾರು 6 ವರ್ಷಗಳಿಂದ ಯೋಜನೆಯ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೆ:: ಮಾಲಗಟ್ಟಿ ವಿಂಡ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರು ಯಾವುದೇ ಪ್ರಗತಿ ಸಾಧಿಸಿಲ್ಲದಿರುವುದು ಸ್ಪಷ್ಟವಾಗುತ್ತದೆ.

ಸದರಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ :–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 466 ಎನ್‌ಸಿಇ 2008, ಬೆಂಗಳೂರು, ದಿನಾಂಕ: 8ನೇ ಮೇ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ: ಇಎನ್ 248 ಎನ್‌ಸಿಇ 2002 ದಿನಾಂಕ: 5.3.2003 ರಲ್ಲಿ ಮೆ :: ಮಾಲಗಟ್ಟಿ ವಿಂಡ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 40.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ತುಮಕೂರು ಜಿಲ್ಲೆಯ, ತುಮಕೂರು ತಾಲ್ಲೂಕಿನಲ್ಲಿ ಪವನ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1236 **ಎಸ್.ಜೆ. ಸಂಪತ್ ಕುಮಾರ್**

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ವಿಷಯ: ಮೆ:: ಸೆವೆನ್ತ್ 'ಎಸ್' ಇಂಪೆಕ್ಸ್ ಕಂಪನಿಗೆ ಹಂಚಿಕೆ ಮಾಡಲಾಗಿರುವ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದು ಪಡಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಡಿಇ 137 ಎನ್‌ಸಿಇ 2002 ದಿನಾಂಕ: 22.6.2002.

2) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/ಎಸ್‌ಹೆಚ್‌ಪಿ/08/2029 ದಿನಾಂಕ: 2/3.12.2008.

3) ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಎನ್ 518 ಎನ್‌ಸಿಇ 2008 ದಿನಾಂಕ: 27.12.2008.

4) ಅಭಿವೃದ್ಧಿದಾರರ ಪತ್ರ ದಿನಾಂಕ: 31.12.2008.

ಪ್ರಸ್ತಾವನೆ :–

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ:: ಸೆವೆನ್ತ್ 'ಎಸ್' ಇಂಪೆಕ್ಸ್ ಕಂಪನಿಗೆ 3.00 ಮೆಗಾ ವ್ಯಾಟ್ ಸಾಮರ್ಥ್ಯದ ರಾಜನ್‌ಕೊಲ್ಲೂರು ಕಿರು ಜಲ ವಿದ್ಯುತ್ ಯೋಜನೆಯನ್ನು ಗುಲ್ಬರ್ಗಾ ಜಿಲ್ಲೆಯ ಶೋರಾಪುರ ತಾಲ್ಲೂಕಿನ ರಾಜನ್‌ಕೊಲ್ಲೂರು ಗ್ರಾಮದ ಹತ್ತಿರ ವಿರೂಪಾಕ್ಷ ಗೌಡ ಟನಲ್ ಎಸ್.ಎಲ್.ಜಿ.ಸಿ. ಗ ಅಡ್ಡಲಾಗಿ ಒಡಂಬಡಿಕೆ ಮಾಡಿಕೊಂಡ ದಿನಾಂಕದಿಂದ 3 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಸದರಿ ಅಭಿವೃದ್ಧಿದಾರರಿಗೆ ಯೋಜನೆ ಹಂಚಿಕೆಯಾಗಿ 6 ವರ್ಷ

ಕಳೆದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಿರುವುದಿಲ್ಲವೆಂದು ತಿಳಿಸುತ್ತಾ, ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದು ಪಡಿಸುವಂತೆ ಹಾಗೂ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಯೋಜನೆಯ ಅನುಷ್ಠಾನಕ್ಕಾಗಿ ಅನುಮತಿ ನೀಡಿ 6 ವರ್ಷ ಕಳೆದರೂ ಇದುವರೆಗೂ ಅನುಷ್ಠಾನನಿಟ್ಟಿನಲ್ಲಿ ಮೆ:: ಸೆವೆನ್ತ್ ಎಸ್ ಇಂಪೆಕ್ಸ್ ಕಂಪನಿಯು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ನೋಂದಾಯಿತ ಅಂಚೆ ಮೂಲಕ ತಿಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರ ಪತ್ರದಲ್ಲಿ ಮೆ:: ಸೆವೆನ್ತ್ 'ಎಸ್' ಇಂಪೆಕ್ಸ್ ಕಂಪನಿಯು ಯೋಜನೆಯು ಸುರಂಗ ಆಧಾರಿತ ಸ್ಥಳದಲ್ಲಿದ್ದು, ಯೋಜನೆಗೆ ಬೇಕಾಗಿರುವ ಯಂತ್ರೋಪಕರಣಗಳು ಭಾರತ ದೇಶದಲ್ಲಿ ಲಭ್ಯವಿಲ್ಲವಿರುವುದರಿಂದ ಹೊರ ದೇಶಗಳ ಪೂರೈಕೆದಾರರನ್ನು ಹುಡುಕುತ್ತಿರುವುದರಿಂದ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ವಿಳಂಬವಾಗಿದೆ ಎಂದು ತಿಳಿಸಿರುತ್ತಾರೆ.

ಯೋಜನೆಯು ಹಂಚಿಕೆಯಾಗಿ 6 ವರ್ಷ ಕಳೆದಿದ್ದರೂ, ಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೆ:: ಸೆವೆನ್ತ್ 'ಎಸ್' ಇಂಪೆಕ್ಸ್ ಕಂಪನಿಗೆ ಯಾವುದೇ ಪ್ರಗತಿ ಸಾಧಿಸಿಲ್ಲದಿರುವುದು ಸ್ಪಷ್ಟವಾಗುತ್ತದೆ.

ಸದರಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ :–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 526 ಎನ್‌ಸಿಇ 2008, ಬೆಂಗಳೂರು, ದಿನಾಂಕ: 8.5.2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ: ಡಿಇ 137 ಎನ್‌ಸಿಇ 2002 ದಿನಾಂಕ: 22.6.2002 ರಲ್ಲಿ ಮೆ:: ಸೆವೆನ್ತ್ 'ಎಸ್' ಇಂಪೆಕ್ಸ್ ಕಂಪನಿಗೆ ಗುಲ್ಬರ್ಗಾ ಜಿಲ್ಲೆಯ ಶೋರಾಪುರ ತಾಲ್ಲೂಕಿನ ರಾಜನ್‌ಕೊಲ್ಲೂರು ಗ್ರಾಮದ ಹತ್ತಿರ ವಿರೂಪಾಕ್ಷ ಗೌಡ ಟನಲ್ ಎನ್.ಎಲ್.ಬಿ.ಸಿ. ಗೆ ಅಡ್ಡಲಾಗಿ 3.00 ಮೆಗಾ ವ್ಯಾಟ್ ಸಾಮರ್ಥ್ಯದ ರಾಜನ್‌ಕೊಲ್ಲೂರು ಕಿರು ಜಲ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1237 **ಎಸ್.ಜೆ. ಸಂಪತ್ ಕುಮಾರ್**

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ,

ವಿಷಯ: ಮೆ:: ಲಕ್ಷ್ಮಿ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹಂಚಿಕೆ ಮಾಡಲಾಗಿರುವ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕೊನ್ನಪುರ್‌ದೊಡ್ಡಿ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದು ಪಡಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಡಿಇ 149 ಎನ್‌ಸಿಇ 2003 ದಿನಾಂಕ: 27.8.2003.

2) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/ಎಸ್‌ಹೆಚ್‌ಪಿ/08/2029 ದಿನಾಂಕ: 2/3.12.2008.

3) ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಎನ್ 530 ಎನ್‌ಸಿಇ 2008 ದಿನಾಂಕ: 27.12.2008.

ಪ್ರಸ್ತಾವನೆ :–

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ :: ಲಕ್ಷ್ಮಿ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕೊನ್ನಪುರ್‌ದೊಡ್ಡಿ ಕಿರು ಜಲ ವಿದ್ಯುತ್ ಯೋಜನೆಯನ್ನು ಮಂಡ್ಯ ಜಿಲ್ಲೆಯ, ಮಳವಳ್ಳಿ ತಾಲ್ಲೂಕಿನ ಕೊನ್ನಪುರ್‌ದೊಡ್ಡಿಯ ಶಿಂಷಾ ನದಿಗೆ ಅಡ್ಡಲಾಗಿ ಒಡಂಬಡಿಕೆ ಮಾಡಿಕೊಂಡ ದಿನಾಂಕದಿಂದ 3 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಸದರಿ ಅಭಿವೃದ್ಧಿದಾರರಿಗೆ ಯೋಜನೆ ಹಂಚಿಕೆಯಾಗಿ 6 ವರ್ಷ ಕಳೆದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಿರುವುದಿಲ್ಲವೆಂದು ತಿಳಿಸುತ್ತಾ, ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದು ಪಡಿಸುವಂತೆ ಹಾಗೂ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಯೋಜನೆಯ ಅನುಷ್ಠಾನಕ್ಕಾಗಿ ಅನುಮತಿ ನೀಡಿ 6 ವರ್ಷ ಕಳೆದರೂ ಇದುವರೆಗೂ ಅನುಷ್ಠಾನನಿಟ್ಟಿನಲ್ಲಿ ಮೆ:: ಲಕ್ಷ್ಮಿ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ನೋಂದಾಯಿತ ಅಂಚೆ ಮೂಲಕ ತಿಳಿಸಲಾಗಿತ್ತು. ಆದರೆ, ಕಾರಣ ಕೇಳುವ ನೋಟೀಸು

ಲಕೋಟೆಯು 'No such address in above house' ಎಂದು ವಾಪಸ್ ಬಂದಿರುತ್ತದೆ. ಇದರಿಂದಾಗಿ ಅಭಿವೃದ್ಧಿದಾರರು ಸದರಿ ವಿಳಾಸದಲ್ಲಿ ವಾಸ್ತವ್ಯ ಇಲ್ಲದಿರುವುದು ಹಾಗೂ ಸುಮಾರು 6 ವರ್ಷಗಳಿಂದ ಯೋಜನೆಯ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೆ:: ಲಕ್ಷ್ಮಿ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರು ಯಾವುದೇ ಪ್ರಗತಿ ಸಾಧಿಸಿಲ್ಲದಿರುವುದು ಸ್ಪಷ್ಟವಾಗುತ್ತದೆ.

ಸದರಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ :-

ಸರ್ಕಾರಿ ಆದೇಶ ಸಂಖ್ಯೆ: ಇಎನ್ 530 ಎನ್‌ಸಿಇ 2008, ಬೆಂಗಳೂರು, ದಿನಾಂಕ: 8.5.2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ: ಡಿಇ 149 ಎನ್‌ಸಿಇ 2003 ದಿನಾಂಕ: 27.8.2003 ರಲ್ಲಿ ಮೆ :: ಲಕ್ಷ್ಮಿ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕೊನ್ನಪುರ್‌ದೊಡ್ಡಿ ಕಿರು ಜಲ ವಿದ್ಯುತ್ ಯೋಜನೆಯನ್ನು ಮಂಡ್ಯ ಜಿಲ್ಲೆಯ, ಮಳವಳ್ಳಿ ತಾಲ್ಲೂಕಿನ ಕೊನ್ನಪುರ್‌ದೊಡ್ಡಿಯ ಶಿಂಷಾ ನದಿಗೆ ಅಡ್ಡಲಾಗಿ ಮಾಡಿರುವ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1238

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ,

ವಿಷಯ: ಮೆ:: ಸುನೀಲ್ ಆಗ್ರೋ ಫುಡ್ಸ್ ಲಿಮಿಟೆಡ್ ಕಂಪನಿಗೆ ಹಂಚಿಕೆ ಮಾಡಲಾಗಿರುವ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ರದ್ದು ಪಡಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಡಿಇ 39 ಎನ್‌ಸಿಇ 97 (7) ದಿನಾಂಕ: 23.10.1997.

2) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/Vol IV/2008/2028 ದಿನಾಂಕ: 2/3.12.2008.

3) ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಎನ್ 494 ಎನ್‌ಸಿಇ 2008 ದಿನಾಂಕ: 27.12.2008.

ಪ್ರಸ್ತಾವನೆ :-

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ :: ಸುನೀಲ್ ಆಗ್ರೋ ಫುಡ್ಸ್ ಲಿಮಿಟೆಡ್ ಕಂಪನಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಬೆಳಗಾಂ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನಲ್ಲಿ ಒಡಂಬಡಿಕೆ ಮಾಡಿಕೊಂಡ ದಿನಾಂಕದಿಂದ 4 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಸದರಿ ಅಭಿವೃದ್ಧಿದಾರರಿಗೆ ಯೋಜನೆ ಹಂಚಿಕೆಯಾಗಿ 11 ವರ್ಷ ಕಳೆದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಿರುವುದಿಲ್ಲವೆಂದು ತಿಳಿಸುತ್ತಾ, ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದು ಪಡಿಸುವಂತೆ ಹಾಗೂ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಯೋಜನೆಯ ಅನುಷ್ಠಾನಕ್ಕಾಗಿ ಅನುಮತಿ ನೀಡಿ 11 ವರ್ಷ ಕಳೆದರೂ ಇದುವರೆಗೂ ಅನುಷ್ಠಾನನಿಟ್ಟಿನಲ್ಲಿ ಮೆ:: ಸುನೀಲ್ ಆಗ್ರೋ ಫುಡ್ಸ್ ಲಿಮಿಟೆಡ್ ಕಂಪನಿಯು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ನೋಂದಾಯಿತ ಅಂಚೆ ಮೂಲಕ ತಿಳಿಸಲಾಗಿತ್ತು. ಆದರೆ, ಇದುವರೆಗೂ ಅನುಮತಿಸಲಾದ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಮೆ:: ಸುನೀಲ್ ಆಗ್ರೋ ಫುಡ್ಸ್ ಲಿಮಿಟೆಡ್ ಕಂಪನಿಯು ಸಾಧಿಸಿರುವ ಪ್ರಗತಿಯ ಬಗ್ಗೆ ಯಾವುದೇ ಉತ್ತರ ಸ್ವೀಕೃತವಾಗಿರುವುದಿಲ್ಲ. ಇದರಿಂದ ಅಭಿವೃದ್ಧಿದಾರರು ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಿಲ್ಲದಿರುವುದು ಸ್ಪಷ್ಟವಾಗುತ್ತದೆ.

ಸದರಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ :-

ಸರ್ಕಾರಿ ಆದೇಶ ಸಂಖ್ಯೆ: ಇಎನ್ 494 ಎನ್‌ಸಿಇ 2008, ಬೆಂಗಳೂರು, ದಿನಾಂಕ: 8ನೇ ಮೇ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ: ಡಿಇ 39 ಎನ್‌ಸಿಇ 97 (7) ದಿನಾಂಕ: 23.10.1997 ರಲ್ಲಿ ಮೆ :: ಸುನೀಲ್ ಆಗ್ರೋ ಫುಡ್ಸ್ ಲಿಮಿಟೆಡ್ ಕಂಪನಿಗೆ ಬೆಳಗಾಂ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನಲ್ಲಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1239

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ವಿಷಯ: ಮೆ:: ಸ್ವರ್ಣ ಗ್ರೀನ್ ಪವರ್ ಕಂಪನಿಗೆ ಹಂಚಿಕೆ ಮಾಡಲಾಗಿರುವ 7.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ರದ್ದು ಪಡಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಡಿಇ 216 ಎನ್‌ಸಿಇ 2001 ದಿನಾಂಕ : 19.7.2002.

2) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/Vol IV/2008/2028 ದಿನಾಂಕ: 2/3.12.2008.

3) ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಎನ್ 492 ಎನ್‌ಸಿಇ 2008 ದಿನಾಂಕ: 27.12.2008.

ಪ್ರಸ್ತಾವನೆ :-

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ :: ಸ್ವರ್ಣ ಗ್ರೀನ್ ಪವರ್ ಕಂಪನಿಗೆ 7.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಬೆಳಗಾಂ ಜಿಲ್ಲೆಯ ಮಾವಿನ ಹುಂಡದಲ್ಲಿ ಒಡಂಬಡಿಕೆ ಮಾಡಿಕೊಂಡ ದಿನಾಂಕದಿಂದ 3 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಸದರಿ ಅಭಿವೃದ್ಧಿದಾರರಿಗೆ ಯೋಜನೆ ಹಂಚಿಕೆಯಾಗಿ 7 ವರ್ಷ ಕಳೆದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಿರುವುದಿಲ್ಲವೆಂದು ತಿಳಿಸುತ್ತಾ, ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದು ಪಡಿಸುವಂತೆ ಹಾಗೂ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಯೋಜನೆಯ ಅನುಷ್ಠಾನಕ್ಕಾಗಿ ಅನುಮತಿ ನೀಡಿ 7 ವರ್ಷ ಕಳೆದರೂ ಇದುವರೆಗೂ ಅನುಷ್ಠಾನನಿಟ್ಟಿನಲ್ಲಿ ಮೆ:: ಸ್ವರ್ಣ ಗ್ರೀನ್ ಪವರ್ ಕಂಪನಿಯು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಕಾರಣವನ್ನು ನೋಂದಾಯಿತ ಅಂಚೆ ಮೂಲಕ ಕೇಳಲಾಗಿತ್ತು. ಆದರೆ, ಕಾರಣ ಕೇಳುವ ನೋಟೀಸು ಲಕೋಟೆಯು 'No such firm in this door number return to sender' ಎಂದು ವಾಪಸ್ ಬಂದಿರುತ್ತದೆ. ಇದರಿಂದಾಗಿ ಅಭಿವೃದ್ಧಿದಾರರು ಸದರಿ ವಿಳಾಸದಲ್ಲಿ ವಾಸ್ತವ್ಯ ಇಲ್ಲದಿರುವುದು ಹಾಗೂ ಸುಮಾರು 7 ವರ್ಷಗಳಿಂದ ಯೋಜನೆಯ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೆ:: ಸ್ವರ್ಣ ಗ್ರೀನ್ ಪವರ್ ಕಂಪನಿಯವರು ಯಾವುದೇ ಪ್ರಗತಿ ಸಾಧಿಸಿಲ್ಲದಿರುವುದು ಸ್ಪಷ್ಟವಾಗುತ್ತದೆ.

ಸದರಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ :-

ಸರ್ಕಾರಿ ಆದೇಶ ಸಂಖ್ಯೆ: ಇಎನ್ 492 ಎನ್‌ಸಿಇ 2008, ಬೆಂಗಳೂರು, ದಿನಾಂಕ: 8ನೇ ಮೇ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ: ಡಿಇ 216 ಎನ್‌ಸಿಇ 2001 ದಿನಾಂಕ : 19.7.2002 ರಲ್ಲಿ ಮೆ:: ಸ್ವರ್ಣ ಗ್ರೀನ್ ಪವರ್ ಕಂಪನಿಗೆ 7.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಬೆಳಗಾಂ ಜಿಲ್ಲೆಯ ಮಾವಿನ ಹುಂಡದಲ್ಲಿ ಮಾಡಿರುವ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1240

ಎಸ್.ಜಿ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ವಿಷಯ: ಮೆ:: ಅನ್ನಪೂರ್ಣೇಶ್ವರಿ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹಂಚಿಕೆ ಮಾಡಲಾಗಿರುವ 6.6 ಮೆಗಾ ವ್ಯಾಟ್ ಸಾಮರ್ಥ್ಯದ ಮುಡಬ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದು ಪಡಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಇಎನ್ 323 ಎನ್‌ಸಿಇ 2002 ದಿನಾಂಕ: 27.1.2003.

2) ಸರ್ಕಾರಿ ಆದೇಶ ಸಂಖ್ಯೆ: ಡಿಇ 323 ಎನ್‌ಸಿಇ 2003 ದಿನಾಂಕ: 23.8.2003.

3) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/ಎಸ್‌ಹೆಚ್‌ಪಿ/08/2029 ದಿನಾಂಕ: 2/3.12.2008.

4) ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಎನ್ 516 ಎನ್‌ಸಿಇ 2008 ದಿನಾಂಕ: 27.12.2008.

ಪ್ರಸ್ತಾವನೆ :-

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ:: ಅನ್ನಪೂರ್ಣೇಶ್ವರಿ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಮುಡಬ ಕಿರು ಜಲ ವಿದ್ಯುತ್ ಯೋಜನೆಯನ್ನು ತುಂಗಾ ನದಿಗೆ ಅಡ್ಡಲಾಗಿ ಮುಡಬ ಹಳ್ಳಿ ಶಿವಮೊಗ್ಗ ಜಿಲ್ಲೆಯಲ್ಲಿ ಒಡಂಬಡಿಕೆ ಮಾಡಿಕೊಂಡ ದಿನಾಂಕದಿಂದ 3 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಆದೇಶದಲ್ಲಿ ಸದರಿ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 2.00 ಮೆಗಾ ವ್ಯಾಟ್‌ನಿಂದ 6.6 ಮೆಗಾ ವ್ಯಾಟ್‌ಗೆ ಹೆಚ್ಚಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಸದರಿ ಅಭಿವೃದ್ಧಿದಾರರಿಗೆ ಯೋಜನೆ ಹಂಚಿಕೆಯಾಗಿ 6 ವರ್ಷ ಕಳೆದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಿರುವುದಿಲ್ಲವೆಂದು ತಿಳಿಸುತ್ತಾ, ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದು ಪಡಿಸುವಂತೆ ಹಾಗೂ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಯೋಜನೆಯ ಅನುಷ್ಠಾನಕ್ಕಾಗಿ ಅನುಮತಿ ನೀಡಿ 6 ವರ್ಷ ಕಳೆದರೂ ಇದುವರೆಗೂ ಅನುಷ್ಠಾನನಿಟ್ಟಿನಲ್ಲಿ ಮೆ:: ಅನ್ನಪೂರ್ಣೇಶ್ವರಿ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ನೋಂದಾಯಿತ ಅಂಚೆ ಮೂಲಕ ತಿಳಿಸಲಾಗಿತ್ತು. ಆದರೆ, ಕಾರಣ ಕೇಳುವ ನೋಟೀಸು ಲಕೋಟೆಯು 'No such firm in this address, not known' ಎಂದು ವಾಪಸ್ ಬಂದಿರುತ್ತದೆ. ಇದರಿಂದಾಗಿ ಅಭಿವೃದ್ಧಿದಾರರು ಸದರಿ ವಿಳಾಸದಲ್ಲಿ ವಾಸ್ತವ್ಯ ಇಲ್ಲದಿರುವುದು ಹಾಗೂ ಸುಮಾರು 6 ವರ್ಷಗಳಿಂದ ಯೋಜನೆಯ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೆ:: ಅನ್ನಪೂಣೇಶ್ವರಿ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರು ಯಾವುದೇ ಪ್ರಗತಿ ಸಾಧಿಸಿಲ್ಲದಿರುವುದು ಸ್ಪಷ್ಟವಾಗುತ್ತದೆ.

ಸದರಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ :–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 516 ಎನ್‌ಸಿಇ 2008, ಬೆಂಗಳೂರು, ದಿನಾಂಕ: 8ನೇ ಮೇ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ: ಇಎನ್ 323 ಎನ್‌ಸಿಇ 2002 ದಿನಾಂಕ: 27.1.2003 ಹಾಗೂ ಡಿಇ 323 ಎನ್‌ಸಿಇ 2003 ದಿನಾಂಕ: 23.8.2003 ರಲ್ಲಿ ಮೆ:: ಅನ್ನಪೂರ್ಣೇಶ್ವರಿ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 6.6 ಮೆಗಾ ವ್ಯಾಟ್ ಸಾಮರ್ಥ್ಯದ ಮುಡಬ ಕಿರು ಜಲ ವಿದ್ಯುತ್ ಯೋಜನೆಯನ್ನು ತುಂಗಾ ನದಿಗೆ ಅಡ್ಡಲಾಗಿ ಮುಡಬ ಹಳ್ಳಿ ಶಿವಮೊಗ್ಗ ಜಿಲ್ಲೆಯಲ್ಲಿ ಕಿರು ಜಲ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1241 **ಎಸ್.ಜೆ. ಸಂಪತ್ ಕುಮಾರ್**

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ,

ವಿಷಯ: ಮೆ:: ಶ್ರೀ ಸಾಯಿ ದೀಪ್ತಿ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹಂಚಿಕೆ ಮಾಡಲಾಗಿರುವ 1.5 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದು ಪಡಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಡಿಇ 154 ಪಿಪಿಸಿ 94 ದಿನಾಂಕ: 6.9.1994.

2) ಸರ್ಕಾರಿ ಆದೇಶ ಸಂಖ್ಯೆ: ಡಿಇ 155 ಎನ್‌ಸಿಇ 2005 ದಿನಾಂಕ: 16.6.2005.

3) ಸರ್ಕಾರಿ ಆದೇಶ ಸಂಖ್ಯೆ: ಇಎನ್ 117 ಎನ್‌ಸಿಇ 2006 ದಿನಾಂಕ: 6.3.2006.

4) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/ಎಸ್‌ಹೆಚ್‌ಪಿ/08/2029 ದಿನಾಂಕ: 2/3.12.2008.

5) ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಎನ್ 518 ಎನ್‌ಸಿಇ 2008 ದಿನಾಂಕ: 27.12.2008.

6) ಅಭಿವೃದ್ಧಿದಾರರ ಪತ್ರ ಸಂಖ್ಯೆ : ಎಸ್‌ಎಸ್‌ಡಿಪಿಪಿಎಲ್/ಜಿಒಪಿ/ಎಲ್–101 ದಿನಾಂಕ: 21.2.2009.

ಪ್ರಸ್ತಾವನೆ :–

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ:: ಅರುಣ್ ಇಂಜನಿಯರಿಂಗ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 1.5 ಮೆಗಾ ವ್ಯಾಟ್ ಸಾಮರ್ಥ್ಯದ ಭದ್ರಾ ಎಲ್.ಬಿ.ಸಿ. ಕಿರು ಜಲ ವಿದ್ಯುತ್ ಯೋಜನೆಯನ್ನು 3 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಆದೇಶದಲ್ಲಿ ಕಂಪನಿಯ ಹೆಸರನ್ನು ಮೆ:: ಅರುಣ್ ಇಂಜನಿಯರಿಂಗ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್‌ನಿಂದ ಮೆ:: ಶ್ರೀ ಸಾಯಿ ದೀಪ್ತಿ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿ ಎಂದು ಬದಲಾಯಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಆದೇಶದಲ್ಲಿ ಯೋಜನೆಯ ಅನುಷ್ಠಾನಕ್ಕೆ ಕಾಲಾವಕಾಶವನ್ನು ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಸದರಿ ಅಭಿವೃದ್ಧಿದಾರರಿಗೆ ಯೋಜನೆ ಹಂಚಿಕೆಯಾಗಿ 14 ವರ್ಷ ಕಳೆದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಿರುವುದಿಲ್ಲವೆಂದು ತಿಳಿಸುತ್ತಾ, ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದು ಪಡಿಸುವಂತೆ ಹಾಗೂ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಯೋಜನೆಯ ಅನುಷ್ಠಾನಕ್ಕಾಗಿ 1994 ರಲ್ಲಿ ಅನುಮತಿ ನೀಡಿದ್ದರೂ, ಇದುವರೆಗೂ ಅನುಷ್ಠಾನನಿಟ್ಟಿನಲ್ಲಿ ಮೆ:: ಶ್ರೀ ಸಾಯಿ ದೀಪ್ತಿ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (5) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ನೋಂದಾಯಿತ ಅಂಚೆ ಮೂಲಕ ತಿಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (6) ರ ಪತ್ರದಲ್ಲಿ ಮೆ:: ಶ್ರೀ ಸಾಯಿ ದೀಪ್ತಿ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರು ಪವರ್ ಹೌಸ್, ಟೇಲ್ ರೇಸ್ ಕಾಮಗಾರಿಯು ಏಪ್ರಿಲ್/ಮೇ 2007 ರಲ್ಲಿ ಪೂರ್ಣಗೊಂಡಿದ್ದು, ಸುರಂಗದ ಕಾಮಗಾರಿ ವಿಳಂಬವಾಗಿರುವುದರಿಂದ ಯೋಜನೆಯ ಅನುಷ್ಠಾನವು ವಿಳಂಬವಾಗಿರುತ್ತದೆ ಎಂದು ತಿಳಿಸಿರುತ್ತಾರೆ ಹಾಗೂ ಯೋಜನೆಗೆಬೇಕಾದ ಯಂತ್ರೋಪಕರಣಗಳು ಯೋಜನಾ ಸ್ಥಳಕ್ಕೆ ತಲುಪಿರುತ್ತದೆ ಎಂದು ಸಮಜಾಯಿಷಿ ನೀಡಿ, 2009 ಡಿಸೆಂಬರ್ ಒಳಗೆ ಯೋಜನೆಯನ್ನು ಪ್ರಾರಂಭಿಸುವ ಉದ್ದೇಶವಿದೆ ಎಂದು ತಿಳಿಸಿ, ಕಾಲಾವಕಾಶವನ್ನು 31.12.2009 ರವರೆಗೆ ವಿಸ್ತರಿಸಲು ಕೋರಿದ್ದಾರೆ. ಆದರೆ, ಯೋಜನೆಯು 1994 ನೇ ಸಾಲಿನಲ್ಲಿಯೇ ಹಂಚಿಕೆಯಾಗಿದ್ದರೂ ಯೋಜನೆಯ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೆ:: ಶ್ರೀ ಸಾಯಿ ದೀಪ್ತಿ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರು ಯಾವುದೇ ಪ್ರಗತಿ ಸಾಧಿಸಿಲ್ಲದಿರುವುದು ಸ್ಪಷ್ಟವಾಗುತ್ತದೆ.

ಸದರಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ :-

ಸರ್ಕಾರಿ ಆದೇಶ ಸಂಖ್ಯೆ: ಇಎನ್ 518 ಎನ್‌ಸಿಇ 2008, ಬೆಂಗಳೂರು, ದಿನಾಂಕ: 8ನೇ ಮೇ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ: ಡಿಇ 154 ಪಿಪಿಸಿ 94 ದಿನಾಂಕ: 6.9.1994 ರಲ್ಲಿ ಮೆ:: ಶ್ರೀ ಸಾಯಿ ದೀಪ್ತಿ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 1.5 ಮೆಗಾ ವ್ಯಾಟ್ ಸಾಮರ್ಥ್ಯದ ಭದ್ರಾ ಎಲ್.ಬಿ.ಸಿ. ಕಿರು ಜಲ ಯೋಜನೆಯ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1242 **ಎಸ್.ಜೆ. ಸಂಪತ್ ಕುಮಾರ್**

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ,

ವಿಷಯ: ಮೆ:: ಕರ್ನಾಟಕ ಹೆಲ್ತ್ ಇನ್‌ಸ್ಟಿಟ್ಯೂಟ್‌ಗೆ ಹಂಚಿಕೆ ಮಾಡಲಾಗಿರುವ 0.3 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದು ಪಡಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಡಿಇ 107 ಎನ್‌ಸಿಇ 1997 ದಿನಾಂಕ: 17.7.1998.

2) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/ಎಸ್‌ಹೆಚ್‌ಪಿ/08/2029 ದಿನಾಂಕ: 2/3.12.2008.

3) ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಎನ್ 518 ಎನ್‌ಸಿಇ 2008 ದಿನಾಂಕ: 27.12.2008.

4) ಅಭಿವೃದ್ಧಿದಾರರ ಪತ್ರ ದಿನಾಂಕ: 12.1.2009.

ಪ್ರಸ್ತಾವನೆ :-

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ:: ಕರ್ನಾಟಕ ಹೆಲ್ತ್ ಇನ್‌ಸ್ಟಿಟ್ಯೂಟ್‌ಗೆ 0.3 ಮೆಗಾ ವ್ಯಾಟ್ ಸಾಮರ್ಥ್ಯದ ಗೋಕಾಕ್ ಕಿರು ಜಲ ವಿದ್ಯುತ್ ಯೋಜನೆಯನ್ನು ಗೋಕಾಕ್ ಕೆನಾಲ್‌ನ 4 ಮತ್ತು 5ನೇ ಕಿ.ಮೀ. ಮಧ್ಯದಲ್ಲಿ ಒಡಂಬಡಿಕೆ ಮಾಡಿಕೊಂಡ ದಿನಾಂಕದಿಂದ 3 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಸದರಿ ಅಭಿವೃದ್ಧಿದಾರರಿಗೆ ಯೋಜನೆ ಹಂಚಿಕೆಯಾಗಿ 10 ವರ್ಷ ಕಳೆದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಿರುವುದಿಲ್ಲವೆಂದು ತಿಳಿಸುತ್ತಾ, ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದು ಪಡಿಸುವಂತೆ ಹಾಗೂ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಯೋಜನೆಯ ಅನುಷ್ಠಾನಕ್ಕಾಗಿ ಅನುಮತಿ ನೀಡಿ 10 ವರ್ಷ ಕಳೆದರೂ ಇದುವರೆಗೂ ಅನುಷ್ಠಾನನಿಟ್ಟನಲ್ಲಿ ಮೆ:: ಕರ್ನಾಟಕ ಹೆಲ್ತ್ ಇನ್‌ಸ್ಟಿಟ್ಯೂಟ್ ಸಂಸ್ಥೆಯು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ನೋಂದಾಯಿತ ಅಂಚೆ ಮೂಲಕ ತಿಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಪತ್ರದಲ್ಲಿ ಮೆ:: ಕರ್ನಾಟಕ ಹೆಲ್ತ್ ಇನ್‌ಸ್ಟಿಟ್ಯೂಟ್ ಕಂಪನಿಯು ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ವಿವಿಧ ಪ್ರಗತಿಗಳನ್ನು ಸಾಧಿಸಿದೆ ಎಂದು ತಿಳಿಸಿದ್ದು, ಯಾವುದೇ ಪೂರಕ ದಾಖಲಾತಿಗಳನ್ನು ಪತ್ರದೊಂದಿಗೆ ಸಲ್ಲಿಸಿರುವುದಿಲ್ಲ ಹಾಗೂ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾಲಾವಕಾಶವನ್ನು ಮುಂದಿನ 3 ವರ್ಷಗಳ ಅವಧಿಗೆ ವಿಸ್ತರಿಸಲು ಕೋರಿದ್ದಾರೆ.

ಯೋಜನೆಯು 1998 ನೇ ಸಾಲಿನಲ್ಲಿಯೇ ಹಂಚಿಕೆಯಾಗಿದ್ದರೂ ಸಹ ಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೆ:: ಕರ್ನಾಟಕ ಹೆಲ್ತ್ ಇನ್‌ಸ್ಟಿಟ್ಯುಟ್ ಸಂಸ್ಥೆಯು ಯಾವುದೇ ಪ್ರಗತಿ ಸಾಧಿಸಿಲ್ಲದಿರುವುದು ಸ್ಪಷ್ಟವಾಗುತ್ತದೆ.

ಸದರಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ :-

ಸರ್ಕಾರಿ ಆದೇಶ ಸಂಖ್ಯೆ: ಇಎನ್ 521 ಎನ್‌ಸಿಇ 2008, ಬೆಂಗಳೂರು, ದಿನಾಂಕ: 8ನೇ ಮೇ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ: ಡಿಇ 107 ಎನ್‌ಸಿಇ 1997 ದಿನಾಂಕ: 17.7.1998 ರಲ್ಲಿ ಮೆ:: ಕರ್ನಾಟಕ ಹೆಲ್ತ್ ಇನ್‌ಸ್ಟಿಟ್ಯುಟ್ ಸಂಸ್ಥೆಗೆ 0.3 ಮೆಗಾ ವ್ಯಾಟ್ ಸಾಮರ್ಥ್ಯದ ಗೋಕಾಕ್ ಕಿರು ಜಲ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1243

ಎಸ್.ಜಿ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ,

ಜಲಸಂಪನ್ಮೂಲ ಸಚಿವಾಲಯ

ವಿಷಯ: ಗದಗ್ ಜಿಲ್ಲೆ, ಶಿರಹಟ್ಟಿ ತಾಲ್ಲೂಕು ಮಜ್ಜೂರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ: ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 21/07/07ರ ಪತ್ರ ಸಂಖ್ಯೆ:ಮುಇಂ/ಸನೀ(ಉ)ವ/ಭೂಸ್ವಾಪ್ರ 2007-08/6089.

ಪ್ರಸ್ತಾವನೆ:

ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜನಿಯರ್ ರವರ ಮೇಲೆ ಓದಲಾದ ಪತ್ರದಲ್ಲಿ ಗದಗ್ ಜಿಲ್ಲೆ, ಶಿರಹಟ್ಟಿ ತಾಲ್ಲೂಕು ಮಜ್ಜೂರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಮಜ್ಜೂರ ಮತ್ತು ವರವಿ ಗ್ರಾಮಗಳ ಜಮೀನುಗಳಿಗೆ ಗದಗ್‌ನ ಸಿವಿಲ್ ನ್ಯಾಯಾಲಯವು (ಹಿರಿಯ ಶ್ರೇಣಿ) ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 28/08/97
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ 06/11/2000

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಗದಗ್‌ನ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣಗಳನ್ನು ದಾಖಲಿಸಿದ್ದು, ಈ ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ. ಸದರಿ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವ ಅವಶ್ಯಕತೆ ಇಲ್ಲವೆಂದು ಕಾನೂನು ಇಲಾಖೆಯು ಹಿಂಬರಹ ಸಂಖ್ಯೆ:ಲಾ 1797 ಎಲ್‌ಜಿಎಸ್ 2006, ದಿನಾಂಕ 19/01/07ರಲ್ಲಿ ಅಭಿಪ್ರಾಯ ನೀಡಿದೆ. ಸಿವಿಲ್ ನ್ಯಾಯಾಲಯದ ತೀರ್ಪಿನಂತೆ ಈ ಪ್ರಕರಣದಲ್ಲಿ ಪಾವತಿಸಬೇಕಾಗಿರುವ ಮೊತ್ತದ ವಿವರ ಕೆಳಕಂಡಂತಿದೆ:

ಕ್ರ ಸಂ	ಎಲ್ಎಸಿ ಸಂಖ್ಯೆ	ಸ.ನಂ.	ವಿಸ್ತೀರ್ಣ ಎ–ಗುಂ.	ಗ್ರಾಮ	ಪರಿಹಾರ ಮೊತ್ತ ರೂ.ಗಳಲ್ಲಿ
1	517/01	80/ಎ	6–14	ವರವಿ	185400
2	519/01	82	0–20	ವರವಿ	14598
3	521/01	87	3–15	ಮಜ್ಜೂರ	98541
4	523/01	79/2	0–08	ವರವಿ	5841
5	525/01	16/5	0–03	ಮಜ್ಜೂರ	2191
6	527/01	19/1+2+3ಎ	15–30	ಮಜ್ಜೂರ	459852
7	529/01	25/3	4–24	ಮಜ್ಜೂರ	134306
8	531/01	25/4	2–12	ಮಜ್ಜೂರ	67154
9	533/01	25/2	2–12	ಮಜ್ಜೂರ	65780
		ಒಟ್ಟು			**1033663**

*** ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.**

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಸನೀಇ 118 ಭೂಸ್ವಾಪ್ರ 2007, ಬೆಂಗಳೂರು, ದಿನಾಂಕ 14ನೇ ಮೇ 2009

ಗದಗ್ ಜಿಲ್ಲೆ, ಶಿರಹಟ್ಟಿ ತಾಲ್ಲೂಕು ಮಜ್ಜೂರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಮಜ್ಜೂರ ಮತ್ತು ವರವಿ ಗ್ರಾಮಗಳಿಗೆ ಸೇರಿದ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಮೇಲ್ಕಂಡ ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ಲೆಕ್ಕ ಹಾಕಿದ ಪರಿಹಾರ ಧನ ಮೊತ್ತ ರೂ.10,33,663–00ಗಳನ್ನು (ಹತ್ತು ಲಕ್ಷದ ಮೂವತ್ತ್ಮೂರು ಸಾವಿರದ ಆರುನೂರ ಅರವತ್ತ್ಮೂರು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತ:ಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16/05/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1244

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ವಿಷಯ: ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕು ಪಡುಕೋಟೆ ಕಾವಲ್ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಸದರಿ ಗ್ರಾಮದ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆ ಕಲಂ 28(ಎ)ರ ಐತೀರ್ಪಿನಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರ ದಿನಾಂಕ 04/03/08ರ ಪತ್ರ ಸಂಖ್ಯೆ:ಮುಸನೀ(ದ)/ಲೆಶಾ/ಲೆಸ/1–3/ ಭೂಸ್ವಾಧೀನ/07–08/543.

ಪ್ರಸ್ತಾವನೆ:

ಮೇಲೆ ಓದಲಾದ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ರವರ ದಿನಾಂಕ 04/03/08ರ ಪತ್ರದಲ್ಲಿ ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕು ಪಡುಕೋಟೆ ಕಾವಲ್ ಸಣ್ಣ ನೀರಾವರಿ ಕೆರೆ

ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಪಡುಕೋಟೆ ಕಾವಲ್ ಗ್ರಾಮದ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆ ಕಲಂ 28(ಎ)ರಡಿ ಉಪ ವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳು, ಹುಣಸೂರು ಇವರು ಹೊರಡಿಸಿದ ಐತೀರ್ಪಿನಂತೆ ಪರಿಹಾರ ಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಈ ಕೆರೆಯ ಮೂಲ ಭೂಸ್ವಾಧೀನ ಪ್ರಕ್ರಿಯೆಯ ವಿವರಗಳ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 10/11/1983
- ಉಪ ವಿಭಾಗಾಧಿಕಾರಿಗಳ ಐತೀರ್ಪಿನ ದಿನಾಂಕ 29/10/2005.

ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕಿನ ಪಡುಕೋಟೆ ಕಾವಲ್ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಪಡುಕೋಟೆ ಕಾವಲ್ ಗ್ರಾಮದ ಸ.ನಂ.1/405ರ 2–25 ಎಕರೆ ಜಮೀನಿಗೆ ಎಲ್.ಎ.ಸಿ. ಸಂಖ್ಯೆ:154/07ರಲ್ಲಿ ಸಿವಿಲ್ ನ್ಯಾಯಾಲಯವು ನೀಡಿದ ತೀರ್ಪಿನ್ನು ಉಲ್ಲೇಖಿಸಿ ಇದೇ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಸೇರಿದ್ದ ಕೆಳಕಂಡ ಪಡುಕೋಟೆ ಕಾವಲ್ ಗ್ರಾಮದ ಸ.ನಂ.1/405ರ ಜಮೀನಿಗೆ ಭೂಸ್ವಾಧೀನ ಕಾಯ್ದೆ ಕಲಂ 28(ಎ)ರಡಿ ಹೆಚ್ಚಿನ ಪರಿಹಾರ ಧನಕ್ಕೆ ಐತೀರ್ಪು ನೀಡಿದ್ದಾರೆ. ಈ ಐತೀರ್ಪಿನಂತೆ ಪಾವತಿಸಬೇಕಾದ ಪರಿಹಾರ ಧನದ ಮೊತ್ತದ ವಿವರ ಕೆಳಕಂಡಂತಿದೆ:

ಕ್ರ ಸಂ	ಪಡುಕೋಟೆ ಕಾವಲ್ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ.	ಭೂ.ಸ್ವಾ. ಕಾಯ್ದೆ ಕಲಂ 28(ಎ)ರಡಿ ಐತೀರ್ಪಿನ ಸಂಖ್ಯೆ ಮತ್ತು ದಿನಾಂಕ	ಪರಿಹಾರ ಮೊತ್ತ ರೂ.ಗಳಲ್ಲಿ
1	1/405	2–25	ಎಲ್ಎಕ್ಯೂ ಎಸ್ಆರ್ 36/80–81, ದಿನಾಂಕ 29/10/05	2,26,939–00

ವಿಷಯವನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಸನೀಇ 24 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ 14ನೇ ಮೇ 2009.

ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕು ಪಡುಕೋಟೆ ಕಾವಲ್ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಪಡುಕೋಟೆ ಕಾವಲ್ ಗ್ರಾಮದ ಸ.ನಂ.1/405ರ 2–25 ಎಕರೆ ಜಮೀನಿಗೆ ಭೂಸ್ವಾಧೀನ ಕಾಯ್ದೆ ಕಲಂ 28(ಎ)ರ ಪ್ರಕಾರ ಉಪ ವಿಭಾಗಾಧಿಕಾರಿ ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿಗಳು, ಹುಣಸೂರು ಇವರು ಹೊರಡಿಸಿರುವ ದಿನಾಂಕ 29/10/05ರ ಐತೀರ್ಪಿನಂತೆ ರೂ.2,26,939–00ಗಳನ್ನು (ಎರಡು ಲಕ್ಷದ ಇಪ್ಪತ್ತಾರು ಸಾವಿರದ ಒಂಭೈನೂರ ಮೂವತ್ತೊಂಭತ್ತು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತ:ಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16/05/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರ ದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1245 **ಕೆ. ಸುಧಾಕರ ಶೆಟ್ಟಿ**

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ವಿಷಯ: ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ತಾಲ್ಲೂಕು, ಇಂಗಲಗೆರೆ ಕೆರೆಯಲ್ಲಿ ದೋಣಿ ವಿಹಾರ ನಡೆಸಲು ಗೌತಮ ಬುದ್ಧ ಸೋಷಿಯಲ್ ಸರ್ವಿಸ್ ಅನುಮತಿ ನೀಡುವ ಬಗ್ಗೆ.

ಓದಲಾಗಿದೆ: ದಿನಾಂಕ 23/12/08ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ರವರ ಪತ್ರದ ಸಂಖ್ಯೆ:ಮುಸದ/ತಾಂ–2/ಸಇಂ–4/1/ಪಿರಿಯಾಪಟ್ಟಣ/ 2008/4504..

ಪ್ರಸ್ತಾವನೆ:

ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ತಾಲ್ಲೂಕು, ಹಂದಿಗುಡ್ಡ ಕಾವಲು ಬೈಲಗುಪ್ಪೆ ಗ್ರಾಮದ ಸಣ್ಣ ನೀರಾವರಿ ಇಲಾಖೆಯ ಅಧೀನವಲ್ಲಿರುವ ಇಂಗಲಗೆರೆ ಕೆರೆಯಲ್ಲಿ ದೋಣಿ ವಿಹಾರ ನಡೆಸಲು ಗೌತಮ ಬುದ್ಧ ಸೋಷಿಯಲ್ ಸರ್ವಿಸ್ (ರಿ), ಹಂದಿಗುಡ್ಡ ಕಾವಲು ಇವರಿಗೆ ಅನುಮತಿ ನೀಡುವಂತೆ ಬೈಲಗುಪ್ಪೆ ಗ್ರಾಮದ ಗ್ರಾಮ ಪಂಚಾಯತಿಯ ಅಧ್ಯಕ್ಷರು ಮತ್ತು ಪಿರಿಯಾಪಟ್ಟಣ ತಾಲ್ಲೂಕು, ಕೊಪ್ಪ ಕ್ಷೇತ್ರದ ಜಿಲ್ಲಾ ಪಂಚಾಯತ್ ಸದಸ್ಯರು ಕೋರಿರುತ್ತಾರೆ. ಈ ವಿಷಯದಲ್ಲಿ ಮೇಲೆ ಓದಲಾದ ದಿನಾಂಕ 23/12/08ರ ಪತ್ರದಲ್ಲಿ ಸಣ್ಣ ನೀರಾವರಿ ದಕ್ಷಿಣ ವಲಯದ ಮುಖ್ಯ ಇಂಜನಿಯರ್‌ರವರು ಸದರಿ ಇಂಗಲಗೆರೆ ಕೆರೆಯಲ್ಲಿ ದೋಣಿ ವಿಹಾರ ನಡೆಸಲು ಷರತ್ತು ಮತ್ತು ನಿಬಂಧನೆಗೊಳಪಟ್ಟು ಅನುಮತಿ ನೀಡಬಹುದೆಂದು ಅಭಿಪ್ರಾಯ ನೀಡಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಸನೀಇ 42 ಹೊಕೆನಿ 2008, ಬೆಂಗಳೂರು, ದಿನಾಂಕ 18ನೇ ಮೇ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ತಾಲ್ಲೂಕು, ಹಂದಿಗುಡ್ಡಕಾವಲು ಬೈಲಗುಪ್ಪೆ ಗ್ರಾಮದ ಸಣ್ಣ ನೀರಾವರಿ ಇಲಾಖೆಗೆ ಸೇರಿದ ಇಂಗಲಗೆರೆ ಕೆರೆಯಲ್ಲಿ ದೋಣಿ ವಿಹಾರ ನಡೆಸಲು ಗೌತಮ ಬುದ್ಧ ಸೋಷಿಯಲ್ ಸರ್ವಿಸ್ (ರಿ), ಹಂದಿಗುಡ್ಡಕಾವಲು, ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ ರವರಿಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರವು ಅನುಮೋದನೆ ನೀಡಿದೆ.

1. ಈ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರಗಳಿಂದ ಅಂದರೆ ಬಂದರು ಮತ್ತು ಒಳನಾಡು ಜಲಸಾರಿಗೆ, ಪರಿಸರ ಇಲಾಖೆ, ಗ್ರಾಮ ಪಂಚಾಯತ್, ಅಗ್ನಿ ಶಾಮಕ ಇಲಾಖೆಗಳಿಂದ ಅನುಮತಿ ಪಡೆದ ನಂತರವೇ ದೋಣಿ ವಿಹಾರ ನಡೆಸಲು ಕ್ರಮ ಜರುಗಿಸುವುದು.
2. ದೋಣಿ ವಿಹಾರಕ್ಕಾಗಿ ಸಂಸ್ಥೆಯು ವಾರ್ಷಿಕ ರೂ.6000/–ಗಳ ಶುಲ್ಕವನ್ನು ಸಣ್ಣ ನೀರಾವರಿ ಇಲಾಖೆಗೆ ಸಂಬಂಧಪಟ್ಟ ಕಛೇರಿಗೆ ಪಾವತಿಸುವುದು ಹಾಗೂ ಈ ಅನುಮತಿಯ ಈ ಆದೇಶ ಹೊರಡಿಸಿದ ದಿನಾಂಕದಿಂದ 3 ವರ್ಷಗಳ ಅವಧಿಗೆ ಮರುನವೀಕರಣಗೊಳಿಸುವ ಷರತ್ತಿಗೊಳಪಟ್ಟಿದೆ.
3. ದೋಣಿ ವಿಹಾರ ಸಂದರ್ಭದಲ್ಲಿ ಕೆರೆ ಏರಿ, ಕೆರೆಯ ಮುಖ್ಯ ತೂಬು, ಕೆರೆಯ ಕೋಡಿ, ಇತ್ಯಾದಿಗಳಿಗೆ ಹಾನಿಯಾಗದಂತೆ ಹಾಗೂ ಕೆರೆಯ ಅಚ್ಚುಕಟ್ಟುದಾರರಿಗೆ ನೀರು ಒದಗಿಸುವಲ್ಲಿ ಯಾವುದೇ ತೊಂದರೆಯಾಗದಂತೆ ಮತ್ತು ಮೀನು ಸಾಕಾಣಿಕೆಗೆ ಧಕ್ಕೆಯಾಗದಂತೆ ಮುನ್ನೆಚ್ಚರಿಕೆ ವಹಿಸುವುದು.
4. ಕೆರೆ ಹಾಗೂ ಪರಿಸರ ಸ್ವಚ್ಛತೆಗೆ ಧಕ್ಕೆಯಾಗದಂತೆ ನೋಡಿಕೊಳ್ಳುವುದು. ದೋಣಿ ವಿಹಾರ ಸಂದರ್ಭದಲ್ಲಿ ಸಾರ್ವಜನಿಕರಿಗೆ ಮುಕ್ತ ಪ್ರವೇಶಕ್ಕೆ ಅನಾವಶ್ಯಕವಾಗಿ ನಿರ್ಬಂಧ ವಿಧಿಸಬಾರದು.
5. ಯಾವುದೇ ಅನಧಿಕೃತ ಚಟುವಟಿಕೆಗಳನ್ನು ನಡೆಸದೆ ಸಣ್ಣ ನೀರಾವರಿ ಇಲಾಖೆಯ ನಿರ್ದೇಶನವನ್ನು ಕಾಲಕಾಲಕ್ಕೆ ಪಾಲಿಸುವ ಷರತ್ತುಗಳಿಗೊಳಪಟ್ಟಿದೆ.
6. ದೋಣಿ ವಿಹಾರ ಸಂದರ್ಭದಲ್ಲಿ ಎಲ್ಲಾ ಸಂರಕ್ಷಣಾ ಸಿದ್ದತೆಗಳನ್ನು ತೆಗೆದು ಕೊಳ್ಳುವುದು. ಯಾವುದೇ ಪ್ರಾಣಹಾನಿ ಅಥವಾ ಸಾವು ನೋವು ಸಂಭವಿಸಿದಲ್ಲಿ ಅದರ ಪೂರ್ಣ ಜವಾಬ್ದಾರಿಯನ್ನು ಸಂಸ್ಥೆಯೇ ಹೊರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1246

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ವಿಷಯ: ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಂತರ್ಜಲ ವಿಭಾಗಕ್ಕೆ ಸಂಬಂಧಿಸಿದಂತೆ 2009–10ನೇ ಸಾಲಿನ ಕಾರ್ಯಕ್ರಮಗಳನ್ನು ಮುಂದುವರಿಸುವ ಬಗ್ಗೆ–ಆದೇಶ.

ಓದಲಾಗಿದೆ: ಗಣಿ ಮತ್ತು ಭೂವೈಜ್ಞಾನಿಕ ಸಂಪನ್ಮೂಲ ಆಯುಕ್ತರು ಹಾಗೂ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರ ಪತ್ರ ಸಂಖ್ಯೆ: ಗಭೂಇ/ಅಜವಿ/ಮುಪಯೋ/2009–10/149, ದಿನಾಂಕ 16/04/2009.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಆಯುಕ್ತರು ಹಾಗೂ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರು ಅಂತರ್ಜಲ ವಿಭಾಗಕ್ಕೆ ಸಂಬಂಧಪಟ್ಟ ಯೋಜನೆಗಳನ್ನು 2009–10ನೇ ಸಾಲಿನಲ್ಲಿ ಮುಂದುವರಿಸಲು ಸರ್ಕಾರದ ಅನುಮೋದನೆಯನ್ನು ಕೋರಿರುತ್ತಾರೆ. ಈ ಬಗ್ಗೆ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ನೀಡಿದೆ.

ಸರ್ಕಾರದ ಆದೇಶ ಸಂಖ್ಯೆ:ಸನೀಇ 08 ಅಜಅ 2009, ಬೆಂಗಳೂರು, ದಿನಾಂಕ 14ನೇ ಮೇ 2009.

ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಂತರ್ಜಲ ವಿಭಾಗದಲ್ಲಿ ಪ್ರಗತಿಯಲ್ಲಿರುವ ಈ ಕೆಳಗೆ ನಮೂದಿಸಿರುವ ಯೋಜನೆಗಳನ್ನು (ರಾಜ್ಯ ಘಟಕ) 2009-10ನೇ ಸಾಲಿಗೆ ಮುಂದುವರಿಸಲು ಸರ್ಕಾರವು ಅನುಮೋದನೆ ನೀಡಿದೆ.

ಕ್ರ ಸಂ.	ಯೋಜನೆ ಮತ್ತು ಶೀರ್ಷಿಕೆ	2009-10ನೇ ಸಾಲಿನ ಅನುದಾನ (ಲಕ್ಷ ರೂ.ಗಳಲ್ಲಿ)
1	ನಿರ್ದೇಶನ ಮತ್ತು ಆಡಳಿತ "2702-02-001-0-01"- ಪೂರಕ ವೆಚ್ಚ	4.00
2	ದೂರ ಸಂವೇದನಾ ಕೌಶಲ್ಯದಿಂದ ಅಂತರ್ಜಲ ಅಭಿವೃದ್ಧಿ "2702-02-005-0-11"	22.28
3	ಸಮೀಕ್ಷೆ ಮೇಲ್ಮೈ ಜಲ ಮತ್ತು ಅಂತರ್ಜಲದ ಸಂಸ್ಥೆಯ ಬಲವರ್ಧನೆ "2702-02-005-0-15"	151.94
4	ರಾಷ್ಟ್ರೀಯ ಜಲ ಶಾಸ್ತ್ರ ಯೋಜನೆ "2702-02-005-0-80" ಯೋಜನೆ	169.49
	ಒಟ್ಟು	**347.71**

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 1996, ದಿನಾಂಕ 10/07/1996ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರ ದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1247 **ಕೆ. ಸುಧಾಕರ ಶೆಟ್ಟಿ**

ಸರ್ಕಾರದ ಅಧೀನ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ).

ವಿಷಯ: ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕು, ಗಾಣದಕಟ್ಟೆ ಹತ್ತಿರ ಮತ್ತಿಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಕುರಿತು.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ:ಸನೀಇ 02 ಅಪಿಬಂ 2009, ದಿನಾಂಕ 21/02/09.

2) ದಿನಾಂಕ 21/03/09ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ರವರ ಪತ್ರ ಸಂಖ್ಯೆ:ಮುಸ(ದ)/ತಾಂ-4/ಸಇಂ-10/ದಾವಣಗೆರೆ/ಚನ್ನಗಿರಿ/ಗಾಣದಕಟ್ಟೆ/ಚೆಕ್‌ಡ್ಯಾಂ/2009/1677.

3) ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ(ದ), ಬೆಂಗಳೂರು ರವರ ದಿನಾಂಕ 01/04/09ರ ಪತ್ರ ಸಂಖ್ಯೆ:ಮುಸದ/ಆಪ್ತ ಶಾಖೆ/ಟೆಂಡರ್/08-09/1748.

ಪ್ರಸ್ತಾವನೆ:

ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕು, ಗಾಣದಕಟ್ಟೆ ಹತ್ತಿರ ಮತ್ತಿಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿಯ 600.00 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಮೇಲೆ(1)ರಲ್ಲಿ ಓದಲಾದ ದಿನಾಂಕ 21/03/09ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಚಿತ್ರದುರ್ಗ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ದ್ವಿಲಕೋಟೆ ಪದ್ಧತಿಯಲ್ಲಿ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

1	ದಾವಣಗೆರೆ ಜಿಲ್ಲಾ ಟೆಂಡರ್ ಬುಲೆಟಿನ್	ದಿ:13/02/09
2	ವಿಜಯ ಕರ್ನಾಟಕ ಹಾಗೂ ಕನ್ನಡಪ್ರಭ ದಿನಪತ್ರಿಕೆಗಳು	ದಿ:20/02/09
3	ರಾಜ್ಯ ಟೆಂಡರ್ ಬುಲೆಟಿನ್	ದಿ:21/02/09

ಕಾರಣಾಂತರಗಳಿಂದ ಈ ಅಧಿಸೂಚನೆಯನ್ನು ಹಿಂದೂಡಲಾಗಿದ್ದು, ಹಿಂದೂಡಿಕೆ ಪ್ರಕಟಣೆಯನ್ನು ದಿನಾಂಕ 19/02/09ರಂದು ಹೊರಡಿಸಿರುತ್ತಾರೆ. ರಾಜ್ಯ ಟೆಂಡರ್ ಬುಲೆಟಿನ್‌ನಲ್ಲಿ ದಿನಾಂಕ 25/02/09. ದಾವಣಗೆರೆ ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ದಿನಾಂಕ 21/02/09 ಹಾಗೂ ವಿಜಯ ಕರ್ನಾಟಕ ಹಾಗೂ ಕನ್ನಡಪ್ರಭ ದಿನಪತ್ರಿಕೆಯಲ್ಲಿ ದಿನಾಂಕ 22/02/09ರಂದು ಪ್ರಕಟಿಸಲಾಗಿದೆ. ಈ ಟೆಂಡರ್ ಕರೆಗೆ ಪ್ರತಿಕ್ರಿಯಿಸಿ ಖಾಲಿ ಟೆಂಡರ್ ಫಾರಂ ಪಡೆದ ಇಬ್ಬರು ಗುತ್ತಿಗೆದಾರರು ನಿಗದಿತ ದಿನದಂದು ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಿರುತ್ತಾರೆ. ಸ್ವೀಕರಿಸಲಾದ ತಾಂತ್ರಿಕ ಬಿಡ್ ಅನ್ನು ದಿನಾಂಕ 11/03/09ರಂದು ತೆರೆಯಲಾಗಿದ್ದು, ಇಬ್ಬರೂ ಗುತ್ತಿಗೆದಾರರ ಟೆಂಡರುಗಳು ಅರ್ಹವಾಗಿದ್ದು, ಈ ಇಬ್ಬರೂ ಗುತ್ತಿಗೆದಾರರು

ಅರ್ಹರೆಂದು ಪರಿಗಣಿಸಿ ಅವರ ಆರ್ಥಿಕ ಬಿಡ್‌ಗಳನ್ನು ಸಹ ಅಂದೇ ತೆರೆಯಲಾಗಿದೆ. ಆರ್ಥಿಕ ಬಿಡ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳ ತುಲನಾತ್ಮಕ ವಿವರ ಕೆಳಕಂಡಂತಿದೆ:

ಮಂಜೂರಾದ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ದರಗಳನ್ನು ಪರಿಗಣಿಸಿದಾಗ ಟೆಂಡರಿಗೆ ಇಡಲಾದ ಮೊತ್ತ ಟೆಂಡರಿಗೆ ಇಡಲಾದ ಮೊತ್ತ	ರೂ.5,70,09,937/–

ಕ್ರ.ಸಂ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ
1	ಎಸ್.ವಿ.ಬಂಡಿ, 1ನೇ ದರ್ಜೆ ಗುತ್ತಿಗೆದಾರರು	ರೂ.7,73,38,170/–	35.66 ಹೆಚ್ಚು
2	ಎಸ್.ಆರ್.ಕಪ್ಪಲಗುದ್ದಿ, 1ನೇ ದರ್ಜೆ ಗುತ್ತಿಗೆದಾರರು	ರೂ.8,09,59,391/–	42.01 ಹೆಚ್ಚು

ಮೇಲ್ಕಂಡಂತೆ ಕ್ರ.ಸಂ:1ರಲ್ಲಿರುವ ಶ್ರೀ ಎಸ್.ವಿ.ಬಂಡಿ, 1ನೇ ದರ್ಜೆ ಗುತ್ತಿಗೆದಾರರು ಇವರು ನಮೂದಿಸಿರುವ ಮೊತ್ತ ರೂ.7,73,38,170–00ಗಳು ಅತಿ ಕಡಿಮೆ ಮೊತ್ತವಾಗಿದ್ದು, ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 35.66ರಷ್ಟು ಹೆಚ್ಚಾಗಿದ್ದು, ಈ ಮೊತ್ತಕ್ಕೆ ಸದರಿಯವರ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್‌ರವರು ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 23/03/09ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ.5,70,09,937–00ಗಳ ಮೇಲೆ ಶೇಕಡ 14.75ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ.6,54,18,903–00ಗಳಿಗೆ ಕಾಮಗಾರಿಯನ್ನು ಶ್ರೀ ಎಸ್.ವಿ.ಬಂಡಿ, 1ನೇ ದರ್ಜೆ ಗುತ್ತಿಗೆದಾರರು, ಬೆಂಗಳೂರು ಇವರಿಗೆ ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 21 ಅಪಿಬಂ 2009, ಬೆಂಗಳೂರು, ದಿನಾಂಕ: 15ನೇ ಮೇ 2009.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ FD 353 Exp-9, 2008, ದಿನಾಂಕ:13.6.2008ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 447 **ಎಸ್.ಎನ್. ಕೃಷ್ಣಕುಮಾರ್**

ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ: ಕರ್ನಾಟಕ ಸಾಹಿತ್ಯ ಸಂಘ ಟ್ರಸ್ಟ್, ಬೀದರ್ ಸಂಸ್ಥೆಗೆ ಸಾಂಸ್ಕೃತಿ ಭವನ ನಿರ್ಮಾಣಕ್ಕೆ ಧನಸಹಾಯ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : 1 ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವರ ಪತ್ರ ಸಂಖ್ಯೆ ಕಸನಿ/ಸುಕ/22/2007–08, ದಿನಾಂಕ:18.11.2008.

2 ಸರ್ಕಾರದ ಪತ್ರ ಸಂಖ್ಯೆ:ಕಸಂವಾಪ್ರ 157 ಕಸನಿ 08, ದಿನಾಂಕ:20.4.2008.

ಪ್ರಸ್ತಾವನೆ:

ಮೇಲೆ ಓದಲಾದ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅವರ ದಿನಾಂಕ:18.11.2008ರ ಪತ್ರದಲ್ಲಿ ಕರ್ನಾಟಕ ಸಾಹಿತ್ಯ ಸಂಘ ಟ್ರಸ್ಟ್, ಬೀದರ್ ಸಂಸ್ಥೆಗೆ ಸಾಂಸ್ಕೃತಿಕ ಭವನ ನಿರ್ಮಾಣಕ್ಕೆ 25.00 ಲಕ್ಷಗಳನ್ನು ಹೆಚ್ಚುವರಿಯಾಗಿ ಬಿಡುಗಡೆ ಮಾಡುವಂತೆ ಕಳೆದ ಸಾಲಿನಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿತ್ತೆಂದು ಮೇಲೆ (2) ರಲ್ಲಿ ಓದಲಾದ ದಿನಾಂಕ:22.4.2008ರ ಸರ್ಕಾರಿ ಪತ್ರದಲ್ಲಿ 2008–09ನೇ ಸಾಲಿನ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿಕೊಂಡು ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾಗಿರುವುದರಿಂದ 2008–09ನೇ ಸಾಲಿನಲ್ಲಿ 2205–00–102–4–09–059 ಶೀರ್ಷಿಕೆಯಲ್ಲಿ ಗಡಿಭಾಗದಲ್ಲಿ ಸುವರ್ಣ ಗಡಿಭವನ ನಿರ್ಮಾಣಕ್ಕೆ ಒದಗಿಸಲಾಗಿರುವ ರೂ. 20.00 ಲಕ್ಷಗಳ ಒಟ್ಟಾರೆ ಅನುದಾನದಲ್ಲಿ ಉಳಿತಾಯವಾಗುವ ರೂ. 4.00 ಲಕ್ಷಗಳನ್ನು ಸದರಿ ಯೋಜನೆಗೆ ಬಿಡುಗಡೆ ಮಾಡಲು ಅನುಮತಿ ಕೋರಿರುತ್ತಾರೆ ಇದನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಕಸಂವಾಪ್ರ 153 ಕಸನಿ 2008, ಬೆಂಗಳೂರು, ದಿನಾಂಕ:6ನೇ ಫೆಬ್ರವರಿ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಕರ್ನಾಟಕ ಸಾಹಿತ್ಯ ಸಂಘ ಟ್ರಸ್ಟ್ ಬೀದರ್ ಸಂಸ್ಥೆಗೆ ಸಾಂಸ್ಕೃತಿಕ ಭವನ ನಿರ್ಮಾಣಕ್ಕೆ ರೂ. 4.00 ಲಕ್ಷಗಳನ್ನು (ರೂಪಾಯಿ ನಾಲ್ಕು ಲಕ್ಷಗಳು ಮಾತ್ರ) ಕರ್ನಾಟಕ ಸಾಹಿತ್ಯ ಸಂಘ ಟ್ರಸ್ಟ್ ಇವರಿಗೆ ಈ ಕೆಳಕಂಡ ಷರತ್ತಿಗೆ ಒಳಪಟ್ಟು ಬಿಡುಗಡೆ ಮಾಡಲು ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರಿಗೆ ಸರ್ಕಾರದ ಅನುಮತಿ ನೀಡಲಾಗಿದೆ.

1) ಹಣವನ್ನು ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಿದೆಯೊ ಅದೇ ಉದ್ದೇಶಕ್ಕೆ ಬಳಸತಕ್ಕದ್ದು.

2) ಹಣ ಬಳಕೆಯಾದ ಬಗ್ಗೆ ಹಣಬಳಕೆ ಪ್ರಮಾಣಪತ್ರವನ್ನು ಸಲ್ಲಿಸುವುದು.

3) ಈ ಕಾಮಗಾರಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ಅದರ ನಿಯಮಗಳು 2000ನ್ನು ಅನುಸರಿಸಿ ಕ್ರಮ ವಹಿಸುವುದು.

ಈ ವೆಚ್ಚವನ್ನು 2008–09ನೇ ಸಾಲಿನ ಲೆಕ್ಕಶೀರ್ಷಿಕೆ 2205–00–102–4–09–059 (ಯೋಜನೆ) ಇದರಡಿ ಭರಿಸತಕ್ಕದ್ದು.

ಈ ಆದೇಶವನ್ನು ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ:ಇಡಿ 1725/ಐಎಫ್ (ಬಿಎ) 2008 ದಿನಾಂಕ:30-12-2008ರಲ್ಲಿ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 539

ಎಂ.ಕೆ. ಧರ್ಮರಾಜಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ,
ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ. (ಆಡಳಿತ ಕನ್ನಡ)

ಶಿಕ್ಷಣ ಸಚಿವಾಲಯ

ವಿಷಯ: ಬೆಂಗಳೂರು ದರ್ಶನ ಎಂಬ ಗ್ರಂಥದ ಪ್ರತಿಗಳನ್ನು ಖರೀದಿಸುವ ಬಗ್ಗೆ.

ಓದಲಾಗಿದೆ : 1 ಸರ್ಕಾರದ ಆದೇಶ ಸಂಖ್ಯೆ ಇಡಿ 78 ಯೋಯೋಕ 2008, ದಿನಾಂಕ:4.4.2008.

2 ಸನ್ಮಾನ್ಯ ಮುಖ್ಯಮಂತ್ರಿಯವರ ಟಿಪ್ಪಣಿ ಪತ್ರ ಸಂಖ್ಯೆ:ಮುಮಂ:468:ಆಕಾ:2008-09, ದಿನಾಂಕ: 16.8.2008.

ಪ್ರಸ್ತಾವನೆ:

(1) ಮೇಲೆ. ಓದಲಾದ (1)ರ ಸರ್ಕಾರದ ಆದೇಶದಲ್ಲಿ 2008-09ನೇ ಸಾಲಿಗೆ ಮುಂದುವರೆದ ಕಾರ್ಯಕ್ರಮವಾದ ಪುಸ್ತಕಾಲಯ ಮತ್ತು ಪ್ರಾಥಮಿಕ ಶಾಲೆಗಳ ಸುಧಾರಣೆ ಮತ್ತು ಪ್ರಧಾನಮಂತ್ರಿ ಗ್ರಾಮೋದಯ ಯೋಜನೆಯ ಲೆಕ್ಕಶೀರ್ಷಿಕೆ:2202-01-800-1-13-059 ಯಡಿ 600.00ಲಕ್ಷ ರೂಗಳನ್ನು ಒದಗಿಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಿದೆ.

(2) ಮೇಲೆ ಓದಲಾದ (2) ರ ಪತ್ರದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯರು, "ಉದಯಭಾನು ಕಲಾ ಸಂಘವು" 1965 ರಲ್ಲಿ ಸ್ಥಾಪನೆಗೊಂಡು ಸಾಹಿತ್ಯಕ, ಸಾಂಸ್ಕೃತಿಕ, ಸಾಮಾಜಿಕ, ನಗರ ಕಲ್ಯಾಣ ಶೈಕ್ಷಣಿಕ, ವೈದ್ಯಕೀಯ ಹಾಗೂ ಕ್ರೀಡಾ-ಯುವಜನ ಕಲ್ಯಾಣ" ಮುಂತಾದ ಕ್ಷೇತ್ರಗಳಲ್ಲಿ ಗುರುತಿಸಿಕೊಂಡು ಅಬ್ಬರ ಆಡಂಬರವಿಲ್ಲದೇ ಸಕಾಲಿಕವೂ ಸಾಮಾಜಿಕ ಸ್ವಾಸ್ಥ್ಯಕ್ಕೆ ಪೂರಕರವೂ ,ಆದ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿರುವುದಾಗಿ ತಿಳಿದು ಬಂದಿರುತ್ತದೆ ಸಾಹಿತ್ಯ ಸಂಸ್ಕೃತಿ ಮತು ಸಮಾಜ ಸೇವೆಯ ಕ್ಷೇತ್ರಗಳಲ್ಲಿ ಹೆಚ್ಚಿನ ಸೇವೆ ಸಲ್ಲಿಸುತ್ತಿರುವ "ಉದಯಭಾನು ಕಲಾ ಸಂಘವು" ನಾಲ್ಕು ದಶಕಗಳ ಸಾಧನಾ ಉತ್ಸವದ ಸಂದರ್ಭದಲ್ಲಿ, ಬೆಂಗಳೂರಿನ ಸಮಗ್ರ ಪರಿಚಯ ನೀಡುವ ಸರ್ವಕಾಲಿಕ ಉಪಯುಕ್ತ ಉದ್ಗ್ರಂಥ "ಬೆಂಗಳೂರು ದರ್ಶನ' 'ಎಂಬ ಗ್ರಂಥವನ್ನು ಪ್ರಕಟಿಸಿದ್ದು., ಸದರಿ ಗ್ರಂಥದ 5000 ಪ್ರತಿಗಳನ್ನು ಜನಪ್ರತಿನಿಧಿಗಳ, ಸಚಿವಾಲಯದ ಆಡಳಿತಗಾರರ ಹಾಗೂ ಗ್ರಂಥಾಲಯಗಳ ಉಪಯೋಗಕ್ಕಾಗಿ ಖರೀದಿಸುವಂತೆ ಆದೇಶಿಸಿರುತ್ತಾರೆ.

(3) ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ:ಇಡಿ:206 :ಯೋಸಕ 2008, ಬೆಂಗಳೂರು, ದಿನಾಂಕ:30ನೇ ಜನವರಿ 2009

[ಇಡಿ:8:ಸ್ಪೀಮರ (ಯುನಿಕ್) 2009, ದಿನಾಂಕ:30-1-2009]

(4) ಜನಪ್ರತಿನಿಧಿಗಳ, ಸಚಿವಾಲಯದ ಆಡಳಿತಗಾರರ ಹಾಗೂ ಗ್ರಂಥಾಲಯಗಳ ಉಪಯೋಗಕ್ಕಾಗಿ, ಬೆಂಗಳೂರಿನ "ಉದಯಭಾನು ಕಲಾ ಸಂಘವು" ಹೊರತಂದಿರುವ "ಬೆಂಗಳೂರು ದರ್ಶನ" ಎಂಬ ಗ್ರಂಥದ ಒಂದು ಸಾವಿರ ಪ್ರತಿಗಳನ್ನು ಪ್ರತಿ ಪ್ರತಿಗೆ 1000.00 ರೂಗಳ ಮಿತಿಯಲ್ಲಿ [ಒಂದು ಸಾವಿರ ರೂಪಾಯಿಗಳು ಮಾತ್ರ] ಖರೀದಿಸಿ ಸರಬರಾಜು ಮಾಡಲು ಹಾಗೂ ಸದರ ಸಂಸ್ಥೆಗೆ ಒಂದು ಬಾರಿಯ ಸಹಾಯಾನುದಾನವಾಗಿ 5.00 ಲಕ್ಷರೂಗಳನ್ನು [ಐದು ಲಕ್ಷರೂಪಾಯಿಗಳು ಮಾತ್ರ] ಬಿಡುಗಡೆ ಮಾಡಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಸರ್ಕಾರವು ಅನುಮತಿಸಿದೆ.

(5) ಮೇಲ್ಕಂಡ ಮೊತ್ತವನ್ನು ಲೇಖನ ಸಾಮಗ್ರಿ ಮತ್ತು ಪುಸ್ತಕಗಳ ಸಗಟು ಖರೀದಿಗಾಗಿ [ಹೊಸ ಶಾಲೆಗಳೂ ಸೇರಿ] 2008-09ನೇ ಸಾಲಿನ ಲೆಕ್ಕಶೀರ್ಷಿಕೆ-2202-01-800-1-13-059ಯಡಿ ಒದಗಿಸಲಾಗಿರುವ 50.00ಲಕ್ಷರೂಗಳ ಮಿತಿಯೊಳಗೆ [ಐವತ್ತು ಲಕ್ಷ ರೂಪಾಯಿ ಗಳು ಮಾತ್ರ] ಭರಿಸತಕ್ಕದ್ದು.

(6) ಈ ಆದೇಶವನ್ನು ಅನಧಿಕೃತ ಟಿಪ್ಪಣಿ ಸಂಖ್ಯೆ ಆಇ/1109/ವೆಚ್ಚ-8/08, ದಿನಾಂಕ:19.12.2008ರಲ್ಲಿ ಆರ್ಥಿಕ ಇಲಾಖೆಯು ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಐ.ಎಫ್. ಮಾಗಿ

ಪಿ.ಆರ್. 543 ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ, ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ
(ಯೋಜನೆ)

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ: ಶ್ರೀ ಎಂ.ಎಂ. ಪೂಣಚ್ಚ, ನಿವೃತ್ತ ಮಾಲಿ ಇವರು ಕಾಣೆಯಾಗಿದ್ದು, ಅವರ ಪತ್ನಿ ಶ್ರೀಮತಿ ಎಂ.ಎಂ. ದೇವಕಿ ಇವರಿಗೆ ಬಾಕಿ ಇರುವ ನಿವೃತ್ತಿ ವೇತನ ಹಾಗೂ ಕುಟುಂಬ ನಿವೃತ್ತಿ ವೇತನ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : 1 ಅಧಿಕೃತ ಜ್ಞಾಪನ ಸಂಖ್ಯೆ:ಆಇ (ವಿಶೇಷ)11 ಕುಪಿವೇ 87, ದಿನಾಂಕ:21.3.1988.

2 ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಇವರ ಪತ್ರ ಸಂಖ್ಯೆ:ಸಿಬ್ಬಂದಿ(2)/ಸಂಸಿ/ಕುವಿವೇ/36/2006–07, ದಿನಾಂಕ:22.11.2007, 16.1.2008 ಮತ್ತು 4.11.2008.

ಪ್ರಸ್ತಾವನೆ:

ಶ್ರೀ ಎಂ.ಎಂ. ಪೂಣಚ್ಚ, ನಿವೃತ್ತಿ ಮಾಲಿ ಇವರು ದಿನಾಂಕ:2.9.2000 ರಿಂದ ಕಾಣೆಯಾಗಿರುವುದರಿಂದ ಸದರಿ ಮಾಹೆಯಿಂದ ಬಾಕಿ ಇರುವ ಕುಟುಂಬ ನಿವೃತ್ತಿ ವೇತನ ಮಂಜೂರು ಮಾಡುವಂತೆ ನಿವೃತ್ತಿ ನೌಕರರ ಪತ್ನಿಯಾದ ಶ್ರೀಮತಿ ಎಂ.ಎಂ. ದೇವಕಿ ಇವರು ರೇಷ್ಮೆ ಉಪ ನಿರ್ದೇಶಕರು, ಜಿಲ್ಲಾ ಪಂಚಾಯತ್, ಮಡಿಕೇರಿ ಇವರನ್ನು ಕೋರಿರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದ ಪ್ರಕಾರ ಕಾಣೆಯಾದ ನೌಕರರ ಕುಟುಂಬಕ್ಕೆ ಲಭ್ಯವಾಗಲಿರುವ ಕುಟುಂಬ ವೇತನ ಪಾವತಿಸಲು ಮಂಜೂರಾತಿ ನೀಡುವಂತೆ ಮೇಲೆ ಓದಲಾದ ಕ್ರಮಸಂಖ್ಯೆ (2)ರ ಪತ್ರಗಳಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಸರ್ಕಾರವನ್ನು ಕೋರಿರುತ್ತಾರೆ. ಕಾಣೆಯಾಗಿರುವ ನೌಕರರಾದ ಶ್ರೀ ಎಂ.ಎಂ. ಪೂಣಚ್ಚ ಇವರು ರೇಷ್ಮೆ ಕೃಷಿ ಕ್ಷೇತ್ರ, ಕೂಡಿಗೆಯಲ್ಲಿ ಕಾರ್ಯನಿರ್ವಹಿಸಿ ದಿ:31.12.1997ರಲ್ಲಿ ನಿವೃತ್ತಿ ಹೊಂದಿದ್ದು, ದಿನಾಂಕ:2.9.2000ರಂದು ತನ್ನ ಮಗನ ಮನೆಯಿಂದ ಮನೆಗೆ ಹೋಗುವುದಾಗಿ ಹೇಳಿ ಹೋದವರು ವಾಪಸ್ಸು ಮನೆಗೆ ಬರದ ಕಾರಣ ಅವರ ಮಗ ಸತೀಶ್ ರವರು ಕುಶಾಲನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಸದರಿ ನೌಕರರ ಪತ್ತೆಗಾಗಿ ಪ್ರಕಟಣೆ ಹೊರಡಿಸಿದ್ದು, ಕಾಣೆಯಾದ ವ್ಯಕ್ತಿ ಪತ್ತೆಯಾಗಿರುವುದಿಲ್ಲವೆಂದು ಕುಶಾಲನಗರ ಪೊಲೀಸ್ ಠಾಣೆಯಿಂದ ದಿ:7.6.2007ರಂದು ವರದಿ ನೀಡಲಾಗಿರುತ್ತದೆ. ಕಾಣೆಯಾಗಿರುವ ನೌಕರರ ಪತ್ನಿಯು ಕುಟುಂಬ ನಿವೃತ್ತಿ ವೇತನವನ್ನು ಮಂಜೂರು ಮಾಡುವಂತೆ ಕೋರಿ ಮನವಿ ಸಲ್ಲಿಸಿದ್ದು ಮೇಲೆ ಓದಲಾದ ಕ್ರಮಸಂಖ್ಯೆ (1)ರ ಆದೇಶದಲ್ಲಿಯ ಎಲ್ಲಾ ಷರತ್ತುಗಳನ್ನು ಪೂರೈಸಿರುವುದನ್ನು ದೃಢೀಕರಿಸಿ ಶ್ರೀ ಎಂ.ಎಂ. ಪೂಣಚ್ಚ ಇವರ ಪತ್ನಿಯಾದ ಶ್ರೀಮತಿ ದೇವಕಿ ಇವರಿಗೆ ಲಭ್ಯವಾಗಬೇಕಾದ ಕುಟುಂಬ ವೇತನ ನಿವೃತ್ತಿ ಸೌಲಭ್ಯವನ್ನು ದಿನಾಂಕ:2.9.2000ರಿಂದ ಲೆಕ್ಕ ಹಾಕಿ ರೂ. 2,00,681/– ಗಳನ್ನು ಪಾವತಿಸಬೇಕಾಗಿದೆ ಎಂದು ತಿಳಿಸಿ ಇದನ್ನು ಪಾವತಿಸಲು ಮಂಜೂರಾತಿ ನೀಡುವಂತೆ ರೇಷ್ಮೆ ಕೃಷಿ ಆಯುಕ್ತರು ಸರ್ಕಾರವನ್ನು ಕೋರಿರುವ ಹಿನ್ನಲೆಯಲ್ಲಿ ಕಾಣೆಯಾಗಿರುವ ನೌಕರರ ಪತ್ನಿಯಾದ ಶ್ರೀಮತಿ ಎಂ.ಎಂ. ದೇವಕಿ ಇವರಿಗೆ ಕುಟುಂಬ ನಿವೃತ್ತಿ ವೇತನ ಮಂಜೂರು ಮಾಡುವುದಕ್ಕೆ ತೀರ್ಮಾನಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ವಾಕೈ 179 ರೇಇವಿ 2007, ಬೆಂಗಳೂರು, ದಿನಾಂಕ:3ನೇ ಫೆಬ್ರವರಿ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ನೇಮಕಾತಿ ಪ್ರಾಧಿಕಾರವು, ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಆಇ (ವಿಶೇಷ) 11 ಕುವಿವೇ 87, ದಿನಾಂಕ:21.3.1988ರಲ್ಲಿ ವಿಧಿಸಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿರುವುದನ್ನು ಖಾತ್ರಿ ಪಡಿಸಿಕೊಂಡು ನಂತರ, ಶ್ರೀ ಎಂ.ಎಂ ಪೂಣಚ್ಚ, ನಿವೃತ್ತಿ ಮಾಲಿ ಇವರ ಪತ್ನಿಯಾದ ಶ್ರೀಮತಿ ಎಂ.ಎಂ. ದೇವಕಿ ಇವರಿಗೆ ದಿನಾಂಕ:2–9–2000 ರಿಂದ ಅನ್ವಯವಾಗುವಂತೆ ನಿಯಮಗಳನ್ವಯ ನೀಡಬಹುದಾದ ಕುಟುಂಬ ನಿವೃತ್ತಿ ವೇತನ ನೀಡುವುದಕ್ಕೆ ಮಂಜೂರಾತಿ ನೀಡಲಾಗಿದೆ.

ಆರ್ಥಿಕ ಇಲಾಖೆಯ ಅಧಿಕೃತ ಜ್ಞಾಪನ ಸಂಖ್ಯೆ: ಆಇ (ವಿಶೇಷ) 11 ಕುವಿವೇ 97, ದಿನಾಂಕ:21.3.1988ರ ಕಂಡಿಕೆ 6(ಊ) ರನ್ವಯ ವಿಮಾ ಸಂರಕ್ಷಣಾ ಹಣವನ್ನು ನಾಮನಿರ್ದೇಶಿತರಿಗೆ ಅಥವಾ ಕಾನೂನುಬದ್ಧ ವಾರಸುದಾರರಿಗೆ ಕಾಣೆಯಾದ ತಿಂಗಳಿಂದ ಹಿಡಿದು ಏಳು ವರ್ಷಗಳ ನಂತರ ಸಂದಾಯ ಮಾಡಬಹುದು, ಪರಂತು ಹಕ್ಕುದಾರರು ಕ್ರಮಬದ್ಧವಾದ ಮತ್ತು ನಿರ್ವಿವಾದ ಪುರಾವೆಯನ್ನು ಕಾಣೆಯಾದ ನೌಕರನು ಮೃತ ಪ್ರಮಾಣ ಪತ್ರವನ್ನೂ ಹಾಜರುಪಡಿಸಬೇಕು ಅಥವಾ ಭಾರತೀಯ ಸಾಕ್ಷಿ ಕಾಯಿದೆಯ 108ನೇ ವಿಧಿಯ ಪ್ರಕಾರ ಕಾಣೆಯಾದ ನೌಕರನು (ಳು) ಮೃತನಾದನೆಂದು ಭಾವಿಸಿ, ಇದರ ಬಗ್ಗೆ ಕೋರ್ಟಿನಿಂದ ಪಡೆದ ಡಿಕ್ರಿಯನ್ನು ಹಾಜರು ಪಡಿಸಿದ ನಂತರ ವಿಮಾ ಹಣವನ್ನು ಸಂದಾಯ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 544

ಭಾರತಿ ಆರ್. ನಾಯಕ್

ಪೀಠಾಧಿಕಾರಿ (ರೇಷ್ಮೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ: ತಮಿಳುನಾಡು ಪತ್ರಾಗಾರದಲ್ಲಿರುವ ಕರ್ನಾಟಕಕ್ಕೆ ಸಂಬಂಧಪಟ್ಟ ದಾಖಲೆಗಳ/ ವರ್ತಮಾನ ಪತ್ರಿಕೆಗಳ ಸ್ಕ್ಯಾನಿಂಗ್ ಮಾಡಿದ ವೆಚ್ಚವನ್ನು ಪಾವತಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ : 1 ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಅವರ ಪತ್ರ ಸಂಖ್ಯೆ:ಎಆರ್ ಎಸ್ 09 ಎನ್ ಎಐ 2006 ದಿ:19.7.08.

2 ಸಂಕ ಇ 10 ರಾಪಸ 2006, ದಿನಾಂಕ:17.8.2006.

ಪ್ರಸ್ತಾವನೆ:

ಮೇಲೆ ಓದಲಾದ ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಅವರ ದಿನಾಂಕ: 19.7.2008ರ ಪತ್ರದಲ್ಲಿ ಮೇಲೆ (2) ಓದಲಾದ ಸರ್ಕಾರದ ಆದೇಶಾನುಸಾರ ತಮಿಳುನಾಡು ಪತ್ರಾಗಾರದಲ್ಲಿರುವ ಐತಿಹಾಸಿಕ ಮಹತ್ವದ ದಾಖಲೆಗಳ ಪೂರ್ವಭಾವಿ ಪರಿವೀಕ್ಷಣೆ ನಡೆಸಿ ಕರ್ನಾಟಕಕ್ಕೆ ಸಂಬಂಧಿಸಿದ ದಾಖಲೆಗಳ/ವರ್ತಮಾನ ಪತ್ರಿಕೆಗಳನ್ನು ಸ್ಕ್ಯಾನಿಂಗ್ ಮಾಡಿಸಿ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಗೆ ಪಡೆಯಲಾಗಿದೆಯೆಂದು ಇದಕ್ಕಾಗಿ ತಗಲಿದ ವೆಚ್ಚ ರೂ. 1,92,885–00ನ್ನು ತಮಿಳುನಾಡು ಪತ್ರಾಗಾರ ಇಲಾಖೆಗೆ ಪಾವತಿಸಬೇಕಾಗಿರುವುದರಿಂದ ಸರ್ಕಾರದ ಅನುಮತಿ ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಕಸಂವಾಪ್ರ 12 ರಾಪಸ 2008, ಬೆಂಗಳೂರು, ದಿನಾಂಕ:5ನೇ ಫೆಬ್ರವರಿ 2009

ತಮಿಳುನಾಡು ಪತ್ರಾಗಾರ ಇಲಾಖೆಯಿಂದ ಕರ್ನಾಟಕಕ್ಕೆ ಸಂಬಂಧಿಸಿದ ದಾಖಲೆಗಳ/ವರ್ತಮಾನ ಪತ್ರಿಕೆಗಳ/ ವರ್ತಮಾನ ಪತ್ರಿಕೆಗಳ ಸ್ಕ್ಯಾನಿಂಗ್ ಮಾಡಿಸಿದ ವೆಚ್ಚ ರೂ 1,92,.885–00(ರೂ. ಒಂದು ಲಕ್ಷದ ತೊಂಬತ್ತೆರಡು ಸಾವಿರದ ಎಂಟುನೂರ ಎಂಬತ್ತೈದು ಮಾತ್ರ) ಗಳನ್ನು ತಮಿಳುನಾಡು ಪತ್ರಾಗಾರ ಇಲಾಖೆಗೆ ಪಾವತಿಸಲು ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಇವರಿಗೆ ಸರ್ಕಾರ ಅನುಮತಿ ನೀಡಿದೆ.

ಈ ವೆಚ್ಚವನ್ನು 2008–09ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 2205–00–104–01–051 ಸಾಮಾನ್ಯ ವೆಚ್ಚಗಳು (ಯೋಜನೇತರ) ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2006 ದಿನಾಂಕ:10–7–1996ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 546 **ಎಂ.ಕೆ. ಧರ್ಮರಾಜಪ್ಪ**

ಸರ್ಕಾರದ ಅಧೀನ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ,

ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ, (ಆಡಳಿತ ಕನ್ನಡ)

ವಾಣಿಜ್ಯ ಮತು ಕೈಗಾರಿಕಾ ಸಚಿವಾಲಯ

ವಿಷಯ: ಶ್ರೀ ಟಿ.ಎಸ್. ಮಲ್ಲಿಕಾರ್ಜುನ, ಸಹಾಯಕ ನಿರ್ದೇಶಕರು, (ಅಮಾನತ್ತು) ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಪುರ, ಧಾರವಾಡ ರವರನ್ನು ಅಮಾನತ್ತಿನಿಂದ ತೆರವುಗೊಳಿಸಿ ಸೇವೆಗೆ ಪುನರ್ ನೇಮಕ ಮಾಡುವ ಬಗ್ಗೆ.

ಓದಲಾಗಿದೆ : 1 ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರದ ಸಂಖ್ಯೆ:ಲೋಕ್/ಐಎನ್‌ವಿ(ಜಿ)/ಎಲ್.22/ಸಿಆರ್–3/2008 ಡಿಹೆಚ್ ಆರ್ ದಿನಾಂಕ:6.3.2008.

2 ಕೈಗಾರಿಕಾಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ:ಕೈವಾಇ/ನಿರೀ–2/ಲೋಕಾ/2008–09 ದಿ:2.5.2008.

3 ಸರ್ಕಾರದ ಆದೇಶ ಸಂಖ್ಯೆ:ವಾಕೈ 85 ಕೈಸೇವಿ 2008, ದಿ:14.5.2008.

4 ಕೈಗಾರಿಕಾಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ:ಆಡಳಿತ/ಸಿಬ್ಬಂದಿ/ಇ4/71/2008–09 ದಿ:8.7.2008.

5 ಸರ್ಕಾರದ ಅಧಿಸೂಚನೆ ಸಂಖ್ಯೆ:ವಾಕೈ 85 ಕೈಸೇವಿ 2008, ದಿ:8.8.2008

6 ಶ್ರೀ ಟಿ.ಎಸ್. ಮಲ್ಲಿಕಾರ್ಜುನ ಸಹಾಯಕ ನಿರ್ದೇಶಕರು, (ಅಮಾನತ್ತು) ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಪುರ, ಧಾರವಾಡ ಇವರ ಮನವಿ ದಿ:6.9.2008

7 ಅಪರ ಪೊಲೀಸ್ ಮಾಹಾ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು, ಇವರ ಪತ್ರದ ಸಂಖ್ಯೆ:ಲೋಕ್/.ಐಎನ್‌ವಿ(ಜಿ)/ಎಲ್.22/ಸಿಆರ್–3/2008/ಧಾರವಾಡ ದಿನಾಂಕ: 25.11.2008.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಲ್ಲಿ ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಆರೋಪಿತ ಸರ್ಕಾರಿ ಅಧಿಕಾರಿ, ಶ್ರೀ ಟಿ..ಎಸ್. ಮಲ್ಲಿಕಾರ್ಜುನ ಸಹಾಯಕ ನಿರ್ದೇಶಕರು, (ಅಮಾನತ್ತು) ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಪುರ, ಧಾರವಾಡ ರವರು ರೂ. 2,000/-ಗಳ ಲಂಚವನ್ನು ಫಿರ್ಯಾದುದಾರರಿಂದ ಸ್ವೀಕರಿಸಿ ಲೋಕಾಯುಕ್ತ ಪೊಲೀಸರ ಬಲೆಗೆ ಸಿಕ್ಕಿಬಿದ್ದಿದ್ದರಿಂದ ಅಮಾನತ್ತಿನಲ್ಲಿಡಬೇಕೆಂದು ಹಾಗೂ ಅವರ ಲೀನ್ (ಸ್ಥಾನ)ವನ್ನು ಬೇರೆ ಕಡೆಗೆ ವರ್ಗಾಯಿಸಬೇಕೆಂದು ಸರ್ಕಾರಕ್ಕೆ ಕೋರಿದ್ದಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಶ್ರೀ ಟಿ.ಎಸ್ ಮಲ್ಲಿಕಾರ್ಜುನ, ಸಹಾಯಕ ನಿರ್ದೇಶಕರು ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಪುರ, ಧಾರವಾಡ ರವರು ದಿ:4.3.2008ರಂದು ಲಂಚ ಸ್ವೀಕರಿಸುತ್ತಿದ್ದಾಗ, ಲಂಚದ ಹಣದೊಡನೆ ಲೋಕಾಯುಕ್ತರ ಬಲೆಗೆ ಸಿಕ್ಕಿ ಬಿದ್ದಿದ್ದರಿಂದ ದಸ್ತಗಿರಿಯಾದ ದಿ:4.3.2008ರಿಂದಲೇ ಅಧಿಕಾರಿಯನ್ನು ಅಮಾನತ್ತಿನಲ್ಲಿಟ್ಟು, ಅವರ ಲೀನ್ (ಸ್ಥಾನ)ನ್ನು ಬೇರೆ ಕಡೆಗೆ ವರ್ಗಾಯಿಸಲು ಕೈಗಾರಿಕಾಭಿವೃದ್ಧಿ ಆಯುಕ್ತರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ಆಪಾದಿತ ಸರ್ಕಾರಿ ಅಧಿಕಾರಿಯಾದ ಶ್ರೀ ಟಿ.ಎಸ್. ಮಲ್ಲಿಕಾರ್ಜುನ, ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ರಾಯಪುರ, ಧಾರವಾಡ ರವರು ಫಿರ್ಯಾದುದಾರರಿಂದ ರೂ. 2,000/- (ರೂಪಾಯಿ ಎರಡು ಸಾವಿರ ಮಾತ್ರ) ಗಳ ಲಂಚದ ಹಣವನ್ನು ಸ್ವೀಕರಿಸಿರುವುದು ಮೇಲುನೋಟಕ್ಕೆ ಸಾಬೀತಾಗಿರುವುದರಿಂದ ಇವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ/ಇಲಾಖಾ ವಿಚಾರಣೆ ಕಾಯ್ದಿರಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 10(1)(ಎ)ರ ಅನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರಲ್ಲಿ ಕೈಗಾರಿಕಾಭಿವೃದ್ಧಿ ಆಯುಕ್ತರು, ಶ್ರೀ ಟಿ.ಎಸ್. ಮಲ್ಲಿಕಾರ್ಜುನ, ಸಹಾಯಕ ನಿರ್ದೇಶಕರು, (ಅಮಾನತ್ತು) ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಪುರ, ಧಾರವಾಡ, ಇವರ ಲೀನ್ (ಸ್ಥಾನ)ನ್ನು ಧಾರವಾಡದಿಂದ ಬೇರೆಡೆಗೆ ವರ್ಗಾಯಿಸಲು ಲೋಕಾಯುಕ್ತರ ಶಿಫಾರಸ್ಸಿನಂತೆ ಜಿಲ್ಲಾ ಕೈಗಾರಿಕಾ ಕೇಂದ್ರ ಹಾವೇರಿ/ಗದಗ್/ಬೆಳಗಾವಿಗಳಲ್ಲಿ ಸಹಾಯಕ ನಿರ್ದೇಶಕರ ಹುದ್ದೆಗಳು ಖಾಲಿ ಇದ್ದು, ಇವುಗಳಲ್ಲಿ ಯಾವುದಾದರೊಂದು ಹುದ್ದೆಗೆ ಲೀನ್‌ನ್ನು ವರ್ಗಾಯಿಸಿ ಸಚಿವಾಲಯದ ಹಂತದಲ್ಲಿ ಆದೇಶ ಹೊರಡಿಸಲು ಕೋರಿದ್ದಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರಲ್ಲಿ ಶ್ರೀ ಟಿ.ಎಸ್ .ಮಲ್ಲಿಕಾರ್ಜುನ, ಸಹಾಯಕ ನಿರ್ದೇಶಕರು, (ಅಮಾನತ್ತು) ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಪುರ, ಧಾರವಾಡ, ಇವರ ಲೀನ್ (ಸ್ಥಾನ)ನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಹಾವೇರಿ ಇಲ್ಲಿ ಖಾಲಿಯಿರುವ ಹುದ್ದೆಗೆ ಸ್ಥಳಾಂತರಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರಲ್ಲಿ ಶ್ರೀ ಟಿ.ಎಸ್. ಮಲ್ಲಿಕಾರ್ಜುನ ಸಹಾಯಕ ನಿರ್ದೇಶಕರು (ಅಮಾನತ್ತು) ಇವರು ಲೋಕಾಯುಕ್ತ ತನಿಖೆ ಕಾಯ್ದಿರಿಸಿ ಮರು ನೇಮಕ ಮಾಡಿ ಕರ್ತವ್ಯಕ್ಕೆ ನಿಯೋಜಿಸಬೇಕೆಂದು ಸರ್ಕಾರಕ್ಕೆ ಕೋರಿದ್ದಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (7)ರಲ್ಲಿ ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಶ್ರೀ ಟಿ.ಎಸ್. ಮಲ್ಲಿಕಾರ್ಜುನ, ಸಹಾಯಕ ನಿರ್ದೇಶಕರು, ರವರನ್ನು ಅಮಾನತ್ತಿನಿಂದ ಬಿಡುಗಡೆ ಗೊಳಿಸುವ ಬಗ್ಗೆ ಸರ್ಕಾರಕ್ಕೆ ಸೂಕ್ತವೆನಿಸಿದ ಕ್ರಮ ಕೈಗೊಳ್ಳುವಂತೆ ತಿಳಿಸಿದ್ದಾರೆ.

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ವಾಕೈ 85 ಕೈಸೇವಿ 2008, ಬೆಂಗಳೂರು, ದಿನಾಂಕ:7ನೇ ಫೆಬ್ರವರಿ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಈ ಪ್ರಕಣವನ್ನು ಸರ್ಕಾರವು ಪರಿಶೀಲಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 10(5)(ಸಿ)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಟಿ.ಎಸ್. ಮಲ್ಲಿಕಾರ್ಜುನ, ಹಿಂದಿನ ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ರಾಯಪುರ, ಧಾರವಾಡ, ಇವರ ಮೇಲಿನ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ/ಕ್ರಿಮಿನಲ್ ಮೊಕದ್ದಮೆ ಶಿಸ್ತು ಕ್ರಮಗಳನ್ನು ಕಾಯ್ದಿರಿಸಿ ಇವರ ಅಮಾನತ್ತನ್ನು ತಕ್ಷಣದಿಂದ ಜಾರಿಗೆ ಬರುವಂತೆ ತೆರವುಗೊಳಿಸಿ ಸೇವೆಗೆ ಪುನರ್ ಸ್ಥಾಪಿಸಿದೆ.

ಅಮಾನತ್ತು ತೆರವುಗೊಳಿಸಿ ನಂತರ, ಶ್ರೀ ಟಿ.ಎಸ್.ಮಲ್ಲಿಕಾರ್ಜುನ, ಸಹಾಯಕ ನಿರ್ದೇಶಕರು, (ಅಮಾನತ್ತು) ಇವರನ್ನು ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಬೆಳಗಾಂ, ಇಲ್ಲಿನ ಖಾಲಿ ಹುದ್ದೆಗೆ ಮುಂದಿನ ಆದೇಶದವರೆಗೆ ಸ್ಥಳ ನಿಯುಕ್ತಿಗೊಳಿಸಿ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್.549

ಬಿ.ಸಿ. ಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸೇವೆಗಳು)

ವಿಷಯ: ಶ್ರೀ ಕೆ. ಸಿದ್ದರಾಜಶೆಟ್ಟಿ, ರೇಷ್ಮೆ ಪ್ರವರ್ತಕರು (ಸಂ) ಇವರು ಕಾಣೆಯಾಗಿದ್ದು, ಈ ನೌಕರರ ಕುಟುಂಬ ವೇತನ ಮತ್ತಿತರ ಸೌಲಭ್ಯಗಳನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : 1 ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪತ್ರ ಸಂಖ್ಯೆ:ಸಿಬ್ಬಂದಿ3/ಶಿಸ್ತು/ರೇಪ್ರವ/11/04-05, ದಿ:27.1.2005, 14.3.2008 ಮತ್ತು 10.10.2008.

2 ಅಧಿಕೃತ ಜ್ಞಾಪನ ಸಂಖ್ಯೆ:ಆಇ (ವಿಶೇಷ) 11 ಕುವಿವೇ 87, ದಿನಾಂಕ:21.3.1988

ಪ್ರಸ್ತಾವನೆ:

ಶ್ರೀ ಕೆ. ಸಿದ್ದರಾಜಶೆಟ್ಟಿ, ರೇಷ್ಮೆ ಪ್ರವರ್ತಕರು (ಸಂಖ್ಯಾತಿರಿಕ್ತ), ತಾಂತ್ರಿಕ ಸೇವಾ ಕೇಂದ್ರ, ಕಾಮಕೆರೆ ಇವರು ದಿನಾಂಕ:10.9.2001ರಿಂದ ಕಾಣೆಯಾಗಿರುತ್ತಾರೆ. ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್, ಚಾಮರಾಜನಗರ ಇವರು ವರದಿ ನೀಡಿ ಕಾಣೆಯಾದ ಸರ್ಕಾರಿ ನೌಕರರ ಕುಟುಂಬಕ್ಕೆ ಕುಂಟುಂಬ ವೇತನ ಮತ್ತು ಇತರೆ ಸೌಲಭ್ಯಗಳನ್ನು ಮಂಜೂರು ಮಾಡುವಂತೆ ಕ್ರಮ ಕೈಗೊಳ್ಳಲು ಕೋರಿರುತ್ತಾರೆ ರೇಷ್ಮೆ ಉಪನಿರ್ದೇಶಕರು, ಚಾಮರಾಜನಗರ ಇವರು ಸಲ್ಲಿಸಿರುವ ವರದಿಯನ್ವಯ ಶ್ರೀ ಕೆ. ಸಿದ್ದರಾಜಶೆಟ್ಟಿ ಇವರು ದಿ:10.9.2001 ರಿಂದ ಕಛೇರಿ ಕೆಲಸಕ್ಕೆ ಹಾಜರಾಗದಿರುವುದು ದಾಖಲೆಗಳಿಂದ ದೃಢಪಡುವುದಾಗಿ ತಿಳಿಸಲಾಗಿದೆ. ಕಾಣೆಯಾಗಿರುವ ನೌಕರರ ಪತ್ನಿ ದಿನಾಂಕ:17.9.2001ರಲ್ಲಿ ಕೊಳ್ಳೇಗಾಲ ಪಟ್ಟಣ, ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ. ನೌಕರರು ಕೆಲಸಕ್ಕೆ ಬಾರದಿರುವುದರಿಂದ ಮೇಲಾಧಿಕಾರಿಗಳಾದ ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ ಕಾಮಗೆರೆ ಇವರು ಕೆಲಸಕ್ಕೆ ಹಾಜರಾಗಲು ಸೂಚಿಸಿ ಜ್ಞಾಪನ ಕಳುಹಿಸಿದಾಗಲೂ ಪ್ರತ್ಯುತ್ತರ ಬಾರದಿರುವುದರಿಂದ ನೌಕರರ ಗೈರು ಹಾಜರಿಗೆ ಸಂಬಂಧಿಸಿದಂತೆ ಶಿಸ್ತು ಕ್ರಮ ಜರುಗಿಸಲು ರೇಷ್ಮೆ ಉಪನಿರ್ದೇಶಕರಿಗೆ ವರದಿ ಮಾಡಿರುತ್ತಾರೆ .ಶ್ರೀ ಕೆ. ಸಿದ್ದರಾಜಶೆಟ್ಟಿ ಇವರು ಕಾಣೆಯಾಗಿರುವ ಬಗ್ಗೆ ಅವರ ತಾಯಿಯಾದ ಶ್ರೀಮತಿ ಸಿದ್ದಮ್ಮರವರು ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ, ಕಾಮಗೆರೆ ಇವರಿಗೆ 2 ಮನವಿಗಳನ್ನು ನೀಡಿ ತಮ್ಮ ಮಗ ಕಾಣೆಯಾಗಿರುವ ಬಗ್ಗೆ ತಿಳಿಸಿರುತ್ತಾರೆ. ರೇಷ್ಮೆ ವಿಸ್ತರಣಾಧಿಕಾರಿ ಹಾಗೂ ರೇಷ್ಮೆ ನಿರೀಕ್ಷಕರು ನಡೆಸಿರುವ ಮಹಜರಿನಂತೆ ಶ್ರೀ ಕೆ. ಸಿದ್ದರಾಜಶೆಟ್ಟಿ ಇವರ ಇರುವಿಕೆಯು ಪತ್ತೆಯಾಗಿರುವುದಿಲ್ಲ, ಮೈಸೂರಿನ ದಿನಪತ್ರಿಕೆಯಾದ ಆಂದೋಲನದಲ್ಲಿ ನೌಕರರ ನಿಗೂಡ ಕಣ್ಮರೆಯಾದ ಬಗ್ಗೆ ವರದಿ ಬಂದಿರುತ್ತದೆ. ಇಲಾಖೆಯಿಂದ ಶಿಸ್ತು ಕ್ರಮ ಜರುಗಿಸಲು ನಡೆಸಿದ ಇಲಾಖಾ ವಿಚಾರಣೆಗೂ ಸದರಿಯವರು ಪತ್ತೆಯಾಗದಿರುವುದರಿಂದ ಕ್ರಮ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ, ಸ್ಥಳೀಯ ಪತ್ರಿಕೆಗಳಲ್ಲಿ ಗೈರು ಹಾಜರಿ ಸಂಬಂಧ ನೀಡಿದ ಪ್ರಕಟಣೆಗೂ ನೌಕರರು ಯಾವುದೇ ರೀತಿ ಸ್ಪಂದಿಸಿರುವುದಿಲ್ಲ. ಶ್ರೀ ಕೆ. ಸಿದ್ದರಾಜಶೆಟ್ಟಿ, ರೇಷ್ಮೆ ಪ್ರವರ್ತಕರು(ಸಂಖ್ಯಾತಿರಿಕ್ತ) ಇವರು ಕಾಣೆಯಾಗಿರುವ ಬಗ್ಗೆ ಪೊಲೀಸ್ ಠಾಣೆಯಲ್ಲಿ ದಾಖಲಾದ ದೂರಿನ ಬಗ್ಗೆ ಪೊಲೀಸ್ ವೃತ್ತ ನಿರೀಕ್ಷಕರು ದಿನಾಂಕ:23.11.2004 ರಂದು ವರದಿ ನೀಡಿದ್ದು, ಪ್ರಕರಣವು ದಾಖಲೆಯಾದ ದಿನಾಂಕದಿಂದ ಇಲ್ಲಿಯವರೆಗೆ ಕಾಣೆಯಾದ ನೌಕರರ ಪತ್ತೆ ಬಗ್ಗೆ ಮಾಡಿದ ಎಲ್ಲಾ ಪ್ರಯತ್ನವು ವಿಫಲವಾಗಿದ್ದು, ಈ ಪ್ರಕರಣವು ಪತ್ತೆಯಾಗದೆಂದು ಪರಿಗಣಿಸಲಾಗಿದೆ ಎಂದು ದೃಢೀಕರಣ ನೀಡಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಶ್ರೀ ಕೆ. ಸಿದ್ದರಾಜಶೆಟ್ಟಿ, ಇವರು ಕಾಣೆಯಾಗಿರುವುದು ದಾಖಲೆ ಹಾಗೂ ಪೊಲೀಸ್ ವರದಿಯಿಂದ ದೃಡಪಡುತ್ತದೆ. ಶ್ರೀ ಕೆ. ಸಿದ್ದರಾಜಶೆಟ್ಟಿ, ರೇಷ್ಮೆ ಪ್ರವರ್ತಕರ ಇವರ ಪತ್ನಿ ಶ್ರೀಮತಿ ಎಸ್ ಲೀಲಾ ಇವರು ಮನವಿ ಸಲ್ಲಿಸಿ, ಶ್ರೀ ಕೆ. ಸಿದ್ದರಾಜಶೆಟ್ಟಿ ಇವರು ಕಾಣೆಯಾಗಿರುವುದರಿಂದ ಕುಟುಂಬ ವೇತನ ಮತ್ತಿತರ ಸೌಲಭ್ಯಗಳನ್ನು ಮಂಜೂರು ಮಾಡುವಂತೆ ಕೋರಿದ್ದು, ಕಾಣೆಯಾದ ಸರ್ಕಾರಿ ನೌಕರರ ಕುಟುಂಬಕ್ಕೆ ಕುಟುಂಬ ವೇತನ ಮತ್ತು ಇತರೆ ಸೌಲಭ್ಯಗಳನ್ನು ಮಂಜೂರು ಮಾಡುವ ಬಗ್ಗೆ ಕೋರಿರುವುದು ನ್ಯಾಯಸಮ್ಮತವಾಗಿರುತ್ತದೆಯಾದ್ದರಿಂದ ಕಾಣೆಯಾದ ನೌಕರರ ಕುಟುಂಬಕ್ಕೆ ಸಲ್ಲಬೇಕಾದ ಸೌಲಭ್ಯಗಳನ್ನು ನೀಡಲು ಆದೇಶ ಹೊರಡಿಸುವಂತೆ ಮೇಲೆ ಓದಲಾದ ಪತ್ರದಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು. ಸರ್ಕಾರವನ್ನು ಕೋರಿರುತ್ತಾರೆ.

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ನೀಡಿರುವ ಮೇಲಿನ ಮಾಹಿತಿಯನ್ವಯ ಶ್ರೀ ಕೆ. ಸಿದ್ದರಾಜಶೆಟ್ಟಿ, ಇವರು ದಿನಾಂಕ:10.9.2001ರಿಂದ ಕಾಣೆಯಾಗಿರುತ್ತಾರೆ. ನೌಕರರು ಕಾಣೆಯಾಗಿರುವ ಬಗ್ಗೆ ಇವರ ಪತ್ನಿ ಶ್ರೀಮತಿ ಲೀಲಾ ಇವರು ದಿನಾಂಕ:17.9.2001ರಂದು ಕೊಳ್ಳೇಗಾಲ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ. ಸದರಿ ದೂರಿನನ್ವಯ ಪ್ರಕರಣವು ದಾಖಲಾದ ದಿನದಿಂದ ದಿನಾಂಕ:23.11.2004ರ ವರೆಗೆ ಕಾಣೆಯಾಗಿರುವ ಶ್ರೀ ಕೆ. ಸಿದ್ದರಾಜಶೆಟ್ಟಿ ಇವರ ಪತ್ತೆಯ ಬಗ್ಗೆ ಎಲ್ಲಾ ಪ್ರಾಮಾಣಿಕ ಪ್ರಯತ್ನಗಳನ್ನು ನಡೆಸಿದ್ದು, ಅದು ವಿಫಲವಾಗಿರುವುದರಿಂದ ಈ ಪ್ರಕಣವು ಪತ್ತೆಯಾಗದ್ದೆಂದು ಪರಿಗಣಿಸಿದೆ ಎಂದು ಪೊಲೀಸ್ ಠಾಣೆಯಿಂದ ವರದಿ ನೀಡಲಾಗಿದೆ. ಇಲಾಖೆಯು ನಡೆಸಿರುವ ಮಹಜರಿನಂತೆಯೂ ಶ್ರೀ ಕೆ. ಸಿದ್ದರಾಜಶೆಟ್ಟಿ ಇವರ ಇರುವಿಕೆಯು ಪತ್ತೆಯಾಗಿರುವುದಿಲ್ಲ ಮೈಸೂರಿನ ದಿನಪತ್ರಿಕೆಯಲ್ಲಿ ನೌಕರರು ಕಣ್ಮರೆಯಾದ ಬಗ್ಗೆ ವರದಿ ಬಂದಿರುತ್ತದೆ. ಪೊಲೀಸ್ ಇಲಾಖೆಯು ಪ್ರಕರಣವು ಪತ್ತೆಯಾಗದ ಪ್ರಕರಣವೆಂದು ಪರಿಗಣಿಸಿರುವ ಹಿನ್ನಲೆಯಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಕೋರಿರುವಂತೆ ಕಾಣೆಯಾದ ನೌಕರರ ಅವಲಂಬಿತರಿಗೆ ಕುಟುಂಬ ವೇತನ ಮತ್ತಿತರ ಸೌಲಭ್ಯಗಳನ್ನು ಮಂಜೂರು

ಮಾಡುವ ಕುರಿತಂತೆ ಪರಿಶೀಲಿಸಿದ್ದು, ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದನ್ವಯ ಎಲ್ಲಾ ಕ್ರಮಗಳನ್ನು ಪ್ರಸ್ತುತ ಪ್ರಕರಣದಲ್ಲಿ ಕೈಗೊಳ್ಳಲಾಗಿರುವುದರಿಂದ ನೌಕರರ ಅವಲಂಬಿತರಿಗೆ ನಿಯಮಾನುಸಾರ ನೀಡಬೇಕಾಗಿರುವ ಕುಟುಂಬ ವೇತನ ಮತ್ತಿತರ ಸೌಲಭ್ಯಗಳನ್ನು ಮಂಜೂರು ಮಾಡಲು ತೀರ್ಮಾನಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ವಾಕೈ 63 ರೇಇವಿ 2008, ಬೆಂಗಳೂರು, ದಿನಾಂಕ:5ನೇ ಫೆಬ್ರವರಿ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ನೇಮಕಾತಿ ಪ್ರಾಧಿಕಾರವು, ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಆಇ (ವಿಶೇಷ) 11 ಕುವಿವೇ 87, ದಿನಾಂಕ:21.3.1988ರಲ್ಲಿ ವಿಧಿಸಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿರುವುದನ್ನು ಖಾತ್ರಿ ಪಡಿಸಿಕೊಂಡು ನಂತರ, ಶ್ರೀ ಕೆ. ಸಿದ್ದರಾಜಶೆಟ್ಟಿ, ರೇಷ್ಮೆ ಪ್ರವರ್ತಕರು (ಸಂಖ್ಯಾತಿರಿಕ್ತ) ತಾಂತ್ರಿಕ ಸೇವಾ ಕೇಂದ್ರ ಕಾಮಗೆರೆ ಇವರ ಪತ್ನಿಯಾದ ಶ್ರೀಮತಿ ಲೀಲಾ ಇವರಿಗೆ ನಿಯಮಗಳನ್ವಯ ನೀಡಬಹುದಾದ ಕುಟುಂಬ ವೇತನ ಹಾಗೂ ಮತ್ತಿತರ ಸೌಲಭ್ಯಗಳನ್ನು ನೀಡುವುದಕ್ಕೆ ಮಂಜೂರಾತಿ ನೀಡಲಾಗಿದೆ.

ಆರ್ಥಿಕ ಇಲಾಖೆಯ ಅಧಿಕೃತ ಜ್ಞಾಪನ ಸಂಖ್ಯೆ:ಆಇ (ವಿಶೇಷ) 11 ಕುವಿವೇ 97, ದಿನಾಂಕ:21.3.1988ರ ಕಂಡಿಕೆ 6(ಊ) ರನ್ವಯ ವಿಮಾ ಸಂರಕ್ಷಣಾ ಹಣವನ್ನು ನಾಮ ನಿರ್ದೇಶಿತರಿಗೆ ಅಥವಾ ಕಾನೂನುಬದ್ಧ ವಾರಸುದಾರರಿಗೆ ಕಾಣೆಯಾದ ತಿಂಗಳಿನಿಂದ ಹಿಡಿದು ಏಳು ವರ್ಷಗಳ ನಂತರ ಸಂದಾಯ ಮಾಡಬಹುದು. ಪರಂತು ಹಕ್ಕುದಾರರು ಕ್ರಮಬದ್ಧವಾದ ಮತ್ತು ನಿರ್ವಿವಾದ ಪುರಾವೆಯನ್ನು ಕಾಣೆಯಾದ ನೌಕರನು ಮೃತ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕು ಅಥವಾ ಭಾರತೀಯ ಸಾಕ್ಷಿ ಕಾಯಿದೆಯ 108ನೇ ವಿಧಿಯ ಪ್ರಕಾರ ಕಾಣೆಯಾದ ನೌಕರನು(ಳು) ಮೃತನಾದನೆಂದು ಬಾವಿಸಿ. ಇದರ ಬಗ್ಗೆ ಕೋರ್ಟಿನಿಂದ ಪಡೆದ ಡಿಕ್ರಿಯನ್ನು ಹಾಜರುಪಡಿಸಿದ ವಿಮಾ ಹಣವನ್ನು ಸಂದಾಯ ಮಾಡುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್.550

ಭಾರತಿ ಆರ್. ನಾಯಕ್

ಪೀಠಾಧಿಕಾರಿ (ರೇಷ್ಮೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ: ರಾಜ್ಯಕ್ಕೆ ಹೆಚ್ಚುವರಿ ಅಡ್ವೋಕೇಟ್ ಜನರಲ್ ಹುದ್ದಯೆನ್ನು ಸೃಜಿಸುವ ಬಗ್ಗೆ.

ಪ್ರಸ್ತಾವನೆ:

ರಾಜ್ಯದಲ್ಲಿ ದಿನಾಂಕ:4.7.2008ರಂದು ಧಾರವಾಡದಲ್ಲಿ ಮತ್ತು ದಿನಾಂಕ:5.7.2008ರಂದು ಗುಲ್ಬರ್ಗಾದಲ್ಲಿ ಉಚ್ಚನ್ಯಾಯಾಲಯದ ಸಂಚಾರಿ ಪೀಠಗಳನ್ನು ಸ್ಥಾಪನೆ ಮಾಡಲಾಗಿರುತ್ತದೆ. ಸಂಚಾರಿ ಪೀಠಗಳು ಕಾರ್ಯಾರಂಭ ಮಾಡಿರುವ ಹಿನ್ನಲೆಯಲ್ಲಿ ಅಡ್ವೋಕೇಟ್ ಜನರಲ್ ಅವರಿಗೆ ಕೆಲಸದ ಒತ್ತಡ ಹೆಚ್ಚಾಗಿರುವುದನ್ನು ಸರ್ಕಾರವು ಮನಗಂಡಿರುತ್ತದೆ ಹಾಗೂ ರಾಜ್ಯದ ಪ್ರಕರಣಗಳನ್ನು ಇನ್ನೂ ಹೆಚ್ಚು ಸಮರ್ಪಕವಾಗಿ ನಿರ್ವಹಿಸಲು ಒಂದು ಹೆಚ್ಚವರಿ ಅಡ್ವೋಕೇಟ್ ಜನರಲ್‌ರ ಅವಶ್ಯಕತೆ ಉಂಟಾಗಿರುವುದಾಗಿ ಅಭಿಪ್ರಾಯಪಡಲಾಗಿದೆ. ಆದಕಾರಣ, ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮ, 1977ರ ಅಡಿಯಲ್ಲಿ ರಾಜ್ಯಕ್ಕೆ ಒಂದು ಹೆಚ್ಚುವರಿ ಅಡ್ವೋಕೇಟ್ ಜನರಲ್ ಹುದ್ದೆಯನ್ನು ಸೃಜಿಸಲು ತೀರ್ಮಾನಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಲಾ 06 ಎಲ್‌ಏಜಿ 2009, ಬೆಂಗಳೂರು, ದಿನಾಂಕ:3ನೇ ಫೆಬ್ರವರಿ 2009

ಪ್ರಸ್ತಾವನೆಯ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಗಣಿಸಿ, ತಕ್ಷಣದಿಂದಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ರಾಜ್ಯಕ್ಕೆ ಒಂದು ಹೆಚ್ಚುವರಿ ಅಡ್ವೋಕೇಟ್ ಜನರಲ್ ಹುದ್ದೆಯನ್ನು ಸೃಜಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಹೊಸದಾಗಿ ಸೃಜಿಸಲಾದ ಸದರಿ ಹುದ್ದೆಗೆ ಅಡ್ವೋಕೇಟ್ ಜನರಲ್ ಹುದ್ದೆಗೆ ಸಮನಾಗಿ ವೇತನ ಮತ್ತು ಭತ್ಯೆಗಳ ಅನ್ವಯವಾಗುತ್ತವೆ.

ಈ ಸಂಬಂಧದಲ್ಲಿ ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮ, 1977ಕ್ಕೆ ಸೂಕ್ತ ತಿದ್ದುಪಡಿ ಹೊರಡಿಸಲಾಗುವುದು.

ಈ ಆದೇಶವನ್ನು ಟಿಪ್ಪಣಿ ಸಂಖ್ಯೆ:ಆಇ 55 ವೆಚ್ಚ 10/2009 ದಿನಾಂಕ:3.2.2009ರಲ್ಲಿ ಆರ್ಥಿಕ ಇಲಾಖೆಯು ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್.552

ಎಸ್. ಸಿದ್ದಲಿಂಗೇಶ್

ಸರ್ಕಾರದ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಕಂದಾಯ ಸಚಿವಾಲಯ

ವಿಷಯ: ಶ್ರೀ ಸಿ.ಎಂ. ಹಿರೇಮಠ ಹಿಂದಿನ ತಹಶೀಲ್ದಾರ್, ರೋಣ ಪ್ರಸ್ತುತ ನಿವೃತ್ತರು, ಇವರ ವಿರುದ್ಧದ ಇಲಾಖಾ ವಿಚಾರಣೆ ಬಗ್ಗೆ–ದೋಷಮುಕ್ತಗೊಳಿಸಿ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ : 1 ಸರ್ಕಾರದ ಆದೇಶ ಸಂ:ಆರ್‌ಡಿ 56 ಎಡಿಇ 2006, ದಿನಾಂಕ:11.3.2008.

2 ಶ್ರೀ ಎನ್. ಸುಬ್ಬಾರಾವ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಯಾಧೀಶರು ಹಾಗೂ ವಿಚಾರಣಾಧಿಕಾರಿಗಳು ಇವರ ವಿಚಾರಣಾ ವರದಿ ದಿನಾಂಕ:1.3.2008.

ಪ್ರಸ್ತಾವನೆ:

ಶ್ರೀ ಸಿ.,ಎಂ. ಹಿರೇಮಠ, ಹಿಂದಿನ ತಹಶೀಲ್ದಾರ್, ರೋಣ ತಾಲ್ಲೂಕು ಪ್ರಸ್ತುತ ನಿವೃತ್ತರು, ಇವರು ರೋಣ ತಾಲ್ಲೂಕು ತಹಶೀಲ್ದಾರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಮೆ. ವೆಂಕಟೇಶ್ವರ ಆಯಿಲ್ ಏಜೆನ್ಸಿ ಗಜೇಂದ್ರಗಡ, ಇವರು ಕಾರ್ಡುದಾರರಿಗೆ ಸರಿಯಾಗಿ ಸೀಮೆಎಣ್ಣೆ ವಿತರಣೆ ಮಾಡಿಲ್ಲದ ಕಾರಣ, ಜಿಲ್ಲಾಧಿಕಾರಿಗಳು ಗದಗ್ ಇವರಿಗೆ ತಿಳಿಸಿದಾಗ ಸದರಿ ಏಜನ್ಸಿಯ ಲೈಸೆನ್ಸ್ ತೆಗೆದುಹಾಕಿ, ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ಜಿಲ್ಲಾಧಿಕಾರಿಗಳು ತಿಳಿಸಿದಾಗ್ಯೂ ಶ್ರೀ ಸಿ.ಎಂ. ಹಿರೇಮಠ, ಇವರು ಶ್ರೀ ಮೆ. ವೆಂಕಟೇಶ್ವರ ಆಯಿಲ್ ಏಜೆನ್ಸಿ ಇವರ ವಿರುದ್ಧ FIR ದಾಖಲಿಸುವ ಬದಲು ಜುಗಲ್ ಕಿಶೋರ್ ಮಂತ್ರಿ ಎಂಬುವರ ವಿರುದ್ಧ ಕ್ರಮ ಕೈಗೊಂಡ ಕರ್ತವ್ಯ ಚ್ಯುತಿ ಎಸಗಿದ ಕಾರಣ, ಇವರ ವಿರುದ್ಧ ಇಲಾಖಾ ವಿಚಾರಣೆ ಜರುಗಿಸಲು ಮೇಲೆ ಕ್ರ.ಸಂ 1ರಲ್ಲಿ ಓದಲಾದ ದಿನಾಂಕ:11.3.2008ರ ಸರ್ಕಾರಿ ಆದೇಶದಲ್ಲಿ ಶ್ರೀ ಎನ್. ಸುಬ್ಬಾರಾವ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಶಿಸ್ತು ಪ್ರಾಧಿಕಾರದ ಪರವಾಗಿ ವಿಚಾರಣಾಧಿಕಾರಿ ಮುಂದೆ ಮಂಡಿಸಲು ಗದಗ್ ಜಿಲ್ಲಾಧಿಕಾರಿಯವರ ಕೇಂದ್ರ ಸ್ಥಾನಿಕ ಸಹಾಯಕರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ವಿಚಾರಣಾಧಿಕಾರಿಯವರು ಈ ಪ್ರಕರಣದಲ್ಲಿ ಇಲಾಖಾ ವಿಚಾರಣೆಯನ್ನು ಜರುಗಿಸಿ ಮೇಲೆ ಕ್ರ.ಸಂ (2)ರಲ್ಲಿ ಓದಲಾದ ದಿನಾಂಕ:1.3.2008ರ ಪತ್ರದೊಂದಿಗೆ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಅದರಲ್ಲಿ ಸದರಿಯವರ ವಿರುದ್ಧ ಮಾಡಲಾದ ಆರೋಪಗಳು ಸಾಬೀತಾಗಿಲ್ಲವೆಂದು ವರದಿ ಮಾಡಿರುತ್ತಾರೆ.

ವಿಚಾರಣಾಧಿಕಾರಿಗಳು ಸರ್ಕಾರಕ್ಕೆ ಸಲ್ಲಿಸಿದ್ದ ವಿಚಾರಣಾ ವರದಿಯು ಹಾಗೂ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿ, ಸರ್ಕಾರವು ವಿಚಾರಣಾಧಿಕಾರಿಗಳ ವಿಚಾರಣಾ ವರದಿಯನ್ನು ಒಪ್ಪಿಕೊಂಡು ಶ್ರೀ ಸಿ.ಎಂ. ಹಿರೇಮಠ, ಹಿಂದಿನ ತಹಶೀಲ್ದಾರ್, ರೋಣ (ಪ್ರಸ್ತುತ ನಿವೃತ್ತರು) ಇವರ ವಿರುದ್ಧದ ಆರೋಪಗಳು ಸಾಬೀತಾಗದಿರುವುದು ಸ್ಪಷ್ಟವಾಗಿರುವುದರಿಂದ ಇವರನ್ನು ಆರೋಪ ಮುಕ್ತರನ್ನಾಗಿಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ:ಆರ್‌ಡಿ 56 ಎಡಿಇ 2006, ಬೆಂಗಳೂರು, ದಿನಾಂಕ:6ನೇ ಫೆಬ್ರವರಿ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ಶ್ರೀ ಸಿ.ಎಂ. ಹಿರೇಮಠ, ಹಿಂದಿನ ತಹಶೀಲ್ದಾರ್, ರೋಣ (ಪ್ರಸ್ತುತ ನಿವೃತ್ತರು) ಇವರ ವಿರುದ್ಧ ದಿನಾಂಕ:11.5.2008ರ ಆದೇಶದಲ್ಲಿ ಹೊರಡಿಸಲಾದ ಆರೋಪಗಳಿಂದ ಮುಕ್ತಗೊಳಿಸಲಾಗಿದೆ.

ಈ ಪ್ರಕರಣದ ಮಟ್ಟಿಗೆ ಸಂಬಂಧಿಸಿದಂತೆ ಸದರಿ ಅಧಿಕಾರಿಯವರ ವಿರುದ್ಧ ಈ ಇಲಾಖಾ ವಿಚಾರಣೆಯು ನಡೆಯದಿದ್ದಲ್ಲಿ ಅವರು ಯಾವ ಸೇವಾ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಿದ್ದರೋ ಅಂತಹ ಸೇವಾ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಾರೆ. ಹಾಗೂ ಇವರು ಅಮಾನತ್ತಿನಲ್ಲಿ ಕಳೆದ ಅವಧಿ ದಿನಾಂಕ:2.8.2006ರಿಂದ 4.1.2007ರ ವರೆಗಿನ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 100(1)(ಬಿ)ರ ಪ್ರಕಾರ ಕರ್ತವ್ಯದ ಅವಧಿಯೆಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 553

ಬಿ.ವಿ. ಚೌಕಿಮಠ

ಸರ್ಕಾರ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಸೇವೆಗಳು–3)

REVENUE SECRETARIAT

Sub : Appointment of Master Trainers in Revenue Departmetn at District level-reg

PREAMBLE:

Revenue Department is implementing various e-Governance initiative projects like Bhoomi, Rural Digital Service under Nemmadi and Bhoomaojini at the taluk level. Revenue Department has also taken up carious spectial activities such as clearing pending Dharkasht podi, introduction of Tatkal podi, marking of pkyki RTC & NA lands in Bhoomi database, RTC correction drive etc.,

The changes brought by Government are informed to the field staffs by way of Circulars & Governement Ordes. Most of the times due to heavy work load of the Tahsildars, these guidelines are not properly understood and communicated to the field staffs (Revenue Inspectors & Village Accountants) As a result the objectives of the Government in improving the efficiency of the administration are not fully achieved.

The only way by which the progremmes could be made understood to all the Revenue officials is through imparting training to all the Revenue Officials i.e. from the level of Tahsildar to village Accountant, This training cannot be done at the State level to all the Revenue Officials as there are no adequate resources at the Government level to take up the training activity for 10000 officials & officers.

Therefore Government has now decided to appoint one Tahsildar in each district as the "Master Trainer" and train these 29 master trainer, who inturn will train all the Tahsildars and other Revenue staffs in their respective district.

Hence the following order.

Government Order No. RD 57 ASD 2009, Bangalore, Dated:31st January 2009

In the Circumstances explained in the preamble, Government is pleased to appoint one Tahsildar rank officer as "Master trainer" in each district

2) The following"Selection Committee" is constituted for recommending the names of master trainers to the Governement.

1. Special Secretary (Bhoomi),Revenue Departement –Chairmen
2. Deputy Secretary (Services) ,Revenue Department-Member
3. Project Officer, Bhoomi, Monitoring Cell-Member Secretary.

The above committee can co-opt more members if required.

All the Deputy Commissioners shall send the name of the Tahsildar working in their district to special Secretary (Bhoomi), Revenue Department along with their bio data.

3) The selection Committee will interview as many Tahsildars as are required and suggest 29 Tahsildars to Governement for appointing them as master trainers The Selection Committee can also recommend more than 29 names for Government under the following circumstances.

1 Incase more Tahsildars with aptitude for training are available

2. More master trainers are required in bigger districts like Gulbarga, Belgaum, Uttar Kannada, Tumkur where there are more than 10 taluks.

3. The Tahsildars appointed as "Master Trainer" will not be transferred from that district without the prior concurrence the Selection Committee or in case of urgency chairmen of the Selection Committee.

4. All the master trainers will be trained by Special Secretary (Bhoomi), Revenue Department at Bangalore.

5. Government will ensure that the training will be for not more than 5 days at a stretch, Under Special circumstances if the training exceeds 5 days approval of Principal Secretary, Revenue Department would be taken. This is to ensure that there is no undue disruption of work in taluk when master trainer is working as Tahsildar.

6. The Selection Committee will meet once on a month and review the performance of the master trainers. If Selection Committee feels that the performance of the master trainers is not up to the mark, he can recommend such names to Government for taking disciplinary action against the officer as negligence of duty and also suggest alternate master trainers for that district.

7. Incase any other department want to use the services of these master trainer, it will be done with prior approval of the Selection Committee only.

8 .The appointment of master trainer will be done through a separate order based on the recommendation made by Selection Committee.

By order and in the name of the Governor of Karnataka

B.V. CHOUKIMATH

P.R. 554 Under Secretary to Government

Revenue Department(Services-3)

ಕಂದಾಯ ಸಚಿವಾಲಯ

ವಿಷಯ: ಶ್ರೀ ಕೆ.ವಿ. ವೆಂಕಟೇಶುಡು, ಹಿಂದಿನ ತಹಶೀಲ್ದಾರ್, ನಾಗಮಂಗಲ ತಾಲ್ಲೂಕು ಹಾಲಿ ನಿವೃತ್ತರು ಹಾಗೂ ಶ್ರೀ ವಿ., ಕೆಂಪಯ್ಯ ಹಿಂದಿನ ರಾಜಸ್ವ ನಿರೀಕ್ಷಕರು ತಾಲ್ಲೂಕು ಕಛೇರಿ, ನಾಗಲಮಂಗಲ, ಹಾಲಿ ನಿವೃತ್ತರು ಇವರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆ-ಶ್ರೀ ಕೆ. ಗೋಪಾಲಕೃಷ್ಣ ಗ್ರಾಮಲೆಕ್ಕಿಗರು ಇವರನ್ನು ದೋಷಮುಕ್ತರನ್ನಾಗಿರುಸುವ ಬಗ್ಗೆ.

ಓದಲಾಗಿದೆ :
1 ಮಂಡ್ಯ ಜಿಲ್ಲಾಧಿಕಾರಿಗಳು ಇವರ ಪತ್ರ ಸಂ:ಸಿಬ್ಬಂದಿ (2) :62:2000-01, ದಿನಾಂಕ:10-2-2003.
2 ದಿನಾಂಕ:24/30-09-2003ರ ತಿಳುವಳಿಕೆ ಪತ್ರ ಸಂ:ಕಂಇ 36 ಎಡಿಇ 03
3 ಶ್ರೀ ಕೆ.ವಿ. ವೆಂಕಟೇಶುಡು, ನಿವೃತ್ತ ತಹಶೀಲ್ದಾರ್ ರವರ ದಿನಾಂಕ: 4.3.2004ರ ಪತ್ರ
4 ಶ್ರೀ ವಿ. ಕೆಂಪಯ್ಯ ನಿವೃತ್ತ ರಾಜಸ್ವನಿರೀಕ್ಷಕರು ಇವರ ದಿನಾಂಕ:14.2.2004ರ ಲಿಖಿತ ಸಮಜಾಯಿಷಿ.
5 ಶ್ರೀ ಕೆ. ಗೋಪಾಲಕೃಷ್ಣ ಗ್ರಾಮಲೆಕ್ಕಿಗರು ಇವರ ದಿನಾಂಕ:10-11-2003ರ ಲಿಖಿತ ಸಮಜಾಯಿಷಿ
6 ಸರ್ಕಾರದ ಆದೇಶ ಸಂ:ಆರ್ ಡಿ 36 ಎಡಿಇ 2003, ದಿನಾಂಕ:14.6.2004.
7 ವಿಚಾರಣಾಧಿಕಾರಿಗಳ ವರದಿ ದಿನಾಂಕ:18.5.2005.

ಪ್ರಸ್ತಾವನೆ:

ಶ್ರೀ ಕೆ.ವಿ ವೆಂಕಟೇಶುಡು, ನಿವೃತ್ತ ತಹಶೀಲ್ದಾರ್, ಶ್ರೀ ವಿ. ಕೆಂಪಯ್ಯ ಹಿಂದಿನ ರಾಜಸ್ವ ನಿರೀಕ್ಷಕರು, ತಾಲ್ಲೂಕು ಕಛೇರಿ, ನಾಗಮಂಗಲ (ಹಾಲಿ ನಿವೃತ್ತರು) ಹಾಗೂ ಶ್ರೀ ಗೋಪಾಲಕೃಷ್ಣ ಗ್ರಾಮಲೆಕ್ಕಿಗರು ಇವರುಗಳು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಸದರಿ ತಾಲ್ಲೂಕಿನ ಗದೇಭೂವನಹಳ್ಳಿ ಗ್ರಾಮದ ಸ.ನಂ. 109ರಲ್ಲಿ ಮೂಲ ದಾಖಲಾತಿಗಳ ಪ್ರಕಾರ ಸರ್ಕಾರಿ ಬೀಳು ಆಗಿದ್ದು, ಸದರಿ ನಿವೃತ್ತ ಅಧಿಕಾರಿಯು ಶ್ರೀಮತಿ ಪುಟ್ಟಬಸಮ್ಮ ಕೋಂ ಹುಚ್ಚಯ್ಯ ಎಂಬುವವರಿಗೆ ಆದೇಶ ಸಂ:ಆರ್‌ಕೆ ಬೀಳು:ಸಿಆರ್:13:98-99, ದಿನಾಂಕ:24.7.2000ರಲ್ಲಿ ಈ ಜಮೀನನ್ನು ಬೀಳು ರೆಸ್ಟೋರ್ ಮಾಡಿ ಅಕ್ರಮವಾಗಿ ಹಕ್ಕು ಪತ್ರವನ್ನು ನೀಡಿ ಕರ್ತವ್ಯಲೋಪ ಎಸಗಿರುವುದರಿಂದ ಸದರಿ ಓದಲಾದ ಪತ್ರದಲ್ಲಿ ಮಂಡ್ಯ ಜಿಲ್ಲಾಧಿಕಾರಿಗಳು ಕೋರಿರುತ್ತಾರೆ.

ಅದರಂತೆ ಆಪಾದಿತ ಅಧಿಕಾರಿ/ನೌಕರರಿಗೆ ಮೇಲೆ ಓದಲಾದ ಕ್ರ.ಸಂ. (2)ರ ದಿನಾಂಕ:24/30-9-2003ರಲ್ಲಿ ಕಾರಣ ಕೇಳುವ ನೋಟೀಸ್ ಜಾರಿ ಮಾಡಿ ಅವರುಗಳಿಂದ ಲಿಖಿತ ಹೇಳಿಕೆ ಪಡೆದು ಪರಿಶೀಲಿಸಿ, ಹೇಳಿಕೆ ತೃಪ್ತಿಕರವಾಗಿರದ ಕಾರಣ, ಈ ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿಯಲು, ಸರ್ಕಾರವು ಮೇಲೆ ಓದಲಾದ ಕ್ರ.ಸಂ (6)ರ ದಿನಾಂಕ:14.6.2004ರಲ್ಲಿ ಈ ಕೆಳಕಂಡ ಆಪಾದಿತ ಅಧಿಕಾರಿ. ನೌಕರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 13ರಡಿ ಜಂಟಿ ಇಲಾಖಾ ವಿಚಾರಣೆ ಜರುಗಿಸಲು ಶ್ರೀ ಸಂಗೊಳ್ಳಿ ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

1) ಶ್ರೀ ಕೆ.ವಿ ವೆಂಕಟೇಶುಡು, ನಿವೃತ್ತ ತಹಶೀಲ್ದಾರ್,

2) ಶ್ರೀ ವಿ. ಕೆಂಪಯ್ಯ, ಹಿಂದಿನ ರಾಜಸ್ವ ನಿರೀಕ್ಷಕರು. ತಾಲ್ಲೂಕು ಕಛೇರಿ. ನಾಗಮಂಗಲ (ಹಾಲಿ ನಿವೃತ್ತರು) ಹಾಗೂ

3) ಶ್ರೀ ಗೋಪಾಲಕೃಷ್ಣ, ಗ್ರಾಮಲೆಕ್ಕಿಗರು

ವಿಚಾರಣಾಧಿಕಾರಿಗಳು ಮೇಲೆ ಓದಲಾದ ಕ್ರ.ಸಂ (7)ರ ದಿನಾಂಕ:18.5.2005ರಲ್ಲಿ ಈ ಪ್ರಕರಣದ ಕುರಿತು ಜಂಟಿ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ, ಈ ಕೆಳಕಂಡ ಅಧಿಕಾರಿ. ನೌಕರರ ವಿರುದ್ಧ ಮಾಡಲಾದ ಆಪಾದನೆಗಳು ಸಾಬೀತಾಗಿವೆ ಎಂದು ವರದಿ ಮಾಡಿರುತ್ತಾರೆ.

1) ಶ್ರೀ ಕೆ.ವಿ ವೆಂಕಟೇಶುಡು, ನಿವೃತ್ತ ತಹಶೀಲ್ದಾರ್,

2) ಶ್ರೀ ವಿ. ಕೆಂಪಯ್ಯ, ಹಿಂದಿನ ರಾಜಸ್ವ ನಿರೀಕ್ಷಕರು. ತಾಲ್ಲೂಕು ಕಛೇರಿ. ನಾಗಮಂಗಲ (ಹಾಲಿ ನಿವೃತ್ತರು) ಹಾಗೂ

ಶ್ರೀ ಗೋಪಾಲಕೃಷ್ಣ, ಗ್ರಾಮಲೆಕ್ಕಿಗ (ಪ್ರಸ್ತುತ ಗ್ರಾಮಲೆಕ್ಕಿಗ ಮೊದೂರು ವೃತ್ತ, ಭೂಕಿನಕೆರೆ ಹೋಬಳಿ, ಕೆ.ಆರ್. ಪೇಟೆ ತಾಲ್ಲೂಕು) ಇವರ ವಿರುದ್ಧ ಹೂಡಲಾಗಿರುವ ಆಪಾದನೆಗಳು ಸಾಬೀತಾಗಿಲ್ಲವೆಂದು ವಿಚಾರಣಾ ವರದಿಯಲ್ಲಿ ತಿಳಿಸಿರುತ್ತಾರೆ.

ಸದರಿ ವಿಚಾರಣಾಧಿಕಾರಿಗಳ ವರದಿಯನ್ನು ಸರ್ಕಾರವು ಒಪ್ಪಿಕೊಂಡು ಆರೋಪ ಸಾಬೀತಾಗಿರುವ ಅಧಿಕಾರಿ/ನೌಕರರ ವಿರುದ್ಧ ಪ್ರತ್ಯೇಕವಾಗಿ ದಂಡನೆ ವಿಧಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಆರೋಪ ಸಾಬೀತಾಗಿಲ್ಲದ ನೌಕರರ ಬಗ್ಗೆ ಆದೇಶ ಮಾಡಬೇಕಾಗಿರುವುದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂ:ಆರ್‌ಡಿ 36 ಎಡಿಇ 2003, ಬೆಂಗಳೂರು, ದಿನಾಂಕ:27ನೇ ಜನವರಿ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಈ ಪ್ರಕಣದಲ್ಲಿ ಭಾಗಿಯಾಗಿರುವ ಶ್ರೀಗೋಪಾಲಕೃಷ್ಣ ಗ್ರಾಮಲೆಕ್ಕಿಗರು (ಪ್ರಸ್ತುತ ಗ್ರಾಮಲೆಕ್ಕಿಗ, ಮೊದೂರು ವೃತ್ತ, ಭೂಕಿನಕೆರೆ ಹೋಬಳಿ, ಕೆ.ಆರ್. ಪೇಟೆ ತಾಲ್ಲೂಕು) ಇವರ ವಿರುದ್ಧ ಆರೋಪ ಸಾಬೀತಾಗಿಲ್ಲವೆಂದು ವಿಚಾರಣಾಧಿಕಾರಿಗಳು ವರದಿ ಮಾಡಿರುವ ಹಿನ್ನಲೆಯಲ್ಲಿ ಇವರ ವಿರುದ್ಧ ಹೂಡಲಾಗಿದ್ದ ಆರೋಪಗಳಿಂದ ಈ ಪ್ರಕಣದ ಮಟ್ಟಿಗೆ ದೋಷಮುಕ್ತರನ್ನಾಗಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 555 **ಟಿ.ವಿ. ಚೌಕಿಮಠ**

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಸೇವೆಗಳು–3)

ನಗರಾಭಿವೃದ್ಧಿ ಸಚಿವಾಲಯ

ವಿಷಯ: ಹಾಸನ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾಯೋಜನೆ (ಪರಿಷ್ಕೃತ–1)ಕ್ಕೆ ಸರ್ಕಾರದ ತಾತ್ಕಾಲಿಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ :
1 ಸರ್ಕಾರದ ಆದೇಶ ಸಂಖ್ಯೆ:ನಅಇ:464:ಟಿಟಿಪಿ:92 ಬೆಂಗಳೂರು, ದಿನಾಂಕ:29.12.1992.
2 ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಪತ್ರ ಸಂಖ್ಯೆ:ಹಾನಪ್ರಾ/ನಯೋಸ/ಮಯೋಪ/77/2008–09 ದಿನಾಂಕ:10–7–2008.
3 ನಗರದ ಯೋಜನಾ ನಿರ್ದೇಶಕರ ಕಛೇರಿಯ ಏಕ ಕಡತ ಸಂಖ್ಯೆ: ನಯೋ(20)/ಹಾಸನ/ಮಯೋಪ/– 1/2/7/2008 ದಿನಾಂಕ:

ಪ್ರಸ್ತಾವನೆ:

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಹಾಸನ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ದಿನಾಂಕ:29.12.1992 ರಂದು ಅಂತಿಮ ಅನುಮೋದನೆಯನ್ನು ನೀಡಿ ಆದೇಶಿಸಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಹಾಸನ ನಗರಾಭಿವೃದ್ಧಿ ಪ್ರಾಧಿಕಾರವು ಹಾಸನ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(ಡಿ) ರನ್ವಯ ಪರಿಷ್ಕರಿಸಿ, ಮಹಾ ಯೋಜನೆ (ಪರಿಷ್ಕೃತ–1)ನ್ನು ರೂಪಿಸಿ ಸರ್ಕಾರದ ತಾತ್ಕಾಲಿಕ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿದೆ.

ಮೇಲೆ ಓದಲಾದ (3)ರ ಏಕ ಕಡತದಲ್ಲಿ ನಗರ ಯೋಜನಾ ನಿರ್ದೇಶಕರು, ಹಾಸನ ಸ್ಥಳೀಯ ಯೋಜನಾ ಪ್ರದೇಶದ ಜನಸಂಖ್ಯೆಯು 2021 ರಲ್ಲಿ 4.00 ಲಕ್ಷಗಳಿಗೆ ಬೆಳವಣಿಗೆಯಾಗುವುದಾಗಿ ಅಂದಾಜಿಸಿ ಮಹಾಯೋಜನೆ (ಪರಿಷ್ಕೃತ–1) ನ್ನು ರೂಪಿಸಲಾಗಿದೆ. ಹಾಸನ ನಗರ ಹಾಗೂ ಇತರ ಗ್ರಾಮಗಳನ್ನೊಳಗೊಂಡ ಸ್ಥಳಿಯ ಯೋಜನಾ ಪ್ರದೇಶದ ಜನಸಂಖ್ಯೆ, ಸಾಮಾಜಿಕ ಮತು ಆರ್ಥಿಕ ಸ್ಥಿತಿಗತಿ, ಹಾಲಿ ಬೆಳವಣಿಗೆಯ ಗತಿ, ಹವಾಗುಣ, ರಸ್ತೆಗಳ ಹಾಲಿ ಪರಿಚಲನೆ ವ್ಯವಸ್ಥೆಯ ಸಮಸ್ಯೆಗಳನ್ನು ವಿಶ್ಲೇಷಿಸಿ ಯೋಜನಾ ತತ್ವಗಳಿಗೆ ಅನುಗುಣವಾಗಿ ಹಾಗೂ ಮಹಾ ಯೋಜನೆಯ ತಯಾರಿಕೆ ಬಗ್ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ (9) ರಿಂದ (12)ರವರೆಗೆ ನಿಗಧಿಪಡಿಸಿರುವ ಅಂಶಗಳನ್ನು ಪರಿಗಣಿಸಿ ನಗರದ ಯೋಜಿತ ಬೆಳವಣಿಗೆಗಾಗಿ ಪ್ರಸ್ತಾಪಿಸಿರುವ ಒಟ್ಟು 6718.55 ಹೆಕ್ಟೇರ್ ಪ್ರದೇಶದಲ್ಲಿ ವಸತಿಗಾಗಿ 2908.12 ಹೆಕ್ಟೇರ್ (ಶೇಕಡ 43.28) ವಾಣಿಜ್ಯಕ್ಕಾಗಿ 183.14 ಹೆಕ್ಟೇರ್ (ಶೇಕಡ 2.72) ಕೈಗಾರಿಕೆಗಾಗಿ 388.65 ಹೆಕ್ಟೇರ್ (ಶೇಕಡ 5.78), ಸಾರ್ವಜನಿಕ/ಅರೆ ಸಾರ್ವಜನಿಕ ವಲಯಕ್ಕೆ 529.15 ಹೆಕ್ಟೇರ್ (ಶೇಕಡ 7.87) ಉದ್ಯಾನವನ/ಬಯಲು ಜಾಗೆಗಳಿಗೆ 576.12 ಹೆಕ್ಟೇರ್ (ಶೇಕಡ 8.57), ಸಾರಿಗೆ ಮತ್ತು ಸಂಪರ್ಕ ವಲಯಕ್ಕೆ 2128.77 ಹೆಕ್ಟೇರ್ (ಶೇಕಡ 31.68?) ಹಾಗೂ ನಾಗರೀಕ ಸೌಲಭ್ಯಕ್ಕಾಗಿ 4.60 ಹೆಕ್ಟೇರ್ (ಶೇಕಡ 0.,068) ಪ್ರದೇಶವನ್ನು ನಿಗಧಿಪಡಿಸಲಾಗಿದೆ. ಮಹಾಯೋಜನೆಯನ್ನು ಅನುಷ್ಠಾನಕ್ಕೆ ತರಲು ಅಗತ್ಯವಿರುವ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದೆ. ಸದರಿ ಮಹಾಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(1) ರನ್ವಯ ಸರ್ಕಾರದ ತಾತ್ಕಾಲಿಕ ಅನುಮೋದನೆ ನೀಡಲು ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ:ನಅಇ 874 ಮೈಅಪ್ರಾ 2008, ಬೆಂಗಳೂರು, ದಿನಾಂಕ:4ನೇ ಫೆಬ್ರವರಿ 2009

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಹಾಸನ ಸ್ಥಳೀಯ ಯೋಜನಾ ಪ್ರದೇಶಕ್ಕೆ ರೂಪಿಸಿರುವ ಮಹಾಯೋಜನೆ (ಪರಿಷ್ಕೃತ–I) ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(1)ರನ್ವಯ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿದೆ.

ಮಹಾ ಯೋಜನೆ (ಪರಿಷ್ಕೃತ–I)ಗೆ ತಾತ್ಕಾಲಿಕ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 557

ಸಿ.ಟಿ. ನಾರಾಯಣಸ್ವಾಮಿ

ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ,

ಸಾರಿಗೆ ಸಚಿವಾಲಯ

ವಿಷಯ: ಸಾರಿಗೆ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಪೈಕಿ ಶೇ. 80 ರಷ್ಟು ಹುದ್ದೆಗಳನ್ನು ರದ್ದುಗೊಳಿಸುವ ಬಗ್ಗೆ–ಖಾಲಿ ಇರುವ ಗ್ರೂಪ್–ಡಿ ಹುದ್ದೆಗಳ ರದ್ದು ಆದೇಶ.

ಓದಲಾಗಿದೆ : 1 ದಿನಾಂಕ:20.11.2007 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಅಧಿಕಾರಯುತ ಸಮಿತಿಯ ಸಭೆಯ ನಡವಳಿಗಳು.

2 ಸರ್ಕಾರದ ಆದೇಶ ಸಂಖ್ಯೆ ಸಾರಿಇ 2 ಸಾಇಸೇ 208 ದಿನಾಂಕ:11.1.2008

3 ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ/ಎಫ್‌ಡಿ 869 ವೆಚ್ಚ–6/ 2008 ದಿನಾಂಕ:29.11.2008

ಪ್ರಸ್ತಾವನೆ:

ದಿನಾಂಕ:1–4–2000 ರಂದು ಸಾರಿಗೆ ಇಲಾಖೆಯಲ್ಲಿ ಖಾಲಿ ಇದ್ದ ಹುದ್ದೆಗಳ ಪೈಕಿ ಶೇ 80 ರಷ್ಟು ಹುದ್ದೆಗಳನ್ನು ರದ್ದುಪಡಿಸುವ ಸಂಬಂಧ, ದಿನಾಂಕ:20–11–2007 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಾರಿಗೆ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳಲ್ಲಿ 40 ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ರದ್ದುಗೊಳಿಸಲು ತೀರ್ಮಾನಿಸಿತ್ತು, ಹಾಗೂ ಬಾಹ್ಯ ಮೂಲದಿಂದ ಗ್ರೂಪ್–ಡಿ ಹುದ್ದೆಗಳನ್ನು ತುಂಬಬಹುದಾಗಿದ್ದು ಅದಕ್ಕೆ ಅಗತ್ಯವಾದ ಅನುದಾನವನ್ನು ಆರ್ಥಿಕ ಇಲಾಖೆಯು ಒದಗಿಸುವ ಷರತ್ತಿಗೊಳಪಟ್ಟು 49 ಗ್ರೂಪ್–ಡಿ ಹುದ್ದೆಗಳನ್ನು ರದ್ದುಪಡಿಸಲು ತೀರ್ಮಾನಿಸಲಾಗಿತ್ತು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ, ಸಾರಿಗೆ ಇಲಾಖೆಯಲ್ಲಿ ಇರುವ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ಪೈಕಿ ಹಾಲಿ ಖಾಲಿ ಇದ್ದ ಹುದ್ದೆಗಳಲ್ಲಿ 40 ಹುದ್ದೆಗಳನ್ನು ರದ್ದುಪಡಿಸಲಾಗಿತ್ತು ಆರ್ಥಿಕ ಇಲಾಖೆಯು ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿನ ಟಿಪ್ಪಣಿಯಲ್ಲಿ ಸಾರಿಗೆ ಇಲಾಖೆಗೆ ಹಂಚಿಕೆ ಮಾಡಲಾದ ಆಯವ್ಯಯ ಅನುದಾನದಲ್ಲಿ ಹೆಚ್ಚುವರಿ/ಉಳಿತಾಯ ವಾಗಬಹುದಾದ ಅನುದಾನವನ್ನು ಗುರುತಿಸುವಂತೆ, ಒಂದು ವೇಳೆ ಹೆಚ್ಚುವರಿ/ಉಳಿತಾಯ ಅನುದಾನ ಲಭ್ಯವಿಲ್ಲದಿದ್ದಲ್ಲಿ, ಹೆಚ್ಚುವರಿ ಅನುದಾನಕ್ಕೆ ಆರ್ಥಿಕ ಇಲಾಖೆಯನ್ನು ಸಂಪರ್ಕಿಸುವಂತೆ ತಿಳಿಸಿ ಹುದ್ದೆಗಳನ್ನು ರದ್ದುಪಡಿಸುವಂತೆ ಸೂಚಿಸಿದೆ. ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ:ಸಾರಿಇ 2 ಸಾಇಸೇ 2008, ಬೆಂಗಳೂರು, ದಿನಾಂಕ:3ನೇ ಫೆಬ್ರವರಿ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಸಾರಿಗೆ ಇಲಾಖೆಯಲ್ಲಿ ಖಾಲಿ ಇರುವ 32 ಗ್ರೂಪ್–ಡಿ ಹುದ್ದೆಗಳನ್ನು ಈ ಕೂಡಲೇ ಜಾರಿಗೆ ಬರುವಂತೆ ರದ್ದುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 558

ಎಂ.ಆರ್. ಚಂದ್ರಶೇಖರಾರಾಧ್ಯ

ಪೀಠಾಧಿಕಾರಿ, ಸಾರಿಗೆ ಇಲಾಖೆ,

ನಗರಾಭಿವೃದ್ಧಿ ಸಚಿವಾಲಯ

ವಿಷಯ: ಮೈಸೂರು ನಗರ ಜೆ.ಸಿ.ಎಸ್.ಟಿ.ಜಿ ಮತ್ತು ಹೆಚ್ ಬಡಾವಣೆಯ ನಿವೇಶನ ಸಂಖ್ಯೆ 1031:ಬಿರ ತುಂಡುಜಾಗ (8.84+9.75) 24.38=226.62 ಚ.ಮೀ. ವಿಸ್ತೀರ್ಣದ ನಿವೇಶನವನ್ನು ವಸತಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ

ಓದಲಾಗಿದೆ : 1 ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಇವರ ಪತ್ರ ಸಂಖ್ಯೆ: ಮೈನಪ್ರಾ: ನಯೋ:ಸಭೆ:85:08–09 ದಿನಾಂಕ:7.11.2008.

2 ದಿ:16.12.2008ರಂದು ಕಡತ ಸಂಖ್ಯೆ:ನಯೋ:ಉನಿ:ಭೂಉಬ:ಜೆಸಿಎಸ್‌ಟಿ:220:2008–09ರಲ್ಲಿ ನಗರ ಯೋಜನಾ ನಿರ್ದೇಶಕರು ನೀಡಿರುವ ಅಭಿಪ್ರಾಯ

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಇವರು ಮೈಸೂರು ನಗರ ಜೆ.ಸಿ.ಎಸ್.ಟಿ.ಜಿ. ಮತ್ತು ಹೆಚ್ ಬಡಾವಣೆಯ ನಿವೇಶನ ಸಂಖ್ಯೆ 1031:ಬಿರ ತುಂಡುಜಾಗ (8.84+9.75) 24.38=226.62 ಚ.ಮೀ. ವಿಸ್ತೀರ್ಣದ ನಿವೇಶನವನ್ನು ವಸತಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾಯಿಸುವ ಕುರಿತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 14(ಎ)ರನ್ವಯ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಣೆಯನ್ನು ಹೊರಡಿಸಿದ್ದು, ಈ ಬಗ್ಗೆ ಯಾವುದೇ ಆಕ್ಷೇಪಣೆ ಬಂದಿರುವುದಿಲ್ಲವೆಂದು ತಿಳಿಸುತ್ತಾ ಪ್ರಸ್ತಾವನೆಯನ್ನು ಶಿಫಾರಸ್ಸು ಮಾಡಿ ನಿರ್ದೇಶಕರು, ನಗರ ಯೋಜನಾ ಇಲಾಖೆ ಇವರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಮೇಲೆ (2)ರಲ್ಲಿ ಓದಲಾದ ಕಡತದಲ್ಲಿ ನಗರ ಯೋಜನಾ ನಿರ್ದೇಶಕರು ಪ್ರಸ್ತಾವನೆಯನ್ನು ಪರಿಗಣಿಸಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ನಅಇ 866 ಮೈಅಪ್ರಾ 2008, ಬೆಂಗಳೂರು, ದಿನಾಂಕ:2ನೇ ಫೆಬ್ರವರಿ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 14(1)(ಎ)ರ ಪ್ರಕಾರ ಮೈಸೂರು ನಗರ ಜೆ.ಸಿ.ಎಸ್.ಟ.ಜಿ ಮತು ಹೆಚ್ ಬಡಾವಣೆಯ ನಿವೇಶನ ಸಂಖ್ಯೆ 1031:ಬಿರ ತುಂಡುಜಾಗ (8.84+9.75) 24. 38=226.62 ಚ.ಮೀ., ವಿಸ್ತೀರ್ಣದ ನಿವೇಶನವನ್ನು ವಸತಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ ಭೂ ಬದಲಾವಣೆ ಮಾಡಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮೋದನೆ ನೀಡಲಾಗಿದೆ.

1 ಪ್ರಸ್ತಾಪಿತ ಜಮೀನಿನ ಭೂ ಉಪಯೋಗ ಬದಲಾವಣೆ ಸಂಬಂಧ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಪ್ರಕರಣ 18ರನ್ವಯ ಶಾಸನಬದ್ದ ಶುಲ್ಕವನ್ನು ಪ್ರಾಧಿಕಾರಕ್ಕೆ ಅರ್ಜಿದಾರರು ಪಾವತಿಸತಕ್ಕದ್ದು.

2 ಈ ಭೂ ಉಪಯೋಗ ಬದಲಾವಣೆಯನ್ನು ಮಹಾ ಯೋಜನೆಯಲ್ಲಿ ಪ್ರಾಧಿಕಾರವು ಅಳವಡಿಸಿಕೊಳ್ಳತಕ್ಕದ್ದು

3 ಪ್ರಸ್ತಾಪಿತ ಜಮೀನಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮುನ್ನ ಅನುಮೋದಿತ ವಲಯ ನಿಯಮಾವಳಿಗಳನ್ವಯ ವಾಣಿಜ್ಯ ವಿನ್ಯಾಸಕ್ಕೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆ ಪಡೆಯತಕ್ಕದ್ದು.

4 ಮಾಸ್ಟರ್ ಪ್ಲಾನ್ ಪರಿಷ್ಕರಣೆ ಸಂದರ್ಭದಲ್ಲಿ ಯೋಜನೆಯಲ್ಲಿ ಅಳವಡಿಸಬಹುದಾದ ಉದ್ದೇಶಿತ ರಸ್ತೆ ಪರಿಚಲನೆಗೆ ಬೇಕಾಗುವ ಅಗತ್ಯ ಜಮೀನನ್ನು ಬಿಟ್ಟುಕೊಡತಕ್ಕದ್ದು.

5 ಪ್ರಸ್ತಾವಿತ ವಾಣಿಜ್ಯ ಕಟ್ಟಡದಲ್ಲಿ ವಾಹನ ನಿಲುಗಡೆಗೆ ಅಗತ್ಯ ಸೌಲಭ್ಯವನ್ನು ಕಲ್ಪಿಸಿಕೊಳ್ಳತಕದ್ದು.

6 ಅರ್ಜಿದಾರರೇ ಸದರಿ ಜಮೀನಿನಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 559 **ಸಿ.ಟಿ. ನಾರಾಯಣಸ್ವಾಮಿ**

ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ,

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ 08 ಪಸಸೇ 2009, ಬೆಂಗಳೂರು, ದಿನಾಂಕ:5ನೇ ಫೆಬ್ರವರಿ 2009

ವಿಷಯ: ಡಾ:ರುದ್ರಗೌಡ ಪಾಟೀಲ, ಪಶುವೈದ್ಯಾಧಿಕಾರಿ, ಪಶುಚಿಕಿತ್ಸಾಲಯ, ಹಳ್ಳೂರ, ಬಾಗಲಕೋಟೆ ಜಿಲ್ಲೆ ಇವರು ಪರೀಕ್ಷಾರ್ಥ ಅವಧಿಯಲ್ಲಿ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿ ದುರ್ವರ್ತನೆ ತೋರಿರುವುದರಿಂದ ಸರ್ಕಾರಿ ಸೇವೆಯಿಂದ ತೆಗೆದುಹಾಕುವ (Discharge) ಬಗ್ಗೆ.

ಓದಲಾಗಿದೆ : 1 ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ:ಆಪಸಂ/ಸಿಬ್ಬಂದಿ-2/ವಿವ-38/2007-08 ದಿನಾಂಕ:20-12-2008.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಸಂಖ್ಯೆ (1)ರ ಪತ್ರದಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು, ಇವರ ಪಶು ಚಿಕಿತ್ಸಾಲಯ, ಹಳ್ಳೂರ, ಬಾಗಲಕೋಟೆ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ:ರುದ್ರಗೌಡ ಪಾಟೀಲ, ಪಶುವೈದ್ಯಾಧಿಕಾರಿ ಇವರು ವೈಯಕ್ತಿಕ ಕಾರಣದ ಮೇಲೆ

ದಿನಾಂಕ:18.12.2007ರಿಂದ 27.,12.2007ರವರೆಗೆ 10 ದಿನಗಳು ಗಳಿಕೆ ರಜೆಯನ್ನು ಹಾಗೂ ವೈದ್ಯಕೀಯ ಕಾರಣದ ಮೇಲೆ ದಿನಾಂಕ:28.12.2007 ರಿಂದ 27.3.2008ರವರೆಗೆ ವೇತನ ರಹಿತ ರಜೆ ಪಡೆದಿದ್ದು ದಿನಾಂಕ:28.3.2008ರಂದು ಕರ್ತವ್ಯಕ್ಕೆ ಹಾಜರಾಗಬೇಕಾಗಿರುತ್ತದೆಂದು, ಆದರೆ ಸದರಿ ಅಧಿಕಾರಿಗಳು ಕಛೇರಿಗೆ ಮಾಹಿತಿ ನೀಡದೆ ದಿನಾಂಕ:28.3.2008ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿದ್ದು, ಕರ್ತವ್ಯಕ್ಕೆ ಹಾಜರಾಗುವಂತೆ ಸದರಿ ಅಧಿಕಾರಿಗಳ ಖಾಯಂ ವಿಳಾಸಕ್ಕೆ ಪತ್ರ ಬರೆಯಲಾಗಿದ್ದರೂ ಸಹ ಸದರಿ ಅಧಿಕಾರಿಗಳು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ .ಈ ಬಗ್ಗೆ ಉಪನಿರ್ದೇಶಕರು, ಪಶುಪಾಲನಾ ಇಲಾಖೆ, ಬಾಗಲಕೋಟೆ ಇವರು ಸದರಿ ಅಧಿಕಾರಿಗಳು ಉನ್ನತ ವ್ಯಾಸಂಗಕ್ಕಾಗಿ ವಿದೇಶಕ್ಕೆ ತೆರಳಲಿರುವ ಬಗ್ಗೆ ಶಂಕೆ ವ್ಯಕ್ತಪಡಿಸಿ, ಅವರನ್ನು ಸೇವೆಯಿಂದ ವಜಾಗೊಳಿಸಲು ಶಿಫಾರಸ್ಸು ಮಾಡಿರುತ್ತಾರೆ. ಆದ್ದರಿಂದ ಡಾ:ರುದ್ರಗೌಡ ಪಾಟೀಲ, ಪಶುವೈದ್ಯಾಧಿಕಾರಿ ಇವರು ಖಾಯಂ ಪೂರ್ವ ಸೇವಾವಧಿಯಲ್ಲಿರುವಾಗಲೇ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುವುದರಿಂದ ಉಪನಿರ್ದೇಶಕರ ಶಿಫಾರಸ್ಸಿನನ್ವಯ ಅವರನ್ನು ಸೇವೆಯಿಂದ ತೆಗೆದುಹಾಕುವಂತೆ ಆಯುಕ್ತರು ಸರ್ಕಾರವನ್ನು ಕೋರಿರುತ್ತಾರೆ.

2. ಡಾ: ರುದ್ರಗೌಡ ಪಾಟೀಲ, ಪಶುವೈದ್ಯಾಧಿಕಾರಿ ಇವರು ಪರೀಕ್ಷಾರ್ಥ ಅವಧಿಯಲ್ಲಿರುವಾಗಲೇ ಮೇಲಾಧಿಕಾರಿಗಳಿಂದ ರಜೆ ಮಂಜೂರಾತಿ ಮಾಡಿಸಿಕೊಳ್ಳದೇ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುತ್ತಾರೆ. ಕರ್ತವ್ಯಕ್ಕೆ ಹಾಜರಾಗುವಂತೆ ಸದರಿ ಅಧಿಕಾರಿಗಳ ಖಾಯಂ ವಿಳಾಸಕ್ಕೆ ಪತ್ರ ಬರೆದಿದ್ದರೂ ಸಹ ಅವರು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ ಇದರಿಂದಾಗಿ ಅವರಿಗೆ ಸರ್ಕಾರಿ ಸೇವೆಯಲ್ಲಿ ಕಾರ್ಯನಿರ್ವಹಿಸಲು ಇಷ್ಟವಿಲ್ಲದಿರುವುದು ಎದ್ದು ಕಾಣುತ್ತದೆ. ಈ ದಿಸೆಯಲ್ಲಿ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಡಾ: ರುದ್ರಗೌಡ ಪಾಟೀಲ, ಪಶುವೈದ್ಯಾಧಿಕಾರಿ ಇವರಿಗೆ ಸರ್ಕಾರಿ ಸೇವೆಯಲ್ಲಿ ಮುಂದುವರೆಯುವಲ್ಲಿ ಅನಾಸಕ್ತಿ ಹಾಗೂ ಪರೀಕ್ಷಾರ್ಥ ಅವಧಿಯಲ್ಲಿ ದುರ್ವರ್ತನೆ ತೋರಿರುವ ಹಿನ್ನಲೆಯಲ್ಲಿ ಸದರಿ ಅಧಿಕಾರಿಯನ್ನು ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ) ನಿಯಮಗಳು 1977ರ ನಿಯಮ 6(1)ರನ್ವಯ ಸರ್ಕಾರಿ ಸೇವೆಯಿಂದ ತೆಗೆದುಹಾಕಲು ಸರ್ಕಾರ ತೀರ್ಮಾನಿಸಿದೆ. ಅದರಂತೆ ಈ ಆದೇಶ

ಆದೇಶ

3. ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಡಾ: ರುದ್ರಗೌಡ ಪಾಟೀಲ, ಪಶುವೈದ್ಯಾಧಿಕಾರಿ ಪಶುಚಿಕಿತ್ಸಾಲಯ, ಹಳ್ಳೂರ ,ಬಾಗಲಕೋಟೆ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರು ಮೇಲಾಧಿಕಾರಿಗಳಿಂದ ರಜೆ ಮಂಜೂರಾತಿ ಮಾಡಿಸಿಕೊಳ್ಳದೇ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುವುದರಿಂದ ಹಾಗೂ ಪರೀಕ್ಷಾರ್ಥ ಅವಧಿಯಲ್ಲಿ ದುರ್ವರ್ತನೆ ತೋರಿ ಕರ್ತವ್ಯಲೋಪವೆಸಗಿರುವುದು ದೃಢಪಟ್ಟಿರುವುದರಿಂದ, ಆಯುಕ್ತರ ಶಿಫಾರಸ್ಸಿನನ್ವಯ ಡಾ:ರುದ್ರಗೌಡ ಪಾಟೀಲ ಪಶುವೈದ್ಯಾಧಿಕಾರಿ ಇವರನ್ನು ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ) ನಿಯಮಗಳು 1977ರ ನಿಯಮ 6(1)ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ತೆಗೆದುಹಾಕಲು (Discharge) ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 568 **ಎಂ.ಪಿ. ನಾಗರಾಜ**

ಸರ್ಕಾರದ ಅಧೀನ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ–ಎ)

ಕಾನೂನು. ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ: ಬೆಂಗಳೂರು ನಗರದಲ್ಲಿ ಖಾಲಿಯಿರುವ ಎರಡು (ನೋಟರಿ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು (ಶ್ರೀ ಸಿ. ದಿವಾಕರ್, ಮತ್ತು ಶ್ರೀ ಬಿ.ಎಸ್. ಅಶೋಕ ಕುಮಾರ್ ರವರಿಂದ ತೆರವಾದ)– ಶ್ರೀಯುತರಾದ ಬಿ. ರಾಜಶೇಖರ್ ಮತ್ತು ಬಿ.ಆರ್, ಕೃಷ್ಣ ಇವರನ್ನು ನೇಮಿಸುವ ಬಗ್ಗೆ.

ಓದಲಾಗಿದೆ : 1 ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು, ನಗರ ಇವರ ಪತ್ರ ಸಂಖ್ಯೆ ಸಿಸಿಸಿ ಆಡಳಿತ ವಿಭಾಗ 1(ಬಿ)237:2007 ದಿನಾಂಕ:16.10.2007

2 ಸರ್ಕಾರಿ ಆದೇಶ ಸಂ.ಲಾ 156 ಎಲ್‌ಸಿಎಲ್ 07, ದಿನಾಂಕ:26.10.2007.

3 ಸರ್ಕಾರಿ ಪತ್ರ ಸಂಖ್ಯೆ ಲಾ 105 ಎಲ್‌ಸಿಎಲ್ 07, ದಿನಾಂಕ:28.11.2007 ಹಾಗೂ ಜ್ಞಾಪಕ ಪತ್ರ ದಿನಾಂಕ:6.2.2008

4 ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ ಇವರ ಪತ್ರ ಸಂಖ್ಯೆ ಸಿಸಿಸಿ ಆಡಳಿತ 1(ಬಿ)36:2008 ದಿನಾಂಕ:12.2.2008

5 ಸರ್ಕಾರಿ ಪತ್ರ ಸಂಖ್ಯೆ ಲಾ 105 ಎಲ್ ಸಿಎಲ್ 07, ದಿನಾಂಕ:14.5.2008 ಹಾಗೂ ಜ್ಞಾಪಕ ಪತ್ರ ದಿನಾಂಕ:5.8.2008

6 ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು, ನಗರ ಇವರ ಪತ್ರ ಸಂಖ್ಯೆ ಎಡಿಎಂ–1(ಬಿ)197:2008 ದಿನಾಂಕ:12.8.2008.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ:16.10.2007ರ ಪತ್ರದಲ್ಲಿ ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ ಇವರು ಶ್ರೀ ಸಿ. ದಿವಾಕರ್, ನೊಟರಿ, ಬೆಂಗಳೂರು ನಗರ ಇವರು ದಿನಾಂಕ: 16.4.2007ರಂದು ನಿಧನರಾಗಿರುತ್ತಾರೆಂದು ಶ್ರೀಯುತರಿಂದ ತೆರವಾದ ಜಾಗ ಭರ್ತಿ ಮಾಡಬಹುದೆಂಬ ಅಭಿಪ್ರಾಯದೊಂದಿಗೆ ಮರಣ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ.

ಮೇಲೆ (2)ರಲ್ಲಿ ಓದಲಾದ ದಿನಾಂಕ:26.10.2007ರ ಸರ್ಕಾರಿ ಆದೇಶದಲ್ಲಿ ಶ್ರೀ ಬಿ.ಎನ್. ಅಶೋಕ್ ಕುಮಾರ್ ನೋಟರಿ ಬೆಂಗಳೂರು ನಗರ ರವರ ಕೋರಿಕೆಯಂತೆ ಇವರ ಹೆಸರನ್ನು ನೋಟರಿ ರಿಜಿಸ್ಟರ್‌ನಿಂದ ತೆಗೆದುಹಾಕಲಾಗಿರುತ್ತದೆ.

ಮೇಲೆ (3)ರಲ್ಲಿ ಓದಲಾದ ದಿನಾಂಕ:28.11.2007ರ ಸರ್ಕಾರದ ಪತ್ರ ಹಾಗೂ ದಿನಾಂಕ:6.2.2008 ಜ್ಞಾಪಕ ಪತ್ರದಲ್ಲಿ ಉಲ್ಲೇಖಿತ ಎರಡು ನೋಟರಿ ಹುದ್ದೆಗಳನ್ನು ಭರ್ತಿ ಮಾಡಲು ನೋಟರಿ ಅಧಿನಿಯಮ ಹಾಗೂ ನಿಯಮಗಳ ಮೇರೆಗೆ ಪರಿಶೀಲಿಸಿ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಿಕೊಡುವಂತೆ ಪ್ರಧಾನ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು, ನಗರ ಇವರನ್ನು ಕೋರಲಾಗಿತ್ತು, ಅದರಂತೆ ಮೇಲೆ (4) ರಲ್ಲಿ ಓದಲಾದ ದಿನಾಂಕ:12.2.2008ರ ಪತ್ರದಲ್ಲಿ ಪ್ರಧಾನ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ ಇವರು 39 ಜನರ ಮನವಿಗಳನ್ನೊಳಗೊಂಡ ಪ್ರಸ್ತಾವನೆಯನ್ನು ಸಲ್ಲಿಸಿದ್ದರು. ಆದರೆ, ಸದರಿ ಮನವಿಗಳಿಗೆ ಸಂಬಂಧಿಸಿದಂತೆ ನೊಟರಿ ನಿಯಮ 7(3)ರನ್ವಯ ಪರಿಶೀಲನಾ ವರದಿ ಸಲ್ಲಿಸಿರಲಿಲ್ಲವಾದ್ದರಿಂದ, ಮೇಲೆ (5)ರಲ್ಲಿ ಓದಲಾದ ದಿನಾಂಕ:14.5.2008 ಹಾಗೂ 5.8.2008ರ ಜ್ಞಾಪಕ ಪತ್ರದಲ್ಲಿ ನೋಟರಿ ನಿಯಮಗಳು 1956ರ ನಿಯಮ 7(3)ರ ರೀತ್ಯಾ ಹಾಗೂ ಕಾನೂನು ಅಧಿಕಾರಿಗಳ ನಿಯಮಾವಳಿ 1977ರ ನಿಯಮ 12(ಬಿ) ರನ್ವಯ ಮನವಿದಾರರು ಮತ್ತೊಂದು ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವರೇ? ಇಲ್ಲವೇ? ಎಂಬ ಬಗ್ಗೆ ಪರಿಶೀಲಿಸಿ ಪರಿಶೀಲನಾ ವರದಿಯೊಂದಿಗೆ ಪ್ರಸ್ತಾವನೆಯನ್ನು ಮರು ಸಲ್ಲಿಸುವಂತೆ ಪ್ರಧಾನ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು, ನಗರ ಇವರನ್ನು ಕೋರಲಾಗಿತ್ತು.

ಮೇಲೆ (6)ರಲ್ಲಿ ಓದಲಾದ ದಿನಾಂಕ:12.,8.2008 ಪತ್ರದಲ್ಲಿ ಪ್ರಧಾನ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ ಇವರು ನೇಮಕಾತಿಗಾಗಿ ಹಿಂದೆ ಹೊರಡಿಸಿದ್ದ ಅಧಿಸೂಚನೆಯನ್ನು ರದ್ದುಗೊಳಿಸಿ ಪುನಃ ಅರ್ಜಿಗಳನ್ನು ಆಹ್ವಾನಿಸಿ ಆ ಬಗ್ಗೆ ಸ್ವೀಕರಿಸಿದ 36 ಜನರ ಮನವಿಯನ್ನು ಈ ಹಿಂದೆ ಸಲ್ಲಿಸಿದ್ದ 39 ಜನರ ಮನವಿಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ ಅವುಗಳನ್ನು ಪರಿಶೀಲಿಸಲಾಗಿದೆ. ಕೆಲವರು ಎರಡು ಬಾರಿಯು ಮನವಿಗಳನ್ನು ಸಲ್ಲಿಸಿದ್ದಾರೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಿಂದ ಸ್ವೀಕೃತಗೊಂಡ (36+39) ಎಲ್ಲಾ ಮನವಿಗಳನ್ನು ಪರಿಗಣಿಸಿ 2 ಖಾಲಿ ಹುದ್ದೆಗಳಿಗಾಗಿ ಅವರಲ್ಲಿ ಇಬ್ಬರನ್ನು ನೇಮಕಗೊಳಿಸಲು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ:ಲಾ 105 ಎಲ್‌ಸಿಎಲ್ 2007, ಬೆಂಗಳೂರು, ದಿನಾಂಕ:2ನೇ ಫೆಬ್ರವರಿ 2009

ನೋಟರಿ ಅಧಿನಿಯಮ (1952) ಹಾಗೂ ಇದರ ಅಡಿಯಲ್ಲಿ ರಚಿಸಲಾಗಿರುವ ನೋಟರಿ ನಿಯಮಗಳು (1956)ರ ನಿಯಮ 8(1)ರಲ್ಲಿ ಪ್ರದತ್ತವಾಗಿರುವ ಅಧಿಕಾರ ಚಲಾಯಿಸಿ, ಈ ಕೆಳಕಂಡ ಇಬ್ಬರನ್ನು ವೃತ್ತಿ ಪ್ರಮಾಣ ಪತ್ರ ನೀಡಲಾದ ದಿನಾಂಕದಿಂದ ಐದು ವರ್ಷಗಳ ಅವಧಿಗೆ ಬೆಂಗಳೂರು ನಗರ ಕಂದಾಯ ತಾಲ್ಲೂಕಿಗೆ ನೋಟರಿಯನ್ನಾಗಿ ನೇಮಿಸಿದೆ.

1 ಶ್ರೀ ಬಿ.ರಾಜಶೇಖರ, ವಕೀಲರು, ನಂ 1130/13, 2ನೇ ಕ್ರಾಸ್ 3ನೇ ಮುಖ್ಯ ರಸ್ತೆ, ವಿಜಯನಗರ, ಬೆಂಗಳೂರು–40

2 ಶ್ರೀ ಬಿ.ಆರ್. ಕೃಷ್ಣ ವಕೀಲರು, ನಂ. 30, 6ನೇ ಕ್ರಾಸ್, 6ನೇ ಮ್ಮೆನ್, ಸಂಪಂಗಿರಾಮನಗರ, ಬೆಂಗಳೂರು–27

ಸದರಿ ವಕೀಲರು, ನಿಯಮಾನುಸಾರ ನಿಗಧಿಪಡಿಸಲಾದ ರೂ. 1000/– (ರೂಪಾಯಿ ಒಂದು ಸಾವಿರಗಳು ಮಾತ್ರ) ಶುಲ್ಕವನ್ನು ಸರ್ಕಾರಿ ಖಜಾನೆಯಲ್ಲಿ ಲೆಕ್ಕ ಶೀರ್ಷಿಕೆ 0070–ಇತರೆ–ಆಡಳಿತಾತ್ಮಕ ಸೇವೆಗಳು–01–ನ್ಯಾಯ ಪರಿಪಾಲನೆ–501–0–ಇತರೆ ಸ್ವೀಕೃತಿಗಳು–06–ಇತರೆ ಬಾಬುಗಳಿಗೆ (0070–01–501–0–06) ಜಮಾ ಮಾಡಿ ಆ ಬಗೆಗಿನ ಮೂಲ ಚಲನ್ ಮತ್ತು ಹುಟ್ಟಿದ ದಿನಾಂಕವನ್ನು ದೃಢೀಕರಿಸಬಲ್ಲ ದಾಖಲೆಯನ್ನು ಹಾಜರುಪಡಿಸಿದ ನಂತರ ವೃತ್ತಿ ಪ್ರಮಾಣ ಪತ್ರವನ್ನು ನೀಡಲಾಗುವುದು. ತದನಂತರ ಶ್ರೀಯುತರ ಹೆಸರನ್ನು ನೋಟರಿ ಅಧಿನಿಯಮ 1952ರ ಸೆಕ್ಷನ್ 4ರಡಿಯಲ್ಲಿ ಸರ್ಕಾರ ನಿರ್ವಹಿಸುತ್ತಿರುವ ಪಟ್ಟಿಯಲ್ಲಿ ನಮೂದಿಸಲಾಗುವುದು, ಈ ಸಂಬಂಧದ ವೆಚ್ಚವನ್ನು ವಕೀಲರೆ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 570

ಹೆಚ್.ಆರ್. ಶಕುಂತಲ

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–2), ಕಾನೂನು. ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ಸುತ್ತೋಲೆ

ಸಂಖ್ಯೆ:ಸಿಐ 242 ಎಸ್‌ಪಿಐ 2007, ಬೆಂಗಳೂರು, ದಿನಾಂಕ:4ನೇ ಫೆಬ್ರವರಿ 2009

ವಿಷಯ: ಕೈಗಾರಿಕಾ ನೀತಿ 2006-11ರ ಕೆಲವು ಕಂಡಿಕೆಗಳಿಗೆ ತಿದ್ದುಪಡಿ ಮಾಡುವ ಬಗ್ಗೆ.

ಓದಲಾಗಿದೆ : 1 ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ : FD 33 Exp-I/08 ದಿನಾಂಕ:28.5.2008

2 ಆಯುಕ್ತರು ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರ ಪತ್ರ ಸಂಖ್ಯೆ:ಕೈಅ/ಇ3/ಕೈ.ನೀ/08-09 ದಿನಾಂಕ:28.1.2009.

2. ವಿವಿಧ ಕೈಗಾರಿಕೆಗಳ ವರ್ಗಗಳಲ್ಲಿ ಆಗಿಂದಾಗ್ಗೆ ಕೇಂದ್ರ ಸರ್ಕಾರವು ಬಂಡವಾಳ ಮಿತಿಯನ್ನು ಬದಲಾಯಿಸುತ್ತಿರುವುದನ್ನು ಕೈಗಾರಿಕಾ ನೀತಿಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ:

ಕೈಗಾರಿಕಾ ನೀತಿ 2006-11ರ ಕಂಡಿಕೆ 5.6 (ಸಿ)ಯಲ್ಲಿ ತಿಳಿಸಿದಂತೆ ಹಾಗೂ ಈ ಕಂಡಿಕೆಗೆ ಆರ್ಥಿಕ ಇಲಾಖೆಯು ಉಲ್ಲೇಖ (1)ರಲ್ಲಿ ಒಪ್ಪಿಗೆ ನೀಡಿರುವುದರಿಂದ ವಿವಿಧ ಕೈಗಾರಿಕೆಗಳ ವರ್ಗಗಳಲ್ಲಿ ಕೇಂದ್ರ ಸರ್ಕಾರವು ಬಂಡವಾಳ ಹೂಡಿಕೆ ಮಿತಿಯನ್ನು ಬದಲಾಯಿಸುತ್ತಿರುವುದನ್ನು ಕರ್ನಾಟಕ ಸರ್ಕಾರ ಕೈಗಾರಿಕಾ ನೀರಿ 2006-11ರಲ್ಲಿ ಅಳವಡಿಸಿಕೊಳ್ಳಬಹುದಾಗಿದೆ.

2. ಕೈಗಾರಿಕಾ ಘಟಕಗಳು ತಮ್ಮ ನಿವೇಶನ/ಮಳಿಗೆಗಳ ಶುದ್ಧ ಕ್ರಯ ಪತ್ರ ನೊಂದಾಯಿಸಿಕೊಳ್ಳಲು ಮುದ್ರಾಂಕ ಶುಲ್ಕ ವಿನಾಯಿತಿ ಪಡೆಯುವ ಬಗ್ಗೆ.

2006-11 ಕೈಗಾರಿಕಾ ನೀತಿ ಅವಧಿಯ ಅನುಷ್ಠಾನಕ್ಕೆ ಮುನ್ನ ಕೆ.ಎಸ್.ಎಸ್.ಐ.ಡಿ.ಸಿ ಮತ್ತು ಕೆ.ಐ.ಎ.ಡಿ.ಬಿ ವತಿಯಿಂದ ಫ್ಲಾಟ್‌ಗಳನ್ನು/ಶೆಡ್‌ಗಳನ್ನು ಲೀಸ್-ಕಂ-ಸೇಲ್ ಆಧಾರದ ಮೇಲೆ ಪಡೆದು ಕೈಗಾರಿಕಾ ಘಟಕಗಳನ್ನು ಸ್ಥಾಪಿಸಿ ಲೀಸ್ ಅವಧಿ ಮುಗಿದ ನಂತರ ಶುದ್ಧ ಕ್ರಯ ಪತ್ರವನ್ನು ಸಂಬಂಧಿಸಿದ ನಿಗಮ ಮತ್ತು ಮಂಡಳಿಗಳೊಂದಿಗೆ ನೋಂದಣಿ ಮಾಡಿಕೊಳ್ಳುವಾಗ ಮುದ್ರಾಂಕ ಶುಲ್ಕಕ್ಕೆ ಕೆಳಕಂಡಂತೆ ವಿನಾಯಿತಿ ನೀಡಲಾಗಿದೆ.

ಮುದ್ರಾಂಕ ಶುಲ್ಕ ವಿನಾಯಿತಿ

ವಲಯ-1ರಲ್ಲಿ ಪೂರ್ಣ ವಿನಾಯಿತಿ

ವಲಯ-2ರಲ್ಲಿ ಶೇ. 75 ರಷ್ಟು ವಿನಾಯಿತಿ

ವಲಯ-3ರಲ್ಲಿ ಯಾವುದೇ ರೀತಿಯ ವಿನಾಯಿತಿ ಲಭ್ಯವಿರುವುದಿಲ್ಲ.

3. ಈ ಸುತ್ತೋಲೆಯ ಕಾಲಾವಧಿಯು ಹೊಸ ಕೈಗಾರಿಕಾ ನೀತಿ 2009-14 ಜಾರಿಗೆ ತರುವವರೆವಿಗೂ ಅಸ್ಥಿತ್ವದಲ್ಲಿರುತ್ತದೆ.

ಸುಬೀರ್ ಹರಿಸಿಂಗ್

ಪಿ.ಆರ್. 571 ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ವಿಷಯ: ಶಿವಮೊಗ್ಗದಲ್ಲಿ ಆಹಾರ ಪಾರ್ಕ್ ಸ್ಥಾಪನೆಗೆ ಎರಡನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1 ಅಧಿಕ ನಿರ್ದೇಶಕರು (ಸಪ್ರಕೈ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರ ಪತ್ರ ಸಂಖ್ಯೆ: ಸಪಕೈ/ಎಸ್1/ಆಹಾರ ಪಾರ್ಕ್/17/2008-09 ದಿನಾಂಕ:30-12-2008.

2 ಸರ್ಕಾರಿ ಆದೇಶ ಸಂಖ್ಯೆ:ಸಿಐ 282 ಎಸ್ ಪಿಐ 2009 ದಿನಾಂಕ:29-1-2009

3 ಅಧಿಕ ನಿರ್ದೇಶಕರು (ಸಪ್ರಕೈ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರ ಪತ್ರ ಸಂಖ್ಯೆ:ಸಪ್ರಕೈ/ಎಸ್ 1/ಆಹಾರ ಪಾರ್ಕ್/17/2008-09 ದಿನಾಂಕ:6.2.2009.

ಪ್ರಸ್ತಾವನೆ:

ಮಾನ್ಯ ಮುಖ್ಯಮಂತ್ರಿ ಯವರು ಕರ್ನಾಟಕ ರಾಜ್ಯದ ಆಯವ್ಯಯ 2008-09 ರಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಆಹಾರ ಸಂಸ್ಕರಣ ಪಾರ್ಕ್ ಸ್ಥಾಪಿಸಲಾಗುವುದೆಂದು ತಿಳಿಸಿರುತ್ತಾರೆ

ಈ ಯೋಜನೆ ಅನುಷ್ಠಾನಗೊಳಿಸುವ ಸಂಬಂಧ ಆಹಾರ ಕರ್ನಾಟಕ ನಿಯಮಿತ, ಜಿಲ್ಲಾ ಕೈಗಾರಿಕಾ ಕೇಂದ್ರ, ಕಂದಾಯ ಇಲಾಖೆ ಮತ್ತು ಕೆ.ಐ.ಎ.ಡಿ.ಬಿ. ರವರುಗಳು ಸೋಗಾನೆ ಗ್ರಾಮ, ನಿಧಿಗೆ ಹೋಬಳಿ ಶಿವಮೊಗ್ಗ ತಾಲ್ಲೂಕಿನ ಬಿ.ಹೆಚ್ ರಸ್ತೆಯಲ್ಲಿರುವ ಸರ್ವೆ ನಂ 120 ರಲ್ಲಿರುವ 100 ಎಕರೆ ಭೂಮಿಯನ್ನು ಆಹಾರ ಪಾರ್ಕ್ ಸ್ಥಾಪನೆಗಾಗಿ ಗುರುತಿಸಿರುತ್ತಾರೆ. ಸದರಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಹಾಗೂ ಮೆ:ಐಡೆಕ್ ಲಿಮಿಟೆಡ್, ಬೆಂಗಳೂರು ಸಂಸ್ಥೆಗೆ ಆಹಾರ ಪಾರ್ಕ್ ಸ್ಥಾಪನೆಗೆ ಸಂಬಂಧಿಸಿದಂತೆ ಪ್ರಿ ಇನ್ವೆಸ್ಟ್‌ಮೆಂಟ್ ಫೀಸಿಬಿಲಿಟಿ ವರದಿ ತಯಾರಿಸಲು ರೂ. 2.00ಕೋಟಿ ಬಿಡುಗಡೆ ಮಾಡುವಂತೆ ಅಧಿಕ

ನಿರ್ದೇಶಕರು (ಸಪ್ರಕ್ಯೆ) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರು ಮೇಲೆ ಓದಲಾದ ಉಲ್ಲೇಖ (1)ರಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಅದರಂತೆ, ಮೇಲೆ ಓದಲಾದ ಉಲ್ಲೇಖ (2)ರಲ್ಲಿ ಸರ್ಕಾರಿ ಆದೇಶವನ್ನು ಹೊರಡಿಸಿ, ಮೊದಲನೇ ಕಂತು ರೂ. 1.00 ಕೋಟಿಯನ್ನು ಈಗಾಲೇ ಬಿಡುಗಡೆ ಮಾಡಲಾಗಿದೆ. ಈಗ ಉಲ್ಲೇಖ (3)ರಲ್ಲಿ ಉಳಿದ ರೂ. 1.00 ಕೋಟಿಗಳನ್ನು ಬಿಡುಗಡೆ ಮಾಡುವಂತೆ ಅಧಿಕ ನಿರ್ದೇಶಕರು (ಸಪ್ರಕ್ಯೆ) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರು ಕೋರಿರುತ್ತಾರೆ. ಆದುದರಿಂದ ಈ ಕೆಳಕಂಡ ಆದೇಶ:

ಸರ್ಕಾರಿ ಆದೇಶ ಕ್ರಮ ಸಂಖ್ಯೆ:ಸಿಐ 282 ಎಸ್‌ಪಿಐ 2008, ಬೆಂಗಳೂರು, ದಿನಾಂಕ:9ನೇ ಫೆಬ್ರವರಿ 2009

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಶಿವಮೊಗ್ಗದಲ್ಲಿ ಆಹಾರ ಪಾರ್ಕ್ ಸ್ಥಾಪನೆಗಾಗಿ ಸೋಗಾನೆ ಗ್ರಾಮ, ನಿಧಿಗೆ ಹೋಬಳಿ, ಶಿವಮೊಗ್ಗ ತಾಲ್ಲೂಕು, ಇಲ್ಲಿಯ ಬಿ.ಹೆಚ್. ರಸ್ತೆಯಲ್ಲಿರುವ ಸರ್ವೆ ನಂ 120 ರಲ್ಲಿರುವ 100 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಹಾಗೂ ಪ್ರಿ ಇನ್ವೆಸ್ಟ್‌ಮೆಂಟ್ ಫಿಸಿಬಿಲಿಟಿ ವರದಿ ತಯಾರಿಸಲು 2008-09ನೇ ಸಾಲಿನ ಲೆಕ್ಕ ಶೀರ್ಷಿಕೆ ಶಿವಮೊಗ್ಗ ಆಹಾರ ಪಾರ್ಕ್ "4851-00-800-5-00-132" Capital Expenses ರಡಿಯಲ್ಲಿ ಎರಡನೇ ಕಂತಿನ ರೂ. 1.00 ಕೋಟಿ (ರೂಪಾಯಿ ಒಂದು ಕೋಟಿ ಮಾತ್ರ) ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಸದರಿ ಮೊತ್ತವನ್ನು ವಿಶೇಷ ಅಧಿಕಾರಿ, ಆಹಾರ ಕರ್ನಾಟಕ ನಿಯಮಿತ, ಬೆಂಗಳೂರು ರವರು ಸ್ವೀಕೃತಿ ರಸೀದಿಯ ಮೇಲೆ ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆರವರ ಮೇಲು ರುಜು ಪಡೆದು ಖಜಾನೆಯಿಂದ ಡ್ರಾ ಮಾಡಲು ಆದೇಶಿಸಿದೆ.

ಈ ಮೊತ್ತವನ್ನು 2008-09 ಸಾಲಿನಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಲೆಕ್ಕಶೀರ್ಷಿಕೆ ಶಿವಮೊಗ್ಗ ಆಹಾರ ಪಾರ್ಕ್"4851-00-800-5-00-132" Capital Expenses ಅಡಿ ಲಭ್ಯವಿರುವ ಆಯವ್ಯಯದಿಂದ ಭರಿಸುವುದು.

ಆರ್ಥಿಕ ಇಲಾಖೆ ಆದೇಶ ಸಂಖ್ಯೆ:ಎಫ್ ಡಿ 1 ಟಿಎಫ್‌ಪಿ 2008 ದಿನಾಂಕ:16.5.2008 ರನ್ವಯ ಕಾರ್ಯದರ್ಶಿಗಳಿಗೆ ಅನುದಾನ ಬಿಡುಗಡೆ ಮಾಡಲು ಪ್ರತ್ಯಾಯೋಜಿಸಿರುವ ಅಧಿಕಾರದಡಿ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 572

ಅಪರ್ಣ ಪಾವಟೆ

ಪೀಠಾಧಿಕಾರಿ (ತಾಂತ್ರಿಕ ಕೋಶ),

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,

URBAN DEVELOPMENT SECRETARIAT

Sub : Creation of 6 additional Accountant posts in Expert Management Cell under Directorate of Municipal Administration for F.B. A.S project-reg

Read :
1) Government Order No. UDD 92 PRJ 2005, dated:25.5.2005.
2) Government Order No. UDD 16 CRJ 2006, dated:1.2.2006.
3) Government Order No. UDD 2 CSR 2008, dated:11.3.2008.
4) Meting proceedings of 11 the meeting of empowered committee held on 5.12.2008

PREAMBLE:

The Government in its orders cited under reference 1,2 and 3 have accorded sanction for creation of an Expert Management Cell under Directorate of Municipal Administration with the following posts:

Sl. No.	Name of the Post	No. of Posts
1	Deputy Controller	2
2	Accounts Superintendent	1
3	Stenographer	2
4	First Division Assistant	2
5	Second Division Assistant	1
6	System Analyst/Data Entry Operator	2
7	Accountant	1

8	Office Manager	1
9	Group-D	2

The Director, Directorate of Municipal Administration, has proposed to Empowerd Committee for creation of 6 additional Accountant posts in Expert Management Cell under Directorate Municipal Administration considering the quantum of work involved. The proposal of the Director has been approved by the Empowered Committee in its 11th meeting held on 5.12.2008 for creation of 6 additional Accountant posts in the pay scale of Rs 8,000-14,800, if filled on deputation or a consolidated pay of Rs 12,000 if filled on contract basis in lieu of existing vacant posts of stenographers (2), System Analyst/Data Entry operator (2) and Group-D (2) with a condition that these posts will be co-terminus with the project.

Considering the above aspects, the Director, Directorate of Municipal Administration, has sent the proposal to Government to accord sanction for creation of 6 Accountant posts and abolition of posts of Stenographers (2), System Analyst/Data Entry Operator (2) and Group-D(2) The proposal has been examined and the following order is issued.

Government Order No:UDD 15 BMS 2009, Bangalore, dated:7th February 2009,

In the circumstances explained above, sanction is accorded for creation of six additional Accountant posts in the pay scale of Rs 8,000-14,800 if filled on deputation or a consolidated pay of Rs 12,000 if filled on contract basis to strengthen the Expert Management Cell subject to the condition that these posts shall be co-terminus with the project and the posts cited below abolished with immediate effect:

Sl. No.	Name of the Post	No. of Posts
1	Stenographer	2
2	System Analyst /Data Entry Operator	2
3	Group-D	2

This proposal is approved by the Empowered Committee for the World Bank Assisted Karnataka Municipal Reforms Project (KMRP), KUIDFC vide proceedings dated:5.12.2008.

The expenditure for newly created posts shall be met under KMR Project fund.

By order and in the name of the Governor of Karnataka

P.R. 577

C.R. RAVINDRA

Under Secretary to Government, Urban Development, Department

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ: ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ ಮತ್ತು ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿ ಇವುಗಳ ಆಡಳಿತ ಮಂಡಳಿ ಮತ್ತು ಆರ್ಥಿಕ ಸಮಿತಿಗಳನ್ನು ಪುನರ್ ರಚಿಸುವ ಬಗ್ಗೆ.

ಪ್ರಸ್ತಾವನೆ:

ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ ಮತ್ತು ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿ ಇವುಗಳ ಆಡಳಿತ ಮಂಡಳಿ ಮತ್ತು ಆರ್ಥಿಕ ಸಮಿತಿಗಳನ್ನು ಪುನರ್ ರಚಿಸಲು ಸರ್ಕಾರವು ತೀರ್ಮಾನಿಸಿ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ :ಆಕುಕ 138 ಕೆವಿಎಂ 2008, ಬೆಂಗಳೂರು, ದಿನಾಂಕ:31ನೇ ಜನವರಿ 2009

ಆಡಳಿ ಮಂಡಳಿ:

1	ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.	ಅಧ್ಯಕ್ಷರು
2	ಸರ್ಕಾರದ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ), ವಿಧಾನ ಸೌಧ, ಬೆಂಗಳೂರು	ಉಪಾಧ್ಯಕ್ಷರು

3	ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ ಬೆಂಗಳೂರು,	ಸದಸ್ಯರು
4	ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು,	ಸದಸ್ಯರು
5	ಕುಲಪತಿಗಳು, ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ, ಬೆಂಗಳೂರು	ಸದಸ್ಯರು
6	ಸರ್ಕಾರದ ಅಪರ ಕಾರ್ಯದರ್ಶಿ/ಜಂಟಿ ಕಾರ್ಯದರ್ಶೀ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ)_ ವಿಕಾಸ ಸೌಧ, ಬೆಂಗಳೂರು	ಸದಸ್ಯರು
7	ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಆನಂದರಾವ್ ವೃತ್ತ, ಬೆಂಗಳೂರು,	ಸದಸ್ಯರು
8	ಒಬ್ಬರು ಅಥವಾ ಇಬ್ಬರು ನುರಿತ ತಜ್ಞರು, ವೈದ್ಯಕೀಯ ಶಿಕ್ಷಣ ವಲಯದಿಂದ	ಸದಸ್ಯರು
9	ನಿರ್ದೇಶಕರು, ಸಂಬಂಧಪಟ್ಟ ಸಂಸ್ಥೆ	ಸದಸ್ಯರು ಕಾರ್ಯದರ್ಶಿ

2. ಆರ್ಥಿಕ ಸಮಿತಿ::

1	ಸರ್ಕಾರದ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ), ವಿಧಾನ ಸೌಧ, ಬೆಂಗಳೂರು	ಅಧ್ಯಕ್ಷರು
2	ಸರ್ಕಾರದ ಅಪರ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ)_ ಬೆಂಗಳೂರು	ಸದಸ್ಯರು
3	ಸರ್ಕಾರದ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ಇಲ್ಲದ ಆರ್ಥಿಕ ಇಲಾಖೆಯ ಪ್ರತಿನಿಧಿ, ವಿಧಾನಸೌಧ, ಬೆಂಗಳೂರು	ಸದಸ್ಯರು
4	ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು, ಅಥವಾ ಅವರ ಪ್ರತಿನಿಧಿ ಜಂಟಿ ನಿರ್ದೇಶಕರಿಗಿಂತ ಕಡಿಮೆ ಇಲ್ಲದ ಅಧಿಕಾರಿ	ಸದಸ್ಯರು
5	ಆರ್ಥಿಕ ಸಲಹೆಗಾರರು ಮತ್ತು ಮುಖ್ಯ ಲೆಕ್ಕಾಧಿಕಾರಿ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು	ಸದಸ್ಯರು
6	ಪ್ರಾಂಶುಪಾಲರು, ಸಂಬಂಧಪಟ್ಟ ಸಂಸ್ಥೆ	ಸದಸ್ಯರು
7	ನಿರ್ದೇಶಕರು, ಸಂಬಂಧಪಟ್ಟ ಸಂಸ್ಥೆ	ಸದಸ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 583

ವಿ. ಶ್ರೀರಾಮರೆಡ್ಡಿ

ಸರ್ಕಾರದ ಅಧೀನ ಕಾರ್ಯದರ್ಶಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ(ವೈದ್ಯಕೀಯ ಶಿಕ್ಷಣ),

ವಿಷಯ: ಕರ್ನಾಟಕ ರಾಜ್ಯದಲ್ಲಿ ಸ್ಥಾಪಿತವಾಗಿರುವ ಆರು ಹೊಸ ವೈದ್ಯಕೀಯ ಕಾಲೇಜುಗಳ ಆಡಳಿತ ಮಂಡಳಿ ಮತ್ತು ಆರ್ಥಿಕ ಸಮಿತಿಗಳನ್ನು ಪುನರ್ ರಚಿಸುವ ಬಗ್ಗೆ.

ಪ್ರಸ್ತಾವನೆ:

ಕರ್ನಾಟಕ ರಾಜ್ಯದಲ್ಲಿ ಸ್ಥಾಪಿತವಾಗಿರುವ ಆರು ಹೊಸ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಸನ, ಮಂಡ್ಯ, ಬೆಳಗಾಂ, ಶಿವಮೊಗ್ಗ, ರಾಯಚೂರು, ಮತ್ತು ಬೀದರ್ ಇವುಗಳ ಆಡಳಿತ ಮಂಡಳಿ ಮತ್ತು ಆರ್ಥಿಕ ಸಮಿತಿಗಳನ್ನು ಪುನರ್ ರಚಿಸಲು ತೀರ್ಮಾನಿಸಿ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ :ಆಕುಕ 467 ಎಂಎಂಇ 2008, ಬೆಂಗಳೂರು, ದಿನಾಂಕ:

ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ, ಮಂಡ್ಯ, ಬೆಳಗಾಂ, ಶಿವಮೊಗ್ಗ, ರಾಯಚೂರು, ಮತ್ತು ಬೀದರ್ ಇವುಗಳ ಆಡಳಿತ ಮಂಡಳಿ ಮತ್ತು ಆರ್ಥಿಕ ಸಮಿತಿಗಳನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಈ ಕೆಳಕಂಡಂತೆ ಪುನರ್ ರಚಿಸಲಾಗಿದೆ.

1. ಆಡಳಿತ ಮಂಡಳಿ:

1	ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು,	ಅಧ್ಯಕ್ಷರು

2	ಸರ್ಕಾರದ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ), ವಿಧಾನ ಸೌಧ, ಬೆಂಗಳೂರು,	ಉಪಾಧ್ಯಕ್ಷರು
3	ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಆರ್ಥಿಕ ಇಲಾಖೆ, ಅಥವಾ ಅವರ ಪ್ರತಿನಿಧಿಯಾಗಿ ಸರ್ಕಾರದ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ಇಲ್ಲದ ಅಧಿಕಾರಿ, ವಿಧಾನ ಸೌಧ ಬೆಂಗಳೂರು,	ಸದಸ್ಯರು
4	ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ ಬೆಂಗಳೂರು,	ಸದಸ್ಯರು
5	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ ಅಥವಾ ಅವರ ಪ್ರತಿನಿಧಿಯಾಗಿ ಸರ್ಕಾರದ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ಇಲ್ಲದ ಅಧಿಕಾರಿ, ಬಹುಮಪಡಿ ಕಟ್ಟಡ, ಬೆಂಗಳೂರು	ಸದಸ್ಯರು
6	ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು ಅಥವಾ ಅವರ ಪ್ರತಿನಿಧಿಯಾಗಿ ಅಪರ ನಿರ್ದೇಶಕರ ದರ್ಜೆಗಿಂತ ಕಡಿಮೆ ಇಲ್ಲದ ಅಧಿಕಾರಿ, ಆನಂದರಾವ್ ವೃತ್ತ, ಬೆಂಗಳೂರು	ಸದಸ್ಯರು
7	ಕುಲಪತಿಗಳು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ ಹಂತ, ಜಯನಗರ, ಬೆಂಗಳೂರು	ಸದಸ್ಯರು
8	ಸರ್ಕಾರದ ಅಪರ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ) ಬೆಂಗಳೂರು,	ಸದಸ್ಯರು
9	ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ನಿರ್ದೇಶನಾಲಯ ಆನಂದರಾವ್ ವೃತ್ತ, ಬೆಂಗಳೂರು,	ಸದಸ್ಯರು
10	ಮುಖ್ಯ ಅಭಿಯಂತರರು, ಸಿ & ಬಿ, ಅಥವಾ ಅವರ ಪ್ರತಿನಿಧಿಯಾಗಿ ಅಧೀಕ್ಷಕ ಅಭಿಯಂತರ ದರ್ಜೆಗಿಂತ ಕಡಿಮೆ ಇಲ್ಲದ ಅಧಿಕಾರಿ, ಸಂಬಧಂಪಟ್ಟ ಸಂಸ್ಥೆಯ ವ್ಯಾಪ್ತಿಯಲ್ಲಿ	ಸದಸ್ಯರು
11	ಜಿಲ್ಲಾಧಿಕಾರಿ, ಸಂಬಂಧಪಟ್ಟ ಜಿಲ್ಲೆ	ಸದಸ್ಯರು
12	ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಸಂಬಂಧಪಟ್ಟ ಜಿಲ್ಲೆ	ಸದಸ್ಯರು
13	ವೈದ್ಯಕೀಯ ಅಧೀಕ್ಷಕರು, ಸಂಬಂಧಪಟ್ಟ ಆಸ್ಪತ್ರೆ,	ಸದಸ್ಯರು
14	ಮುಖ್ಯ ಆಡಳಿತಾಧಿಕಾರಿ, ಸಂಬಂಧಪಟ್ಟ ಸಂಸ್ಥೆ	ಸದಸ್ಯರು
15	ಆರ್ಥಿಕ ಸಲಹೆಗಾರ, ಸಂಬಂಧಪಟ್ಟ ಸಂಸ್ಥೆ	ಸದಸ್ಯರು
16	ಇಬ್ಬರು ತಜ್ಞರು, ವೈದ್ಯಕೀಯ ಶಿಕ್ಷಣ ವಲಯದಿಂದ	ಸದಸ್ಯರು
17	ನಿರ್ದೇಶಕರು, ಸಂಬಂಧಪಟ್ಟ ಸಂಸ್ಥೆ	ಸದಸ್ಯ ಕಾರ್ಯದರ್ಶಿ

2. ಆರ್ಥಿಕ ಸಮಿತಿ:

1	ಸರ್ಕಾರದ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ), ವಿಧಾನ ಸೌಧ, ಬೆಂಗಳೂರು,	ಅಧ್ಯಕ್ಷರು
2	ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ ಅಥವಾ ಅವರ ಪ್ರತಿನಿಧಿಯಾಗಿ ಸರ್ಕಾರದ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ಇಲ್ಲದ ಅಧಿಕಾರಿ ವಿಧಾನ ಸೌಧ	ಸದಸ್ಯರು
3	ಸರ್ಕಾರದ ಕಾರ್ಯದರ್ಶಿ, ಯೋಜನಾ ಇಲಾಖೆ ಅಥವಾ ಅವರ ಪ್ರತಿನಿಧಿಯಾಗಿ ಸರ್ಕಾರದ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ಇಲ್ಲದ ಅಧಿಕಾರಿ, ಬಹುಮಹಡಿ ಕಟ್ಟಡ, ಬೆಂಗಳೂರು	ಸದಸ್ಯರು
4	ಸರ್ಕಾರದ ಅಪರ ಕಾರ್ಯದರ್ಶಿ/ಜಂಟಿ ಕಾರ್ಯದರ್ಶೀ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ), ವಿಕಾಸ ಸೌಧ, ಬೆಂಗಳೂರು,	ಸದಸ್ಯರು
5	ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ ಬೆಂಗಳೂರು ಅಥವಾ ಅವರ ಪ್ರತಿನಿಧಿಯಾಗಿ ಸಹ ನಿರ್ದೇಶಕರ ದರ್ಜೆಗಿಂತ ಕಡಿಮೆ ಇಲ್ಲದ ಅಧಿಕಾರಿ	ಸದಸ್ಯರು

6	ನಿರ್ದೇಶಕರು ಸಂಬಂಧಪಟ್ಟ ಸಂಸ್ಥೆ	ಸದಸ್ಯರು
7	ಮುಖ್ಯ ಆಡಳಿತಾಧಿಕಾರಿ, ಸಂಬಂಧಪಟ್ಟ ಸಂಸ್ಥೆ	ಸದಸ್ಯರು
8	ಪ್ರಾಂಶುಪಾಲರು, ಸಂಬಂಧಪಟ್ಟ ಸಂಸ್ಥೆ	ಸದಸ್ಯರು
9	ಆರ್ಥಿಕ ಸಲಹೆಗಾರರು, ಸಂಬಂಧಪಟ್ಟ ಸಂಸ್ಥೆ	ಸದಸ್ಯ ಸದಸ್ಯರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 584

ವಿ. ಶ್ರೀರಾಮರೆಡ್ಡಿ

ಸರ್ಕಾರದ ಅಧೀನ ಕಾರ್ಯದರ್ಶಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ),

ವಿಷಯ: ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಹಾಗೂ ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವುಗಳ ಆಡಡಳಿತ ಮಂಡಳಿ ಮತ್ತು ಆರ್ಥಿಕ ಸಮಿತಿಗಳನ್ನು ಪುನರ್ ರಚಿಸುವ ಬಗ್ಗೆ

ಪ್ರಸ್ತಾವನೆ:

ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಹಾಗೂ ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವುಗಳ ಆಡಳಿತ ಮಂಡಳಿ ಮತ್ತು ಆರ್ಥಿಕ ಸಮಿತಿಗಳನ್ನು ಪುನರ್ ರಚಿಸಲು ಸರ್ಕಾರವು ತೀರ್ಮಾನಿಸಿ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ :ಆಕುಕ 466 ಎಂಎಂಇ 2008, ಬೆಂಗಳೂರು, ದಿನಾಂಕ:31ನೇ ಜನವರಿ 2009

ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಹಾಗೂ ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವುಗಳ ಆಡಳಿತ ಮಂಡಳಿ ಮತ್ತು ಆರ್ಥಿಕ ಸಮಿತಿಗಳನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಈ ಕೆಳಕಂಡಂತೆ ಪುನರ್ ರಚಿಸಲಾಗಿದೆ.

1. ಆಡಳಿತ ಮಂಡಳಿ:

1	ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ ಬೆಂಗಳೂರು,	ಅಧ್ಯಕ್ಷರು
2	ಸರ್ಕಾರದ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ), ವಿಧಾನ ಸೌಧ, ಬೆಂಗಳೂರು,	ಉಪಾಧ್ಯಕ್ಷರು
3	ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ ಬೆಂಗಳೂರು	ಸದಸ್ಯರು
4	ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ ಬೆಂಗಳೂರು,	ಸದಸ್ಯರು
5	ಕುಲಪತಿಗಳು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಅಥವಾ ಇವರಿಂದ ನಾಮನಿರ್ದೇಶಿತರು	ಸದಸ್ಯರು
6	ಸರ್ಕಾರದ ಅಪರ ಕಾರ್ಯದರ್ಶಿ/ಜಂಟಿ ಕಾರ್ಯದರ್ಶೀ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ)_ ವಿಕಾಸ ಸೌಧ, ಬೆಂಗಳೂರು	ಸದಸ್ಯರು
7	ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಇಲಾಖೆ ಆನಂದರಾವ್ ವೃತ್ತ, ಬೆಂಗಳೂರು,	ಸದಸ್ಯರು
8	ಡೀನ್-ಕಂ-ಡೈರಕ್ಟರ್, ಸಂಬಂಧಪಟ್ಟ ಸಂಸ್ಥೆ	ಸದಸ್ಯ ಕಾರ್ಯದರ್ಶಿ

2. ಆರ್ಥಿಕ ಸಮಿತಿ:

1	ಸರ್ಕಾರದ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ), ವಿಧಾನ ಸೌಧ, ಬೆಂಗಳೂರು	ಅಧ್ಯಕ್ಷರು

2	ಸರ್ಕಾರದ ಕಾರ್ಯದರ್ಶಿ ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು	ಸದಸ್ಯರು
3	ಸರ್ಕಾರದ ಕಾರ್ಯದರ್ಶಿ ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು	ಸದಸ್ಯರು
4	ಸರ್ಕಾರದ ಅಪರ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ), ಬೆಂಗಳೂರು	ಸದಸ್ಯರು
5	ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು,	ಸದಸ್ಯರು
6	ಡೀನ್ –ಕಂ–ಡೈರೆಕ್ಟರ್, ಸಂಬಂಧಪಟ್ಟ ಸಂಸ್ಥೆ	ಸದಸ್ಯರು
7	ಮುಖ್ಯ ಆಡಳಿತಾಧಿಕಾರಿ, ಸಂಬಂಧಪಟ್ಟ ಸಂಸ್ಥೆ	ಸದಸ್ಯರು
8	ಮುಖ್ಯ ಆರ್ಥಿಕಾಧಿಕಾರಿ/ಲೆಕ್ಕಾಧಿಕಾರಿ	ಸದಸ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 585

ವಿ. ಶ್ರೀರಾಮರೆಡ್ಡಿ

ಸರ್ಕಾರದ ಅಧೀನ ಕಾರ್ಯದರ್ಶಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ).

ಶಿಕ್ಷಣ ಸಚಿವಾಲಯ

ವಿಷಯ: ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯನ್ನು ಪುನರ್ ರಚಿಸುವ ಬಗ್ಗೆ.

ಓದಲಾಗಿದೆ : 1 ಸರ್ಕಾರದ ದಿನಾಂಕ:1.9.2006ರ ಆದೇಶ ಸಂಖ್ಯೆ:ಇಡಿ 57 ಎಲ್ ಐಬಿ 2006.

2 ಸರ್ಕಾರದ ದಿನಾಂಕ:7.2.2005ರ ಆದೇಶ ಸಂಖ್ಯೆ:ಇಡಿ 1 ಎಲ್ ಬಿಪಿ 2004

3 ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಇವರ ಏಕಕಡತ ಸಂಖ್ಯೆ:ಲೋ.ಶಿ.ಗ್ರಂ.ಸ.ಉ/41/2008-09.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ:1.9.2006ರ ಸರ್ಕಾರಿ ಆದೇಶದನ್ವಯ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಸಂಬಂಧಿಸಿದಂತೆ ಪುಸ್ತಕಗಳನ್ನು ಆಯ್ಕೆ ಮಾಡಲು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯನ್ನು ಪುನರ್ ರಚಿಸಲಾಗಿತ್ತು. ಆ ಆದೇಶದನ್ವಯ, ಸದರಿ ಸಮಿತಿಯ ಕಾಲಾವಧಿಯು ಅಸ್ತಿತ್ವಕ್ಕೆ ಬರುವವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಇತ್ತು. ಮೇಲೆ (2)ರಲ್ಲಿ ಓದಲಾದ ದಿನಾಂಕ:7.2.2005ರ ಸರ್ಕಾರದ ಆದೇಶದನ್ವಯ, ಇತರೆ ಅಂಶಗಳ ಜೊತೆಗೆ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯು ಪಾಲಿಸಬೇಕಾದ ಕಾರ್ಯವಿಧಾನ, ಅದರ ಸ್ವರೂಪ ಮತ್ತು ಕಾರ್ಯ ವ್ಯಾಪ್ತಿಯನ್ನು ನಿಗಧಿಪಡಿಸಲಾಗಿದೆ. ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಇವರು ಮೇಲೆ (3)ರಲ್ಲಿ ಓದಲಾದ ಏಕಕಡತದನ್ವಯ, ಸದರಿ ಸಮಿತಿಯನ್ನು ಪುನರ್ ರಚಿಸುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ನಿರ್ದೇಶಕರ ಪ್ರಸ್ತಾವನೆಯನ್ನು ಸರ್ಕಾರವು ಕುಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಇಡಿ 308 ಎಲ್ ಐಬಿ 2008, ಬೆಂಗಳೂರು, ದಿನಾಂಕ:3ನೇ ಫೆಬ್ರವರಿ 2009

2. ಮೇಲೆ (2)ರಲ್ಲಿ ಓದಲಾದ ದಿನಾಂಕ:7.2.2005ರ ಸರ್ಕಾರಿ ಆದೇಶದ ಅನುಬಂಧ-2ರನ್ವಯ ನಿಗಧಿಪಡಿಸಿದ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಸಂಬಂಧಿಸಿದ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯ ಸ್ವರೂಪದ ಪ್ರಕಾರ ಅದನ್ನು ಈ ಕೆಳಕಂಡತೆ ಪುನರ್ ರಚಿಸಲು ಸರ್ಕಾರದ ಈ ಮೂಲಕ ಆದೇಶಿಸಿದೆ.

1	ಡಾ॥ ಗುರುಲಿಂಗ ಕಾಪಸೆ, ದುರ್ಗಾದೇವಿ ಕಾಲೋನಿ, ಸಪ್ತಾಪುರ, ಧಾರವಾಡ	ಅಧ್ಯಕ್ಷರು
2	ಪ್ರೋ॥ ಕೆ.ಇ. ರಾಧಕೃಷ್ಣ, ನಂ 06, ಆರ್ ಇಹೆಚ್ ಎಸ್, ಜೆ.ಸಿ. ನಗರ, ಮಹಾಲಕ್ಷ್ಮೀಪುರ ಬೆಂಗಳೂರು.-86	ಸದಸ್ಯರು
3	ಶ್ರೀ ಜಾಣಗೆರೆ ವೆಂಕಟರಾಮಯ್ಯ (ಜಾವೆಂ), ನಂ.3 2ನೇ ಮುಖ್ಯರಸ್ತೆ ಪಶ್ಚಿಮ ಕಾರ್ಡ್ ರಸ್ತೆ, ಶಿವನಗರ, ರಾಜಾಜಿನಗರ, ಬೆಂಗಳೂರು-10	ಸದಸ್ಯರು
4	ಶ್ರೀ ಮಾನಸ, ನಿಕಟಪೂರ್ವ ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, "ಕಾವ್ಯಲೋಕ" 1267, ಹೆಚ್.ಐ.ಜಿ., 1ನೇ ಅಡ್ಡ ರಸ್ತೆ, 2ನೇ ಹಂತ,	ಸದಸ್ಯರು

	ಶ್ರೀರಾಂಪುರ ಬಡಾವಣೆ, ಮೈಸೂರು–23	
5	ಪ್ರೊ॥ ಚಂದ್ರಶೇಕರ ವಸ್ತ್ರದ, "ಬೆಳಗು" ಆನಂದಾಶ್ರಮ ರಸ್ತೆ, ಮಸಾರಿ, ಗದಗ–582101.	ಸದಸ್ಯರು
6	ಡಾ॥ ಹೆಚ್. ಚಂದ್ರಶೇಖರ, ಸಾಹಿತಿಗಳು, ಸಂಶೋಧಕರು, ಎಂಐಜಿ–77, ಕೆಹೆಚ್‌ಬಿ ಕಾಲೋನಿ, ಬಸವೇಶ್ವರನಗರ, 2ನೇ ಹಂತ, 6ನೇ ಮುಖ್ಯ ರಸ್ತೆ,ಬೆಂಗಳೂರು	ಸದಸ್ಯರು
7	ಶ್ರೀಮತಿ ವೇದ, ಕನ್ನಡ ಪ್ರಾಧ್ಯಾಪಕರು, ಮಹಾರಾಣಿ ಕಾಲೇಜು, ಮೈಸೂರು	ಮಹಿಳಾ ಸದಸ್ಯರು
8	ಡಾ॥ ಸರೋಜಿನ ಚವಲಾರ, ನಂ.ಸಿ–10, ಅರ್ಪಣ ಅಪಾರ್ಟ್‌ಮೆಂಟ್ಸ್, ದೇಶಪಾಂಡೆ, ನಗರ, ಹುಬ್ಬಳ್ಳಿ–580029.	ಸದಸ್ಯರು
9	ಡಾ॥ ಕೆ. ಚಿದಾನಂದಗೌಡ, ನಂ. 3004, ಉದಯರವಿ, ಕುವೆಂಪು ಹೌಸ್ 5ನೇ ಮುಖ್ಯ ರಸ್ತೆ 12ನೇ ಅಡ್ಡರಸ್ತೆ, ವಿ.ವಿ. ಪುರಂ. ಮೈಸೂರು–570002	ಸದಸ್ಯರು
10	ಡಾ॥ ಹೆಚ್.ಎಂ. ರಾಜಶೇಖರ್ ನಂ. 630/ಹೆಚ್ ಅನಿಕೇತನ ರಸ್ತೆ,6ನೇ ಅಡ್ಡರಸ್ತೆ (ಉತ್ತರ), ಕುವೆಂಪುನಗರ, ಮೈಸೂರು–23	ಸದಸ್ಯರು
11	ಶ್ರೀ ಹರಿಕೃಷ್ಣಪುನರೂರು, "ಶುಭವಾಗಲಿ" ಪುನರೂರು, ಮುಲ್ಕಿ ವಯಾ ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ	ಸದಸ್ಯರು
12	ಡಾ॥ ಟಿ.ವೈ. ಮಲ್ಲಯ್ಯ ಉಪ ಗ್ರಂಥಪಾಲಕರು, ಗ್ರಂಥಾಲಯ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳ ಗಂಗೋತ್ರಿ ಮಂಗಳೂರು	ಸದಸ್ಯರು
13	ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ ಅಥವಾ ಅವರಿಂದ ನಾಮ ನಿರ್ದೇಶನಗೊಂಡ ಪ್ರಾಧಿಕಾರದ ಒಬ್ಬ ಸದಸ್ಯರು	ಸದಸ್ಯರು
14	ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ ಸರಸ್ವತಿ ಗೋದಾಮು, ಗುಲ್ಬರ್ಗಾ–585101	ಸದಸ್ಯರು
15	ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್, ಅಥವಾ ಅವರಿಂದ ನಾಮನಿರ್ದೇಶಗೊಂಡ ಒಬ್ಬ ಸದಸ್ಯರು	ಸದಸ್ಯರು
16	ನಿರ್ದೇಶಕರು, ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ	ಸದಸ್ಯರು
17	ಅಧ್ಯಕ್ಷರು, ಕನ್ನಡ ವಿಜ್ಞಾನ ಪರಿಷತ್, ಬೆಂಗಳೂರು ಅಥವಾ ಅವರಿಂದ ನಾಮನಿರ್ದೇಶನಗೊಂಡ ಒಬ್ಬ ಸದಸ್ಯರು	ಸದಸ್ಯರು
18	ಡಾ॥ ಪಿ.ಜಿ. ತಳವಾರ್ ಗ್ರಂಥಾಲಯ ವಿಜ್ಞಾನ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಹಾಗೂ ಸದಸ್ಯರು ರಾಜ್ಯ ಗ್ರಂಥಾಲಯ ಪ್ರಾಧಿಕಾರ	ಸದಸ್ಯರು
19	ಅಧ್ಯಕ್ಷರು, ಬೆಂಗಳೂರು ಪುಸ್ತಕ ಮಾರಾಟಗಾರರ ಹಾಗೂ ಪ್ರಕಾಶಕರ ಸಂಘ, 147, ಪೊಲೀಸ್ ಆಯುಕ್ತರ ಕಛೇರಿ ಎದುರು, ಇನ್ ಫಾಂಟ್ರಿರಸ್ತೆ, ಬೆಂಗಳೂರು,	ಸದಸ್ಯರು
20	ನಿರ್ದೇಶಕರು., ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು	ಸದಸ್ಯ ಕಾರ್ಯದರ್ಶಿ

3 ಕನ್ನಡ ಮತ್ತು ಆಂಗ್ಲಭಾಷೆ ಪುಸ್ತಕಗಳನ್ನು ಹೊರತುಪಡಿಸಿ ಇತರೆ ಭಾರತೀಯ ಭಾಷೆಯ ಪುಸ್ತಕಗಳನ್ನು ಆಯ್ಕೆಮಾಡಲು ಆಯಾಯಾ ಭಾಷೆಯ ಭಾಷಾ/ವಿಷಯ ಪರಿಣಿತರನ್ನು ಕೋ–ಆಪ್ಟ್ ಮಾಡಿಕೊಳ್ಳಬಹುದು.

4 ಈ ಆದೇಶ ಹೊರಡಿಸಿದ ದಿನಾಂಕದಿಂದ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಸಮಿತಿ ಅಸ್ತಿತ್ವಕ್ಕೆ ಬರುವವರೆಗೆ ಇವರಡರಲ್ಲಿ ಯಾವುದು ನಂತರವೋ ಅಲ್ಲಿಯವರೆಗೆ ಈ ಸಮಿತಿಯು ಅಸ್ತಿತ್ವದಲ್ಲಿರುತ್ತದೆ.

5 ಈ ಸಮಿತಿಯ ಕಾರ್ಯವ್ಯಾಪ್ತಿ ಮೇಲೆ (2)ರಲ್ಲಿ ಓದಲಾದ ದಿನಾಂಕ:7.2.2005ರ ಸರ್ಕಾರಿ ಆದೇಶದ ಅನುಬಂಧ–2ರನ್ವಯ ನಿಗದಿಪಡಿಸಿರುವಂತೆ ಇರುತ್ತದೆ. ಸದರಿ ಆದೇಶದ ಅನುಬಂಧ 1ರ ಪ್ರಕಾರ, ನಿಗಧಿಪಡಿಸಿದ ಪುಸ್ತಕ ಆಯ್ಕೆಯ ಕಾರ್ಯವಿಧಾನವನ್ನು ಈ ಸಮಿತಿಯು ಅನುಸರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 588

ಎಂ.ಎಸ್ ಸೋಮಶೇಖರ್

ಸರ್ಕಾರದ ಅಧೀನ ಕಾರ್ಯದರ್ಶಿ

ಶಿಕ್ಷಣ ಇಲಾಖೆ

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ: ಶ್ರೀ ಎಂ. ಬಸವರಾಜು, ನೋಟರಿ, ಮಳವಳ್ಳಿ ಇವರನ್ನು ಸಿ.ಸಿ. ಸಂಖ್ಯೆ 504/08 ಸಂಬಂಧಿಸಿದಂತೆ ನ್ಯಾಯಾಲಯದ ಆದೇಶ ಸ್ವೀಕೃತವಾಗುವವರೆಗೆ ಅಮಾನತ್ತಿನಲ್ಲಿ ಇಡುವ ಬಗ್ಗೆ.

ಓದಲಾಗಿದೆ : 1 ಉಚ್ಚ ನ್ಯಾಯಾಲಯದ ಡೆಪ್ಯೂಟಿ ರಿಜಿಸ್ಟ್ರಾರ್ ಇವರ ಪತ್ರ ಸಂಖ್ಯೆ ಎಲ್‌ಸಿವಿ ಐ.ಮಿಸ್ 2008. ದಿನಾಂಕ:21.6.2008

2 ಸರ್ಕಾರಿ ಪತ್ರ ಸಂಖ್ಯೆ ಲಾ 82 ಎಲ್ ಸಿಎಲ್ 08, ದಿನಾಂಕ:30–7–2008

3 ಶ್ರೀ ಎಂ. ಬಸವರಾಜು, ನೋಟರಿ, ಮಳವಳ್ಳಿ ಇವರ ದಿನಾಂಕ:8.7.2008ರ ಲಿಖಿತ ಹೇಳಿಕೆ

4 ಸರ್ಕಾರಿ ಪತ್ರ ಸಂಖ್ಯೆ ಲಾ 82 ಎಲ್‌ಸಿಎಲ್ 08. ದಿನಾಂಕ:30.9.2008

5 ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮಂಡ್ಯ ಇವರ ಪತ್ರ ಸಂಖ್ಯೆ:2805/2008, ದಿನಾಂಕ:20.11.2008.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ:21.6.2008ರ ಪತ್ರದಲ್ಲಿ ಡೆಪ್ಯೂಟಿ ರಿಜಿಸ್ಟ್ರಾರ್ ಕರ್ನಾಟಕ ಉಚ್ಚ ನ್ಯಾಯಾಲಯ ಇವರು ಶ್ರೀ ಎಂ. ಬಸವರಾಜು, ನೋಟರಿ, ಮಳವಳ್ಳಿ ಇವರ ವಿರುದ್ಧ ಶ್ರೀ ಕೆ. ಭೀಮರಾಜು, ನಿವೃತ್ತ ಶಿಕ್ಷಕರವರಿಂದ ದಿನಾಂಕ:6.6.2008ರಂದು ಸ್ವೀಕೃತವಾದ ದೂರು ಅರ್ಜಿ ಹಾಗೂ ಅಡಕಗಳನ್ನು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ. ಸದರಿ ಪತ್ರ ಮತ್ತು ಅಡಕಗಳನ್ನು ಪರಿಶೀಲಿಸಿದಾಗ, ಶ್ರೀ ಭೀಮರಾಜು, ಬಿನ್ ಕೃಷ್ಣಮೂರ್ತಿ ಮಳವಳ್ಳಿ ಇವರು ಮಂಡ್ಯ ಜಿಲ್ಲೆಯ ಮಳವಳ್ಳಿ ಪೋಲೀಸ್ ಠಾಣೆಯಲ್ಲಿ ನೋಟರಿಯವರ ವಿರುದ್ಧ ಅವರ ದೌರ್ಜನ್ಯದ ಬಗ್ಗೆ ದೂರು ದಾಖಲಿಸಿದ್ದು, ಮಳವಳ್ಳಿ ಪಟ್ಟಣದ ಪೋಲೀಸರು, ಶ್ರೀ ಎಂ. ಬಸವರಾಜು, ನೋಟರಿ ಮಳವಳ್ಳಿ ಇವರ ಮೇಲೆ ಐ.ಪಿ.ಸಿ ಸೆಕ್ಷನ್ 448,.457,427,504 506(ಬಿ)ಅಡಿಗಳಲ್ಲಿ ಮಳವಳ್ಳಿಯ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಿರುತ್ತಾರೆ. ಈ ಮೊಕದ್ದಮೆ ಪರಿಚ್ಛೇದ ಸಿ.ಸಿ. 504/2008 ಆಗಿರುತ್ತದೆ.

ಮೇಲೆ (2)ರಲ್ಲಿ ಓದಲಾದ ದಿನಾಂಕ:30–7–2008ರ ಸರ್ಕಾರಿ ಪತ್ರದಲ್ಲಿ ಶ್ರೀ ಎಂ. ಬಸವರಾಜು ನೋಟರಿ, ಮಳವಳ್ಳಿ ಇವರನ್ನು ಸದರಿ ದೂರಿನ ಬಗ್ಗೆ ಅವರ ಲಿಖಿತ ಉತ್ತರವನ್ನು ಸಲ್ಲಿಸುವಂತೆ ಕೋರಲಾಗಿತ್ತು.

ಮೇಲೆ (3)ರಲ್ಲಿ ಓದಲಾದ ದಿನಾಂಕ:18.8.2008ರ ಪತ್ರದಲ್ಲಿ ಶ್ರೀ ಎಂ. ಬಸವರಾಜು, ನೋಟರಿ, ಮಳವಳ್ಳಿ ಇವರು ಅವರ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

ಮೇಲೆ (4)ರಲ್ಲಿ ಓದಲಾದ ದಿನಾಂಕ:30–9–2008ರ ಸರ್ಕಾರಿ ಪತ್ರದಲ್ಲಿ ಶ್ರೀ ಎಂ. ಬಸವರಾಜು, ನೋಟರಿ, ಮಳವಳ್ಳಿ ಇವರು ಸಲ್ಲಿಸಿದ್ದ ಲಿಖಿತ ಹೇಳಿಕೆಯನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮಂಡ್ಯ ಇವರಿಗೆ ಸಲ್ಲಿಸಿ ಅವರ ಅಭಿಪ್ರಾಯವನ್ನು ಕೋರಲಾಗಿತ್ತು.

ಮೇಲೆ (5)ರಲ್ಲಿ ಓದಲಾದ ದಿನಾಂಕ:20–11–2008ರ ಪತ್ರ ದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮಂಡ್ಯ ಇವರು ಶ್ರೀ ಎಂ. ಬಸವರಾಜುರವರ ವಿರುದ್ಧ ಫಿರ್ಯಾಧಿ ಶ್ರೀ ಭೀಮರಾಜುರವರು ಮಾಡಿರುವ ಆಪಾದನೆಗಳು ಮೇಲ್ನೋಟಕ್ಕೆ ಸತ್ಯಾಂಶದಿಂದ ಕೂಡಿರುವುದಾಗಿ ಕಂಡು ಬರುತ್ತಿದ್ದು, ನೋಟರಿಯ ವಿರುದ್ಧ ಸಿ.ಸಿ.ನಂ. 504/08 ಕ್ರಿಮಿನಲ್ ಮೊಕದ್ದಮೆ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ. ಮಳವಳ್ಳಿಯಲ್ಲಿ ದಾಖಲಾಗಿದ್ದು, ಆರೋಪ ಗುರುತರವಾಗಿರುವುದರಿಂದ ಮೊಕದ್ದಮೆಯ ಅಂತಿಮ ತೀರ್ಮಾನದ ತನಕ ಸದರಿಯವರನ್ನು ನೋಟರಿ ಹುದ್ದೆಯಿಂದ ಬಿಡುಗಡೆ ಮಾಡುವುದು ಸೂಕ್ತ ಮತ್ತು ಅವಶ್ಯಕವೆಂಬುದಾಗಿ ಅಭಿಪ್ರಾಯವನ್ನು ಸಲ್ಲಿಸಿರುತ್ತಾರೆ.

ಸದರಿ ವಿಷಯವನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ:ಲಾ 82 ಎಲ್‌ಸಿಎಲ್ 2008, ಬೆಂಗಳೂರು, ದಿನಾಂಕ:6ನೇ ಫೆಬ್ರವರಿ 2009

ಈ ಮೇಲೆ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಶ್ರೀ ಎಂ. ಬಸವರಾಜು, ನೋಟರಿ, ಮಳವಳ್ಳಿ ಇವರನ್ನು ಮಳವಳ್ಳಿ,

ಜೆ.ಎಂ.ಎಫ್.ಸಿ ರವರ ನ್ಯಾಯಾಲಯದ ಮುಂದೆ ಇರುವ ಪ್ರಕರಣ ಸಂಖ್ಯೆ:ಸಿ.ಸಿ. 504/08 ತೀರ್ಮಾನ ಆಗುವವರೆಗೆ ನೋಟರಿ ಕರ್ತವ್ಯ ನಿರ್ವಹಿಸದಂತೆ ಸೂಚಿಸಿ, ನೋಟರಿ ನಿಯಮಗಳು 1956ರ ನಿಯಮ 13(12)(ಬಿ)(ii)ರಂತೆ ಈ ಕೂಡಲೇ ಜಾರಿಗೆ ಬರುವಂತೆ ಅಮಾನತ್ತಿನಲ್ಲಿ ಇಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಆರ್. ಶಕುಂತಲ

ಪಿ.ಆರ್. 589

ಸರ್ಕಾರದ ಅಧೀನ ಕಾರ್ಯದರ್ಶಿ(**ಆಡಳಿತ–2**)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ವಿಷಯ: ಶ್ರೀ ಶೇಖ್ ಷಫಿ, ನೋಟರಿ ಬಳ್ಳಾರಿ ಇವರ ಕರ್ತವ್ಯ ಲೋಪ ನೋಟರಿ ಕೆಲಸದಿಂದ ತೆಗೆದು ಹಾಕುವ ಬಗ್ಗೆ.

ಓದಲಾಗಿದೆ : 1 ರೀಜನಲ್ ಪಾಸ್ ಪೋರ್ಟ್ ಆಫೀಸರ್, ಬೆಂಗಳೂರು ಇವರ ಪತ್ರ ಸಂಖ್ಯೆ 26:ಪಿಒಎಲ್:3255 98 ದಿನಾಂಕ:25.11.2008.

2 ಸರ್ಕಾರದ ನೋಟೀಸ್ ಸಂಖ್ಯೆ ಲಾ 143 ಎಲ್‌ಸಿಎಲ್ 08, ದಿನಾಂಕ:11.12.2008.

3 ಶ್ರೀ ಶೇಖ್ ಷಫಿ, ನೋಟರಿ, ಬಳ್ಳಾರಿ, ಇವರ ದಿನಾಂಕ:22.12.2008ರ ಲಿಖಿತ ಹೇಳಿಕೆ ಪತ್ರ.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ:25.11.2008 ರ ಪತ್ರದಲ್ಲಿ ರೀಜನಲ್ ಪಾಸ್ ಪೋರ್ಟ್, ಆಫೀಸರ್, ಬೆಂಗಳೂರು ಇವರು ಶ್ರೀ ಶೇಖ್ ಷಫಿ, ನೋಟರಿ, ಬಳ್ಳಾರಿ, ಇವರು ಅರ್ಜಿದಾರರ ಸಹಿ ಇಲ್ಲದೆ ಶ್ರೀಮತಿ ಸಂಧ್ಯಾರವರಿಗೆ ಪಾಸ್ ಪೋರ್ಟ್‌ಗಾಗಿ ಮಾಡಿಕೊಟ್ಟಿರುವ ಶಪಥ ಪತ್ರದ ಮೂಲ ದಾಖಲೆ ಪ್ರತಿಯನ್ನು ಕಳುಹಿಸಿ, ಸದರಿ ನೋಟರಿಯವರು ಹೇಳಿಕೆದಾರನ ಸಹಿ ಇಲ್ಲದೆ ಹೇಗೆ ಪಾಸ್ ಪೋರ್ಟ್‌ಗಾಗಿ ಶಪಥ ಪತ್ರ ಧೃಢೀಕರಿಸಿರುವರೆಂಬುದನ್ನು ಪರಿಶೀಲಿಸುವಂತೆ ಕೋರಿರುತ್ತಾರೆ.

ಅದರಂತೆ ಮೇಲೆ (2)ರಲ್ಲಿ ಓದಲಾದ ಪತ್ರ ದಿನಾಂಕ 11.12.08 ರಂದು ಶ್ರೀಯುತರಿಗೆ ನೋಟೀಸ್ ಜಾರಿ ಮಾಡಿ, ವಿಷಯದ ಬಗ್ಗೆ (ಶಪಥ ಪತ್ರದ ಪ್ರತಿಯನ್ನು ಕಳುಹಿಸಿ)(ಲಿಖಿತ ಹೇಳಿಕೆಯನ್ನು ಸಲ್ಲಿಸುವಂತೆ ಕೋರಲಾಗಿತ್ತು.

ಮೇಲೆ (3)ರಲ್ಲಿ ಓದಲಾದ ದಿನಾಂಕ:22.12.2008 ರ ಪತ್ರದಲ್ಲಿ ಶ್ರೀ ಶೇಖ್ ಷಫಿ, ನೋಟರಿ, ಬಳ್ಳಾರಿ ಇವರು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ ಅದರಲ್ಲಿ ಶ್ರೀಮತಿ ಸಂಧ್ಯಾರವರು ದಿನಾಂಕ:24.11.2008ರಂದು ಬೆಳಿಗ್ಗೆ 11.30ರ ಸಮಯದಲ್ಲಿ ಪಾಸ್ ಪೋರ್ಟ್ ಪಡೆಯಲು ಶಪಥ ಪತ್ರವನ್ನು (affidavit) ನ್ನು ಧೃಢಿಕರಿಸಲು ಕೋರಿದ್ದು, ಅವರು ಅದರಲ್ಲಿ ಸಹಿ ಮಾಡಿಲ್ಲದಿದ್ದುದರಿಂದ ನನ್ನ ಮುಂದೆ ಸಹಿ ಮಾಡುವಂತೆ ತಿಳಿಸಿ ಅದನ್ನು ಅವರಿಗೆ ಹಿಂದಿರುಗಿಸಿದನು, ಸದರಿಯವರು ಸಹಿ ಮಾಡಿರುವುದಾಗಿ ತಿಳಿಸಿಕೊಟ್ಟರು. ಅದೇ ಸಮಯಕ್ಕೆ ಅವರ ಯಜಮಾನರಿಂದ ದೂರವಾಣಿ ಕರೆ ಬಂದಿದ್ದರಿಂದ, ಮತ್ತು ಅವರು ಸಹಿ ಮಾಡಿರುವರೆಂದು ತಿಳಿದು ಧೃಢೀಕರಿಸಿರುವುದಾಗಿ ಇದನ್ನು ಯಾವುದೇ ದುರುದ್ದೇಶವಿಲ್ಲದೆ ಸದ್ಭಾವಿಕನಾಗಿ ಮಾಡಿರುವುದಾಗಿ ತಿಳಿಸಿ, ಶ್ರೀಮತಿ ಸಂಧ್ಯಾರವರು ಶಪಥ ಪತ್ರದಲ್ಲಿ ಸಹಿ ಮಾಡದೆ ಪಾಸ್‌ಪೋರ್ಟ್‌ಗಾಗಿ ನೋಟರಿಯವರಿಂದ ಧೃಢೀಕರಿಸಿಕೊಂಡಿರುವುದರಲ್ಲಿ ನನ್ನ ತಪ್ಪಿದೆ, ಇದರಲ್ಲಿ ನೋಟರಿಯವರ ದುರುದ್ದೇಶವೇನು ಇರುವುದಿಲ್ಲವೆಂದು ಪಾಸ್ ಪೋರ್ಟ್ ಕಚೇರಿಗೆ ದಿನಾಂಕ:19.12.2008ರಂದು ಬರೆದಿರುವ ಪತ್ರ ಪ್ರತಿಯೊಂದಿಗೆ, ಈ ರೀತಿ ಆಗಿರುವುದು ಉದ್ದೇಶ ಪೂರ್ವಕವಾಗಿಲ್ಲವೆಂದು ಮತ್ತು ಇನ್ನು ಮುಂದೆ ಈ ರೀತಿಯಾಗದಂತೆ ನೋಡಿಕೊಳ್ಳುವುದಾಗಿ ತಿಳಿಸಿರುತ್ತಾರೆ.

ಈ ರೀತಿ ಪ್ರಮಾಣೀಕರಿಸುವುದು ಬೇರೆ ಸಂದರ್ಭಕ್ಕೆ ಆಗಿದ್ದಲ್ಲಿ ಉದಾರ ರೀತಿ ಅನುಸರಿಸಬಹುದು. ಆದರೆ ಇದು ಪಾಸ್ ಪೋರ್ಟ್ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದೆ ಈ ರೀತಿ ಪ್ರಮಾಣೀಕರಿಸುವವರ ರುಜು ಇಲ್ಲದೇ ನೋಟರಿಯವರು ಧೃಢಿಕರಿಸಿರುವುದು, ಅದರಲ್ಲೂ ಭಯೋತ್ಪಾದಕರ ಕಿರುಕುಳ ಇರುವಾಗ ಇದನ್ನು ನೋಡಿದರೆ ಸಾರ್ವಜನಿಕರಿಗೆ ಇದರಿಂದ ದೊಡ್ಡ ಅಪಾಯವಾಗಬಹುದು ಮತ್ತು ಇದನ್ನು ಕೊನೆಗಾಣಿಸಲು ಅಂತಹ ಶಪಥಪತ್ರಗಳನ್ನು ಪಾಸ್‌ಪೋರ್ಟ್ ಕಛೇರಿಗೆ ಸಲ್ಲಿಸದಂತೆ ಕಠಿಣ ಕ್ರಮದ ಅಗತ್ಯವಿದ್ದು, ಬಹಳ ಘೋರ ತಪ್ಪೆಂದು ತಿಳಿಯಬೇಕಾಗುತ್ತದೆ. ಆದ್ದರಿಂದ, ದೇಶದ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಸಹಿಯಿಲ್ಲದೆ ಶಪಥಪತ್ರಗಳನ್ನು ಧೃಢೀಕರಿಸಿ ಪಾಸ್‌ಪೋರ್ಟ್ ಕಛೇರಿಗೆ ಸಲ್ಲಿಸುವುದನ್ನು ತಡೆಯಲು ಉದಾರ ಕ್ರಮ ತೆಗೆದುಕೊಳ್ಳಬಾರದೆಂದು ತೀರ್ಮಾನಿಸಿದೆ, ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂ. ಲಾ 143 ಎಲ್ ಸಿಎಲ್ 2008, ಬೆಂಗಳೂರು, ದಿನಾಂಕ:6ನೇ ಫೆಬ್ರವರಿ 2009

ಪ್ರಸ್ತಾವನೆಯಲ್ಲಿ ತಿಳಿಸಿರುವ ಅಂಶಗಳ ಹಿನ್ನಲೆಯಲ್ಲಿ ಶ್ರೀ ಶೇಖ್ ಷಫಿ, ನೋಟರಿ, ಬಳ್ಳಾರಿ ಇವರನ್ನು ನೋಟರಿ

ಕರ್ತವ್ಯದಿಂದ ವಿಮುಕ್ತಗೊಳಿಸಿ ಶ್ರೀಯುತರ ಹೆಸರನ್ನು ನೋಟರಿ ನಿಯಮ 13(1(12)(b)(i) ರೀತ್ಯ ನೋಟರಿ ರಿಜಿಸ್ಟರ್ ನಿಂದ ಶಾಶ್ವತವಾಗಿ ತೆಗೆದುಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 590

ಹೆಚ್.ಆರ್. ಶಕುಂತಲ

ಸರ್ಕಾರದ ಅಧೀನ ಕಾರ್ಯದರ್ಶಿ(ಆಡಳಿತ-2)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ 365 ಪಸಸೇ 2007, ಬೆಂಗಳೂರು, ದಿನಾಂಕ:5ನೇ ಫೆಬ್ರವರಿ 2009

ವಿಷಯ: ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ಪಶುಚಿಕಿತ್ಸಾಲಯದಿಂದ ಪಶುಆಸ್ಪತ್ರೆಗಳನ್ನಾಗಿ ಉನ್ನತೀಕರಿಸಿರುವ ಪಶುವೈದ್ಯಕೀಯ ಸಂಸ್ಥೆಗಳಲ್ಲಿನ ಪಶುವೈದ್ಯಾಧಿಕಾರಿ ಹುದ್ದೆಯನ್ನು ಸಹಾಯಕ ನಿರ್ದೇಶಕರ ಹುದ್ದಯಾಗಿ ಮೇಲ್ದರ್ಜೆಗೇರಿಸುವ ಬಗ್ಗೆ.

ಓದಲಾಗಿದೆ : 1 ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ 365 ಪಸಸೇ 2007, ದಿನಾಂಕ:18.8.2008.

2 ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ:ಆಪಸಂ/ಡಿವಿಡಿ-3/ವಿವ-13/ಭಾಗ-2/2007-08, ದಿನಾಂಕ:19.11.2008.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಸಂಖ್ಯೆ (1)ರ ಆದೇಶದನ್ವಯ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿನ 48 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ/ಕೃತಕ ಗರ್ಭಧಾರಣಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಹಾಗೂ 15 ಪಶುಚಿಕಿತ್ಸಾಲಯಗಳನ್ನು ಪಶುಆಸ್ಪತ್ರೆಗಳನ್ನಾಗಿ ಉನ್ನತೀಕರಿಸಲು ಮಂಜೂರಾತಿ ನೀಡಿದೆ ಹಾಗೂ ಸದರಿ ಉನ್ನತೀಕರಣಕ್ಕೆ ಅಗತ್ಯವಿರುವ 48 ಪಶುವೈದ್ಯಾಧಿಕಾರಿ 15 ಪಶುವೈದ್ಯಕೀಯ ಮೇಲ್ವಿಚಾರಕರು 15 ದ್ವಿತೀಯ ದರ್ಜೆ ಸಹಾಯಕರು ಹಾಗೂ 48 ಡಿ-ದರ್ಜೆ ಹುದ್ದೆಗಳನ್ನು ಸೃಜಿಸಲೂ ಸಹ ಅನುಮೋದನೆ ನೀಡಲಾಗಿದೆ.

2. ಮೇಲೆ ಓದಲಾದ ಕ್ರಮಸಂಖ್ಯೆ (2)ರ ಪತ್ರದಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಬೆಂಗಳೂರು ಇವರು ಪಶುಚಿಕಿತ್ಸಾಲಯಗಳನ್ನು ಪಶುಆಸ್ಪತ್ರೆಗಳನ್ನಾಗಿ ಉನ್ನತೀಕರಿಸುವಾಗ ಹಾಲಿ ಇರುವ ಪಶುವೈದ್ಯಾಧಿಕಾರಿಗಳ ಹುದ್ದೆಯನ್ನು ಸಹಾಯಕ ನಿರ್ದೇಶಕರ ಹುದ್ದೆಗಳನ್ನಾಗಿ ಉನ್ನತೀಕರಿಸಬೇಕಾಗಿದ್ದು, ದಿನಾಂಕ:18-8-2008ರ ಸರ್ಕಾರಿ ಆದೇಶದಲ್ಲಿ 15 ಹಾಲಿ ಇದ್ದ ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಸಹಾಯಕ ನಿರ್ದೇಶಕರ ಹುದ್ದೆಗಳನ್ನಾಗಿ ಮೇಲ್ದರ್ಜೆಗೇರಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಸಹಾಯಕ ನಿರ್ದೇಶಕರ ಹುದ್ದೆಗಳನ್ನಾಗಿ ಮೇಲ್ದರ್ಜೆಗೇರಿಸದಿದ್ದಲ್ಲಿ ಪಶುಚಿಕಿತ್ಸಾಲಯಗಳನ್ನು ಪಶುಆಸ್ಪತ್ರೆಗಳನ್ನಾಗಿ ಉನ್ನತೀಕರಿಸಿದ ಉದ್ದೇಶ ಸಫಲವಾಗುವುದಿಲ್ಲ ಆದ್ದರಿಂದ ಪಶು ಆಸ್ಪತ್ರೆಗಳನ್ನಾಗಿ ಉನ್ನತೀಕರಿಸಿದ 15 ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಹಾಲಿ ಇರುವ ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಸಹಾಯಕ ನಿರ್ದೇಕರ ಹುದ್ದೆಗಳನ್ನಾಗಿ ಮೇಲ್ದರ್ಜೆಗೇರಿಸಿ ತಿದ್ದುಪಡಿ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ. ಹಾಗೂ ಪಶುವೈದ್ಯಯಕೀಯ ಸಂಸ್ಥೆಗಳ ಉನ್ನತೀಕರಣಕ್ಕಾಗಿ ನಿಗದಿಪಡಿಸಿರುವ ಅನುದಾನದಲ್ಲಿಯೇ ಪಶುವೈದ್ಯಾಧಿಕಾರಿ ಹುದ್ದೆಗಳ ಉನ್ನತೀಕರಣ ವೆಚ್ಚವು ಒಳಗೊಂಡಿರುವುದರಿಂದ ಇದಕ್ಕಾಗಿ ಹೆಚ್ಚುವರಿ ಅನುದಾನದ ಅವಶ್ಯಕತೆ ಇರುವುದಿಲ್ಲವೆಂಬ ಅಂಶವನ್ನು ಸರ್ಕಾರದ ಗಮನಕ್ಕೆ ತಂದಿರುತ್ತಾರೆ Norms ಪ್ರಕಾರ ಪಶುಆಸ್ಪತ್ರೆಗಳಲ್ಲಿ ಸಹಾಯಕನಿರ್ದೇಶಕರ ಹುದ್ದೆ ಮಾತ್ರ ಇದ್ದು ಅಲ್ಲಿ ಪಶುವೈದ್ಯಾಧಿಕಾರಿ ಹುದ್ದೆ ಇರುವುದಿಲ್ಲವಾದರಿಂದ ಪಶುಚಿಕಿತ್ಸಾಲಯಗಳನ್ನು ಪಶುಆಸ್ಪತ್ರೆಗಳನ್ನಾಗಿ ಉನ್ನತೀಕರಿಸಿದಾಗ ಅಲ್ಲಿನ ಪಶುವೈದ್ಯಾಧಿಕಾರಿ ಹುದ್ದೆಯನ್ನೂ ಸಹ ಸಹಾಯಕ ನಿರ್ದೇಶಕರ ಹುದ್ದೆಗೆ ಮೇಲ್ದರ್ಜೆಗೇರಿಬೇಕಾಗಿರುತ್ತದೆ.

3. ಈ ದಿಸೆಯಲ್ಲಿ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಸರ್ಕಾರ ಉನ್ನತೀಕರಣದ ಉದ್ದೇಶ ಸಫಲಗೊಳಿಸಲು ಈಗಾಗಲೇ ದಿನಾಂಕ:18.8.2008ರನ್ವಯ ಪಶುಚಿಕಿತ್ಸಾಲಯದಿಂದ ಪಶುಆಸ್ಪತ್ರೆಗಳನ್ನಾಗಿ ಉನ್ನತೀಕರಿಸಿರುವ 15 ಪಶುವೈದ್ಯಕೀಯ ಸಂಸ್ಥೆಗಳಲ್ಲಿನ ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಸಹಾಯಕ ನಿರ್ದೇಶಕರ ಹುದ್ದೆಗಳನ್ನಾಗಿ ಮೇಲ್ದರ್ಜೆಗೇರಿಸಲು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

ಆದೇಶ

4. ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಸಹಾಯಕ ನಿರ್ದೇಶಕರ ಹುದ್ದೆ ಪಶುಸಂಗೋಪನಾ ಇಲಾಖೆಯ ಮುಂದುವರೆದ ಕಾರ್ಯಕ್ರಮಗಳ ಅನ್ವಯ ಉನ್ನತೀಕರಿಸಲಾದ ಪಶುಆಸ್ಪತ್ರೆಗಳಿಗೆ ಮಂಜೂರಾದ ಹುದ್ದೆಗಳಾಗಿದ್ದು Standard Staffing Pattern ಪ್ರಕಾರ ಪಶುಆಸ್ಪತ್ರೆಗಳಲ್ಲಿ ಸಹಾಯಕ ನಿರ್ದೇಶಕರ ದರ್ಜೆಯ ಅಧಿಕಾರಿಗಳು ಇರುವುದರಿಂದ ಸರ್ಕಾರಿ ಆದೇಶ ಸಂಖ್ಯೆ:ಪಸಮೀ 365 ಪಸಸೇ 2007, ದಿನಾಂಕ:18-8-2008ರಂತೆ ಉನ್ನತೀಕರಿಸಲಾದ 15 ಪಶುಆಸ್ಪತ್ರೆಗಳಿಗೆ

ಮಂಜೂರಾಗಿರುವ 15 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಮಾತ್ರ ಸಹಾಯಕ ನಿರ್ದೇಶಕರ ಹುದ್ದೆಗೆ ಉನ್ನತೀಕರಿಸಲು ಸರ್ಕಾರ ಮಂಜೂರಾತಿ ನೀಡಿ ಆದೇಶಿಸಿದೆ.

5. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 667 ವೆಚ್ಚ 4/2007, ದಿನಾಂಕ:5.12.2008ಹಾಗೂ ಯೋಜನಾ ಇಲಾಖೆ ಟಿಪ್ಪಣಿ ಸಂಖ್ಯೆ:ಪಿಡಿ 05 ಪಿಎಫ್‌ಓ 2008, ದಿನಾಂಕ:31.12.2008ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 593

ಎಂ.ಪಿ ನಾಗರಾಜ

ಸರ್ಕಾರದ ಅಧೀನ ಕಾರ್ಯದರ್ಶಿ

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

(ಪಶುಸಂಗೋಪನೆ-ಎ)

ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ 08 ಪಸಸೇ 2009, ಬೆಂಗಳೂರು, ದಿನಾಂಕ:5ನೇ ಫೆಬ್ರವರಿ 2009

ವಿಷಯ: ಡಾ: ರುದ್ರಗೌಡ ಪಾಟೀಲ ಪಶುವೈದ್ಯಾಧಿಕಾರಿ, ಪಶುಚಿಕಿತ್ಸಾಲಯ, ಹಳ್ಳೂರು ಬಾಗಲಕೋಟೆ ಜಿಲ್ಲೆ ಇವರು ಪರಿಕ್ಷಾರ್ಥ ಅವಧಿಯಲ್ಲಿ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿ ದುರ್ವರ್ತನೆ ತೋರಿರುವುದರಿಂದ ಸರ್ಕಾರಿ ಸೇವೆಯಿಂದ ತೆಗೆದುಹಾಕುವ (Discharge) ಬಗ್ಗೆ

ಓದಲಾಗಿದೆ : 1 ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ:ಆಪಸಂ/ಸಿಬ್ಬಂದಿ-2/ವಿವ/38/2007-08, ದಿನಾಂಕ:20.12.2008.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಸಂಖ್ಯೆ (1)ರ ಪತ್ರದಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರು ಪಶುಚಿಕಿತ್ಸಾಲಯ, ಹಳ್ಳೂರು, ಬಾಗಲಕೋಟೆ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ: ರುದ್ರಗೌಡ ಪಾಟೀಲ ಪಶುವೈದ್ಯಾಧಿಕಾರಿ ಇವರು ವೈಯಕ್ತಿಕ ಕಾರಣದ ಮೇಲೆ ದಿನಾಂಕ:18.12.2007ರಿಂದ 27.12.2007ರವರೆಗೆ 10 ದಿನಗಳು ಗಳಿಕೆ ರಜೆಯನ್ನು ಹಾಗೂ ವೈದ್ಯಕೀಯ ಕಾರಣದ ಮೇಲೆ ದಿನಾಂಕ:28.12.2007 ರಿಂದ 27.3.2008ರವರೆಗೆ ವೇತನ ರಹಿತ ರಜೆ ಪಡೆದಿದ್ದು ದಿನಾಂಕ:28.3.2008ರಂದು ಕರ್ತವ್ಯಕ್ಕೆ ಹಾಜರಾಗಬೇಕಾಗಿರುತ್ತದೆಂದು. ಆದರೆ ಸದರಿ ಅಧಿಕಾರಿಗಳು ಕಛೇರಿಗೆ ಮಾಹಿತಿ ನೀಡದೇ ದಿನಾಂಕ:28.3.2008ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿದ್ದು, ಕರ್ತವ್ಯಕ್ಕೆ ಹಾಜರಾಗುವಂತೆ ಸದರಿ ಅಧಿಕಾರಿಗಳ ಖಾಯಂ ವಿಳಾಸಕ್ಕೆ ಪತ್ರ ಬರೆಯಲಾಗಿದ್ದರೂ ಸಹ ಸದರಿ ಅಧಿಕಾರಿಗಳು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಬಗ್ಗೆ ಉಪನಿರ್ದೇಶಕರು, ಪಶುಪಾಲನಾ ಇಲಾಖೆ ಬಾಗಲಕೋಟೆ ಇವರು ಸದರಿ ಅಧಿಕಾರಿಗಳು ಉನ್ನತ ವ್ಯಾಸಂಗಕ್ಕಾಗಿ ವಿದೇಶಕ್ಕೆ ತೆರಳಲಿರುವ ಬಗ್ಗೆ ಶಂಕೆ ವ್ಯಕ್ತಪಡಿಸಿ. ಅವರನ್ನು ಸೇವೆಯಿಂದ ವಜಾಗೊಳಿಸಲು ಶಿಫಾರಸ್ಸು ಮಾಡಿರುತ್ತಾರೆ. ಆದ್ದರಿಂದ ಡಾ:ರುದ್ರಗೌಡ ಪಾಟೀಲ, ಪಶುವೈದ್ಯಾಧಿಕಾರಿ ಇವರು ಖಾಯಂ ಪೂರ್ವ ಸೇವಾವಧಿಯಲ್ಲಿರುವಾಗಲೇ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುವುದರಿಂದ ಉಪನಿರ್ದೇಶಕರ ಶಿಫಾರಸ್ಸಿನನ್ವಯ ಅವರನ್ನು ಸೇವೆಯಿಂದ ತೆಗೆದುಹಾಕುವಂತೆ ಆಯುಕ್ತರು ಸರ್ಕಾರವನ್ನು ಕೋರಿರುತ್ತಾರೆ.

2. ಡಾ: ರುದ್ರಗೌಡ ಪಾಟೀಲ, ಪಶುವೈಧ್ಯಾಧಿಕಾರಿ ಇವರು ಪರೀಕ್ಷಾರ್ಥ ಅವಧಿಯಲ್ಲಿರುವಾಗಲೇ ಮೇಲಾಧಿಕಾರಿಗಳಿಂದ ರಜೆ ಮಂಜೂರಾತಿ ಮಾಡಿಸಿಕೊಳ್ಳದೇ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುತ್ತಾರೆ. ಕರ್ತವ್ಯಕ್ಕೆ ಹಾಜರಾಗುವಂತೆ ಸದರಿ ಅಧಿಕಾರಿಗಳ ಖಾಯಂ ವಿಳಾಸಕ್ಕೆ ಪತ್ರ ಬರೆದಿದ್ದರೂ ಸಹ ಅವರು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ ಇದರಿಂದಾಗಿ ಅವರಿಗೆ ಸರ್ಕಾರಿ ಸೇವೆಯಲ್ಲಿ ಕಾರ್ಯನಿರ್ವಹಿಸಲು ಇಷ್ಟವಿಲ್ಲದಿರುವುದು ಎದ್ದು ಕಾಣುತ್ತದೆ. ಈ ದಿಸೆಯಲ್ಲಿ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಡಾ: ರುದ್ರಗೌಡ ಪಾಟೀಲ ಪಶುವೈದ್ಯಾಧಿಕಾರಿ ಇವರಿಗೆ ಸರ್ಕಾರಿ ಸೇವೆಯಲ್ಲಿ ಮುಂದುವರೆಯುವಲ್ಲಿ ಅನಾಸಕ್ತಿ ಹಾಗೂ ಪರೀಕ್ಷಾರ್ಥ ಅವಧಿಯಲ್ಲಿ ದುರ್ವರ್ತನೆ ಕೋರಿರುವ ಹಿನ್ನಲೆಯಲ್ಲಿ ಸದರಿ ಅಧಿಕಾರಿಯನ್ನು ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ) ನಿಯಮಗಳು 1977ರ ನಿಯಮ 6(1)ರನ್ವಯ ಸರ್ಕಾರಿ ಸೇವೆಯಿಂದ ತೆಗೆದುಹಾಕಲು ಸರ್ಕಾರ ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಆದೇಶ.

3. ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಡಾ: ರುದ್ರಗೌಡ ಪಾಟೀಲ ಪಶುವೈದ್ಯಾಧಿಕಾರಿ ಪಶುಚಿಕಿತ್ಸಾಲಯ, ಹಳ್ಳೂರು ಬಾಗಲಕೋಟೆ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರು ಮೇಲಾಧಿಕಾರಿಗಳಿಂದ ರಜೆ ಮಂಜೂರಾತಿ ಮಾಡಿಸಿಕೊಳ್ಳದೇ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುವುದರಿಂದ ಹಾಗೂ ಪರೀಕ್ಷಾರ್ಥ, ಅವಧಿಯಲ್ಲಿ ದುರ್ವರ್ತನೆ ತೋರಿ ಕರ್ತವ್ಯಲೋಪವೆಸಗಿರುವುದು ದೃಢಪಟ್ಟಿರುವುದರಿಂದ, ಆಯುಕ್ತರ ಶಿಫಾರಸ್ಸಿನನ್ವಯ ಡಾ: ರುದ್ರಗೌಡ ಪಾಟೀಲ

ಪಶುವೈದ್ಯಾಧಿಕಾರಿ ಇವರನ್ನು ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ) ನಿಯಮಗಳು 1977ರ ನಿಯಮ 6(1)ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ತೆಗೆದುಹಾಕಲು (Discharge) ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 594

ಎಂ.ಪಿ ನಾಗರಾಜ

ಪೀಠಾಧಿಕಾರಿ-2,

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

(ಪಶುಸಂಗೋಪನೆ-ಎ)

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ.ರಾಜೇಂದ್ರ ಕುಮಾರ್, ಪೊಲೀಸ್ ಸಬ್-ಇನ್ಸ್‌ಪೆಕ್ಟರ್, ಟ್ರಾಫಿಕ್ ಪೊಲೀಸ್ ಠಾಣೆ, ಕೋಲಾರ ಜಿಲ್ಲೆ, ರವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :

1 ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರ ಆದೇಶ ಸಂಖ್ಯೆ:ಪನ್ಸಿ:ಡಿಇ:02:2006-07 ಓಬಿ:198/07-08 ದಿನಾಂಕ:10-03-2008.

2 ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಆದೇಶ ಸಂಖ್ಯೆ:ಅಪೀಲು (6)03/2008-09 ದಿನಾಂಕ:27-06-2008

3 ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:23-09-08

4 ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ:ಅಪೀಲು(2)81/2008-09 ದಿನಾಂಕ:05-01-2009

ಪ್ರಸ್ತಾವನೆ:-

ಶ್ರೀ.ರಾಜೇಂದ್ರ ಕುಮಾರ್, ಪೊಲೀಸ್ ಸಬ್-ಇನ್ಸ್‌ಪೆಕ್ಟರ್, ಟ್ರಾಫಿಕ್ ಪೊಲೀಸ್ ಠಾಣೆ, ಕೋಲಾರ ಜಿಲ್ಲೆ, ಇವರು ಅಕ್ಕೂರು ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಇವರ ವಿರುದ್ಧ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆ ಹೊರಿಸಲಾಗಿತ್ತು.

ದೋಷರೋಪಣೆ:-

1) "ಶ್ರೀ.ರಾಜೇಂದ್ರ ಕುಮಾರ್, ಪೊಲೀಸ್ ಉಪ ನಿರೀಕ್ಷಕರು, ಆದ ನೀವು ಈ ಹಿಂದೆ ದಿ:13-12-1999 ರಿಂದ ಬೆಂಗಳೂರು ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಅಕ್ಕೂರು ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಬೆಂಗಳೂರು ಜಿಲ್ಲೆಯಲ್ಲಿ ತೆಂಗಿನ ಮರಗಳಿಂದ ನೀರಾ ತೆಗೆದು ಮಾರಾಟ ಮಾಡುವ ವಿಷಯದ ಬಗ್ಗೆ ರೈತ ಸಮುದಾಯದಿಂದ ಪ್ರತಿಭಟನೆ, ಧರಣಿ ಇತ್ಯಾದಿಗಳು ಜರುಗುತ್ತಿದ್ದು ಜಿಲ್ಲೆಯಲ್ಲಿನ ಕಾನೂನು ಮತ್ತು ಸುವ್ಯವಸ್ಥೆ ದೃಷ್ಟಿಯಿಂದ ನಿಮ್ಮ ಹಿರಿಯ ಅಧಿಕಾರಿಗಳು ನೀರಾ ವ್ಯವಹಾರದಲ್ಲಿ ನಿರತರಾಗಿರುವ ಯಾವುದೇ
ಸಾರ್ವಜನಿಕರ ವಿರುದ್ಧ ಧಾಳಿ ನಡೆಸದಂತೆ ಮತ್ತು ಅಂತಹವರುಗಳ ವಿರುದ್ಧ ಯಾವುದೇ ಕ್ರಮ ಜರುಗಿಸದಂತೆ ಸ್ಪಷ್ಟ ಆದೇಶಗಳನ್ನು ನೀಡಿದ್ದರೂ ಸಹ ನೀವು ಸದರಿ ಆದೇಶಗಳನ್ನು ಕಡೆಗಣಿಸಿ ದಿ:09-10-2001 ರಂದು ಬೆಳಗಿನ ಜಾವ ಬಾಡಿಗೆಗೆ ತೆಗೆದುಕೊಂಡಿದ್ದ ಟಾಟಾ ಸುಮೋ ವಾಹನದಲ್ಲಿ ಅಕ್ಕೂರು ಪೊಲೀಸ್ ಠಾಣೆ ಸರಹದ್ದಿನ ವಿಠಲೇನಹಳ್ಳಿ ಗ್ರಾಮದಲ್ಲಿ ನೀರಾ ವ್ಯವಹಾರದಲ್ಲಿ ನಿರತರಾಗಿದ್ದವರ ವಿರುದ್ಧ ಯಾವುದೇ ಧಾಳಿ ನಡೆಸದಂತೆ ಹಾಗೂ ಕ್ರಮ ಜರುಗಿಸದಂತೆ ನಿಮ್ಮ ಹಿರಿಯ ಅಧಿಕಾರಿಗಳು ನೀಡಿದ್ದ ಆದೇಶಗಳನ್ನು ಉಲ್ಲಂಘಿಸಿ ದುರ್ನಡತೆ ಪ್ರದರ್ಶಿಸಿರುತ್ತೀರಿ.

2) ನೀವು ದಿ:09-10-2001ರ ಬೆಳಗಿನ ಜವ ವಿಠಲೇನಹಳ್ಳಿ ಗ್ರಾಮದ ಮನೆಗಳಲ್ಲಿದ್ದ 8 ಜನರನ್ನು ನೀರಾ ವ್ಯವಹಾರ ಮಾಡುವವರೆಂಬ ಸುಳ್ಳು ಆರೋಪದ ಮೇಲೆ ನಿಮ್ಮ ವಶಕ್ಕೆ ತೆಗೆದುಕೊಂಡು ನಿಮ್ಮ ಅಧಿಕಾರ ವ್ಯಾಪ್ತಿಯನ್ನು ದುರುಪಯೋಗ ಪಡಿಸಿಕೊಂಡು ಅವರುಗಳನ್ನು ಬಂಧಿಸಿ ಆ ಮೂಲಕ ವಿಠಲೇನಹಳ್ಳಿ ಗ್ರಾಮದಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ಉಂಟು ಮಾಡಿ ಅಧಿಕಾರ ದುರುಪಯೋಗಪಡಿಸಿಕೊಂಡು ದುರ್ನಡತೆಯನ್ನು ಪ್ರದರ್ಶಿಸಿರುತ್ತೀರಿ.

3) ನೀವು ಮೇಲ್ಕಂಡ 8ಜನರನ್ನು ವಿಠಲೇನಹಳ್ಳಿ ಗ್ರಾಮದಲ್ಲಿ ಮೇಲೆ ತಿಳಿಸಿರುವ ಸುಳ್ಳು ಆರೋಪದ ಮೇಲೆ ಬಂಧಿಸಿ ವಶಕ್ಕೆ ತೆಗೆದು ಕೊಂಡ ವಿಷಯವನ್ನು ತಿಳಿದ ಅಲ್ಲಿನ ಸುಮಾರು 400-500 ಗ್ರಾಮಸ್ಥರು ಒಟ್ಟಿಗೆ ಗುಂಪು ಸೇರಿ ನಿಮ್ಮ ಕ್ರಮದ ವಿರುದ್ಧ ಪ್ರತಿಭಟನೆ ಮಾಡಿ ಹಾಗೂ ತದನಂತರ ಅವರುಗಳು ಉದ್ರಿಕ್ತರಾಗಿ ಪೊಲೀಸ್ ಸಿಬ್ಬಂದಿಯ ಮೇಲೆ ಹಾಗೂ ವಾಹನಗಳ ಮೇಲೆ ಕಲ್ಲುಗಳನ್ನು ತೂರಿ ವಿಠಲೇನಹಳ್ಳಿ ಗ್ರಾಮದಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ಉಂಟು ಮಾಡಲು ಪ್ರಚೋದಕರಾಗಿ ಬೇಜವಾಬ್ದಾರಿತನ ಪ್ರದರ್ಶಿಸಿರುತ್ತೀರಿ.

4) ಈ ಸಮಯದಲ್ಲಿ ನೀವು ಪೊಲೀಸ್ ಪಡೆಯೊಡನೆ ಸಂಪೂರ್ಣ ಸುಸಜ್ಜಿತರಾಗಿ ವಿಠಲೇನಹಳ್ಳಿ ಗ್ರಾಮಕ್ಕೆ ತೆರಳಿದ್ದರೂ ಸಹ ಉದ್ರಿಕ್ತ ಗಾಮಸ್ಥ ರೊಡನೆ ತಕ್ಷಣ ಮಾತುಕತೆ ನಡೆಸಿ, ಉದ್ರಿಕ್ತ ವಾತಾವರಣವನ್ನು ತಿಳಿಗೊಳಿಸಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಬದಲು ನೀವು ಸಕಾರತ್ಮಕವಾಗಿ ವರ್ತಿಸಿದ್ದು, ಇದರಿಂದ ರೊಚ್ಚಿಗೆದ್ದ ಗ್ರಾಮಸ್ಥರು ಪೊಲೀಸ್ ಸಿಬ್ಬಂದಿಯ ಹಾಗೂ ವಾಹನಗಳ ಮೇಲೆ ಕಲ್ಲುಗಳನ್ನು ತೂರಿ ಪೊಲೀಸ್ ಸಿಬ್ಬಂದಿಗಳಿಗೆ ಗಾಯಗಳನ್ನು ಉಂಟು ಮಾಡಿದುದಲ್ಲದೇ ಸಾರ್ವಜನಿಕ ವಾಹನಗಳಿಗೂ ಸಹ ಹಾನಿ ಉಂಟು ಮಾಡಲು ಅಪರೋಕ್ಷವಾಗಿ ನೀವು ಕಾರಣರಾಗಿ ನಿಮ್ಮ ಬೇಜವಾಬ್ದಾರಿತನ, ಕರ್ತವ್ಯ ನಿರ್ಲಕ್ಷ್ಯತೆ ಹಾಗೂ ದುರ್ನಡತೆಯನ್ನು ಪ್ರದರ್ಶಿಸಿರುತ್ತೀರಿ.

5) ದಿ:09-10-2001 ರಂದು ವಿಠಲೇನಹಳ್ಳಿ ಗ್ರಾಮದಲ್ಲಿ ಮೂಲತ: ಕಾನೂನು ಮತ್ತು ಸುವ್ಯವಸ್ಥೆ ಹದಗೆಡಲು ಕಾರಣಕರ್ತರಾಗಿದ್ದ ನೀವು ನಿಮ್ಮ ಸಕಾರಾತ್ಮಕ ವರ್ತನೆಯಿಂದ ಅಲ್ಲಿನ ಪರಿಸ್ಥಿತಿಯನ್ನು ತಿಳಿಗೊಳಿಸದೇ ವಿವೇಚನಾರಹಿತರಾಗಿ ಉದ್ರಿಕ್ತ ಗ್ರಾಮಸ್ಥರ ಗುಂಪಿನ ಮೇಲೆ ಗೋಲೀಬಾರ್ ನಡೆಸಲು ಆದೇಶಿಸುವ ಪೂರ್ವದಲ್ಲಿ ತೆಗೆದುಕೊಳ್ಳಬೇಕಾಗಿದ್ದ ಅಗತ್ಯವಾದ ಕ್ರಮಗಳನ್ನು ಹಾಗೂ ಕನಿಷ್ಟ ಪ್ರಮಾಣದ ಮುನ್ನೆಚ್ಚರಿಕೆಯನ್ನೂ ತೆಗೆದು ಕೊಳ್ಳದೇ ಅವರ ಮೇಲೆ ಸಮಯೋಚಿತವಲ್ಲದ ಗೋಲೀಬಾರ್ ನಡೆಸಲು ಆದೇಶಿಸಿ ಆ ಮೂಲಕ ಇಬ್ಬರು ಅಮಾಯಕರ ರೈತರ ಆಹುತಿಗೆ ಕಾರಣಕರ್ತರಾಗಿ ನಿಮ್ಮ ಬೇಜವಾಬ್ದಾರಿತನ, ಕರ್ತವ್ಯ ನಿರ್ಲಕ್ಷತೆ ವಿವೇಚನಾರಹಿತ ನಿರ್ಧಾರ ಹಾಗೂ ತೀವ್ರತರನಾದ ದುರ್ನಡತೆಯನ್ನು ಪ್ರದರ್ಶಿಸಿರುತ್ತೀರಿ.

6) ನೀವು ದಿ:09-10-2001 ರಂದು ಪ್ರಕ್ಷುಬ್ಧ ಸಮಯದಲ್ಲಿ ವಿಠಲೇನಹಳ್ಳಿಯಲ್ಲಿದ್ದ ಪೊಲೀಸ್ ಪಡೆಯ ಅತ್ಯಂತ ಹಿರಿಯ ಅಧಿಕಾರಿಯಾಗಿದ್ದು ಈ ಸಂದರ್ಭದಲ್ಲಿ ನೀವು ಗ್ರಾಮದಲ್ಲೇ ಇದ್ದು ನಿಮ್ಮೊಡನಿದ್ದ ಪೊಲೀಸ್ ಪಡೆಯ ಸಹಾಯದಿಂದ ಹಾಗೂ ಗ್ರಾಮಸ್ಥರೊಡನೆ ಮಾತುಕತೆ ನಡೆಸಿ ಅವರ ಸಹಕಾರದಿಂದ ಅಲ್ಲಿನ ಪ್ರಕ್ಷುಬ್ದ ವಾತಾವರಣವನ್ನು ತಿಳಿಗೊಳಿಸಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಹತೋಟಿಗೆ ತರಲು ಕ್ರಮ ಕೈಗೊಳ್ಳದೇ ನೀವು ಅಲ್ಲಿಗೆ ತೆರಳಿದ್ದ ಖಾಸಗಿ ಟಾಟಾಸುಮೋ ವಾಹನದಲ್ಲಿ ವಿಠಲೇನಹಳ್ಳಿ ಗ್ರಾಮದಿಂದ ಪಲಾಯನಗೊಂಡು ಗ್ರಾಮದಲ್ಲಿನ ಉದ್ರಿಕ್ತ ಪರಿಸ್ಥಿತಿಯ ನಿಯಂತ್ರಣದ ಹೊಣೆಗಾರಿಕೆಯನ್ನು ಅಲ್ಲಿದ್ದ ಡಿ.ಎ.ಆರ್.ನ ಕೆಳಹಂತದ ಸಿಬ್ಬಂದಿಗೆ ವಹಿಸಿ ನಿಮ್ಮ ಪಲಾಯನವಾದ, ಕರ್ತವ್ಯ ವಿಮುಖತೆ, ತೀವ್ರ ಬೇಜವಾಬ್ದಾರಿತನ ಹಾಗೂ ದುರ್ನಡತೆಯನ್ನು ಪ್ರದರ್ಶಿಸಿರುತ್ತೀರಿ.

7) ದಿ:09-10-2001ರ ಬೆಳಗಿನ ಜಾವ ನೀವು ವಿಠಲೇನಹಳ್ಳಿಗೆ ಪೊಲೀಸ್ ಪಡೆಯ ವಾಹನದೊಡನೆ ತೆರಳುವಾಗ ನಿಮಗೆ ಅಲ್ಲಿ ಮುಂದೆ ಜರುಗ ಬಹುದಾದ ಘಟನೆಗಳ ಬಗ್ಗೆ ಸಾಕಷ್ಟು ಮಾಹಿತಿ ಇದ್ದರೂ ಸಹ ನೀವು ಅಲ್ಲಿ ಉದ್ಭವಿಸಬಹುದಾದ ಕಾನೂನು ಮತ್ತು ಸುವ್ಯವಸ್ಥೆಯ ಹಾಗೂ ಶಾಂತಿ ಕದಡುವ ವಾತಾವರಣದ ವಿಮರ್ಶೆ ಮಾಡಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಹಾಗೂ ಸಾರ್ವಜನಿಕರು, ಪೊಲೀಸ್ ಸಿಬ್ಬಂದಿ ಹಾಗೂ ಸಾರ್ವಜನಿಕ ವಾಹನಗಳಿಗೆ ಹಾನಿ ಉಂಟು ಮಾಡುವುದನ್ನು ತಪ್ಪಿಸಲು ಅಗತ್ಯ ಪ್ರತಿಬಂಧಕ ಆದೇಶವನ್ನು ಹೊರಡಿಸಲು ಅವಶ್ಯಕವಾದ ಕಾರ್ಯಕಾರಿ ನ್ಯಾಯಾಧೀಶರ ಸೇವೆಯನ್ನು ಬಳಸಿಕೊಳ್ಳದೇ ಸಮಯೋಚಿತವಲ್ಲದ ಗೋಲೀಬಾರ್ ನಡೆಸುವ ನಿರ್ದಾರ ತೆಗೆದುಕೊಂಡು ನಿಮ್ಮ ಬೇಜವಾಬ್ದಾರಿತನ, ಕರ್ತವ್ಯ ನಿರ್ಲಕ್ಷತೆ ಹಾಗೂ ದೂರದೃಷ್ಟಿಯ ಕೊರತೆಯನ್ನು ಪ್ರದರ್ಶಿಸಿರುತ್ತೀರಿ.

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ 3 ಮತ್ತು 5ನ್ನು ಹೊರತುಪಡಿಸಿ ಉಳಿದ ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ

ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿ:10-03-2008ರ ಆದೇಶದಲ್ಲಿ ಅರ್ಜಿದಾರರನ್ನು ಸೇವೆಯಿಂದ ವಜಾಗೊಳಿಸಿ ದಿ:09-10-2001 ರಿಂದ 04-07-2002 ರವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿ, ದಂಡನೆಯನ್ನು ವಿಧಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರನ್ನು ಕರ್ತವ್ಯಕ್ಕೆ ಪುನರ್‌ನೇಮಕ ಮಾಡಿ ಇವರ ಮುಂದಿನ ಮೂರು ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗುವಂತೆ ಮುಂದೂಡಿ. ಅಮಾನತ್ತಿನ ಅವಧಿಯನ್ನು ಅಮಾನತ್ತೆಂದು ಹಾಗೂ ವಜಾಗೊಂಡ ದಿನಾಂಕದಿಂದ ಕರ್ತವ್ಯಕ್ಕೆ ವರದಿಮಾಡಿಕೊಂಡ ದಿನಾಂಕದವರೆಗಿನ ಅವಧಿಯನ್ನು ಕರ್ತವ್ಯದಿಂದ ಹೊರಗುಳಿದ ಅವಧಿಯೆಂದು ಪರಿಗಣಿಸಿ, ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ:27-06-2008ರ ಆದೇಶದಲ್ಲಿ ದಂಡನಾದೇಶವನ್ನು ಭಾಗಶ: ಮಾರ್ಪಡಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಮೇಲ್ಮನವಿ ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 325 ಪೊಸಿಅ 2008 ಬೆಂಗಳೂರು, ದಿನಾಂಕ:12ನೇ ಫೆಬ್ರವರಿ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಕಾಯ್ದೆ1963ರ ಕಲಂ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ.ರಾಜೇಂದ್ರ ಕುಮಾರ್, ಪೊಲೀಸ್ ಸಬ್-ಇನ್ಸ್‌ಪೆಕ್ಟ್, ಕೋಲಾರ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 670

ಟಿ.ಎನ್.ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ.ಜಿ.ಎಸ್.ಪವಾರ್, ಸಿ.ಎಚ್.ಸಿ.1095, ಎ.ಪಿ.ಎಂ.ಸಿ. ಪೊಲೀಸ್ ಠಾಣೆ, ಬೆಳಗಾವಿ ಜಿಲ್ಲೆ, ರವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
1 ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಅಧೀಕ್ಷಕರು, ಬೆಳಗಾವಿ ಜಿಲ್ಲೆ, ಇವರ ಆದೇಶ ಸಂಖ್ಯೆ:ಸಿಬ್ಬಂದಿ-2/ಇವಿ/8/2002 ಆ.ಪು.ಸಂ:45/04 ದಿನಾಂಕ:17-01-2004

2 ಮೇಲ್ಮನವಿ ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾಂ ಇವರ ಆದೇಶ ಸಂಖ್ಯೆ:ಅಪೀಲು: 4/ಉವ/2004 ದಿನಾಂಕ:21-07-2004

3 ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:03-01-2008

4 ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ:ಅಪೀಲು(2)133/2007-08 ದಿನಾಂಕ:01-04-2008

5 ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 60 ಸಿಎನ್‌ಎಸ್ 08 ದಿನಾಂಕ: 14-11-08

ಪ್ರಸ್ತಾವನೆ:

ಶ್ರೀ.ಜಿ.ಎಸ್.ಪವಾರ್, ಸಿ.ಎಚ್.ಸಿ.1095, ಇವರು ಯಮಕನಮರ್ಡಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯದಲ್ಲಿ ಘೋರ ದುರ್ನಡತೆಯನ್ನು ಪ್ರದರ್ಶಿಸಿರುವ ಹಿನ್ನೆಲೆಯಲ್ಲಿ ಇವರ ವಿರುದ್ಧ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:-

"ಆಪಾದಿತ ಪೊಲೀಸ್ ಅಧಿಕಾರಿಯಾದ ನೀವು ಈ ಹಿಂದೆ ಯಮಕನಮರಡಿ ಪೊಲೀಸ್ ಠಾಣೆಯಲ್ಲಿ ಸಿಎಚ್‌ಸಿ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿ:07-11-2001ರಂದು ಪತ್ತರಗಿ ಗ್ರಾಮದ ಶ್ರೀ.ರಾಯಪ್ಪ ಮಲ್ಲಪ್ಪ ಬಸ್ಸಾಪೂರ ಇವರ ಸರ್ಕಾರದ ಅಧಿಕೃತ ಕೆಲಸ ಮಾಡಿಕೊಡಲು ಅಂದರೆ ಅವರ ತಮ್ಮ ಹಾಗೂ ತಂದೆಯನ್ನು ಬಿಡುಗಡೆ ಮಾಡಲು ಸದರಿಯವರಿಂದ 2500-00 ರೂಪಾಯಿ ಹಣವನ್ನು ಅಕ್ರಮ ಸಂಭಾವನೆಯಾಗಿ ಪಡೆಯುತ್ತಿದ್ದಾಗ ಲೋಕಾಯುಕ್ತರ ಬಲೆಗೆ ಸಿಲುಕಿ ನಿಮ್ಮ ಕರ್ತವ್ಯದಲ್ಲಿ ಘೋರ ದುರ್ನಡತೆಯನ್ನು ಪ್ರದರ್ಶಿಸಿರುವಿರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ. ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಅಧೀಕ್ಷಕರು, ಬೆಳಗಾವಿ, ಇವರು ಮೇಲೆ ಕ್ರಮ ಸಂಖ್ಯೆ:(1) ರಲ್ಲಿ ಓದಲಾದ ದಿನಾಂಕ: 17-01-2004ರ ಆದೇಶದಲ್ಲಿ ಅರ್ಜಿದಾರರನ್ನು "ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆಯನ್ನು ವಿಧಿಸಿದ್ದಾರೆ ಹಾಗೂ ದಿ:02-01-2002 ರಿಂದ 30-05-2002ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದು ಪರಿಗಣಿಸಲಾಗಿದೆ."

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾಂ, ಇವರು ಮೇಲ್ಮನವಿಯಲ್ಲಿ ಪರಿಗಣಿಸಬಹುದಾದಂತಹ ಯಾವುದೇ ಅಂಶಗಳಿಲ್ಲದಿದ್ದರೂ ಮೇಲ್ಮನವಿ ಅರ್ಜಿದಾರರ ಹಿಂದಿನ ಸೇವಾ ವಿವರವನ್ನು ಪರಿಗಣಿಸಿ ಅನುಕಂಪ ತೋರಿ ಅರ್ಜಿದಾರರ ಮೇಲ್ಮನವಿಯನ್ನು ಭಾಗಶ: ಮಾರ್ಪಡಿಸಿ ಮೇಲೆ ಕ್ರಮ ಸಂಖ್ಯೆ:(2) ರಲ್ಲಿ ಓದಲಾದ ದಿನಾಂಕ:21-07-2004ರ ಆದೇಶದಲ್ಲಿ ಇವರನ್ನು ಸೇವೆಯಲ್ಲಿ ಪುನರ್‌ಸ್ಥಾಪಿಸಿ, ಅವರ ವೇತನವನ್ನು 5ಹಂತಗಳವರೆಗೆ ಕೆಳಗಿಳಿಸಲಾಗಿದೆ. ಅವರು ಹೊಸದಾಗಿ ವೇತನ ಮುಂಬಡ್ತಿಯನ್ನು ಪಡೆಯುವ ದಂಡನೆಯನ್ನು ವಿಧಿಸಿ, ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಮೇಲ್ಮನವಿ ಪ್ರಾಧಿಕಾರವು ದಂಡನೆಯ ಅವಧಿಯನ್ನು ನಿರ್ಧಿಷ್ಠಾಗಿ ತಿಳಿಸದೇ ಇರುವುದನ್ನು ಗಣನೆಗೆ ತೆಗೆದುಕೊಂಡು ಮೇಲ್ಮನವಿ ಪ್ರಾಧಿಕಾರದ ಆದೇಶವನ್ನು ಭಾಗಶ: ಮಾರ್ಪಡಿಸಲು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 145 ಪೊಸಿಅ 2008 ಬೆಂಗಳೂರು, ದಿನಾಂಕ:03ನೇ ಫೆಬ್ರವರಿ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಕಾಯ್ದೆ **1963**ರ ಕಲಂ **25** ರಡಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ,

ಶ್ರೀ.ಜಿ.ಎಸ್.ಪವಾರ್, ಸಿ.ಎಚ್.ಸಿ.1095, ಎ.ಪಿ.ಎಂ.ಸಿ. ಪೊಲೀಸ್ ಠಾಣೆ, ಬೆಳಗಾವಿ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿಯನ್ನು ಭಾಗಶ: ಪುರಸ್ಕರಿಸಿ, ಇವರ ವೇತನವನ್ನು 5ಹಂತಗಳವರೆಗೆ 2ವರ್ಷಗಳ ಅವಧಿಗೆ ಕೆಳಗಿಳಿಸಿ ನಂತರ ಹೊಸದಾಗಿ ವೇತನ ಬಡ್ತಿಯನ್ನು ಪಡೆಯುವುದು ಹಾಗೂ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿ, ಇವರು ಸೇವೆಯಿಂದ ಹೊರಗುಳಿದ ಅವಧಿಯನ್ನು ಸೇವೆಯಿಂದ ಹೊರಗಿದ್ದಂತೆಯೇ ಎಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 671

ಟಿ.ಎನ್.ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

•

ವಿಷಯ: ಶ್ರೀ ಎಸ್.ಆರ್. ಶಿಂಧೆ, ಸಹಾಯಕ ಅಭಿಯೋಗ ನಿರ್ದೇಶಕರು, ಬಿಜಾಪುರ, ಇವರ ಜನ್ಮ ದಿನಾಂಕದ ತಿದ್ದುಪಡಿಗಾಗಿ ಮಂಡನಾಧಿಕಾರಿಯ ನೇಮಕ ಹಾಗೂ ಪ್ರಕರಣದ ವಿಚಾರಣೆಗೆ ಆದೇಶಿಸುವ ಕುರಿತು.

ಓದಲಾಗಿದೆ :
1 ಸರ್ಕಾರದ ಆದೇಶ ಸಂ: ಒಇ 529 ಪಿಪಿಇ 2006,ದಿನಾಂಕ: 13.02.2007.
2 ಸದರಿ ಅಧಿಕಾರಿಯ ಮೇಲ್ಮನವಿ, ದಿನಾಂಕ: 31.10.2007.
3 ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರದ ಸಂ: ಡಿಪಿಎನ್/ಕೇಂಸ/ವಿವ/39/01-02, ದಿನಾಂಕ: 24.12.2007.
4 ಸರ್ಕಾರದ ಅಧಿಸೂಚನೆಯ ಸಂ:ಡಿಪಿಎಆರ್/ಎಸ್‌ಎಸ್‌ಆರ್/94, ದಿನಾಂಕ:15.03.1994

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಎಸ್.ಆರ್. ಶಿಂಧೆ, ಸಹಾಯಕ ಅಭಿಯೋಗ ನಿರ್ದೇಶಕರು, ಜಾಪುರ, ಇವರ ಜನ್ಮ ದಿನಾಂಕವನ್ನು ಕರ್ನಾಟಕ ಸರ್ಕಾರಿ ನೌಕರರ (ವಯೋನಿರ್ಧಾರ) (ತಿದ್ದುಪಡಿ) ಕಾಯ್ದೆ 1982ರ ಲಂ3ರ ಉಪಕಲಂ–2ರನ್ವಯ, ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯ ನಮೂದಿನಂತೆ 20.06.1969 ಎಂದು ಸರ್ಕಾರವು ಪ್ಪಿರುತ್ತದೆ.

ಮೇಲೆ (2)ರಲ್ಲಿ ಓದಲಾದ ಮೇಲ್ಮನವಿಯಲ್ಲಿ, ಸದರಿ ಅಧಿಕಾರಿಯು ಅವರ ನಿಜವಾದ ಜನ್ಮ ದಿನಾಂಕವು ಹುಕ್ಕೇರಿ ಹಶೀಲ್ದಾರರ ಕಾರ್ಯಾಲಯದಲ್ಲಿನ ನೋಂದಣಿಯನ್ವಯ ನೀಡಿರುವ ಜನನ ಪ್ರಮಾಣ ಪತ್ರದಲ್ಲಿರುವಂತೆ 16.05.1970 ಗಿರುತ್ತದೆ ಎಂದು, ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರರವರು ರ್ನಾಟಕ ರಾಜ್ಯ ಸರ್ಕಾರಿ ನೌಕರರ (ವಯೋ ನಿರ್ಧಾರ) ಅಧಿನಿಯಮ 1974ರ ಕಲಂ 5ರ ಉಪನಿಯಮ 1 ಮತ್ತು 2ರ ನ್ನಲೆಯಲ್ಲಿ, ಮೇಲೆ (2)ರಲ್ಲಿ ಓದಲಾದ ಮೇಲ್ಮನವಿಯನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ.

ಮೇಲೆ (4)ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ (ವಯೋ ನಿರ್ಧಾರ) ಧಿನಿಯಮ 1974ರ ಕಲಂ 5ರ ಉಪನಿಯಮ 3ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಇಂತಹ ಕರಣಗಳ ಇತ್ಯರ್ಥಕ್ಕಾಗಿ ಕಾನೂನು ಇಲಾಖೆಯ ವಾದೇಕ್ಷಕರು ಹಾಗೂ ಪದನಿಮಿತ್ತ ಸರ್ಕಾರ ಉಪಕಾರ್ಯದರ್ಶಿ ಮಟ್ಟದ ಧಿಕಾರಿಯನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿದೆ.

ಆದ್ದರಿಂದ, ಪ್ರಕರಣದ ವಿಚಾರಣೆಗೆ ಹಾಗೂ ಒಳಾಡಳಿತ ಇಲಾಖೆಯ ಪರವಾಗಿ ವಾದ ಮಂಡಿಸುವ ಸಲುವಾಗಿ ಂಡನಾಧಿಕಾರಿಯನ್ನು ನೇಮಕ ಮಾಡಲು, ಈ ಬಗ್ಗೆ ಕಾನೂನು ಇಲಾಖೆಯೊಡನೆ ಸಮಾಲೋಚಿಸಿ ಈ ಮುಂದಿನಂತೆ ರ್ಕಾರವು ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 76 ಪಿಪಿಇ 2008, ಬೆಂಗಳೂರು, ದಿನಾಂಕ: 9ನೇ ಮಾರ್ಚ್ 2009.

ಮೇಲೆ ವಿವರಿಸಿರುವ ಹಿನ್ನಲೆಯಲ್ಲಿ, ಶ್ರೀ ಎಸ್.ಆರ್. ಶಿಂಧೆ, ಸಹಾಯಕ ಅಭಿಯೋಗ ನಿರ್ದೇಶಕರು, ಬಿಜಾಪುರ, ವರ ಜನ್ಮ ದಿನಾಂಕವನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ (ವಯೋ ನಿರ್ಧಾರ) ಅಧಿನಿಯಮ 1974ರ ನಿಯಮ 5ರ ಪನಿಯಮ 1ರನ್ವಯ ತಿದ್ದುಪಡಿ ಮಾಡುವ ಸಲುವಾಗಿ ಸದರಿ ಅಧಿನಿಯಮದ ನಿಯಮ 5ರ ಉಪನಿಯಮ 3ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಪ್ರಕರಣದ ವಿಚಾರಣಾಧಿಕಾರಿಗಳ ಮುಂದೆ ಒಳಾಡಳಿತ ಇಲಾಖೆಯ ಪರವಾಗಿ ಕರಣವನ್ನು ಮಂಡಿಸಲು ಮತ್ತು ವಾದ ಮಾಡಲು ಶ್ರೀ ಜಿ.ಎ. ಮೂಲಿಮನಿ, ಸಹಾಯಕ ವಾದೇಕ್ಷಕರು ಮತ್ತು ಪದನಿಮಿತ್ತ ರ್ಕಾರದ ಅಧೀನ ಕಾರ್ಯದರ್ಶಿ(ವ್ಯಾಜ್ಯ), ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಇವರನ್ನು ಂಡನಾಧಿಕಾರಿಯನ್ನಾಗಿ ನೇಮಿಸಿ, ಪ್ರಕರಣದ ವಿಚಾರಣೆಗೆ ಆದೇಶಿಸಿದೆ.

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಅನಧಿಕೃತ ಟಿಪ್ಪಣಿಯ ಸಂಖ್ಯೆ: ಲಾ 154 ಎಲ್‌ಎಜಿ 2008, ನಾಂಕ: 15.12.2008ರನ್ವಯ ಮಂಡನಾಧಿಕಾರಿಯನ್ನು ನೇಮಿಸಿ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

.ಆರ್. 861

ಕೆ.ಸಿ.ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ, (ಕಾ ಮತ್ತು ಸು ಹಾಗೂ ಕಾಫಿಪೋಸಾ ಮತ್ತು ಅಭಿಯೋಗಗಳು)

ವಿಷಯ: ಶ್ರೀ ಎ.ಕೆ. ಜಾಡಗೌಡ, ಸಹಾಯಕ ಸರ್ಕಾರಿ ಅಭಿಯೋಜಕರು, ಖಾನಾಪುರ, ಇವರ ಜನ್ಮ ದಿನಾಂಕದ ತಿದ್ದುಪಡಿಗಾಗಿ ಮಂಡನಾಧಿಕಾರಿಯ ನೇಮಕ ಹಾಗೂ ಪ್ರಕರಣದ ವಿಚಾರಣೆಗೆ ಆದೇಶಿಸುವ ಕುರಿತು.

ಓದಲಾಗಿದೆ :

1 ಸರ್ಕಾರದ ಆದೇಶ ಸಂ: ಒಇ 529 ಪಿಪಿಇ 2006, ದಿನಾಂಕ: 13.02.2007.

2 ಸದರಿ ಅಧಿಕಾರಿಯ ಮೇಲ್ಮನವಿ, ದಿನಾಂಕ: 03.07.2007.

3 ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರದ ಸಂ: ಡಿಪಿಎನ್/ಕೇಂಸ/ವಿವ/31/97–98, ದಿನಾಂಕ: 27.08.2007.

4 ಸರ್ಕಾರದ ಅಧಿಸೂಚನೆಯ ಸಂ:ಡಿಪಿಎಆರ್/13/ಎಸ್‌ಎಸ್‌ಆರ್/94, ದಿನಾಂಕ:15.03.1994

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಎ.ಕೆ. ಜಾಡಗೌಡ, ಸಹಾಯಕ ಸರ್ಕಾರಿ ಅಭಿಯೋಜಕರು, ಖಾನಾಪುರ, ಇವರ ಜನ್ಮ ದಿನಾಂಕವನ್ನು ಕರ್ನಾಟಕ ಸರ್ಕಾರಿ ನೌಕರರ (ವಯೋನಿರ್ಧಾರ) (ತಿದ್ದುಪಡಿ) ಕಾಯ್ದೆ 1982ರ ಕಲಂ3ರ ಉಪಕಲಂ–2ರನ್ವಯ, ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯ ನಮೂದಿನಂತೆ 16.07.1959 ಎಂದು ಸರ್ಕಾರವು ಒಪ್ಪಿರುತ್ತದೆ.

ಮೇಲೆ (2)ರಲ್ಲಿ ಓದಲಾದ ಮೇಲ್ಮನವಿಯಲ್ಲಿ, ಸದರಿ ಅಧಿಕಾರಿಯು ಅವರ ನಿಜವಾದ ಜನ್ಮ ದಿನಾಂಕವು ರಬಕವಿ–ಬನಹಟ್ಟಿ ಪುರಸಭೆಯ ಬನಹಟ್ಟಿಯ ಕಾರ್ಯಾಲಯದಲ್ಲಿನ ನೋಂದಣಿಯನ್ವಯ ನೀಡಿರುವ ಜನನ ಪ್ರಮಾಣ ಪತ್ರದಲ್ಲಿರುವಂತೆ 06.04.1960 ಆಗಿರುತ್ತದೆ ಎಂದು, ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರರವರು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ (ವಯೋ ನಿರ್ಧಾರ) ಅಧಿನಿಯಮ 1974ರ ಕಲಂ 5ರ ಉಪನಿಯಮ 1 ಮತ್ತು 2ರ ಹಿನ್ನಲೆಯಲ್ಲಿ, ಮೇಲೆ (2)ರಲ್ಲಿ ಓದಲಾದ ಮೇಲ್ಮನವಿಯನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ.

ಮೇಲೆ (4)ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ (ವಯೋ ನಿರ್ಧಾರ) ಅಧಿನಿಯಮ 1974ರ ಕಲಂ 5ರ ಉಪನಿಯಮ 3ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಇಂತಹ ಪ್ರಕರಣಗಳ ಇತ್ಯರ್ಥಕ್ಕಾಗಿ ಕಾನೂನು ಇಲಾಖೆಯ ವಾದೇಕ್ಷಕರು ಹಾಗೂ ಪದನಿಮಿತ್ತ ಸರ್ಕಾರ ಉಪಕಾರ್ಯದರ್ಶಿ ಮಟ್ಟದ ಅಧಿಕಾರಿಯನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿದೆ.

ಆದ್ದರಿಂದ, ಪ್ರಕರಣದ ವಿಚಾರಣೆಗೆ ಹಾಗೂ ಒಳಾಡಳಿತ ಇಲಾಖೆಯ ಪರವಾಗಿ ವಾದ ಮಂಡಿಸುವ ಸಲುವಾಗಿ ಮಂಡನಾಧಿಕಾರಿಯನ್ನು ನೇಮಕ ಮಾಡಲು, ಈ ಬಗ್ಗೆ ಕಾನೂನು ಇಲಾಖೆಯೊಡನೆ ಸಮಾಲೋಚಿಸಿ ಈ ಮುಂದಿನಂತೆ ಸರ್ಕಾರವು ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 490 ಪಿಪಿಇ 2007, ಬೆಂಗಳೂರು, ದಿನಾಂಕ: 9ನೇ ಮಾರ್ಚ್ 2009.

ಮೇಲೆ ವಿವರಿಸಿರುವ ಹಿನ್ನಲೆಯಲ್ಲಿ, ಶ್ರೀ ಎ.ಕೆ. ಜಾಡಗೌಡ, ಸಹಾಯಕ ಸರ್ಕಾರಿ ಅಭಿಯೋಜಕರು, ಖಾನಾಪುರ, ಇವರ ಜನ್ಮ ದಿನಾಂಕವನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ (ವಯೋ ನಿರ್ಧಾರ) ಅಧಿನಿಯಮ 1974ರ ನಿಯಮ 5ರ ಉಪನಿಯಮ 1ರನ್ವಯ ತಿದ್ದುಪಡಿ ಮಾಡುವ ಸಲುವಾಗಿ ಸದರಿ ಅಧಿನಿಯಮದ ನಿಯಮ 5ರ ಉಪನಿಯಮ 3ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪ್ರಕರಣದ ವಿಚಾರಣಾಧಿಕಾರಿಗಳ ಮುಂದೆ ಒಳಾಡಳಿತ ಇಲಾಖೆಯ ಪರವಾಗಿ ಪ್ರಕರಣವನ್ನು ಮಂಡಿಸಲು ಮತ್ತು ವಾದ ಮಾಡಲು ಶ್ರೀ ಜಿ.ಎ. ಮೂಲಿಮನಿ, ಸಹಾಯಕ ವಾದೇಕ್ಷಕರು ಮತ್ತು ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ(ವ್ಯಾಜ್ಯ), ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ, ಪ್ರಕರಣದ ವಿಚಾರಣೆಗೆ ಆದೇಶಿಸಿದೆ.

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಅನಧಿಕೃತ ಟಿಪ್ಪಣಿಯ ಸಂಖ್ಯೆ: ಲಾ 155 ಎಲ್‌ಎಜಿ 2008, ದಿನಾಂಕ: 15.12.2008ರನ್ವಯ ಮಂಡನಾಧಿಕಾರಿಯನ್ನು ನೇಮಿಸಿ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 862

ಕೆ.ಸಿ.ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ, (ಕಾ ಮತ್ತು ಸು ಹಾಗೂ ಕಾಫಿಪೋಸಾ ಮತ್ತು ಅಭಿಯೋಗಗಳು)

ವಿಷಯ: ಶ್ರೀ ಎಸ್.ಬಿ. ಹಾವೇರಿ, ಸಹಾಯಕ ಸರ್ಕಾರಿ ಅಭಿಯೋಜಕರು, 2ನೇ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೆಳಗಾವಿ, ಇವರ ಜನ್ಮ ದಿನಾಂಕದ ಪರಿಷ್ಕರಣೆಗಾಗಿ ಮಂಡನಾಧಿಕಾರಿಯ ನೇಮಕ ಹಾಗೂ ವಿಚಾರಣೆಗೆ ಆದೇಶಿಸುವ ಕುರಿತು.

ಓದಲಾಗಿದೆ :
1 ಸರ್ಕಾರದ ಆದೇಶ ಸಂ: ಒಇ 529 ಪಿಪಿಇ 2006, ದಿನಾಂಕ: 13.02.2007.
2 ಸದರಿ ಅಧಿಕಾರಿಯ ಮೇಲ್ಮನವಿ, ದಿನಾಂಕ: 02.06.2007.
3 ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರದ ಸಂ: ಡಿಪಿಎನ್/ಕೇಂಸ/ವಿವ/28/97–98, ದಿನಾಂಕ: 24.07.2007.
4 ಸರ್ಕಾರದ ಅಧಿಸೂಚನೆಯ ಸಂ:ಡಿಪಿಎಆರ್/13/ಎಸ್‌ಎಸ್‌ಆರ್/94, ದಿನಾಂಕ:15.03.1994

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಎಸ್.ಬಿ. ಹಾವೇರಿ, ಸಹಾಯಕ ಸರ್ಕಾರಿ ಅಭಿಯೋಜಕರು, 2ನೇ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೆಳಗಾವಿ, ಇವರ ಜನ್ಮ ದಿನಾಂಕವನ್ನು ಕರ್ನಾಟಕ ಸರ್ಕಾರಿ ನೌಕರರ (ವಯೋನಿರ್ಧಾರ) (ತಿದ್ದುಪಡಿ) ಕಾಯ್ದೆ 1982ರ ಕಲಂ3ರ ಉಪಕಲಂ–2ರನ್ವಯ, ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯ ನಮೂದಿನಂತೆ 01.05.1964 ಎಂದು ಸರ್ಕಾರವು ಒಪ್ಪಿರುತ್ತದೆ.

ಮೇಲೆ (2)ರಲ್ಲಿ ಓದಲಾದ ಮೇಲ್ಮನವಿಯಲ್ಲಿ, ಸದರಿ ಅಧಿಕಾರಿಯು ಅವರ ನಿಜವಾದ ಜನ್ಮ ದಿನಾಂಕವು ಹಾವೇರಿ ತಹಶೀಲ್ದಾರರ ಕಾರ್ಯಾಲಯದಲ್ಲಿನ ನೋಂದಣಿಯನ್ವಯ ನೀಡಿರುವ ಜನನ ಪ್ರಮಾಣ ಪತ್ರದಲ್ಲಿರುವಂತೆ 10.06.1965 ಆಗಿರುತ್ತದೆ ಎಂದು, ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರರವರು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ (ವಯೋ ನಿರ್ಧಾರ) ಅಧಿನಿಯಮ 1974ರ ಕಲಂ 5ರ ಉಪನಿಯಮ 1 ಮತ್ತು 2ರ ಹಿನ್ನಲೆಯಲ್ಲಿ, ಮೇಲೆ (2)ರಲ್ಲಿ ಓದಲಾದ ಮೇಲ್ಮನವಿಯನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ.

ಮೇಲೆ (4)ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ (ವಯೋ ನಿರ್ಧಾರ) ಅಧಿನಿಯಮ 1974ರ ಕಲಂ 5ರ ಉಪನಿಯಮ 3ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಇಂತಹ ಪ್ರಕರಣಗಳ ಇತ್ಯರ್ಥಕ್ಕಾಗಿ ಕಾನೂನು ಇಲಾಖೆಯ ವಾದೇಕ್ಷಕರು ಹಾಗೂ ಪದನಿಮಿತ್ತ ಸರ್ಕಾರ ಉಪಕಾರ್ಯದರ್ಶಿ ಮಟ್ಟದ ಅಧಿಕಾರಿಯನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿದೆ.

ಆದ್ದರಿಂದ, ಪ್ರಕರಣದ ವಿಚಾರಣೆಗೆ ಹಾಗೂ ಒಳಾಡಳಿತ ಇಲಾಖೆಯ ಪರವಾಗಿ ವಾದ ಮಂಡಿಸುವ ಸಲುವಾಗಿ ಮಂಡನಾಧಿಕಾರಿಯನ್ನು ನೇಮಕ ಮಾಡಲು, ಈ ಬಗ್ಗೆ ಕಾನೂನು ಇಲಾಖೆಯೊಡನೆ ಸಮಾಲೋಚಿಸಿ ಈ ಮುಂದಿನಂತೆ ಸರ್ಕಾರವು ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 414 ಪಿಪಿಇ 2007, ಬೆಂಗಳೂರು, ದಿನಾಂಕ: 9ನೇ ಮಾರ್ಚ್ 2009.

ಮೇಲೆ ವಿವರಿಸಿರುವ ಹಿನ್ನಲೆಯಲ್ಲಿ, ಶ್ರೀ ಎಸ್.ಬಿ. ಹಾವೇರಿ, ಸಹಾಯಕ ಸರ್ಕಾರಿ ಅಭಿಯೋಜಕರು, 2ನೇ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೆಳಗಾವಿ, ಇವರ ಜನ್ಮ ದಿನಾಂಕವನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ (ವಯೋ ನಿರ್ಧಾರ) ಅಧಿನಿಯಮ 1974ರ ನಿಯಮ 5ರ ಉಪನಿಯಮ 1ರನ್ವಯ ತಿದ್ದುಪಡಿ ಮಾಡುವ ಸಲುವಾಗಿ ಸದರಿ ಅಧಿನಿಯಮದ ನಿಯಮ 5ರ ಉಪನಿಯಮ 3ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪ್ರಕರಣದ ವಿಚಾರಣಾಧಿಕಾರಿಗಳ ಮುಂದೆ ಒಳಾಡಳಿತ ಇಲಾಖೆಯ ಪರವಾಗಿ ಪ್ರಕರಣವನ್ನು ಮಂಡಿಸಲು ಮತ್ತು ವಾದ ಮಾಡಲು ಶ್ರೀ ಜಿ.ಎ. ಮೂಲಿಮನಿ, ಸಹಾಯಕ ವಾದೇಕ್ಷಕರು ಮತ್ತು ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ(ವ್ಯಾಜ್ಯ), ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ, ಪ್ರಕರಣದ ವಿಚಾರಣೆಗೆ ಆದೇಶಿಸಿದೆ.

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಅನಧಿಕೃತ ಟಿಪ್ಪಣಿಯ ಸಂಖ್ಯೆ: ಲಾ 156 ಎಲ್‌ಎಜಿ 2008, ದಿನಾಂಕ: 15.12.2008ರನ್ವಯ ಮಂಡನಾಧಿಕಾರಿಯನ್ನು ನೇಮಿಸಿ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 863

ಕೆ.ಸಿ.ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ, (ಕಾ ಮತ್ತು ಸು ಹಾಗೂ ಕಾಫಿಪೋಸಾ ಮತ್ತು ಅಭಿಯೋಗಗಳು)

ವಿಷಯ: ಶ್ರೀ ಎಸ್.ವಿ. ಪಾಟೀಲ್, ಸಹಾಯಕ ಸರ್ಕಾರಿ ಅಭಿಯೋಜಕರು, 1ನೇ ಜೆ.ಎಂ.ಎಫ್.ಸಿ. ನ್ಯಾಯಾಲಯ, ದಾವಣಗೆರೆ ಇವರ ಜನ್ಮ ದಿನಾಂಕದ ಪರಿಷ್ಕರಣೆಗಾಗಿ ವಿಚಾರಣೆಗೆ ಆದೇಶಿಸುವ ಹಾಗೂ ಮಂಡನಾಧಿಕಾರಿಯ ನೇಮಿಸುವ ಕುರಿತು.

ಓದಲಾಗಿದೆ :

1 ಸರ್ಕಾರದ ಆದೇಶ ಸಂ: ಒಇ 529 ಪಿಪಿಇ 2006, ದಿನಾಂಕ: 13.02.2007.

2 ಸದರಿ ಅಧಿಕಾರಿಯ ಮೇಲ್ಮನವಿ, ದಿನಾಂಕ: 08.01.2008.

3 ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರದ ಸಂ: ಡಿಪಿಎನ್/ ಕೇಂಸ/ ವಿವ/29/97–98, ದಿನಾಂಕ: 01.03.2008.

4 ಸರ್ಕಾರದ ಅಧಿಸೂಚನೆಯ ಸಂ:ಡಿಪಿಎಆರ್/13/ಎಸ್‌ಎಸ್‌ಆರ್/94, ದಿನಾಂಕ:15.03.1994

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಎಸ್.ವಿ. ಪಾಟೀಲ್, ಸಹಾಯಕ ಸರ್ಕಾರಿ ಅಭಿಯೋಜಕರು, 1ನೇ ಜೆ.ಎಂ.ಎಫ್.ಸಿ. ನ್ಯಾಯಾಲಯ, ದಾವಣಗೆರೆ, ಇವರ ಜನ್ಮ ದಿನಾಂಕವನ್ನು ಕರ್ನಾಟಕ ಸರ್ಕಾರಿ ನೌಕರರ (ವಯೋನಿರ್ಧಾರ) (ತಿದ್ದುಪಡಿ) ಕಾಯ್ದೆ 1982ರ ಕಲಂ3ರ ಉಪಕಲಂ–2ರನ್ವಯ, ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯ ನಮೂದಿನಲ್ಲಿದ್ದಂತೆ 21.07.1962 ಎಂದು ಸರ್ಕಾರವು ಒಪ್ಪಿರುತ್ತದೆ.

ಮೇಲೆ (2)ರಲ್ಲಿ ಓದಲಾದ ಮೇಲ್ಮನವಿಯಲ್ಲಿ, ಸದರಿ ಅಧಿಕಾರಿಯು ಅವರ ನಿಜವಾದ ಜನ್ಮ ದಿನಾಂಕವು ಹಾವೇರಿ ತಹಶೀಲ್ದಾರರ ಕಾರ್ಯಾಲಯದಲ್ಲಿನ ನೋಂದಣಿಯನ್ವಯ ನೀಡಿರುವ ಜನನ ಪ್ರಮಾಣ ಪತ್ರದಲ್ಲಿರುವಂತೆ 16.09.1963 ಆಗಿರುತ್ತದೆ ಎಂದು, ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರರವರು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ (ವಯೋ ನಿರ್ಧಾರ) ಅಧಿನಿಯಮ 1974ರ ಕಲಂ 5ರ ಉಪನಿಯಮ 1 ಮತ್ತು 2ರ ಹಿನ್ನಲೆಯಲ್ಲಿ, ಮೇಲೆ (2)ರಲ್ಲಿ ಓದಲಾದ ಮೇಲ್ಮನವಿಯ ಬಗ್ಗೆ ಸರ್ಕಾರಕ್ಕೆ ಕಳುಹಿಸಿದ್ದಾರೆ.

ಮೇಲೆ (4)ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ (ವಯೋ ನಿರ್ಧಾರ) ಅಧಿನಿಯಮ 1974ರ ಕಲಂ 5ರ ಉಪನಿಯಮ 3ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಇಂತಹ ಪ್ರಕರಣಗಳ ಇತ್ಯರ್ಥಕ್ಕಾಗಿ ಕಾನೂನು ಇಲಾಖೆಯ ವಾದೇಕ್ಷಕರು ಹಾಗೂ ಪದನಿಮಿತ್ತ ಸರ್ಕಾರ ಉಪಕಾರ್ಯದರ್ಶಿ ಮಟ್ಟದ ಅಧಿಕಾರಿಯನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿದೆ.

ಆದ್ದರಿಂದ, ಪ್ರಕರಣದ ವಿಚಾರಣೆಗೆ ಹಾಗೂ ಒಳಾಡಳಿತ ಇಲಾಖೆಯ ಪರವಾಗಿ ವಾದ ಮಂಡಿಸುವ ಸಲುವಾಗಿ ಮಂಡನಾಧಿಕಾರಿಯನ್ನು ನೇಮಕ ಮಾಡಲು, ಈ ಬಗ್ಗೆ ಕಾನೂನು ಇಲಾಖೆಯೊಡನೆ ಸಮಾಲೋಚಿಸಿ ಈ ಮುಂದಿನಂತೆ ಸರ್ಕಾರವು ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 189 ಪಿಪಿಇ 2008, ಬೆಂಗಳೂರು, ದಿನಾಂಕ: 9ನೇ ಮಾರ್ಚ್ 2009.

ಮೇಲೆ ವಿವರಿಸಿರುವ ಹಿನ್ನಲೆಯಲ್ಲಿ, ಶ್ರೀ ಎಸ್.ವಿ. ಪಾಟೀಲ್, ಸಹಾಯಕ ಸರ್ಕಾರಿ ಅಭಿಯೋಜಕರು, 1ನೇ ಜೆ.ಎಂ.ಎಫ್.ಸಿ. ನ್ಯಾಯಾಲಯ, ದಾವಣಗೆರೆ ಇವರ ಜನ್ಮ ದಿನಾಂಕವನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ (ವಯೋ ನಿರ್ಧಾರ) ಅಧಿನಿಯಮ 1974ರ ನಿಯಮ 5ರ ಉಪನಿಯಮ 1ರನ್ವಯ ತಿದ್ದುಪಡಿ ಮಾಡುವ ಸಲುವಾಗಿ ಸದರಿ ಅಧಿನಿಯಮದ ನಿಯಮ5ರ ಉಪನಿಯಮ 3ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪ್ರಕರಣದ ವಿಚಾರಣಾಧಿಕಾರಿಗಳ ಮುಂದೆ ಒಳಾಡಳಿತ ಇಲಾಖೆಯ ಪರವಾಗಿ ಪ್ರಕರಣವನ್ನು ಮಂಡಿಸಲು ಮತ್ತು ವಾದ ಮಾಡಲು ಶ್ರೀ ಜೆ.ಎ. ಮೂಲಿಮನಿ, ಸಹಾಯಕ ವಾದೇಕ್ಷಕರು ಮತ್ತು ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ(ವ್ಯಾಜ್ಯ), ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ, ಪ್ರಕರಣದ ವಿಚಾರಣೆಗೆ ಆದೇಶಿಸಿದೆ.

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಅನಧಿಕೃತ ಟಿಪ್ಪಣಿಯ ಸಂಖ್ಯೆ: ಲಾ 153 ಎಲ್‌ಎಜಿ 2008, ದಿನಾಂಕ: 15.12.2008ರನ್ವಯ ಮಂಡನಾಧಿಕಾರಿಯನ್ನು ನೇಮಿಸಿ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 864

ಕೆ.ಸಿ.ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ, (ಕಾ ಮತ್ತು ಸು ಹಾಗೂ ಕಾಫಿಪೋಸಾ ಮತ್ತು ಅಭಿಯೋಗಗಳು)

ವಿಷಯ: ಶ್ರೀ ಎಲ್.ಎಸ್. ಸುಳ್ಳದ್, ಸಹಾಯಕ ಅಭಿಯೋಗ ನಿರ್ದೇಶಕರು, ಆರಕ್ಷಕ ಆಯುಕ್ತರ ಕಛೇರಿ, ಹುಬ್ಬಳ್ಳಿ–ಧಾರವಾಡ, ಇವರ ವೇತನವನ್ನು ಶ್ರೀ ಎಂ.ಆರ್. ಬನ್ನಿಹಟ್ಟಿ ಇವರ ವೇತನಕ್ಕೆ ಸಮಾನಗೊಳಿಸುವ ಕುರಿತು.

ಓದಲಾಗಿದೆ : 1 ಸರ್ಕಾರದ ಅಧಿಸೂಚನೆ–II ಸಂ: ಲಾ 161 ಪಿಪಿಇ 86, ದಿನಾಂಕ: 24.07.1989.

2 ಸದರಿ ಅಧಿಕಾರಿಯವರ ಮನವಿ ದಿನಾಂಕ: 15.02.2008.

3 ಮಹಾಲೇಖಪಾಲರ ಕಛೇರಿಯ ಪತ್ರದ ಸಂ: ಜಿಇ13/ಜೆ1/08–09/215, ದಿನಾಂಕ: 26.06.2008.

4 ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರ ಸಂ: ಡಿಪಿಎನ್/ಲೆಕ್ಕ–1/422/2007–08, ದಿನಾಂಕ: 08.09.2008.

ಪ್ರಸ್ತಾವನೆ:

ಶ್ರೀ ಎಲ್.ಎಸ್. ಸುಳ್ಳದ್, ಸಹಾಯಕ ಅಭಿಯೋಗ ನಿರ್ದೇಶಕರು, ಆರಕ್ಷಕ ಆಯುಕ್ತರ ಕಛೇರಿ, ಹುಬ್ಬಳ್ಳಿ-ಧಾರವಾಡ ಮತ್ತು ಶ್ರೀ ಎಂ.ಆರ್. ಬನ್ನಿಹಟ್ಟಿ, ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಬೆಂಗಳೂರು, ಇವರುಗಳು ಮೇಲೆ (1)ರಲ್ಲಿ ಓದಲಾದ ದಿನಾಂಕ:24.07.1989ರ ಸರ್ಕಾರದ ಅಧಿಸೂಚನೆಯನ್ವಯ ಕ್ರಮವಾಗಿ ಕ್ರ.ಸಂ:25 ಮತ್ತು ಕ್ರ.ಸಂ:38ರಲ್ಲಿ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ನೇರ ನೇಮಕಾತಿ ಹೊಂದಿರುತ್ತಾರೆ.

ಮೇಲೆ ಓದಲಾದ (2)ರ ಮನವಿ ಪತ್ರದಲ್ಲಿ ದಿನಾಂಕ: 30.07.2005ರಿಂದ ಸದರಿಯವರ ಹಾಗೂ ಜೇಷ್ಠತೆಯಲ್ಲಿ ಇವರಿಗಿಂತ ಕಿರಿಯರಾಗಿರುವ ಶ್ರೀ ಎಂ.ಆರ್. ಬನ್ನಿಹಟ್ಟಿರವರ ವೇತನದ ನಡುವೆ ಒಂದು ಹಂತದ ವ್ಯತ್ಯಾಸ ಉಂಟಾಗಿರುತ್ತದೆ. ಆದ್ದರಿಂದ, ಶ್ರೀ ಸುಳ್ಳದ್‌ರವರು ಅವರ ವೇತನವನ್ನು ದಿನಾಂಕ: 30.07.2005ರಂದು ರೂ.17,700-00ಗಳಿಗೆ ನಿಗಧಿಗೊಳಿಸಿ, ವಾರ್ಷಿಕ ವೇತನ ಬಡ್ತಿಯ ದಿನಾಂಕವಾದ 01.08.2005ಕ್ಕೆ ರೂ.18,150-00ಗಳಿಗೆ ವೇತನವನ್ನು ನಿಗಧಿ ಪಡಿಸಬೇಕೆಂದು ಕೋರಿರುತ್ತಾರೆ.

ಮೇಲೆ (3)ರಲ್ಲಿ ಓದಲಾದ ಮಹಾಲೇಖಪಾಲರ ದಿನಾಂಕ:26.06.2008ರ ಪತ್ರದಲ್ಲಿ ದಿನಾಂಕ: 30.07.2005ರಂದು ಕಿರಿಯ ಅಧಿಕಾರಿಯಾದ ಶ್ರೀ ಎಂ.ಆರ್. ಬನ್ನಿಹಟ್ಟಿರವರಿಗೆ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ಮುಂಬಡ್ತಿ ದೊರೆತ್ತಿದ್ದರಿಂದ ಅವರ ವೇತನವನ್ನು ರೂ.17,700-00ಗಳಿಗೆ ನಿಗದಿಪಡಿಸಲಾಗಿದೆ. ದಿನಾಂಕ:01.08.2005ರಂದು ಶ್ರೀ ಎಲ್.ಎಸ್. ಸುಳ್ಳದ್ ಮತ್ತು ಶ್ರೀ ಎಂ.ಆರ್. ಬನ್ನಿಹಟ್ಟಿರವರಿಗೆ ವಾರ್ಷಿಕ ವೇತನ ಬಡ್ತಿಯನ್ನು ನೀಡುವ ಮೂಲಕ ಇವರುಗಳ ವೇತನವನ್ನು ಕ್ರಮವಾಗಿ ರೂ.17,700-00ಗಳಿಗೆ ಮತ್ತು ರೂ.18,150-00ಗಳಿಗೆ ನಿಗಧಿಪಡಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಮೇಲೆ (4)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು, ಇವರು ಶ್ರೀ ಎಲ್.ಎಸ್. ಸುಳ್ಳದ್ ಮತ್ತು ಶ್ರೀ ಎಂ.ಆರ್. ಬನ್ನಿಹಟ್ಟಿ ಇವರುಗಳು ಮೇಲೆ (1)ರಲ್ಲಿ ಓದಲಾದ ದಿನಾಂಕ:24.07.1989ರ ಸರ್ಕಾರದ ಅಧಿಸೂಚನೆಯನ್ವಯ ಇಲಾಖೆಯಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ನೇರ ನೇಮಕ ಹೊಂದಿರುತ್ತಾರೆ. ದಿನಾಂಕ:1.1.2007ರಲ್ಲಿದ್ದಂತೆ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು / ಸಹಾಯಕ ಅಭಿಯೋಗ ನಿರ್ದೇಶಕರ ಜೇಷ್ಠತಾ ಪಟ್ಟಿಯಲ್ಲಿ ಕ್ರಮವಾಗಿ ಕ್ರ.ಸಂ: 62 ಕ್ರ.ಸಂ: 77 ಆಗಿದ್ದು, ಶ್ರೀ ಎಂ.ಆರ್. ಬನ್ನಿಹಟ್ಟಿರವರು ಶ್ರೀ ಎಲ್.ಎಸ್. ಸುಳ್ಳದ್‌ರವರಿಗಿಂತ ಜೇಷ್ಠತೆಯಲ್ಲಿ ಕಿರಿಯವರಾಗಿರುತ್ತಾರೆ. ಶ್ರೀ ಎಂ.ಆರ್. ಬನ್ನಿಹಟ್ಟಿರವರಿಗೆ ಯಾವುದೇ ಬಡ್ತಿ ಇಲ್ಲದೆ ನಿರಂತರವಾಗಿ

3	ಶ್ರೀ ಎಸ್. ಪಾಲಯ್ಯ ಹಿರಿಯ ಶ್ರೇಣಿ ಜಂಟಿ ನಿರ್ದೇಶಕರು (ಆಡಳಿತ), ತೋಟಗಾರಿಕೆ ಇಲಾಖೆ ಬೆಂಗಳೂರು	ಮುಖ್ಯ ಆಡಳಿತಾಧಿಕಾರಿಗಳು, ಕಾವೇರಿ ನೀರಾವರಿ ನಿಗಮ ಮೈಸೂರು-ಶ್ರೀ ಹೆಚ್.ಟಿ. ಚಂದ್ರಶೇಖರ್ ಇವರ ಸ್ಥಾನದಲ್ಲಿ
4	ಶ್ರೀ ಪಿ. ಸುಬ್ರಹ್ಮಣ್ಯಂ, ಹಿರಿಯ ಶ್ರೇಣಿ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಗದಗ ಜಿಲ್ಲೆ, ಗದಗ	ಮುಖ್ಯ ಆಡಳಿತಾಧಿಕಾರಿಗಳು, ಸಂಜಯ್ ಗಾಂಧಿ ಅಪಘಾತ ಮತ್ತು ಪುನರ್ವಸತಿ ಆಸ್ಪತ್ರೆ ಬೆಂಗಳೂರು-ಖಾಲಿ ಹುದ್ದೆಗೆ
5	ಶ್ರೀ ಸಿ.ಎಂ. ನೂರಮನ್ಸೂರ, ಹಿರಿಯ ಶ್ರೇಣಿ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಹಾವೇರಿ ಜಿಲ್ಲೆ, ಹಾವೇರಿ	ಯೋಜನಾಧಿಕಾರಿ, ಕರ್ನಾಟಕ ಬಾಲ ವಿಕಾಸ ಅಕಾಡೆಮಿ, ಧಾರವಾಡ-ಖಾಲಿ ಹುದ್ದೆಗೆ ನೇಮಿಸಲು ಇವರ ಸೇವೆಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವಶಕ್ಕೆ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 682

ಎಚ್.ಆರ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-2)

ಅಧಿಸೂಚನೆ

ಸಂಖ್ಯೆ: ಸಿಆಸುಇ 12 ಆಸೇನಿ 2009, ಬೆಂಗಳೂರು, ದಿನಾಂಕ: 26ನೇ ಮೇ 2009

ಅಧಿಸೂಚನೆ ಸಂಖ್ಯೆ :ಸಿಆಸುಇ 20 ಆಸೇನಿ 2005 ದಿ:17.9.05 ರನ್ವಯ ದಿ:31.12.06 ರಂದು 58 ವರ್ಷಗಳ ವಯೋಮಿತಿ ತಲುಪಿ ನಿವೃತ್ತಿ ಹೊಂದಿರುವ ಶ್ರೀ ಬಿ.ಎಫ್. ತಳವಾರ್ ಕೆ.ಎ.ಎಸ್ (ಕಿರಿಯ ಶ್ರೇಣಿ) ಅಧಿಕಾರಿ ಇವರಿಗೆ ಸುತ್ತೋಲೆ ಸಂಖ್ಯೆ:ಆಇ 15 ಎಸ್‌ಆರ್‌ಎಸ್ 97 ದಿ:20.9.97 ರನ್ವಯ ನಿವೃತ್ತಿ ದಿನಾಂಕದಂದು ಅವರ ಹಕ್ಕಿನಲ್ಲಿರುವ 240 ದಿನಗಳ (ಇನ್ನೂರು ನಲವತ್ತು ದಿನಗಳು ಮಾತ್ರ) ಗಳಿಕೆ ರಜೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು 118ಎ(1) ಹಾಗೂ ಉಪ ನಿಯಮ (ಎ)(4) ರನ್ವಯ ನಗಧಿಕರಣಗೊಳಿಸಲು ಮಂಜೂರು ನೀಡಿದೆ.

ಶ್ರೀ ಬಿ.ಎಫ್. ತಳವಾರ್ ನಿವೃತ್ತ ಕೆ.ಎ.ಎಸ್. (ಕಿರಿಯ ಶ್ರೇಣಿ) ಅಧಿಕಾರಿ ಇವರ ವಿರುದ್ಧ ಇದ್ದ ಎರಡು ಇಲಾಖಾ ವಿಚಾರಣೆಗಳಲ್ಲಿ ಆರೋಪ ಮುಕ್ತರಾಗಿದ್ದು, ಈಗ ಅವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ, ಕ್ರಿಮಿನಲ್ ಮೊಕದ್ದಮೆ ಬಾಕಿ ಇರುವುದಿಲ್ಲವೆಂದು ದೃಢೀಕರಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 683

ಎಚ್.ಆರ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-2)

HIGH COURT OF KARNATAKA

NOTIFICATION

No: HCE 191/2009, Bangalore, dated: 28th May, 2009

Smt P. Vijayalakshmi, Assistant Registrar of this Office is permitted to retire from service voluntarily w.e.f. the afternoon of 31.5.2009 under Rule 285(1)(a) of KCSRs.

By order of Hon'ble the Chief Justice ,

R.B. BUDIHAL

P.R. 684 Registrar General

HIGH COURT OF KARNATAKA

NOTIFICATION

No: HCE 224/2009, Bangalore, dated: 30th May, 2009

Sri B.S. Nanjundaiah, Section Officer of this Office is permitted to retire from service voluntarily w.e.f. the afternoon of 31.5.2009 under Rule 285(1)(a) of KCSRs.

By order of Hon'ble the Chief Justice ,

R.B. BUDIHAL

P.R. 685 Registrar General

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್‌ಆರ್ 2008(C–30) ಬೆಂಗಳೂರು, ದಿನಾಂಕ: 30ನೇ ಮೇ 2009

ಕರ್ನಾಟಕ ಪುರಸಭೆ ಕಾಯ್ದೆ 1964ರ ಪ್ರಕರಣ 352(1b)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅರಕಲಗೂಡು ಪಟ್ಟಣ ಪಂಚಾಯಿತಿಗೆ ಸದಸ್ಯರನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಿದೆ.

1. ಶ್ರೀಮತಿ ಶೋಭಾ ಕೋಂ ಶಿವಮೂರ್ತಿ, ಅರಕಲಗೂಡು
2. ಶ್ರೀ. ಶ್ರೀನಿವಾಸ ಬಿನ್ ಜಗನ್ನಾಥ್, ಅರಕಲಗೂಡು
3. ಶ್ರೀ ಮಹೇಶ್ ಬೂಪತಿ ಬಿನ್ ಲೇ: ದೇವಯ್ಯ, ಜೈಭೀಮನಗರ, ಅರಕಲಗೂಡು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 686 **ಸಿ.ಆರ್. ರವೀಂದ್ರ**

ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್‌ಆರ್ 2008(A–28) ಬೆಂಗಳೂರು, ದಿನಾಂಕ: 28ನೇ ಮೇ 2009

ಕರ್ನಾಟಕ ಪುರಸಭೆ ಕಾಯ್ದೆ 1964ರ ಪ್ರಕರಣ 11(1)(b)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಕೊಪ್ಪಳ ನಗರಸಭೆಗೆ ಸದಸ್ಯರನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಿದೆ.

1. ಶ್ರೀ ಶಿವಕುಮಾರ್ ಕೋಣಂಗಿ, ಸಿಂಪಿಲಿಂಗಣ್ಣ ರಸ್ತೆ, ಕೊಪ್ಪಳ
2. ಶ್ರೀ. ರಮೇಶ್ ಬಿನ್ ಜಾಗಿರದಾರ, ಕೋಟೆ, ಕೊಪ್ಪಳ
3. ಶ್ರೀಮತಿ ಹಂಪಮ್ಮ ಮೈನಳ್ಳಿ, ಆಜಾದ್ ವೃತ್ತ, ಕೊಪ್ಪಳ
4. ಶ್ರೀ. ದ್ಯಾಮಣ್ಣ ಮುಧೋಳ, ಕೋಟೆ ಕೊಪ್ಪಳ
5. ಶ್ರೀ ಹೇಮಂತ ತುಪ್ಪದ, ದಿವಟರ ಕಾಲೋನಿ ಕೊಪ್ಪಳ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 687 **ಸಿ.ಆರ್. ರವೀಂದ್ರ**

ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ

OFFICE OF THE CITY CIVIL COURT, BANGALORE

NOTIFICATION

No: ADM-I(E) /627/2009, Bangalore, dated: 28th May, 2009

Sri K.S. Jere, Asst Registrar, of City Civil Court, Bangalore is granted 7 days earned leave from 4.5.2009 to 10.5.2009 (bdi), on personal ground.

Sri R. Gurumurthy, Asst, Registrar, is placed in additional charge of Sri K.S. Jere, Asst, Registrar, City Civil Court, Bangalore, during the above leave period.

Sri K.S. Jere, Asst. Registrar, City Civil Court, Bangalore would have continued in the same post, but for proceedings on leave.

By order of the Prl. City Civil & Sessions Judge, Bangalore

REGISTRAR,

City Civil Court, Bangalore

P.R. 688

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಾಇ 10 ಐಡಿಎಂ 2008, ಬೆಂಗಳೂರು, ದಿನಾಂಕ: 26ನೇ ಮೇ 2009

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, (ಸೇವೆಗಳು-3) ಇವರ ಅಧಿಸೂಚನೆ ಸಂಖ್ಯೆ:ಸಿಆಸುಇ 22 ಸೇಉನ್ಯಾ 2009, ದಿನಾಂಕ:5.5.2009ರಲ್ಲಿ ಈ ಕೆಳಕಂಡ ಜಿಲ್ಲಾ ನ್ಯಾಯಾಧೀಶರನ್ನು ವರ್ಗಾಯಿಸಿ ಅವರ ಸೇವೆಯನ್ನು ಕಾರ್ಮಿಕ ಇಲಾಖೆಯ ವಶಕ್ಕೆ ನೀಡಿರುವುದರಿಂದ ಈ ಕೆಳಕಂಡಂತೆ ಮರು ನೇಮಕಾತಿ ಮಾಡಿ ಆದೇಶಿಸಿದೆ.

ಕ್ರ.ಸಂ	ಹೆಸರು /ಪದನಾಮ	ನೇಮಿಸಿದ ಸ್ಥಳ
1	ಶ್ರೀ ಪಾಂಡುರಂಗ ವಿ. ಸಿಂಗ್ರಿ, II ಅಡಿಷನಲ್ ಡಿಸ್ಟ್ರಿಕ್ಟ್ ಅಂಡ್ ಸೆಷನ್ಸ್ ಜಡ್ಜ್, ಬೆಳಗಾವಿ	ಪ್ರಿಸೈಡಿಂಗ್ ಆಫೀಸರ್, ಕಾರ್ಮಿಕ ನ್ಯಾಯಾಲಯ, ಚಿಕ್ಕಮಗಳೂರು (ಶ್ರೀ ಕೆ. ನಟರಾಜನ್‌ರವರ ವರ್ಗಾವಣೆಯಿಂದ ತೆರವಾದ ಹುದ್ದೆಗೆ)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಗೋವಿಂದಸ್ವಾಮಿ

ಪೀಠಾಧಿಕಾರಿ,

ಕಾರ್ಮಿಕ ಇಲಾಖೆ (ಕಾರಾವಿ ಯೋ (ವೈ) ಸೇವೆಗಳು)

ಪಿ.ಆರ್. 689

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 144 ವಾತೆಸಿ 2009, ಬೆಂಗಳೂರು, ದಿನಾಂಕ: 28ನೇ ಮೇ 2009

ದಿನಾಂಕ:17.2.2006ರ ಸರ್ಕಾರದ ಅಧಿಸೂಚನೆ ಸಂಖ್ಯೆ:ಆಇ 393 ವಾತೆಸಿ 2005ರಲ್ಲಿ ಖಾಯಂ ಪೂರ್ವ ಅವಧಿಯ ಮೇಲೆ ನೇಮಕಾತಿ ಮಾಡಲಾದ ಈ ಕೆಳಕಂಡ ವಾಣಿಜ್ಯ ತೆರಿಗೆ ಅಧಿಕಾರಿಗಳು ತಮ್ಮ ಖಾಯಂ ಪೂರ್ವ ಸೇವಾ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ) ನಿಯಮಾವಳಿ, 1977 ರ ನಿಯಮ 5(1)ಪ್ರಕಾರ ಅವರುಗಳ ಹೆಸರಿನ ಮುಂದೆ ಸೂಚಿಸಲಾದ ದಿನಾಂಕದಂದು ತೃಪ್ತಿಕರವಾಗಿ ಪೂರ್ಣಗೊಳಿಸಿರುತ್ತಾರೆಂದು ಸರ್ಕಾರವು ಈ ಮೂಲಕ ಘೋಷಿಸಿದೆ.

ಕ್ರ.ಸಂ	ಅಧಿಕಾರಿಗಳ ಹೆಸರು	ಖಾಯಂ ಪೂರ್ವ ಅವಧಿ ಪೂರ್ಣಗೊಂಡ ದಿನಾಂಕ
1	ಶ್ರೀ ರಂಗನಾಥ ಟಿ.	23.2.2008
2	ಶ್ರೀ ವೆಂಕಟೇಶ ಮೂರ್ತಿ ಟಿ.ಎಸ್.	21.2.2008
3	ಶ್ರಿ ಫಣಿರಾಜ್ ಡಿ.ಎ.	21.2.2008
4	ಶ್ರೀ ಭರತ್ ಕುಮಾರ್ ಹೆಗಡೆ	11.5.2008
5	ಶ್ರೀಮತಿ ಶಾರದ ಎಸ್.ಜೆ.	21.3.2008
6	ಶ್ರೀ ಶ್ರೀನಿವಾಸು ಆರ್.ಬಿ.	22.2.2008

7	ಶ್ರೀ ಚಂದ್ರಕಾಂತ ಎಂ. ಲೋಕರೆ	28.2.2008
8	ಶ್ರೀಮತಿ ರೇಷ್ಮ ಬಿ.	21.2.2008
9	ಶ್ರೀಮತಿ ಪಾಟೀಲ ಶಿವಲಿಂಗಮ್ಮ	21.2.2008
10	ಶ್ರೀ ಸದಾಶಿವರಾಜಶೇಖರ ಪಾಟೀಲ	21.2.2008

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 690

ಎಲ್.ಎಸ್. ವಾಸನ್

ಸರ್ಕಾರದ ಅಧೀನ ಕಾರ್ಯದರ್ಶಿ

ಆರ್ಥಿಕ ಇಲಾಖೆ (ವಾ.ತೆ–2& ಸಮನ್ವಯ)

ಅಧಿಸೂಚನೆ

ಸಂಖ್ಯೆ: ಆಇ 145 ವಾತೆಸಿ 2009, ಬೆಂಗಳೂರು, ದಿನಾಂಕ: 28ನೇ ಮೇ 2009

ದಿನಾಂಕ:17.2.2006ರ ಸರ್ಕಾರದ ಅಧಿಸೂಚನೆ ಸಂಖ್ಯೆ:ಆಇ 21 ವಾತೆಸಿ 2006ರಲ್ಲಿ ಖಾಯಂ ಪೂರ್ವ ಅವಧಿಯ ಮೇಲೆ ನೇಮಕಾತಿ ಮಾಡಲಾದ ಈ ಕೆಳಕಂಡ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರುಗಳು ತಮ್ಮ ಖಾಯಂ ಪೂರ್ವ ಸೇವಾ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ) ನಿಯಮಾವಳಿ, 1977 ರ ನಿಯಮ 5(1)ಪ್ರಕಾರ ಅವರುಗಳ ಹೆಸರಿನ ಮುಂದೆ ಸೂಚಿಸಲಾದ ದಿನಾಂಕದಂದು ತೃಪ್ತಿಕರವಾಗಿ ಪೂರ್ಣಗೊಳಿಸಿರುತ್ತಾರೆಂದು ಸರ್ಕಾರವು ಈ ಮೂಲಕ ಘೋಷಿಸಿದೆ.

ಕ್ರ.ಸಂ	ಅಧಿಕಾರಿಗಳ ಹೆಸರು	ಖಾಯಂ ಪೂರ್ವ ಅವಧಿ ಪೂರ್ಣಗೊಂಡ ದಿನಾಂಕ
1	ಶ್ರೀಮತಿ ಸುಕನ್ಯಾ ಜಿ. ನಾಯಕ	21.2.2008
2	ಶ್ರೀಮತಿ ಸುಮಾ. ಎಂ.ಡಿ	23.2.2008
3	ಶ್ರೀ ರಾಮಾನುಜಯ್ಯ. ಎಸ್.	23.2.2008
4	ಶ್ರೀಮತಿ ಮಂಜುಳ. ಎಂ.ಆರ್.	21.2.2006
5	ಶ್ರೀ ಬಿ.ಎಂ. ನಾಗರಾಜು.	28.2.2008
6	ಶ್ರೀ ವೀರೇಂದ್ರ ಪಾಟೀಲ್. ಹೆಚ್.	28.2.2008
7	ಶ್ರೀಮತಿ ಸವಿತ. ಎಸ್.ಜಿ	22.2.2008

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 691

ಎಲ್.ಎಸ್. ವಾಸನ್

ಸರ್ಕಾರದ ಅಧೀನ ಕಾರ್ಯದರ್ಶಿ

ಆರ್ಥಿಕ ಇಲಾಖೆ (ವಾ.ತೆ–2& ಸಮನ್ವಯ)

ಇಂಧನ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಇಎನ್ 65 ಸಮನ್ವಯ 2009, ಬೆಂಗಳೂರು, ದಿನಾಂಕ: 1ನೇ ಜೂನ್ 2009

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 75 ಎಸ್ಎಎಸ್ 2009 ದಿನಾಂಕ:28.5.2009ರಲ್ಲಿ ಡಾ: ಎಂ.ಎನ್. ಅಜಯ್ ನಾಗಭೂಷಣ ಭಾ.ಆ.ಸೇ (ಕೆಎನ್ 2004) ಇವರ ಸೇವೆಯನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಕ ಮಾಡಲು ಇಂಧನ ಇಲಾಖೆಯ ವಶಕ್ಕೆ ನೀಡಿರುತ್ತಾರೆ.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿ ಇದರ ಮೆಮೊರಾಂಡಂ ಆಫ್ ಅಸೋಸಿಯೇಷನ್ ಅಂಡ್ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನ ಆರ್ಟಿಕಲ್ 74 (ಬಿ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಡಾ:ಎಂ.ಎನ್. ಅಜಯ್ ನಾಗಭೂಷನ್ ಭಾ.ಆ.ಸೇ., ಇವರನ್ನು (ಶ್ರೀ ಮೊಹಮದ್ ಮೊಹೀಸಿನ ಇವರ ವರ್ಗಾವಣೆಯಿಂದ ತೆರವಾದ ಜಾಗಕ್ಕೆ) ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಕ ಮಾಡಲಾಗಿದೆ.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಮತ್ತು ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಇವುಗಳ ಮೆಮೊರ್ಯಾಂಡಮ್ ಆಫ್ ಅಸೋಸಿಯೇಷನ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನ ಆರ್ಟಿಕಲ್ 74(ಎ)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಡಾ: ಎಂ.ಎನ್. ಅಜಯ್ ನಾಗಭೂಷಣ ಭಾ.ಆ.ಸೇ., ಇವರನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಮತ್ತು ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಇವುಗಳ ನಿರ್ದೇಶಕರ ಮಂಡಳಿಯ ನಿರ್ದೇಶಕರನ್ನಾಗಿ (ಶ್ರೀ ಮೊಹಮದ್ ಮೊಹೀಸಿನ್ ಇವರ ವರ್ಗಾವಣೆಯಿಂದ ತೆರವಾದ ಜಾಗಕ್ಕೆ) ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಕ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 692

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಅಧಿಸೂಚನೆ

ಸಂಖ್ಯೆ: ಇಎನ್ 358 ಎನ್‌ಸಿಇ 2009, ಬೆಂಗಳೂರು, ದಿನಾಂಕ: 1ನೇ ಜೂನ್ 2009

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 108 ಎಸ್‌ಎಫ್‌ಪಿ 2008 ದಿನಾಂಕ:23.5.2009ರಲ್ಲಿ ಶ್ರೀ ಹೆಚ್.ಜಿ. ಶಿವಾನಂದ ಮೂರ್ತಿ ಭಾ.ಆ.ಸೇ., (ಕೆಎನ್–85) ಇವರ ಸೇವೆಯನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಕ ಮಾಡಲು ಇಂಧನ ಇಲಾಖೆಯ ವಶಕ್ಕೆ ನೀಡಲಾಗಿದೆ. ಅದರಂತೆ ಶ್ರೀ ಹೆಚ್.ಜಿ. ಶಿವಾನಂದ ಮೂರ್ತಿ ಭಾ.ಆ.ಸೇ., ಇವರನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಮೊಮೊರಾಂಡಂ ಆಫ್ ಅಸೋಸಿಯೇಷನ್ ಅಂಡ್ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನ ಆರ್ಟಿಕಲ್ 53 & 51 (ಎ)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ಹಾಗೂ ನಿರ್ದೇಶಕರುಗಳ ಮಂಡಳಿಯ ನಿರ್ದೇಶಕರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಕ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 693

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಅಪಜೀ 76 ಎಫ್‌ಪಿಸಿ 2009, ಬೆಂಗಳೂರು, ದಿನಾಂಕ: 29ನೇ ಮೇ 2009

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಸೂಚನೆ ಸಂಖ್ಯೆ:ಡಿಪಿಎಆರ್/108/ಎಸ್‌ಎಫ್‌ಪಿ/2008, ದಿನಾಂಕ:23.5.2009ರಲ್ಲಿ ಮುಖ್ಯ ಅರಣ್ಯ, ಸಂರಕ್ಷಣಾಧಿಕಾರಿಯಾಗಿ ಬಡ್ತಿ ನೀಡಿ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಗೆ ನೇಮಿಸಿರುವ ಶ್ರೀ ಪಿ.ಎಲ್. ಬೂದಿಹಾಳ, ಭಾ.ಅ.ಸೇ., ಇವರನ್ನು ಮುಖ್ಯ ಅರಣ್ಯ, ಸಂರಕ್ಷಣಾಧಿಕಾರಿಗಳು ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರನ್ನಾಗಿ ಕರ್ನಾಟಕ ಅರಣ್ಯ, ಅಭಿವೃದ್ಧಿ ನಿಗಮ ನಿಯಮಿತ, ಶಿವಮೊಗ್ಗ ಇಲ್ಲಿಗೆ ವರ್ಗಾವಣೆ ಮಾಡಿ ಮುಂದಿನ ಆದೇಶದವರೆಗೆ ಮರು ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 694

ಪಿ.ಆರ್. ಕಲಾವತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಛೇರಿ, ಕೋಲಾರ

ಅಧಿಸೂಚನೆ ಎಬಿ.ಎಂ.ಟಿ.ನಂ. 2279:2009, ಕೋಲಾರ, ದಿನಾಂಕ: 25ನೇ ಮೇ 2009

ಈ ಕಛೇರಿಯ ಮುಖ್ಯ ಆಡಳಿತಾಧಿಕಾರಿಗಳಾದ ಶ್ರೀ ಆರ್. ಚೌಡಪ್ಪ ರವರಿಗೆ ದಿನಾಂಕ:17.10.2008 ರಿಂದ 24.10.2008ರವರೆಗೆ (ಎರಡೂ ದಿನಗಳು ಸೇರಿ) 8 ದಿನಗಳ ಗಳಿಕೆ ರಜೆಯನ್ನು ಮತ್ತು ದಿನಾಂಕ:10.11.2008 ರಿಂದ 21.11.2008ರವರೆಗೆ (ಎರಡು ದಿನಗಳು ಸೇರಿ) 12 ದಿನಗಳ ಗಳಿಕೆ ರಜೆಯನ್ನು ಮಂಜೂರು ಮಾಡಿದೆ.

ಮಂಜೂರಾತಿ ನೀಡಿದ ಗಳಿಕೆ ರಜೆಯನ್ನು ಉಪಯೋಗಿಸಿಕೊಂಡ ನಂತರ ಶ್ರೀ ಆರ್. ಚೌಡಪ್ಪ ರವರನ್ನು ಈ ನ್ಯಾಯಾಲಯದ ಮುಖ್ಯ ಆಡಳಿತಾಧಿಕಾರಿಗಳ ಹುದ್ದೆಗೆ ಪುನರ್ ನೇಮಕ ಮಾಡಿದೆ.

ವಿ.ಎಂ. ಆರಾಧ್ಯ
ಪಿ.ಆರ್. 695 ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಛೇರಿ, ಕೋಲಾರ

ಅಧಿಸೂಚನೆ

ಎಬಿ.ಎಂ.ಟಿ.ನಂ. 2280:2009, ಕೋಲಾರ, ದಿನಾಂಕ: 30ನೇ ಮೇ 2009

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958 ನಿಯಮ 118 ರಡಿ ಈ ಕಛೇರಿಯ ಮುಖ್ಯ ಆಡಳಿತಾಧಿಕಾರಿಗಳಾದ ಶ್ರೀ ಆರ್. ಚೌಡಪ್ಪ ರವರಿಗೆ ದಿನಾಂಕ:1.6.2009ಕ್ಕೆ 240 ದಿನಗಳಿಗಿಂತ ಹೆಚ್ಚಿನ ಗಳಿಕೆ ರಜೆ ಇರುವುದರಿಂದ ದಿನಾಂಕ:2.5.2009 ರಿಂದ 31.5.2009ರವರೆಗೆ (ಎರಡು ದಿನಗಳು ಸೇರಿ) 30 ದಿನಗಳ ಗಳಿಕೆ ರಜೆಯನ್ನು 2009–2010 ನೇ ಬ್ಲಾಕ್ ಅವಧಿಯಲ್ಲಿ, ನಗಧೀಕರಣಕ್ಕಾಗಿ ಅಧ್ಯರ್ಪಿಸುವುದಕ್ಕೆ ಮಂಜೂರಾತಿಯನ್ನು ನೀಡಿದೆ.

ಅಧ್ಯರ್ಪಿಸಲಾದ ರಜೆಗೆ ಸಮನಾದ ನಗದನ್ನು ಅಧ್ಯರ್ಪಣೆಯ ಪ್ರತಿಯೊಂದು ದಿನಕ್ಕೆ ವೇತನದ 1/30ರ ದರದಲ್ಲಿ ಲೆಕ್ಕ ಹಾಕಿ ನೌಕರನು ಪಡೆಯುತ್ತಿದ್ದ ವೇತನಕ್ಕೆ ಸಂಬಂಧಪಟ್ಟಂತೆ ಲೆಕ್ಕ ಹಾಕಿ ಪಾವತಿಸತಕ್ಕದ್ದು.

ವಿ.ಎಂ. ಆರಾಧ್ಯ
ಪಿ.ಆರ್. 696 ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ

ಜಲಸಂಪನ್ಮೂಲ ಸಚಿವಾಲಯ

ಅಧಿಸೂಚನೆ

ಸಂಖ್ಯೆ:ಜಸಂಇ 15 ಸಿಯುಕೆ 2009, ಬೆಂಗಳೂರು, ದಿನಾಂಕ: 2ನೇ ಜೂನ್ 2009

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಸೂಚನೆ ಸಂಖ್ಯೆ:ಸಿಆಸುಇ 75 ಎಸ್ಎಎಸ್/2009 ದಿನಾಂಕ:28.5.2009ರಲ್ಲಿ ಶ್ರೀ ಮುನೀಶ್ ಮೌದಗೀಲ್, ಭಾ.ಆ.ಸೇ., (KN 99) ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ಇವರನ್ನು ಆಡಳಿತಾಧಿಕಾರಿಗಳು, ಕೃಷ್ಣ ಕಾಡಾ, ಭೀಮರಾಯನಗುಡಿ ಇಲ್ಲಿಗೆ ನೇಮಿಸಲು ಇವರ ಸೇವೆಯನ್ನು ಜಲ ಸಂಪನ್ಮೂಲ ಇಲಾಖೆಯ ವಶಕ್ಕೆ ನೀಡಲಾಗಿದೆ.

ಅದರಂತೆ ಶ್ರೀ ಮುನೀಶ್ ಮೌದಗೀಲ್, ಭಾ.ಆ.ಸೇ., ರವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಆಡಳಿತಾಧಿಕಾರಿಗಳು, ಕೃಷ್ಣಾ ಕಾಡಾ, ಭೀಮರಾಯನಗುಡಿ ಇಲ್ಲಿನ ಖಾಲಿ ಹುದ್ದೆಗೆ ಮರುಸ್ಥಳ ನಿಯುಕ್ತಿಗೊಳಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಪಿ.ಆರ್. 697 **ವೆಂಕಟೇಶ್**
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಕಾಡಾ)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ:ಸಿಆಸುಇ 84 ಎಸ್ಎಫ್ಪಿ 2009, ಬೆಂಗಳೂರು, ದಿನಾಂಕ: 4ನೇ ಜೂನ್ 2009

ದಿನಾಂಕ:14.5.2009ರ ಇದೇ ಸಮಸಂಖ್ಯೆಯ ಅಧಿಸೂಚನೆಯ ಮುಂದುವರಿಕೆಯಲ್ಲಿ ಶ್ರೀ ವಿ. ರಂಗಸ್ವಾಮಿ ಐ.ಎಫ್.ಎಸ್., ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ವೈದ್ಯಕೀಯ ಕಾರಣಗಳ ನೆಲೆಯಲ್ಲಿ ದಿನಾಂಕ:26.4.2009 ರಿಂದ 30.5.2009ರವರೆಗೆ 34 ದಿನಗಳ ಪರಿವರ್ತಿತ ರಜೆಯನ್ನು ಸರ್ಕಾರವು ಘಟನೋತ್ತರವಾಗಿ ಮಂಜೂರು ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆದೇನುಸಾರ ಮತ್ತು ಅವರ ಹೆಸರಿನಲ್ಲಿ
ಪಿ.ಆರ್. 700 **ಅಶೋಕ್ ಪಿ. ಅತ್ರೆ**
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–IV)

ಕರ್ನಾಟಕ ವಿಧಾನಸಭೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ವಿಸಸ/ಕವಿಸಸ/ಆ–1/ಅಸೂ.ಬಗ್ಗೆ/89/2007, ಬೆಂಗಳೂರು, ದಿನಾಂಕ: 4ನೇ ಜೂನ್ 2009

ವಿಷಯ: ವಿಧಾನಸಭೆಯ ಮಾನ್ಯ ವಿರೋಧ ಪಕ್ಷದ ನಾಯಕರ ಆಪ್ತ ಕಾರ್ಯದರ್ಶಿಯಾಗಿ ನಿಯೋಜನೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಎಸ್. ನರಸಿಂಹಯ್ಯ ಇವರನ್ನು ಸೇವೆಯಿಂದ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: ಅಧಿಸೂಚನೆ ಸಂಖ್ಯೆ:ವಿಸಸ/ಶಾರಶಾ./ವಿಪನಾ/21/2009, ದಿನಾಂಕ:1.6.2009

ಉಲ್ಲೇಖಿತ ಅಧಿಸೂಚನೆಯಲ್ಲಿ ತಿಳಿಸಿರುವಂತೆ ವಿಧಾನ ಸಭೆಯ ಮಾನ್ಯ ವಿರೋಧಪಕ್ಷದ ನಾಯಕರಾಗಿದ್ದ ಶ್ರೀ ಮಲ್ಲಿಕಾರ್ಜುನ ಖರ್ಗೆ ರವರು ದಿನಾಂಕ:28.5.2009ರಂದು ವಿಧಾನಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಿರುವ ಪ್ರಯುಕ್ತ ಅದೇ ದಿನಾಂಕದಿಂದ ಜಾರಿಗೆ ಬರುವಂತೆ ಮಾನ್ಯ ವಿರೋಧ ಪಕ್ಷದ ನಾಯಕರ ಅವಧಿಯು ಮುಕ್ತಾಯಗೊಂಡಿರುವುದರಿಂದ ಅವರ ಆಪ್ತ ಕಾರ್ಯದರ್ಶಿಯಾಗಿ ನಿಯೋಜನೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಎಸ್. ನರಸಿಂಹಯ್ಯ, ಕೆ.ಎ.ಎಸ್. (ಸೂಪರ್ ಟೈಂ ಸ್ಕೇಲ್) ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕೊಪ್ಪಳ ಜಿಲ್ಲಾ ಪಂಚಾಯಿತಿ ಇವರನ್ನು ದಿನಾಂಕ:4.6.2009ರ (ಅಪರಾಹ್ನದಿಂದ) ಜಾರಿಗೆ ಬರುವಂತೆ ನಿಯೋಜನೆ ಆಧಾರದ ಸೇವೆಯಿಂದ ಬಿಡುಗಡೆಗೊಳಿಸಲಾಗಿದೆ.

ಸಭಾಧ್ಯಕ್ಷರ ಆದೇಶಾನುಸಾರ

ಪಿ.ಆರ್. 703

ಹೆಚ್.ಎಸ್. ಜಗನ್ನಾಥ್
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಮಮಇ 292 ಎಸ್‌ಜಿಡಿ 2009, ಬೆಂಗಳೂರು, ದಿನಾಂಕ: 29ನೇ ಮೇ 2009

ಶ್ರೀ ಸಿ.ಎಂ. ನೂರಮನ್ಸೂರ, ಕೆ.ಎ.ಎಸ್., (ಹಿರಿಯ ಶ್ರೇಣಿ ಅಧಿಕಾರಿ), ಪ್ರಸ್ತುತ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಹಾವೇರಿ ಜಿಲ್ಲೆ, ಹಾವೇರಿ ಇವರ ಸೇವೆಯನ್ನು ಅಧಿಸೂಚನೆ ಸಂಖ್ಯೆ:29 ಆಸೇವ 2009 ದಿ:26.5.2009 ರನ್ವಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಶಕ್ಕೆ ನೀಡಿದ್ದು, ಸದರಿಯವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಯೋಜನಾಧಿಕಾರಿ, ಕರ್ನಾಟಕ ಬಾಲವಿಕಾಸ ಅಕಾಡೆಮಿ, ಧಾರವಾಡ ಇಲ್ಲಿ ಶ್ರೀಮತಿ ಶ್ರೀದೇವಿ ಪಿ. ಗದ್ದನಕೇರಿ ಇವರ ಸ್ಥಾನದಲ್ಲಿ ಸ್ಥಳ ನಿಯುಕ್ತಿ ಮಾಡಿ ಆದೇಶೀಸಿದೆ.

ಶ್ರೀಮತಿ ಶ್ರೀದೇವಿ ಪಿ. ಗದ್ದನಕೇರಿ, ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,ಧಾರವಾಡ ಇವರಿಗೆ ಸೂಕ್ತ ಸ್ಥಳ ನಿಯುಕ್ತಿ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 704

ಆರ್. ನರಸಿಂಹಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ–2(ಪ್ರಭಾರ),
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಾಇ 03 ಎಲ್‌ಇಟ 2009, ಬೆಂಗಳೂರು, ದಿನಾಂಕ: 27ನೇ ಮೇ 2009

ಕಾರ್ಮಿಕ ಇಲಾಖೆಯ ಸೋಮವಾರಪೇಟೆ ವೃತ್ತ, ಸೋಮವಾರಪೇಟೆ ಇಲ್ಲಿ ಹಿರಿಯ ಕಾರ್ಮಿಕ ನಿರೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಎಂ. ಆನಂದಮೂರ್ತಿ ಇವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 32ರಡಿಯಲ್ಲಿ ಕಾರ್ಮಿಕ ಅಧಿಕಾರಿ ಹುದ್ದೆಯ ಸ್ವತಂತ್ರ ಪ್ರಭಾರದಲ್ಲಿರಿಸಿ, ಪ್ರಸ್ತುತ ಉಡುಪಿ ಜಿಲ್ಲೆಯಲ್ಲಿ ಖಾಲಿ ಇರುವ ಕಾರ್ಮಿಕ ಅಧಿಕಾರಿ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 705

ಯು.ಎನ್. ನಾಗೇಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಸಂವಾಪ್ರ 30 ಪ್ರವಾನಿ 2009, ಬೆಂಗಳೂರು, ದಿನಾಂಕ:3ನೇ ಜೂನ್ 2009

ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 108 ಎಸ್ಎಫ್‌ಪಿ 2008, ದಿನಾಂಕ:23.5.2009ರಲ್ಲಿ ಶ್ರೀ ಸಂಜಯ್ ಮೋಹನ್ ಐ.ಎಫ್.ಎಸ್., ಅರಣ್ಯ., ಸಂರಕ್ಷಣಾಧಿಕಾರಿ, ಶಿವಮೊಗ್ಗ ಸರ್ಕಲ್, ಶಿವಮೊಗ್ಗ ಇವರಿಗೆ ಮುಂಬಡ್ತಿಯ ಮೇಲೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಕಾರ್ಯಕಾರಿ ನಿರ್ದೇಶಕರು [ಪ್ರಾಜೆಕ್ಟ್ ಅಂಡ್ ಬಿಸ್‌ನೆಸ್ ಡೆವಲಪ್‌ಮೆಂಟ್] ಎಂದು ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ ಇಲ್ಲಿಗೆ ಶ್ರೀ ಹರಿಕುಮಾರ್ ಝಾ, ಐ.ಎಫ್.ಎಸ್., ಇವರ ಸ್ಥಾನದಲ್ಲಿ ಪದೋನ್ನತಿಗೊಳಿಸಲಾದ ಹುದ್ದೆಯಲ್ಲಿ ನಿಯೋಜನೆ ಮೇಲೆ ನೇಮಿಸಲು ಇವರ ಸೇವೆಯನ್ನು ಕನ್ನಡ ಮತ್ತು ಸಂಸ್ಕೃತಿ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ವಶಕ್ಕೆ ನೀಡಲಾಗಿರುತ್ತದೆ.

ತತ್ಸಂಬಂಧದಲ್ಲಿ ಶ್ರೀ ಸಂಜಯ್ ಮೋಹನ್, ಐ.ಎಫ್.ಎಸ್., ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ಸರ್ಕಲ್, ಶಿವಮೊಗ್ಗ ಇವರನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಕಾರ್ಯಕಾರಿ ನಿರ್ದೇಶಕರು [ಪ್ರಾಜೆಕ್ಟ್ ಅಂಡ್ ಬಿಸ್‌ನೆಸ್ ಡೆವಲಪ್‌ಮೆಂಟ್], ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ ಇಲ್ಲಿಗೆ ಶ್ರೀ ಹರಿಕುಮಾರ್, ಝಾ ಐ.ಎಫ್.ಎಸ್., ಇವರ ವರ್ಗಾವಣೆಯಿಂದ ತೆರವಾದ ಹುದ್ದೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಮರು ನೇಮಕಾತಿ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 706 **ಎಸ್. ನಾರಾಯಣಪ್ಪ**

ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

ಇಂಧನ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಇಎನ್ 44 ಪಿಪಿಸಿ 2009, ಬೆಂಗಳೂರು, ದಿನಾಂಕ: 2ನೇ ಜೂನ್ 2009

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು ಇದರ ಮೆಮೊರ್‍ಯಾಂಡಮ್ ಆಫ್ ಅಸೋಸಿಯೇಷನ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನ ಆರ್ಟಿಕಲ್ 22 (1)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಎಂ., ನೆಲ್ಲೈಯಪ್ಪನ್, ನಿರ್ದೇಶಕರು (ಮಾನವ ಸಂಪನ್ಮೂಲ), ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಇವರು ದಿನಾಂಕ:21.3.2009 ರಂದು ಸ್ವಯಂ ನಿವೃತ್ತರಾಗಿ ಸೇವೆಯಿಂದ ಬಿಡುಗಡೆ ಹೊಂದಿರುತ್ತಾರೆ. ಆದುದರಿಂದ ಅಧಿಸೂಚನೆ ಸಂಖ್ಯೆ:ಇಎನ್ 24 ಸಮನ್ವಯ 2008 ದಿನಾಂಕ:15.3.2008ರಲ್ಲಿ ಇವರನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಇದರ ನಿರ್ದೇಶಕರ ಮಂಡಳಿಯ ನಿರ್ದೇಶಕರನ್ನಾಗಿ ನೇಮಕ ಮಾಡಿದ್ದನ್ನು ದಿನಾಂಕ:21.3.2009ರಿಂದ ಅನ್ವಯವಾಗುವಂತೆ ರದ್ದುಪಡಿಸಲಾಗಿದೆ.

ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್, ಬೆಂಗಳೂರು ಇದರ ಮೆಮೊರ್‍ಯಾಂಡಮ್ ಆಫ್ ಅಸೋಸಿಯೇಷನ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನ ಆರ್ಟಿಕಲ್ 93 (ಎ)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಎಸ್. ಶ್ರೀನಿವಾಸ್ ನಾಯಕ್, ನಿರ್ದೇಶಕರು (ವಾಣಿಜ್ಯ), ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಇವರು ದಿನಾಂಕ:24.3.2009 ರಂದು ಸೇವೆಯಿಂದ ಅಮಾನತ್ತುಗೊಂಡಿರುವುದರಿಂದ ಅಧಿಸೂಚನೆ ಸಂಖ್ಯೆ:ಇಎನ್ 75 ಸಮನ್ವಯ 2007 ದಿನಾಂಕ:24.11.2007ರಲ್ಲಿ ನಿರ್ದೇಶಕರು (ವಾಣಿಜ್ಯ) ಆಗಿ ಮಾಡಿರುವ ನೇಮಕಾತಿಯನ್ನು ದಿನಾಂಕ:24.3.2009 ರಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 707 **ಎಸ್.ಜೆ. ಸಂಪತ್ ಕುಮಾರ್**

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಕರ್ನಾಟಕ ವಿಧಾನಸಭೆ ಸಚಿವಾಲಯ

ಅಧಿಸೂಚನೆ ಸಂಖ್ಯೆ: ವಿಸಸ/ಕೆವಿಸಸ/ಆ-1/ಅಸೂ.ಬಗ್ಗೆ/89/2007, ಬೆಂಗಳೂರು, ದಿನಾಂಕ: 4ನೇ ಜೂನ್ 2009

ವಿಷಯ: ವಿಧಾನಸಭೆಯ ಮಾನ್ಯ ವಿರೋಧ ಪಕ್ಷದ ನಾಯಕರ ವಿಶೇಷ ಕರ್ತವ್ಯಾಧಿಕಾರಿಯಾಗಿ ನಿಯೋಜನೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಶಿವಣ್ಣ ಚರ್ಚಾ ಸಂಪಾದಕರು, ಕವಿಸಸ ಇವರನ್ನು ಸೇವೆಯಿಂದ ಹಿಂದಕ್ಕೆ ಪಡೆಯುವ ಬಗ್ಗೆ.

ಉಲ್ಲೇಖ: ಅಧಿಸೂಚನೆ ಸಂಖ್ಯೆ:ವಿಸಸ/ಶಾರಶಾ./ವಿಪನಾ/21/2009, ದಿನಾಂಕ:1.6.2009

ಉಲ್ಲೇಖಿತ ಅಧಿಸೂಚನೆಯಲ್ಲಿ ತಿಳಿಸಿರುವಂತೆ ವಿಧಾನ ಸಭೆಯ ಮಾನ್ಯ ವಿರೋಧಪಕ್ಷದ ನಾಯಕರಾಗಿದ್ದ ಶ್ರೀ ಮಲ್ಲಿಕಾರ್ಜುನ ಖರ್ಗೆ ರವರು ದಿನಾಂಕ:28.5.2009ರಂದು ವಿಧಾನಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಿರುವ ಪ್ರಯುಕ್ತ ಅದೇ ದಿನಾಂಕದಿಂದ ಜಾರಿಗೆ ಬರುವಂತೆ ವಿರೋಧ ಪಕ್ಷದ ನಾಯಕರ ಅವಧಿಯು ಮುಕ್ತಾಯಗೊಂಡಿರುವುದರಿಂದ ಅವರ ವಿಶೇಷ ಕರ್ತವ್ಯಾಧಿಕಾರಿಯಾಗಿ ನಿಯೋಜನೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಶಿವಣ್ಣ ಚರ್ಚಾ ಸಂಪಾದಕರು, ಕರ್ನಾಟಕ ವಿಧಾಸಭೆ ಸಚಿವಾಲಯ ಇವರ ಸೇವೆಯನ್ನು ದಿನಾಂಕ:4.6.2009ರ (ಅಪರಾಹ್ನದಿಂದ) ಜಾರಿಗೆ ಬರುವಂತೆ ಹಿಂದಕ್ಕೆ ಪಡೆಯಲಾಗಿದೆ.

ಸಭಾಧ್ಯಕ್ಷರ ಆದೇಶಾನುಸಾರ

ಪಿ.ಆರ್. 708

ಹೆಚ್.ಎಸ್. ಜಗನ್ನಾಥ್

ಅಧೀನ ಕಾರ್ಯದರ್ಶಿ,

ಕರ್ನಾಟಕ ವಿಧಾನ ಸಭೆ ಸಚಿವಾಲಯ

OFFICE OF THE, DISTRICT AND SESSIONS JUDGE, RAMANAGARA

NOTIFICATION

ADM/1/2008, Ramanagara, Dated:6th June 2009

Sri V.M. Shankar, Chief Administrative Officer, District and Sessions Court ,Ramanagara is permitted to surrender 30 days earned leave from 23.5.2009 to 21.6.2009 (BDI) for the block period 2009-2010.

The officer shall be paid and allowances admissible for the period of leave surrendered at the rate of 1/30th of the monthly pay and allowances for each day of leave surrendered as per the provisions contained in Rule 118 (2) of K.C.S. Rs.

C.G. HUNGUND

P.R. 709

District and Sessions Judge, Ramanagara

HIGH COUT OF KARNATAKA

NOTIFICATION

No. GOB(I) 1/2009, Bangalore, Dated:29th May 2009

The Presiding Officer of the XXI Addl City Civil and Sessions Court, Bangalore City is concurrently appointed as the Presiding Officer of the XXXVI Addl. City Civil and Sessions Court, Bangalore City with effect from the afternoon of 30.5.2009 (in place of Sri A.T. Munnoli-Due to retire from service w.e.f. 31.5.2009) and until further orders.

By order of the High Court

P.R. 710

R.B. BUDIHAL

Registrar General

HIGH COUT OF KARNATAKA

NOTIFICATION

No. GOB(I) 278/2005, Bangalore, Dated:27th May 2009

The Presiding Officer of the Court of Civil Judge (Sr.Dn) Honnavar, is concurrently appointed as the Presiding Officer of the Courts of Civil Judge (Sr. Dn.) and CJM., Karwar and Addl. Civil Judge (Sr. Dn) Karwar, with a direction to itinerate the said courts for three days; in a week, with immediate effect and until further orders.

By order of the High Court

P.R. 711

R.B. BUDIHAL

Registrar General

KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಜೂನ್ ೨೫, ೨೦೦೯ (ಆಷಾಢ ೪, ಶಕ ವರ್ಷ ೧೯೩೧)	ಸಂಚಿಕೆ ೨೬

ಭಾಗ–೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ:ಎಸ್‌ಡಿಕೆ/51/ಡಿಟಿಸಿಆರ್/2006–07, ದಿನಾಂಕ:25ನೇ ಫೆಬ್ರವರಿ, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ. ಮಂಗಳೂರು.

ಫಿರ್ಯಾದುದಾರರು:

ಅಬಕಾರಿ ಉಪ ನಿರೀಕ್ಷಕರು(1)
ಇಐಬಿ, ದ.ಕ. ಜಿಲ್ಲೆ, ಮಂಗಳೂರು.

ಆರೋಪಿ:

ಪತ್ತೆಯಾಗಿರುವುದಿಲ್ಲ.

ವಾಹನದ ಮಾಲೀಕರು

ಶ್ರೀ ಧರ್ಮರಾಜ, ಬಿನ್ ಕೃಷ್ಣಪ್ಪ ಸಾಲಿಯಾನ್,
ರಾಧಕೃಷ್ಣಾ, ಸಾಲಿಯಾನ್ ಕಂಪೌಂಡ್, ಕಲ್ಪಾವಿ,
ಕೊಟ್ಟಾರ, ಮಂಗಳೂರು.

ಪ್ರಕರಣದ ಮುಖ್ಯಾಂಶಗಳು:

ಅಬಕಾರಿ ಉಪ ನಿರೀಕ್ಷಕರು(1),ಇಐಬಿ,ದ.ಕ ಜಿಲ್ಲೆ ಮಂಗಳೂರು ಇವರು ತಮ್ಮ ಸಿಬ್ಬಂಧಿಯೊಂದಿಗೆ ದಿನಾಂಕ:15.09.2006 ರಂದು ಬಂಟ್ವಾಳ ತಾಲೂಕಿನ ವಿಟ್ಲ ಕಸಬಾ ಗ್ರಾಮದ ಉಕ್ಕುಡ ಅರಣ್ಯ ತನಿಖಾ ಠಾಣೆಯಿಂದ ಸುಮಾರು 2 ಕಿಲೋಮೀಟರು ಹಿಂದೆ ರಸ್ತೆಗಾವಲು ನಡೆಸುತ್ತಿರುವ ಸಂದರ್ಭದಲ್ಲಿ ವಿಟ್ಲ ಕಡೆಯಿಂದ ಬರುತ್ತಿದ್ದ ಮಹೀಂದ್ರ ಪಿಕ್‌ಅಫ್ ವ್ಯಾನನ್ನು ತಪಾಸಣೆಗೆಂದು ನಿಲ್ಲಿಸಲು ಸೂಚನೆ ನೀಡಿದಾಗ, ಸದ್ರಿ ಚಾಲಕ ನಿಲ್ಲಿಸದೇ ಮುಂದಕ್ಕೆ ಹೋಗಿ ಅರಣ್ಯ ತಪಾಸಣೆ ಠಾಣೆಯ ಸಮೀಪ ನಿಲ್ಲಿಸಿ ಚಾಲಕ ಹಾಗೂ ಸಹ ಚಾಲಕ ಓಡಿಹೋಗಿ ಪರಾರಿಯಾಗಿರುತ್ತಾನೆ. ತಪಾಸಣೆ ಮಾಡುವ ಸಲುವಾಗಿ ಪಂಚರನ್ನು ಹುಡುಕಿದಾಗ ಅಲ್ಲಿಯೇ ಕರ್ತವ್ಯದಲ್ಲಿದ್ದ ವನ ಪಾಲಕರಾದ ಶ್ರೀ ಗೋಪಾಲ ಗೌಡ ಮತ್ತು ಶ್ರೀ.ಸುಂದರ ಇವರಿಗೆ ವಿಷಯವನ್ನು ತಿಳಿಸಿ ನಂತರ ಸದ್ರಿ ವಾಹನವನ್ನು ಶೋಧಿಸಿದಾಗ ಅದು ಬಿಳಿ ಬಣ್ಣದ ಮಹೇಂದ್ರ ಪಿಕ್‌ಅಫ್ ವ್ಯಾನ್ ಆಗಿದ್ದು, ಅದರ ನೊಂದಣಿ ಸಂ:KA-19A-5023 ಎಂದು ಬರೆಯಲಾಗಿತ್ತು. ಮಾನ್ಯ ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯಲು ಕಾಲವಕಾಶವಿಲ್ಲದ ಕಾರಣ ಕರ್ನಾಟಕ ಅಬಕಾರಿ ಕಾಯಿದೆ ಕಲಂ 54ರ ಪ್ರಕಾರ ದತ್ತವಾದ ಅಧಿಕಾರವನ್ನು ಚಲಾಯಿಸಿ ವಾಹನದ ಶೋಧನೆಗೆ ಸಮುಚಿತ ಆಧಾರವನ್ನು ದಾಖಲಿಸಿಕೊಂಡು ಶೋಧನೆ ನಡೆಸಲು ಪ್ರಾರಂಭಿಸಿ ವಾಹನದ ಹಿಂಭಾಗದಲ್ಲಿ 30 ಗೋಣಿ ಚೀಲಗಳ ಕಟ್ಟುಗಳಿದ್ದು, ಪ್ರತಿ ಗೋಣಿ ಚೀಲಗಳಲ್ಲಿ 100 ಎಂಎಲ್‌ನ ತಲಾ 200ರಂತೆ ಒಟ್ಟು 6000 ಸಾರಾಯಿ ಪ್ಯಾಕೇಟುಗಳು ಇರುವುದು ಪತ್ತೆ ಮಾಡಿರುತ್ತಾರೆ. ನಂತರ ವಾಹನದ ಇಂಜಿನ್ ನಂ:

III -F1-(0)

ECY1K26323 ಮತ್ತು ಚಾಸೀಸ್ ನಂ:Y1K17683-MAIRC 2ACY1K17683 ಎಂದು ಬರೆದಿರುವುದು ಕಂಡುಬಂದಿರುತ್ತದೆ. ಸದ್ರಿ ಸ್ಯಾಚೇಟುಗಳಲ್ಲಿ ರಾಸಾಯನಿಕ ಪರೀಕ್ಷೆಗಾಗಿ ಎಲ್ಲಾ ಗೋಣಿ ಚೀಲಗಳಿಂದ ತಲಾ 2 ಸ್ಯಾಚೇಟುಗಳಂತೆ ಮಾದರಿಗಳನ್ನು ತೆಗೆದು ಅದಕ್ಕೆ ಇಲಾಖಾ ಸೀಲಿನಿಂದ ಸೀಲುಮಾಡಿ ಬಟ್ಟೆದಾರಕಟ್ಟಿ ಗುರುತಿನ ಚೀಟಿಯನ್ನು ತಯಾರಿಸಿ ಎಲ್ಲಾ ಮಾದರಿಗಳಿಗೂ ಅಂಟಿಸಿ ಮತ್ತು ಮಾದರಿ ಮೊಹರನ್ನು ತಯಾರಿಸಲಾಯಿತು.ಇದು ಅಕ್ರಮ ಸಾರಾಯಿ ಸಾಗಾಣಿಕೆಯಾಗಿರುವುದರಿಂದ ಸಾರಾಯಿ ಸ್ಯಾಚೇಟುಗಳನ್ನು ಹಾಗೂ ಸಾಗಾಣಿಕೆ ಬಳಸಿದ ಮಹೀಂದ್ರ ಪಿಕ್‌ಆಫ್ ವ್ಯಾನ್ ಸಂ:KA-19A-5023ನ್ನು ವಶಪಡಿಸಿಕೊಂಡು ಇದು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11,14 ರೀತ್ಯಾ ಅಪರಾಧ ಹಾಗೂ ಕಲಂ 32 ,34 ಮತ್ತು 38ಎ ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಓಡಿಹೋದ ಆರೋಪಿಗಳ ವಿರುದ್ಧ ತಕ್ಷೀರು ಸಂಖ್ಯೆ: 5/ 2006-07, ದಿ:15-9-2006ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡಿರುತ್ತಾರೆ.

ಸದ್ರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಸಾರಾಯಿಯನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಸದ್ರಿ ಮಾದರಿಯನ್ನು ವಿಶ್ಲೇಷಿಸಿದ ಕರ್ನಾಟಕ ಸರ್ಕಾರದ ಸಹಾಯಕ ರಾಸಾಯನಿಕ ತಜ್ಞ, ಮಂಗಳೂರುರವರು ದಿ:19-10-2006ರ ವರದಿಯಲ್ಲಿ ಸಾರಾಯಿಯ ಮದ್ಯಸಾರ ಪ್ರಮಾಣ 32.0% ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ಅಬಕಾರಿ ಉಪ ನಿರೀಕ್ಷಕರು(1), ಇಐಬಿ,ದ.ಕ ಜಿಲ್ಲೆ ಮಂಗಳೂರು ಇವರ ತನಿಖಾ ವರದಿ ಸಂ:5/2006-07, ದಿ:8-11-2006ರಲ್ಲಿ ವಾಹನವನ್ನು ಹೊರತುಪಡಿಸಿ ಸಾರಾಯಿ ಸ್ಯಾಚೇಟುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಶಿಫಾರಸ್ಸು ಮಾಡಿರುತ್ತಾರೆ. ಅಬಕಾರಿ ನಿರೀಕ್ಷಕರ ತನಿಖಾ ವರದಿಯನ್ನು ಆಧರಿಸಿ ಅಂದಿನ ಪ್ರಾಧಿಕಾರದ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ದ.ಕ.ಜಿಲ್ಲೆ ಮಂಗಳೂರುರವರ ನ್ಯಾಯಾಲಯದ ಆದೇಶ ಸಂ:ಇಐಬಿ/ಡಿಟಿಸಿಆರ್/51/2005-06, ದಿ:6-12-2006ರ ಆದೇಶದಲ್ಲಿ ಪ್ರಕರಣದಲ್ಲಿ ಜಪ್ತು ಪಡಿಸಿಕೊಂಡ ವಾಹನದ ಮುಟ್ಟುಗೋಲು ಪ್ರಕ್ರಿಯೆಯನ್ನು ಕಾಯ್ದಿರಿಸಿ, ಸಾರಾಯಿ ಸ್ಯಾಚೇಟುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶ ಪಡಿಸಲು ಆದೇಶಿಸಿರುತ್ತಾರೆ.

ತನಿಖಾಧಿಕಾರಿಯವರು ವಾಹನದ ಬಿ ಎಕ್ಸ್‌ಟ್ರಾಕ್ಟ್ ವರದಿಯನ್ನು ಈ ಪ್ರಾಧಿಕಾರಕ್ಕೆ ದಿ:8-11-2006ರಂದು ಸಲ್ಲಿಸಿದ್ದು, ಸದ್ರಿ ಬಿ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ವಾಹನ ನೊಂದಣಿ ಸಂ: KA-19A-5023 ಮಹೀಂದ್ರ ಅಂಡ್ ಮಹೀಂದ್ರ ಕಂಪೆನಿಯ ವಾಹನವಾಗಿದ್ದು,ಇದರ ಚಾಸೀಸ್ ನಂ:MA1RC2 ACY1K17683 ಮತ್ತು ಇಂಜಿನ್ ನಂ:ACY1K26323 ಆಗಿರುತ್ತದೆ. ಇದರ ನೊಂದಣಿ ಮಾಲೀಕ ಶ್ರೀ.ಧರ್ಮರಾಜ, ಬಿನ್:ಕೃಷ್ಣಪ್ಪ ಸಾಲಿಯಾನ್, ರಾಧಕೃಷ್ಣ ಸಾಲಿಯಾನ್ ಕಂಪೌಂಡ್, ಕಲ್ಬಾವಿ , ಕೊಟ್ಟಾರ ಮಂಗಳೂರು ಎಂದು ದೃಢೀಕರಣ ಪತ್ರ ನೀಡಿರುತ್ತಾರ.

ಸದ್ರಿ ಬಿ ಎಕ್ಸ್‌ಟ್ರಾಕ್ಟ್ ವರದಿಯ ಪ್ರಕಾರ ವಾಹನದ ನೊಂದಣಿ ಮಾಲೀಕರಾದ ಶ್ರೀ ಧರ್ಮರಾಜ ಮತ್ತು ಹೆಚ್.ಪಿ.ಎ ಫೈನಾನ್ಸ್ ಸಂಸ್ಥೆಯಾದ ಯಶವಂತ್ ಫೈನಾನ್ಸ್, ಸೆಂಟ್ ಥೋಮಸ್ ಮೌಂಟ್, ಮದ್ರಾಸ್‌ರವರಿಗೆ ಈ ಪ್ರಾಧಿಕಾರದಿಂದ ದಿನಾಂಕ:9-11-2006ರಂದು ಕರ್ನಾಟಕ ಅಬಕಾರಿ ಕಾಯಿದೆ 1965ರ ಸೆಕ್ಷನ್ 43ಬಿ ಪ್ರಕಾರ ಕಾರಣ ಕೇಳಿ ನೋಟಿಸನ್ನು ನೊಂದಣಿ ಅಂಚೆಯ ಮೂಲಕ ನೀಡಲಾಗಿದ್ದು, ಸದ್ರಿ ನೋಟಿಸು ಆರ್.ಸಿ ಮಾಲೀಕರಿಗೆ ಸ್ವೀಕೃತಿಯಾಗಿ ಈ ಪ್ರಾಧಿಕಾರಕ್ಕೆ ಸ್ವೀಕೃತಿ ಪತ್ರ ಬಂದಿರುತ್ತದೆ. ಯಶವಂತ್ ಫೈನಾನ್ಸ್, ಸೆಂಟ್ ಥೋಮಸ್ ಮೌಂಟ್, ಮದ್ರಾಸ್‌ರವರಿಗೆ ನೀಡಲಾದ ಕಾರಣ ಕೇಳಿ ನೋಟಿಸು ನೊಂದಣಿ ಅಂಚೆಯ ಮೂಲಕ ಜ್ಯಾರಿಯಾಗದೇ ಈ ಪ್ರಾಧಿಕಾರಕ್ಕೆ ಹಿಂದೆ ಒಪ್ಪಿಸಲಾಗಿರುತ್ತದೆ. ಅದಾಗ್ಯೂ ಸದ್ರಿ ಯಶವಂತ್ ಫೈನಾನ್ಸ್, ಸೆಂಟ್ ಥೋಮಸ್ ಮೌಂಟ್, ಮದ್ರಾಸ್ ಇವರ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ದಿ:28-11-2006 ರಂದು ಉತ್ತರವನ್ನು ಒಪ್ಪಿಸಿ ಸದ್ರಿ ವಾಹನವನ್ನು ಆರ್.ಸಿ ಮಾಲೀಕರ ಪರವಾಗಿ ದಿ:8-2-2006 ರ ಒಪ್ಪಂದದ ಹೈಯರ್ ಪರ್ಚೇಸ್ ಮೂಲಕ ದಿ:8-2-2008ರವರೆಗೆ ಮಾಡಿಕೊಳ್ಳಲಾಗಿದ್ದು, ಸದ್ರಿ ವಾಹನದಲ್ಲಿ ದಿನಾಂಕ:15-9-2006ರಂದು ವಶಪಡಿಸಿಕೊಂಡ ಅಕ್ರಮ ಸಾರಾಯಿ ಪ್ರಕರಣಕ್ಕೆ ತಮ್ಮ ಯಾವುದೇ ಸಂಬಂಧ ಹಾಗೂ ಹೊಣೆ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಬಗ್ಗೆ ಆರ್.ಸಿ. ಮಾಲೀಕರಿಗೆ ಮಧ್ಯಂತರ ಬಿಡುಗಡೆ ಬ್ಯಾಂಕ್ ಗ್ಯಾರೆಂಟಿ ಭದ್ರತೆಯನ್ನು ಒಪ್ಪಿಸಿ ವಾಹನ ಮಧ್ಯಂತರ ಬಿಡುಗಡೆ ಪಡೆದುಕೊಳ್ಳಲು ಅವಕಾಶ ನೀಡಲಾಗಿದ್ದರೂ, ಆರ್.ಸಿ ಮಾಲೀಕರು ಅಥವಾ ಯಶವಂತ್ ಫೈನಾನ್ಸ್, ಸೆಂಟ್ ಥೋಮಸ್ ಮೌಂಟ್,ಮದ್ರಾಸ್ ಸಂಸ್ಥೆಯವರು ಸದ್ರಿ ಮಧ್ಯಂತರ ಬಿಡುಗಡೆ ಆದೇಶದನುಗುಣವಾಗಿ ಬ್ಯಾಂಕ್ ಭದ್ರತೆ ಒಪ್ಪಿಸಲು ಮುಂದಾಗಿರದ ಕಾರಣ ಸದ್ರಿ ಫೈನಾನ್ಸ್ ಸಂಸ್ಥೆಯ ಅರ್ಜಿಯನ್ನು ಪರಿಗಣಿಸುವ ಅಗತ್ಯವು ಕಂಡುಬರುವುದಿಲ್ಲ.

ಸದ್ರಿ ನೋಟಿಸಿಗೆ ಅನುಗುಣವಾಗಿ ವಾಹನ ಮಾಲೀಕರಾದ ಶ್ರೀ.ಧರ್ಮರಾಜ ಇವರು ತಮ್ಮ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ದಿ: 28-11-2006ರಂದು ಅರ್ಜಿಯನ್ನು ಸಲ್ಲಿಸಿ, ಸದ್ರಿ ವಾಹನವನ್ನು ಮಧ್ಯಂತರ ಬಿಡುಗಡೆ ಬಗ್ಗೆ ತಮ್ಮ ಅರ್ಜಿಯಲ್ಲಿ ಕೋರಿರುತ್ತಾರೆ. ಸದ್ರಿ ಅರ್ಜಿಯನ್ನು ಪರಿಶೀಲಿಸಿದ ಅಂದಿನ ಪ್ರಾದಿಕಾರವು ದಿ:12-12-2006 ರಂದು ಸಹಾಯಕ ಅಭಿಯೋಗ ನಿರ್ದೇಶಕ, ದ.ಕ ಜಿಲ್ಲೆ, ಮಂಗಳೂರು ಇವರಿಗೆ ಪತ್ರ ಬರೆಯಲಾಗಿದ್ದು, ಸದ್ರಿ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ಲಗತ್ತಿಸಿ ತಮ್ಮ ಆಕ್ಷೇಪಣೆಗಳನ್ನು ತಿಳಿಸಲು ಸೂಚಿಸಲಾಯಿತು. ಹಾಗೂ ವಾಹನದ ಮೌಲ್ಯವನ್ನು ದೃಢೀಕರಿಸುವ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ದ.ಕ ಜಿಲ್ಲೆ ಮಂಗಳೂರು ಇವರಿಗೆ ದಿ:15-12-2006ರಂದು ಪತ್ರ ಬರೆಯಲಾಯಿತು.

ಅದರಂತೆ ವಾಹನ ಮೋಟಾರು ನಿರೀಕ್ಷಕರು, ಮಂಗಳೂರು ಇವರು ಸದ್ರಿ ವಾಹನಕ್ಕೆ 1,30,000/- ಆಗಬಹುದೆಂದು ದೃಢೀಕರಣ ಪತ್ರ ನೀಡಿರುತ್ತಾರೆ.

ಸದ್ರಿ ವಾಹನಕ್ಕೆ ಸಾರಿಗೆ ನಿರೀಕ್ಷಕರವರಿಂದ ಅಂದಾಜು ಮೌಲ್ಯ ರೂ.1,30,000/-ಇದಕ್ಕೆ ಸಮಾನವಾದ ಮೌಲ್ಯಕ್ಕೆ ಬ್ಯಾಂಕ್ ಗ್ಯಾರೆಂಟಿ ಪತ್ರವನ್ನು ಈ ಪ್ರಾಧಿಕಾರದ ಹೆಸರಿಗೆ ಪಡೆದು ಒಪ್ಪಿಸಿ ವಾಹನವನ್ನು ಮಧ್ಯಂತರ ಬಿಡುಗಡೆಗೆ ಷರತ್ತುಗಳನ್ನು ವಿಧಿಸಿ ಈ ಪ್ರಾಧಿಕಾರದ ದಿ:26-10-2007ರಂದು ಆದೇಶಿಸಲಾಗಿದ್ದು, ಆರ್.ಸಿ. ಮಾಲಿಕರು ಸದ್ರಿ ಆದೇಶಕ್ಕೆ ಅನುಗುಣವಾಗಿ ಬ್ಯಾಂಕ್ ಭದ್ರತೆ ಪತ್ರವನ್ನು ನೀಡಿ ವಾಹನವು ಮಧ್ಯಂತರ ಬಿಡುಗಡೆ ಪಡೆಯಲು ಇಂದಿನವರೆಗೂ ಮುಂದಾಗಿರುವುದಿಲ್ಲ.

ನಂತರ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ ಸರ್ಕಾರದ ಅಭಿಯೋಜನೆ ಪರ ಎರಡು ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ, ಅವರುಗಳ ಹೇಳಿಕೆಯನ್ನು ಪಡೆಯಲಾಗಿರುತ್ತದೆ. ಪ್ರತಿರಕ್ಷೆ ಸಾಕ್ಷಿಗಳು ಹಾಜರಾಗದೇ ಇದ್ದುದರಿಂದ ಪ್ರತಿರಕ್ಷೆ ಸಾಕ್ಷಿಗಳ ಹೇಳಿಕೆಯನ್ನು ಪಡೆಯಲಾಗಿರುವುದಿಲ್ಲ. ಈ ಪ್ರಕರಣದಲ್ಲಿ ಸರ್ಕಾರದ ಅಭಿಯೋಜನ ಪರ ಸಲ್ಲಿಸಿರುವ ಸಾಕ್ಷ್ಯಾಧಾರಗಳಿಂದ ಈ ಕೆಳಗಿನ ವಿವಿದಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾ ಅಂಶಗಳು ಈ ಕೆಳಗಿನಂತಿರುತ್ತದೆ.

1. ದಿನಾಂಕ: 15.09.2006 ರಂದು ಮಹೀಂದ್ರ ಪಿಕ್ ಆಫ್ ವ್ಯಾನ್ ಸಂಖ್ಯೆ: KA-19-A-5023 ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೆ ಅಕ್ರಮವಾಗಿ 100 ಎಂಎಲ್‌ನ 6000 ಸಾರಾಯಿ ಸ್ಯಾಚೇಟುಗಳನ್ನು ಸಾಗಾಣಿಕೆ ಮಾಡಲಾಗಿದೆಯೇ?

2. ವಶಪಡಿಸಿಕೊಂಡಿರುವ ವಾಹನ ಮಾಲೀಕ ತಾನೆಂದು, ತನಗೆ ತಿಳಿಯದೇ ಅಕ್ರಮ ಸಾರಾಯಿ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನ ಮಾಲೀಕರು ಸಾಬೀತುಪಡಿಸಿದ್ದಾರೆಯೇ?

3. ಜಪ್ತು ಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಈ ಮೇಲಿನ ಪರಿಶೀಲನಾ ಅಂಶಗಳನ್ನು ಲಭ್ಯವಿರುವ ಸಾಕ್ಷ್ಯಾಧಾರಗಳ ಮೇಲೆ ಈ ಕೆಳಗಿನಂತೆ ಉತ್ತರಿಸಿರುತ್ತೇನೆ.

ಒಂದನೇ ಅಂಶವನ್ನು ಸಕರಾತ್ಮಕವಾಗಿ, ಎರಡನೇ ಅಂಶವನ್ನು ನಕರಾತ್ಮವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ-1:

ಶ್ರೀ ಕೆ.ಮೋಹನ್ ರಾವ್, ಅಬಕಾರಿ ಉಪ ನಿರೀಕ್ಷಕರು(1) ಇಐಬಿ,ದ.ಕ ಜಿಲ್ಲೆ, ಮಂಗಳೂರು ಇವರು ಪ್ರಕರಣದ ಫಿರ್ಯಾದುದಾರರಾಗಿದ್ದು ದಿನಾಂಕ:12-3-2001ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷಿಯನ್ನು ನೀಡಿರುತ್ತಾರೆ. ತಾನು ದಿನಾಂಕ:5-6-2006ರಿಂದ ಇಂದಿನವರೆಗೆ ಮಂಗಳೂರು ಇಐಬಿಯಲ್ಲಿ ಅಬಕಾರಿ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿ:15-9-2006ರಂದು ತಾನು ಮತ್ತು ವಿಶೇಷದಳದ ಅಬಕಾರಿ ಉಪ ನಿರೀಕ್ಷಕರು ಶ್ರೀ ಎಂ.ಪಿ.ಹಾಲಯ್ಯ ಮತ್ತು ಬಂಟ್ವಾಳ ಜಾರಿ ಮತ್ತು ತನಿಖೆಯ ಅಬಕಾರಿ ಉಪ ನಿರೀಕ್ಷಕರಾದ ಶ್ರೀ.ರತ್ನಾಕರ್ ರೈ ಹಾಗೂ ಸಿಬ್ಬಂಧಿಗಳೊಂದಿಗೆ ಬಂಟ್ವಾಳ ತಾಲೂಕಿನ ವಿಟ್ಲ ಕಸಬಾ ಗ್ರಾಮದ ವಿಟ್ಲ-ಕಾಸರಗೋಡು ರಸ್ತೆಯಲ್ಲಿ ಉಕ್ಕಡ ಅರಣ್ಯ ತಪಾಸಣಾ ಠಾಣೆಯಿಂದ ಸುಮಾರು 2ಕಿ.ಮೀ ಹಿಂದಕ್ಕೆ ನಿಂತು ರಸ್ತೆಗಾವಲು ನಡೆಸುತ್ತಿರುವ ಸಂದರ್ಭದಲ್ಲಿ ಒಂದು ಬಿಳಿ ಬಣ್ಣದ ಮಹೇಂದ್ರ ಪಿಕ್ ಆಫ್ ವ್ಯಾನ್ ವಿಟ್ಲ ಕಡೆಯಿಂದ ಕಾಸರಗೋಸು ಕಡೆಗೆ ವೇಗವಾಗಿ ಹೋಗುತ್ತಿರುವುದು ಕಂಡು ಬಂದು ಅನುಮಾನಗೊಂಡು ಅದನ್ನು ನಿಲ್ಲಿಸಲು ಸೂಚನೆ ನೀಡಿದಾಗ ವಾಹನ ನಿಲ್ಲಿಸದೇ ಮುಂದೆ ಹೋದಾಗ ತಾವುಗಳು ಇಲಾಖಾ ಜೀಪಿನಿಂದ ಸದ್ರಿ ವಾಹನವನ್ನು ಬೆನ್ನಟ್ಟಿ ಹೋದಾಗ ಉಕ್ಕಡ ಅರಣ್ಯ ತಪಾಸಣಾ ಠಾಣೆಯ ಮುಂಭಾಗದಲ್ಲಿ ಸದ್ರಿ ವಾಹನವು ನಿಂತಿರುವುದು ಕಂಡು ಬಂತು. ಸದ್ರಿ ವಾಹನವನ್ನು ನೋಡಿದಾಗ ವಾಹನದಲ್ಲಿ ಯಾರೂ ಇರಲಿಲ್ಲ. ಇದರಿಂದ ಸಂಶಯಗೊಂಡ ತಾವುಗಳು ಸದ್ರಿ ವಾಹನವನ್ನು ತಪಾಸಣೆ ಮಾಡುವ ಬಗ್ಗೆ ಪಂಚರಿಗಾಗಿ ಅಕ್ಕಪಕ್ಕದಲ್ಲಿ ವಿಚಾರಿಸಿದಾಗ ಅಲ್ಲಿಯೇ ಅರಣ್ಯ ತಪಾಸಣಾ ಠಾಣೆಯಲ್ಲಿ ಕರ್ತವ್ಯದಲ್ಲಿದ್ದ ವನಪಾಲಕರಾದ ಶ್ರೀ ಎಂ.ಗೋಪಾಲ ಗೌಡ ಮತ್ತು ಶ್ರೀ ಡಿ.ಸುಂದರ ಎಂಬವರು ಒಪ್ಪಿಕೊಂಡು ಪಂಚರಾಗಿ ಬಂದು ಅವರ ಸಮಕ್ಷಮದಲ್ಲಿ ಸದ್ರಿ ವಾಹನವನ್ನು ಶೋಧಿಸಲು ಪ್ರಾರಂಭಿಸಿ ನ್ಯಾಯಾಲಯದಿಂದ ಸರ್ಚ್ ವಾರೆಂಟ್ ಪಡೆಯಲು ಕಾಲವಕಾಶವಿಲ್ಲದ ಕಾರಣ ಅಬಕಾರಿ ಕಾಯ್ದೆಯ ಕಲಂ 54ರ ರೀತ್ಯಾ ಕಾರಣವನ್ನು ದಾಖಲಿಸಿಕೊಂಡು ವಾಹನವನ್ನು ಪರಿಶೀಲಿಸಲಾಗಿ ವಾಹನದ ಹಿಂಭಾಗದ ಸೀಟಿನಲ್ಲಿ ನೋಡಿದಾಗ ಪ್ಲಾಸ್ಟಿಕ್ ಗೋಣಿ ಚೀಲಗಳಿರುವುದು ಕಂಡುಬಂತು. ಸದ್ರಿ ಗೋಣಿ ಚೀಲವನ್ನು ನೋಡಿದಾಗ 30 ಗೋಣಿ ಚೀಲದ ಕಟ್ಟುಗಳು ಇದ್ದವು. ಪ್ರತಿಯೊಂದು ಗೋಣಿ ಚೀಲದಲ್ಲಿ ತಲಾ 200 ರಂತೆ 100 ಮಿಲಿಯ ಸಾರಾಯಿ ಸ್ಯಾಚೇಟುಗಳು ಇರುವುದು ಕಂಡು ಬಂತು. ವಾಹನವನ್ನು ಪರಿಶೀಲಿಸಿದಾಗ ವಾಹನದಲ್ಲಿ ಈ ಬಗ್ಗೆ ಯಾವುದೇ ದಾಖಲೆ ಪತ್ರಗಳು ಇರುವುದು ಕಂಡು ಬರಲಿಲ್ಲ. ಸದ್ರಿ ಸಾರಾಯಿ ಸ್ಯಾಚೇಟುಗಳನ್ನು ಪರಿಶೀಲಿಸಿದಾಗ ಹಿರಾ ಡಿಸ್ಟಿಲರೀಸ್, ಸಂಕೇಶ್ವರ, ಬೆಳಗಾವಿ ಜಿಲ್ಲೆ ಎಂದು ಮುದ್ರಿತವಾಗಿರುವುದು ಕಂಡು ಬಂತು. ಇದರಿಂದಾಗಿ ಇದೊಂದು ಅಕ್ರಮ ಸಾರಾಯಿ ಸಾಗಾಟ ವೆಂದು ತಿಳಿದು ಬಂದು ಸದ್ರಿ ಸಾರಾಯಿ ಚೀಲದಿಂದ ಪ್ರತಿ ಚೀಲದಿಂದ ತಲಾ 2ರಂತೆ ಒಟ್ಟು 60 ಸ್ಯಾಚೇಟುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾಧರಿ ಪ್ರತ್ಯೇಕಿಸಿ ಮಾದರಿಗಳಿಗೆ ಬಟ್ಟೆಯಿಂದ ಕಟ್ಟಿ ಹಾಗೂ ಪ್ರತಿ ಚೀಲಗಳಿಗೂ ಕೂಡಾ ಗುರುತು ಚೀಟಿಯನ್ನು ಅಂಟಿಸಲಾಯಿತು.

ಮಾದರಿ ಮೊಹರನ್ನು ತಯಾರಿಸಲಾಯಿತು. ವಾಹನದ ಮುಂಬಾಗದ ಬೊನೇಟನ್ನು ತೆರೆದು ನೋಡಲಾಗಿ ಇಂಜಿನ್ ನಂ:ಎಸಿವೈ: 1ಕೆ:26323 ಮತ್ತು ಚಾಸೀಸ್ ಸಂ: ವೈ1ಕೆ17683-ಎಂಎಐಆರ್‌ಸಿ2ಎಸಿ ಎಂದು ಬರೆದಿರುವುದು ಕಂಡು ಬಂತು. ಈ ಬಗ್ಗೆ ವಾಹನದ ದಾಖಲೆ ಪತ್ರಗಳು ಏನಾದರೂ ಇದೆಯೇ ಎಂದು ಪರಿಶೀಲಿಸಲಾಗಿ ಯಾವುದೇ ದಾಖಲೆ ಪತ್ರಗಳು ಇರಲಿಲ್ಲ, ಇದೊಂದು ಅಕ್ರಮ ಸಾರಾಯಿ ಸಾಗಾಣಿಕೆಯಾದ್ದರಿಂದ ಕರ್ನಾಟಕ ಅಬಕಾರಿ ಕಾಯಿದೆ ಪ್ರಕಾರ ಶಿಕ್ಷಾರ್ಹ ಅಪರಾಧವೆಂದು ಪಂಚರಿಗೆ ತಿಳಿಸಲಾಯಿತು. ವಾಹನದ ಮುಂಭಾಗದಲ್ಲಿ ಮಂಗಳೂರು ಮಹಾ ನಗರ ಪಾಲಿಕೆ ವಿದ್ಯುತ್ ಸರಬರಾಜು ವಿಭಾಗ ಎಂದು ಬರೆಯಲ್ಪಟ್ಟಿರುವುದು ಸಹ ಕಂಡು ಬಂತು. ಅನಂತರ ದೊರೆತ ಸೊತ್ತುಗಳನ್ನು ಜಪ್ತುಪಡಿಸಿ ವಾಹನ ಸಮೇತ ಮಹಜರು ಮುಖೇನಾ ವಶಪಡಿಸಿಕೊಳ್ಳಲಾಯಿತು. ಸದ್ರಿ ವಾಹನದ ನಂಬರ್:KA-19-A-5023 ಎಂದು ಹಳದಿ ಪ್ಲೇಟನಲ್ಲಿಕಪ್ಪು ಅಕ್ಷರಗಳಲ್ಲಿ ಬರೆಯಲಾಗಿತ್ತು. ನಂತರ ಸೊತ್ತುಗಳೊಂದಿಗೆ ಕಛೇರಿಗೆ ಬಂದು ಪ್ರಥಮ ಮಾಹಿತಿ ವರದಿ ಸಂ: ಇಐಬಿ:ಅಸಇ(1) ಪ್ರ.ಮಾ.ವ :5:2006-07ರ ಪ್ರಕಾರ ಮೊಕದ್ದಮೆಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಪ್ರಥಮ ಮಾಹಿತಿ ವರದಿಯನ್ನು ಸಲ್ಲಿಸಲಾಯಿತು. ಸ್ಥಳ ಮಹಜರನ್ನು ನಿಶಾನೆಪಿ-1 ಎಂದೂ ಅದರ ಮೇಲಿನ ಸಹಿಯನ್ನು ನಿಶಾನೆ ಪಿ-2 ಎಂದೂ ನೋಡಿ ಗುರುತಿಸಲಾಯಿತು. ಪ್ರಥಮ ಮಾಹಿತಿ ವರದಿಯ ಪ್ರತಿಯನ್ನು ನಿಶಾನೆ ಪಿ-1ಎ ಎಂದೂ ನೋಡಿ ಗುರುತಿಸಲಾಯಿತು. ಪ್ರಕರಣದ ತನಿಖೆ ಕೈಗೊಂಡು ದಿ:18-9-2006ರಂದು ವಾಹನದ ಬಿ ವರದಿಗಾಗಿ ಆರ್.ಟಿ.ಒ ಮಂಗಳೂರು ಇವರಿಗೆ ಪತ್ರ ಬರೆದು,ದಿ:22-9-2006ರಂದು ಆರ್.ಟಿ.ಓ ಕಛೇರಿಯಿಂದ ಬಿ ವರದಿಯನ್ನು ಪಡೆದಿರುತ್ತೇನೆ. ಸದ್ರಿ ಬಿ ವರದಿಯನ್ನು ಧರ್ಮರಾಜ್ ಬಿನ್ ಕೃಷ್ಣಪ್ಪ ಸಾಲಿಯಾನ್, ರಾಘಾಕೃಪ, ಸಾಲಿಯಾನ್ ಕಂಪೌಂಡ್, ಕಲ್ಬಾವಿ, ಕೊಟ್ಟಾರ, ಮಂಗಳೂರು ಎಂಬ ವಿಳಾಸ ವಿರುವುದು ಕಂಡು ಬಂತು. ಸದ್ರಿ ಬಿ ವರದಿಯನ್ನು ಈಗ ನೋಡಲಾಗಿ ಅದನ್ನು ನಿಶಾನೆ ಪಿ-3 ಎಂದೂ ಗುರುತಿಸಲಾಯಿತು. ದಿ:29-9-2006ರಂದು ಮಾದರಿಗಳನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಮಂಗಳೂರಿನ ರಾಸಾಯನಿಕ ವಿಶ್ಲೇಷಣಾ ತಜ್ಞರ ಕಛೇರಿಗೆ ಅಬಕಾರಿ ರಕ್ಷಕರಾದ ಶ್ರೀ.ಜಯಪ್ಪ ಲಾಮಾಣಿ ಇವರ ಮೂಲಕ ಮಾದರಿ ಮೊಹರು ಮತ್ತು ಕೋರಿಕೆ ಪತ್ರದೊಂದಿಗೆ ಕಳುಹಿಸಿಕೊಟ್ಟು ದಿ:19-10-2006ರಂದು ರಾಸಾಯನಿಕ ತಜ್ಞರ ವರದಿಯನ್ನು ಸದರಿ ಅಬಕಾರಿ ರಕ್ಷಕರ ಮುಖಾಂತರ ಪಡೆದಿರುತ್ತೇನೆ. ಸದ್ರಿ ರಾಸಾಯನಿಕ ವರದಿಯಲ್ಲಿ ಮದ್ಯಸಾರದ ಅಂಶ 32 ವಿ.ವಿ ಇರುವುದು ದೃಢೀಕೃತವಾಗಿರುತ್ತದೆ. ಸದ್ರಿ ರಾಸಾಯನಿಕ ತಜ್ಞರ ವರದಿಯನ್ನು ಈಗ ನೋಡಿ ಗುರುತಿಸಿ ಅದನ್ನು ನಿಶಾನೆ ಪಿ-4 ಎಂದೂ ಗುರುತಿಸಲಾಯಿತು. ವಾಹನದ ಮಾಲೀಕರಾದ ಶ್ರೀ.ಧರ್ಮರಾಜ ಎಂಬವರು ಮಾನ್ಯ ಎಡಿಷನಲ್ ಸೆಶನ್ ಜಡ್ಜ್, ಮಂಗಳೂರು ಇದರ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನಿಗಾಗಿ ಅರ್ಜಿ ಸಲ್ಲಿಸಿರುವುದು ತಿಳಿದುಬಂದು ದಿ:27-9-2006ರಂದು ಸರ್ಕಾರಿ ಅಭಿಯೋಜಕರ ಮೂಲಕ ಅಕ್ಷೇಪಣಾ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಯಿತು. ದಿ:8-11-2006ರಂದು ವಶಪಡಿಸಿ ಕೊಂಡ ಸಾರಾಯಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವರೇ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇಐಬಿ,ದ.ಕ.ಜಿಲ್ಲೆ ಮಂಗಳೂರುರವರಿಗೆ ಒಂದು ವರದಿಯನ್ನು ಸಲ್ಲಿಸಿರುತ್ತೇನೆ. ಸದ್ರಿ ವರದಿಯನ್ನು ಈಗ ನೋಡಿ ಅದನ್ನು ನಿಶಾನೆ ಪಿ-5 ಎಂದೂ ಗುರುತಿಸಲಾಯಿತು. ಮಾನ್ಯ ನ್ಯಾಯಾಲಯದಲ್ಲಿ ವಾಹನ ಮಾಲೀಕರಿಗೆ ನಿರೀಕ್ಷಣಾ ಜಾಮೀನು ದೊರಕಿದ್ದು ಆದೇಶ ಸಂ: ಸಿಆರ್‌ಎಲ್:ಎಂಐಎಸ್‌ಸಿ:ಕೇಸು ಸಂ:495:2006 ದಿ:17-10-2006ರ ಪ್ರಕಾರ ಆಗಿರುತ್ತದೆ. ಪ್ರಕರಣದ ಮುಂದಿನ ತನಿಖೆಗಾಗಿ ಕಡತವನ್ನು ಸೊತ್ತುಗಳೊಂದಿಗೆ (ವಾಹನ) ಅಬಕಾರಿ ಉಪ ನಿರೀಕ್ಷಕರಾದ ಶ್ರೀ ರತ್ನಾಕರ ರೈ, ಜಾರಿ ಮತ್ತು ತನಿಖೆ,ಬಂಟ್ವಾಳ ಇವರಿಗೆ ದಿ:20-11-2006ರಂದು ಹಸ್ತಾಂತರಿಸಿರುತ್ತೇನೆ ಎಂದು ತಮ್ಮ ಸಾಕ್ಷಿಯನ್ನು ನೀಡಿರುತ್ತಾರೆ.

ವಾಹನದ ಮಾಲೀಕರಾಗಲೀ, ಮಾಲೀಕರ ಪರ ವಕೀಲರಾಗಲೀ ಹಾಜರಾಗದೇ ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಯಿತು.

ಪ್ರಾ.ಸಾ-2:

ಶ್ರೀ ಜಯಪ್ಪ ಲಮಾಣಿ, ಅಬಕಾರಿ ರಕ್ಷಕ ಇವರು ಕೆಮಿಕಲ್ ಕ್ಯಾರಿಯರ್ ಆಗಿದ್ದು ದಿನಾಂಕ:23-07-2008ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಇವರು ಪ್ರಕರಣದ ತನಿಖಾಧಿಕಾರಿಯಾಗಿದ್ದು, ತಮ್ಮ `ಸಾಕ್ಷಿಯನ್ನು ನೀಡಿರುತ್ತಾರೆ. ತಾನು 2006ರಿಂದ 2007ನೇ ಇಸವಿ ತನಕ ಅಬಕಾರಿ ಅಧೀಕ್ಷಕರ ಕಛೇರಿ,ಇಐಬಿ,ದ.ಕ.ಜಿಲ್ಲೆ ಮಂಗಳೂರು ರವರ ಕಛೇರಿಯಲ್ಲಿ ಅಬಕಾರಿ ರಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು, ನಾನು ದಿ:29-9-2006ರಂದು ಈ ಪ್ರಕರಣಕ್ಕೆ ಸಂಬಂಧಿಸಿದ 100 ಎಂ ಎಲ್ ನ 60 ತೊಟ್ಟೆಗಳಿಂದ ತಲಾ 2ರಂತೆ ಒಟ್ಟು 30 ಪೊಟ್ಟಣಗಳನ್ನು ರಾಸಾಯನಿಕ ವಿಶ್ಲೇಷಿಸಿದ ತೊಟ್ಟೆಗಳು, ವಿಶ್ಲೇಷಣಾ ವರದಿಯನ್ನು ರಾಸಾಯನಿಕ ವಿಶ್ಲೇಷಕರ ಕಛೇರಿಯಿಂದ ಪಡೆದುಕೊಂಡು ಅಬಕಾರಿ ಉಪ ನಿರೀಕ್ಷಕರು, ಇಐಬಿ,ದ.ಕ.ಜಿಲ್ಲೆ ಮಂಗಳೂರು ಇವರಿಗೆ ಒಪ್ಪಿಸಿರುತ್ತೇನೆ. ದಿ:29-09-2006ರಂದು ಅಬಕಾರಿ ಉಪ ನಿರೀಕ್ಷಕರು ಇವರ ಕಛೇರಿಯಿಂದ ಪತ್ರ ಸಂ: ಇಐಬಿ,ಅ.ಸ.ಇ(1) ಪ್ರ.ಮಾ.ವ ಸಂ:5/2006-07 ದಿ:26-9-2006ರ ಪತ್ರವನ್ನು ನಾನು ಈ ದಿವಸ ನೋಡಿ ಅದನ್ನು ಇಎಕ್ಸ್ ಪಿ-6 ಎಂದು ಗುರುತಿಸಲಾಗಿದೆ. ವಿಶ್ಲೇಷಣಾ ವರದಿಯನ್ನು ದಿ:19-10-2006ರಂದು ಪಡೆದಿದ್ದು, ಅದರ ಪ್ರತಿಯನ್ನು ಇಎಕ್ಸ್ ಪಿ-4 ಎಂದು ಗುರುತಿಸಲಾಗಿದ್ದು ಅದನ್ನು ಈ ದಿನ ನಾನು ಗುರುತಿಸಿದೆ ಎಂದು ತಮ್ಮ ಸಾಕ್ಷಿಯನ್ನು ನೀಡಿರುತ್ತಾರೆ.

ವಾಹನದ ಮಾಲೀಕರಾಗಲೀ, ಮಾಲೀಕರ ಪರ ವಕೀಲರಾಗಲೀ ಹಾಜರಾಗದೇ ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಯಿತು.

ಈ ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರು ಪ್ರಕರಣಕ್ಕೆ ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರಗಳ ಮೇಲೆ ಹಾಗೂ ಪ್ರಾಧಿಕಾರದಲ್ಲಿ ಲಭ್ಯವಿರುವ ದಾಖಲಾತಿಗಳ ಪ್ರಕಾರ ದಿನಾಂಕ:15-9-2006ರಂದು ಮಹೀಂದ್ರ ಪಿಕ್‌ಅಪ್ ವ್ಯಾನ್ ಸಂ:KA-19-A-5023ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೇ ಆರೋಪಿಗಳು ಸಾರಾಯಿ ಸ್ಯಾಚೇಟುಗಳನ್ನು ಹೊಂದಿ ಸಾಗಾಟ ಮಾಡುತ್ತಿರುವುದನ್ನು ಪತ್ತೆಹಚ್ಚಿ, ಅಬಕಾರಿ ಉಪನಿರೀಕ್ಷಕರು(1), ಇಐಬಿ, ದ.ಕ.ಜಿಲ್ಲೆ, ಮಂಗಳೂರು ಇವರ ಪ್ರ.ಮಾ.ವ ಸಂ:5/06-07 ದಿ:15-9-06ರಂತೆ ಪ್ರಕರಣ ದಾಖಲಿಸಿಕೊಂಡಿರುವುದು ಹಾಗೂ ವಾಹನದಲ್ಲಿ ಜಪ್ತು ಮಾಡಲ್ಪಟ್ಟಿರುವ ವಸ್ತು ರಾಸಾಯನಿಕ ತಜ್ಞರ ವರದಿಯಂತೆ ಸಾರಾಯಿಯೆಂದು ದೃಢಪಟ್ಟಿರುತ್ತದೆ. ಸದ್ರಿ ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿರುತ್ತದೆ.

ಇಂತಹ ಅಕ್ರಮ ಸಾರಾಯಿ ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಎಂಬುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನದ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಆದರೆ ಈ ಪ್ರಕರಣದ ವಾಹನ ಮಾಲೀಕರಾದ ಶ್ರೀ ಧರ್ಮರಾಜ ಇವರಿಗೆ ಹಲವಾರು ಬಾರಿ ಹಾಜರಾತಿ ನೋಟಿಸು ನೀಡಿದ್ದರೂ ಆರ್.ಸಿ. ಮಾಲೀಕರಾಗಲೀ ಅಥವಾ ಅವರ ಪರ ವಕೀಲರಾಗಲೀ ಈ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ. ಪ್ರತಿರಕ್ಷಾ ಸಾಕ್ಷಿ ವಿಚಾರಣೆ ಮಾಡಲು ಅರ್ಜಿದಾರರಿಗೆ ಹಾಗೂ ಅವರ ಪರ ವಕೀಲರಿಗೆ ಪ್ರತಿರಕ್ಷಾ ಸಾಕ್ಷಿಯನ್ನು ಹಾಜರುಪಡಿಸಲು ಹಲವಾರು ಬಾರಿ ಸಮಯಾವಕಾಶವನ್ನು ನೀಡಿದರೂ ಅರ್ಜಿದಾರರು ಹಾಗೂ ಅವರ ಪರ ವಕೀಲರು ಈ ಪ್ರಾಧಿಕಾರದ ಮುಂದೆ ಪ್ರತಿರಕ್ಷಾ ಸಾಕ್ಷಿಯನ್ನು ವಿಚಾರಣೆಗೆ ಹಾಜರುಪಡಿಸಲು ವಿಫಲರಾಗಿರುತ್ತಾರೆ. ಅಲ್ಲದೇ ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷದಾರಗಳೊಂದಿಗೆ ವಾಹನವನ್ನು ತನ್ನ ತಿಳುವಳಿಕೆಗೆ ಬಾರದೇ ಅಕ್ರಮ ಸಾಗಾಣಿಕೆಗೆ ಉಪಯೋಗಿಸಲಾಗಿದೆ ಎಂದು ರುಜುವಾತುಪಡಿಸಲು ವಿಫಲರಾಗಿರುವುದರಿಂದ ಹಾಗೂ ಈ ಪ್ರಾಧಿಕಾರದ ಮುಂದೆ ಹಾಜರಾಗದೇ ಇರುವುದನ್ನು ಗಮನಿಸಿದಾಗ ವಾಹನ ಮಾಲೀಕರು ತನ್ನ ತಿಳುವಳಿಕೆಯಿಂದಲ್ಲೇ ವಾಹನವನ್ನು ಅಕ್ರಮ ಸಾರಾಯಿ ಸಾಗಾಣಿಕೆಗೆ ತೊಡಗಿಸಿರುವುದು ನಿಸ್ಸಂದೇಹವಾಗಿ ಸಾಬೀತಾಗಿರುತ್ತದೆ. ಈ ಮೇಲಿನ ಕಾರಣಗಳಿಂದ ಎರಡನೇ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಮೇಲಿನ ಎಲ್ಲಾ ಕಾರಣಗಳಿಂದ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಈ ಪ್ರಕರಣದಲ್ಲಿ ದಿ:15.9.2006ರಂದು ಅಬಕಾರಿ ಉಪ ನಿರೀಕ್ಷಕರು(1) ಇಐಬಿ, ದ.ಕ.ಜಿಲ್ಲೆ, ಮಂಗಳೂರು ಇವರು ಪ್ರಕರಣ ಸಂ:5/2006-07ರಂತೆ ಅಕ್ರಮವಾಗಿ 100 ಎಂಎಲ್‌ನ 6000 ಸಾರಾಯಿ ಸ್ಯಾಚೇಟುಗಳನ್ನು ವಾಹನ ಸಂ: KA-19-A-5023 ಮಹೀಂದ್ರ ಪಿಕ್‌ಅಪ್ ವ್ಯಾನ್ ಇದರಲ್ಲಿ ಸಾಗಾಟ ಮಾಡಿರುವುದು ಸಾಬೀತಾಗಿದ್ದು, ಇದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 11,14ರಂತೆ ಅಪರಾಧ ಎಸಗಿದ್ದು, ಕಲಂ 32,34 ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ಕರ್ನಾಟಕ ಅಬಕಾರಿ ಕಾಯಿದೆ 43(ಎ)2ರಂತೆ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿ ತೀರ್ಮಾನಿಸಬಹುದಾಗಿರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965ನೇ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಅಬಕಾರಿ ಉಪ ನಿರೀಕ್ಷಕರು(1) ಇಐಬಿ, ದ.ಕ.ಜಿಲ್ಲೆ, ಮಂಗಳೂರು ಇವರ ತಕ್ಷೀರು ಸಂಖ್ಯೆ:5/2006-07 ದಿನಾಂಕ:15.09.2006ರಲ್ಲಿ ಜಪ್ತುಪಡಿಸಿಕೊಂಡಿರುವ ಮಹೀಂದ್ರ ಫಿಕ್ ಆಫ್ ವ್ಯಾನ್ ಸಂ:KA-19-A-5023, ಇದರ ಚಾಸೀಸ್ ನಂ:MA1RC2 ACY1K17683 ಮತ್ತು ಇಂಜಿನ್ ನಂ:ACY1K26323ನ್ನು ನಿಯಮ 43ಎ(2)ರನ್ವಯ ಕರ್ನಾಟಕ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ:25-02-2009ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ,ಮಂಗಳೂರು.

ಅನುಬಂಧ-I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:

ಪ್ರಾ.ಸಾ-1 : ಶ್ರೀ ಕೆ.ಮೋಹನ್ ರಾವ್,ಅಬಕಾರಿ ಉಪ ನಿರೀಕ್ಷಕರು(1), ಇಐಬಿ.ದ.ಕ.ಜಿಲ್ಲೆ, ಮಂಗಳೂರು.

ಪ್ರಾ.ಸಾ-2 : ಶ್ರೀ ಜಯಪ್ಪ ಲಮಾಣಿ, ಅಬಕಾರಿ ರಕ್ಷಕರು, ಇಐಬಿ,ದ.ಕ.ಜಿಲ್ಲೆ,ಮಂಗಳೂರು.

ಅನುಬಂಧ- II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:

ನಿಶಾನೆ ಪಿ-1 : ದಿ:15-9-2006ರ ಸ್ಥಳ ಮಹಜರು,

ನಿಶಾನೆ-2 : ಸೊತ್ತು ಪಟ್ಟಿ

ನಿಶಾನೆ-3: ಬಿ ಎಕ್ಸ್ ಟ್ರಾಕ್ಟ್ ವರದಿ

ನಿಶಾನೆ-4 : ರಾಸಾಯನಿಕ ವಿಶ್ಲೇಷಣಾ ವರದಿ

ನಿಶಾನೆ-5 : ಅಂತಿಮ ತನಿಖಾ ವರದಿ ದಿ:8-11-2006

ನಿಶಾನೆ ಪಿ-6 : ರಸಾಯನಿಕ ವಿಶ್ಲೇಷಣಾಗೆ ಮಾದರಿಗಳನ್ನು ಕಳುಹಿಸಿದ ಬಗ್ಗೆ ವಿಶ್ಲೇಷಕರಿಗೆ ದಿ:26-9-2006ರಂದು ಅಬಕಾರಿ ಉಪ ನಿರೀಕ್ಷಕರು ಬರೆದ ಪತ್ರ.

ಅನುಬಂಧ-III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು :

ಅರ್ಜಿದಾರರ ಹೇಳಿಕೆ : - ಯಾವುದು ಇಲ್ಲ-

ಅನುಬಂಧ-IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು : - ಯಾವುದು ಇಲ್ಲ-

ನೂರ್ ಮಹಮ್ಮದ್ ಹುಸೇನ್

ಪಿ.ಆರ್.237

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ:ಎಸ್‌ಡಿಕೆ/72/ಡಿಟಿಸಿಆರ್/2007-08, ದಿನಾಂಕ:24ನೇ ಮಾರ್ಚ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ. ಮಂಗಳೂರು.

ಫಿರ್ಯಾದುದಾರರು:

ಪೊಲೀಸ್ ಉಪ ನಿರೀಕ್ಷಕರು, ಸುಳ್ಯ ಪೊಲೀಸ್ ಠಾಣೆ, ಸುಳ್ಯ.

ಆರೋಪಿ:

1) ಸಚ್ಚಿತಾನಂದ,ಬಿನ್:ಶಂಕರ ಶೆಟ್ಟಿ, ಪಾಲ್ತೋಡಿ ಮನೆ, ಮಧುರೂ ಗ್ರಾಮ, ಕಾಸರಗೋಡು,ಕೇರಳ ರಾಜ್ಯ,

2) ಸಂದೀಪ್ ಬಿನ್:ಸಂಜೀವ ಶೆಟ್ಟಿ, ಎಂಬಡ್ಕ ಮನೆ, ಎಂಬಡ್ಕ ಪುತ್ತೂರು ಗ್ರಾಮ, ಸುಳ್ಯ.

ವಾಹನದ ಮಾಲೀಕರು

1) ಶ್ರೀ ಗಣೇಶ್ ಎಂ.ಕೆ.ಬಿನ್:ವಾಸುದೇವ, ವಿಜಯನಗರ, ಕುಳಾಯಿ ಮಂಗಳೂರು.

2) ಎನ್.ನಾಗರಾಜ ಗೌಡ, ಬಿನ್:ಶೇಷಪ್ಪ ಗೌಡ ಎನ್. ನೆಕ್ರಾಜೆ ಹೌಸ್, ಎನೆಕಲ್, ಸುಳ್ಯ ತಾಲೂಕು.

ಪ್ರಕರಣದ ಮುಖ್ಯಾಂಶಗಳು:

ಪೊಲೀಸ್ ಉಪ ನಿರೀಕ್ಷಕರು,ಸುಳ್ಯ ಪೊಲೀಸ್ ಠಾಣೆ, ಸುಳ್ಯ ಇವರಿಗೆ ದೊರೆತ ಖಚಿತ ವರ್ತಮಾನದ ಮೇರೆಗೆ ಸುಳ್ಯ ಕಡೆಯಿಂದ ಉಬರಡ್ಕ ಮಿತ್ತೂರು ಕಡೆಗೆ ಮೋಟಾರ್ ಸೈಕಲ್‌ನಲ್ಲಿ ಅಕ್ರಮವಾಗಿ ಯಾವುದೇ ಪರವಾನಿಗೆ ಇಲ್ಲದೇ ಮಾರಾಟಗೋಸ್ಕರ ಮದ್ಯದ ಬಾಟಲಿಗಳನ್ನು ಹೊಂದಿ ಸಾಗಾಣಿಕೆ ಮಾಡುತ್ತಿದ್ದಾರೆ ಎಂದು ದೊರೆತ ಮಾಹಿತಿ ಮೇರೆಗೆ ಸುಳ್ಯ ತಾಲೂಕು ಉಬರಡ್ಕ ಮಿತ್ತೂರು ಕಡೆಯಿಂದ ಬರುತ್ತಿದ್ದ ವಾಹನಗಳನ್ನು ತಪಾಸಣೆ ಮಾಡುತ್ತಿರುವಾಗ ಮಿತ್ತೂರು ಕಡೆಯಿಂದ ಜೊತೆಯಾಗಿ ಹೋಗುತ್ತಿದ್ದ ಮೋಟಾರ್ ಸೈಕಲ್‌ಗಳನ್ನು ನಿಲ್ಲಿಸಿ ಪರಿಶೀಲಿಸಲಾಗಿ ಸದ್ರಿ ಎರಡು ಮೋಟಾರ್ ಸೈಕಲ್‌ಗಳ ಪೆಟ್ರೋಲ್ ಟ್ಯಾಂಕ್‌ಗಳ ಮೇಲೆ ಒಂದೊಂದು ರಟ್ಟಿನ ಪೆಟ್ಟಿಗೆಗಳನ್ನು ಇರಿಸಿಕೊಂಡು, ಅವುಗಳಲ್ಲಿ 180 ಎಂಎಲ್‌ನ ಮದ್ಯ ತುಂಬಿರುವ ಸೀಸೆಗಳಿರುವುದು ಕಂಡು ಬಂದಿದ್ದು, ಈ ಬಗ್ಗೆ ಪರವಾನಿಗೆಯನ್ನು ಕೇಳಲಾಗಿ ತನ್ನ ಬಳಿ ಯಾವುದೇ ರಹದಾರಿ

ಪತ್ರವಿಲ್ಲವೆಂದು ತಿಳಿಸಿರುತ್ತಾರೆ. ಮೋಟಾರ್ ಸೈಕಲ್ ಸಂ:CTA-2930ರ ಸವಾರನ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದಾಗ ಸಚ್ಚಿತಾನಂದ, ಬಿನ್: ಶಂಕರ ಶೆಟ್ಟಿ, ಪಾಲ್ತೋಡಿ ಮನೆ, ಮಧೂರು ಗ್ರಾಮ, ಕಾಸರಗೋಡು, ಕೇರಳ ರಾಜ್ಯ ಎಂದು ತಿಳಿಸಿದ್ದು ಸದ್ರಿಯವರಲ್ಲಿರುವ ರಟ್ಟಿನ ಪೆಟ್ಟಿಗೆಯನ್ನು ಪರಿಶೀಲಿಸಿದಾಗ ಸೂಪರ್ ಜಾಕ್ ಕ್ಲಾಸಿಕ್ ವಿಸ್ಕಿ ಯ 180 ಎಂಎಲ್‌ನ 43 ಸೀಸೆಗಳಲ್ಲಿ ಒಟ್ಟು 7.740 ಲೀ ಮದ್ಯವನ್ನು ಹೊಂದಿರುವುದು ಸದ್ರಿ ಮದ್ಯದ ಬಾಟಲಿಗಳಿಂದ 180 ಎಂಎಲ್‌ನ 1 ಬಾಟಲಿಯನ್ನು ಸ್ಯಾಂಪಲ್‌ಗಾಗಿ ತೆಗೆದು ಬಿಳಿ ಬಟ್ಟೆಯಿಂದ ಸುತ್ತಿ ಹೆಚ್.ಎಸ್.ಓ ಅರಗು ಸೀಲು ಮಾಡಿರುತ್ತಾರೆ. ಎರಡನೇ ಮೋಟಾರ್ ಬೈಕ್ ಸಂ: KA-19-E-7707 ರ ಸವಾರನ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದಾಗ ಸಂದೀಪ್ ಬಿನ್:ಸಂಜೀವ ಶೆಟ್ಟಿ ಎಂಬಡ್ಕ ಮನೆ, ಎಂಬಡ್ಕ ಪುತ್ತೂರು ಗ್ರಾಮ, ಸುಳ್ಯ ಎಂದು ತಿಳಿಸಿದ್ದು ಸದ್ರಿಯವರಲ್ಲಿರುವ ರಟ್ಟಿನ ಪೆಟ್ಟಿಗೆಯನ್ನು ಪರಿಶೀಲಿಸಿದಾಗ ಸೂಪರ್ ಜಾಕ್ ಕ್ಲಾಸಿಕ್ ವಿಸ್ಕಿಯ 180 ಎಂಎಲ್‌ನ 40 ಸೀಸೆಗಳಲ್ಲಿ ಒಟ್ಟು 7.200 ಲೀ ಮದ್ಯವನ್ನು ಹೊಂದಿರುವುದು. ಸದ್ರಿ ಮದ್ಯದ ಬಾಟಲಿಗಳಿಂದ 180 ಎಂಎಲ್‌ನ 1 ಬಾಟಲಿಯನ್ನು ಸ್ಯಾಂಪಲ್‌ಗಾಗಿ ತೆಗೆದು ಬಿಳಿ ಬಟ್ಟೆಯಿಂದ ಸುತ್ತಿ ಹೆಚ್.ಎಸ್.ಓ ಅರಗು ಸೀಲು ಮಾಡಿರುತ್ತಾರೆ. ಇದು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 34 ರ ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಸದ್ರಿ ಎಲ್ಲಾ ಸೊತ್ತುಗಳನ್ನು ಹಾಗೂ ಸಾಗಾಣಿಕೆಗೆ ಬಳಸಿದ ಮೋಟಾರ್ ಬೈಕ್‌ಗಳನ್ನು ಪಂಚರ ಸಮಕ್ಷಮ ಇಲಾಖಾ ವಶಕ್ಕೆ ತೆಗೆದುಕೊಂಡು ಸ್ಥಳದಲ್ಲಿಯೇ ಮಹಜರು ಜರುಗಿಸಿ ಅರೋಪಿಗಳ ವಿರುದ್ಧ ತಕ್ಷೀರು ಸಂಖ್ಯೆ :137/2007, ದಿನಾಂಕ 8-8-2007 ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿ, ಮಹಜರು ಮತ್ತು ಸೊತ್ತುಗಳ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ಜಪ್ತು ಪಡಿಸಿಕೊಂಡ ಸೊತ್ತುಗಳನ್ನು ಮುಂದಿನ ತನಿಖೆ ಬಗ್ಗೆ ಈ ಪ್ರಾಧಿಕಾರದ ಆದೇಶದ ಮೇರೆಗೆ ಅಬಕಾರಿ ಉಪ ನಿರೀಕ್ಷಕರು(2) ಜಾರಿ ಮತ್ತು ತನಿಖೆ, ಸುಳ್ಯ ಇವರಿಗೆ ದಿ:25-8-2007ರಂದು ಹಸ್ತಾಂತರಿಸಿರುತ್ತಾರೆ.

ಪ್ರಕರಣದ ತನಿಖಾಧಿಕಾರಿಯಾದ ಅಬಕಾರಿ ಉಪ ನಿರೀಕ್ಷಕರು (2) ಸುಳ್ಯ ವಲಯ, ಸುಳ್ಯ ಇವರ ವರದಿ ಸಂ: ಸಿಆರ್ ಎಂ:6:2007-08, ದಿ:24-9-2008ರ ತನಿಖಾ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯದ ಸ್ಯಾಂಪಲ್‌ಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳ ಪಡಿಸಿದ್ದು, ಕರ್ನಾಟಕ ಸರ್ಕಾರ ರಾಸಾಯನಿಕ ವಿಶ್ಲೇಷಕರು ,ಮಂಗಳೂರು ಇವರ ಪತ್ರ ಸಂ: ಇ-228-2 ದಿ:6-9-2007ರಲ್ಲಿ ಮಾದರಿಗಳಲ್ಲಿ ಮದ್ಯದ ಮದ್ಯಸಾರ ಪ್ರಮಾಣ 41.0% ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ನಂತರ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ,ಮಂಗಳೂರು ಇವರನ್ನು ಸಂಪರ್ಕಿಸಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮೋಟಾರ್ ಸೈಕಲ್‌ಗಳ ಬಿ ಎಕ್ಸ್‌ಟ್ರಾಕ್ಟ್ ವರದಿಯನ್ನು ಪಡೆಯಲಾಗಿದ್ದು, ಸದ್ರಿ ವರದಿಯ ಪ್ರಕಾರ 1) CTA-2930ರ ಬಜಾಜ್ ಕೆ.ಬಿ. ಮೋಟಾರ್ ಸೈಕಲ್ ವಾಹನವಾಗಿದ್ದು ಇದರ ಚಾಸೀಸ್ ನಂ: 30CO08276 ಮತ್ತು ಇಂಜಿನ್ ನಂ:30EO08336 ಅಗಿದ್ದು ಇದು 1987ರಲ್ಲಿ ತಯಾರಿಸಿದ್ದು, ಇದರ ನೊಂದಾಣಿ ಮಾಲೀಕರಾದ ಶ್ರೀ.ಗಣೇಶ್ ಎಂ.ಕೆ, ಬಿನ್:ವಾಸುದೇವ, ವಿಜಯನಗರ, ಕುಳಾಯಿ ಮಂಗಳೂರು ಎಂದು ದೃಡೀಕರಿಸಿರುತ್ತಾರೆ. 2) KA-19-E-7707 ರ ನೊಂದಣಿ ಸಂಖ್ಯೆಯ ಹಿರೋ ಹೊಂಡಾ ಸಿಡಿ 100 ವಾಹನವಾಗಿದ್ದು, ಇದರ ಚಾಸೀಸ್ ನಂ:H12F052558 ಮತ್ತು ಇಂಜಿನ್ ನಂ:HI0E676014 ಆಗಿದ್ದು 1992ರಲ್ಲಿ ತಯಾರಿಸಿದ್ದು ಇದರ ನೊಂದಾಣಿ ಮಾಲೀಕರಾದ ಶ್ರೀ.ಎನ್.ನಾಗರಾಜ ಗೌಡ,ಬಿನ್:ಶೇಷಪ್ಪ ಗೌಡ ಎನ್, ನೆಕ್ರಾಜೆ ಹೌಸ್, ಎನೆಕಲ್, ಸುಳ್ಯ ತಾಲೂಕು ಎಂದು ದೃಢೀಕರಿಸಿರುತ್ತಾರೆ. ಸದ್ರಿ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯವನ್ನು ನಾಶಪಡಿಸಲು ಮತ್ತು ವಾಹನಗಳನ್ನು ಬಹಿರಂಗ ಹರಾಜಿನಲ್ಲಿ ವಿಲೇವಾರಿ ಮಾಡಲು ಶಿಪಾರಸ್ಸು ಮಾಡಿರುತ್ತಾರೆ. ತನಿಖಾಧಿಕಾರಿಯ ಶಿಫಾರಸ್ಸಿನ ಮೇರೆಗೆ ಅಬಕಾರಿ ಉಪ ಅಧೀಕ್ಷಕರು, ಪುತ್ತೂರು ಉಪ ವಿಭಾಗ, ಪುತ್ತೂರು ಇವರ ವರದಿ ಸಂ: ಸಿಆರ್‌ಎಂ/ 544/ 08-09 ದಿ:15-10-2008ರಂತೆ ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ಕಲಂ 43 ಸಿ ರೀತ್ಯಾ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ.

ತನಿಖಾಧಿಕಾರಿಯಾದ ಅಬಕಾರಿ ಉಪ ನಿರೀಕ್ಷಕರು(2) ಸುಳ್ಯ ವಲಯ ಮತ್ತು ಅಬಕಾರಿ ಉಪ ಅಧೀಕ್ಷಕರು, ಪುತ್ತೂರು ಉಪ ವಿಭಾಗ ಇವರ ಶಿಫಾರಸ್ಸಿನ ಮೇರೆಗೆ ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳ ಪೈಕಿ ವಾಹನಗಳ ಮುಟ್ಟುಗೋಲು ನಡವಳಿ ಪ್ರಕ್ರಿಯೆಯನ್ನು ಕಾಯ್ದಿರಿಸಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಒಟ್ಟು 14.940 ಲೀಟರು ಮದ್ಯವನ್ನು (ಮಾದರಿಗಳನ್ನು ಹೊರತುಪಡಿಸಿ)ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಈ ಪ್ರಾಧಿಕಾರದ ಆದೇಶ ಸಂ:ಎಸ್‌ಡಿಕೆ:72:ಡಿಟಿಸಿಆರ್:07-08,ದಿ:20-1-09ರಂದು ಆದೇಶ ನೀಡಲಾಗಿರುತ್ತದೆ.

ಸಾರಿಗೆ ಅಧಿಕಾರಿಗಳು ನೀಡಿರುವ ಬಿ ಎಕ್ಸ್‌ಟ್ರಾಕ್ಟ್ ವರದಿಯ ಪ್ರಕಾರ ದ್ವಿಚಕ್ರ ವಾಹನ ಸಂ: CTA-2930 ರ ನೊಂದಣಿ ಮಾಲೀಕರಾದ ಶ್ರೀ ಗಣೇಶ್ ಎಂ.ಕೆ.ಬಿನ್:ವಾಸುದೇವ, ವಿಜಯನಗರ, ಕುಳಾಯಿ ಮಂಗಳೂರು ಇವರಿಗೆ ಮತ್ತು ದ್ವಿಚಕ್ರ ವಾಹನ ಸಂ:KA-19-E-7707 ರ ಆರ್.ಸಿ ಮಾಲೀಕರಾದ ಎನ್.ನಾಗರಾಜ ಗೌಡ, ಬಿನ್:ಶೇಷಪ್ಪ ಗೌಡ ಎನ್, ನೆಕ್ರಾಜೆ ಹೌಸ್, ಎನೆಕಲ್, ಸುಳ್ಯ ತಾಲೂಕು ಇವರುಗಳಿಗೆ ಈ ಪ್ರಾಧಿಕಾರದಿಂದ ದಿ:20-1-2009ರಂದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43ಬಿ ಪ್ರಕಾರ ಕಾರಣ ಕೇಳಿ ನೋಟಿಸುಗಳನ್ನು ನೊಂದಣಿ ಅಂಚೆಯ ಮೂಲಕ ನೀಡಲಾಗಿದ್ದು, ಸದ್ರಿ ಕಾರಣ ಕೇಳಿ ನೋಟಿಸುಗಳಲ್ಲಿ ಶ್ರೀ ಗಣೇಶ್ ಎಂ. ಇವರಿಗೆ ಅಂಚೆ ಇಲಾಖೆ ಮುಖಾಂತರ ನೋಟಿಸು ಜ್ಯಾರಿಯಾಗದೇ ಹಿಂದೆ ಬಂದಿದ್ದು

ಮತ್ತು ಶ್ರೀ ಎನ್.ನಾಗರಾಜ ಇವರಿಗೆ ನೀಡಿದ ಕಾರಣ ಕೇಳಿ ನೋಟಿಸು ದಿ:30-1-2009ರಂದು ಜ್ಯಾರಿಯಾಗಿ ಸ್ವೀಕೃತಿ ಪತ್ರ ಈ ಪ್ರಾದಿಕಾರದಲ್ಲಿ ಸ್ವೀಕೃತವಾಗಿರುತ್ತದೆ. ಆದರೆ ವಾಹನದ ಮಾಲೀಕರು ಸದ್ರಿ ಕಾರಣ ಕೇಳಿ ನೋಟಿಸಿಗೆ ಯಾವುದೇ ಉತ್ತರ ಸಲ್ಲಿಸಿರುವುದಿಲ್ಲ ಮತ್ತು ವಾಹನದ ಬಿಡುಗಡೆಗಾಗಿ ಈ ಪ್ರಾದಿಕಾರದ ಮುಂದೆ ಹಾಜರಾಗಿ ದಾಖಲಾತಿಗಳೊಂದಿಗೆ ಯಾವುದೇ ಅರ್ಜಿ ನೀಡಿರುವುದಿಲ್ಲ.

ಅಬಕಾರಿ ಉಪ ನಿರೀಕ್ಷಕರು(2),ಸುಳ್ಯ ವಲಯ ಇವರ ತನಿಖಾ ವರದಿ ಸಂ:ಸಿಆರ್ಎಂ: 6:2007-08 ದಿ:24-9-2008 ರ ತನಿಖಾ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮೋಟಾರ್ ಸೈಕಲ್‌ಗಳ ನೊಂದಣಿ ಮಾಲೀಕತ್ವದ ಬಗ್ಗೆ ತನ್ನದೆಂದು ಹಕ್ಕು ಚಲಾಯಿಸಲು ಈ ಕಚೇರಿಗೆ ಯಾರೂ ಕೂಡಾ ಸಂಪರ್ಕಿಸಿರುವುದಿಲ್ಲ ಅಥವಾ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಕಾರಣ ಅಕ್ರಮ ಮದ್ಯ ಸಾಗಾಣಿಕೆಗೆ ಬಳಸಿದ CTA-2930 ಮತ್ತು KA-19-E-7707 ಮೋಟಾರ್ ಸೈಕಲ್‌ಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಬೇಕಾಗಿ ಕೋರಿ ಶಿಫಾರಸ್ಸು ತನಿಖಾ ವರದಿ ಸಲ್ಲಿಸಿರುತ್ತಾರೆ.

ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43ಎ ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ, ಅಥವಾ ಪತ್ತೆಯಾಗುವ ಸಾಧ್ಯತೆ ಇಲ್ಲದಿದ್ದಲ್ಲಿ ಪ್ರಕರಣವನ್ನು ಪತ್ತೆಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಫ್ತಾಗಿರುವ ಸೊತ್ತುಗಳು ತಮ್ಮದೆಂದು ಅವುಗಳು ಕಾನೂನು ಬದ್ಧವಾಗಿದೆಯೆಂದು ಸಾಕ್ಷಧಾರಗಳೊಂದಿಗೆ ಸಾಭೀತು ಪಡಿಸದೇ ಇದ್ದಲ್ಲಿ, ಸದ್ರಿ ಸೊತ್ತುಗಳು, ಅಬಕಾರಿ ಕಾಯ್ದೆ ಕಲಂ 43ಸಿ ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ ಅಂತಹ ಸೊತ್ತುಗಳನ್ನು ಕಲಂ 43ಸಿ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಪ್ರಾಧಿಕಾರದಲ್ಲಿ ಲಭ್ಯವಾಗಿರುವ ದಾಖಲಾತಿಗಳ ಪ್ರಕಾರ ದಿನಾಂಕ:08-08-2007 ರಂದು ಪೊಲೀಸ್ ಉಪ ನಿರೀಕ್ಷಕರು, ಸುಳ್ಯ ಪೊಲೀಸ್ ಠಾಣೆ ಇವರು ಅಕ್ರಮ ಮದ್ಯ ಸಾಗಾಣಿಕೆಗೆ ಬಳಸಲಾದ ವಾಹನ ಸಂ:CTA-2930 ಮತ್ತು KA-19-E-7707 ಮೋಟಾರ್ ಸೈಕಲ್‌ಗಳನ್ನು ಪತ್ತೆಹಚ್ಚಿ, ಸೊತ್ತುಗಳನ್ನು ಜಪ್ತುಪಡಿಸಿಕೊಂಡು ಸ್ಥಳ ಮಹಜರು, ಪಂಚನಾಮೆಯ ಮುಖೇನಾ ಸ್ವಾಧೀನಪಡಿಸಿದ್ದು ಮತ್ತು ಮೋಟಾರ್ ಸೈಕಲ್‌ಗಳಲ್ಲಿ ದೊರೆತ ಮದ್ಯದ ಮಾದರಿಗಳು ರಾಸಾಯನಿಕ ತಜ್ಞರ ವರದಿಯಂತೆ ಮದ್ಯವೆಂದು ದೃಢಪಟ್ಟಿರುವುದರಿಂದ ಹಾಗೂ ವಾಹನದ ಮಾಲೀಕರಿಗೆ ಪ್ರಾದಿಕಾರದಿಂದ ನೀಡಲಾದ ಕಾರಣ ಕೇಳಿ ನೋಟಿಸು ವಾಹನ ಸಂ KA-19-7707ರ ಮಾಲೀಕರಾದ ಶ್ರೀ ಎನ್.ನಾಗರಾಜ ಗೌಡ ಇವರಿಗೆ ಜ್ಯಾರಿಯಾಗಿದ್ದರೂ, ಸದ್ರಿ ವಾಹನದ ಮಾಲೀಕತ್ವ ಕೋರಿ ಈ ಪ್ರಾದಿಕಾರಕ್ಕೆ ಯಾವುದೇ ಅರ್ಜಿಯನ್ನು ಸಲ್ಲಿಸದೇ ಇರುವುದರಿಂದ ಹಾಗೂ ವಾಹನ ಸಂ:CTA-2930 ಇದರ ಮಾಲೀಕರಾದ ಶ್ರೀ ಗಣೇಶ್ ಎಂ.ಪಿ ಇವರಿಗೆ ನೀಡಲಾದ ಕಾರಣ ಕೇಳಿ ನೋಟಿಸು ಅಂಚೆ ಮೂಲಕ ಜ್ಯಾರಿಯಾಗದೇ ಹಿಂದಕ್ಕೆ ಬಂದಿದ್ದು, ವಾಹನದ ಮಾಲೀಕರು ತನ್ನ ತಿಳುವಳಿಕೆಯಿಂದಲೇ ಅಕ್ರಮವಾಗಿ ತಯಾರಿಸಲಾದ ಮದ್ಯವನ್ನು ಸಾಗಾಣಿಕೆಗೆ ಸದ್ರಿ ವಾಹನಗಳನ್ನು ಬಳಸಿರುವುದು ಸ್ಪಷ್ಟವಾಗಿ ಈ ಪ್ರಾದಿಕಾರಕ್ಕೆ ಮನದಟ್ಟವಾಗಿರುವುದರಿಂದ ಈ ಪ್ರಾದಿಕಾರವು ವಾಹನಗಳ ಮುಟ್ಟುಗೋಲು ನಡವಳಿ ಬಗ್ಗೆ ತೀರ್ಮಾನ ತೆಗೆದು ಕೊಳ್ಳಬೇಕಾಗಿರುತ್ತದೆ.

ಸದ್ರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ CTA-2930 ಮತ್ತು KA-19-E-7707 ಎಂದು ಸಂಖ್ಯಾ ಫಲಕ ಹೊಂದಿರುವ ಮೋಟಾರ್ ಸೈಕಲ್‌ಗಳನ್ನು ವಶಪಡಿಸಿಕೊಂಡು ಸುಮಾರು 1 ವರ್ಷ 7 ತಿಂಗಳು ಕಳೆದರೂ ವಾಹನ ಮಾಲೀಕರು ತಮ್ಮ ವಾಹನಗಳ ಒಡೆತನವನ್ನು ಸಾಭೀತು ಪಡಿಸಿಕೊಂಡು ಸಮಂಜಾಯಿಷಿಯನ್ನು ನೀಡಿರುವುದಿಲ್ಲ. ಹಾಗೂ ಮಾಲೀಕತ್ವವನ್ನು ಕೋರಿ ಯಾವುದೇ ಅರ್ಜಿಯನ್ನು ವಾಹನದ ಸಂಬಂಧ ಪಟ್ಟ ದಾಖಲಾತಿಗಳೊಂದಿಗೆ ಈ ಪ್ರಾದಿಕಾರಕ್ಕೆ ಹಾಗೂ ತನಿಖಾಧಿಕಾರಿಗಳಲ್ಲಿ ಹಾಜರು ಪಡಿಸಿರುವುದಿಲ್ಲ. ಈ ಕಾರಣದಿಂದಾಗಿ ಪ್ರಕರಣ ಸಂದರ್ಭದಲ್ಲಿ ದಸ್ತಗಿರಿಯಾದ ಆರೋಪಿಗಳು ವಾಹನದ ಮಾಲೀಕರ ಶಾಮೀಲಾತಿಯೊಂದಿಗೆ ಹಾಗೂ ವಾಹನ ಮಾಲೀಕರ ತಿಳುವಳಿಕೆಯಿಂದಲೇ ವಾಹನವನ್ನು ಅಕ್ರಮ ಮದ್ಯ ಸಾಗಾಣಿಕೆಗೆ ಬಳಸಿರುವುದು ಕಂಡು ಬರುತ್ತದೆ. ಅಲ್ಲದೇ ವಾಹನವನ್ನು ಪಡೆಯಲು ಮತ್ತು ತಕ್ಷೀರು ಕುರಿತು ವಿಚಾರಣೆ ನಡೆಸಲು ಉತ್ಸುಕರಾಗಿಲ್ಲ ಎಂಬುದಾಗಿ ಈ ಪ್ರಾದಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ. ಪೊಲೀಸ್ ಉಪ ನಿರೀಕ್ಷಕರು ಸುಳ್ಯ ಪೊಲೀಸ್ ಠಾಣೆ, ಸುಳ್ಯರವರು ದಾಖಲಿಸಿರುವ ಮೊಕದ್ದಮೆಯಂತೆ ಸದ್ರಿ ವಾಹನಗಳಲ್ಲಿ ಅಕ್ರಮವಾಗಿ ಮದ್ಯವನ್ನು ತಯಾರಿಸಿ ಸಾಗಾಣಿಕೆ ಮಾಡುತ್ತಿರುವುದನ್ನು ಪತ್ತೆ ಮಾಡಿ, ಸ್ಥಳ ಮಹಜರಿನ ಮೂಲಕ ಸಾಗಾಣಿಕೆಗೆ ಬಳಸಿದ ವಾಹನಗಳನ್ನು ಹಾಗೂ ಅಕ್ರಮ ಮದ್ಯವನ್ನು ಜಪ್ತು ಪಡಿಸಿರುವುದು ಮತ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಜಪ್ತು ಪಡಿಸಲಾದ ಪದಾರ್ಥವು ಮದ್ಯವೆಂದು ದೃಡೀಕೃತವಾಗಿರುವುದು ಇದು ಅಕ್ರಮವಾಗಿ ಮದ್ಯವನ್ನು ವಾಹನಗಳಲ್ಲಿ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಮೇಲಿನ ವಿದ್ಯಾಮಾನಗಳಿಂದ ಹಾಗೂ ಪ್ರಾದಿಕಾರದ ಮುಂದೆ ಲಭ್ಯವಿರುವ ದಾಖಲಾತಿಗಳಿಂದ ಸಾಭೀತಾಗಿರುತ್ತದೆ.

ಸದ್ರಿ ಮೋಟಾರ್ ಸೈಕಲ್‌ಗಳನ್ನು ವಶಪಡಿಸಿಕೊಂಡು ಸುಮಾರು 1 ವರ್ಷ 7 ತಿಂಗಳಿಗಿಂತ ಹೆಚ್ಚು ಸಮಯ ಕಳೆದಿದ್ದು, ವಾಹನದ ಆರ್.ಸಿ. ಮಾಲೀಕರಿಗೆ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಬಿ ಪ್ರಕಾರ ಕಾರಣ ಕೇಳಿ ನೋಟಿಸು ನೀಡಿ ಕಾಲಾವಕಾಶ ನೀಡಿದ್ದರೂ ಅವರಾಗಲೀ ಅಥವಾ ಬೇರೆ ಯಾವ ವ್ಯಕ್ತಿಯು ಸೂಕ್ತ ದಾಖಲಾತಿಗಳೊಂದಿಗೆ

ವಾಹನಗಳ ಮಾಲೀಕತ್ವವನ್ನು ತಿಳಿಸಿ ವಾಹನದ ಬಿಡುಗಡೆ ಕೋರಿ ಈ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ. ಕಾರಣ ಅಕ್ರಮ ಮದ್ಯ ಸಾಗಾಣಿಕೆಗೆ ಬಳಸಿದ CTA-2930 ಮತ್ತು KA-19-E-7707 ಎಂದು ಸಂಖ್ಯಾ ಫಲಕ ಹೊಂದಿರುವ ಮೋಟಾರ್ ಸೈಕಲ್‌ಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಿಲೇವಾರಿ ಮಾಡುವುದು ಯೋಗ್ಯವೆಂದು ತೀರ್ಮಾನ ತೆಗೆದುಕೊಳ್ಳಬಹುದಾಗಿರುವುದರಿಂದ ಈ ಆದೇಶ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43ಬಿ ಅಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ, ಕಲಂ 43ಎ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪೋಲೀಸ್ ಉಪ ನಿರೀಕ್ಷಕರು, ಸುಳ್ಯ ಪೋಲೀಸ್ ಠಾಣೆ, ಸುಳ್ಯ ಇವರ ಪ್ರಥಮ ಮಾಹಿತಿ ವರದಿ ಸಂ:137/2007, ದಿನಾಂಕ:8–8–2007 ರಲ್ಲಿ ಮದ್ಯವನ್ನು ಹೊಂದಿ ಅಕ್ರಮ ಸಾಗಾಣಿಕೆಗೆ ಬಳಸಿದ CTA-2930 ಮತ್ತು KA-19-E-7707 ಎಂದು ಸಂಖ್ಯಾ ಫಲಕ ಹೊಂದಿರುವ ಮೋಟಾರ್ ಸೈಕಲ್‌ಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 43ಸಿ ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ: 24–03–2009ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.354

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ:ಎಸ್‌ಡಿಕೆ/167/ಡಿಟಿಸಿಆರ್/2004–05, ದಿನಾಂಕ:30ನೇ ಜನವರಿ, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ. ಮಂಗಳೂರು.

ಫಿರ್ಯಾದುದಾರರು:
ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ಉಪವಿಭಾಗ, ಮಂಗಳೂರು.

ಆರೋಪಿ:
ಶ್ರೀ ಉಲ್ಲಾಸ್ ಭಂಡಾರಿ, (31 ವ) ಬಿನ್:ಆನಂದ ಭಂಡಾರಿ, ಉರುಂದಾಡಿ ಗುಡ್ಡೆ,ಪಂಜಿಮೊಗರು, ಕೂಳೂರು.

ಅರ್ಜಿದಾರರು:
ಶೇಖರ್ ಬಿನ್:ಕಾಳಿಮುತ್ತು, ಪಂಜಿಮೊಗರು, ಕೂಳೂರು, ಮಂಗಳೂರು ತಾಲೂಕು (ಹಾಲಿ ವಿಳಾಸ:ದಿನೇಶ್ ಹೇರ್ ಡ್ರೆಸಸ್ಸ್, ತನುಷ್ ಕಾಂಪ್ಲೆಕ್ಸ್, ಕೊಟ್ಟಾರ ಚೌಕಿ, ಅಶೋಕ ನಗರ ಅಂಚೆ, ಉರ್ವಾಸ್ಟೋರ್) (ವಾಹನದ ಮಾಲೀಕರು)

ಪ್ರಕರಣದ ಮುಖ್ಯಾಂಶಗಳು:

ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ಉಪವಿಭಾಗ, ಮಂಗಳೂರು ಇವರು ಸಿಬ್ಬಂದಿಯವರೊಂದಿಗೆ ದಿ:18–11–2004 ರಾತ್ರಿ ಸುಮಾರು 10–00 ಗಂಟೆ ಸಮಯಕ್ಕೆ ಮಂಗಳೂರು ರೈಲ್ವೆ ನಿಲ್ದಾಣದ ಮುಖ್ಯದ್ವಾರದ ಬಳಿ ಇರುವ ಮುತ್ತಪ್ಪ ದೇವಸ್ಥಾನದ ಗೇಟಿನ ಮುಂಭಾಗದ ಸಾರ್ವಜನಿಕ ರಸ್ತೆಯ ಎಡಬದಿಯಲ್ಲಿನ ಮರದ ಬುಡದಲ್ಲಿ 100 ಎಂಎಲ್‌ನ 300 ನಕಲಿ ಸಾರಾಯಿ ಸ್ಯಾಚೇಟುಗಳನ್ನು ಹೊಂದಿ ಸಾಗಾಣಿಕೆಗೆ ಬಳಸಿದ ದ್ವಿಚಕ್ರ ವಾಹನ ಹೀರೋ ಹೊಂಡಾ ಸಂ: KA-19K-6819ನ್ನು ಪತ್ತೆಹಚ್ಚಿ, ಇದು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ11,12,14ರಂತೆ ಅಪರಾಧವಾಗಿದ್ದು ಹಾಗೂ 32(2) ಮತ್ತು 34 ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಅರೋಪಿಯಾದ ಉಲ್ಲಾಸ್ ಭಂಡಾರಿ ಶ್ರೀ ಉಲ್ಲಾಸ್ ಭಂಡಾರಿ, (31 ವ) ಬಿನ್:ಆನಂದ ಭಂಡಾರಿ, ಉರುಂದಾಡಿ ಗುಡ್ಡೆ, ಪಂಜಿಮೊಗರು, ಕೂಳೂರು ಇವರ ವಿರುದ್ಧ ತಕ್ಷೀರು ಸಂಖ್ಯೆ: 9/2004–05, ದಿನಾಂಕ:18–11–2004ರಂತೆ ಪ್ರಕರಣವನ್ನು ನೋಂದಾಯಿಸಿ ಮಾನ್ಯ ನ್ಯಾಯಾಲಯಕ್ಕೆ ವರದಿಯನ್ನು ಒಪ್ಪಿಸಿರುತ್ತಾರೆ.

ಜಪ್ತು ಪಡಿಸಿಕೊಂಡ ಸೊತ್ತುಗಳು

1) 100 ಎಂಎಲ್‌ನ 300 ಸಾರಾಯಿ ಸ್ಯಾಚೇಟುಗಳು
2) ಹಿರೋ ಹೊಂಡಾ ದ್ವಿಚಕ್ರ ವಾಹನ ಸಂ: KA-19K-6819

ಪ್ರಕರಣದ ತನಿಖೆಯನ್ನು ಕೈಗೊಂಡ ಅಬಕಾರಿ ಉಪ ನಿರೀಕ್ಷಕರು, ಮಂಗಳೂರು, ಉಪ ವಿಭಾಗ ಇವರ ಪ್ರಥಮ ತನಿಖಾ ವರದಿ ಸಂಖ್ಯೆ: ಮಂ.ಉ.ವಿ/ಸಿಆರ್‌ಎಂ/9/2004-05 ದಿನಾಂಕ:3-3-2005ರ ವರದಿಯೊಂದಿಗೆ ವಶಪಡಿಸಿಕೊಂಡ ಸಾರಾಯಿಯನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ ಕರ್ನಾಟಕ ಸರ್ಕಾರದ ಮುಖ್ಯ ರಾಸಾಯನಿಕ ವಿಶ್ಲೇಷಕರು,ಕೇಂದ್ರ ರಾಸಾಯನ ಪ್ರಯೋಗಾಲಯ, ಬೆಂಗಳೂರು ಇವರಿಂದ ರಾಸಾಯನಿಕ ವಿಶ್ಲೇಷಣಾ ವರದಿ ಸಂ:ಸಿಸಿಎಲ್-944/05 ದಿ:19-2-2005ನ್ನು ಪಡೆದು ಸಲ್ಲಿಸಿದ್ದು, ಸದ್ರಿ ವರದಿಯ ಪ್ರಕಾರ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾಗಿರುವ ಸಾರಾಯಿಯಲ್ಲಿ ಮದ್ಯಸಾರ ಪ್ರಮಾಣ 55.4 ಡಿಗ್ರಿ ಯು.ಪಿ. ಇರುವುದಾಗಿ ಹಾಗೂ ಭಾರತೀಯ ಮಾನಕ ಬ್ಯೂರೋದ ಮಾನಕಕ್ಕೆ ಅನುಗುಣವಾಗಿರುವುದಿಲ್ಲ ಎಂದು ದೃಢೀಕರಣ ಪತ್ರ ನೀಡಿರುತ್ತಾರೆ. ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ,ದ.ಕ.ಜಿಲ್ಲೆ ಮಂಗಳೂರು ಇವರಿಂದ ಪಡೆದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ಪ್ರತಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಸದ್ರಿ ಬಿ ಎಕ್ಸ್‌ಟ್ರಾಕ್ಟ್ ಪ್ರಕಾರ ಶ್ರೀ ಶೇಖರ್ ಬಿನ್: ಕಾಳಿಮುತ್ತು, ಪಂಜಿಮೊಗರು, ಕೂಳೂರು, ಮಂಗಳೂರು ತಾಲೂಕು ಇವರು ದಿ:22-1-2004 ರಿಂದ ಅನ್ವಯವಾಗುವಂತೆ ಸದ್ರಿ ವಾಹನದ ನೋಂದಾವಣೆ ಮಾಲೀಕರಾಗಿರುವುದಾಗಿ ದೃಢೀಕರಿಸಿರುತ್ತಾರೆ.

ವಾಹನ ಮಾಲೀಕರಿಗೆ ಕರ್ನಾಟಕ ಅಬಕಾರಿ ಕಾಯಿದೆ 1965ರ ಸೆಕ್ಷನ್ 43ಬಿ ಪ್ರಕಾರ ಕಾರಣ ಕೇಳಿ ನೋಟಿಸನ್ನು ಈ ಪ್ರಾಧಿಕಾರದಿಂದ ದಿ:16-12-2004ರಂದು ನೋಂದಣೆ ಅಂಚೆ ಮೂಲಕ ನೀಡಲಾಗಿದ್ದು, ಸದ್ರಿ ನೋಟಿಸು ಜಾರಿಯಾಗದೇ ಅಂಚೆ ಷರಾದೊಂದಿಗೆ ವಾಪಸ್ಸು ಬಂದಿರುತ್ತದೆ.

ಶ್ರೀ ಶೇಖರ್ ಬಿನ್: ಕಾಳಿಮುತ್ತು,. ಪಂಜಿಮೊಗರು, ಕೂಳೂರು, ಮಂಗಳೂರು ತಾಲೂಕು ಇವರು ದಿ:3-1-2005ರಂದು ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ. ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ ತಮ್ಮ ವಕೀಲರ ಮೂಲಕ ಅರ್ಜಿಯನ್ನು ಸಲ್ಲಿಸಿ, ತಾನು ಪ್ರಕರಣದಲ್ಲಿ ಜಪ್ತಾದ ವಾಹನ ಸಂ: KA-19K-6819 ಹಿರೋ ಹೊಂಡಾ ಬೈಕ್ ಇದರ ನೋಂದಣಿ ಮಾಲಿಕನಾಗಿದ್ದು, ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನವನ್ನು ಮದ್ಯಂತರ ಬಿಡುಗಡೆಗೊಳಿಸಬೇಕೆಂದು ಮನವಿ ಮಾಡಿಕೊಂಡಿರುತ್ತಾರೆ. ಪ್ರಕರಣದಲ್ಲಿ ಜಪ್ತಾದ ವಾಹನವನ್ನು ಮದ್ಯಂತರ ಬಿಡುಗಡೆಗೊಳಿಸುವ ಬಗ್ಗೆ ಸಲ್ಲಿಸಿದ್ದ ಅರ್ಜಿದಾರರ ಅರ್ಜಿಯನ್ನು ಪರಿಶೀಲಿಸಿ, ಸರ್ಕಾರದ ಅಧಿಸೂಚನೆ ಸಂ: ವೈಶಾಇ: 38: ಶಾಸನ: 2003 ದಿ:3-9-2003ರಲ್ಲಿ ಅಬಕಾರಿ ಕಾಯಿದೆ 43ಎ ತಿದ್ದುಪಡಿಯಾಗಿರುವ ಹಿನ್ನಲೆಯಲ್ಲಿ ತಾತ್ಕಾಲಿಕ ನೆಲೆಯಲ್ಲಿ ವಾಹನ ಬಿಡುಗಡೆಮಾಡುವ ಸಂದರ್ಭದಲ್ಲಿ ವಾಹನದ ಮೌಲ್ಯಕ್ಕೆ ಅನುಗುಣವಾಗಿ ಭದ್ರತೆಗಾಗಿ ಬ್ಯಾಂಕ್ ಗ್ಯಾರೆಂಟಿಯನ್ನು ಕಡ್ಡಾಯವಾಗಿ ಒಪ್ಪಿಸಬೇಕು ಹಾಗೂ ಸದ್ರಿ ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸ್ಯಾಚೇಟುಗಳನ್ನು ಸಾಗಾಟ ಮಾಡಿರುವುದು ಖಚಿತವಾಗಿರುವುದರಿಂದ ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ ಮಂಗಳೂರು ಇವರ ನ್ಯಾಯಾಲಯದ ಆದೇಶ ಸಂ:ಎಸ್‌ಡಿಕೆ: ಡಿಟಿಸಿಆರ್: 167:2004-05, ದಿ:20-1-2005ರ ಆದೇಶದಲ್ಲಿ ಮದ್ಯಂತರ ಬಿಡುಗಡೆಗಾಗಿ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಲಾಗಿರುತ್ತದೆ. ಪ್ರಾಧಿಕಾರದ ಸದ್ರಿ ಆದೇಶದ ವಿರುದ್ದ ವಾಹನದ ಮಾಲೀಕರು ಮಾನ್ಯ ದಕ್ಷಿಣ ಕನ್ನಡ ಜಿಲ್ಲಾ ಸೆಷನ್ಸ್ ಜಡ್ಜ್ ನ್ಯಾಯಾಲಯ, ಮಂಗಳೂರು ಇಲ್ಲಿಗೆ ಮೇಲ್ಮನವಿ ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯದ ಕ್ರಿಮಿನಲ್ ಅಪೀಲ್ ಸಂ: 59/2005 ದಿ: 28-3-2005ರ ಆದೇಶದಲ್ಲಿ ಪ್ರಾಧಿಕಾರ ನಿಗಧಿಪಡಿಸಿದಂತೆ ವಾಹನದ ಮೌಲ್ಯಕ್ಕೆ ಸಮಾನವಾದ ಬ್ಯಾಂಕ್ ಗ್ಯಾರೆಂಟಿ ಮತ್ತು ಇತರೆ ಷರತ್ತುಗಳನ್ನು ಪಾಲಿಸುವ ಷರತ್ತಿನ ಮೇಲೆ ಹಿರೋ ಹೊಂಡಾ ಬೈಕ್ ಸಂ:KA-19K-6819ನ್ನು ವಾಹನದ ಮಾಲೀಕರ ಮದ್ಯಂತರ ಸುಪರ್ದಿಗೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲು ಆದೇಶಿಸಿರುವ ಮೇರೆಗೆ, ಪ್ರಾಧಿಕಾರದ ದಿ:19-5-2005ರ ಅದೇಶದಲ್ಲಿ ಜಪ್ತು ಪಡಿಸಿಕೊಳ್ಳಲಾದ ವಾಹನ ಹಿರೋ ಹೊಂಡಾ ಬೈಕ್ ಸಂ:KA-19K-6819ನ್ನು ರೂ.17,500/- ಮೊತ್ತದ ಬ್ಯಾಂಕ್ ಗ್ಯಾರೆಂಟಿಯನ್ನು ಪ್ರಾಧಿಕಾರಕ್ಕೆ ಒಪ್ಪಿಸುವ ಹಾಗೂ ಇತರೆ ಷರತ್ತುಗಳ ಮೇಲೆ ವಾಹನವನ್ನು ಮಾಲೀಕರ ಸುಪರ್ದಿಗೆ ಮದ್ಯಂತರ ಬಿಡುಗಡೆಗೊಳಿಸಿ ಆದೇಶಿಸಲಾಗಿರುತ್ತದೆ. ಆ ಪ್ರಕಾರ ಅರ್ಜಿದಾರರು ರೂ.17,500/- ಮೌಲ್ಯದ ಬ್ಯಾಂಕ್ ಗ್ಯಾರೆಂಟಿಯನ್ನು ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಮಂಗಳೂರು ಶಾಖೆ ಇಲ್ಲಿಂದ ಪಡೆದು ಪ್ರಾಧಿಕಾರಕ್ಕೆ ಸಲ್ಲಿಸಿ, ಷರತ್ತುಗಳನ್ನು ಪಾಲಿಸುವ ಬಗ್ಗೆ ಮುಚ್ಚಳಿಕೆ ಪತ್ರವನ್ನು ಪ್ರಾಧಿಕಾರಕ್ಕೆ ನೀಡಿರುವುದರಿಂದ ವಾಹನದ ಮುಟ್ಟುಗೋಲು ನಡವಳಿಯನ್ನು ಕಾಯ್ದಿರಿಸಿ, ವಾಹನವನ್ನು ವಾಹನದ ಮಾಲೀಕರ ಮದ್ಯಂತರ ಸುಪರ್ದಿಗೆ ಬಿಡುಗಡೆಗೊಳಿಸಿ ಆದೇಶಿಸಲಾಗಿರುತ್ತದೆ.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ ಮಂಗಳೂರು ಇವರ ಆದೇಶ ಸಂ:ಎಸ್‌ಡಿಕೆ:ಡಿಟಿಸಿಆರ್:167:04-05,ದಿ:15-3-2005ರ ಆದೇಶದಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿಯನ್ನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಎ ಯಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಸಾರಾಯಿಯನ್ನು ಅಬಕಾರಿ ಉಪ ಅಧೀಕ್ಷಕರು, ಮಂಗಳೂರು ಉಪ ವಿಭಾಗ ಇವರ ಸಮಕ್ಷಮ ಮಹಜರು ಜರುಗಿಸಿ ನಾಶಪಡಿಸಲು ಆದೇಶಿಸಲಾಗಿರುತ್ತದೆ.

ನಂತರ ವಿಚಾರಣೆಯನ್ನು ಪ್ರಾರಂಭಿಸಿ ಸರ್ಕಾರದ ಪರ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ ಸಾಕ್ಷಿಗಳ ಹೇಳಿಕೆಯನ್ನು ಪಡೆಯಲಾಗಿರುತ್ತದೆ. ಪ್ರತಿರಕ್ಷಾ ಸಾಕ್ಷಿಗಳು ರಕ್ಷಣಾ ಸಾಕ್ಷಿ ವಿಚಾರಣೆಗಾಗಿ ಪ್ರಾಧಿಕಾರದಿಂದ ದಿ:15-11-2007, 16-1-2008, 20-2-2008, 9-4-2008, 11-6-2008 ಮತ್ತು 6-8-2008ರಂತೆ ಕಾಲಾವಕಾಶ ನೀಡಲಾಗಿದ್ದರೂ, ರಕ್ಷಣಾ ವಿಚಾರಣೆ

ನಡೆಸಲು ಆರ್.ಸಿ. ಮಾಲೀಕರ ವಕೀಲರು ಮುಂದೆ ಬಾರದೇ ಇರುವ ಕಾರಣ ರಕ್ಷಣಾ ವಿಚಾರಣೆ ಇಲ್ಲವೆಂದು ತೀರ್ಮಾನಿಸಲಾಗಿದೆ.

ಈ ಪ್ರಕರಣದಲ್ಲಿ ಸರ್ಕಾರದ ಅಭಿಯೋಜನ ಪರ ಸಲ್ಲಿಸಿರುವ ಸಾಕ್ಷ್ಯಾಧಾರಗಳಿಂದ ಈ ಕೆಳಗಿನ ವಿವಿದಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾಂಶಗಳು ಈ ಕೆಳಗಿನಂತಿರುತ್ತದೆ.

1. ದಿನಾಂಕ:18-11-2004ರಂದು ಹಿರೋ ಹೊಂಡಾ ಬೈಕ್ ಸಂಖ್ಯೆ:KA-19K-6819 ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೆ ಸಾರಾಯಿಯನ್ನು ಸಾಗಾಣಿಕೆ ಮಾಡಲಾಗಿದೆಯೇ?

2. ವಶಪಡಿಸಿಕೊಂಡಿರುವ ವಾಹನ ಮಾಲೀಕ ತಾನೆಂಮು, ತನಗೆ ತಿಳಿಯದೇ ಅಕಮ ಸಾರಾಯಿ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನ ಮಾಲೀಕರು ಸಾಬೀತುಪಡಿಸಿದಾರೆಯೇ?

3. ಜಪ್ತು ಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ-1:

ಶ್ರೀ ಕೃಷ್ಣಪ್ಪ ಎಂ, ಅಬಕಾರಿ ಉಪ ನಿರೀಕ್ಷಕರವರು ದಿನಾಂಕ:24-5-2007 ರಂದು ಈ ಪ್ರಾದಿಕಾರದ ಮುಂದೆ ಹಾಜರಾಗಿ ಇವರು ಪ್ರಕರಣದ ಪಿರ್ಯಾದುದಾರರಾಗಿದ್ದು, ತಮ್ಮ ಸಾಕ್ಷಿಯನ್ನು ನೀಡಿರುತ್ತಾರೆ. ತಾನು 2003ನೇ ಇಸವಿಯಿಂದ 2005ರವರೆಗೆ ಮಂಗಳೂರು ಉಪವಿಭಾಗ ಕಛೇರಿಯಲ್ಲಿ ಅಬಕಾರಿ ಉಪ ನಿರೀಕ್ಷಕರಾಗಿ ಕೆಲಸ ನಿರ್ವಹಿಸಿದ್ದೇನೆ. ದಿ:18-11-2004 ರಂದು ನಾನು ಮಂಗಳೂರು ನಗರದ ರೈಲ್ವೆ ನಿಲ್ದಾಣದ ಬಳಿ ಗಸ್ತು ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ರೈಲ್ವೆ ನಿಲ್ದಾಣದ ಮುಖ್ಯ ದ್ವಾರದಲ್ಲಿರುವ ಒಂದು ಮರದ ಬುಡದಲ್ಲಿ ಒಬ್ಬ ಅಸಾಮಿಯು ನಿಂತು ಕೊಂಡಿದ್ದನು. ಆತನ ಬಳಿ ಹಿರೋ ಹೊಂಡಾ ದ್ವಿಚಕ್ರ ವಾಹನ ಇರುವುದು ಕಂಡು ಬಂತು. ಸದ್ರಿ ವಾಹನದ ಪೆಟ್ರೋಲ್ ಟ್ಯಾಂಕ್ ಮೇಲೆ ಒಂದು ಬಿಳಿ ಬಣ್ಣದ ಗೋಣಿ ಚೀಲ ಇದ್ದುದು ಕಂಡು ಬಂತು. ನನ್ನೊಂದಿಗೆ ನಮ್ಮ ಅಬಕಾರಿ ನಿರೀಕ್ಷಕರಾದ ಪಿಂಟೋ ಮತ್ತು ಇಬ್ಬರು ರಕ್ಷಕರು ಇದ್ದರು. ನಾವು ಕೂಡಲೇ ಸದ್ರಿ ಹಿರೋ ಹೊಂಡಾ ದ್ವಿಚಕ್ರ ವಾಹನದ ಬಳಿ ಹೋಗಿ ನೋಡಲಾಗಿ ಅಲ್ಲಿ ಸಾರಾಯಿ ವಾಸನೆ ಬರುತ್ತಿತ್ತು. ಸದ್ರಿ ಅಸಾಮಿಯನ್ನು ನಾವು ವಿಚಾರಿಸಿದಾಗ ಸದ್ರಿ ಬಿಳಿ ಬಣ್ಣದ ಪ್ಲಾಸ್ಟಿಕ್ ಗೋಣಿ ಚೀಲದಲ್ಲಿ ಸಾರಾಯಿ ಇದ್ದು ,ಅದನ್ನು ಕೇರಳ ರಾಜ್ಯಕ್ಕೆ ಮಾರಾಟ ಮಾಡಲು ಸಾಗಿಸುವುದಾಗಿ ತಿಳಿಸಿದನು. ಸದ್ರಿ ಗೋಣಿ ಚೀಲವನ್ನು ನಾವು ತೆರೆದು ನೋಡಲಾಗಿ ಅದರಲ್ಲಿ ಸಾರಾಯಿ ತುಂಬಿದ ಸ್ಯಾಚೇಟುಗಳು ಇದ್ದವು. ಸದ್ರಿ ಸ್ಯಾಚೇಟುಗಳ ಮೇಲೆ ಮೈಶುಗರ್ ಕಂಪೆನಿ, ಉಡುಪಿ ಜಿಲ್ಲೆ ಎಂದು ಮುದ್ರಿಸಲಾಗಿತ್ತು. ಅವು 100 ಎಂಎಲ್‌ನ ಗಾತ್ರದ ಒಟ್ಟು 300 ಸ್ಯಾಚೇಟುಗಳು ಇದ್ದವು ಸದ್ರಿ ಸ್ಯಾಚೇಟುಗಳನ್ನು ಸ್ವಾಧೀನದಲ್ಲಿಟ್ಟುಕೊಳ್ಳಲು ಆತನಲ್ಲಿ ಯಾವುದೇ ಪರವಾನಿಗೆ ಇರಲಿಲ್ಲ. ಸದ್ರಿ ಸ್ಯಾಚೇಟುಗಳಲ್ಲಿ 10 ಸ್ಯಾಚೇಟುಗಳನ್ನು ಪ್ರತ್ಯೇಕಿಸಿ ಮಾದರಿ ತಯಾರಿಸಿದೆವು. ಅವುಗಳ ಮೇಲೆ ಸೀಲನ್ನು ಮುದ್ರಿಸಿದೆವು. ಸದ್ರಿ ಸ್ಯಾಚೇಟುಗಳನ್ನು ಸಾಗಾಟ ಮಾಡಲು ಉಪಯೋಗಿಸುತ್ತಿದ್ದ ವಾಹನ ಹಿರೋ ಹೊಂಡಾ ಸಂ: KA-19K-6819 ನ್ನು ತಮ್ಮ ವಶಕ್ಕೆ ತೆಗೆದುಕೊಂಡೆವು. ಸದ್ರಿ ಹಿರೋ ಹೊಂಡಾದ ಇಂಜಿನ್ ನಂಬ್ರ ಮತ್ತು ಚಾಸೀಸ್ ನಂಬ್ರವನ್ನು ಮಹಜರಿನಲ್ಲಿ ನಮೂದಿಸಿದೆನು. ಸ್ಥಳದಲ್ಲಿ ಒಂದು ಯಾದಾಸ್ತನ್ನು ಬರೆದನು., ಸೊತ್ತು ಪಟ್ಟಿಯನ್ನು ತಯಾರಿಸಿದೆವು. ವಾಹನವನ್ನು ತಪಾಸಣೆ ಮಾಡುವ ಮೊದಲು ನ್ಯಾಯಾಲಯದಿಂದ ವಾರೆಂಟ್ ಪಡೆದುಕೊಳ್ಳುವರೇ ಸಮಯಾವಕಾಶ ಇಲ್ಲವೆಂದು ಕಾರಣಗಳನ್ನು ನಮೂದಿಸಿ ಒಂದು ಮೆಮೋವನ್ನು ತಯಾರಿಸಿದೆವು. ಯಾದಾಸ್ತನ್ನು ನಿಶಾನೆ ಪಿ-1 ಎಂದು ಗುರುತಿಸಲಾಯಿತು. ಶೋಧನಾ ಪಟ್ಟಿಯನ್ನು ನಿಶಾನೆ ಪಿ-2 ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಒಂದು ಮಾದರಿ ಸೀಲನ್ನು ತಯಾರಿಸಿದೆವು. ಅದನ್ನು ನಿಶಾನೆ ಪಿ-3 ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಆರೋಪಿಯನ್ನು ಮತ್ತು ಸೊತ್ತುಗಳನ್ನು ವಶಕ್ಕೆ ತೆಗೆದುಕೊಂಡು ಕಛೇರಿಗೆ ಬಂದು ಅಲ್ಲಿ ಒಂದು ಪ್ರ.ಮಾ.ವ ನ್ನು ತಯಾರಿಸಿದೆನು. ಪ್ರಥಮ ಮಾಹಿತಿ ವರದಿಯನ್ನು ನಿಶಾನೆಪಿ-4 ಎಂದು ಗುರುತಿಸಲಾಯಿತು. ಪ್ರ.ಮಾ.ವನ್ನು ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಗಳಿಗೂ ಸಲ್ಲಿಸಿರುತ್ತೇನೆ. ಅದನ್ನು ನಿಶಾನೆ ಪಿ-5 ಎಂದು ಗುರುತಿಸಲಾಯಿತು. ದಿ:18-2-2005ರಂದು ಈ ಪ್ರಕರಣದ ಮಾದರಿ ಸ್ಯಾಚೇಟುಗಳನ್ನು ಅಬಕಾರಿ ರಕ್ಷಕ ಶ್ರೀ.ಪ್ರೇಮಾನಂದ ಇವರ ಮುಖಾಂತರ ಬೆಂಗಳೂರಿನ ರಾಸಾಯನಿಕ ವಿಶ್ಲೇಷಣಾ ಕಛೇರಿಗೆ ಕಳುಹಿಸಿರುತ್ತೇನೆ. ದಿ:19-2-05ರಂದು ತಜ್ಞರು ಪರೀಕ್ಷಿಸಿದ ಸದ್ರಿ ಸಾರಾಯಿ ಸ್ಯಾಚೇಟುಗಳನ್ನು ಹಾಗೂ ತಜ್ಞರ ವರದಿಯನ್ನು ಅದೇ ಅಬಕಾರಿ ರಕ್ಷಕರಿಂದ ಪಡೆದಿರುತ್ತೇನೆ. ಸದ್ರಿ ವರದಿಯ ಪ್ರತಿಯನ್ನು ಈಗ ನೋಡಿದೆನು. ಅದನ್ನು ನಿಶಾನೆ ಪಿ-6 ಎಂದು ಗುರುತಿಸಲಾಯಿತು. ಪ್ರಕರಣದಲ್ಲಿ ವಶಪಡಿಸಿಕೊಂಡ ವಾಹನ ಸಂ: ಕೆಎ-19-ಕೆ-6819 ಇದರ ಮಾಲೀಕತ್ವದ ಬಗ್ಗೆ ಮಾಹಿತಿ ಪಡೆಯಲು ಆರ್.ಟಿ.ಓ ಕಛೇರಿಗೆ ಪತ್ರ ಬರೆದೆನು. ಸದ್ರಿ ಕಛೇರಿಯಿಂದ ದಿ:24-11-2004ರಂದು ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. ದಿ:3-3-2005 ರಂದು ಈ ಪ್ರಕರಣದ ತನಿಖಾ ವರದಿಯನ್ನು ಅಬಕಾರಿ ಉಪ ಆಯುಕ್ತರು, ದ.ಕ.ಜಿಲ್ಲೆ, ಮಂಗಳೂರು ಇವರಿಗೆ ಸಲ್ಲಿಸಿರುತ್ತೇನೆ. ಸದ್ರಿ ವರದಿಯನ್ನು ಈಗ ನೋಡಿದೆನು. ನಿಶಾನೆ ಪಿ-7 ಎಂದು ಗುರುತಿಸಲಾಯಿತು. ನನಗೆ ಸದ್ರಿ ಸ್ಥಳದಿಂದ

ವರ್ಗಾವಣೆಯಾದ ಕಾರಣ, ಈ ಪ್ರಕರಣದ ಹೆಚ್ಚಿನ ತನಿಖೆಗಾಗಿ ನಂತರ ಬಂದ ಅಬಕಾರಿ ಉಪ ನಿರೀಕ್ಷಕರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷಿ ನೀಡಿರುತ್ತಾರೆ.

ಪಾಟೀ ಸವಾಲು: ಎದುರುದಾರರ ಪರ ವಕೀಲರು ಗೈರು ಹಾಜರಾಗಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಪ್ರಾ.ಸಾ-2:

ಶ್ರೀ ಪ್ರೇಮಾನಂದ, ಅಬಕಾರಿ ರಕ್ಷಕ, ಇಐಬಿ, ಉಡುಪಿ ಜಿಲ್ಲೆ ಇವರು ದಿನಾಂಕ:26-12-02ರಿಂದ ದಿ:6-4-2006 ರವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದೇನು. ದಿ:18-2-05 ರಂದು ಅಬಕಾರಿ ನಿರೀಕ್ಷಕರಿಂದ ಈ ಪ್ರಕರಣಕ್ಕೆ ಸಂಬಂಧಿಸಿದ ಮಾದರಿಗಾಗಿ 10 ಸ್ಯಾಚೇಟುಗಳಿರುವ ಒಂದು ಕಟ್ಟನ್ನು ಪಡೆದುಕೊಂಡೆನು. ಅದರೊಂದಿಗೆ ಕೋರಿಕೆ ಪತ್ರವನ್ನು ಸಹಾ ಪಡೆದು, ಅದೇ ದಿನ ರಾಸಾಯನಿಕ ವಿಶ್ಲೇಷಕರು, ಬೆಂಗಳೂರು ಇವರಿಗೆ ತಲುಪಿಸಿರುತ್ತೇನೆ. ದಿ:19-2-2005ರಂದು ರಾಸಾಯನಿಕ ತಜ್ಞರು ಪರೀಕ್ಷಿಸಿದ ಸದ್ರಿ ಸ್ಯಾಚೇಟು ಹಾಗೂ ತಜ್ಞರ ವರದಿಯನ್ನು ಪಡೆದುಕೊಂಡು ಅದೇ ದಿನ ಅಬಕಾರಿ ನಿರೀಕ್ಷಕರಿಗೆ ತಲುಪಿಸಿರುತ್ತೇನೆ ಎಂದು ಸಾಕ್ಷಿ ನೀಡಿರುತ್ತಾರೆ.

ಪಾಟೀ ಸವಾಲು: ಎದುರುದಾರರ ಪರ ವಕೀಲರು ಗೈರು ಹಾಜರಾಗಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಈ ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:18-11-2005ರಂದು ಜಪ್ತು ಪಡಿಸಿರುವ ಹಿರೋ ಹೊಂಡಾ ಬೈಕ್ ಸಂಖ್ಯೆ: KA-19K-6819ರಲ್ಲಿ ಅಕ್ರಮವಾಗಿ ಸಾರಾಯಿ ಸಾಗಾಣಿಕೆಯಾಗಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣತ್ಮಾಕವಾಗಿ ಪರಿಗಣಿಸಲಾಗಿದೆ.

ಇಂತಹ ಅಕ್ರಮ ಮದ್ಯವು ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಎಂಬುದನ್ನು ಸಾಕ್ಷದಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಆದರೆ ಈ ಪ್ರಕರಣದಲ್ಲಿ ವಾಹನದ ಮಾಲೀಕರಿಗೆ ಕಾರಣ ಕೇಳಿ ನೋಟಿಸು ನೀಡಲಾಗಿ ನೋಟಿಸು ಜ್ಯಾರಿಯಾಗದೇ ಅಂಚೆ ಷರಾದೊಂದಿಗೆ ಪ್ರಾಧಿಕಾರಕ್ಕೆ ವಾಪಸ್ಸು ಬಂದಿರುತ್ತದೆ. ವಾಹನದ ಮಾಲೀಕರು ವಾಹನವನ್ನು ಮದ್ಯಂತರ ಬಿಡುಗಡೆಗೆ ಪಡೆದುಕೊಂಡು ನಂತರದಲ್ಲಿ ವಾಹನ ಅಕ್ರಮದಲ್ಲಿ ಪಾಲ್ಗೊಂಡಿಲ್ಲವೆಂಬುದನ್ನು ಸಾಬೀತುಪಡಿಸಲು ಪ್ರಾಧಿಕಾರದ ವಿಚಾರಣಾ ವೇಳೆಯಲ್ಲಿ ಪ್ರತಿರಕ್ಷಾ ಸಾಕ್ಷಿಯನ್ನು ಹಾಜರು ಪಡಿಸಲು ಬೇಕಾದಷ್ಟು ಕಾಲಾವಕಾಶ ನೀಡಿದ್ದರೂ ಅರ್ಜಿದಾರರ ಪರ ವಕೀಲರು ಪ್ರತಿರಕ್ಷಾ ಸಾಕ್ಷಿಯನ್ನು ವಿಚಾರಣೆಗೆ ಹಾಜರುಪಡಿಸಲು ವಿಫಲರಾಗಿರುತ್ತಾರೆ. ಈ ಕಾರಣದಿಂದ ವಾಹನ ಮಾಲೀಕರು ಅವರ ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಅಲ್ಲದೇ ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷದಾರಗಳೊಂದಿಗೆ ವಾಹನವನ್ನು ತನ್ನ ತಿಳುವಳಿಕೆಗೆ ಬಾರದೇ ಅಕ್ರಮ ಸಾರಾಯಿ ಸಾಗಾಣಿಕೆಗೆ ಉಪಯೋಗಿಸಲಾಗಿದೆ ಎಂದು ರುಜುವಾತು ಪಡಿಸಲು ವಿಫಲರಾಗಿರುವುದರಿಂದ ಹಾಗೂ ಈ ಪ್ರಾಧಿಕಾರದ ಮುಂದೆ ಹಾಜರಾಗದೇ ಇರುವುದನ್ನು ಗಮನಿಸಿದಾಗ ವಾಹನ ಮಾಲೀಕರು ತನ್ನ ತಿಳುವಳಿಯಿಂದಲೇ ವಾಹನವನ್ನು ಅಕ್ರಮ ಸಾರಾಯಿ ಸಾಗಾಣಿಕೆಗೆ ಬಳಸಿರುವುದು ನಿಸ್ಸಂದೇಹವಾಗಿ ಸಾಬೀತಾಗಿರುತ್ತದೆ.ಈ ಮೇಲಿನ ಕಾರಣಗಳಿಂದ ಎರಡನೇಯ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಹಿರೋ ಹೊಂಡಾ ಬೈಕ್‌ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದೇ ಸೂಕ್ತವೆಂದು ಪ್ರಾಧಿಕಾರವು ತೀರ್ಮಾನಿಸಿ ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಹಿರೋ ಹೊಂಡಾ ಬೈಕ್ ಸಂಖ್ಯೆ: KA-19K-6819 ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ನೇ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ನಿಯಮ 43(ಬಿ)ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ಉಪವಿಭಾಗ, ಇವರ ತಕ್ಷೀರು ಸಂಖ್ಯೆ: 9/2004-05, ದಿ:18-11-2004ರಲ್ಲಿ ಜಪ್ತುಪಡಿಸಿಕೊಂಡಿರುವ ಹಿರೋಹೊಂಡಾ ಬೈಕ್‌ಸಂಖ್ಯೆ:KA-19-K-6819ನ್ನು ನಿಯಮ 43ಎ(2) ರನ್ವಯ ಕರ್ನಾಟಕ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಪ್ರಾಧಿಕಾರದಿಂದ ದಿನಾಂಕ:19-5-2005ರಂದು ವಾಹನ ಬಿಡುಗಡೆಗೊಳಿಸಿ, ತಾತ್ಕಾಲಿಕವಾಗಿ ಮದ್ಯಂತರ ಬಿಡುಗಡೆ ಆದೇಶವನ್ನು ರದ್ದುಗೊಳಿಸಿ ಆದೇಶಿಸಿದೆ. ಆರ್.ಸಿ ಮಾಲೀಕರು ಸದ್ರಿ ಮದ್ಯಂತರ ಬಿಡುಗಡೆ ಹೊಂದಿರುವ ದ್ವಿಚಕ್ರ ವಾಹನ ಸಂ:KA-19K-6819ನ್ನು ಈ ಪ್ರಾಧಿಕಾರಕ್ಕೆ ಈ ಆದೇಶದ 30 ದಿನಗಳ ಒಳಗೆ ಒಪ್ಪಿಸಲು ಆದೇಶಿಸಿದೆ. ತಪ್ಪಿದ್ದಲ್ಲಿ ಭದ್ರತೆಯಾಗಿ ನೀಡಿರುವ ಮೌಲ್ಯ ರೂ.17,500/-ನ್ನು ಸರ್ಕಾರಕ್ಕೆ ಪಡೆಯಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:30-01-2009ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:

ಪ್ರಾ.ಸಾ-I : ಶ್ರೀ.ಕೃಷ್ಣಪ್ಪ ಎಂ, ಅಬಕಾರಿ ಉಪ ನಿರೀಕ್ಷಕರು, ಎ.ಜೆ.ಡಿಸ್ಟಿಲ್ಲರಿ ,ಬೈಕಂಪಾಡಿ,ಮಂಗಳೂರು.
ಪ್ರಾ.ಸಾ-2 : ಶ್ರೀ.ಪ್ರೇಮಾನಂದ, ಅಬಕಾರಿ ರಕ್ಷಕ, ಇಐಬಿ, ದ.ಕ. ಜಿಲ್ಲೆ, ಮಂಗಳೂರು.

ಅನುಬಂಧ-II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:

ನಿಶಾನೆ ಪಿ-I : ಮಹಜರು ಪ್ರತಿ
ನಿಶಾನೆ ಪಿ-2 : ಸೊತ್ತು ಶೋಧನಾ ಪಟ್ಟಿ
ನಿಶಾನೆ ಪಿ-3 : ಮಾದರಿ ಸೀಲು
ನಿಶಾನೆ ಪಿ-4 : ಪ್ರಥಮ ಮಾಹಿತಿ ವರದಿ
ನಿಶಾನೆ ಪಿ-5 : 43 ಎ ರೀತ್ಯಾ ವರದಿ
ನಿಶಾನೆ ಪಿ-6 : ರಸಾಯನಿಕ ಕೆಮಿಕಲ್ ವರದಿ
ನಿಶಾನೆ ಪಿ-7 : ತನಿಖಾ ವರದಿ

ಅನುಬಂಧ-III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು :

ಅರ್ಜಿದಾರರ ಹೇಳಿಕೆ : - ಯಾವುದು ಇಲ್ಲ-

ಅನುಬಂಧ-IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು : - ಯಾವುದು ಇಲ್ಲ-

ನೂರ್ ಮಹಮ್ಮದ್ ಹುಸೇನ್
ಪಿ.ಆರ್.187 ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ:ಎಸ್‌ಡಿಕೆ/181/ಡಿಟಿಸಿಆರ್/2008-09, ದಿನಾಂಕ:27ನೇ ಜನವರಿ, 2009

• **ಉಪಸ್ಥಿತರು:** ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ. ಮಂಗಳೂರು.

ಫಿರ್ಯಾದುದಾರರು:	**ಆರೋಪಿ ಹಾಗೂ ಮಾಲೀಕರು:**
ಪೊಲೀಸ್ ನಿರೀಕ್ಷಕರು, ಜಿಲ್ಲಾ ಅಪರಾಧ ಗುಪ್ತ ವಾರ್ತದಳ, ದ.ಕ.ಜಿಲ್ಲೆ ಮಂಗಳೂರು.	ಪತ್ತೆಯಾಗಿರುವುದಿಲ್ಲ.

ಪ್ರಕರಣದ ಮುಖ್ಯಾಂಶಗಳು:

ಪೊಲೀಸ್ ನಿರೀಕ್ಷಕರು, ಜಿಲ್ಲಾ ಅಪರಾಧ ಗುಪ್ತ ವಾರ್ತಾ ವಿಭಾಗ, ದ.ಕ.ಜಿಲ್ಲೆ, ಮಂಗಳೂರು ಇವರು ಖಚಿತ ವರ್ತಮಾನದ ಮೇರೆಗೆ ಅವರ ಸಿಬ್ಬಂದಿಯವರೊಂದಿಗೆ ದಿ:15-4-2008 ರಂದು ಬೆಳಿಗ್ಗೆ 7-00 ಗಂಟೆ ಸಮಯದಲ್ಲಿ ಮಂಗಳೂರು ತಾಲೂಕು ತೊಕ್ಕೊಟ್ಟು ಸರಹದ್ದಿನಲ್ಲಿ ವಾಹನ ತಪಾಸಣೆ ಮಾಡುತ್ತಿದ್ದ ಸಂದರ್ಭದಲ್ಲಿ ಮಂಗಳೂರು ಕಡೆಯಿಂದ ತೊಕೊಟ್ಟು ತಲಪಾಡಿ ಕಡೆಗೆ ಬರುತ್ತಿದ್ದ ಸರಕು ಸಾಗಾಟದ ಲಾರಿ ನೋಂದಣಿ ಸಂಖ್ಯೆ: TN-01-AK-3542ನ್ನು ತಪಾಸಣೆಗಾಗಿ ನಿಲ್ಲಿಸುವ ಬಗ್ಗೆ ಕಾರ್ಯಪ್ರವೃತ್ತರಾದಾಗ ಲಾರಿ ಚಾಲಕ ಪೊಲೀಸ್ ವಾಹನವನ್ನು ಗಮನಿಸಿ ಸುಮಾರು 150 ಮೀಟರ್ ದೂರದಲ್ಲಿ ಲಾರಿಯನ್ನು ಎಡಬದಿಗೆ ನಿಲ್ಲಿಸಿ ಚಾಲಕ ಹಾಗೂ ಇನ್ನೊರ್ವ ವ್ಯಕ್ತಿ ಲಾರಿಯಿಂದ ಜಿಗಿದು ಓಡಿಹೋಗಿದ್ದು, ಅವರನ್ನು ಓಡಿಯಲು ಪ್ರಯತ್ನಿಸಿದರೂ ಅವರು ಸಿಗದೇ ತಪ್ಪಿಸಿಕೊಂಡಿರುತ್ತಾರೆ. ನಂತರ ಪೊಲೀಸ್ ನಿರೀಕ್ಷಕರು ಲಾರಿಯನ್ನು ಪರಿಶೀಲಿಸಿದ್ದು ಸದ್ರಿ ಲಾರಿಯಲ್ಲಿ ತುಂಬಿರುವ ಸರಕುಗಳ ಅಡಿಯಲ್ಲಿ ತಲಾ 35 ಲೀಟರ್ ಸಾಮರ್ಥ್ಯದ 320 ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಒಟ್ಟು 11200 ಲೀಟರ್ ಮದ್ಯಸಾರವನ್ನು ಹೊಂದಿ ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೇ ಸಾಗಾಟ

ಮಾಡಿರುವುದನ್ನು ಪತ್ತೆಹಚ್ಚಿ, ಇದು ಕರ್ನಾಟಕ ಅಬಕಾರಿ ಕಾಯಿದೆ 13(1)(ಎ) (ಎಫ್) ಪ್ರಕಾರ ಅಪರಾಧ ಹಾಗೂ 32,34,38ಎ 41(1)(2)ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ ಉಳ್ಳಾಲ ಪೊಲೀಸ್ ಠಾಣೆ, ಮಂಗಳೂರು ಗ್ರಾಮಾಂತರ, ಮಂಗಳೂರು ಇವರ ತಕ್ಷೀರು ಸಂಖ್ಯೆ 92/2008, ದಿ:15-4-2008ರಂತೆ ಪ್ರಕರಣವನ್ನು ನೋಂದಾಯಿಸಿ ಪ್ರಥಮ ಮಾಹಿತಿ ವರದಿ,ಮಹಜರು ಪ್ರತಿ ಹಾಗೂ ಸೊತ್ತುಗಳ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ವಶಪಡಿಸಿಕೊಂಡ ಸೊತ್ತುಗಳನ್ನು ಕಡತದೊಂದಿಗೆ ಅಬಕಾರಿ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ-II ಇವರಿಗೆ ಈ ಪ್ರಾಧಿಕಾರದ ದಿ:24-4-2008ರ ಆದೇಶದ ಮೇರೆಗೆ ಮುಂದಿನ ತನಿಖೆಗಾಗಿ ಹಸ್ತಾಂತರಿಸಿರುತ್ತಾರೆ.

ಮೊಕದ್ದಮೆಯನ್ನು ಪತ್ತೆಮಾಡಿದ ಪೊಲೀಸ್ ಅಧಿಕಾರಿಗಳು ಸದ್ರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಮದ್ಯಸಾರದಿಂದ 320 ಪ್ಲಾಸ್ಟಿಕ್ ಕ್ಯಾನುಗಳಿಂದ ತಲಾ 750 ಎಂಎಲ್‌ನ ಒಟ್ಟು 320 ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಸದ್ರಿ ಮಾದರಿಗಳನ್ನು ವಿಶ್ಲೇಷಿಸಿದ ಕರ್ನಾಟಕ ಸರ್ಕಾರದ ಸಹಾಯಕ ರಾಸಾಯನಿಕ ತಜ್ಞರು, ಮಂಗಳೂರುರವರ ಪತ್ರ ಸಂ:184-320 ದಿ:2-6-2008ರ ವರದಿಯಲ್ಲಿ ಮದ್ಯಸಾರದ ಪ್ರಮಾಣ 94.5% ಇರುವುದಾಗಿ **ಅಭಿಪ್ರಾಯ** ನೀಡಿ ದೃಢೀಕರಿಸಿದ್ದು, ಮದ್ಯಸಾರವನ್ನು ಸೂಕ್ತ ಭಟ್ಟಿ ಇಳಿಸಿದ ತರುವಾಯ ಮಾದಕ ಪಾನೀಯ ತಯಾರಿಕೆ ಹಾಗೂ ಕೈಗಾರಿಕಾ ಉಪಯೋಗಕ್ಕೆ ಬಳಸಬಹುದಾಗಿದೆ ಎಂದು ದೃಢೀಕರಣ ಪತ್ರ ನೀಡಿರುತ್ತಾರೆ. ಪ್ರಕರಣದ ತನಿಖಾಧಿಕಾರಿಯವರು ಜಪ್ತು ಪಡಿಸಿಕೊಂಡ ಮದ್ಯಸಾರವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ದಿ:28-11-2008ರಂದು ನೀಡಿದ ವರದಿಯನ್ನು ಆಧರಿಸಿ, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ ಜಿಲ್ಲೆ ಮಂಗಳೂರು ಇವರು ಈ ಪ್ರಾಧಿಕಾರದ ಆದೇಶ ಸಂ:ಎಸ್‌ಡಿಕೆ/181/ಡಿಟಿಸಿಆರ್/2008-09 ದಿ:15-1-2009ರ ಪ್ರಕಾರ ಪ್ರಕರಣದಲ್ಲಿ ಜಪ್ತು ಪಡಿಸಿಕೊಂಡಿರುವ ಸೊತ್ತುಗಳ ಪೈಕಿ ವಾಹನದ ಮುಟ್ಟುಗೋಲು ನಡವಳಿಯನ್ನು ಕಾಯ್ದಿರಿಸಿ, 11200 ಲೀ ಮದ್ಯಸಾರ (ಮಾದರಿ ಗಳನ್ನು ಹೊರತು ಪಡಿಸಿ) ಹಾಗೂ ಇತರ ಎಲ್ಲಾ ಸೊತ್ತುಗಳನ್ನು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಸಿ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಅಬಕಾರಿ ಉಪ ಅಧೀಕ್ಷಕರು, ಮಂಗಳೂರು ಉಪ ವಿಭಾಗ-I, ಮಂಗಳೂರು ಇವರ ಸಮಕ್ಷಮ ಮಹಜರು ಜರುಗಿಸಿ ನಾಶಪಡಿಸಲು ಆದೇಶಿಸಲಾಗಿರುತ್ತದೆ.

ಸದ್ರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಲಾರಿ ಸಂ:TN-01-AK-3542ರ ಆರ್.ಸಿ ಮಾಲೀಕರ ಹೆಸರು ಮತ್ತು ವಿಳಾಸವನ್ನು ನೀಡುವ ಬಗ್ಗೆ ಸಂಬಂಧಪಟ್ಟ ರಿಜಿನಲ್ ಟ್ರಾನ್ಸ್‌ಪೋರ್ಟ್ ಆಫೀಸರ್ ಚಿಟ್ಟಿಬಾಬು ಸ್ಟ್ರೀಟ್, ಚೆನ್ನೈ ಇವರಿಗೆ ಈ ಪ್ರಾಧಿಕಾರದಿಂದ ದಿ:29-12-2008 ರಂದು ಪತ್ರ ಬರೆಯಲಾಗಿದ್ದು, ಪತ್ರವು ಸದ್ರಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ವಿಳಾಸಕ್ಕೆ ಜ್ಯಾರಿಯಾಗದೇ Refused ಎಂಬ ಅಂಚೆ ಷರಾದೊಂದಿಗೆ ಈ ಪ್ರಾಧಿಕಾರಕ್ಕೆ ವಾಪಸು ಬಂದಿರುತ್ತದೆ.

1965ನೇ ಕರ್ನಾಟಕ ಅಬಕಾರಿ ಕಾಯ್ದೆ ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ, ಅಥವಾ ಪತ್ತೆಯಾಗುವ ಸಾಧ್ಯತೆ ಇಲ್ಲದಿದ್ದಲ್ಲಿ ಪ್ರಕರಣವನ್ನು ಪತ್ತೆಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು ಅವುಗಳು ಕಾನೂನು ಬದ್ಧವಾಗಿದೆಯೆಂದು ಸಾಕ್ಷಧಾರಗಳೊಂದಿಗೆ ಸಾಬೀತು ಪಡಿಸದೇ ಇದ್ದಲ್ಲಿ, ಸದ್ರಿ ಸೊತ್ತುಗಳು, ಅಬಕಾರಿ ಕಾಯ್ದೆ ಕಲಂ 43ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯ ವಾಗಿರುವ ಸೊತ್ತುಗಳಾಗಿದ್ದಲ್ಲಿ ಅಂತಹ ಸೊತ್ತುಗಳನ್ನು ಕಲಂ 43ಸಿ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಪ್ರಾಧಿಕಾರದಲ್ಲಿ ಲಭ್ಯವಿರುವ ದಾಖಲಾತಿಗಳ ಪ್ರಕಾರ ದಿನಾಂಕ:15-4-2008 ರಂದು ಲಾರಿ ಸಂ:TN-01-AK-3542ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೇ ಅರೋಪಿಗಳು 11200.000 ಲೀ ಮದ್ಯಸಾರವನ್ನು ಹೊಂದಿ ಸಾಗಾಟ ಮಾಡುತ್ತಿದ್ದು, ತಪಾಸಣೆ ಕರ್ತವ್ಯದಲ್ಲಿರುವ ಪೊಲೀಸರನ್ನು ಗಮನಿಸಿ ಆರೋಪಿಗಳು ತಲೆಮರೆಸಿಕೊಂಡಿರುವುದನ್ನು ಪೊಲೀಸ್ ನಿರೀಕ್ಷಕರು, ಜಿಲ್ಲಾ ಅಪರಾಧ ಗುಪ್ತ ವಾರ್ತಾ ವಿಭಾಗ ಇವರು ಪತ್ತೆಹಚ್ಚಿ ಅಕ್ರಮ ಮದ್ಯಸಾರ ಸಾಗಾಣಿಕೆಗೆ ಬಳಸಲಾದ ವಾಹನವನ್ನು ಸ್ಥಳ ಮಹಜರು, ಪಂಚನಾಮೆಯ ಮುಖೇನಾ ಸ್ವಾಧೀನಪಡಿಸಿಕೊಂಡು ಉಳ್ಳಾಲ ಪೊಲೀಸ್ ಠಾಣಾ ತಕ್ಷೀರು ಸಂ:92/2008 ದಿ:15-4-2008ರ ಪ್ರಕಾರ ಪ್ರಕರಣ ದಾಖಲಿಸಿಕೊಂಡು ಪ್ರಾಧಿಕಾರದ ಆದೇಶದಂತೆ ಪ್ರಕರಣದ ಮುಂದಿನ ತನಿಖೆಗಾಗಿ ಕಾರ್ಯವ್ಯಾಪ್ತಿಯ ಅಬಕಾರಿ ನಿರೀಕ್ಷಕರು,ಮಂಗಳೂರು ದಕ್ಷಿಣ ವಲಯ-II ಇವರಿಗೆ ಹಸ್ತಾಂತರಿಸಿರುತ್ತಾರೆ. ವಾಹನದಲ್ಲಿ ಜಪ್ತು ಮಾಡಲ್ಪಟ್ಟಿರುವ ವಸ್ತು ರಾಸಾಯನಿಕ ತಜ್ಞರ ವರದಿಯಂತೆ ಮದ್ಯಸಾರವಾಗಿದ್ದು, ಸದ್ರಿ ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ವಾಹನದ ಮುಟ್ಟುಗೋಲು ನಡವಳಿ ಬಗ್ಗೆ ತೀರ್ಮಾನ ತೆಗೆದು ಕೊಳ್ಳಬೇಕಾಗಿರುತ್ತದೆ.

ವಾಹನದ ಮುಟ್ಟುಗೋಲು ನಡವಳಿ ಪೂರ್ವದಲ್ಲಿ ವಾಹನದ ಮಾಲೀಕತ್ವದ ಬಗ್ಗೆ ವಿವರ ಪಡೆದುಕೊಳ್ಳಲು ವಾಹನದ ಸಂಖ್ಯಾ ಮಾದರಿಯನ್ನು ಅನುಸರಿಸಿ ರಿಜಿನಲ್ ಟ್ರಾನ್ಸ್‌ಪೋರ್ಟ್ ಆಫೀಸರ್ ಚಿಟ್ಟಿಬಾಬು ಸ್ಟ್ರೀಟ್, ಚೆನ್ನೈ ಇವರಿಗೆ ಪತ್ರ ಬರೆಯಲಾಗಿದ್ದು, ಸದ್ರಿ ಪತ್ರವು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಗೆ ಜ್ಯಾರಿಯಾಗದೇ Refused ಎಂಬ ಅಂಚೆ ಷರಾದೊಂದಿಗೆ ಕಛೇರಿಗೆ ಹಿಂದಕ್ಕೆ ಬಂದಿರುವುದರಿಂದ ವಾಹನದ ಮಾಲೀಕತ್ವದ ಬಗ್ಗೆ ವಿವರಗಳನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ.

ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಪೊಲೀಸ್ ನಿರೀಕ್ಷಕರು, ಜಿಲ್ಲಾ ಅಪರಾಧ ಗುಪ್ತ ವಾರ್ತಾದಳ, ದ.ಕ.ಜಿಲ್ಲೆ ಮಂಗಳೂರು ಇವರು ವಶಪಡಿಸಿಕೊಂಡ ಲಾರಿ ಸಂಖ್ಯೆ: TN-01-AK-3542ನ್ನು ವಶಪಡಿಸಿಕೊಂಡು ಸುಮಾರು 9ತಿಂಗಳಿಗಿಂತ ಹೆಚ್ಚು ಸಮಯ ಕಳೆದಿದ್ದು, ಈ ಪ್ರಾಧಿಕಾರದ ಮುಂದೆ ವಾಹನ ಬಿಡುಗಡೆಗಾಗಿ ಮತ್ತು ವಾಹನವು ಅಕ್ರಮ ಮದ್ಯಸಾರ ಸಾಗಾಟದಲ್ಲಿ ತೊಡಗಿಲ್ಲವೆಂದು ಸಾಬೀತುಪಡಿಸಲು ಯಾವುದೇ ಸಮಂಜಸವಾದ ಉತ್ತರ ಈ ಪ್ರಾಧಿಕಾರದ ಮುಂದೆ ಒಪ್ಪಿಸದೇ ಇರುವುದರಿಂದ ಮತ್ತು ವಾಹನ ಮಾಲೀಕರು ಅಥವಾ ಸಂಬಂಧಪಟ್ಟವರು ತನ್ನ ನಿರಪರಾಧಿತ್ವವನ್ನು ಸಾಬೀತುಪಡಿಸಿಕೊಂಡು ಸೂಕ್ತ ದಾಖಲಾತಿಗಳೊಂದಿಗೆ ವಾಹನದ ಮಾಲೀಕತ್ವವನ್ನು ಕೋರಿ ಈ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ. ವಾಹನ ಜಪ್ತು ಸಂದರ್ಭದಲ್ಲಿ, ವಾಹನದ ಮಾಲೀಕರ ವಿವರಗಳನ್ನು ಪಡೆಯಬಹುದಾದ ಏಕೈಕ ಮಾರ್ಗವಾದ ಬಿ.ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಗಾಗಿ ಈ ಪ್ರಾಧಿಕಾರದಿಂದ ಸಂಬಂಧಿಸಿದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಪತ್ರ ಬರೆದು ಪ್ರಯತ್ನ ಪಡಲಾಗಿದ್ದರೂ ಈ ಬಗ್ಗೆ ಮಾಹಿತಿ ಪಡೆಯಲು ಸಾಧ್ಯವಾಗದೇ ಇರುವುದರಿಂದ ವಾಹನದ ಮಾಲೀಕರನ್ನು ಹಾಗೂ ಆರೋಪಿಗಳನ್ನು ಪತ್ತೆ ಹಚ್ಚಲು ಕಷ್ಟಸಾಧ್ಯವಾಗಿರುತ್ತದೆ ಹಾಗೂ ವಶಪಡಿಸಿಕೊಂಡ ಲಾರಿಯನ್ನು ಸುಮಾರು 9 ತಿಂಗಳು ಕಳೆದಿದ್ದರೂ ವಾಹನದ ಮಾಲೀಕತ್ವವನ್ನು ಕೋರಿ ಈ ಪ್ರಾಧಿಕಾರಕ್ಕೆ ಯಾರೊಬ್ಬರೂ ಅರ್ಜಿಯನ್ನು ಸಲ್ಲಿಸದೇ ಇರುವುದರಿಂದ ವಾಹನದ ಮಾಲೀಕರು ತನ್ನ ಸ್ವಇಚ್ಛೆಯಿಂದಲೇ ವಾಹನವನ್ನು ಅಕ್ರಮವಾಗಿ ಮದ್ಯಸಾರ ಸಾಗಾಟ ಮಾಡಲು ಬಳಸಿಕೊಂಡಿರುವುದು ಪ್ರಾಧಿಕಾರ ಮನಗಂಡಿದ್ದು, ಸದ್ರಿ ವಾಹನವನ್ನು ತೆರೆದಿಟ್ಟ ಬಯಲಿನಲ್ಲಿ ನಿಲ್ಲಿಸಿರುವುದರಿಂದ ಮಳೆ, ಬಿಸಿಲು, ಗಾಳಿಗೆ ಸಿಲುಕಿ ತುಕ್ಕು ಹಿಡಿದು ಹಾಳಾಗುವ ಸಾಧ್ಯತೆ ಇರುವುದರಿಂದ ಇದನ್ನು ಇನ್ನು ಹೆಚ್ಚು ಕಾಲ ಇರಿಸಿಕೊಂಡರೆ ಇನ್ನಷ್ಟು ಶಿಥಿಲಗೊಂಡು ಮೌಲ್ಯಹೀನವಾಗುವ ಸಾಧ್ಯತೆಯಿದ್ದು ಸರ್ಕಾರಕ್ಕೆ ಬರುವ ಆದಾಯ ಕೂಡಾ ಕಡಿಮೆಯಾಗುವ ಸಂಭವವಿರುವುದರಿಂದ ಅಕ್ರಮವಾಗಿ 11,200 ಲೀಟರ್ ಮದ್ಯಸಾರ ಅಬಕಾರಿ ಸೊತ್ತು ಸಾಗಾಣಿಕೆಗೆ ಬಳಸಿದ ಲಾರಿಯನ್ನು ಲಭ್ಯವಿರುವ ಲಿಖಿತ ಸಾಕ್ಷಿಯ ದಾಖಲಾತಿಗಳ ಆಧಾರದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಕಾರಣ ಈ ಆದೇಶ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43ಬಿ ಅಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಕಲಂ 43ಎ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪೊಲೀಸ್ ಉಪ ನಿರೀಕ್ಷಕರು, ಉಳ್ಳಾಲ ಪೋಲೀಸ್ ಠಾಣಾ, ಉಳ್ಳಾಲ ಇವರ ತಕ್ಷೀರು ಸಂ: 92/2008, ದಿನಾಂಕ:15-4-2008 ರಲ್ಲಿ ಜಪ್ತು ಪಡಿಸಿರುವ ಲಾರಿ ಸಂ: TN-01-AK-3542ನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 43ಸಿ ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ:27-1-2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್

ಪಿ.ಆರ್.188

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ:ಎಸ್‌ಡಿಕೆ/439/ಡಿಟಿಸಿಆರ್/2008-09, ದಿನಾಂಕ:27ನೇ ಜನವರಿ, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ. ಮಂಗಳೂರು.

ಫಿರ್ಯಾದುದಾರರು:

ಪೊಲೀಸ್ ಉಪ ನಿರೀಕ್ಷಕರು, ಪಣಂಬೂರು ಪೋಲಿಸ್ ಠಾಣೆ, ಪಣಂಬೂರು.

ಆರೋಪಿಗಳು:

1) ರವಿ, ಬಿನ್: ದಿ: ಸಂಜೀವ ಶೆಟ್ಟಿ, ಕಾಶಿಕೃಪ, ಸೈಟ್ ನಂ:8, ಕುಡುಂಬೂರು, ಬೈಕಂಪಾಡಿ ಗ್ರಾಮ, ಮಂಗಳೂರು ತಾಲೂಕು.

2) ದೇವೇಂದ್ರ ಪೂಜಾರಿ, ಬಿನ್: ದಿ:ಬೋಜ ಪೂಜಾರಿ, ಡೋರ್ ನಂ:86,ರೈಲ್ವೆ ಗೇಟು ಬಳಿ, ಕೋಡಿಕೆರೆ ಕುಳಾಯಿ ಗ್ರಾಮ, ಜೋಕಟ್ಟೆ ಅಂಚೆ, ಮಂಗಳೂರು ತಾಲೂಕು.

ವಾಹನದ ಮಾಲೀಕರು:

ಯೋಗೀಶ ಆಳ್ವ,ಬಿನ್:ನಾಗಪ್ಪ, ಶ್ವೇತ ನಿವಾಸ, 1ನೇ ಕ್ರಾಸ್, ನೆಲಮಹಡಿ, ಶ್ರೀ ಕಾಂತೇಶ್ವರ ನಾಗಮಹಾಲಕ್ಷ್ಮಿ ಲೇಔಟ್, ಬೆಂಗಳೂರು.

ಪ್ರಕರಣದ ಮುಖ್ಯಾಂಶಗಳು:

ಪೊಲೀಸ್ ಉಪ ನಿರೀಕ್ಷಕರು, ಪಣಂಬೂರು ಪೋಲಿಸ್ ಠಾಣೆ, ಪಣಂಬೂರು ಇವರು ತಮ್ಮ ಸಿಬ್ಬಂಧಿಯವರೊಂದಿಗೆ ದಿ:05-05-2008ರಂದು ಖಚಿತ ಮಾಹಿತಿಯಂತೆ ಮೇಲಾಧಿಕಾರಿಗಳ ನಿರ್ದೇಶನವನ್ನು ಅನುಸರಿಸಿ ರಾತ್ರಿ 20-15 ಗಂಟೆ ಸಮಯಕ್ಕೆ ಜೈಕಂಪಾಡಿ ಕಡೆಯಿಂದ ಕುಡುಂಬೂರು ರವಿ ಎಂಬವರ ಒಡೆತನಕ್ಕೆ ಸೇರಿದ ಚಿಕನ್ ಸ್ಟಾಲ್ ಅಂಗಡಿ ಕಡೆಗೆ ಒಂದು ಕೆಂಪು ಬಣ್ಣದ ಕೆನೈಟಿಕ್ ಹೊಂಡಾ ಸಂ:KA-02J-1935 ರಲ್ಲಿ ಇಬ್ಬರು ವ್ಯಕ್ತಿಗಳು ಬರುತ್ತಿರುವುದನ್ನು ಕಂಡು ತಡೆದು ನಿಲ್ಲಿಸಿ ವಾಹನವನ್ನು ತಪಾಸಣೆ ಮಾಡಿದಾಗ ಸದ್ರಿ ಕೈನೆಟಿಕ್ ಹೊಂಡಾದಲ್ಲಿ ಸವಾರ ಕಾಲಿರಿಸುವ ಜಾಗದಲ್ಲಿ ಒಂದು ರಟ್ಟಿನ ಪೆಟ್ಟಿಗೆಯಲ್ಲಿ ಕ್ಲಬ್ ಚಾಯ್ಸ್ ಫೈನ್ ವಿಸ್ಕಿ ಎಂಬ 180ಎಂಎಲ್ ನ 48 ಬಾಟಲಿಗಳಲ್ಲಿ ಒಟ್ಟು 8.640 ಲೀಟರು ಮದ್ಯವನ್ನು ಹೊಂದಿ ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೇ ಸಾಗಾಟ ಮಾಡುತ್ತಿರುವುದನ್ನು ಪತ್ತೆಹಚ್ಚಿ, ಇದು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32,34 ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ವಾಹನದ ಸವಾರ ದೇವೇಂದ್ರ ಪೂಜಾರಿ, ಬಿನ್:ದಿ:ಬೋಜ ಪೂಜಾರಿ, ಡೋರ್ ನಂ:86, ರೈಲ್ವೆ ಗೇಟು ಬಳಿ, ಕೋಡಿಕೆರೆ ಕುಳಾಯಿಗ್ರಾಮ, ಜೋಕಟ್ಟೆ ಅಂಚೆ, ಮಂಗಳೂರು ತಾಲೂಕು ಮತ್ತು ಸಹ ಸವಾರ ರವಿ, ಬಿನ್: ದಿ: ಸಂಜೀವ ಶೆಟ್ಟಿ, ಕಾಶಿಕೃಷ, ಸೈಟ್ ನಂ:8, ಕುಡುಂಬೂರು, ಜೈಕಂಪಾಡಿ ಗ್ರಾಮ, ಮಂಗಳೂರು ತಾಲೂಕು ಇವರುಗಳನ್ನು ಸ್ಥಳದಲ್ಲಿಯೇ ದಸ್ತಗಿರಿ ಮಾಡಿ, ಪಂಚರ ಸಮಕ್ಷಮ ಸದ್ರಿ ಸೊತ್ತುಗಳನ್ನು ಜಪ್ತು ಮಾಡಿ ಸ್ಥಳದಲ್ಲಿಯೇ ಮಹಜರನ್ನು ತಯಾರಿಸಿ ಆರೋಪಿಗಳ ವಿರುದ್ಧ ತಕ್ಷೀರು ಸಂಖ್ಯೆ:48/2008, ದಿನಾಂಕ:05-05-2008ರಂತೆ ಪ್ರಕರಣವನ್ನು ನೋಂದಾಯಿಸಿ ಪ್ರಥಮ ಮಾಹಿತಿ ವರದಿ, ಮಹಜರು ಪ್ರತಿ ಹಾಗೂ ಸೊತ್ತುಗಳ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ವಶಪಡಿಸಿಕೊಂಡ ಸೊತ್ತುಗಳನ್ನು ಕಡತದೊಂದಿಗೆ ಅಬಕಾರಿ ನಿರೀಕ್ಷಕರು, ಮಂಗಳೂರು ಉತ್ತರ ವಲಯ-I ಇವರಿಗೆ ಈ ಪ್ರಾಧಿಕಾರದ ದಿ:28-5-2008ರ ಆದೇಶದ ಮೇರೆಗೆ ದಿ:31-5-2008 ರಂದು ಪ್ರಕರಣದ ಮುಂದಿನ ತನಿಖೆಗಾಗಿ ಹಸ್ತಾಂತರಿಸಿರುತ್ತಾರೆ.

ಮೊಕದ್ದಮೆಯ ತನಿಖೆಯನ್ನು ಕೈಗೊಂಡ ಅಬಕಾರಿ ನಿರೀಕ್ಷಕರು, ಮಂಗಳೂರು ಉತ್ತರ ವಲಯ-I, ಮಂಗಳೂರು ಇವರು ಸದ್ರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಮದ್ಯದಿಂದ 180 ಎಂಎಲ್‌ನ ಒಂದು ಸೀಸೆಯನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಸದ್ರಿ ಮಾದರಿಯನ್ನು ವಿಶ್ಲೇಷಿಸಿದ ಕರ್ನಾಟಕ ಸರ್ಕಾರದ ಸಹಾಯಕ ರಾಸಾಯನಿಕ ತಜ್ಞ ಮಂಗಳೂರುರವರ ಪತ್ರ ಸಂ:248, ದಿ:13-6-2008ರ ವರದಿಯಲ್ಲಿ ಮದ್ಯಸಾರದ ಪ್ರಮಾಣ 42.0% ಇರುವುದಾಗಿ ಹಾಗೂ ಅಭಿಪ್ರಾಯ: ಮದ್ಯವು ಮಾನವನ ಸೇವನೆಗೆ ಯೋಗ್ಯವಾಗಿಲ್ಲವೆಂದು ದೃಢೀಕರಣ ಪತ್ರ ನೀಡಿರುತ್ತಾರೆ ಹಾಗೂ ಜಪ್ತು ಪಡಿಸಿಕೊಂಡ ವಾಹನದ ಬಿ ರಿಜಿಸ್ಟ್ರಾರ್ ಎಕ್ಸ್ ಟ್ರಾಕ್ಟ್ ವರದಿಯನ್ನು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬೆಂಗಳೂರು (ಪಶ್ಚಿಮ) ಇವರಿಂದ ಪಡೆದು ಪ್ರಾಧಿಕಾರಕ್ಕೆ ಸಲ್ಲಿಸಿ, ಸದ್ರಿ ವರದಿಯ ಪ್ರಕಾರ ಯೋಗಿಶ್ ಆಳ್ವ, ಬಿನ್ ನಾಗಪ್ಪ, ಶ್ವೇತ ನಿವಾಸ, 1ನೇ ಕ್ರಾಸ್, ನೆಲಮಹಡಿ ಶ್ರೀ ಕಾಂತೇಶ್ವರ ನಾಗಮಹಾಲಕ್ಷ್ಮಿ ಲೇಔಟ್, ಬೆಂಗಳೂರು ದಿನಾಂಕ:25-1-1996ರಿಂದ ಅನ್ವಯವಾಗುವಂತೆ ವಶಪಡಿಸಿಕೊಳ್ಳಲಾದ ಕೆನೈಟಿಕ್‌ಹೊಂಡಾ ದ್ವಿಚಕ್ರ ವಾಹನ ಸಂ:KA-02J-1935 ಇದರ ನೊಂದಣಿ ಮಾಲೀಕರೆಂದು ದೃಢೀಕರಿಸಲ್ಪಟ್ಟಿರುತ್ತದೆ. ತನಿಖಾಧಿಕಾರಿಯವರು ಜಪ್ತುಪಡಿಸಿಕೊಂಡ ವಾಹನ ಹಾಗೂ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ದಿ:20-8-2008ರಂದು ನೀಡಿದ ವರದಿಯನ್ನು ಆಧರಿಸಿ, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,ದ.ಕಜಿಲ್ಲೆ ಮಂಗಳೂರು ಇವರ ಆದೇಶ ಸಂ: ಎಸ್‌ಡಿಕೆ/ಡಿಟಿಸಿಆರ್/439/2008-09 ದಿ:9-9-2008ರಲ್ಲಿ ಜಪ್ತುಪಡಿಸಿಕೊಂಡಿರುವ ವಾಹನದ ಮುಟ್ಟುಗೋಲು ನಡವಳಿಯನ್ನು ಕಾಯ್ದಿರಿಸಿ, ಮದ್ಯವನ್ನು (ಮಾದರಿಗಳನ್ನು ಹೊರತು ಪಡಿಸಿ) ಕರ್ನಾಟಕ ಅಬಕಾರಿ ಕಾಯಿದೆ ಕಲಂ 43ಸಿ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಲಾಗಿದ್ದು, ಅದರಂತೆ ಅಬಕಾರಿ ನಿರೀಕ್ಷಕರು, ಮಂಗಳೂರು ಉತ್ತರ ವಲಯ-I ಇವರ ಸಮಕ್ಷಮ ದಿ:24-9-2008ರಂದು ಮಹಜರು ಜರುಗಿಸಿ ನಾಶಪಡಿಸಲಾಗಿರುತ್ತದೆ.

ಸದ್ರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಕೆನೈಟಿಕ್ ಹೊಂಡಾ ಸಂ:KA-02J-1935 ಇದರ ಬಿ ರಿಜಿಸ್ಟ್ರಾರ್ ಎಕ್ಸ್ ಟ್ರಾಕ್ಟ್ ವರದಿಯಲ್ಲಿ ನಮೂದಿಸಿದಂತೆ ಆರ್.ಸಿ. ಮಾಲೀಕರಾದ ಯೋಗಿಶ್ ಆಳ್ವ, ಬಿನ್:ನಾಗಪ್ಪ, ಶ್ವೇತ ನಿವಾಸ,1ನೇ ಕ್ರಾಸ್, ನೆಲಮಹಡಿ ಶ್ರೀ ಕಾಂತೇಶ್ವರ ನಾಗಮಹಾಲಕ್ಷ್ಮಿ ಲೇಔಟ್, ಬೆಂಗಳೂರು ಇವರಿಗೆ ಹಾಗೂ ಅರೋಪಿತ ವ್ಯಕ್ತಿಗಳಿಗೆ ದಿನಾಂಕ: 18-8-2008 ರಂದು ಕರ್ನಾಟಕ ಅಬಕಾರಿ ಕಾಯಿದೆ 1965 ಕಲಂ43ಬಿ ಪ್ರಕಾರ ಕಾರಣ ಕೇಳಿ ನೋಟಿಸುಗಳನ್ನು ನೊಂದಾಯಿತ ಅಂಚೆಯ ಮೂಲಕ ಈ ಪ್ರಾಧಿಕಾರದಿಂದ ನೀಡಲಾಗಿದ್ದು, ಸದ್ರಿ ಕಾರಣ ಕೇಳಿ ನೋಟಿಸು ಕ್ರಮ ಸಂ:1ರ ಆರೋಪಿತ ವ್ಯಕ್ತಿಗೆ ದಿ:20-12-2008ರಂದು ಜಾರಿಯಾಗಿದ್ದು, ಸದ್ರಿಯವರಿಂದ ಯಾವುದೇ ಸಮಂಜಾಯಿಷಿ ಉತ್ತರ ಈ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ಉಳಿದಂತೆ ಕ್ರ.ಸಂ:2ರ ಆರೋಪಿತ ವ್ಯಕ್ತಿಗೆ ಹಾಗೂ ವಾಹನದ ಮಾಲೀಕರಿಗೆ ಕಳುಹಿಸಲಾದ ಕಾರಣ ಕೇಳಿ ನೋಟಿಸುಗಳು ಜ್ಯಾರಿಯಾಗದೇ ಅಂಚೆ ಷರಾದೊಂದಿಗೆ ವಾಪಸು ಬಂದಿರುತ್ತದೆ.

1965ನೇ ಕರ್ನಾಟಕ ಅಬಕಾರಿ ಕಾಯ್ದೆ ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ, ಅಥವಾ ಪತ್ತೆಯಾಗುವ ಸಾಧ್ಯತೆ ಇಲ್ಲದಿದ್ದಲ್ಲಿ ಪ್ರಕರಣವನ್ನು ಪತ್ತೆಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು ಅವುಗಳು ಕಾನೂನು

ಬದ್ಧವಾಗಿದೆಯೆಂದು ಸಾಕ್ಷಧಾರಗಳೊಂದಿಗೆ ಸಾಬೀತು ಪಡಿಸದೇ ಇದ್ದಲ್ಲಿ, ಸದ್ರಿ ಸೊತ್ತುಗಳು, ಅಬಕಾರಿ ಕಾಯ್ದೆ ಕಲಂ 43ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ ಅಂತಹ ಸೊತ್ತುಗಳನ್ನು ಕಲಂ 43ಸಿ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಪ್ರಾಧಿಕಾರದಲ್ಲಿ ಲಭ್ಯವಿರುವ ದಾಖಲಾತಿಗಳ ಪ್ರಕಾರ ದಿನಾಂಕ:05-05-2008 ರಂದು ಕೆನ್ಯೆಟಿಕ್ ಹೊಂಡಾ ದ್ವಿಚಕ್ರ ವಾಹನ ಸಂ:KA-02J-1935ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೇ ಆರೋಪಿಗಳು 8.640ಲೀ ಮದ್ಯವನ್ನು ಹೊಂದಿ ಸಾಗಾಟ ಮಾಡುತ್ತಿದ್ದುದನ್ನು ಪೊಲೀಸ್ ಉಪ ನಿರೀಕ್ಷಕರು, ಪಣಂಬೂರು ಪೊಲೀಸ್ ಠಾಣೆ, ಪಣಂಬೂರುರವರು ಪತ್ತೆಹಚ್ಚಿ ಅಕ್ರಮ ಮದ್ಯ ಮತ್ತು ಸಾಗಾಣಿಕೆಗೆ ಬಳಸಲಾದ ವಾಹನವನ್ನು ಸ್ಥಳ ಮಹಜರು, ಪಂಚನಾಮೆಯ ಮುಖೇನಾ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತು ಮಾಡಲ್ಪಟ್ಟಿರುವ ವಸ್ತು ರಾಸಾಯನಿಕ ತಜ್ಞರ ವರದಿಯಂತೆ ಮದ್ಯವಾಗಿದ್ದು, ಸದ್ರಿ ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ವಾಹನದ ಮುಟ್ಟುಗೋಲು ನಡವಳಿ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಪೊಲೀಸ್ ಉಪ ನಿರೀಕ್ಷಕರು, ಪಣಂಬೂರು ಪೊಲೀಸ್ ಠಾಣೆ, ಪಣಂಬೂರು ಇವರು ವಶಪಡಿಸಿಕೊಂಡ ಕೆನ್ಯೆಟಿಕ್ ಹೊಂಡಾ ದ್ವಿಚಕ್ರ ವಾಹನ ಸಂ:KA-02J-1935 ನ್ನು ವಶಪಡಿಸಿಕೊಂಡು ಸುಮಾರು 8ತಿಂಗಳಿಗಿಂತ ಹೆಚ್ಚು ಸಮಯ ಕಳೆದಿದ್ದು, ಒಂದನೇ ಆರೋಪಿಯಾದ ರವಿ ಎಂಬವರಿಗೆ ನೀಡಿದ ಕಾರಣಕೇಳಿ ನೋಟಿಸು ಸ್ವೀಕೃತಿಯಾಗಿದ್ದರೂ, ಈ ಪ್ರಾಧಿಕಾರದ ಮುಂದೆ ಅಪರಾಧವನ್ನು ಅಲ್ಲಗಳೆದು ದಾಖಲೆಗಳೊಂದಿಗೆ ಸಾಬೀತುಪಡಿಸಲು ಯಾವುದೇ ಸಮಂಜಸವಾದ ಉತ್ತರ ಈ ಪ್ರಾಧಿಕಾರದ ಮುಂದೆ ಒಪ್ಪಿಸದೇ ಇರುವುದರಿಂದ ಮತ್ತು ವಾಹನ ಮಾಲೀಕರು ಸೂಕ್ತ ದಾಖಲಾತಿಗಳೊಂದಿಗೆ ತನ್ನ ನಿರಾಪರಾಧಿತ್ವವನ್ನು ಸಾಬೀತುಪಡಿಸಿ, ವಾಹನದ ಮಾಲೀಕತ್ವವನ್ನು ಕೋರಿ ಈ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ. ಆರೋಪಿಗಳು ಮದ್ಯವನ್ನು ಮಾರಾಟ ಮಾಡುವ ಉದ್ದೇಶದಿಂದ ತಕ್ಷೀರು ಸ್ಥಳಕ್ಕೆ ಸಾಗಾಟ ಮಾಡಿರುವುದು ಸ್ಪಷ್ಟವಾಗಿ ಕಾಣಬರುತ್ತದೆ. ಹಾಗೂ ವಶಪಡಿಸಿಕೊಂಡ ಕೆನ್ಯೆಟಿಕ್ ಹೊಂಡಾ ದ್ವಿಚಕ್ರ ವಾಹನ ಸಂ:KA-02J-1935ನ್ನು ಸುಮಾರು 8ತಿಂಗಳು ಕಳೆದಿದ್ದರೂ ವಾಹನದ ಮಾಲೀಕತ್ವವನ್ನು ಕೋರಿ ಈ ಪ್ರಾಧಿಕಾರಕ್ಕೆ ಯಾರೂ ಅರ್ಜಿಯನ್ನು ಸಲ್ಲಿಸದೇ ಇರುವ ಕಾರಣ, ಸದ್ರಿ ವಾಹನವನ್ನು ತೆರೆದಿಟ್ಟ ಬಯಲಿನಲ್ಲಿ ನಿಲ್ಲಿಸಿರುವುದರಿಂದ ಮಳೆ, ಬಿಸಿಲು, ಗಾಳಿಗೆ ಸಿಲುಕಿ ತುಕ್ಕು ಹಿಡಿದು ಹಾಳಾಗುವ ಸಂಭವ ಇರುವುದರಿಂದ, ಇದನ್ನು ಇನ್ನು ಹೆಚ್ಚು ಕಾಲ ಇರಿಸಿಕೊಂಡರೆ ಇನ್ನಷ್ಟು ಶಿಥಿಲಗೊಂಡು ಮೌಲ್ಯಹೀನವಾಗುವ ಸಾಧ್ಯತೆಯಿದ್ದು ಸರ್ಕಾರಕ್ಕೆ ಬರುವ ಆದಾಯ ಕೂಡಾ ಕಡಿಮೆಯಾಗುವ ಸಂಭವವಿರುವುದರಿಂದ ಅಕ್ರಮ ಅಬಕಾರಿ ಸೊತ್ತು ಸಾಗಾಣಿಕೆಗೆ ಬಳಸಿದ ಕೈನೆಟಿಕ್ ಹೊಂಡಾವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವೆಂಬ ಹಿನ್ನಲೆಯಲ್ಲಿ ಈ ಆದೇಶ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43ಬಿ ಅಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಕಲಂ 43ಎ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪೊಲೀಸ್ ಉಪ ನಿರೀಕ್ಷಕರು, ಪಣಂಬೂರು ಪೋಲೀಸ್ ಠಾಣಾ ಪಣಂಬೂರು ಇವರ ಕ್ರೈಂ ನಂಬರ್. 48/2008, ದಿನಾಂಕ:5-5-2008 ರಲ್ಲಿ ಜಪ್ತು ಪಡಿಸಿರುವ ಕೆನ್ಯೆಟಿಕ್ ಹೊಂಡಾ ದ್ವಿಚಕ್ರ ವಾಹನ ಸಂ:KA-02J-1935ನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 43ಸಿ ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ:27-01-2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.189

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ:ಎಸ್‌ಡಿಕೆ/341/ಡಿಟಿಸಿಆರ್/2007-08, ದಿನಾಂಕ:26ನೇ ಫೆಬ್ರವರಿ, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ. ಮಂಗಳೂರು.

ಫಿರ್ಯಾದುದಾರರು:	ಆರೋಪಿಗಳು:
ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು.	ತಿಮ್ಮಪ್ಪ ಗೌಡ, ಬಿನ್ ದಿ:ವೀರಪ್ಪ ಗೌಡ, ವಾಸ: ಕೆಳಗಿನ ಕುದೊಟ್ಟು ಮನೆ, ನೂಜಿಬಾಳ್ತಿಲ ಗಾಮ, ಪುತ್ತೂರು

ವಾಹನದ ಮಾಲೀಕರು:
ಶ್ರೀಮತಿ ಚಂದ್ರಾವತಿ ಕೋಂ:ಒಡಿಯಪ್ಪ ಗೌಡ, ಕೇರೆಕೋ
ಹೌಸ್, ನೂಜಿಬಾಳ್ತಿಲ ಅಂಚೆ, ಪುತ್ತೂರು.

ಪ್ರಕರಣದ ಮುಖ್ಯಾಂಶಗಳು:

ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು ಇವರು ದಿ: 10-3-20 ರಂದು ತಮ್ಮ ಸಿಬ್ಬಂಧಿಯವರೊಂದಿಗೆ ಪುತ್ತೂರು ತಾಲೂಕು ಕಡಬ ಪೇಟೆಯ ಬಳಿ ರಸ್ತೆಗಾವಲು ನಡೆಸುತ್ತಿರುವಾಗ ಜೀ ಸಂ:KA-21-M-3857ನ್ನು ಪರಿಶೀಲಿಸಿದಾಗ ಜೀಪಿನ ಸೀಟಿನ ಅಡಿಯಲ್ಲಿ ಒಂದು ರಟ್ಟಿನ ಪೆಟ್ಟಿಗೆಯಲ್ಲಿ ಮದ್ಯ ತುಂಬಿದ ಮಿಲಿಯ 10 ಬಾಟ್ಲಿ ರಾಯಲ್ ಗೋಲ್ಡ್ ಕಫ್ ಎಂಬ ವಿಸ್ಕಿ ಬಾಟಲಿಗಳು ಇರುವುದು ಪತ್ತೆಹಚ್ಚಿ, ಜೀಪಿನ ಚಾಲಕನ ಹೆ ಮತ್ತು ವಿಳಾಸವನ್ನು ವಿಚಾರಿಸಿದಾಗ ತಿಮ್ಮಪ್ಪ ಗೌಡ, ಬಿನ್ ದಿ:ವೀರಪ್ಪ ಗೌಡ,ವಾಸ: ಕೆಳಗಿನ ಕುದ್ರೊಟ್ಟು ಮನೆ, ನೂಜಿಬಾ ಗ್ರಾಮ, ಪುತ್ತೂರು ಎಂದು ತಿಳಿಸಿದ್ದು, ತಾನು ಕಲ್ಲುಗುಡ್ಡೆ ಕೊರಗಪ್ಪ ಎಂಬವರ ಗೂಡಂಗಡಿಯಲ್ಲಿ ಅಧಿಕ ಹಣಕ್ಕೆ ಮಾರ ಮಾಡಲೆಂದು ಸಾಗಾಟ ಮಾಡುತ್ತಿರುವುದಾಗಿ ತಿಳಿಸಿರುತ್ತಾನೆ. ತಾನು ಯಾವುದೇ ಪರವಾನಿಗೆ ಇಲ್ಲದೇ ಸಾಗ ಮಾಡುತ್ತಿರುವುದು ತಪ್ಪಾಗಿರುವುದರಿಂದ ಇದು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 15,32,34 ರ ಪ್ರಕಾರ ಅಪರ ವಾಗಿರುವುದರಿಂದ, ಈ ಕೆಳಕಂಡ ಸೊತ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲಾಯಿತು.

1) ರಾಯಲ್ ಗೋಲ್ಡ್ ಕಫ್ ವಿಸ್ಕಿ 180 ಎಂಎಲ್‌ನ 10 ಸೀಸೆಗಳು-1.800 ಲೀಟರು ಮದ್ಯ.
2) ಜೀಪು ಸಂ:KA-21M-3857.

ಸದ್ರಿ ಸೊತ್ತುಗಳನ್ನು ವಶಪಡಿಸಿಕೊಂಡು ಅರೋಪಿಯನ್ನು ಸ್ಥಳದಲ್ಲಿ ದಸ್ತಗಿರಿ ಮಾಡಿ ಹಾಗೂ ಮಹಜರ ಸ್ಥಳದಲ್ಲಿಯೇ ಬರೆದು ಅರೋಪಿಯ ವಿರುದ್ದ ತಕ್ಷೀರು ಸಂಖ್ಯೆ 31/2008, ದಿನಾಂಕ 10-3-2008ರಂದು ಮೊಕದ್ದಮೆಯ ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿ, ಮಹಜರು ಮತ್ತು ಸೊತ್ತುಗಳ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿ ವಶಪಡಿಸಿಕೊಂಡ ಸೊತ್ತುಗಳನ್ನು ಕಡತದೊಂದಿಗೆ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇಐಬಿ,ದ.ಕ.ಜಿ ಮಂಗಳೂರು ಇವರ ಆದೇಶ ಸಮ ಸಂಖ್ಯೆ ದಿನಾಂಕ:24-3-2008ರ ಆದೇಶದ ಮೇರೆಗೆ ಅಬಕಾರಿ ಉಪ ನಿರೀಕ್ಷಕರು(ಜ್ಯಾರಿ ಮತ್ತು ತನಿಖೆ ಪುತ್ತೂರು ತಾಲೂಕು ಇವರಿಗೆ ಹಸ್ತಾಂತರಿಸಿರುತ್ತಾರೆ.

ಮೊಕದ್ದಮೆಯ ತನಿಖೆಯನ್ನು ಕೈಗೊಂಡ ಅಬಕಾರಿ ಉಪ ನಿರೀಕ್ಷಕರು(2) ಜಾರಿ ಮತ್ತು ತನಿಖೆ ,ಪುತ್ತೂರು ಇ ತನಿಖಾ ವರದಿ ಸಂ:ಸಿಆರ್‌ಎಂ:2:2008-09 ದಿನಾಂಕ:23-6-2008ರ ವರದಿಯಲ್ಲಿ ವಶಪಡಿಸಿಕೊಂಡ ಮದ್ಯದಿಂದ 1 ಮಿಲಿಯ 2 ಬಾಟ್ಲಿ ಮಾದರಿಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಸದ್ರಿ ಮಾದರಿಗಳನ್ನು ವಿಶ್ಲೇಷಿಸಿದ ಸಹಾಯ ರಾಸಾಯನಿಕ ವಿಶ್ಲೇಷಕರು, ಮಂಗಳೂರುರವರು ದಿ:2-5-2008ರಂದು ನೀಡಿದ ರಾಸಾಯನಿಕ ಪರೀಕ್ಷಾ ಫಲಿತಾಂ ವರದಿಯಲ್ಲಿ ಮದ್ಯದ ಮದ್ಯಸಾರ ಪ್ರಮಾಣ 42.5% ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ಹಾಗೂ ವಶಪಡಿಸಿಕೊ ಜೀಪು ಸಂ:KA-21M-3857ರ ಬಿ ಎಕ್ಸ್‌ಟ್ರಾಕ್ಟ್ ವರದಿಯನ್ನು ಸಾರಿಗೆ ಅಧಿಕಾರಿ, ಪುತ್ತೂರು ಇವರಿಂದ ಪಡೆದು ಈ ಕಛೇ ಸಲ್ಲಿಸಿರುತ್ತಾರೆ. ಬಿ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ವಾಹನದ ನೊಂದಾಣಿ ಮಾಲಕಿ ಶ್ರೀಮತಿ. ಚಂದ್ರಾವತಿ, ಕೋಂ :ಒಡಿಯ ಗೌಡ, ಕರೆಕೋಡಿ ನೂಜಿಬಾಳ್ತಿಲ ಪುತ್ತೂರು ತಾಲೂಕು ಎಂದು ಇದರ ಚಾಸೀಸ್ ನಂ:DK-28413 ಹಾಗೂ ಇಂಜಿನ್ ನ DK-28413 ಎಂದು ನಮೂದಿಸಿ ದೃಢೀಕರಣ ಪತ್ರ ನೀಡಿರುತ್ತಾರೆ.

ವಾಹನ ಮಾಲೀಕರಾದ ಶ್ರೀಮತಿ.ಚಂದ್ರಾವತಿ ಇವರು ತಮ್ಮ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ದಿ:1- 2008ರಂದು ಅರ್ಜಿ ಸಲ್ಲಿಸಿ ಸದ್ರಿ ಅರ್ಜಿಯ ಜೊತೆಗೆ ವಾಹನದ ಬಿ ಎಕ್ಸ್ ಟ್ರಾಕ್ಟ್ ಹಾಗೂ ದಾಖಲಾತಿಗಳನ್ನು ಸಲ್ಲಿಸು ವಾಹನವನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ಕೋರಿರುತ್ತಾರೆ.

ಈ ಪ್ರಾಧಿಕಾರದಿಂದ ವಾಹನದ ನೋಂದಾಣಿ ಮಾಲೀಕರಾದ ಶ್ರೀಮತಿ ಚಂದ್ರಾವತಿ, ಕೋಂ :ಒಡಿಯ ಗೌಡ,ಕರೆಕೋಡಿ ನೂಜಿಬಾಳ್ತಿಲ ಪುತ್ತೂರು ತಾಲೂಕು ಇವರಿಗೆ ಕರ್ನಾಟಕ ಅಬಕಾರಿ ಕಾಯಿದೆ 1965 ಸೆಕ್ಷನ್ 43 ಬಿ ಪ್ರಕ ಕಾರಣ ಕೇಳಿ ನೋಟಿಸನ್ನು ನೊಂದಾಣಿ ಅಂಚೆಯ ಮೂಲಕ ದಿ:25-7-2008ರಂದು ನೀಡಲಾಗಿದ್ದು, ಸದ್ರಿ ನೋಟಿ ವಾಹನ ಮಾಲೀಕರ ಪರ ವಕೀಲರು ದಿ:19-8-2008 ರಂದು ಉತ್ತರವನ್ನು ನೀಡಿರುತ್ತಾರೆ.

ಸದ್ರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಜೀಪು ಸಂ:KA-21M-3857 ಇದರ ಮದ್ಯಂತರ ಬಿಡುಗಡೆಗಾಗಿ ಸಲ್ಲಿ ಅರ್ಜಿಯ ಬಗ್ಗೆ ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,ದ.ಕ ಜಿಲ್ಲೆ ಮಂಗಳೂರು ಇ ನ್ಯಾಯಾಲಯದಲ್ಲಿ ವಿಚಾರಣೆ ಆರಂಭಿಸಿ, ಸರ್ಕಾರದ ಅಭಿಯೋಜಕರ ಪರ ನಾಲ್ಕು ಸಾಕ್ಷಿಗಳನ್ನು ಮತ್ತು ಪ್ರತಿ ರಕ್ಷಾ ವಾಹನ ಮಾಲೀಕರ ವಿಚಾರಣೆಗೆ ಒಳಪಡಿಸಿ ಅವರುಗಳ ಹೇಳಿಕೆಯನ್ನು ಪಡೆಯಲಾಗಿದೆ. ಈ ಪ್ರಕರಣದಲ್ಲಿ ಸರ್ಕಾರದ ಹಾಗೂ ವಾಹನ ಮಾಲೀಕರ ಪರ ಸಲ್ಲಿಸಿರುವ ಸಾಕ್ಷ್ಯಾಧಾರಗಳ ಮೇಲೆ ಈ ಕೆಳಗಿನ ವಿವಾದಾಂಶಗಳ ತೀರ್ಮಾನಿಸಬೇಕಾಗಿರುವುದು ಅಗತ್ಯವಾಗಿದ್ದು, ಪರಿಶೀಲನಾ ಅಂಶಗಳು ಈ ಕೆಳಗಿನಂತಿರುತ್ತದೆ.

1. ದಿನಾಂಕ:10–3–2008 ರಂದು ಜೀಪು ಸಂ:KA-21-M-3857 ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೆ ಅಕ್ರಮವಾಗಿ ಕರ್ನಾಟಕ ಅಬಕಾರಿ ಕಾಯಿದೆಯಡಿ ಮದ್ಯವನ್ನು ಸಾಗಾಣಿಕೆ ಮಾಡಲಾಗಿದೆಯೇ?

2. ವಶಪಡಿಸಿಕೊಂಡಿರುವ ವಾಹನ ಮಾಲೀಕ ತಾನೆಂದು, ತನಗೆ ತಿಳಿಯದೇ ಕರ್ನಾಟಕ ಅಬಕಾರಿ ಕಾಯಿದೆಯಡಿ ಅಕ್ರಮ ಮದ್ಯವನ್ನು ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನ ಮಾಲೀಕರು ಸಾಬೀತು ಪಡಿಸಿದಾರೆಯೇ?

3. ಜಪ್ತು ಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಪ್ರಾ.ಸ–1:

ಶ್ರೀ ಕುಶಾಲಪ್ಪ ಗೌಡ,ಪೊಲೀಸ್ ಉಪ ನಿರೀಕ್ಷಕರು, ಕಡಬ ಪೊಲೀಸ್ ಠಾಣೆ, ಕಡಬ ಇವರು ಪ್ರಕರಣದ ಫಿರ್ಯಾದುದಾರರಾಗಿದ್ದು, ಇವರು ದಿನಾಂಕ:18–2–2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ. ತನಗೆ ದೊರೆತ ಖಚಿತ ವರ್ತಮಾನದ ಮೇರೆಗೆ ಜೀಪು ಸಂ:KA-21M-3857ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರ ಇಲ್ಲದೇ 180 ಮಿಲಿಯ 10 ಬಾಟ್ಲಿಯ ರಾಯಲ್ ಗೋಲ್ಡ್ ಕಫ್ ವಿಸ್ಕಿ 1.800 ಲೀಟರು ಮದ್ಯವನ್ನು ಸಾಗಾಣಿಕೆ ಮಾಡುತ್ತಿರುವುದನ್ನು ಪತ್ತೆಹಚ್ಚಿ, ವಾಹನ ಚಾಲಕನಾದ ತಿಮ್ಮಪ್ಪ ಗೌಡ ಇವರ ವಿರುದ್ದ ತಕ್ಷೀರನ್ನು ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಿರುತ್ತೇನೆ. ಬೇರೆ ಯಾವುದೇ ಸೊತ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ, ಮಹಜರಿನ ಪ್ರತಿಯನ್ನು ನಿಶಾನೆ ಪಿ–1 ಎಂದು, ಸೊತ್ತುಗಳ ವರದಿಗೆ ಸಹಿ ಹಾಕಿರುವ ಸಹಿಯನ್ನು ನಿಶಾನೆ ಪಿ–2 ಎಂದು, ಪ್ರಥಮ ಮಾಹಿತಿ ವರದಿಯ ಪ್ರತಿಯನ್ನು ನಿಶಾನೆ ಪಿ–3 ಎಂದು ಗುರುತಿಸಿರುತ್ತೇನೆ. ಪಾಟೀ ಸವಾಲಿಗೆ ಉತ್ತರಿಸುತ್ತಾ ವಾಹನದ ಆರ್.ಸಿ. ಮಾಲೀಕರ ಬಗ್ಗೆ ಯಾವುದೇ ವಿಚಾರಣೆ ಮಾಡಿರುವುದಿಲ್ಲ ,ವಾಹನ ಚಾಲಕರು ತಿಮ್ಮಪ್ಪಗೌಡ ಇವರು ಲೈಸನ್ಸ್ ಹೊಂದಿದ್ದ ಅಂಗಡಿಯಿಂದ ಮದ್ಯ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ, ಮತ್ತು ಯಾವುದೇ ಬಿಲ್ಲನ್ನು ಹಾಜರುಪಡಿಸಿರುವುದಿಲ್ಲ ತಾನು ಸುಳ್ಳುಮೊಕದ್ದಮೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲವೆಂದು ಸಾಕ್ಷಿ ನುಡಿದಿರುತ್ತಾರೆ.

ಪ್ರಾ.ಸ–2:

ಶ್ರೀ ಜಯರಾಮ, ಪೊಲೀಸ್ ಕಾನ್ಸ್‌ಟೇಬಲ್, ಕಡಬ ಪೊಲೀಸ್ ಠಾಣೆ, ಕಡಬ ಇವರು ಪ್ರಕರಣದ ಮಹಜರು ಸಾಕ್ಷಿದಾರರಾಗಿದ್ದು, ಇವರು ದಿನಾಂಕ:18–2–2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ. ತಾನು ಪೊಲೀಸ್ ಉಪ ನಿರೀಕ್ಷಕರೊಂದಿಗೆ ಕೂಡಿಕೊಂಡು ಮೊಕದ್ದಮೆಯನ್ನು ದಾಖಲಿಸಿದ್ದು, ಮಹಜರಿಗೆ ಸಹಿಯನ್ನು ಮಾಡಿರುತ್ತೇನೆ. ಚಾಲಕನಲ್ಲಿ ವಿಚಾರಿಸಿದಾಗ ಸದ್ರಿ ಮದ್ಯವನ್ನು ಕಡಬ ಪೇಟೆಯಲ್ಲಿರುವ ಪ್ರಶಾಂತ್ ವೈನ್ಸ್ ಅಂಗಡಿಯಿಂದ ಖರೀದಿಸಿರುವುದಾಗಿ ತಿಳಿಸಿರುತ್ತಾರೆ. ಈ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಪಾಟೀ ಸವಾಲಿಗೆ ಉತ್ತರಿಸುತ್ತಾ ಸದ್ರಿ ವ್ಯಕ್ತಿಯು ಮದ್ಯ ಖರೀದಿ ಬಗ್ಗೆ ತನ್ನಲ್ಲಿ ಖರೀದಿ ಬಿಲ್ಲು ತೋರಿಸಿದ್ದಾರೆ ಎಂದರೆ ಸರಿಯಲ್ಲ, ಸುಳ್ಳು ಮೊಕದ್ದಮೆ ದಾಖಲಿಸಿ ಮಹಜರಿಗೆ ಸಹಿ ಹಾಕಿದ್ದಾರೆ ಎಂದರೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ.

ಪ್ರಾ.ಸ–3:

ಶ್ರೀ ಚಂದ್ರಹಾಸ, ಕಲ್ಲುಗುಡ್ಡೆ ಮನೆ, ನೂಜಿಬಾಳ್ತಿಲ ಗ್ರಾಮ, ಕಡಬ ಪುತ್ತೂರು ಇವರು ಸ್ವತಂತ್ರ ಸಾಕ್ಷಿದಾರರಾಗಿದ್ದು, ಇವರು ದಿನಾಂಕ:18–2–2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ. ತಾನು ಡ್ರೈವರ್ ಕೆಲಸ ಮಾಡುತ್ತಿದ್ದು, ತನ್ನನ್ನು ಠಾಣೆಗೆ ಬಂದು ಸಹಿ ಹಾಕಲು ತಿಳಿಸಿದ್ದು ಜೀಪಿನಲ್ಲಿ ಮದ್ಯದ ಬಾಟಲಿ ತುಂಬಿರುವ ಬಗ್ಗೆ ತನಗೆ ತಿಳಿದಿರುವುದಿಲ್ಲ, ಆರೋಪಿ ತಿಮ್ಮಪ್ಪ ಗೌಡ ತನಗೆ ಯಾರೆಂದು ಗೊತ್ತಿರುವುದಿಲ್ಲ, ಮಹಜರಿಗೆ ಸಹಿ ಹಾಕಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತೇನೆ. ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಗಿದೆ.

ಪ್ರಾ.ಸ–4:

ಶ್ರೀ ಪುರುಷೋತ್ತಮ, ಪಾಲ್ತೇರಿ ಮನೆ, ನೂಜಿಬಾಳ್ತಿಲ ಗ್ರಾಮ, ಕಡಬ ಪುತ್ತೂರು ಇವರು ಸ್ವತಂತ್ರ ಸಾಕ್ಷಿದಾರರಾಗಿದ್ದು, ಇವರು ದಿನಾಂಕ:18–2–2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ. ತನ್ನನ್ನು ಠಾಣೆಗೆ ಬರಲು ತಿಳಿಸಿದ್ದು, ಮಹಜರಿಗೆ ಸಹಿ ಹಾಕಲು ಹೇಳಿರುವ ಮೇರೆಗೆ ತಾನು ಠಾಣೆಗೆ ಬಂದು ಮಹಜರಿಗೆ ಸಹಿ ಹಾಕಿರುತ್ತೇನೆ. ತಾನು 3ನೇ ಕ್ಲಾಸ್ ವಿದ್ಯಾಭ್ಯಾಸ ಮಾಡಿದ್ದು ತನಗೆ ಕಾನೂನಿನ ವಿಚಾರ ತಿಳಿದಿರುವುದಿಲ್ಲ, ಆರೋಪಿ ತಿಮ್ಮಪ್ಪ ಗೌಡ ತನಗೆ ಯಾರೆಂದು ಗೊತ್ತಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತೇನೆ. ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಗಿದೆ.

ಡಿಡಬ್ಲ್ಯೂ–1:

ಶ್ರೀಮತಿ ಚಂದಾವತಿ ಇವರು ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನದ ಮಾಲೀಕರಾಗಿದ್ದು, ಇವರು ದಿ:25–2–2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ. ಸದ್ರಿ ವಾಹನವನ್ನು ಐದು ವರ್ಷಗಳ ಹಿಂದೆ ಖರೀದಿಸಿರುತ್ತೇನೆ. ತನ್ನ ವಾಹನವನ್ನು ತನ್ನ ಹತ್ತಿರದ ನಿವಾಸಿಯಾದ ಮೋನಪ್ಪರವರಿಗೆ ಚಾಲನೆ ಮಾಡಲು ಕೊಟ್ಟಿದ್ದು ಅವರು ದಿ:10–3–2008ರಂದು ವಾಹನವನ್ನು ಪೊಲೀಸ್ ಠಾಣೆಯವರು ವಶಪಡಿಸಿಕೊಂಡಿರುತ್ತಾರೆಂದು ತಿಳಿಸಿರುತ್ತಾರೆ. ಆ ದಿವಸ

ತಮ್ಮ ಮನೆಯ ಸರಕುಗಳನ್ನು ಖರೀದಿಸಿ ತರಲು ಕಡಬ ಪೇಟೆಗೆ ಜೀಪು ಕೊಂಡು ಹೋಗಿದ್ದು, ತನ್ನ ಬ್ಯಾಗಿನಲ್ಲಿ ಮದ್ಯವನ್ನು ಕೊಂಡುಹೋಗುತ್ತಿದ್ದ ಸಂದರ್ಭದಲ್ಲಿ ಪೊಲೀಸರು ಆ ವ್ಯಕ್ತಿಯನ್ನು ವಿಚಾರಿಸಿದಾಗ ತಾನು ಹತ್ತಿರದಲ್ಲಿ ನಿಂತಿದ್ದ ತಮ್ಮ ಜೀಪಿನಲ್ಲಿ ತನ್ನ ಊರಿಗೆ ಹೋಗಿರುವುದಾಗಿ ತಿಳಿಸಿರುತ್ತಾರೆ. ತನ್ನ ವಿರುದ್ಧ ಯಾವುದೇ ಮೊಕದ್ದಮೆಗಳು ದಾಖಲಾಗಿರುವುದಿಲ್ಲ . ಈ ಅಪರಾಧಕ್ಕೂ ತನಗೂ ಯಾವುದೇ ಸಂಬಂಧವಿಲ್ಲವೆಂದು ಸಾಕ್ಷಿ ನುಡಿದಿರುತ್ತಾರೆ. ಮುಖ್ಯ ವಿಚಾರಣೆಯ ಎಡಿ.ಪಿಯವರ ಪಾಟೀ ಸವಾಲಿಗೆ ಉತ್ತರಿಸುತ್ತಾ ಪೊಲೀಸರ ಜೀಪನ್ನು ಅಮಾನತ್ತು ಮಾಡಿಕೊಂಡಿರುವ ಬಗ್ಗೆ ಮೋನಪ್ಪ ತನಗೆ ತಿಳಿಸಿರುತ್ತಾನೆ. ಯಾಕೆ ಅಮಾನತ್ತು ಮಾಡಿರುತ್ತಾರೆ ಎಂದು ತಿಳಿದಿರುವುದಿಲ್ಲ, ತಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ಉತ್ತರ ನೀಡಿರುತ್ತಾರೆ.

ಸಹಾಯಕ ಅಭಿಯೋಗ ನಿರ್ದೇಶಕರು ಹಾಗೂ ಅರ್ಜಿದಾರರ ಪರ ವಕೀಲರು ವಾದವನ್ನು ಆಲಿಸಲಾಯಿತು. ಅರ್ಜಿದಾರರ ಪರ ವಕೀಲರು ಮದ್ಯವನ್ನು ಖರೀದಿಸಿದ ಬಗ್ಗೆ ಬಿಲ್ಲನ್ನು ಈ ಪ್ರಾದಿಕಾರಕ್ಕೆ ಒಪ್ಪಿಸಿರುತ್ತಾರೆ. ಸದ್ರಿ ಬಿಲ್ಲು ಕಡಬ ಪಶಾಂತ್ ವೈನ್ಸ್ ಸ್ಟೋರ್ ಇದರ ಮಾರಾಟ ಬಿಲ್ಲು ಸಂ: 5132ರಂತೆ 180 ಎಂಎಲ್‌ನ 10 ಬಾಟಲು ಗೋಲ್ಡ್‌ಕಫ್ ವಿಸ್ಕಿ ಖರೀದಿಸಿರುವ ಬಿಲ್ಲನ್ನು ಈ ಪ್ರಾದಿಕಾರಕ್ಕೆ ಒಪ್ಪಿಸಿ ಅಪರಾಧ ಎಸಗಿರುವುದಿಲ್ಲವೆಂದು ವಾದವನ್ನು ಮಂಡಿಸಿರುತ್ತಾರೆ.

ಪ್ರಕರಣದ ಎಲ್ಲಾ ದಾಖಲಾತಿಗಳನ್ನು, ಪಾ.ಸ-1, ಪಾ.ಸ-2, ಪಾ.ಸ-3 ಮತ್ತು ಪಾಸ-4 ರ ಸಾಕ್ಷಿ ವಿಚಾರಣೆ ಹಾಗೂ ಅರ್ಜಿದಾರರ ವಿಚಾರಣೆ ಹಾಗೂ ಅವರ ಪರ ವಕೀಲರ ವಾದವನ್ನು ಮತ್ತು ತನಿಖಾಧಿಕಾರಿಯವರ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಕರ್ನಾಟಕ ಅಬಕಾರಿ ಕಾಯಿದೆ (ಸ್ವಾಧೀನತೆ ಮತ್ತು ಸಾಗಾಣಿಕೆ ಇತರೆ) ನಿಯಮಗಳು 1967ರ ನಿಯಮ 21(4)(5)ರ ಪ್ರಕಾರ ಒಬ್ಬ ವ್ಯಕ್ತಿ ತನ್ನ ಸ್ವಂತ ಉಪಯೋಗಕ್ಕೆ ಯಾವುದೇ ರಹದಾರಿ ಮತ್ತು ಸನ್ನದು ಇಲ್ಲದೇ 4.600 ಲೀಟರು ಪ್ರಮಾಣದ ಮದ್ಯವನ್ನು ಹೊಂದಬಹುದಾಗಿದ್ದು, ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಕಡಬ, ಪುತ್ತೂರು ಇವರು ದಿ:10-3-2008 ರಂದು ದಾಖಲಿಸಿದ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಮದ್ಯ 1.800 ಲೀಟರು ಕಡಿಮೆ ಪ್ರಮಾಣವಾಗಿದ್ದು ಇದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 15,32,34ರ ಪ್ರಕಾರ ಮೊಕದ್ದಮೆಯನ್ನು ದಾಖಲಿಸಲು ಅರ್ಹವಾಗಿರುವುದಿಲ್ಲ ಹಾಗೂ ತಕ್ಷೀರನ್ನು ದಾಖಲಿಸಿದ ಸಂದರ್ಭದಲ್ಲಿ ಜೀಪನ್ನು ಪರಿಶೀಲಿಸುವ ಮುನ್ನ ಮಾನ್ಯ ನ್ಯಾಯಾಲಯದಿಂದ ಸರ್ಚ್ ವಾರೆಂಟ್ ಪಡೆಯಬೇಕಾಗಿದ್ದು, ಅಥವಾ ಸರ್ಚ್‌ವಾರೆಂಟ್ ಪಡೆಯಲು ಕಾಲಾವಕಾಶವಿಲ್ಲದ ಪ್ರಯುಕ್ತ ಸರ್ಚ್ ಮೆಮೋವನ್ನು ಸ್ಥಳ ಮಹಜರಿನಲ್ಲಿ ತಿಳಿಸಿರುವುದಿಲ್ಲ. ಮತ್ತು ರಾಸಾಯನಿಕ ತಜ್ಞರ ವರದಿ ಸಂ:146-2/1-4-2008 ದಿ:2-5-2008 ರ ವರದಿಯಲ್ಲಿ ಮದ್ಯದ ಮದ್ಯಸಾರ ಪ್ರಮಾಣ 42.5% ಇರುವುದಾಗಿ ದೃಢೀಕರಣ ಪತ್ರ ನೀಡಿದ್ದು, ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯ ಅಸಲಿ ಮದ್ಯವಾಗಿದ್ದು, ಇದು ನಕಲಿ ಮದ್ಯವಾಗಿರುವುದಿಲ್ಲ.

ಮೇಲಿನ ಕಾರಣದಿಂದಾಗಿ ಜಪ್ತು ಪಡಿಸಿರುವ ಮದ್ಯ ಒಟ್ಟು ಪ್ರಮಾಣ 1.800 ಮಾತ್ರವಾಗಿದ್ದು, ರಹದಾರಿ ಸನ್ನದು ಇಲ್ಲದೇ ಹೊಂದಬಹುದಾದ ಮದ್ಯ ಪ್ರಮಾಣ 4.600 ಕ್ಕಿಂತ ಕಡಿಮೆ ಪ್ರಮಾಣದ ಮದ್ಯವಾಗಿರುವುದರಿಂದ ಆರೋಪಿಯ ವಿರುದ್ಧ ಕರ್ನಾಟಕ ಅಬಕಾರಿ ಕಾಯಿದೆ ಕಲಂ 15,32,34ರ ಪ್ರಕಾರ ಅಪರಾಧ ಗುರುತಿಸಲು ಕಾನೂನುನಿನಲ್ಲಿ ಅವಕಾಶ ಇಲ್ಲದೇ ಇರುವುದರಿಂದ ಆರೋಪ ಸಾಬೀತುಪಡಿಸುವ ವಿವಾದಾಂಶಗಳಂತೆ ಒಂದನೇ ವಿವಾದಾಂಶಕ್ಕೆ ನಕರಾತ್ಮಕವಾಗಿ, ಎರಡನೇ ವಿವಾದಾಂಶಕ್ಕೆ ಸಕರತ್ಮಾಕವಾಗಿ ಮತ್ತು ಮೂರನೇ ವಿವಾದಾಂಶಕ್ಕೆ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಕಾನೂನಿನಡಿಯಲ್ಲಿ ಯೋಗ್ಯವಾಗಿಲ್ಲವೆಂಬ ತೀರ್ಮಾನಕ್ಕೆ ಬರಲಾಗಿದೆ.

ಮೇಲಿನ ವಿವಾದಾಂಶಗಳನ್ನು ಅವಲಂಬಿಸಿ ದಾಖಲಿಸಿರುವ ಪ್ರಕರಣ ಕಾನೂನಿನಡಿಯಲ್ಲಿ ಗುರುತಿಸಲು ಅರ್ಹವಾಗದೇ ಇರುವ ಕಾರಣ ಈ ಕೆಳಕಂಡ ಆದೇಶ

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43ಎ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43 ಬಿ ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿದ ನಂತರ ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೋಲೀಸ್ ಠಾಣಾ, ಕಡಬ, ಪುತ್ತೂರು ಇವರ ಮೊಕದ್ದಮೆ ನಂಬ್ರ:31/2008, ದಿ:10-3-2008 ರಲ್ಲಿ ಜಪ್ತು ಪಡಿಸಿಕೊಂಡಿರುವ ಜೀಪು ಸಂ: KA-21M-3857 ನ್ನು ನಿಯಮ 43ಎ (2)ರನ್ವಯ ಸದ್ರಿ ವಾಹನವನ್ನು ವಾಹನ ಆರ್.ಸಿ ಮಾಲೀಕರಾದ ಶ್ರೀಮತಿ ಚಂದಾವತಿ, ಕೋಂ ಒಡಿಯಪ್ಪ ಗೌಡ, ಕರೆಕೋಡಿ ನೂಜಿಬಾಳ್ತಿಲ ಪುತ್ತೂರು ತಾಲೂಕು ಇವರ ಸುಪರ್ದಿಗೆ ಬಿಡುಗಡೆಗೊಳಿಸಲು ಆದೇಶಿಸಿದೆ. ಜಪ್ತಿ ಪಡಿಸಿರುವ 180 ಎಂ ಎಲ್ ನ 10 ರಾಯಲ್ ಗೋಲ್ಡ್ ಕಫ್ ವಿಸ್ಕಿ (ಮಾದರಿಗಳನ್ನು ಹೊರತುಪಡಿಸಿ) ಇತರೇ ಮದ್ಯವನ್ನು ಆರೋಪಿಗಳು ಪಡೆಯಲು ಮುಂದೆ ಬಾರದೇ ಇರುವ ಕಾರಣ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರ ಸಮಕ್ಷಮ ಸೂಕ್ತ ಮಹಜರು ಜರುಗಿಸಿ ನಾಶಪಡಿಸಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:26-02-2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ

ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:

ಪ್ರಾ.ಸಾ-1 : ಶ್ರೀ ಕುಶಾಲಪ್ಪ ಗೌಡ, ಪೊಲೀಸ್ ಉಪ ನಿರೀಕ್ಷಕರು, ಕಡಬ ಪೊಲೀಸ್ ಠಾಣೆ, ಪುತ್ತೂರು.
ಪ್ರಾ.ಸಾ-2 : ಶ್ರೀ ಜಯರಾಮ, ಕಾನ್ಸ್‌ಟೇಬಲ್, ಕಡಬ ಪೊಲೀಸ್ ಠಾಣೆ, ಪುತ್ತೂರು.
ಪ್ರಾ.ಸಾ-3 : ಶ್ರೀ ಚಂದ್ರಹಾಸ, ಕಲ್ಲುಗುಡ್ಡೆ ಮನೆ, ನೂಜಿಬಾಳ್ತಿಲ ಗ್ರಾಮ, ಕಡಬ, ಪುತ್ತೂರು.
ಪ್ರಾ.ಸಾ-4 : ಶ್ರೀ ಪುರುಷೋತ್ತಮ, ಪಾಲ್ತೇರಿ ಮನೆ, ನೂಜಿಬಾಳ್ತಿಲ ಗ್ರಾಮ, ಕಡಬ, ಪುತ್ತೂರು.

ಅನುಬಂಧ-II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:

ನಿಶಾನೆ-1 : ಮಹಜರಿನ ಪ್ರತಿ
ನಿಶಾನೆ-2 : ಸೊತ್ತುಗಳ ವರದಿಗೆ ಹಾಕಿರುವ ಸಹಿ
ನಿಶಾನೆ-3 ಪ್ರಥಮ ವರ್ತಮಾನ ವರದಿಯ ಪ್ರತಿ.

ಅನುಬಂಧ-III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು :

ಅರ್ಜಿದಾರರ ಹೇಳಿಕೆ: ಶ್ರೀಮತಿ ಚಂದ್ರಾವತಿ (ವಾಹನದ ಮಾಲೀಕರು)

ಅನುಬಂಧ-IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು : - ಯಾವುದು ಇಲ್ಲ-

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.238

ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಉಪಧನ ಪಾವತಿ ಕಾಯ್ದೆಯಡಿ ನಿಯಂತ್ರಣಾಧಿಕಾರಿಯವರ ನ್ಯಾಯಾಲಯ, ವಿಭಾಗ-4, ಬೆಂಗಳೂರು

ಸಂಖ್ಯೆ: ಪಿಜಿಎ/ಎಸ್.ಆರ್-59/2008-09

ಅರ್ಜಿದಾರರು		**ಪ್ರತಿವಾದಿಗಳು**
ಶ್ರೀಮತಿ ಪ್ರತಿಮಾ ಕೋಂ ಲೇಟ್ ವಿ. ರುದ್ರಸ್ವಾಮಿ, ಗೌಡಗೆರೆ, ಗ್ರಾಮ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.	**ವಿರುದ್ಧ**	ಆಡಳಿತವರ್ಗ ಜಿಯೋರಾಕ್ ಫೋರ್ಜ್ ಪ್ರೈ.ಲಿ., ನಂ.143, ಬಿ-8, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಬೆಂಗಳೂರು-560 099.

ಪ್ರಕಟಣೆ

ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಪ್ರಕರಣದಲ್ಲಿನ ಪ್ರತಿವಾದಿಯವರು ಈ ನ್ಯಾಯಾಲಯದಲ್ಲಿ ದಿನಾಂಕ:22.10.2008ರಂದು ಪತ್ರವೊಂದನ್ನು ಸಲ್ಲಿಸಿ ತಮ್ಮಲ್ಲಿ ಸೇವೆ ಸಲ್ಲಿಸುತ್ತಿದ್ದ ಲೇಟ್ ವಿ. ರುದ್ರಸ್ವಾಮಿ, ಇವರು ದಿನಾಂಕ:21.04.2008ರಂದು ಮರಣ ಹೊಂದಿದ್ದು ಇವರಿಗೆ ಬರಬೇಕಾಗಿರುವ ಉಪಧನ ಮತ್ತು ಇತರೆ ಆರ್ಥಿಕ ಸೌಲಭ್ಯವಾಗಿ ರೂ.1,58,992=00 (ಒಂದು ಲಕ್ಷ ಐವತ್ತೆಂಟು ಸಾವಿರದ ಒಂಬೈನೂರ ತೊಂಭತ್ತೆರಡು ರೂ.ಗಳು ಮಾತ್ರ) ಗಳನ್ನು ಠೇವಣಿ ಮಾಡಿದ್ದು, ಮೃತರ ವಾರಸುದಾರರಿಗೆ ನೀಡುವಂತೆ ಕೋರಿರುತ್ತಾರೆ. ದಿನಾಂಕ:19.01.2009ರಂದು ಲೇಟ್ ವಿ. ರುದ್ರಸ್ವಾಮಿ ಇವರ ಪತ್ನಿ ಶ್ರೀಮತಿ ಪ್ರತಿಮಾ ರವರು ಹಾಜರಾಗಿ ತಮಗೆ ಪ್ರತಿವಾದಿ ಠೇವಣಿಗೊಳಿಸಿರುವ ಮೊತ್ತವನ್ನು ಬಿಡುಗಡೆಗೊಳಿಸುವಂತೆ ಕೋರಿದ್ದಾರೆ. ತಮ್ಮ ಕೋರಿಕೆಯಲ್ಲಿ ತಮ್ಮ ಮೃತ ಪತಿಯ ತಂದೆ, ತಾಯಿ ಹಾಗೂ ಇಬ್ಬರು ತಮ್ಮಂದಿರು ಇರುತ್ತಾರೆಂದು ತಿಳಿಸಿರುತ್ತಾರೆ. ಸದರಿಯವರಿಗೆ ಈ ನ್ಯಾಯಾಲಯದ ಮುಂದೆ ಹಾಜರಾಗಿ ತಮ್ಮ ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸುವಂತೆ ಸೂಚಿಸಲಾಗಿದೆ.

ಸದರಿ ದಾವೆಯ ವಿಚಾರಣೆ ನಡೆಯುತ್ತಿದ್ದು, ಈ ಬಗ್ಗೆ ಆದೇಶ ಹೊರಡಿಸಬೇಕಾಗಿರುವುದರಿಂದ ಮೇಲೆ ಸೂಚಿಸಿರುವ ಅರ್ಜಿಯನ್ನು ಹೊರತುಪಡಿಸಿ (ಜೀವಂತ ಸದಸ್ಯರು) ಬೇರೆ ಯಾರಾದರೂ ಸದರಿ ಕಾರ್ಮಿಕರಿಗೆ ಸಂಬಂಧಿಸಿದ ಶಾಸನಬದ್ಧ ವಾರಸುದಾರರು ಎಂದು ಪರಿಗಣಿಸಲು ಪ್ರಾರ್ಥಿಸುವುದಾದಲ್ಲಿ ಅಂತಹವರು ಈ ಪ್ರಕಟಣೆಯನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಅಂತಹ ಆಕ್ಷೇಪಣೆಗಳನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದೆಂದು ಈ ಮೂಲಕ ಸೂಚಿಸಲಾಗಿದೆ.

ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ದಿನಾಂಕ:30.01.2009

ಎ.ಹೆಚ್. ಉಮೇಶ
ಸಹಾಯಕ ಕಾರ್ಮಿಕ ಆಯುಕ್ತರು ಮತ್ತು ನಿಯಂತ್ರಣಾಧಿಕಾರಿಗಳು,
ಉಪಧನ ಪಾವತಿ ಕಾಯ್ದೆ, ವಿಭಾಗ-4, ಬೆಂಗಳೂರು.

ಪಿ.ಆರ್.121

ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಉಪಧನ ಪಾವತಿ ಕಾಯ್ದೆಯಡಿ ನಿಯಂತ್ರಣಾಧಿಕಾರಿಯವರ ನ್ಯಾಯಾಲಯ, ವಿಭಾಗ–4, ಬೆಂಗಳೂರು

ಸಂಖ್ಯೆ: ಪಿಜಿಎ/ಎಸ್.ಆರ್–24/1996–97

ಅರ್ಜಿದಾರರು

1) ಶ್ರೀಮತಿ ಸಾಕಮ್ಮ ಕೋಂ ಲೇಟ್ ಪುಟ್ಟೇಗೌಡ.
2) ಶ್ರೀಮತಿ ಪಿ. ಸುಜಾತ ಕೆಂಪಾ ತಂದೆ: ಲೇಟ್ ಪುಟ್ಟೇಗೌಡ.
3) ಶ್ರೀಮತಿ ಪದ್ಮಾ ತಂದೆ: ಲೇಟ್ ಪುಟ್ಟೇಗೌಡ.
4) ಶ್ರೀ ಸುರೇಶ ಬಿನ್ ಲೇಟ್ ಪುಟ್ಟೇಗೌಡ.
5) ಶ್ರೀಮತಿ ಜಯಚಿತ್ರ ತಂದೆ: ಲೇಟ್ ಪುಟ್ಟೇಗೌಡ.
6) ಶ್ರೀಮತಿ ಪಿ. ಮಂಜುಳ ತಂದೆ: ಲೇಟ್ ಪುಟ್ಟೇಗೌಡ.
ನಂ.148, 2ನೇ ಮುಖ್ಯ ರಸ್ತೆ, 3ನೇ ಬ್ಲಾಕ್, ಮಾರುತಿನಗರ, ಬಾಪೂಜಿನಗರ, ಮೈಸೂರು ರಸ್ತೆ, ಬೆಂಗಳೂರು–560 026.

ವಿರುದ್ಧ

ಪ್ರತಿವಾದಿಗಳು

ಆಡಳಿತವರ್ಗ
ಕೆ.ಎಸ್.ಆರ್.ಟಿ.ಸಿ. ಸೆಂಟ್ರಲ್ ಆಫೀಸ್, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560 027.

ಪ್ರಕಟಣೆ

ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರು ಈ ನ್ಯಾಯಾಲಯದಲ್ಲಿ ದಿನಾಂಕ:24.04.2007 ರಂದು ಉಪಧನ ಪಾವತಿ ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಅರ್ಜಿಯಲ್ಲಿ ಅವರ ತಾಯಿ ಶ್ರೀಮತಿ ವಿಮಲಮ್ಮ, ಇವರು ಪ್ರತಿವಾದಿ ಸಂಸ್ಥೆಯಲ್ಲಿ ತಮ್ಮ 35 ವರ್ಷಗಳ ಸೇವೆ ಸಲ್ಲಿಸಿದ್ದು, ನಂತರದಲ್ಲಿ ದಿನಾಂಕ:10.10.2006ರಂದು ಮರಣ ಹೊಂದಿರುತ್ತಾರೆಂದು ತಿಳಿಸಿ, ಪ್ರತಿವಾದಿಗಳಿಂದ ಕಾನೂನು ರೀತ್ಯ ಬರಬೇಕಾದ ಉಪಧನವನ್ನು ಕೊಡಿಸಿಕೊಡಬೇಕೆಂದು ಕೋರಿರುತ್ತಾರೆ.

ಸದರಿ ದಾವೆಯ ವಿಚಾರಣೆ ನಡೆಯುತ್ತಿದ್ದು, ಈ ಬಗ್ಗೆ ಆದೇಶ ಹೊರಡಿಸಬೇಕಾಗಿರುವುದರಿಂದ ಮೇಲೆ ಸೂಚಿಸಿರುವ ಅರ್ಜಿಯನ್ನು ಹೊರತುಪಡಿಸಿ (ಜೀವಂತ ಸದಸ್ಯರು) ಬೇರೆ ಯಾರಾದರೂ ಸದರಿ ಕಾರ್ಮಿಕರಿಗೆ ಸಂಬಂಧಿಸಿದ ಶಾಸನಬದ್ಧ ವಾರಸುದಾರರು ಎಂದು ಪರಿಗಣಿಸಲು ಪ್ರಾರ್ಥಿಸುವುದಾದಲ್ಲಿ ಅಂತಹವರು ಈ ಪ್ರಕಟಣೆಯನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಅಂತಹ ಆಕ್ಷೇಪಣೆಗಳನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದೆಂದು ಈ ಮೂಲಕ ಸೂಚಿಸಲಾಗಿದೆ.

ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ದಿನಾಂಕ:11.03.2009

ಎ.ಹೆಚ್. ಉಮೇಶ
ಸಹಾಯಕ ಕಾರ್ಮಿಕ ಆಯುಕ್ತರು ಮತ್ತು ನಿಯಂತ್ರಣಾಧಿಕಾರಿಗಳು,
ಉಪಧನ ಪಾವತಿ ಕಾಯ್ದೆ, ವಿಭಾಗ–4, ಬೆಂಗಳೂರು.

ಪಿ.ಆರ್.245

ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಉಪಧನ ಪಾವತಿ ಕಾಯ್ದೆಯಡಿ ನಿಯಂತ್ರಣಾಧಿಕಾರಿಯವರ ನ್ಯಾಯಾಲಯ, ವಿಭಾಗ–4, ಬೆಂಗಳೂರು

ಸಂಖ್ಯೆ: ಪಿಜಿಎ/ಎಸ್.ಆರ್–30/1996–97

ಅರ್ಜಿದಾರರು

1) ಶ್ರೀಮತಿ ಕೆ.ಎಸ್. ಪದ್ಮ
2) ಶ್ರೀಮತಿ ಕೆ.ಎಸ್. ಉಮ
3) ಶ್ರೀ ಕೆ.ಎಸ್. ಗಿರೀಶ್
ನಂ.217, ಬಾಲಾಜಿ ರಸ್ತೆ, ತ್ಯಾಗರಾಜನಗರ, ಬೆಂಗಳೂರು–25.

ವಿರುದ್ಧ

ಪ್ರತಿವಾದಿಗಳು

1) ಚೀಫ್ ಪರ್ಸನಲ್ ಮ್ಯಾನೇಜರ್
2) ಚೀಫ್ ಅಕೌಂಟ್ಸ್ ಆಫೀಸರ್–ಕಂ–ಫೈನಾನ್‌ಷಿಯಲ್ ಅಡ್ವೈಸರ್.
3) ವೈಸ್ ಛೇರ್‌ಮನ್ ಅಂಡ್ ಮ್ಯಾನೇಜಿಂಗ್ ಡೈರೆಕ್ಟರ್, ಕೆ.ಎಸ್.ಆರ್.ಟಿ.ಸಿ., ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು.

ಪ್ರಕಟಣೆ

ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರು ಈ ನ್ಯಾಯಾಲಯದಲ್ಲಿ ದಿನಾಂಕ:03.10.2007 ರಂದು ಉಪಧನ ಪಾವತಿ ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಅರ್ಜಿಯಲ್ಲಿ

ವರ ತಾಯಿ ಶ್ರೀಮತಿ ವಿಮಲಮ್ಮ, ಇವರು ಪ್ರತಿವಾದಿ ಸಂಸ್ಥೆಯಲ್ಲಿ ತಮ್ಮ 36 ವರ್ಷಗಳ ಸೇವೆ ಸಲ್ಲಿಸಿದ್ದು, ನಂತರದಲ್ಲಿ ನಾಂಕ:22.11.2005ರಂದು ಮರಣ ಹೊಂದಿರುತ್ತಾರೆಂದು ತಿಳಿಸಿ, ಪ್ರತಿವಾದಿಗಳಿಂದ ಕಾನೂನು ರೀತ್ಯ ಬರಬೇಕಾದ ಪಧನವನ್ನು ಕೊಡಿಸಿಕೊಡಬೇಕೆಂದು ಕೋರಿರುತ್ತಾರೆ.

ಸದರಿ ದಾವೆಯು ವಿಚಾರಣೆ ನಡೆಯುತ್ತಿದ್ದು, ಈ ಬಗ್ಗೆ ಆದೇಶ ಹೊರಡಿಸಬೇಕಾಗಿರುವುದರಿಂದ ಮೇಲೆ ಸೂಚಿಸಿರುವ ರ್ಜಿಯನ್ನು ಹೊರತುಪಡಿಸಿ (ಜೀವಂತ ಸದಸ್ಯರು) ಬೇರೆ ಯಾರಾದರೂ ಸದರಿ ಕಾರ್ಮಿಕರಿಗೆ ಸಂಬಂಧಿಸಿದ ಶಾಸನಬದ್ಧ ರಸುದಾರರು ಎಂದು ಪರಿಗಣಿಸಲು ಪ್ರಾರ್ಥಿಸುವುದಾದಲ್ಲಿ ಅಂತಹವರು ಈ ಪ್ರಕಟಣೆಯನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಗಳೊಳಗಾಗಿ ಅಂತಹ ಆಕ್ಷೇಪಣೆಗಳನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದೆಂದು ಈ ಮೂಲಕ ಸೂಚಿಸಲಾಗಿದೆ.

ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ದಿನಾಂಕ:11.03.2009

ಎ.ಹೆಚ್. ಉಮೇಶ

ಸಹಾಯಕ ಕಾರ್ಮಿಕ ಆಯುಕ್ತರು ಮತ್ತು ನಿಯಂತ್ರಣಾಧಿಕಾರಿಗಳು,
ಉಪಧನ ಪಾವತಿ ಕಾಯ್ದೆ, ವಿಭಾಗ-4, ಬೆಂಗಳೂರು.

.ಆರ್.246

ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಉಪಧನ ಪಾವತಿ ಕಾಯ್ದೆಯಡಿ ನಿಯಂತ್ರಣಾಧಿಕಾರಿಯವರ ನ್ಯಾಯಾಲಯ, ವಿಭಾಗ-4, ಬೆಂಗಳೂರು

ಸಂಖ್ಯೆ: ಪಿಜಿಎ/ಎಸ್.ಆರ್-06/1997-98

ಅರ್ಜಿದಾರರು

ಶ್ರೀಮತಿ ನೀಲಮ್ಮ ಕೋಂ ಲೇಟ್ ಎಂ.ಜಿ. ಚಂದ್ರಶೇಖರಯ್ಯ, ನಂ.1191, 3ನೇ ಮುಖ್ಯರಸ್ತೆ, ಮಾನಸನಗರ, ನಾಗರಭಾವಿ, 1ನೇ ಹಂತ, ಕರ್ನಾಟಕ ಆಗ್ರೋ ಕೆಮಿಕಲ್ಸ್ ಎದುರು, ಬೆಂಗಳೂರು-560 072.

ವಿರುದ್ಧ

ಪ್ರತಿವಾದಿಗಳು

ಮುಖ್ಯ ಸಂಚಾರಿ ವ್ಯವಸ್ಥಾಪಕರು, ಬಿ.ಎಂ.ಟಿ.ಸಿ. ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-560 027.

ಪ್ರಕಟಣೆ

ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ರ್ಜಿದಾರರು ಈ ನ್ಯಾಯಾಲಯದಲ್ಲಿ ದಿನಾಂಕ:02.07.2008ರಂದು ಉಪಧನ ಪಾವತಿ ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಲ್ಲಿಸಿ, ಅವರ ಪತಿ ಲೇಟ್ ಎಂ.ಜಿ. ಚಂದ್ರಶೇಖರಯ್ಯ ಇವರು ಪ್ರತಿವಾದಿ ಸಂಸ್ಥೆಯಲ್ಲಿ ತಮ್ಮ 36 ವರ್ಷ, 10 ತಿಂಗಳ ವೆಯ ನಂತರ ದಿನಾಂಕ:28.02.1997 ರಂದು ನಿವೃತ್ತಿ ಹೊಂದಿದ್ದು, ತದನಂತರ ದಿನಾಂಕ:16.03.2000 ರಂದು ಮರಣ ಹೊಂದಿದ್ದಾರೆಂದು ತಿಳಿಸಿ, ಪ್ರತಿವಾದಿಗಳಿಂದ ಕಾನೂನು ರೀತ್ಯ ಬರಬೇಕಾದ ಉಪಧನವನ್ನು ಕೊಡಿಸಿಕೊಡಬೇಕೆಂದು ಕೋರಿರುತ್ತಾರೆ.

ಸದರಿ ದಾವೆಯು ವಿಚಾರಣೆ ನಡೆಯುತ್ತಿದ್ದು, ಈ ಬಗ್ಗೆ ಆದೇಶ ಹೊರಡಿಸಬೇಕಾಗಿರುವುದರಿಂದ ಮೇಲೆ ಸೂಚಿಸಿರುವ ರ್ಜಿಯನ್ನು ಹೊರತುಪಡಿಸಿ (ಜೀವಂತ ಸದಸ್ಯರು) ಬೇರೆ ಯಾರಾದರೂ ಸದರಿ ಕಾರ್ಮಿಕರಿಗೆ ಸಂಬಂಧಿಸಿದ ಶಾಸನಬದ್ಧ ರಸುದಾರರು ಎಂದು ಪರಿಗಣಿಸಲು ಪ್ರಾರ್ಥಿಸುವುದಾದಲ್ಲಿ ಅಂತಹವರು ಈ ಪ್ರಕಟಣೆಯನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಗಳೊಳಗಾಗಿ ಅಂತಹ ಆಕ್ಷೇಪಣೆಗಳನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದೆಂದು ಈ ಮೂಲಕ ಸೂಚಿಸಲಾಗಿದೆ.

ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ದಿನಾಂಕ:12.05.2009

ಎ.ಹೆಚ್. ಉಮೇಶ

ಸಹಾಯಕ ಕಾರ್ಮಿಕ ಆಯುಕ್ತರು ಮತ್ತು ನಿಯಂತ್ರಣಾಧಿಕಾರಿಗಳು,
ಉಪಧನ ಪಾವತಿ ಕಾಯ್ದೆ, ವಿಭಾಗ-4, ಬೆಂಗಳೂರು.

.ಆರ್.412

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ:ಎಸ್‌ಡಿಕೆ/297/ಡಿಟಿಸಿಆರ್/2005-06, ದಿನಾಂಕ:24ನೇ ಫೆಬ್ರವರಿ, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ. ಮಂಗಳೂರು.

ಫಿರ್ಯಾದುದಾರರು:

ಬಕಾರಿ ಉಪ ನಿರೀಕ್ಷಕರು(1)
ಾರಿ ಮತ್ತು ತನಿಖೆ, ಪುತ್ತೂರು.

ಆರೋಪಿ:

ಶ್ರೀ ವಸಂತ, ಬಿನ್:ಬಾಬುಗೌಡ, ಪುಳಿತಡಿ ಮನೆ,
ಚಾರ್ವಾಕಅಂಚೆ, ಪುತ್ತೂರು ತಾಲೂಕು.

ಅರ್ಜಿದಾರರು:

ಶ್ರೀ ರಮೇಶ್ ಗೌಡ, ಬಿನ್:ಕುಕ್ಕಪ್ಪ ಗೌಡ, ಶಾಂತಿತಡ್ಕ ಗ್ರಾಮ, ನೆಲ್ಯಾಡಿ ಗ್ರಾಮ, ಉಪ್ಪಿನಂಗಡಿ, ಪುತ್ತೂರು ತಾಲೂಕು (ವಾಹನದ ಮಾಲೀಕರು)

ಪ್ರಕರಣದ ಮುಖ್ಯಾಂಶಗಳು:

ಅಬಕಾರಿ ಉಪನಿರೀಕ್ಷಕರು(1), ಜಾರಿ ಮತ್ತು ತನಿಖೆ, ಪುತ್ತೂರು ಇವರು ಸಿಬ್ಬಂದಿಯವರೊಂದಿಗೆ ದಿ:11-12-20 ರಂದು ರಾತ್ರಿ ಸುಮಾರು 9-00 ಗಂಟೆ ಸಮಯಕ್ಕೆ ಪುತ್ತೂರು ತಾಲೂಕು ಸವಣೂರು ಗ್ರಾಮದ ಸವಣೂರು ಪುಂಚಪ್ಪಾ ರಸ್ತೆಯ ಬಳಿ ಅಕ್ರಮವಾಗಿ ಸಾರಾಯಿ ಸ್ಯಾಚೇಟುಗಳನ್ನು ಸರಬರಾಜು ಮಾಡುತ್ತಿದ್ದಾರೆ ಎಂಬ ದೊರೆತ ಖಚಿತ ವರ್ತಮಾನ ಮೇರೆಗೆ ಸದ್ರಿ ಸ್ಥಳದಲ್ಲಿ ರಸ್ತೆಗಾವಲು ನಡೆಸುತ್ತಿರುವ ಸಂದರ್ಭದಲ್ಲಿ ಸವಣೂರು ಗ್ರಾಮದ ಸವಣೂರು ಪುಂಚಪ್ಪಾಡಿ ರಸ್ತೆ ಮಧ್ಯಭಾಗದ ರೈಲ್ವೆ ಗೇಟಿನ ಹತ್ತಿರ ಒಂದು ಬಿಳಿ ಬಣ್ಣದ ಅಂಬಾಸಿಡರ್ ಕಾರು ನೊಂದಣಿ ಸಂ: KA-21-2129 ಕಾರನ ಪರಿಶೀಲಿಸುವ ಸಲುವಾಗಿ ನಿಲ್ಲಿಸಿದ್ದಾಗ, ಕಾರಿನ ಚಾಲಕ ಗಡಿಬಿಡಿಯಲ್ಲಿ ಏನೂ ಉತ್ತರವನ್ನು ಕೊಡದೇ, ಕಾರನ ಸಿಬ್ಬಂಧಿಯವರು ಸುತ್ತುವರಿದು ನೋಡಲಾಗಿ ಕಾರಿನ ಒಳಗಡೆ ಸಾರಾಯಿ ವಾಸನೆ ಬರುವುದು ಕಂಡುಬಂತು. ಕಾರನ ಪರಿಶೀಲಿಸುವ ಸಲುವಾಗಿ ಮಾನ್ಯ ನ್ಯಾಯಾಲಯದಿಂದ ಶೋಧನೆ ವಾರೆಂಟ್ ತರಲು ಕಾಲಾವಕಾಶವಿಲ್ಲದ ಕಾರ ಸಿಬ್ಬಂಧಿಯವರ ಸಮಕ್ಷಮ ಒಂದು ಶೋದನಾ ಮೆಮೋವನ್ನು ತಯಾರಿಸಿ ವಾಹನದ ಶೋಧನೆ ಕ್ರಮವನ ಜರುಗಿಸಲಾಯಿತು. ಕಾರಿನ ಹಿಂದಿನ ಸೀಟಿನ ಅಡಿಯಲ್ಲಿ ಐದು ಪಾಲಿಥೀನ್ ಗೋಣಿಚೀಲಗಳು ಹಾಗೂ ಡಿಕ್ಕಿಯಲ್ಲಿ ಐದ ಪಾಲಿಥೀನ್ ಗೋಣಿಚೀಲಗಳು ಪತ್ತೆಯಾಗಿದ್ದು, ಅವುಗಳನ್ನು ಪರಿಶೀಲಿಸಲಾಗಿ ಒಂದೊಂದು ಪಾಲಿಥೀನ್ ಚೀಲದಲ್ಲಿ ತಲ 500ರಂತೆ ಒಟ್ಟು 10 ಪಾಲಿಥೀನ್ ಗೋಣಿಚೀಲದಲ್ಲಿ ಒಟ್ಟು 100 ಎಂಎಲ್‌ನ 5000 ಸಾರಾಯಿ ಸ್ಯಾಚೇಟುಗಳು ಇರುವುದ ಕಂಡು ಬಂತು. ಸದ್ರಿ ಸಾರಾಯಿ ಸ್ಯಾಚೇಟುಗಳನ್ನು ಸಾಗಾಟ ಮಾಡಲು ರಹದಾರಿ ಅಥವಾ ಪರವಾನಿಗೆ ಇದೆಯೇ ಎಂದ ಕಾರಿನ ಚಾಲಕನಲ್ಲಿ ವಿಚಾರಿಸಿದಾಗ ತಾನು ಅಕ್ರಮವಾಗಿ ಬೆಳ್ತಂಗಡಿಯಿಂದ ಕೇರಳ ರಾಜ್ಯಕ್ಕೆ ಮಾರಾಟ ಮಾಡಲೆಂದ ಸಾಗಾಟ ಮಾಡಿರುವುದಾಗಿ ತಿಳಿಸಿರುತ್ತಾನೆ. ಕಾರಿನ ಚಾಲಕನ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದಾಗ ಹೆಸರು ವಸಂ ಬಿನ್ ಬಾಬುಗೌಡ, ಪುಳಿತಡಿ ಮನೆ, ಚಾರ್ವಾಕ ಅಂಚೆ, ಪುತ್ತೂರು ತಾಲೂಕು ಎಂದು ತಿಳಿಸಿರುತ್ತಾನೆ. ನಂತರ ಪಂಚ ಸಮಕ್ಷಮ ಅಂಬಾಸಿಡರ್ ಕಾರಿನಲ್ಲಿದ್ದ ಸಾರಾಯಿ ಸ್ಯಾಚೇಟುಗಳ ಪಾಲಿಥೀನ್ ಗೋಣಿ ಚೀಲಗಳಿಂದ 100 ಎಂಎಲ್ ನ 3 ಸಾರಾಯಿ ಸ್ಯಾಚೇಟುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದು,ಅದಕ್ಕೆ ಬಟ್ಟೆದಾರ ಕಟ್ಟಿ ಇಲಾಖಾ ಸೀಲಿನಿಂದ ಸೀಲು ಮಾ ಮಾದರಿಯಾಗಿ ತೆಗೆಯಲಾಯಿತು. ಮತ್ತು ಆರೋಪಿಯ ಹೆಸರು ಮತ್ತು ವಿಳಾಸದ ಗುರುತಿನ ಚೀಟಿಯನ ಗೋಣಿಚೀಲಗಳಿಗೂ ಹಾಗೂ ಮಾದರಿಗೂ ಅಂಟಿಸಲಾಯಿತು. ಮಾದರಿಯ ಮೊಹರನ್ನು ಸ್ಥಳದಲ್ಲಿಯೇ ತಯಾರಿಸಲಾಯಿತ ಇದು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11,14ರಂತೆ ಅಪರಾಧವಾಗಿದ್ದು ಹಾಗೂ 32,34 ಮತ್ತು 38ಎ ರ ಪ್ರಕಾ ಶಿಕ್ಷಾರ್ಹವಾಗಿರುವುದರಿಂದ, ಆರೋಪಿಯಾದ ವಸಂತ್ ಇವರ ವಿರುದ್ಧ ತಕ್ಷೀರು ಸಂಖ್ಯೆ:11/2005-06 ದಿನಾಂಕ:11-12-200 ರಂತೆ ಪ್ರಕರಣವನ್ನು ನೋಂದಾಯಿಸಿ, ಸ್ಥಳದಲ್ಲಿಯೇ ಮಹಜರನ್ನು ತಯಾರಿಸಿ, ವರದಿಯನ್ನು ಮಾನ್ಯ ನ್ಯಾಯಾಲಯ ಒಪ್ಪಿಸಿರುತ್ತಾರೆ.

ಪ್ರಕರಣದ ತನಿಖೆಯನ್ನು ಕೈಗೊಂಡ ಅಬಕಾರಿ ಉಪ ನಿರೀಕ್ಷಕರು(1). ಜಾರಿ ಮತ್ತು ತನಿಖೆ, ಪುತ್ತೂರು ಇವ ತನಿಖಾ ವರದಿ ಸಂಖ್ಯೆ:20/2005-06 ದಿ:28-12-2005ರ ವರದಿಯೊಂದಿಗೆ ವಶಪಡಿಸಿಕೊಂಡ ಸಾರಾಯಿಯನ ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ ಕರ್ನಾಟಕ ಸರ್ಕಾರದ ಸಹಾಯಕ ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರಿಂ ರಾಸಾಯನಿಕ ವಿಶ್ಲೇಷಣಾ ವರದಿ ಸಂ:ಇ-639-30 ದಿ:16-12-2005ನ್ನು ಪಡೆದು ಸಲ್ಲಿಸಿದ್ದು, ಸದ್ರಿ ವರದಿಯ ಪ್ರಕಾ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾಗಿರುವ ಸಾರಾಯಿಯಲ್ಲಿ ಮದ್ಯಸಾರ ಪ್ರಮಾಣ 32 ಡಿಗ್ರಿ ಯು.ಪಿ ಇರುವುದಾ ದೃಢೀಕರಣ ಪತ್ರ ನೀಡಿರುತ್ತಾರೆ. ಹಾಗೂ ಸಹಾಯಕ ಸಾರಿಗೆ ಅಧಿಕಾರಿಗಳು, ಪುತ್ತೂರು, ದ.ಕ.ಜಿಲ್ಲೆ ಇವರಿಂದ ಪಡೆದ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ಪ್ರತಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಸದ್ರಿ ಬಿ ಎಕ್ಸ್‌ಟ್ರಾಕ್ಟ್ ಪ್ರಕಾರ ಶ್ರೀ ರಮೇಶ್ ಬಿನ್ ಕುಕ್ಕ ಗೌಡ, ಶಾಂತಿತಡ್ಕ ಮನೆ, ನೆಲ್ಯಾಡಿ ಗ್ರಾಮ, ಪುತ್ತೂರು ತಾಲೂಕು ಎಂದು ವಾಹನದ ನೋಂದಾವಣೆ ಮಾಲೀಕರಾಗಿರುವುದಾ ದೃಡೀಕರಿಸಿರುತ್ತಾರೆ.

ವಾಹನ ಮಾಲೀಕರಿಗೆ ಹಾಗೂ ಆರೋಪಿಗೆ ಕರ್ನಾಟಕ ಅಬಕಾರಿ ಕಾಯಿದೆ 1965ರ ಸೆಕ್ಷನ್ 43ಬಿ ಪ್ರಕಾರ ಕಾರ ಕೇಳಿ ನೋಟಿಸನ್ನು ಈ ಪ್ರಾದಿಕಾರದಿಂದ ದಿ:3-1-2006 ರಂದು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ಸ ನೋಟಿಸುಗಳನ್ನು ವಾಹನದ ಮಾಲೀಕರು ಹಾಗೂ ಆರೋಪಿಯು ಸ್ವೀಕರಿಸಿ, ಅಂಚೆ ಇಲಾಖೆಯ ಸ್ವೀಕೃತಿ ಈ ಪ್ರಾದಿಕಾರದ ಸ್ವೀಕೃತವಾಗಿರುತ್ತದೆ.

ಶ್ರೀ ರಮೇಶ್ ಬಿನ್ ಕುಕ್ಕಪ್ಪ ಗೌಡ, ಶಾಂತಿತಡ್ಕ ಮನೆ, ನೆಲ್ಯಾಡಿ ಗ್ರಾಮ, ಪುತ್ತೂರು ತಾಲೂಕು ಇವರು ಪ್ರಾದಿಕಾರ ನೀಡದ ಕಾರಣ ಕೇಳಿ ನೋಟಿಸಿಗೆ ವಕೀಲರ ಮುಖಾಂತರ ದಿ:23-1-2006ರಂದು ಉತ್ತರವನ್ನು ನೀಡಿರುತ್ತಾರೆ.

ಶ್ರೀ ರಮೇಶ್ ಇವರು ತಕ್ಷೀರಿನಲ್ಲಿ ವಶಪಡಿಸಿಕೊಂಡ ಅಂಬಾಸಿಡರ್ ಕಾರಿನ ವಾಹನ ಮಾಲೀಕರೆಂದ ವಶಪಡಿಸಿಕೊಂಡ ವಾಹನವನ್ನು ಮದ್ಯಂತರ ಬಿಡುಗಡೆಗೊಳಿಸಬೇಕೆಂದು ವಕೀಲರ ಮುಖಾಂತರ ದಿ:15-2-2006ರಂದು ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದ್ರಿ ಅರ್ಜಿಯ ಬಗ್ಗೆ ಸಹಾಯಕ ಅಭಿಯೋಗ ನಿರ್ದೇಶಕರು,ಮಂಗಳೂ ಇವರಿಗೆ ಪತ್ರ ಬರೆಯಲಾಗಿದ್ದು, ಸದ್ರಿ ಪತ್ರದಲ್ಲಿ ಅರ್ಜಿದಾರರು ಸಲ್ಲಿಸಿರುವ ಅರ್ಜಿಯ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸ

ಸೂಚಿಸಲಾಗಿದ್ದು, ಸಹಾಯಕ ಅಭಿಯೋಗ ನಿರ್ದೇಶಕರು ಇವರು ದಿ:17-3-2006 ರ ಪತ್ರದಲ್ಲಿ ಮಧ್ಯಂತರ ಬಿಡುಗಡೆಯನ್ನು ವಿರೋಧಿಸಿ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು,ಇಐಬಿ,ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ ಇವರು ಪ್ರಾದೇಶಿಕ ಸಾರಿಗೆ ಅಧಿಕಾರಿ, ಪುತ್ತೂರು ಇವರಿಗೆ ದಿ:31-3-2006ರಂದು ಪತ್ರ ಬರೆಯಲಾಗಿದ್ದು, ಸದ್ರಿ ಪತ್ರದಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಅಂಬಾಸಿಡರ್ ಕಾರು ಸಂ:KA-21-2129ರ ಅಂದಾಜು ಮೌಲ್ಯ ಮಾಪನ ದೃಡೀಕರಣ ಪತ್ರವನ್ನು ಈ ಪ್ರಾಧಿಕಾರಕ್ಕೆ ನೀಡಬೇಕೆಂದು, ಸದ್ರಿ ಪತ್ರಕ್ಕೆ ಅನುಗುಣವಾಗಿ ಮೋಟಾರು ವಾಹನ ನಿರೀಕ್ಷಕರು, ಸಹಾಯಕ ಸಾರಿಗೆ ಅಧಿಕಾರಿಗಳು,ಪುತ್ತೂರು ಇವರು ವಾಹನದ ಈಗಿನ ಅಂದಾಜು ಮೌಲ್ಯ ರೂ.23,000/-ಗಳಾಗಬಹುದೆಂದು ದೃಡೀಕರಣ ಪತ್ರ ನೀಡಿರುತ್ತಾರೆ.

ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇಐಬಿ,ದ.ಕ.ಜಿಲ್ಲೆ ಮಂಗಳೂರು ಇವರ ಈ ಪ್ರಾಧಿಕಾರದ ಆದೇಶ ಸಂ: ಇಐಬಿ: ಡಿಟಿಸಿಆರ್: 297:2005-06 ದಿ:21-4-2006ರಲ್ಲಿ ವಾಹನ ಮಾಲೀಕರು ವಾಹನದ ಮೌಲ್ಯಕ್ಕೆ ಸಮಾನವಾದ ಮೊತ್ತಕ್ಕೆ ರೂ.23,000/- ಬ್ಯಾಂಕ್ ಭದ್ರತೆಯನ್ನು ಪ್ರಾಧಿಕಾರಕ್ಕೆ ಒದಗಿಸಲು ಹಾಗೂ ಇನ್ನಿತರ ಷರತ್ತುಗಳ ಅನ್ವಯ ವಾಹನವನ್ನು ಮಧ್ಯಂತರ ಬಿಡುಗಡೆಗೊಳಿಸಲು ಆದೇಶಿಸಿರುತ್ತಾರೆ. ಸದ್ರಿ ಆದೇಶದ ಅನುಸಾರ ಅರ್ಜಿದಾರರು ಈ ಪ್ರಾಧಿಕಾರಕ್ಕೆ ವಾಹನದ ಮೌಲ್ಯಕ್ಕೆ ಸಮಾನವಾದ ಮೊತ್ತ ರೂ.23,000/-ಕ್ಕೆ ಬ್ಯಾಂಕ್ ಗ್ಯಾರೆಂಟಿಯನ್ನು ಸಿಂಡಿಕೇಟ್ ಬ್ಯಾಂಕ್ ಉಪ್ಪಿನಂಗಡಿ ಶಾಖೆ, ಪುತ್ತೂರು ತಾಲೂಕು ಇಲ್ಲಿಂದ ಪಡೆದು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದರಿಂದ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಅಂಬಾಸಿಡರ್ ಕಾರನ್ನು ವಾಹನದ ಮಾಲೀಕರಾದ ಶ್ರೀ ರಮೇಶ್ ಇವರಿಗೆ ಮಧ್ಯಂತರ ಸುಪರ್ಧಿಗೆ ಷರತ್ತುಗಳ ಅನ್ವಯ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಿರುತ್ತಾರೆ.

ಅಬಕಾರಿ ಉಪ ನಿರೀಕ್ಷಕರು(1)ಜಾರಿ ಮತ್ತು ತನಿಖೆ, ಪುತ್ತೂರು ಇವರ ತನಿಖಾ ವರದಿ ಸಂ: 20/2005-06 ದಿ:14-3-2006ರ ವರದಿಯಲ್ಲಿ ಸದ್ರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೇಟುಗಳ ಮಾಲೀಕತ್ವದ ಬಗ್ಗೆ ಹಕ್ಕು ಸಾಧಿಸಲು ಯಾರೂ ಮುಂದೆ ಬಾರದ ಕಾರಣ ಸಾರಾಯಿ ಸ್ಯಾಚೇಟುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಆದೇಶ ನೀಡಬೇಕೆಂದು ಶಿಫಾರಸ್ಸು ಮಾಡಿರುವ ಮೇರೆಗೆ ಅಂದಿನ ಅಧಿಕೃತ ಅದಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇಐಬಿ, ದ.ಕ. ಜಿಲ್ಲೆ ಮಂಗಳೂರು ಇವರ ಆದೇಶ ಸಂ: ಇಐಬಿ/ಡಿಟಿಸಿಆರ್/297/2005-06 ದಿ:28-7-2006 ರ ಆದೇಶದಲ್ಲಿ ಸದ್ರಿ ತಕ್ಷೀರಿನಲ್ಲಿ ವಶಪಡಿಸಿಕೊಂಡ 100 ಎಂಎಲ್‌ನ 5000 ಸಾರಾಯಿ ಸ್ಯಾಚೇಟುಗಳನ್ನು (ಮಾದರಿಗಳನ್ನು ಹೊರತುಪಡಿಸಿ) ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಎ ರಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಅಬಕಾರಿ ಉಪ ಅಧೀಕ್ಷಕರು, ಪುತ್ತೂರು ಉಪ ವಿಭಾಗ, ಪುತ್ತೂರು ಇವರ ಸಮಕ್ಷಮ ನಾಶಪಡಿಸಲು ಆದೇಶಿಸಿದೆ.

ನಂತರ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ ಸರ್ಕಾರದ ಅಭಿಯೋಜನ ಪರ ಎರಡು ಸಾಕ್ಷಿಗಳ ಹೇಳಿಕೆಯನ್ನು ಪಡೆಯಲಾಗಿರುತ್ತದೆ. ಈ ಪ್ರಕರಣದಲ್ಲಿ ಸರ್ಕಾರದ ಪರ ಹಾಗೂ ವಾಹನ ಮಾಲೀಕರ ಪರ ಸಲ್ಲಿಸಿರುವ ಸಾಕ್ಷಾಧಾರಗಳ ಮೇಲೆ ಈ ಕೆಳಗಿನ ವಿವಾದಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾಂಶಗಳು ಈ ಕೆಳಗಿನಂತಿರುತ್ತದೆ.

1. ದಿನಾಂಕ:11-12-2005ರಂದು ಅಂಬಾಸಿಡರ್ ಕಾರು ಸಂಖ್ಯೆ:KA-21K-2129 ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೆ ಸಾರಾಯಿಯನ್ನು ಸಾಗಾಣಿಕೆ ಮಾಡಲಾಗಿದೆಯೇ?

2. ವಶಪಡಿಸಿಕೊಂಡಿರುವ ವಾಹನ ಮಾಲೀಕ ತಾನೆಂದು, ತನಗೆ ತಿಳಿಯದೇ ಅಕ್ರಮ ಸಾರಾಯಿ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನ ಮಾಲೀಕರು ಸಾಬೀತುಪಡಿಸಿದಾರೆಯೇ?

3. ಜಪ್ತು ಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸ-1:

ಶ್ರೀ ಯಾಕೂಬ್ ಖಾನ್, ಅಬಕಾರಿ ಉಪನಿರೀಕ್ಷಕರು, ಜಾರಿ ಮತ್ತು ತನಿಖೆ, ಪುತ್ತೂರು ಇವರು ದಿನಾಂಕ:8-3-2007 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ, ಇವರು ಪ್ರಕರಣದ ಪಿರ್ಯಾದುದಾರರಾಗಿದ್ದು ತಮ್ಮ ಸಾಕ್ಷಿಯನ್ನು ನೀಡಿರುತ್ತಾರೆ. ತಾನು ದಿನಾಂಕ:14-7-2005ರಿಂದ ಅಬಕಾರಿ ಉಪ ನಿರೀಕ್ಷಕರಾಗಿ ಪುತ್ತೂರು ಜಾರಿ ಮತ್ತು ತನಿಖೆ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿ:11-12-2005 ರಂದು ರಾತ್ರಿ 9-00 ಗಂಟೆ ಸಮಯಕ್ಕೆ ಪುತ್ತೂರು ತಾಲೂಕಿನ ಸವಣೂರು ಗ್ರಾಮದ ಪುಂಚಂಪಾಡಿ ರಸ್ತೆಯ ಮಧ್ಯ ಭಾಗದಲ್ಲಿರುವ ರೈಲ್ವೆಗೇಟಿನ ಹತ್ತಿರ ರಸ್ತೆಗಾವಲು ಮಾಡುತ್ತಿದ್ದೆವು. ಆ ಸಮಯ ಪುತ್ತೂರು ಕಡೆಯಿಂದ ಪುಂಚಪಾಡಿ ಕಡೆಗೆ ಒಂದು ಬಿಳಿ ಬಣ್ಣದ ಅಂಬಾಸಿಡರ್ ಕಾರು ಬರುತ್ತಿರುವುದನ್ನು ನೋಡಿದೆನು. ಸದ್ರಿ ಕಾರಿನ ನೊಂದಣಿ ಸಂ:KA-21-2129 ಆಗಿತ್ತು. ಸದ್ರಿ ಕಾರನ್ನು ತಡೆದು ನಿಲ್ಲಿಸಿದೆವು. ಸದ್ರಿ ಕಾರಿನ ಚಾಲಕನು ಅನುಮಾನಸ್ಪದವಾಗಿ ವರ್ತಿಸಿದ್ದನ್ನು ಕಂಡುಕಾರಿನ ಸುತ್ತಲೂ ನಾವು ನಿಂತು ಕೊಂಡವು. ಸದ್ರಿ ಕಾರನ್ನು ಪರಿಶೀಲಿಸುವ ಮೊದಲು ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆದುಕೊಳ್ಳಲು ಸಾಧ್ಯವಿಲ್ಲದುದರಿಂದ ಸ್ಥಳದಲ್ಲಿ ನಮ್ಮ

ಸಿಬ್ಬಂಧಿಗಳ ಸಮಕ್ಷಮ ಕಾರಣಗಳನ್ನು ನಮೂದಿಸಿ ಒಂದು ಮೆಮೋವನ್ನು ತಯಾರಿಸಿದೆನು. ಕಾರಿನ ಹಿಂದಿನ ಬಾಗಿಲನ್ನು ತೆರೆದು ನೋಡಲಾಗಿ ಹಿಂದಿನ ಸೀಟಿನ ಕಾಲಿಡುವ ಜಾಗದಲ್ಲಿ 5 ಪಾಲಿಥೀನ್ ತುಂಬಿದ ಚೀಲಗಳು ಇದ್ದವು. ಸದ್ರಿ ಚೀಲಗಳಿಂದ ಸಾರಾಯಿ ವಾಸನೆ ಬರುತ್ತಿತ್ತು. ಕಾರಿನ ಡಿಕ್ಕಿಯನ್ನು ಸಹಾ ತೆರೆದು ನೋಡಲಾಗಿ ಅದರಲ್ಲಿಯೂ 5 ಪಾಲಿಥೀನ್ ಚೀಲಗಳಿದ್ದವು. ಅವುಗಳಿಂದಲೂ ಸಾರಾಯಿ ವಾಸನೆ ಬರುತ್ತಿತ್ತು. ಸದ್ರಿ ಪಾಲಿಥೀನ್ ಚೀಲಗಳನ್ನು ತೆರೆದು ನೋಡಲಾಗಿ ಸಾರಾಯಿ ತುಂಬಿದ ಸ್ಯಾಚೇಟುಗಳು ಇದ್ದುದು ಗೊತ್ತಾಯಿತು. ಸದ್ರಿ ತೊಟ್ಟೆಗಳನ್ನು ವಾಹನದಲ್ಲಿ ಸಾಗಾಟ ಮಾಡಲು ಪರ್ಮಿಟ್ ಇದೆಯೇ ಎಂದು ಚಾಲಕನನ್ನು ಕೇಳಲಾಗಿ ತನ್ನಲ್ಲಿ ಇಲ್ಲ ಎಂದು ತಿಳಿಸಿದನು. ಪಾಲಿಥೀನ್ ಚೀಲಗಳನ್ನು ತೆರೆದು ನೋಡಲಾಗಿ ಪ್ರತಿಯೊಂದು ಚೀಲದಲ್ಲೂ ತಲಾ 100 ಮಿಲಿಯ 500 ಸ್ಯಾಚೇಟುಗಳು ಇದ್ದವು. ಒಟ್ಟು 10 ಗೋಣಿ ಚೀಲಗಳಲ್ಲಿ 100 ಎಂಎಲ್‌ನ 5000 ಸಾರಾಯಿ ಸ್ಯಾಚೇಟುಗಳು ಇದ್ದವು. ಸದ್ರಿ 10 ಚೀಲಗಳಿಂದ ಪ್ರತಿಯೊಂದು ಚೀಲಗಳಿಂದ ತಲಾ 3 ಸ್ಯಾಚೇಟುಗಳಂತೆ ಒಟ್ಟು 30 ಸ್ಯಾಚೇಟುಗಳನ್ನು ಪ್ರತ್ಯೇಕಿಸಿ ಅವುಗಳನ್ನು ಒಂದು ಪೊಟ್ಟಣದಲ್ಲಿ ಹಾಕಿ ಬಟ್ಟೆಯನ್ನು ಸುತ್ತಿ ಅವುಗಳ ಮೇಲೆ ಇಲಾಖಾ ಸೀಲನ್ನು ಹಾಕಿ ಗುರುತು ಚೀಟಿಗಳನ್ನು ಅಂಟಿಸಿ ಮಾದರಿಗಾಗಿ ತಯಾರಿಸಿದೆನು. ಸ್ಥಳದಲ್ಲಿ ಒಂದು ಮಾದರಿ ಮೊಹರನ್ನು ತಯಾರಿಸಿದೆವು. ವಾಹನದ ಚಾಲಕನು ತನ್ನ ಹೆಸರು ವಸಂತ ಪ್ರಾಯ:23ವರ್ಷ, ಬಿನ್ ಬಾಬು ಗೌಡ, ಪುಳಿತ್ತಾಡಿ ಮನೆ, ಚಾರ್ವಾಕ ಅಂಚೆ, ಪುತ್ತೂರು ತಾಲೂಕು ಎಂದು ತಿಳಿಸಿದನು. ಆರೋಪಿಯ ಹೆಸರು, ವಿಳಾಸ ಇರುವ ಚೀಟಿಯನ್ನು ಮಾದರಿ ಪೊಟ್ಟಣದ ಮೇಲೆ ಅಂಟಿಸಿದೆನು. ಇದು ಒಂದು ಅಕ್ರಮ ಸಾಗಾಣಿಕೆಯಾಗಿದ್ದು, ಅಬಕಾರಿ ಕಾನೂನಿನಡಿಯಲ್ಲಿ ಅಪರಾಧವಾಗಿದುದ್ದರಿಂದ ಸ್ಥಳದಲ್ಲಿ ಒಂದು ಮಹಜರನ್ನು ತಯಾರಿಸಿ ಆರೋಪಿಯನ್ನು, ವಾಹನವನ್ನು ಹಾಗೂ ವಾಹನದಲ್ಲಿದ್ದ ಸೊತ್ತುಗಳನ್ನು ವಶಕ್ಕೆ ತೆಗೆದುಕೊಂಡೆವು. ಸ್ಥಳದಲ್ಲಿ ತಯಾರಿಸಿದ ಮಹಜರಿನ ನಕಲು ಪ್ರತಿಯನ್ನು ಮಾನ್ಯ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಸಲ್ಲಿಸಲಾಗಿದೆ. ಅದರ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿದ್ದು ಅದನ್ನು ಈಗ ನೋಡಿದೆನು.ಅದನ್ನು ನಿಶಾನೆ ಪಿ-1 ಎಂದು, ಅದರ ಮೇಲಿರುವ ನನ್ನ ಸಹಿಯನ್ನು ನಿಶಾನೆ ಪಿ-1 ಎ ಎಂದು ಗುರುತಿಸಲಾಯಿತು. ಸ್ಥಳದಲ್ಲಿ ತಯಾರಿಸಿದ ಮಾದರಿ ಮೊಹರಿನ ಮೂಲ ಪ್ರತಿಯನ್ನು ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಅದರ ಜೆರಾಕ್ಸ್ ಪ್ರತಿಯನ್ನು ಹಾಜರು ಪಡಿಸಲಾಗಿದೆ. ಅದನ್ನು ಈಗ ನೋಡಿದೆನು. ನಿಶಾನೆಪಿ-2 ಎಂದು ಗುರುತಿಸಲಾಯಿತು. ಸ್ಥಳದಲ್ಲಿ ತಯಾರಿಸಿದ ಶೋಧನಾ ವಾರೆಂಟ್ ಪಡೆಯದಿರಲು ಕಾರಣಗಳನ್ನು ನಮೂದಿಸಿದ ಮೆಮೋ ನೋಡಿದೆನು. ಮೂಲ ಪ್ರತಿಯನ್ನು ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಪ್ರತಿಯನ್ನು ಪ್ರಕರಣದಲ್ಲಿ ಹಾಜರು ಪಡಿಸಿದ್ದು, ನಿಶಾನೆ ಪಿ-3 ಎಂದು ಗುರುತಿಸಲಾಯಿತು. ಕಛೇರಿಗೆ ಬಂದು ಪ್ರಕರಣವನ್ನು ನೊಂದಾಯಿಸಿ ಪ್ರ.ಮಾ.ವನ್ನು ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ ಹಾಗೂ ಪ್ರತಿಗಳನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಸದ್ರಿ ವರದಿಯನ್ನು ನೋಡಿದೆನು. ಅದನ್ನು ನಿಶಾನೆ ಪಿ-4 ಎಂದು ಗುರುತಿಸಲಾಯಿತು. ದಿ:28-12-2005ರಂದು ಅಧಿಕೃತ ಅಧಿಕಾರಿಯವರಿಗೆ ವರದಿಯನ್ನು ಸಲ್ಲಿಸಿರುತ್ತೇನೆ. ಸದ್ರಿ ವರದಿಯನ್ನು ನೋಡಿದೆನು. ಅದನ್ನು ನಿಶಾನೆಪಿ-5 ಎಂದು ಗುರುತಿಸಲಾಯಿತು. ಪ್ರಕರಣದ ಮಾದರಿ ಸ್ಯಾಚೇಟುಗಳನ್ನು ದಿ:13-12-2005ರಂದು ಪ್ರಕಾಶ್ ಕುಮಾರ್, ಅ.ರ ಇವರ ಮುಖಾಂತರ ರಾಸಾಯನಿಕ ತಜ್ಞರು ಮಂಗಳೂರು ಇವರಿಗೆ ಕಳುಹಿಸಿರುತ್ತೇನೆ. ದಿ:21-12-2005ರಂದು ಆರ್.ಟಿ.ಓ ಪುತ್ತೂರು ಇವರಿಗೆ ಪತ್ರ ಬರೆದು ವಶಪಡಿಸಿಕೊಂಡ ವಾಹನದ ಬಿ ವಹಿ ಕಳುಹಿಸುವಂತೆ ಕೋರಿರುತ್ತೇನೆ. ದಿ:23-12-2005ರಂದು ರಾಸಾಯನಿಕ ತಜ್ಞರ ವರದಿಯು ನಮ್ಮ ಕಛೇರಿಗೆ ತಲುಪಿರುತ್ತದೆ. ರಾಸಾಯನಿಕ ತಜ್ಞರ ವರದಿಯ ಮೂಲ ಪ್ರತಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದು ಪ್ರತಿಯನ್ನು ಪ್ರಕರಣದಲ್ಲಿ ಹಾಜರು ಪಡಿಸಲಾಗಿದೆ. ರಾಸಾಯನಿಕ ತಜ್ಞರ ವರದಿಯನ್ನು ನಿಶಾನೆ ಪಿ-7 ಎಂದು ಗುರುತಿಸಲಾಯಿತು. ಪ್ರಕರಣದಲ್ಲಿ ಅರೋಪಿತನ ವಿರುದ್ಧ ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ ಆರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನೀಡಿರುತ್ತಾರೆ.

ಅರ್ಜಿದಾರರ ಪರ ವಕೀಲರ ಪಾಟೀ ಸವಾಲಿಗೆ ಉತ್ತರಿಸುತ್ತಾ ತಾನು ಖಚಿತ ವರ್ತಮಾನದ ಮೇರೆಗೆ ಸ್ಥಳದಲ್ಲಿ ರಸ್ತೆಗಾವಲು ನಡೆಸುತ್ತಿದ್ದೆವು, ಆ ದಿನ ಸಂಜೆ 7-30 ಗಂಟೆಗೆ ತಮಗೆ ಖಚಿತ ವರ್ತಮಾನ ಬಂದಿದೆ, ಈ ವಾಹನದಲ್ಲಿ ಅಕ್ರಮ ಸಾಗಾಣಿಕೆ ನಡೆಯುತ್ತಿದೆ ಎಂದು ವರ್ತಮಾನ ಬಂದಿತು. ತಮ್ಮ ಕಛೇರಿಯ ರೈಡ್ ರಿಜಿಸ್ಟ್ರಾರ್ ನಲ್ಲಿ ವರ್ತಮಾನದ ಬಗ್ಗೆ ನಮೂದಿಸಿರುತ್ತೇನೆ, ಸದ್ರಿ ವಹಿಯನ್ನು ಪ್ರಕರಣದಲ್ಲಿ ಹಾಜರು ಪಡಿಸಿರುವುದಿಲ್ಲ, ತಕ್ಷೀರು ಸ್ಥಳಕ್ಕೆ ತಾನು 8-45 ಗಂಟೆಗೆ ತಲುಪಿರುತ್ತೇವೆ. ವರ್ತಮಾನ ಸಿಕ್ಕಿದ ಕೂಡಲೇ ತಾವು ಕಛೇರಿಯಿಂದ ಹೊರಟಿರುತ್ತೇವೆ, ತಮ್ಮ ಕಛೇರಿಯಿಂದ ತಕ್ಷೀರು ಸ್ಥಳವು 20 ಕಿ.ಮೀಟರು ದೂರದಲ್ಲಿದೆ, ಆ ದಿನ ತಾವು ಈ ವಾಹನವನ್ನು ಹೊರತುಪಡಿಸಿ ಬೇರೆ ವಾಹನವನ್ನು ತಪಾಸಣೆ ಮಾಡಿಲ್ಲ, ವಾಹನವು ನಿಂತ ಕೂಡಲೇ ಚಾಲಕನು ಅನುಮಾನಸ್ಪದವಾಗಿ ವರ್ತಿಸಿದನು, ನನ್ನೊಂದಿಗೆ 2 ಜನ ಅಬಕಾರಿ ರಕ್ಷಕರು ಇದ್ದರು,ತಮ್ಮ ಇಲಾಖಾ ಜೀಪಿನಲ್ಲಿ ನಾವು ತಕ್ಷೀರು ಸ್ಥಳಕ್ಕೆ ಹೋಗಿದ್ದೆವು,ನಿಶಾನೆ ಪಿ-1ರಲ್ಲಿ ತಮ್ಮ ಇಲಾಖಾ ವಾಹನದ ಸಂಖ್ಯೆ ಹಾಗೂ. ನನ್ನೊಂದಿಗೆ ಎಷ್ಟು ಜನ ಸಿಬ್ಬಂಧಿ ಇದ್ದರು ಎಂಬುದನ್ನು ನಮೂದಿಸಿಲ್ಲ,ತಕ್ಷೀರು ಸ್ಥಳದ ಸುತ್ತಲೂ ಯಾವುದೇ ಅಂಗಡಿ ಮತ್ತು ಮನೆ ಇರುವುದಿಲ್ಲ, ತಕ್ಷಿರು ಸ್ಥಳದ ಹತ್ತಿರ ರೈಲ್ವೇಗೇಟ್ ಇರುತ್ತದೆ,ಅಲ್ಲಿ ಕಾವಲುಗಾರ ಇದ್ದ ಬಗ್ಗೆ ತಾನು ವಿಚಾರಿಸಲಿಲ್ಲ, ವಾಹನದಲ್ಲಿದ್ದ ಪಾಲಿಥೀನ್ ಚೀಲ ಅಂದಾಜು 3 ಅಡಿ ಎತ್ತರ ಇರಬಹುದು, ಅಂಬಾಸಿಡರ್ ಕಾರಿನ ಹಿಂದಿನ ಸೀಟಿನ ಮುಂದೆ ಕಾಲು ಇಡಲು ಮಾತ್ರ ಜಾಗ ಇರುತ್ತದೆ, ನಿಶಾನೆ ಪಿ-3ರಲ್ಲಿ ಪಂಚ ಸಾಕ್ಷಿದಾರರ ಸಹಿ ಪಡೆಯಲಾಗಿಲ್ಲ, ನಿಶಾನೆ ಪಿ-3ಕ್ಕೆ ಕಾರಿನ ಚಾಲಕನ ಸಹಿ ಪಡೆದಿಲ್ಲ, ತಾವು ವಶಪಡಿಸಿಕೊಂಡ ತುಂಬಿದ ಪಾಲಿಥೀನ್ ಚೀಲಗಳಿಗೆ ಅನುಕ್ರಮ

ಸಂಖ್ಯೆ ನೀಡಿಲ್ಲ, ತಾವು ವಶಪಡಿಸಿಕೊಂಡ ಪಾಲಿಥೀನ್ ಚೀಲಗಳಿಂದ ಪ್ರತಿಯೊಂದು ಚೀಲದಿಂದ 3ರಂತೆ ಒಟ್ಟು 30 ಸ್ಯಾಚೇಟುಗಳನ್ನು ಪ್ರತ್ಯೇಕಿಸಿರುತ್ತೇನೆ. ಸದ್ರಿ ಸ್ಯಾಚೇಟುಗಳಿಗೆ ನಾವು ಅನುಕ್ರಮ ಸಂಖ್ಯೆ ನೀಡಿರುವುದಿಲ್ಲ. ತನಗೆ ಖಚಿತ ವರ್ತಮಾನ ದೊರೆತ ನಂತರ ತಕ್ಷೀರು ಸ್ಥಳಕ್ಕೆ ಹೋಗುವ ಸಮಯ ನನ್ನೊಂದಿಗೆ ಸ್ವತಂತ್ರ ಸಾಕ್ಷಿದಾರರನ್ನು ಕರೆದುಕೊಂಡು ಹೋಗಲು ತಾನು ಪ್ರಯತ್ನಿಸಿದೆ. ಆದರೆ ಯಾರೂ ಸಿಗಲಿಲ್ಲ, ನಿಶಾನೆ ಪಿ-3ರಲ್ಲಿ ನನ್ನ ಸಹಿ ಇದ್ದು ಅದರಡಿಯಲ್ಲಿ ನಮ್ಮ ಇಲಾಖಾ ಸೀಲು ಇರುತ್ತದೆ, ನಿಶಾನೆ ಪಿ-1ರಲ್ಲಿ ನನ್ನ ಸಹಿ ಇದ್ದು ಅದರಡಿಯಲ್ಲಿ ನಮ್ಮ ಕಛೇರಿಯ ಸೀಲು ಇರುವುದಿಲ್ಲ, ನಿಶಾನೆ ಪಿ-1ನ್ನು ಸ್ಥಳದಲ್ಲಿ ತಯಾರಿಸಿಲ್ಲ ಎಂದರೆ ಸರಿಯಲ್ಲ, ತಾವು ವಶಪಡಿಸಿಕೊಂಡ ವಾಹನದ ಚಾಲಕನನ್ನು ವಿಚಾರಿಸುವ ಸಮಯ ವಾಹನದ ಮಾಲೀಕರು ಯಾರು ಎಂದು ಹೇಳಲಿಲ್ಲ. ಪುತ್ತೂರು ಆರ್.ಟಿ.ಒ ಕಛೇರಿಯಿಂದ ಬಿ ವಹಿಯನ್ನು ಸ್ವೀಕರಿಸಿದ ನಂತರ ಚಾಲಕನು ಮಾಲಿಕನಿಗೂ ಈ ಅಕ್ರಮ ಸಾಗಾಣಿಕೆಯ ವಿಷಯ ಗೊತ್ತು ಎಂದು ಹೇಳಿರುವುದಿಲ್ಲ ,ತಮ್ಮ ಇಲಾಖೆಯಲ್ಲಿ ಅಧಿಕಾರಿಗಳು ಧಾಳಿ ಮಾಡಬೇಕು ಮತ್ತು ಪ್ರಕರಣಗಳನ್ನು ದಾಖಲು ಮಾಡಬೇಕು ಎಂದು ನಿರ್ದೇಶನ ಇರುತ್ತದೆ. ಆದರೆ ತಿಂಗಳಿಗೆ ನಿರ್ದಿಷ್ಟವಾಗಿ ಇಷ್ಟೇ ಪ್ರಕರಣಗಳನ್ನು ದಾಖಲು ಮಾಡಬೇಕು ಎಂಬ ನಿಯಮವಿಲ್ಲ, ದಿ: 11-12-2005ರಂದು ತಾನು ತಕ್ಷೀರು ಸ್ಥಳಕ್ಕೆ ಬಂದಿಲ್ಲ ಮತ್ತು ಈ ವಾಹನವನ್ನು ಶೋಧನೆ ಮಾಡಿಲ್ಲ ಎಂದು ಹೇಳುವುದು ಸರಿಯಲ್ಲ, ಮತ್ತು ತಮ್ಮ ವಾಹನದಿಂದ ಯಾವುದೇ ಅಬಕಾರಿ ಸೊತ್ತುಗಳನ್ನು ವಶಪಡಿಸಿಕೊಂಡಿಲ್ಲ ಎನ್ನುವುದು ಸರಿಯಲ್ಲ. ತಮ್ಮ ಇಲಾಖೆಯಿಂದ ಅಂಕಿ ಸಂಖ್ಯೆಗೋಸ್ಕರ ಸುಳ್ಳು ಮೊಕದ್ದಮೆಯನ್ನು ದಾಖಲಿಸಿರುತ್ತೇವೆ ಎಂದು ಹೇಳುವುದು ಸರಿಯಲ್ಲ, ವಾಹನದ ಮಾಲೀಕರಿಗೆ ತಕ್ಷೀರಿನ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎನ್ನುವುದು ಸರಿಯಲ್ಲ, ಈ ಚಾಲಕನ ವಿರುದ್ಧ ಒಂದು ಸುಳ್ಳು ಮೊಕದ್ದಮೆಯನ್ನು ಸೃಷ್ಟಿ ಮಾಡಿರುತ್ತೇವೆ ಎಂದು ಹೇಳುವುದು ಸರಿಯಲ್ಲ, ನಿಶಾನೆ ಪಿ-3 ನ್ನು ತಕ್ಷೀರು ಸ್ಥಳದಲ್ಲಿ ತಯಾರು ಮಾಡಿಲ್ಲ ಎನ್ನುವುದು ಸರಿಯಲ್ಲ, ನಿಶಾನೆ ಪಿ-2ನ್ನು ಸಹಾ ತಕ್ಷೀರು ಸ್ಥಳದಲ್ಲಿ ತಯಾರಿಸಿಲ್ಲ ಎನ್ನುವುದು ಸರಿಯಲ್ಲ, ಎಲ್ಲ ದಾಖಲೆಗಳನ್ನು ಕಛೇರಿಯಲ್ಲೇ ತಯಾರಿಸಿರುತ್ತೇವೆ ಎನ್ನುವುದು ಸರಿಯಲ್ಲವೆಂದು ಸಾಕ್ಷವನ್ನು ನುಡಿದಿರುತ್ತಾರೆ. ಈ ಪಾಟೀ ಸವಾಲಿನಿಂದ ಅರ್ಜಿದಾರರಿಗೆ ಯಾವುದೇ ಪ್ರಯೋಜನ ದೊರೆತಿರುವುದಿಲ್ಲ.

ಪ್ರಾ.ಸ-2:

ಶ್ರೀ ಪ್ರಕಾಶ್ ಕುಮಾರ್, ಅಬಕಾರಿ ರಕ್ಷಕ, ಜಾರಿ ಮತ್ತು ತನಿಖೆ, ಪುತ್ತೂರು ಇವರು ದಿನಾಂಕ:8-3-2007 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ. ಇವರು ತಕ್ಷೀರಿನ ಕೆಮಿಕಲ್ ಕ್ಯಾರಿಯರ್ ಆಗಿದ್ದು, ತಾನು ಒಂದೂವರೆ ವರ್ಷದಿಂದ ಪುತ್ತೂರು ಜಾರಿ ಮತ್ತು ತನಿಖೆ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ದಿ:13-12-2005ರಂದು ಪ್ರಕರಣಕ್ಕೆ ಸಂಬಂದಿಸಿದ ಮಾದರಿ ಸ್ಯಾಚೇಟುಗಳ ಕಟ್ಟನ್ನು ಅಬಕಾರಿ ಉಪ ನಿರೀಕ್ಷಕರಿಂದ ಪಡೆದುಕೊಂಡು ಅದೇ ದಿನ ಮಂಗಳೂರು ರಾಸಾಯನಿಕ ತಜ್ಞರಿಗೆ ತಲುಪಿಸಿರುತ್ತೇನೆ, ದಿ:23-12-2005ರಂದು ರಾಸಾಯನಿಕ ತಜ್ಞರಿಂದ ಪರೀಕ್ಷಿಸಿದ ಸಾರಾಯಿ ಸ್ಯಾಚೇಟುಗಳನ್ನು ಹಾಗೂ ವರದಿಯನ್ನು ಪಡೆದುಕೊಂಡು ತಮ್ಮ ಕಛೇರಿಗೆ ತಲುಪಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಪಾಟೀ ಸವಾಲಿಗೆ ಉತ್ತರಿಸುತ್ತಾ ತಾನು ರಾಸಾಯನಿಕ ತಜ್ಞರ ಕಛೇರಿಗೆ ಹೋಗಿಲ್ಲ ಎಂದರೆ ಸರಿಯಲ್ಲ, ಅದನ್ನು ಪಡೆದುಕೊಂಡು ತಮ್ಮ ಕಛೇರಿಗೆ ತಲುಪಿಸಿಲ್ಲವೆಂದರೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ. ಇದರಿಂದ ಅರ್ಜಿದಾರರಿಗೆ ಯಾವುದೇ ಪ್ರಯೋಜನವಾಗಿರುವುದಿಲ್ಲ.

ಡಿಡಬ್ಲ್ಯೂ-1

ಶ್ರೀ ರಮೇಶ್ ಗೌಡ, ಕುಕ್ಕಪ್ಪ ಗೌಡ, ಶಾಂತಿದಡಿ ಮನೆ, ನೆಕ್ಕಿಲಾಡಿ ಅಂಚೆ,ಪುತ್ತೂರು ಇವರು ದಿನಾಂಕ:5-7-2007 ರಂದು ಈ ಪ್ರಾದಿಕಾರದ ಮುಂದೆ ಸಾಕ್ಷಿ ನುಡಿಯುತ್ತಾ, ಅಂಬಾಸಿಡರ್ ಕಾರು ಸಂ:KA-21-2129 ಇದರ ನೊಂದಾವಣೆ ಮಾಲೀಕನಿರುತ್ತೇನೆ, ಸದ್ರಿ ಕಾರನ್ನು 5 ವರ್ಷಗಳ ಹಿಂದೆ ಖರೀದಿ ಮಾಡಿರುತ್ತೇನೆ, ಸದ್ರಿ ಕಾರನ್ನು ತಾನು ಬಾಡಿಗೆಗಾಗಿ ನಡೆಸಲು ಒಬ್ಬ ವಸಂತ ಗೌಡ ಎಂಬವರಿಗೆ ಕೊಟ್ಟಿದೆನು, ವಸಂತಗೌಡನು ಪುತ್ತೂರು ತಾಲೂಕಿನ ಪುಳಿತ್ತಡಿ ನಿವಾಸಿಯಾಗಿರುತ್ತಾನೆ, ವಸಂತ ಇವರ ಪೂರ್ವಪರ ಮಾಹಿತಿ ಪಡೆದುಕೊಂಡಿರುತ್ತೇನೆ, ಸದ್ರಿಯವರು ನೀಡಿದ ಮಾಹಿತಿಯಂತೆ ಒಳ್ಳೆಯವರಾಗಿದ್ದರು. ಸದ್ರಿ ವಾಹನವನ್ನು ಒಳ್ಳೆಯ ರೀತಿಯಲ್ಲಿ ಬಾಡಿಗೆಗಾಗಿ ನಡೆಸಬೇಕೆಂದು ತಿಳಿಸಿದ್ದೆನು. 2005ನೇ ಇಸವಿ ಡಿಸೆಂಬರ್ 12ರಂದು ಅಬಕಾರಿ ಅಧಿಕಾರಿಗಳು ತನ್ನನ್ನು ಠಾಣೆಗೆ ಕರೆದಿದ್ದರು, ಪುತ್ತೂರಿನಲ್ಲಿರುವ ತಮ್ಮ ಕಛೇರಿಗೆ ನನ್ನನ್ನು ಕರೆದಿದ್ದರು. ನನ್ನ ಕಾರಿನಲ್ಲಿ ಅಕ್ರಮವಾಗಿ ಸಾರಾಯಿ ಸಾಗಾಟ ಮಾಡಲಾಗಿದೆ ಎಂದು ನನಗೆ ತಿಳಿಸಿ ನನ್ನನ್ನು ಕರೆಸಿದ್ದರು. ಆ ಕಛೇರಿಯಲ್ಲಿದ್ದ ನಮ್ಮ ಕಾರಿನ ಚಾಲಕ ವಸಂತ ಗೌಡ ಇವರನ್ನು ವಿಚಾರಿಸಿದೆನು. ಕಾರಿನಲ್ಲಿ ಯಾವುದೇ ಸಾರಾಯಿ ಸಾಗಿಸಿಲ್ಲವೆಂದು ಚಾಲಕನು ತಿಳಿಸಿದನು, ತಮ್ಮ ಕಾರನ್ನು ಅಬಕಾರಿ ಅಧಿಕಾರಿಗಳು ವಶಪಡಿಸಿಕೊಳ್ಳುವ ಮೊದಲು 2 ವರ್ಷದಿಂದ ಸದ್ರಿ ವಸಂತನು ಚಾಲಕನಾಗಿದ್ದನು, ಸದ್ರಿ 2 ವರ್ಷದಲ್ಲಿ ಚಾಲಕನು ಕಾರಿನಲ್ಲಿ ಯಾವುದೇ ಅಕ್ರಮ ಸಾಗಾಣಿಕೆ ಮಾಡಿದ್ದಿರುವುದಿಲ್ಲ. ನಮ್ಮ ಕಾರಿನಲ್ಲಿ ಅಕ್ರಮವಾಗಿ ಸಾರಾಯಿಯನ್ನು ಸಾಗಿಸಿದ ವಿಷಯವು ನನಗೆ ತಿಳಿದಿರುವುದಿಲ್ಲ. ನಮ್ಮ ಕಾರಿನಲ್ಲಿ ಅಕ್ರಮವಾಗಿ ಸಾಗಾಣಿಕೆ ನಡೆದಿದೆ ಎಂದು ಹೇಳಲಾದ ಕೃತ್ಯದ ಬಗ್ಗೆ ತನಗೆ ಯಾವುದೇ ಮಾಹಿತಿ ಇರಲಿಲ್ಲ ತನ್ನ ಜೀವನ ತನ್ನ ಕಾರಿನಿಂದ ಬರುವ ಬಾಡಿಗೆ ಹಣದಿಂದಲೇ ನಡೆಯುತ್ತದೆ. ಈ ಕಾರಣದಿಂದ ತನ್ನ ವಾಹನದ ವಿರುದ್ಧ ಮಾಡಲಾದ ಈ ಪ್ರಕರಣವನ್ನು ಕೈಬಿಡುವಂತೆ ಮತ್ತು ವಾಹನವನ್ನು ತನಗೆ ಮರಳಿ ನೀಡಲು ಆದೇಶಿಸುವಂತೆ ಕೋರುತ್ತೇನೆ ಎಂದು ಸಾಕ್ಷಿ ನೀಡಿರುತ್ತಾರೆ.

ಅರ್ಜಿದಾರರು ಎ.ಡಿ.ಪಿ. ಯವರ ಪಾಟೀ ಸವಾಲಿಗೆ ಉತ್ತರಿಸುತ್ತಾ ಚಾಲಕನು ಪ್ರತಿದಿನ ಬೆಳಿಗ್ಗೆ ನಮ್ಮ ಮನೆಯಿಂದ ಕಾರನ್ನು ಕೊಂಡೊಯ್ಯುತ್ತಿದ್ದನು ಮತ್ತು ಸಂಜೆ 5 ಗಂಟೆಗೆ ಅಥವಾ ಅದರ ನಂತರ ಕಾರನ್ನು ಮರಳಿ ಮನೆಗೆ ತರುತ್ತಿದ್ದ, ತಾನು ಸಹಾ ಚಾಲಕನಾಗಿ ಕೆಲಸ ಮಾಡಿರುತ್ತೇನೆ. ತಾನು ತಮ್ಮ ಅಣ್ಣನ ಕಾರಿನಲ್ಲಿ ಚಾಲಕನಾಗಿ ದುಡಿಯುತ್ತಿದ್ದೇನೆ. ತಮ್ಮ ಅಣ್ಣ ಮನೆಯಲ್ಲಿ ಬೀಡಿ ಕಟ್ಟುವ ಕೆಲಸ ಮಾಡುತ್ತಾರೆ. ತಮ್ಮ ಜೀವನ ಕಾರಿನಿಂದ ಬರುವ ಬಾಡಿಗೆಯ ಹಣದಿಂದಲೇ ನಡೆಯುತ್ತಿದೆ. ಚಾಲಕನು ಬೆಳಿಗ್ಗೆ ತಮ್ಮ ಮನೆಗೆ ಬಂದು ಕಾರನ್ನು ಕೊಂಡೊಯ್ಯುವ ಸಮಯ ನಾನು ಇರುತ್ತಿರಲಿಲ್ಲ, ಅದೇ ರೀತಿ ಸಂಜೆ ಸಮಯ ಕೂಡಾ ಚಾಲಕನು ಕಾರನ್ನು ಮನೆಗೆ ಬಂದು ಇಡುವ ಸಮಯ ತಾನು ಇರುತ್ತಿರಲಿಲ್ಲ, ಚಾಲಕನು ಕಾರನ್ನು ಬಾಡಿಗೆಗಾಗಿ ಯಾವ ಸ್ಥಳಕ್ಕೆ ಹೋಗುತ್ತಿದ್ದ ಎಂಬುದು ತಿಳಿಯುತ್ತಿರಲಿಲ್ಲ, ತಮಗೆ ಮನೆಯ ಆದಾಯದಲ್ಲಿ ಸ್ವಲ್ಪ ತೊಂದರೆ ಇತ್ತು, ದಿ:11–12–2005ರಂದು ತಮ್ಮ ಕಾರಿನಲ್ಲಿ ಅಕ್ರಮವಾಗಿ ಸಾರಾಯಿ ಸ್ಯಾಚೇಟುಗಳನ್ನು ಸಾಗಾಣಿಕೆ ಮಾಡಿದ್ದು ತನ್ನ ತಿಳುವಳಿಕೆಯಿಂದಲೇ ಎನ್ನುವುದು ಸರಿಯಲ್ಲ ತನಗೆ ಈ ಸಾಗಾಣಿಕೆಯ ಬಗ್ಗೆ ಪೂರ್ವ ಮಾಹಿತಿ ಇತ್ತು ಎಂದರೆ ಸರಿಯಲ್ಲವೆಂದು ಸಾಕ್ಷವನ್ನು ನುಡಿದಿರುತ್ತಾರೆ.

ಈ ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:11–12–2005ರಂದು ಜಪ್ತು ಪಡಿಸಿರುವ ಅಂಬಾಸಿಡರ್ ಕಾರು ಸಂ:KA-21-2129ರಲ್ಲಿ ಅಕ್ರಮವಾಗಿ 100ಎಂಎಲ್‌ನ 5000 ಸಾರಾಯಿ ಸ್ಯಾಚೇಟುಗಳನ್ನು ಸಾಗಾಣಿಕೆಯಾಗಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಇಂತಹ ಅಕ್ರಮ ಸಾರಾಯಿ ಸಾಗಾಟ ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಎಂಬುದನ್ನು ಸಾಕ್ಷದಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಈ ಕಾರಣದಿಂದ ವಾಹನ ಮಾಲೀಕರು ತಮ್ಮ ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಅಲ್ಲದೇ ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷದಾರಗಳೊಂದಿಗೆ ವಾಹನವನ್ನು ತನ್ನ ತಿಳುವಳಿಕೆಗೆ ಬಾರದೇ ಅಕ್ರಮ ಸಾರಾಯಿ ಸಾಗಾಣಿಕೆಗೆ ಉಪಯೋಗಿಸಲಾಗಿದೆ ಎಂದು ರುಜುವಾತು ಪಡಿಸಲು ವಿಫಲರಾಗಿರುವುದರಿಂದ ಸದ್ರಿ ವಾಹನವನ್ನು ಅಕ್ರಮ ಸಾರಾಯಿ ಸಾಗಾಣಿಕೆಗೆ ಬಳಸಿರುವುದು ನಿಸ್ಸಂದೇಹವಾಗಿ ಸಾಬೀತಾಗಿರುತ್ತದೆ. ಈ ಮೇಲಿನ ಕಾರಣಗಳಿಂದ ಎರಡನೇಯ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಮಹಜರು ಸಾಕ್ಷಿಗಳ ವಿಚಾರಣೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಅಂಬಾಸಿಡರ್ ಕಾರನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದೇ ಸೂಕ್ತವೆಂದು ಪ್ರಾಧಿಕಾರವು ತೀರ್ಮಾನಿಸಿ ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಅಂಬಾಸಿಡರ್ ಕಾರು ಸಂ:KA-21-2129ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಅಬಕಾರಿ ಉಪ ನಿರೀಕ್ಷಕರು (1), ಜಾರಿ ಮತ್ತು ತನಿಖೆ, ಪುತ್ತೂರು ಇವರ ತಕ್ಷೀರು ಸಂಖ್ಯೆ: 11/2005–06 ದಿನಾಂಕ:11.12.2005ರಲ್ಲಿ ಜಪ್ತು ಪಡಿಸಿಕೊಂಡಿರುವ ಅಂಬಾಸಿಡರ್ ಕಾರು ಸಂಖ್ಯೆ:KA-21-2129 ನ್ನು ನಿಯಮ 43ಎ(2) ರನ್ವಯ ಕರ್ನಾಟಕ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಪ್ರಾಧಿಕಾರದಿಂದ ದಿನಾಂಕ:21–4–2006ರಂದು ವಾಹನ ಬಿಡುಗಡೆಗೊಳಿಸಿ, ತಾತ್ಕಾಲಿಕವಾಗಿ ಮಧ್ಯಂತರ ಬಿಡುಗಡೆ ಆದೇಶವನ್ನು ರದ್ದುಗೊಳಿಸಿ ಆದೇಶಿಸಿದೆ. ಆರ್.ಸಿ. ಮಾಲೀಕರು ಸದ್ರಿ ಮಧ್ಯಂತರ ಬಿಡುಗಡೆ ಹೊಂದಿರುವ ಅಂಬಾಸಿಡರ್ ಕಾರು ಸಂ:KA-21-2129ನ್ನು ಈ ಪ್ರಾಧಿಕಾರಕ್ಕೆ ಈ ಆದೇಶದ 30 ದಿನಗಳ ಒಳಗೆ ಒಪ್ಪಿಸಲು ಆದೇಶಿಸಿದೆ. ತಪ್ಪಿದ್ದಲ್ಲಿ ಭದ್ರತೆಯಾಗಿ ನೀಡಿರುವ ಮೌಲ್ಯ ರೂ.23,000/–ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:24–02–2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:

ಪ್ರಾ.ಸಾ–I : ಶ್ರೀ ಯಾಕೂಬ್ ಖಾನ್, ಅಬಕಾರಿ ಉಪ ನಿರೀಕ್ಷಕರು, ಪುತ್ತೂರು ವಲಯ.
ಪ್ರಾ.ಸಾ–2 : ಶ್ರೀ ಪ್ರಕಾಶ್ ಕುಮಾರ್, ಅಬಕಾರಿ ರಕ್ಷಕ, ಪುತ್ತೂರು ವಲಯ.

ಅನುಬಂಧ–II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:

ನಿಶಾನೆ ಪಿ–I : ಮಹಜರು ಪ್ರತಿ
ನಿಶಾನೆ ಪಿ–2 : ಮಾದರಿ ಮೊಹರು ಪ್ರತಿ
ನಿಶಾನೆ ಪಿ–3 : ಶೋಧನಾ ವಾರೆಂಟ್ ಪ್ರತಿ
ನಿಶಾನೆ ಪಿ–4 : ಪ್ರಥಮ ಮಾಹಿತಿ ವರದಿ ಪ್ರತಿ
ನಿಶಾನೆ ಪಿ–5 : ಅಧಿಕೃತ ಅಧಿಕಾರಿಯವರಿಗೆ ಮಾಡಿದ ವರದಿ ಪ್ರತಿ
ನಿಶಾನೆ ಪಿ–6 : ರಾಸಾಯನಿಕ ವಿಶ್ಲೇಷಣಾ ವರದಿ ಪ್ರತಿ
ನಿಶಾನೆ ಪಿ–7 : ಬಿ ವರದಿ ಪ್ರತಿ

ಅನುಬಂಧ–III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು :

ಡಿಡಬ್ಲ್ಯೂ–1 : ಶ್ರೀ ರಮೇಶ್ ಗೌಡ ಬಿನ್ ಕುಕ್ಕಪ್ಪ ಗೌಡ, ಶಾಂತಿದಡಿ ಮನೆ,ನೆಕ್ಕಿಲಾಡಿ ಅಂಚೆ, ಪುತ್ತೂರು ತಾಲೂಕು.

ಅನುಬಂಧ–IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು : – ಯಾವುದು ಇಲ್ಲ–

ನೂರ್ ಮಹಮ್ಮದ್ ಹುಸೇನ್
ಪಿ.ಆರ್.240 ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ:ಎಸ್‌ಡಿಕೆ/294/ಡಿಟಿಸಿಆರ್/2000–01, ದಿನಾಂಕ:20ನೇ ಮಾರ್ಚ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ. ಮಂಗಳೂರು.

ಫಿರ್ಯಾದುದಾರರು:
ಅಬಕಾರಿ ನಿರೀಕ್ಷಕರು, ಬಂಟ್ವಾಳ ಉಪವಿಭಾಗ, ಬಂಟ್ವಾಳ.

ಆರೋಪಿ:
1) ಉಮ್ಮಣ್ಣ ಪೂಜಾರಿ,ಬಿನ್:ತನಿಯ ಪೂಜಾರಿ, ಬಟ್ಟಗುಡ್ಡೆ, ಬಂಟ್ವಾಳ ತಾಲೂಕು.
2) ಜಾನ್ ಮಂತೆರೋ, ಬಿನ್ ಡೇವಿಡ್ ಮಂತೆರೋ, ಶಾರದ ಕೋಡಿ ಹೌಸ್, ವಿಜಯಡ್ಕ ಅಂಚೆ, ಬಂಟ್ವಾಳ.

ವಾಹನದ ಮಾಲೀಕರು:
ಶ್ರೀ ಜಾನ್ ಮಂತೆರೋ, ಬಿನ್:ಡೇವಿಡ್ ಮಂತೆರೋ, ಶಾರದ ಕೋಡಿ ಹೌಸ್, ವಿಜಯಡ್ಕ ಅಂಚೆ, ಬಂಟ್ವಾಳ.

ಪ್ರಕರಣದ ಮುಖ್ಯಾಂಶಗಳು:

ಅಬಕಾರಿ ನಿರೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರು ದಿ:5–2–2001 ರಂದು ತಮ್ಮ ಸಿಬ್ಬಂದಿಯವರೊಂದಿಗೆ ಬಂಟ್ವಾಳ ತಾಲೂಕು ಮಂಗಿಲ ಪದವು ಪೇಟೆಯ ಬಳಿ ರಸ್ತೆ ಗಾವಲು ನಡೆಸುತ್ತಿರುವ ಸಂದರ್ಭದಲ್ಲಿ ವಿಟ್ಲ ಕಡೆಯಿಂದ ಬರುತ್ತಿದ್ದ ಬಜಾಜ್‌ಅಟೋ ರಿಕ್ಷಾವನ್ನು ತಪಾಸಣೆಗೆಂದು ನಿಲ್ಲಿಸಲು ಸೂಚನೆ ನೀಡಿದಾಗ ಚಾಲಕನು ರಿಕ್ಷಾವನ್ನು ಬದಿಗೆ ನಿಲ್ಲಿಸಿ ತಾನು ಕಲ್ಲಡ್ಕದಿಂದ ಶೇಂದಿಯನ್ನು ಬೆಟ್ಟಗುಡ್ಡೆಗೆ ಸಾಗಿಸಿರುವುದಾಗಿ, ತನ್ನ ಬಳಿ ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲವೆಂದು ತಿಳಿಸಿರುವ ಮೇರೆಗೆ ಸದ್ರಿ ರಿಕ್ಷಾವನ್ನು ಪರಿಶೀಲಿಸಿದಾಗ ಇದರ ನೊಂದಣಿ ಸಂ:KA-19-A-4997 ಆಗಿದ್ದು, ಚಾಲಕನ ಹೆಸರು ಫೆಲಿಕ್ಸ್ ಮಂತೆರೋ ಬಿನ್ ಜಾನ್ ಮಂತೆರೋ ಬಂಟ್ವಾಳ ಎಂದು ಹಾಗೂ ಇನ್ನೊಬ್ಬ ವ್ಯಕ್ತಿ ಉಮ್ಮಣ್ಣ ಪೂಜಾರಿ ಬಿನ್ ತನಿಯ ಪೂಜಾರಿ, ಬೆಟ್ಟಗುಡ್ಡೆ ಬಂಟ್ವಾಳ ಎಂದು ತಿಳಿಸಿರುತ್ತಾನೆ. ಸದ್ರಿ ರಿಕ್ಷಾದಲ್ಲಿ 35 ಲೀಟರು ಗಾತ್ರದ ಎರಡು ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನಿನಲ್ಲಿ ಶೇಂದಿ ಇದ್ದು, ಪ್ರತಿ ಕ್ಯಾನಿನಿಂದ 750 ಎಂಎಲ್‌ನ ಒಂದು ಸೀಸೆಗಳಿಗೆ

ತುಂಬಿಸಿ ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆದಿರುತ್ತಾರೆ. ಇದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 13ಸಿ ,12,32 ಮತ್ತು 38ಎ ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಆರೋಪಿಗಳನ್ನು ಸ್ಥಳದಲ್ಲಿ ದಸ್ತಗಿರಿ ಮಾಡಿ, ಮಹಜರನ್ನು ಸ್ಥಳದಲ್ಲಿಯೇ ಬರೆದು ಆರೋಪಿಗಳ ವಿರುದ್ಧ ತಕ್ಷೀರು ಸಂ:30/2000-01 ದಿ:5-2-2001ರಂತೆ ಪ್ರಕರಣವನ್ನು ನೊಂದಾಯಿಸಿ ಮುಂದಿನ ತನಿಖೆಗಾಗಿ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರಿಗೆ ಹಸ್ತಾಂತರಿಸಿರುತ್ತಾರೆ.

ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರ ಮುಖಾಂತರ ಮೂರ್ತೆದಾರರ ಸೇವಾ ಸಹಕಾರಿ ಸಂಘ (ರಿ) ಕನ್ಯಾನ ಸೊಸೈಟಿ ಇವರು ಈ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿ ಸದ್ರಿ ಅರ್ಜಿಯಲ್ಲಿ ವಾಹನ ನೊಂದಾಣಿ ಮಾಲೀಕರಾದ ಶ್ರೀ ಪೆಲಿಕ್ಸ್ ಮೆಂತೆರೋ ಇವರಿಗೂ, ತಕ್ಷೀರಿಗೂ ಯಾವುದೇ ಸಂಬಂಧವಿಲ್ಲ ಎಂದು ಹೇಳಿಕೆ ನೀಡಿರುತ್ತಾರೆ. ಹಾಗೂ ಸದ್ರಿ ಮೊಕದ್ದಮೆಯನ್ನು ಇಲಾಖಾ ಮುಖಾಂತರ ಇತ್ಯರ್ಥಪಡಿಸಲು ಕೋರಿರುತ್ತಾರೆ.

ವಾಹನದ ನೊಂದಾಣಿ ಮಾಲೀಕರಾದ ಶ್ರೀ.ಜಾನ್ ಮೆಂತೆರೋ ಬಿನ್ ಡೇವಿಡ್ ಪಿಂಟೋ ವಾಸ:ಸತ್ತಿಕೋಡಿ ಹೌಸ್, ವಿಜಯಡ್ಕ ಪೋಸ್ಟ ಬಂಟ್ವಾಳ ಇವರು ತಮ್ಮ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ದಿ:16-3-2001ರಂದು ಅರ್ಜಿ ಸಲ್ಲಿಸಿ ಸದ್ರಿ ಅರ್ಜಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋ ರಿಕ್ಷಾವನ್ನು ತನಗೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ. ಸದ್ರಿ ಅರ್ಜಿಯನ್ನು ಪರಿಶೀಲಿಸಿದ ಈ ಪ್ರಾಧಿಕಾರವು ವಾಹನದ ಮಾರುಕಟ್ಟೆ ಮೌಲ್ಯವನ್ನು ನಿರ್ಧರಿಸುವ ಸಲುವಾಗಿ ಪ್ರಾದೇಶಿಕ ಸಾರಿಗೆ ಅಧಿಕಾರಿ, ದ.ಕ ಜಿಲ್ಲೆ ಮಂಗಳೂರು ಇವರಿಗೆ ದಿ:16-3-2001 ರಂದು ಪತ್ರ ಬರೆಯಲಾಗಿದ್ದು, ಸದ್ರಿ ಪತ್ರಕ್ಕೆ ಅನುಗುಣವಾಗಿ ಮೋಟಾರು ವಾಹನ ನಿರೀಕ್ಷಕರು, ಸಹಾಯಕ ಪ್ರಾದೇಶಿಕ ಅಧಿಕಾರಿ,ದ.ಕ ಜಿಲ್ಲೆ ಮಂಗಳೂರು ಇವರು ವಾಹನದ ಈಗಿನ ಮೌಲ್ಯ ರೂ.20,000/-ಗಳಾಗಬಹುದೆಂದು ದೃಢೀಕರಣ ಪತ್ರ ನೀಡಿರುತ್ತಾರೆ.

ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು ದ.ಕ ಜಿಲ್ಲೆ ಮಂಗಳೂರು ಇವರ ಅದೇಶ ಸಂ:ಎಸ್‌ಡಿಕೆ:294:ಡಿಟಿಸಿಆರ್:2000-01ದಿ:24-3-2001 ರಲ್ಲಿ ಸಾರಿಗೆ ಅಧಿಕಾರಿಗಳು ನೀಡಿರುವ ಮೌಲ್ಯಕ್ಕೆ ಅನುಗುಣವಾಗಿ ರೂ.20,000/- ಬ್ಯಾಂಕ್ ಗ್ಯಾರೆಂಟಿ ಆಧಾರದ ಮೇಲೆ ತಕ್ಷೀರಿನಲ್ಲಿ ವಶಪಡಿಸಿಕೊಂಡ ಅಟೋರಿಕ್ಷಾ ಸಂ:KA-19-A-4997ನ್ನು ಕೆಲವು ಷರತ್ತುಗಳನ್ವಯ ಮುಟ್ಟುಗೋಲು ನಡವಳಿಗಳನ್ನು ಕಾಯ್ದಿರಿಸಿ ವಾಹನ ಮಾಲೀಕರ ವಶಕ್ಕೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲಾಗಿರುತ್ತದೆ.

ವಾಹನದ ನೊಂದಾಣಿ ಮಾಲೀಕರಾದ ಶ್ರೀ ಜಾನ್ ಮೆಂತೆರೋ ಇವರಿಗೆ ಈ ಪ್ರಾಧಿಕಾರದಿಂದ ದಿ:2-5-2001ರಂದು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಬಿ ರಂತೆ ಕಾರಣ ಕೇಳಿ ನೋಟಿಸನ್ನು ನೊಂದಾಣಿ ಅಂಚೆಯ ಮೂಲಕ ನೀಡಲಾಗಿದ್ದು, ಸದ್ರಿ ಕಾರಣ ಕೇಳಿ ನೋಟಿಸಿಗೆ ಉತ್ತರವನ್ನು ಈ ಪ್ರಾಧಿಕಾರಕ್ಕೆ ದಿ:8-5-2001ರಂದು ನೀಡಿರುತ್ತಾರೆ.

ಅಬಕಾರಿ ನಿರೀಕ್ಷಕರು ಬಂಟ್ವಾಳ ವಲಯ,ಬಂಟ್ವಾಳ ಇವರ ತನಿಖಾ ವರದಿ ಸಂ:ಸಿಆರ್ ಎಂ:41/2000-01 ದಿ:19-3-2001ರ ವರದಿಯಲ್ಲಿ ತಕ್ಷೀರಿಗೆ ಸಂಬಂಧಿಸಿದ ಮಾದರಿ ಸೀಸೆಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿದ್ದು, ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರ ವರದಿ ಸಂ:ಇ-145-2 ದಿ:24-2-2001ರಲ್ಲಿ ವಶಪಡಿಸಿಕೊಂಡ ಶೇಂದಿಯ ಮದ್ಯಸಾರ ಪ್ರಮಾಣ ಕ್ರಮವಾಗಿ 2.02% ಹಾಗೂ 2.20% ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ.

ನಂತರ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ ಫಿರ್ಯಾದುದಾರರಾದ ಶ್ರೀ.ರವೀಂದ್ರ ಕೋಟೆಕಾರ್ (ಪ್ರಾಸಿಕ್ಯೂಶನ್ ನಂ:1) ತನಿಖಾಧಿಕಾರಿಗಳಾದ ಶ್ರೀ ಎಂ. ಆರ್. ನಾಯರ್ (ಪ್ರಾಸಿಕ್ಯೂಶನ್ ನಂ:2) ಇವರುಗಳೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷ್ಯವನ್ನು ನೀಡಿರುತ್ತಾರೆ.

ಎರಡು ಕಡೆ ವಾದ ವಿವಾದವನ್ನು ಕೇಳಲಾಯಿತು. ಪ್ರಾಧಿಕಾರಕ್ಕೆ ಸಲ್ಲಿಸಿರುವ ದಾಖಲಾತಿಗಳು ಪ್ರಾಸಿಕ್ಯೂಶನ್ ಪರ ನೀಡಿರುವ ಸಾಕ್ಷಿಗಳ ಹೇಳಿಕೆಗಳನ್ನು ಪರಿಶೀಲಿಸಿ ಮುಂದಿನ ಆದೇಶ ಹೊರಡಿಸುವ ಮುನ್ನ ಈ ಕೆಳಕಂಡ ವಿವಾಧಾಂಶಗಳಿಗೆ ಉತ್ತರವನ್ನು ಪಡೆಯಬೇಕಾಗಿರುತ್ತದೆ.

ವಿವಾಧಾಂಶಗಳು

1. ದಿನಾಂಕ:05.02.2001ರಂದು ಬಜಾಜ್ ಆಟೋ ರಿಕ್ಷಾ ಸಂ:KA-19-A-4997 ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೆ ಶೇಂದಿ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2. ವಶಪಡಿಸಿಕೊಂಡಿರುವ ವಾಹನ ಮಾಲೀಕ ತಾನೆಂದು, ತನಗೆ ತಿಳಿಯದೇ ಕರ್ನಾಟಕ ಅಬಕಾರಿ ಕಾಯಿದೆಯಡಿ ಅಕ್ರಮ ಶೇಂದಿಯನ್ನು ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನ ಮಾಲೀಕರು ಸಾಬೀತು ಪಡಿಸಿದಾರೆಯೇ? ಅಥವಾ ಇಲ್ಲವೇ?

3. ಜಪ್ತು ಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಮೊದಲನೇ ವಿವಾಧಾಂಶಕ್ಕೆ ಉತ್ತರ-ನಕರಾತ್ಮಕವಾಗಿ (ಇಲ್ಲ)

ಪ್ರಾ.ಸ-1:

ಶ್ರೀ ರವೀಂದ್ರ ಕೋಟೆಕಾರ್, ನಿವೃತ್ತ ಅಬಕಾರಿ ನಿರೀಕ್ಷಕರು, ಇವರು ಪ್ರಕರಣದ ಫಿರ್ಯಾದುದಾರರಾಗಿದ್ದು,ಇವರು ದಿನಾಂಕ:18-6-2008ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ. ತನಗೆ ದೊರೆತ ಖಚಿತ ವರ್ತಮಾನದ ಮೇರೆಗೆ ತಮ್ಮ ಸಿಬ್ಬಂಧಿಯೊಂದಿಗೆ ಕೂಡಿಕೊಂಡು ಬಂಟ್ವಾಳ ತಾಲೂಕು ವಿಟ್ಲ ರಸ್ತೆಯ ಮಂಗಿಲಪದವು ಪೇಟೆಯ ರಾಜ್ಯ ರಸ್ತೆಯ ಬದಿಯಲ್ಲಿ ಕಾಯುತ್ತಿರುವ ಸಂದರ್ಭದಲ್ಲಿ ಇಬ್ಬರು ವ್ಯಕ್ತಿಗಳು ಆಟೋ ರಿಕ್ಷಾವನ್ನು ಅತೀ ವೇಗವಾಗಿ ಬರುತ್ತಿರುವುದನ್ನು ಕಂಡು ತಡೆದುನಿಲ್ಲಿಸಿ ಪರಿಶೀಲಿಸಿದಾಗ ಅದರಲ್ಲಿ 35 ಲೀಟರು ಗಾತ್ರದ 2 ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನುಗಳಿದ್ದು, ಅವುಗಳಲ್ಲಿ ಶೇಂದಿ ತುಂಬಿರುವುದು ಕಂಡು ಬಂತು. ಚಾಲಕನ ಹೆಸರು ಫೆಲಿಕ್ಸ್ ಮೆಂತೆರೋ ಹಾಗೂ ಒಳಗೆ ಕುಳಿತ್ತಿದ್ದ ಇನ್ನೊಬ್ಬ ವ್ಯಕ್ತಿಯ ಹೆಸರು ಉಮ್ಮಣ್ಣ ಪೂಜಾರಿ ಎಂಬುದಾಗಿ ತಿಳಿಸಿರುತ್ತಾರೆ. ರಿಕ್ಷಾ ಚಾಲಕನಿಗೆ ಸರ್ಚ್ ಮೆಮೋವನ್ನು ಕೊಟ್ಟು, ರಿಕ್ಷಾದಲಿದ್ದ ಕ್ಯಾನುಗಳನ್ನು ಪರಿಶೀಲಿಸಿ, ಪ್ರತಿಯೊಂದು ಕ್ಯಾನ್‌ನಿಂದ ರಾಸಾಯನಿಕ ಪರೀಕ್ಷೆಗಾಗಿ 750 ಎಂ ಎಲ್ ನಷ್ಟು ಶೇಂದಿಯನ್ನು ಪ್ರತ್ಯೇಕಿಸಿ ಅದಕ್ಕೆ ಆರೋಪಿಯ ಗುರುತಿನ ಚೀಟಿಯನ್ನು ಅಂಟಿಸಿ ನಂತರ ವಾಹನದ ಆರ್.ಸಿ ಪುಸ್ತಕ ಇನ್ನಿತರ ದಾಖಲಾತಿಗಳನ್ನು ಪರಿಶೀಲಿಸಿ ಆರೋಪಿಗಳ ಸಮಕ್ಷಮ ಸದ್ರಿ ಸೊತ್ತುಗಳನ್ನು ವಶಪಡಿಸಿಕೊಂಡು ಆರೋಪಿಗಳನ್ನು ಸ್ಥಳದಲ್ಲಿಯೇ ದಸ್ತಗಿರಿ ಮಾಡಿ ಆರೋಪಿಗಳ ವಿರುದ್ಧ ಮೊಕದ್ದಮೆಯನ್ನು ದಾಖಲಿಸಿ ಮಹಜರನ್ನು ಸ್ಥಳದಲ್ಲಿಯೇ ತಯಾರಿಸಿ ಸದ್ರಿ ಸೊತ್ತುಗಳನ್ನು ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರಿಗೆ ಹಸ್ತಾಂತರಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಅರ್ಜಿದಾರರ ಪರ ವಕೀಲರ ಪಾಟೀ ಸವಾಲಿಗೆ ಉತ್ತರಿಸುತ್ತಾ ತನಗೆ ಯಾವುದೇ ಮಾಹಿತಿ ಇಲ್ಲವೆಂದರೆ ಸರಿಯಲ್ಲ, ರಿಕ್ಷಾದಲ್ಲಿ ಸಾಗಿಸುತ್ತಿದ್ದ ಶೇಂದಿ ಉಮ್ಮಣ್ಣ ಪೂಜಾರಿಗೆ ಸಂಬಂಧಿಸಿದ್ದು, 2 ಕ್ಯಾನ್ ಶೇಂದಿಯನ್ನು ಚಾಲಕನ ಹಿಂದಿನ ಪ್ರಯಾಣಿಕರು ಕುಳಿತುಕೊಳ್ಳುವ ಸೀಟಿನಡಿಯಲ್ಲಿದ್ದು, ವಾಹನ ಶೋಧನೆ ಮಾಡಲು ಸರ್ಚ್ ಮೆಮೋವನ್ನು ತಯಾರಿಸಲಾಗಿದೆ ಆದರೆ ಮಹಜರಿನಲ್ಲಿ ನಮೂದಿಸಿರುವುದಿಲ್ಲ, ಅಪರಾಧ ಸ್ಥಳದಲ್ಲಿ ಮಹಜರು ತಯಾರಿಸಿದ್ದೇನೆ ಎಂದರೆ ಸರಿ, ತಾನು ಸುಳ್ಳು ಮೊಕದ್ದಮೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಆದರೆ ಫಿರ್ಯಾದುದಾರರು ನೀಡಿರುವ ಸಾಕ್ಷಿಯು ತಯಾರಿಸಿರುವ ಮಹಜರಿಗೆ ಒಂದಕ್ಕೊಂದು ಪೂರಕವಾಗಿರುವುದಿಲ್ಲ.

ಪ್ರಾ.ಸ-2:

ಶ್ರೀ ಎಂ.ಆರ್.ನಾಯರ್ ನಿವೃತ್ತ ಅಬಕಾರಿ ನಿರೀಕ್ಷಕರು ಇವರು ಪ್ರಕರಣದ ತನಿಖಾಧಿಕಾರಿಯಾಗಿದ್ದು, ಇವರು ದಿನಾಂಕ:18-6-2008 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ. ತಾನು ದಿ:8-2-2001ರಂದು ಬಂಟ್ವಾಳ ಉಪ ವಿಭಾಗದ ಅಬಕಾರಿ ನಿರೀಕ್ಷಕರಿಂದ ಸಂಬಂಧಿಸಿದ ಸೊತ್ತು ಹಾಗೂ ದಾಖಲಾತಿಗಳನ್ನು ಹಸ್ತಾಂತರ ಪಡೆದು ಕೊಂಡಿರುತ್ತೇನೆ. ತಕ್ಷೀರಿಗೆ ಸಂಬಂಧಿಸಿದ ಮಾದರಿ ಸೀಸೆಗಳನ್ನು ಸಹಾಯಕ ರಾಸಾಯನಿಕ ವಿಶ್ಲೇಷಕರು,ಮಂಗಳೂರು ಇವರಿಗೆ ಕಳುಹಿಸಲಾಗಿದ್ದು, ಅವರಿಂದ ದಿ:14-3-2001ರಂದು ವರದಿ ಪಡೆದಿರುತ್ತೇನೆ. ತಕ್ಷೀರಿನಲ್ಲಿ ಜಪ್ತು ವಾಹನದ ಬಿ ಎಕ್ಸ್‌ಟ್ರಾಕ್ಟ್ ವರದಿಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ದ.ಕ. ಜಿಲ್ಲೆ ಮಂಗಳೂರು ಇವರಿಂದ ಪಡೆದುಕೊಂಡಿರುತ್ತೇನೆ. ವರದಿಯ ಪ್ರಕಾರ ಶ್ರೀ ಜಾನ್ ಮೆಂತೆರೋ ಇವರು ವಾಹನದ ನೊಂದಣಿ ಮಾಲೀಕರಾಗಿದ್ದು, ಈ ಪ್ರಾಧಿಕಾರದ ಆದೇಶದ ಅನುಗುಣವಾಗಿ ವಾಹನವನ್ನು ವಾಹನ ನೊಂದಣಿ ಮಾಲೀಕರಾದ ಶ್ರೀ.ಜಾನ್ ಮೆಂತೆರೋ ಇವರಿಗೆ ತಾತ್ಕಾಲಿಕ ನೆಲೆಯಲ್ಲಿ ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಅರ್ಜಿದಾರರ ಪರ ವಕೀಲರ ಪಾಟೀ ಸವಾಲಿಗೆ ಉತ್ತರಿಸುತ್ತಾ ತಾನು ಮಾದರಿ ಸೀಸೆಗಳನ್ನು ಕಳುಹಿಸಿಲ್ಲವೆಂದರೆ ಸರಿಯಲ್ಲ, ತಾನು ಸರಿಯಾಗಿ ತನಿಖೆ ನಡೆಸಿಲ್ಲವೆಂದರೆ ಸರಿಯಲ್ಲ, ವಾಹನ ಮಾಲಿಕರಾದ ಶ್ರೀ ಜಾನ್ ಮೆಂತೆರೋ ಹಾಗೂ ಚಾಲಕರಾದ ಶ್ರೀ ಪೆಲಿಕ್ಸ್ ಮೆಂತೆರೋ ಇವರು ನನ್ನಲ್ಲಿ ಹೇಳಿಕೆ ನೀಡಿರುತ್ತಾರೆಂದರೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ.

ಅರ್ಜಿದಾರರ ಪರ ವಕೀಲರು ಪ್ರಾಧಿಕಾರಕ್ಕೆ ಸಂಬಂಧಿಸಿ ವಾದವನ್ನು ಮಂಡಿಸಿರುತ್ತಾರೆ. ಕರ್ನಾಟಕ ಘನ ಉಚ್ಚ ನ್ಯಾಯಾಲಯ, ಬೆಂಗಳೂರು ಇವರು ನೀಡಿರುವ 1999(4) KLJ ಪುಟ ಸಂ:320ರಲ್ಲಿ ವರದಿಯಂತೆ ಕಲಂ 54ರ ಕರ್ನಾಟಕ ಅಬಕಾರಿ ಕಾಯಿದೆಯಡಿ ಯಾವುದೇ ಸ್ಥಳವನ್ನು ಶೋಧನೆ ಮಾಡಲು ಪೂರ್ವ ಪರವಾನಿಗೆ ಅಥವಾ ಪೂರ್ವಶೋಧನೆ ಮಾನ್ಯ ನ್ಯಾಯಾಲಯದಿಂದ ಸರ್ಚ್ ವಾರೆಂಟ್ ಪಡೆಯಬೇಕು ಹಾಗೂ ಅಬಕಾರಿ ಕಾಯಿದೆಯಡಿ ವಾಹನಗಳಿಗೂ ಸಂಬಂಧಿಸಿದ್ದು ಎಂದು ಅಬಕಾರಿ ಕಾಯಿದೆಯಡಿ ನಮೂದಿಸಿರುವುದರಿಂದ ವಾಹನ ತಪಾಸಣೆ ಮಾಡಲು ಸಹ ವಾರೆಂಟ್ ಪಡೆಯುವುದು ಅವಶ್ಯವಿದೆಯೆಂದು ವಾದವನ್ನು ಮಂಡಿಸಿರುತ್ತಾರೆ. ಹಾಗೂ ಮಾನ್ಯ ಕರ್ನಾಟಕ ಘನ ಉಚ್ಚ ನ್ಯಾಯಾಲಯ, ಬೆಂಗಳೂರು ಇವರ ಸಿ.ಆರ್ ಪಿಟಿಶನ್ ಸಂ:808/2004 ದಿ:1-8-2007 ಮತ್ತು ಮಾನ್ಯ ಸತ್ರ ನ್ಯಾಯಾಲಯ, ದ.ಕ ಜಿಲ್ಲೆ, ಮಂಗಳೂರು ಇವರ ಕ್ರಿಮಿನಲ್ ಅಪೀಲ್ ಸಂ:63/2003 ದಿ:19-1-2004ರ ಆದೇಶದಲ್ಲಿ ಅಬಕಾರಿ ಕಾಯಿದೆಯನ್ವಯ ವಾಹನವನ್ನು ಶೋಧನೆ ಮಾಡುವ ಮೊದಲು ಮಾನ್ಯ ನ್ಯಾಯಾಲಯದಿಂದ ಸರ್ಚ್ ವಾರೆಂಟ್ ಪಡೆಯಬೇಕು ಅಥವಾ ಸರ್ಚ್ ವಾರೆಂಟ್ ಪಡೆಯಲು ಕಾಲಾವಕಾಶ ಇಲ್ಲದ ಕಾರಣ ಸರ್ಚ್ ಮೆಮೊವನ್ನು ಸ್ಥಳದಲ್ಲಿಯೇ ತಯಾರಿಸಿ ಮಹಜರಿನಲ್ಲಿ

ನಮೂದಿಸಿರಬೇಕು ಎಂಬ ಕಾರಣಕ್ಕೆ ಈ ಪ್ರಾಧಿಕಾರವು ನೀಡಿದ ಆದೇಶವನ್ನು ತಳ್ಳಿ ಹಾಕಿ ವಾಹನವನ್ನು ಅರ್ಜಿದಾರರ ವಶಕ್ಕೆ ಖಾಯಂ ರೀತಿಯಲ್ಲಿ ಬಿಡುಗಡೆಗೊಳಿಸಲು ಆದೇಶಿಸಿರುತ್ತಾರೆ.

ಪ್ರಕರಣದ ಎಲ್ಲಾ ದಾಖಲಾತಿಗಳನ್ನು ಮತ್ತು ಪ್ರಾ.ಸ-1 ,ಪ್ರಾ.ಸ-2 ರ ಸಾಕ್ಷಿ ವಿಚಾರಣೆಯನ್ನು ಹಾಗೂ ಅವರ ಪರ ವಕೀಲರ ವಾದವನ್ನು ಮತ್ತು ತನಿಖಾಧಿಕಾರಿಯವರ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಫಿರ್ಯಾದುದಾರರು ನೀಡಿರುವ ಸಾಕ್ಷಿಯಲ್ಲಿ ತಾನು ವಾಹನವನ್ನು ಶೋಧಿಸುವ ಮೊದಲು ಕಲಂ 54ರ ಪ್ರಕಾರ ಸರ್ಚ್ ಮೆಮೋವನ್ನು ತಯಾರಿಸಿ ವಾಹನವನ್ನು ಶೋಧಿಸಿದ್ದೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಆದರೆ ಮಹಜರಿನಲ್ಲಿ ವಾಹನವನ್ನು ತಪಾಸಣೆ ಮಾಡುವ ಮೊದಲು ಮಾನ್ಯ ನ್ಯಾಯಾಲಯದಿಂದ ಸರ್ಚ್ ವಾರೆಂಟ್ ಪಡೆದಿರುವುದಿಲ್ಲ ಹಾಗೂ ಸರ್ಚ್ ವಾರೆಂಟ್ ಪಡೆಯಲು ಕಾಲಾವಕಾಶವಿಲ್ಲದಿರುವುದರಿಂದ ಸ್ಥಳದಲ್ಲಿಯೇ ಸರ್ಚ್ ಮೆಮೋವನ್ನು ತಯಾರಿಸಿರುವುದಿಲ್ಲ ಹಾಗೂ ಈ ಅಂಶವನ್ನು ಮಹಜರಿನಲ್ಲಿ ನಮೂದಿಸಿರುವುದಿಲ್ಲ. ಆದುದರಿಂದ ಫಿರ್ಯಾದುದಾರರು ನೀಡಿರುವ ಸಾಕ್ಷ್ಯಾಧಾರಗಳು ಒಂದಕ್ಕೊಂದು ಪೂರಕವಾಗಿರುವುದಿಲ್ಲ. ವಾಹನದಲ್ಲಿ ಅಕ್ರಮವಾಗಿ ಶೇಂದಿ ಸಾಗಾಣಿಕೆಯಾಗಿದೆ ಎಂಬುದನ್ನು ಸಾಬೀತುಪಡಿಸಲು ಪ್ರಾಸಿಕ್ಯೂಶನ್ ವಿಫಲರಾಗಿರುತ್ತಾರೆ.

ಎರಡನೇ ವಿವಾಧಾಂಶಕ್ಕೆ ಉತ್ತರ –ಇಲ್ಲ (ನಕರಾತ್ಮಕ)

ಮೊದಲನೇ ವಿವಾಧಾಂಶಕ್ಕೆ ಪಡೆದ ಉತ್ತರದಲ್ಲಿ ಶೋಧನಾ ವಾರೆಂಟ್ ಪಡೆದುಕೊಳ್ಳಲಾಗದಿದ್ದು, ಶೋಧನೆ ಬಗ್ಗೆ ರೆಕಾರ್ಡ್ ಆಫ್ ರೀಜನ್ಸ್ ಮೆಮೋವನ್ನು ತಯಾರಿಸದಿರುವ ಕಾರಣ ಅಪರಾಧ ಗುರುತಿಸಲು ಕಾನೂನಿನಲ್ಲಿ ಅವಕಾಶವಿಲ್ಲದೇ ಇರುವುದರಿಂದ ಜಪ್ತು ಮಾಡಲ್ಪಟ್ಟ ವಾಹನದಲ್ಲಿ ಶೇಂದಿ ಸಾಗಾಣಿಕೆಯಾಗಿದೆಯೇ ಎಂಬುದನ್ನು ಸಾಬೀತುಪಡಿಸಲು ಪ್ರಾಸಿಕ್ಯೂಶನ್ ವಿಫಲರಾಗಿರುವುದರಿಂದ ಎರಡನೇ ವಿವಾಧಾಂಶಕ್ಕೆ ಉತ್ತರವನ್ನು ಪಡೆಯುವ ಅವಶ್ಯಕತೆ ಕಾಣಬರುವುದಿಲ್ಲ.

ಮೂರನೇ ವಿವಾಧಾಂಶಕ್ಕೆ ಉತ್ತರ–ಇಲ್ಲ (ನಕರಾತ್ಮಕ)

ಮೊದಲನೇ ಹಾಗೂ ಎರಡನೇ ವಿವಾಧಾಂಶದಿಂದ ಪಡೆದ ಉತ್ತರದಿಂದ ಪ್ರಕರಣದಲ್ಲಿ ಜಪ್ತು ಮಾಡಲ್ಪಟ್ಟ ವಾಹನವು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ವಿಚಾರಣೆ ಸಂದರ್ಭ ಲಭ್ಯವಿರುವ ಸಾಕ್ಷಿಗಳ ಹೇಳಿಕೆಗಳಿಂದ ಮತ್ತು ಈ ಕೆಳಕಂಡ ವಿವಾದಗಳಿಂದ ನಕರಾತ್ಮಕವಾಗಿ ಉತ್ತರಿಸಬಹುದಾಗಿದೆ.

1) ದಿನಾಂಕ:5–2–2001ರಂದು ಫಿರ್ಯಾದುದಾರರು ವಶಪಡಿಸಿಕೊಂಡ ಆಟೋ ರಿಕ್ಷಾದಲ್ಲಿ ಇನ್ನೊಬ್ಬ ವ್ಯಕ್ತಿ ಉಮ್ಮಣ್ಣ ಪೂಜಾರಿ ಕೂಡಾ ಆಟೋ ರಿಕ್ಷಾದಲ್ಲಿ ಪ್ರಯಾಣಿಸುತ್ತಿದ್ದು, ಸದ್ರಿ ಜಪ್ತು ಮಾಡಲಾಗಿರುವ ಎರಡು ಕ್ಯಾನುಗಳಿಂದ ಶೇಂದಿ ಪ್ರಯಾಣಿಕನ ಸೊತ್ತು ಅಥವಾ ಚಾಲಕನ ಸೊತ್ತು ಎಂಬುದರ ಬಗ್ಗೆ ತನಿಖೆಯಿಂದ ಯಾವುದೇ ಸಾಕ್ಷ್ಯಾಧಾರಗಳನ್ನು ಒಪ್ಪಿಸಲು ತನಿಖಾಧಿಕಾರಿಗಳು ವಿಫಲರಾಗಿದ್ದು ಸದ್ರಿ ಅಕ್ರಮ ಶೇಂದಿ ಬಾಡಿಗೆ ಮೂಲಕ ಸಾರ್ವಜನಿಕರ ಸಾರಿಗೆ ವಾಹನದಲ್ಲಿದ್ದು ವಾಹನ ಮಾಲೀಕರ ತಿಳುವಳಿಕೆಯಿಂದಲೇ ಮಾಡಲಾಗಿದೆ ಎಂದು ನಂಬಲು ಸಂಶಯಕ್ಕೆ ಆಸ್ಪದವಾಗಿದೆ.

2) ಎರಡನೇಯದಾಗಿ ಮೂರ್ತೆದಾರರ ಸೇವಾ ಸಹಕಾರಿ ಸೇವಾ ಸಂಘ ಇವರು ಬಂಟ್ವಾಳ ತಾಲೂಕಿನ ಕನ್ಯಾನ ಪ್ರದೇಶದ ಅಧಿಕೃತ ಶೇಂದಿ ಮಾರಾಟಗಾರರಾಗಿದ್ದು ಈ ಪ್ರಾಧಿಕಾರಕ್ಕೆ ಅರ್ಜಿ ಒಪ್ಪಿಸಿ, ಸದ್ರಿ ಶೇಂದಿಯನ್ನು ಅವರ ಸಹಕಾರಿ ಸಂಘದ ವ್ಯಾಪಾರಕ್ಕೆ ಸಾಗಿಸಲಾಗುತ್ತಿದ್ದ ಶೇಂದಿಯೆಂದು ತಿಳಿಸಿ ಮೊಕದ್ದಮೆಯನ್ನು ಇಲಾಖಾ ಮುಖಾಂತರ ಇತ್ಯರ್ಥಗೊಳಿಸಲು ವಿನಂತಿಸಿರುತ್ತಾರೆ. ಕಾರಣ ಸದ್ರಿ ಅಕ್ರಮ ಶೇಂದಿ ಸಾಗಾಣಿಕೆಗೆ ಆಟೋ ಮಾಲೀಕರ ಯಾವುದೇ ಲಗತ್ತು ಇರುವುದು ಮೇಲ್ನೋಟಕ್ಕೆ ತಿಳಿದು ಬರುವುದಿಲ್ಲ.

ವಾದ ವಿವಾದಗಳ ಅಂಶಗಳು ಮತ್ತು ದಾಖಲೆಗಳ ಸಾಕ್ಷ್ಯಾಧಾರಗಳು ಯೋಗ್ಯವಾಗಿ ಕಾಣಬರುವುದಿಲ್ಲ ಎಂಬ ಕಾರಣಕ್ಕೆ ಮೂರನೇ ವಿವಾದಾಂಶಕ್ಕೆ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಕಾನೂನಿನಡಿಯಲ್ಲಿ ಯೋಗ್ಯವಾಗಿಲ್ಲವೆಂಬ ತೀರ್ಮಾನಕ್ಕೆ ಬರಲಾಗಿದೆ. ಮೇಲಿನ ವಿವಾದಾಂಶಗಳನ್ನು ಅವಲಂಬಿಸಿ ದಾಖಲಿಸಿರುವ ಪ್ರಕರಣ ಕಾನೂನಿನಡಿಯಲ್ಲಿ ಗುರುತಿಸಲು ಅರ್ಹವಾಗದೇ ಇರುವ ಕಾರಣ ಈ ಕೆಳಕಂಡ ಆದೇಶ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ. ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43ಎ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43ಬಿ ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿದ ನಂತರ ಕರ್ನಾಟಕ ಘನ ಉಚ್ಚ ನ್ಯಾಯಾಲಯದ ಸಿ.ಆರ್.ಪಿ ನಂ:808/2004 ದಿ:1–8–2007ರ ತೀರ್ಪು ಅದೇಶವನ್ನು ಅವಲಂಬಿಸಿ ಅಬಕಾರಿ ನಿರೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರ ಮೊಕದ್ದಮೆ ನಂಬ್ರ 30/2000–01 ದಿನಾಂಕ:05–02–2001ರಲ್ಲಿ ಜಪ್ತು ಪಡಿಸಿಕೊಂಡಿರುವ ಬಜಾಜ್ ಆಟೋ ರಿಕ್ಷಾ ಸಂ:KA-19A-4997ನ್ನು ನಿಯಮ 43ಎ (2)ರನ್ವಯ ಈ ಪ್ರಾಧಿಕಾರದ ಆದೇಶ ಸಂ:ಎಸ್‌ಡಿಕೆ:294: ಡಿಟಿಸಿಆರ್:2000–01 ದಿ:24–3–2001ರ ಆದೇಶದಂತೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆ ಮಾಡಿರುವ ಆದೇಶವನ್ನು ಖಾಯಂಗೊಳಿಸಿ ಸದ್ರಿ ವಾಹನವನ್ನು ಆರ್.ಸಿ. ಮಾಲೀಕರಾದ ಶ್ರೀ ಜಾನ್ ಮೆಂತೆರೋ, ಬಿನ್ ಡೇವಿಡ್ ಪಿಂಟೋ, ಸರ್ತಕೋಡಿ ಮನೆ, ವಿಜಯಡ್ಕ ಅಂಚೆ, ಬಂಟ್ವಾಳ ತಾಲೂಕು ಇವರ ವಶಕ್ಕೆ ಶಾಶ್ವತವಾಗಿ ಸ್ವಾಧೀನಕ್ಕೆ ಆದೇಶಿಸಿದೆ.

ಸದ್ರಿ ಆರ್.ಸಿ ಮಾಲೀಕರು ಪ್ರಾಧಿಕಾರಕ್ಕೆ ನೀಡಲಾಗಿರುವ ಸಿಂಡಿಕೇಟ್ ಬ್ಯಾಂಕ್, ಕನ್ಯಾನ ಶಾಖೆ, ಬಂಟ್ವಾಳ ಇಲ್ಲಿಂದ ಪಡೆದುಕೊಂಡ ರೂ. 20,000/- ಮೌಲ್ಯದ ಬ್ಯಾಂಕ್ ಗ್ಯಾರೆಂಟಿ ಸಂ:1/2001 ದಿ:21-3-01ನ್ನು ಹಿಂದಕ್ಕೆ ನೀಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:20-03-2009 ರಂದು ಮುಕ್ತ ನ್ಯಾಯಾಲಯ ದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:

ಪ್ರಾ.ಸಾ-I : ಶ್ರೀ ರವೀಂದ್ರ ಕೋಟೆಕಾರ್, ನಿವೃತ್ತ ಅಬಕಾರಿ ನಿರೀಕ್ಷಕರು.
ಪ್ರಾ.ಸಾ-2 : ಶ್ರೀ ಎಂ.ಆರ್ ನಾಯರ್, ನಿವೃತ್ತ ಅಬಕಾರಿ ನಿರೀಕ್ಷಕರು.

ಅನುಬಂಧ-II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:

ನಿಶಾನೆ-I : ಸ್ಥಳ ಮಹಜರಿನ ಪ್ರತಿ.
ನಿಶಾನೆ-2 : ಅಬಕಾರಿ ಕಾಯಿದೆ 43(ಬಿ) ರಡಿ ವರದಿ ಪ್ರತಿ.
ನಿಶಾನೆ-3 : ಪ್ರಥಮ ವರ್ತಮಾನ ವರದಿಯ ಪ್ರತಿ.
ನಿಶಾನೆ-4 : ಕೋರಿಕೆ ಪತ್ರದ ಪ್ರತಿ.
ನಿಶಾನೆ-5 : ರಾಸಾಯನಿಕ ವಿಶ್ಲೇಷಣಾ ವರದಿ.
ನಿಶಾನೆ-6 : ವಾಹನದ ಬಿ ಎಕ್ಸ್ ಟ್ರ್ಯಾಕ್ಟ್ ವರದಿ.
ನಿಶಾನೆ-7 : ತನಿಖಾ ವರದಿ ಪ್ರತಿ.

ನೂರ್ ಮಹಮ್ಮದ್ ಹುಸೇನ್
ಪಿ.ಆರ್.355 ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ:ಎಸ್‌ಡಿಕೆ/281/ಡಿಟಿಸಿಆರ್/2006-07, ದಿನಾಂಕ:20ನೇ ಮಾರ್ಚ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ. ಮಂಗಳೂರು.

ಫಿರ್ಯಾದುದಾರರು:
ಪೊಲೀಸ್ ಉಪ ನಿರೀಕ್ಷಕರು, ಸುಳ್ಯ ಪೊಲೀಸ್ ಠಾಣೆ, ಸುಳ್ಯ.

ಆರೋಪಿಗಳು:
ಪತ್ತೆಯಾಗಿರುವುದಿಲ್ಲ

ವಾಹನದ ಮಾಲೀಕರು:
ಶ್ರೀಮತಿ ವಿ.ವಿ. ಮೀನಾಕ್ಷಿ ರಾಮನ್ ವಲ್ಲಿಯವೇಡ್, 9/500, ಮಲ್ಲಪ್ಪಚೇರಿ, ಮಡಿಕೈಯ, ಕಾನಾಗಾಂಡ್ ಹೊಸದುರ್ಗ . ಕಾಸರಗೋಡು, ಕೇರಳರಾಜ್ಯ.

ಪ್ರಕರಣದ ಮುಖ್ಯಾಂಶಗಳು:

ಪೊಲೀಸ್ ಉಪ ನಿರೀಕ್ಷಕರು, ಸುಳ್ಯ ಪೊಲೀಸ್ ಠಾಣೆ, ಸುಳ್ಯ ಇವರು ದಿ: 6-2-2007 ರಂದು ಸುಳ್ಯ ತಾಲೂಕು ಸುಳ್ಯ ಕಸಬಾ ಗ್ರಾಮದ ಕಾಂತಮಂಗಲ ಸೇತುವೆ ಬಳಿಯಲ್ಲಿರುವ ಅಜ್ಜಾವರ ಡಾಮಾರು ರಸ್ತೆಯ ಬದಿಯಲ್ಲಿ ಜೀಪೊಂದು ನಿಂತಿದ್ದು, ಅದರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೇ 100 ಎಂಎಲ್‌ನ 200 ಸಾರಾಯಿ ಸ್ಯಾಚೇಟುಗಳನ್ನು ತುಂಬಿರುವ 26 ಬಿಳಿ ಪಾಲಿಥೀನ್ ಚೀಲಗಳು ಪತ್ತೆಯಾದವು. ಪ್ರತಿ ಪಾಲಿಥೀನ್ ಚೀಲದಲ್ಲಿ ರಾಸಾಯನಿಕ ಪರೀಕ್ಷೆಗಾಗಿ 100 ಎಂಎಲ್‌ನ ಎರಡು ಸಾರಾಯಿ ಸ್ಯಾಚೇಟಗಳನ್ನು ಮಾದರಿಗಾಗಿ ತೆಗೆದಿರಿಸಿ ಅವುಗಳಿಗೆ ಪ್ರತ್ಯೇಕವಾಗಿ ಬಿಳಿ ಬಟ್ಟೆಯಿಂದ ಸುತ್ತಿ ಅವುಗಳಿಗೆ ಎಸ್.ಹೆಚ್.ಓ. ಅರಗು ಸೀಲು ಹಾಕಿ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತಾರೆ. ಸಾರಾಯಿ ಪ್ಯಾಕೆಟು ತುಂಬಿದ ಪಾಲಿಥೀನ್ ಚೀಲಗಳಿಗೆ ಕ್ರಮವಾಗಿ 1 ರಿಂದ 26 ಕ್ರಮ ಸಂಖ್ಯೆಯನ್ನು ನೀಡಿರುತ್ತಾರೆ. ನಂತರ ಜೀಪನ್ನು ಪರಿಶೀಲಿಸಿದಾಗ ಇದು ಮಹೇಂದ್ರ ಕಂಪೆನಿಯ ಜೀಪಾಗಿದ್ದು, ಇದರ ನೊಂದಣಿ ಸಂ:KL-13-B-1899 ಆಗಿರುತ್ತದೆ. ಇದರ

ಚಾಸೀಸ್ ನಂ:FT-DT-45195 ಮತ್ತು ಇಂಜಿನ ನಂ:DT-45195-SL-481966 ಆಗಿರುತ್ತದೆ. ಇದು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 12,32,34,43ಎ ರ ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಸದ್ರಿ ಸಾರಾಯಿ ಸ್ಯಾಚೆಟುಗಳನ್ನು ಹಾಗೂ ಸಾಗಾಣಿಕೆಗೆ ಬಳಸಿದ ಜೀಪನ್ನು ಪಂಚರ ಸಮಕ್ಷಮ ಇಲಾಖಾ ವಶಕ್ಕೆ ತೆಗೆದುಕೊಂಡು ಸ್ಥಳದಲ್ಲಿಯೇ ಮಹಜರು ಜರುಗಿಸಿ ಪರಾರಿಯಾದ ಆರೋಪಿಗಳ ವಿರುದ್ದ ತಕ್ಷೀರು ಸಂಖ್ಯೆ:18/2007, ದಿನಾಂಕ:6-2-2007 ರಂದು ಮೊಕದ್ದಮೆಯನ್ನು ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿ, ಮಹಜರು ಮತ್ತು ಸೊತ್ತುಗಳ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ಸೊತ್ತುಗಳನ್ನು ಈ ಪ್ರಾಧಿಕಾರದ ಆದೇಶ ಸಮ ಸಂಖ್ಯೆ ದಿ:15-2-2007 ರ ಆದೇಶದ ಮೇರೆಗೆ ಸೊತ್ತುಗಳನ್ನು ಅಬಕಾರಿ ಉಪ ನಿರೀಕ್ಷಕರು(1), ಜಾರಿ ಮತ್ತು ತನಿಖೆ,ಸುಳ್ಯ ಇವರಿಗೆ ಹಸ್ತಾಂತರಿಸಲು ಅದೇಶಿಸಲಾಗಿರುತ್ತದೆ. ಆ ಪ್ರಕಾರ ಮೊಕದ್ದಮೆಗೆ ಸಂಬಂಧಿಸಿ ಸೊತ್ತುಗಳನ್ನು ದಿ:13-03-07 ರಂದು ಅಬಕಾರಿ ಉಪ ನಿರೀಕ್ಷಕರು(1), ಜಾರಿ ಮತ್ತು ತನಿಖೆ, ಸುಳ್ಯ ಇವರಿಗೆ ಹಸ್ತಾಂತರಿಸಲಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಜೀಪು ಸಂ:KL-13-B-1899ರ ಬಿ ಎಕ್ಸ್‌ಟ್ರಾಕ್ಟ್ ವರದಿಯನ್ನು ಸಾರಿಗೆ ಅಧಿಕಾರಿಗಳು, ಕಣ್ಣೂರು ಜಿಲ್ಲೆ, ಕೇರಳ ಇವರಿಗೆ ಈ ಪ್ರಾದಿಕಾರದಿಂದ ದಿ:23-3-2007ರಂದು ವಾಹನದ ಆರ್.ಸಿ ಮಾಲೀಕರ ವಿವರಗಳನ್ನು ಪಡೆಯಲು ನೋಂದಾಣಿ ಅಂಚೆ ಮೂಲಕ ಪತ್ರ ಬರೆಯಲಾಗಿದೆ. ಜಂಟಿ ಸಾರಿಗೆ ಅಧಿಕಾರಿಗಳು, ತಾಲಿಪರಂಭ, ಕೇರಳ ಇವರು ಈ ಪ್ರಾಧಿಕಾರಕ್ಕೆ ದಿ:1-10-2007ರಂದು ತಕ್ಷೀರಿನಲ್ಲಿ ವಶಪಡಿಸಿಕೊಂಡ ಜೀಪಿನ ಬಿ ಎಕ್ಸ್‌ಟ್ರಾಕ್ಟ್ ವರದಿಯನ್ನು ಸಲ್ಲಿಸಿರುತ್ತಾರೆ. ಆದರೆ ಬಿ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ಸದ್ರಿ ವಾಹನವು ಇತರರಿಗೆ ವರ್ಗಾವಣೆಗೊಂಡಿದ್ದು, ಈ ಬಗ್ಗೆ ಸಿ.ಸಿ.ಯನ್ನು ದಿ:27-7-2000 ರಲ್ಲಿ ಜಂಟಿ ಪ್ರಾದೇಶಿಕ ಸಾರಿಗೆ ಅಧಿಕಾರಿ, ಕಾನ್ಹಾಂಗಾಡ್, ಕೇರಳ ಇವರಿಗೆ ವರ್ಗಾಯಿಸಲಾಗಿದೆ ಎಂದು ದೃಢೀಕರಿಸಿದ್ದು ಕಂಡು ಬರುತ್ತದೆ. ನಂತರ ಈ ಪ್ರಾಧಿಕಾರದಿಂದ ದಿ:9-10-2007ರಂದು ಜಂಟಿ ಪ್ರಾದೇಶಿಕ ಸಾರಿಗೆ ಅಧಿಕಾರಿ, ಕಾನ್ಹಾಂಗಾಡ್, ಕೇರಳ ಇವರಿಗೆ ವಾಹನದ ಬಿ ಎಕ್ಸ್ ಟ್ರಾಕ್ಟ್ ವರದಿ ಸಲ್ಲಿಸಲು ಪತ್ರ ಬರೆಯಲಾಗಿತ್ತು. ಸದ್ರಿಯವರು ಈ ಪ್ರಾದಿಕಾರಕ್ಕೆ ದಿ:9-12-2008ರಂದು ತಕ್ಷೀರಿನಲ್ಲಿ ವಶಪಡಿಸಿಕೊಂಡ ಜೀಪು ಸಂ: KL-13-B-1899 ಆಗಿದ್ದು ಇದರ ಚಾಸೀಸ್ ಸಂ:CL500DI4 FTD45195 ಮತ್ತು ಇಂಜಿನ್ ನಂ: DT45195 ಇದರ ನೊಂದಣಿ ಮಾಲಕಿರಾದ ಶ್ರೀಮತಿ ವಿ.ವಿ.ಮೀನಾಕ್ಷಿ ರಾಮನ್ ವಲ್ಲಿಯವೇಡ್, 9/500, ಮಲ್ಲಪ್ಪಚೇರಿ, ಮಡಿಕೈಯ, ಕಾನ್ಹಾಂಗಾಡ್,ಹೊಸದುರ್ಗ, ಕಾಸರಗೋಡು, ಕೇರಳರಾಜ್ಯ ಹಾಗೂ ಹೆಚ್.ಪಿ.ಎ. ದಾರರು ಮದನ್ ಪೈನಾನ್ಸ್ ಕಾರ್ಪೊರೇಶನ್, ಚೆನ್ನೈ ಎಂದು ದೃಡೀಕರಿಸಿ ವರದಿ ನೀಡಿರುತ್ತಾರೆ.

ಬಿ ಎಕ್ಸ್‌ಟ್ರಾಕ್ಟ್ ವರದಿಯ ಪ್ರಕಾರ ವಾಹನದ ನೊಂದಣಿ ಮಾಲಕಿಯಾದ ಶ್ರೀಮತಿ ವಿ.ವಿ ಮೀನಾಕ್ಷಿ ಹಾಗೂ ಹೆಚ್.ಪಿ.ಎ. ದಾರರಾದ ಮದನ್ ಪೈನಾನ್ಸ್ ಕಾರ್ಪೊರೇಶನ್, ಚೆನ್ನೈ ಇವರಿಗೆ ಕರ್ನಾಟಕ ಅಬಕಾರಿ ಕಾಯಿದೆ ಕಲಂ 43ಬಿ ಪ್ರಕಾರ ಕಾರಣ ಕೇಳಿ ನೋಟಿಸುಗಳನ್ನು ದಿ:23-1-09 ರಂದು ಆಂಗ್ಲ ಭಾಷೆಯಲ್ಲಿ ತರ್ಜುಮೆಗೊಳಿಸಿ ನೊಂದಣಿ ಅಂಚೆಯ ಮೂಲಕ ನೀಡಲಾಗಿದ್ದು, ಸದ್ರಿ ನೋಟಿಸನ್ನು ಮದನ್ ಪೈನಾನ್ಸ್ ಕಾರ್ಪೊರೇಶನ್, ಚೆನ್ನೈ ಇವರು ದಿ:27-1-2009 ಮತ್ತು ವಾಹನದ ಮಾಲಕಿಯಾದ ಶ್ರೀಮತಿ ವಿ.ವಿ ಮೀನಾಕ್ಷಿ ಇವರು ದಿ:02-02-2009ರಂದು ಪಡೆದುಕೊಂಡಿದ್ದು, ಸ್ವೀಕೃತಿ ಈ ಪ್ರಾದಿಕಾರದಲ್ಲಿ ಸ್ವೀಕೃತವಾಗಿರುತ್ತದೆ.

ಪ್ರಕರಣದ ತನಿಖಾಧಿಕಾರಿಯಾದ ಅಬಕಾರಿ ಉಪ ನಿರೀಕ್ಷಕರು(1) ಜಾರಿ ಮತ್ತು ತನಿಖೆ ಸುಳ್ಯ ಇವರ ತನಿಖಾ ವರದಿ ಸಂ:ಸಿಆರ್‌ಎಂ:21:2006-07 ದಿ:16-3-2007ರ ವರದಿಯಲ್ಲಿ ತಕ್ಷೀರಿನಲ್ಲಿ ಜಪ್ತಾದ ಸಾರಾಯಿ ಸ್ಯಾಚೇಟುಗಳ ಮಾದರಿಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ, ರಾಸಾಯನಿಕ ವಿಶ್ಲೇಷಣಾ ವರದಿ ಸಂ:ಇ-41-26 ದಿ:14-2-2007ರ ವರದಿಯಲ್ಲಿ ಸಾರಾಯಿಯ ಮದ್ಯಸಾರದ ಪ್ರಮಾಣ 37.0% ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ಸದ್ರಿ ಸಾರಾಯಿ ಸ್ಯಾಚೇಟುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಶಿಫಾರಸ್ಸು ಮಾಡಿರುವ ಮೇರೆಗೆ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇಐಬಿ,ದ.ಕ ಜಿಲ್ಲೆ ಮಂಗಳೂರು ಇವರ ಮುಟ್ಟುಗೋಲು ಆದೇಶ ಸಂ:ಇಐಬಿ/ಡಿಟಿಸಿಆರ್/281/2006-07 ದಿ:8-8-2007ರಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ 100 ಎಂಎಲ್‌ನ 5200 ಸಾರಾಯಿ ಸ್ಯಾಚೇಟುಗಳನ್ನು (ಮಾದರಿಗಳನ್ನು ಹೊರತುಪಡಿಸಿ) ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಎ ರಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಅಬಕಾರಿ ಉಪ ಅಧೀಕ್ಷಕರು, ಪುತ್ತೂರು ಉಪ ವಿಭಾಗ, ಪುತ್ತೂರು ಇವರ ಸಮಕ್ಷಮ ನಾಶಪಡಿಸಲು ಆದೇಶಿಸಲಾಗಿದ್ದು, ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಸಾರಾಯಿ ಸ್ಯಾಚೇಟುಗಳನ್ನು ಅಬಕಾರಿ ಉಪ ಅಧೀಕ್ಷಕರು, ಪುತ್ತೂರು ಉಪ ವಿಭಾಗ ಇವರ ಸಮಕ್ಷಮ ದಿ:18-9-2007ರಂದು ನಾಶಪಡಿಸಲಾಗಿದೆ ಎಂಬ ವರದಿಯನ್ನು ಈ ಪ್ರಾದಿಕಾರಕ್ಕೆ ಸಲ್ಲಿಸಿರುತ್ತಾರೆ.

ಅಬಕಾರಿ ನಿರೀಕ್ಷಕರು, ಸುಳ್ಯ ವಲಯ ಸುಳ್ಯ ಇವರ ತನಿಖಾ ವರದಿ ಸಂ:ಸಿಆರ್‌ಎಂ:21:2006-07 ದಿ:24-7-2008 ಮತ್ತು ದಿ:23-10-2008ರ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮಹೀಂದ್ರ ಜೀಪು ಸಂ: KL-13-B-1899 ಇದರ ನೊಂದಣಿ ಮಾಲೀಕತ್ವದ ಬಗ್ಗೆ ತನ್ನದೆಂದು ಹಕ್ಕು ಚಲಾಯಿಸಲು ಈ ಕಚೇರಿಗೆ ಯಾರೂ ಕೂಡಾ ಸಂಪರ್ಕಿಸಿರುವುದಿಲ್ಲ ಅಥವಾ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಸದ್ರಿ ವಾಹನವನ್ನು ಕಛೇರಿ ಆವರಣದ ತೆರೆದ ಜಾಗದಲ್ಲಿ ನಿಲ್ಲಿಸಿದ್ದು, ಮಳೆ ಬಿಸಿಲು ಮುಂತಾದ ಹವಾಮಾನ ವೈಪರೀತ್ಯಾಗಳಿಂದ ವಾಹನದ ಗುಣಮಟ್ಟವು ದಿನೇ ದಿನೇ ಕಳೆದುಕೊಳ್ಳುವ

ಸಾಧ್ಯತೆಯಿರುವುದರಿಂದ ಅಕ್ರಮ ಸಾರಾಯಿ ಸಾಗಾಣಿಕೆಗೆ ಬಳಸಿದ ವಾಹನ ಜೀಪು ಸಂ: KL-13-B-1899 ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಬೇಕಾಗಿ ಕೋರಿ ಶಿಫಾರಸ್ಸು ವರದಿ ಸಲ್ಲಿಸಿರುತ್ತಾರೆ.

ಅಬಕಾರಿ ಉಪ ಅಧೀಕ್ಷಕರು, ಪುತ್ತೂರು ಉಪ ವಿಭಾಗ ಪುತ್ತೂರು ಇವರ ವರದಿ ಸಂ:ಸಿಆರ್ಎಂ:289:2007-08 ದಿ:1-8-2008ರ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಜೀಪನ್ನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಎ ಪ್ರಕಾರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಹರಾಜು ಮೂಲಕ ವಿಲೇವಾರಿಗೊಳಿಸಲು ಆದೇಶ ನೀಡಬೇಕೆಂದು ಶಿಪಾರಸ್ಸು ಮಾಡಿರುತ್ತಾರೆ.

1965ನೇ ಕರ್ನಾಟಕ ಅಬಕಾರಿ ಕಾಯ್ದೆ ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ, ಅಥವಾ ಪತ್ತೆಯಾಗುವ ಸಾಧ್ಯತೆ ಇಲ್ಲದಿದ್ದಲ್ಲಿ ಪ್ರಕರಣವನ್ನು ಪತ್ತೆಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಫ್ತಾಗಿರುವ ಸೊತ್ತುಗಳು ತಮ್ಮದೆಂದು ಅವುಗಳು ಕಾನೂನು ಬದ್ಧವಾಗಿದೆಯೆಂದು ಸಾಕ್ಷಧಾರಗಳೊಂದಿಗೆ ಸಾಭೀತು ಪಡಿಸದೇ ಇದ್ದಲ್ಲಿ, ಸದ್ರಿ ಸೊತ್ತುಗಳು, ಅಬಕಾರಿ ಕಾಯ್ದೆ ಕಲಂ 43ಸಿ ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ ಅಂತಹ ಸೊತ್ತುಗಳನ್ನು ಕಲಂ 43ಸಿ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಮಹಿಂದ್ರ ಜೀಪು ಸಂ: KL-13-B-1899ರ ನೊಂದಣಿ ಮಾಲಕಿಯಾದ ಶ್ರೀಮತಿ ವಿ.ವಿ ಮೀನಾಕ್ಷಿ ಹಾಗೂ ಹೆಚ್.ಪಿ.ಎ ದಾರರಾದ ಮದನ್ ಪೈನಾನ್ಸ್ ಕಾರ್ಪೊರೇಶನ್, ಚೆನ್ನೈ ಇವರಿಗೆ ಈ ಪ್ರಾಧಿಕಾರದಿಂದ ಕಾರಣ ಕೇಳಿ ನೋಟಿಸುಗಳನ್ನು ನೊಂದಣಿ ಅಂಚೆಯ ಮೂಲಕ ನೀಡಲಾಗಿದ್ದರೂ, ಅದನ್ನು ಸ್ವೀಕರಿಸಿ ಈ ಪ್ರಾಧಿಕಾರದ ಮುಂದೆ ವಾಹನ ನೊಂದಾಣಿ ಮಾಲೀಕಾಗಲೀ ಹಾಗೂ ಅವರ ಪರ ವಕೀಲರಾಗಲೀ ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಕ್ಷಿರಿನಲ್ಲಿ ವಶಪಡಿಸಿಕೊಂಡ ಜೀಪು ಅಪರಾಧದಲ್ಲಿ ಪಾಲ್ಗೊಂಡಿರುವುದಿಲ್ಲವೆಂದು ಸಾಬೀತುಪಡಿಸಲು ಹಾಗೂ ವಾಹನದ ಬಿಡುಗಡೆಗಾಗಿ ಯಾವುದೇ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಇದುವರೆಗೂ ಸಲ್ಲಿಸಿರುವುದಿಲ್ಲ.

ಪ್ರಾಧಿಕಾರದಲ್ಲಿ ಲಭ್ಯವಾಗಿರುವ ದಾಖಲಾತಿಗಳ ಪ್ರಕಾರ ದಿನಾಂಕ:06-02-2007 ರಂದು ವಾಹನ ಸಂ:KL-13-B-1899 ಎಂದು ಸಂಖ್ಯಾ ಫಲಕ ಹೊಂದಿರುವ ಜೀಪಿನಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೇ 520.000ಲೀ (100 ಎಂಎಲ್‌ನ 5200 ಸಾರಾಯಿ ಸ್ಯಾಚೇಟುಗಳು) ಸಾರಾಯಿಯನ್ನು ಸಾಗಾಟ ಮಾಡುತ್ತಿದ್ದುದನ್ನು ಪೊಲೀಸ್ ಉಪ ನಿರೀಕ್ಷಕರು, ಸುಳ್ಯ ಪೊಲೀಸ್ ಠಾಣೆ, ಸುಳ್ಯ ಇವರು ಪತ್ತೆಹಚ್ಚಿ, ಅಕ್ರಮ ಸಾರಾಯಿ ಸಾಗಾಣಿಕೆಗೆ ಬಳಸಲಾದ ವಾಹನ ಮತ್ತು ಸೊತ್ತುಗಳನ್ನು ಸ್ಥಳ ಮಹಜರು, ಪಂಚನಾಮೆಯ ಮುಖೇನಾ ಸ್ವಾಧೀನಪಡಿಸಿದ್ದು ಮತ್ತು ವಾಹನದಲ್ಲಿ ಜಪ್ತು ಮಾಡಲ್ಪಟ್ಟಿರುವ ಸಾರಾಯಿ ಮಾದರಿಗಳು ರಾಸಾಯನಿಕ ತಜ್ಞರ ವರದಿಯಂತೆ ಸಾರಾಯಿಯೆಂದು ದೃಢಪಟ್ಟಿರುವುದರಿಂದ ಹಾಗೂ ವಾಹನದ ಮಾಲೀಕರಿಗೆ ಪ್ರಾಧಿಕಾರದಿಂದ ನೀಡಲಾದ ಕಾರಣ ಕೇಳಿ ನೋಟಿಸುಗಳು ಜಾರಿಯಾಗಿದ್ದರೂ, ಸದ್ರಿ ವಾಹನದ ಮಾಲೀಕತ್ವ ಕೋರಿ ಈ ಪ್ರಾಧಿಕಾರಕ್ಕೆ ಯಾವುದೇ ಅರ್ಜಿಯನ್ನು ಸಲ್ಲಿಸದೇ ಇರುವುದರಿಂದ ವಾಹನದ ಮಾಲೀಕರು ತನ್ನ ತಿಳುವಳಿಕೆಯಿಂದಲೇ ವಾಹನವನ್ನು ಅಕ್ರಮ ಸಾರಾಯಿ ಸಾಗಾಣಿಕೆಗೆ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ವಾಹನದ ಮುಟ್ಟುಗೋಲು ನಡವಳಿ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ಸದ್ರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ KL-13-B-1899 ಎಂದು ಸಂಖ್ಯಾ ಫಲಕ ಹೊಂದಿರುವ ಜೀಪನ್ನು ವಶಪಡಿಸಿಕೊಂಡು ಸುಮಾರು 2 ವರ್ಷ ಕಳೆದರೂ ವಾಹನ ಮಾಲೀಕರು ತಮ್ಮ ವಾಹನದ ಒಡೆತನವನ್ನು ಸಾಬೀತುಪಡಿಸಿಕೊಂಡು ಸಮಂಜಾಯಿಷಿಯನ್ನು ನೀಡಿರುವುದಿಲ್ಲ. ಹಾಗೂ ಮಾಲೀಕತ್ವವನ್ನು ಕೋರಿ ಯಾವುದೇ ಅರ್ಜಿಯನ್ನು ವಾಹನದ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಪ್ರಾಧಿಕಾರಕ್ಕೆ ಹಾಜರುಪಡಿಸಿರುವುದಿಲ್ಲ. ಈ ಕಾರಣದಿಂದಾಗಿ ಪ್ರಕರಣ ಸಂದರ್ಭದಲ್ಲಿ ಪರಾರಿಯಾದ ಚಾಲಕನು ವಾಹನದ ಮಾಲೀಕರ ಶಾಮೀಲಾತಿಯೊಂದಿಗೆ ಹಾಗೂ ವಾಹನ ಮಾಲೀಕರ ತಿಳುವಳಿಕೆಯಿಂದಲೇ ವಾಹನವನ್ನು ಅಕ್ರಮ ಸಾರಾಯಿ ಸಾಗಾಣಿಕೆಗೆ ಬಳಸಿರುವುದು ಕಂಡು ಬರುತ್ತದೆ. ಅಲ್ಲದೇ ವಾಹನವನ್ನು ಪಡೆಯಲು ಮತ್ತು ತಕ್ಷೀರನ್ನು ನಡೆಸಲು ಉತ್ಸುಕರಾಗಿಲ್ಲ ಎಂಬುದಾಗಿ ಈ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ. ಪೊಲೀಸ್ ಉಪ ನಿರೀಕ್ಷಕರು, ಸುಳ್ಯ ಪೊಲೀಸ್‌ಠಾಣೆ, ಸುಳ್ಯರವರು ಸದ್ರಿ ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸಾಗಾಣಿಕೆ ಮಾಡುತ್ತಿರುವುದನ್ನು ಪತ್ತೆ ಮಾಡಿ, ಸ್ಥಳ ಮಹಜರಿನ ಮೂಲಕ ಸಾಗಾಣಿಕೆಗೆ ಬಳಸಿದ ವಾಹನವನ್ನು ಹಾಗೂ ಅಕ್ರಮ ಸಾರಾಯಿಯನ್ನು ಜಪ್ತು ಪಡಿಸಿರುವುದು ಮತ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಜಪ್ತು ಪಡಿಸಲಾದ ಪದಾರ್ಥವು ಸಾರಾಯಿಯೆಂದು ದೃಢೀಕೃತವಾಗಿರುವುದು ಇದು ಅಕ್ರಮವಾಗಿ ಸಾರಾಯಿಯನ್ನು ವಾಹನದಲ್ಲಿ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಈ ಮೇಲಿನ ಎಲ್ಲಾ ದಾಖಲಾತಿಗಳಿಂದ ಸಾಬೀತಾಗಿರುತ್ತದೆ.

ಆದುದರಿಂದ ಸದ್ರಿ ಜೀಪನ್ನು ವಶಪಡಿಸಿಕೊಂಡು ಸುಮಾರು 2 ವರ್ಷಕ್ಕಿಂತ ಹೆಚ್ಚು ಸಮಯ ಕಳೆದಿದ್ದು, ವಾಹನದ ಆರ್.ಸಿ ಮಾಲೀಕರಿಗೆ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಬಿ ರಂತೆ ನೋಟಿಸು ನೀಡಿ ಕಾಲಾವಕಾಶ ನೀಡಿದ್ದರೂ ಅವರಾಗಲೀ ಅಥವಾ ಬೇರೆ ಯಾವ ವ್ಯಕ್ತಿಯು ಸೂಕ್ತ ದಾಖಲಾತಿಗಳೊಂದಿಗೆ ವಾಹನದ ಮಾಲೀಕತ್ವವನ್ನು ತಿಳಿಸಿ ವಾಹನದ ಬಿಡುಗಡೆ ಕೋರಿ ಈ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ. ಕಾರಣ ಅಕ್ರಮ ಸಾರಾಯಿ ಸಾಗಾಣಿಕೆಗೆ

ಬಳಸಿದ KL-13-B-1899 (ಚಾಸೀಸ್ ಸಂಖ್ಯೆ:CL500DI4FTD45195 ಮತ್ತು ಇಂಜಿನ್ ನಂ:DT45195) ಎಂದು ಸಂಖ್ಯಾ ಫಲಕ ಹೊಂದಿರುವ ಜೀಪನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಿಲೇವಾರಿ ಮಾಡುವುದು ಯೋಗ್ಯವೆಂದು ಕಂಡುಬಂದ ಹಿನ್ನಲೆಯಲ್ಲಿ ಈ ಆದೇಶ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43ಬಿ ಅಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಕಲಂ 43 ಎ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪೊಲೀಸ್ ಉಪ ನಿರೀಕ್ಷಕರು, ಸುಳ್ಯ ಪೊಲೀಸ್ ಠಾಣೆ, ಸುಳ್ಯ ಇವರ ಕ್ರೈಂ ಸಂ: 18/2007, ದಿನಾಂಕ:6–2–2007 ರಲ್ಲಿ ಅಕ್ರಮ ಸಾರಾಯಿ ಸಾಗಾಣಿಕೆಗೆ ಬಳಸಿದ KL-13-B-1899 ಎಂದು ಸಂಖ್ಯಾ ಫಲಕ ಹೊಂದಿರುವ ಜೀಪು (ಚಾಸೀಸ್ ಸಂ:CL500DI4FTD45195 ಮತ್ತು ಇಂಜಿನ್ ನಂ:DT45195) ಇದನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 43ಸಿ ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ:20–03–2009ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್

ಪಿ.ಆರ್.356

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ:ಎಸ್‌ಡಿಕೆ/373/ಡಿಟಿಸಿಆರ್/2007–08, ದಿನಾಂಕ:23ನೇ ಮಾರ್ಚ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ. ಮಂಗಳೂರು.

ಫಿರ್ಯಾದುದಾರರು:
ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ.

ಆರೋಪಿ:
ಜಗದೀಶ್ ಶೆಟ್ಟಿ, ಬಿನ್ ನಾರಾಯಣ ಶೆಟ್ಟಿ, ಕಾಂಪುಬೈಲ್, ಬಾಳ್ತಿಲ ಮನೆ, ಬಾಳ್ತಿಲ ಗ್ರಾಮ ಮತ್ತು ಅಂಚೆ, ಬಂಟ್ವಾಳ.

ವಾಹನದ ಮಾಲೀಕರು:
ಶ್ರೀ ಜಿ. ಅಮ್ಮಣ್ಣ ಬಿನ್ ಬಿ.ವಿ. ಅಮ್ಮಣ್ಣ, ಡೋರ್ ನಂ.17–13–108/5 ಅತ್ತಾವರ, ಮಂಗಳೂರು ತಾಲ್ಲೂಕು.

ಪ್ರಕರಣದ ಮುಖ್ಯಾಂಶಗಳು:

ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರು ತಮ್ಮ ಸಿಬ್ಬಂದಿಯವರೊಂದಿಗೆ ಬಂಟ್ವಾಳ ತಾಲೂಕು ಬಾಳ್ತಿಲ ಗ್ರಾಮದ ಕಾಂಪು ಬೈಲ್ ಎಂಬಲ್ಲಿ ತಮ್ಮ ಸರಕಾರಿ ವಾಹನದಲ್ಲಿ ವಿಧಾನಸಭೆ ಚುನಾವಣೆ ಪ್ರಯುಕ್ತ ಗಸ್ತು ತಿರುಗುತ್ತಿದ್ದಾಗ, ಆರೋಪಿಯಾದ ಜಗದೀಶ್ ಶೆಟ್ಟಿ, ಬಿನ್: ನಾರಾಯಣ ಶೆಟ್ಟಿ, ಕಾಂಪುಬೈಲ್, ಬಾಳ್ತಿಲ ಮನೆ, ಬಾಳ್ತಿಲ ಗ್ರಾಮ ಮತ್ತು ಅಂಚೆ, ಬಂಟ್ವಾಳ ಇವರು ಸದರಿ ಸ್ಥಳದಲ್ಲಿ ಅಕ್ರಮವಾಗಿ ದಾಸ್ತಾನು ಹೊಂದಿರುವ ಬಗ್ಗೆ ದೊರೆತ ಖಚಿತ ವರ್ತಮಾನದ ಮೇರೆಗೆ ಸದರಿಯವರ ಮನೆಯನ್ನು ಶೋಧಿಸಲೆಂದು ಮಾನ್ಯ ನ್ಯಾಯಾಲಯದಿಂದ ಸರ್ಚ್ ವಾರಂಟ್ ಪಡೆಯಲು ಕಾಲಾವಕಾಶವಿಲ್ಲದ ಕಾರಣ ಸ್ಥಳದಲ್ಲಿಯೇ ಸರ್ಚ್ ಮೆಮೊವನ್ನು ತಯಾರಿಸಿ ಶೋಧಿಸಿದಾಗ, ಒಂದು ನೈಲಾನ್ ಚೀಲ ಮತ್ತು ಒಂದು ರಟ್ಟಿನ ಪೆಟ್ಟಿಗೆಗಳು ಇರುವುದು ಕಂಡು ಬಂತು. ಅದನ್ನು ಪರಿಶೀಲಿಸಿದಾಗ, 100 ಎಂ.ಎಲ್.ನ 150 ಸಾರಾಯಿ ಸ್ಯಾಚೆಟ್‌ಗಳು ಮತ್ತು 180 ಎಂ.ಎಲ್. ನ 15 ಸೀಸೆಗಳಿರುವ ಸೂಪರ್ ಜಾಕ್ ವಿಸ್ಕಿ ಮತ್ತು 180 ಎಂ.ಎಲ್.ನ 28 ಸೀಸೆಗಳಿರುವ ಮೈಸೂರು ಲ್ಯಾನ್ಸರ್ ವಿಸ್ಕಿ ಮದ್ಯವು ಪತ್ತೆಯಾದವು. ಮನೆಯ ಎದುರುಗಡೆ ನಿಲ್ಲಿಸಿದ ಕೈನೆಟಿಕ್ ಹೊಂಡ ಸ್ಕೂಟರ್ ಸಂಖ್ಯೆ: ಕೆಎ–19–ಜೆ–9649ರಲ್ಲಿ ಸ್ಕೂಟರಿನ ಮುಂಭಾಗದ ಬಾಕ್ಸ್‌ನಲ್ಲಿ ಪರಿಶೀಲಿಸಿದಾಗ, ಚಿಲ್ಲರೆಯಾಗಿ 100 ಎಂ.ಎಲ್.ನ 50 ಸಾರಾಯಿ ಸ್ಯಾಚೆಟ್‌ಗಳಿರುವುದು ಪತ್ತೆಯಾದವು. ಇದನ್ನು ಸಾಗಾಣಿಕೆ ಮಾಡಲು ಪರವಾನಿಗೆ ಇದೆಯೇ ಎಂದು ವಿಚಾರಿಸಿದಾಗ, ತನ್ನಲ್ಲಿ ಯಾವುದೇ ಪರವಾನಿಗೆ ಇಲ್ಲವೆಂದು ತಿಳಿಸಿದ ಮೇರೆಗೆ, ಇದು ಅಬಕಾರಿ ಕಾಯಿದೆಯಂತೆ ಅಪರಾದವೆಂದು ತಿಳಿಸಿ, ಆತನನ್ನು ದಸ್ತಗಿರಿ ಮಾಡಿರುತ್ತಾರೆ. ನಂತರ ದೊರೆತ ಸೊತ್ತುಗಳಿಂದ ತಲಾ 2 ರಂತೆ ಸಾರಾಯಿ ಸ್ಯಾಚೆಟ್‌ಗಳನ್ನು ಪ್ರತ್ಯೇಕಿಸಿ, ಬಟ್ಟೆ ದಾರದಿಂದ ಕಟ್ಟಿ ತಲಾ ಒಂದರಂತೆ ಎರಡು ವಿಧದ ಬ್ರಾಂಡ್‌ನಿಂದ 2 ಬಾಟಲ್‌ಗಳನ್ನು ಪ್ರತ್ಯೇಕಿಸಿ ಬಟ್ಟೆ ದಾರ ಕಟ್ಟಿ ಇಲಾಖಾ ಸೀಲ್‌ನಿಂದ ಸೀಲ್ ಮಾಡಿ ರಾಸಾಯನಿಕ ಪರೀಕ್ಷೆಗಾಗಿ ಮಾದರಿಗಳನ್ನು ತೆಗೆದಿರುತ್ತಾರೆ. ಸದರಿ ಸೊತ್ತುಗಳನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ಸ್ಥಳದಲ್ಲಿಯೇ ಬರೆದು, ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 13, 14 ಮತ್ತು 15 ರಂತೆ

ಅಪರಾಧವಾಗಿದ್ದು, ಕಲಂ 32, 34 ಮತ್ತು 38(ಎ) ರಂತೆ ಶಿಕ್ಷಾರ್ಹವಾಗಿರುವುದರಿಂದ, ದಸ್ತಗಿರಿಯಾದ ಆರೋಪಿಯ ವಿರುದ್ಧ ತಕ್ಷೀರು ಸಂ:3/2008-09 ದಿ: 3-5-2008 ರಂತೆ ಪ್ರಕರಣವನ್ನು ನೋಂದಾಯಿಸಿ ಪ್ರಥಮ ಮಾಹಿತಿ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಮತ್ತು ಅರೋಪಿ ಯನ್ನು ದಸ್ತಗಿರಿ ಮಾಡಿ ಮಾನ್ಯ ನ್ಯಾಯಾಲಯಕ್ಕೆ ಒಪ್ಪಿಸಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರಿಸಿ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರು ತನಿಖಾ ವರದಿ ಸಂ: 3/2008-09 ದಿ: 10-7-2008 ರಲ್ಲಿ ಮದ್ಯದ ಹಾಗೂ ಸಾರಾಯಿಯ ಸ್ಯಾಂಪಲ್‌ಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರ ಪತ್ರ ಸಂ: ಇ–260–3 ದಿ:13-6-2008 ರ ವರದಿಯಲ್ಲಿ ಮದ್ಯದ ಮದ್ಯಸಾರ ಪ್ರಮಾಣ ಶೇ.42% ಮತ್ತು ಸಾರಾಯಿಯ ಮದ್ಯಸಾರ ಪ್ರಮಾಣ ಶೇ.28% ಇರುವುದಾಗಿ ದೃಢೀಕರಣ ಪತ್ರ ನೀಡಿರುವುದರಿಂದ, ಸದರಿ ಮದ್ಯ ಹಾಗೂ ಸಾರಾಯಿಯನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಶಿಫಾರಸ್ಸು ಮಾಡಿರುತ್ತಾರೆ.

ತನಿಖಾಧಿಕಾರಿಯವರ ಶಿಫಾರಸ್ಸಿನ ಮೇರೆಗೆ ಈ ಪ್ರಾಧಿಕಾರದ ಆದೇಶ ಸಂ: ಎಸ್‌ಡಿಕೆ/373/ಡಿಟಿಸಿಆರ್/2007-08 ದಿ: 4-8-2008 ರ ಆದೇಶದಲ್ಲಿ ಜಪ್ತುಪಡಿಸಿದ ಸೊತ್ತುಗಳ ಪೈಕಿ ವಾಹನದ ಮುಟ್ಟುಗೋಲು ಪ್ರಕ್ರಿಯೆಯನ್ನು ಕಾಯ್ದಿರಿಸಿ, ಸಾರಾಯಿ ಹಾಗೂ ಮದ್ಯವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರ ಸಮಕ್ಷಮ ನಾಶಪಡಿಸಲು ಆದೇಶ ನೀಡಲಾಗಿರುತ್ತದೆ.

ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲ ಯ ಇವರು ಜಪ್ತುಪಡಿಸಿದ ವಾಹನ ಸಂಖ್ಯೆ: ಕೆಎ–19–ಜೆ–9649 ರ ಕೈನೆಟಿಕ್ ಹೊಂಡ ಸ್ಕೂಟರಿನ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಗಳೂರು ಇವರಿಂದ ಪಡೆದು ದಿ:28-10-2008ರಂದು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಸಾರಿಗೆ ಅಧಿಕಾರಿಗಳು ಸಲ್ಲಿಸಿದ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯ ಪ್ರಕಾರ ವಾಹನದ ನೋಂದಣಿ ಸಂಖ್ಯೆ: ಕೆಎ–19–ಜೆ–9649 ಕೈನೆಟಿಕ್ ಹೊಂಡಾ ಮೋಟಾರ್ ಲಿಮಿಟೆಡ್‌ನಲ್ಲಿ ತಯಾರಾಗಿದ್ದು, ಇದರ ಚಾಸೀಸ್ ನಂ: ಎನ್‌ಐಎಫ್–ಪಿಎಲ್ 832787 ಮತ್ತು ಇಂಜಿನ್ ನಂ: ಎನ್‌ಐಇ–ಪಿಎಲ್–827395 ಆಗಿರುತ್ತದೆ. ಇದರ ನೋಂದಣಿ ಮಾಲೀಕರಾದ ಶ್ರೀ ಜಿ.ಅಮ್ಮಣ್ಣ, ಬಿನ್: ಬಿ.ವಿ.ಅಮ್ಮಣ್ಣ, ಡೋರ್ ನಂ: 17-13-108/5, ಅತ್ತಾವರ, ಮಂಗಳೂರು ತಾಲೂಕು ಎಂದು ದೃಢೀಕರಿಸಿ ನೀಡಿರುತ್ತಾರೆ.

ಸಾರಿಗೆ ಅಧಿಕಾರಿಗಳು, ಮಂಗಳೂರು ಇವರು ನೀಡಿರುವ ವಾಹನದ ಸಲ್ಲಿಸಿದ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯ ಪ್ರಕಾರ ವಾಹನದ ನೋಂದಣಿ ಮಾಲೀಕರಾದ ಶ್ರೀ.ಜಿ.ಅಮ್ಮಣ್ಣ, ಬಿನ್: ಬಿ.ವಿ.ಅಮ್ಮಣ್ಣ, ಡೋರ್ ನಂ: 17-13-108/5, ಅತ್ತಾವರ, ಮಂಗಳೂರು ತಾಲೂಕು ಇವರಿಗೆ ಈ ಪ್ರಾಧಿಕಾರದಿಂದ ಕರ್ನಾಟಕ ಅಬಕಾರಿ ಕಾಯಿದೆ 1965 ಸೆಕ್ಷನ್ 43(ಬಿ) ಪ್ರಕಾರ ಕಾರಣ ಕೇಳಿ ನೋಟೀಸನ್ನು ದಿ: 20-1-2009 ರಂದು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ಸದರಿ ನೋಟೀಸು ಸದರಿ ವಿಳಾಸದಲ್ಲಿ ಇಲ್ಲವೆಂದು ಷರಾವನ್ನು ತಿಳಿಸಿ ಅಂಚೆ ಇಲಾಖೆಯಿಂದ ಜ್ಯಾರಿಯಾಗದೇ ಈ ಪ್ರಾಧಿಕಾರಕ್ಕೆ ಹಿಂದೆ ಬಂದಿರುತ್ತದೆ.

ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರ ವರದಿ ಸಂಖ್ಯೆ:140/2007-08 ದಿ: 31-10-2008 ಮತ್ತು ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರ ತನಿಖಾ ವರದಿ ಸಂಖ್ಯೆ: 3/2008-09 ದಿ: 28-10-2008 ರ ತನಿಖಾ ವರದಿಯಲ್ಲಿ ವಾಹನದ ಬಿಡುಗಡೆಗಾಗಿ ಯಾವೊಬ್ಬರು ಅರ್ಜಿಯನ್ನು ಅವರಲ್ಲಿ ಸಲ್ಲಿಸಿರುವುದಿಲ್ಲವೆಂದು ವರದಿ ಮಾಡಿ ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸಾಗಾಣಿಕೆಯಾಗಿರುವುದರಿಂದ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಕೈನೆಟಿಕ್ ಹೊಂಡಾ ಸ್ಕೂಟರ್ ಸಂ: ಕೆಎ–19–ಜೆ–9649 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಿಲೇವಾರಿ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

1965ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ಮತ್ತು ವಾಹನ ತಮ್ಮದೆಂದು, ಅವುಗಳು ಕಾನೂನುಬದ್ಧವಾಗಿದೆಯೆಂದು ಸಾಕ್ಷ್ಯಾಧಾರದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43 ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಾಲಂ 43(ಸಿ) ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಈ ಪ್ರಾಧಿಕಾರದಲ್ಲಿ ಲಭ್ಯವಿರುವ ದಾಖಲಾತಿಗಳ ಪ್ರಕಾರ ದಿ: 3-5-2008 ರಂದು ಕೈನೆಟಿಕ್ ಹೋಂಡಾ ಸ್ಕೂಟರ್ ಸಂ: ಕೆಎ–19–ಜೆ–9649 ರಲ್ಲಿ ಅಕ್ರಮವಾಗಿ ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಆರೋಪಿಯು ಸಾರಾಯಿ ಸಾಗಾಣಿಕೆ ಮಾಡುತ್ತಿರುವುದನ್ನು ಪತ್ತೆ ಹಚ್ಚಿ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರು ಅಕ್ರಮ ಸಾರಾಯಿ ಹಾಗೂ ಮದ್ಯದ ಸಾಗಾಣಿಕೆಗೆ ಬಳಸಲಾದ ವಾಹನವನ್ನು ಸ್ಥಳ ಮಹಜರು, ಪಂಚನಾಮೆಯ ಮುಖೇನ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತು ಮಾಡಲ್ಪಟ್ಟಿರುವ ವಸ್ತು ರಾಸಾಯನಿಕ ತಜ್ಞರ ವರದಿಯಂತೆ ಸಾರಾಯಿಯೆಂದು ದೃಢಪಟ್ಟಿದ್ದು, ಸದ್ರಿ ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದರಿಂದ ಈ ಪ್ರಾಧಿಕಾರವು ವಾಹನದ ಮುಟ್ಟುಗೋಲು ನಡವಳಿ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ತಕ್ಷೀರಿನಲ್ಲಿ ವಶಪಡಿಸಿಕೊಂಡ ಕೈನೆಟಿಕ್ ಹೊಂಡಾ ಸ್ಕೂಟರ್ ಸಂ: ಕೆಎ-19-ಜೆ-9649 ರಲ್ಲಿ ಅಕ್ರಮವಾಗಿ ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಆರೋಪಿಯು ಸಾರಾಯಿಯನ್ನು ವಾಹನದಲ್ಲಿ ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಸಾಬೀತಾಗಿರುತ್ತದೆ. ಸದರಿ ವಾಹನವನ್ನು ವಶಪಡಿಸಿಕೊಂಡು ಸುಮಾರು 11 ತಿಂಗಳಿಗಿಂತಲೂ ಹೆಚ್ಚು ಸಮಯ ಕಳೆದರೂ ತಕ್ಷೀರಿನಲ್ಲಿ ದಸ್ತಗಿರಿಯಾದ ಆರೋಪಿ ಅಥವಾ ವಾಹನದ ಆರ್.ಸಿ. ಮಾಲೀಕರು ವಾಹನಕ್ಕೆ ಸಂಬಂಧಿಸಿ ವಾಹನದ ಮಾಲೀಕತ್ವವನ್ನು ಕೋರಿ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಈ ಕಾರಣದಿಂದಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ವಾಹನದ ಮಾಲೀಕರು ತಮ್ಮ ತಿಳುವಳಿಕೆಯಿಂದಲೇ ವಾಹನವನ್ನು ಅಕ್ರಮ ಸಾರಾಯಿ ಸಾಗಾಣಿಕೆಗೆ ಬಳಸಿರುವುದು ಕಂಡು ಬರುತ್ತದೆ. ಅಲ್ಲದೆ ವಾಹನವನ್ನು ಪಡೆಯಲು ಮತ್ತು ತಕ್ಷೀರನ್ನು ನಡೆಸಲು ಉತ್ಸುಕರಿಲ್ಲ ಎಂಬುವುದಾಗಿ ಈ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಅಕ್ರಮ ಸಾರಾಯಿ ಸಾಗಾಣಿಕೆಗೆ ಬಳಸಿದ ಕೈನೆಟಿಕ್ ಹೊಂಡಾ ಸ್ಕೂಟರ್ ಸಂ: ಕೆಎ-19-ಜೆ-9649 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತ ಹಾಗೂ ಯೋಗ್ಯವೆಂದು ತೀರ್ಮಾನ ತೆಗೆದು ಈ ಆದೇಶ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43 (ಬಿ) ಅಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಕಾಲಂ 43 ಎ ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರ ತಕ್ಷೀರು ಸಂಖ್ಯೆ: 3/2008-09 ದಿ: 3-5-2008 ರಲ್ಲಿ ಅಕ್ರಮ ಸಾರಾಯಿ ಹಾಗೂ ಮದ್ಯ ಸಾಗಾಣಿಕೆಗೆ ಬಳಸಿದ ಕೈನೆಟಿಕ್ ಹೊಂಡಾ ಸ್ಕೂಟರ್ ಸಂ: ಕೆಎ-19-ಜೆ-9649 ನ್ನು ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43ಸಿ ಯಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ: 23-03-2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್

ಪಿ.ಆರ್.357

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ:ಎಸ್‌ಡಿಕೆ/362/ಡಿಟಿಸಿಆರ್/2007-08, ದಿನಾಂಕ:24ನೇ ಮಾರ್ಚ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ. ಮಂಗಳೂರು.

ಫಿರ್ಯಾದುದಾರರು:	**ಆರೋಪಿ:**
ಅಬಕಾರಿ ಉಪ ನಿರೀಕ್ಷಕರು(2), ಪುತ್ತೂರು ವಲಯ, ಪುತ್ತೂರು.	ಶ್ರೀ ರಾಜೇಶ್ ರೈ ಬಿನ್ ನಾರಾಯಣ ರೈ, ಮದಕ ಮನೆ, ಕರ್ನೂರು ಅಂಚೆ, ನೆಟ್ಟಣಿಗೆ, ಮುಡ್ನೂರು ಗ್ರಾಮ, ಪುತ್ತೂರು ತಾಲೂಕು. (ವಾಹನದ ಮಾಲೀಕ)

ಪ್ರಕರಣದ ಮುಖ್ಯಾಂಶಗಳು:

ಅಬಕಾರಿ ಉಪ ನಿರೀಕ್ಷಕರು(2), ಪುತ್ತೂರು ವಲಯ ಇವರು ದಿ:27-4-2008 ರಂದು ಪುತ್ತೂರು ತಾಲೂಕು ಒಳಮೊಗರು ಗ್ರಾಮದ ಅಲಂಗೂರಡ್ಕ ಎಂಬಲ್ಲಿರುವ ಮನೆ ನಂ:69ರಲ್ಲಿ ಅಕ್ರಮವಾಗಿ ನಕಲಿ ಮದ್ಯ ತಯಾರಿಕೆಯಾಗುತ್ತಿದೆ ಎಂಬ ಖಚಿತ ವರ್ತಮಾನ ದೊರೆತ ಮೇರೆಗೆ ಸದ್ರಿ ಮನೆಗೆ ದಾಳಿ ಮಾಡಿ ಮನೆಯನ್ನು ತಪಾಸಣೆ ಮಾಡಿದಾಗ ಈ ಕೆಳಕಂಡ ಸೊತ್ತುಗಳನ್ನು ಪತ್ತೆಹಚ್ಚಿ, ಇದು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 11,14,15 ರ ಪ್ರಕಾರ ಅಪರಾಧ ಹಾಗೂ ಕಲಂ 32,34,38ಎ ಮತ್ತು 43ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಸದ್ರಿ ಎಲ್ಲಾ ಸೊತ್ತುಗಳನ್ನು ಹಾಗೂ ಸಾಗಾಣಿಕೆಗೆ ಬಳಸಿದ ವಾಹನ ಮಾರುತಿ 800 ಕಾರನ್ನು ಪಂಚರ ಸಮಕ್ಷಮ ಇಲಾಖಾ ವಶಕ್ಕೆ ತೆಗೆದುಕೊಂಡು ಸ್ಥಳದಲ್ಲಿಯೇ ಮಹಜರು ಜರುಗಿಸಿ ಪರಾರಿಯಾದ ಆರೋಪಿ ರಾಜೇಶ್ ರೈ ಬಿನ್ ನಾರಾಯಣ ರೈ,ಮದಕ ಮನೆ, ನೆಟ್ಟಣಿಗೆ, ಮುಡ್ನೂರು ಗ್ರಾಮ, ಪುತ್ತೂರು ತಾಲೂಕು ಇವರ ವಿರುದ್ದ ತಕ್ಷಿರು ಸಂಖ್ಯೆ:1/2008-09, ದಿನಾಂಕ:27-4-2008 ರಂದು ಮೊಕದ್ದಮೆಯನ್ನು ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿ, ಮಹಜರು ಮತ್ತು ಸೊತ್ತುಗಳ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ಜಪ್ತು ಪಡಿಸಿಕೊಂಡ ಸೊತ್ತುಗಳನ್ನು ತಮ್ಮ ವಶದಲ್ಲಿಟ್ಟುಕೊಳ್ಳಲು ಅನುಮತಿಯನ್ನು ಕೋರಿದ ಮೇರೆಗೆ ಪ್ರಾದಿಕಾರದ ದಿ:12-5-2008ರ ಆದೇಶದಲ್ಲಿ ಅನುಮತಿಯನ್ನು ನೀಡಲಾಗಿರುತ್ತದೆ.

ಜಪ್ತು ಪಡಿಸಿಕೊಂಡ ಸೊತ್ತುಗಳು

1) ಬಿಳಿ ಬಣ್ಣದ ಮಾರುತಿ 800 ಕಾರು ಸಂ:KA-19P-6310.

2) 35 ಲೀ .ಗಾತ್ರದ 6 ಬಿಳಿಬಣ್ಣದ ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಸುಮಾರು 210 ಲೀ ಮದ್ಯಸಾರ.

3) ಒರಿಜಿನಲ್ ಚಾಯಿಸ್ ಡಿಲಕ್ಸ್ ವಿಸ್ಕಿ ಎಂಬ ಲೇಬಲ್ ಅಂಟಿಸಿರುವ 180 ಮಿಲಿ ತುಂಬಿದ ತಲಾ 48 ಬಾಟಲಿಗಳಿರುವ 36ರಟ್ಟಿನ ಪೆಟ್ಟಿಗೆಗಳು- ಒಟ್ಟು -311.040 ಲೀಟರು ನಕಲಿ ಮದ್ಯ.

4) 200 ಲೀ ಗಾತ್ರದ ನೀಲಿ ಬಣ್ಣದ ಪ್ಲಾಸ್ಟಿಕ್ ಬ್ಯಾರೆಲ್‌ನಲ್ಲಿ ಸುಮಾರು 100 ಲೀಟರು ಬ್ಲೆಂಡೆಡ್ ಮದ್ಯ .

5) 35 ಲೀಟರು ಗಾತ್ರದ ಬಿಳಿ ಬಣ್ಣದ ಖಾಲಿ ಪ್ಲಾಸ್ಟಿಕ್ ಕ್ಯಾನುಗಳು-10.

6) ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಎಂದು ಮುದ್ರಿಸಿದ ಬಾಟಲಿ ಕ್ಯಾಪ್‌ಗಳು-1000.

7) ಒರಿಜಿನಲ್ ಚಾಯ್ಸ್ ವಿಸ್ಕಿ ಎಂದು ನಮೂದಿಸಿದ ಲೇಬಲ್‌ಗಳು -500 ಮತ್ತು ಸೂಪರ್ ಜಾಕ್ ಕ್ಲಾಸಿಕ್ ವಿಸ್ಕಿ ಎಂದು ನಮೂದಿಸಿದ ಲೇಬಲ್‌ಗಳು-500.

8) 10 ಲೀ ಗಾತ್ರದ ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಸುಮಾರು 6 ಲೀ ಮದ್ಯ ತಯಾರಿಸಲು ಬಳಸಿರುವ ಎಸೆನ್ಸ್.

9) ಮದ್ಯದ ಬಾಟಲಿಗಳ ಮೇಲೆ ಅಂಟಿಸುವ ನಕಲಿ ಭದ್ರತಾ ಚೀಟಿಗಳು-1000.

ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನ ಮಾರುತಿ 800 ಕಾರು ಸಂ:KA-19P-6310 ಇದರ ಬಿ ಎಕ್ಸ್‌ಟ್ರಾಕ್ಟ್ ವರದಿಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಪುತ್ತೂರು ಇವರಿಂದ ಪಡೆಯಲಾಗಿದ್ದು, ಸದ್ರಿ ವರದಿಯ ಪ್ರಕಾರ ರಾಜೇಶ್ ರೈ, ಬಿನ್:ನಾರಾಯಣ ರೈ, ಮದಕ ಮನೆ, ನೆಟ್ಟಣಿಗೆ, ಮುಡ್ನೂರು ಗ್ರಾಮ.ಪುತ್ತೂರು ತಾಲೂಕು ಇವರು ದಿ:27-1-2006ರಿಂದ ವಾಹನದ ಮಾಲೀಕರಾಗಿರುವುದಾಗಿ ಹಾಗೂ ಶ್ರೀ ರಾಮ ಸಿಟಿ ಯುನಿಯನ್ ಫೈನಾನ್ಸ್ ಲಿಮಿಟೆಡ್,ಪುತ್ತೂರು ಇವರು ಹೆಚ್.ಪಿ.ದಾರರಾಗಿರುವುದಾಗಿ ದೃಡೀಕರಿಸಿ ವರದಿ ನೀಡಿರುತ್ತಾರೆ.

ಬಿ ಎಕ್ಸ್‌ಟ್ರಾಕ್ಟ್ ವರದಿಯ ಪ್ರಕಾರ ವಾಹನದ ನೊಂದಣಿ ಮಾಲೀಕರಾದ ರಾಜೇಶ್ ರೈ, ಬಿನ್ ನಾರಾಯಣ ರೈ,ಮದಕ ಮನೆ, ನೆಟ್ಟಣಿಗೆ, ಮುಡ್ನೂರು ಗ್ರಾಮ. ಪುತ್ತೂರು ತಾಲೂಕು ಇವರಿಗೆ ಮತ್ತು ವಾಹನದ ಹೆಚ್.ಪಿ.ದಾರರಾದ ಶ್ರೀ ರಾಮ ಸಿಟಿ ಯುನಿಯನ್ ಫೈನಾನ್ಸ್ ಲಿಮಿಟೆಡ್, ಪುತ್ತೂರು ಇವರಿಗೆ ದಿ:20-1-2009ರಂದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43ಬಿ ಪ್ರಕಾರ ಕಾರಣ ಕೇಳಿ ನೋಟಿಸುಗಳನ್ನು ನೊಂದಣಿ ಅಂಚೆಯ ಮೂಲಕ ನೀಡಲಾಗಿದ್ದು, ಸದ್ರಿ ನೋಟಿಸು ವಾಹನದ ಮಾಲೀಕರಿಗೆ ದಿ:2-2-2009ರಂದು ಜ್ಯಾರಿಯಾಗಿದ್ದು, ಈ ಬಗ್ಗೆ ನೊಂದಣಿ ಅಂಚೆ ಸ್ವೀಕೃತಿ ಪತ್ರ ಈ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುತ್ತದೆ ಅಲ್ಲದೇ ಕಾರಣ ಕೇಳಿ ನೋಟಿಸನ್ನು ಪ್ರಕರಣದ ತನಿಖಾದಿಕಾರಿಗಳಾದ ಅಬಕಾರಿ ಉಪ ನಿರೀಕ್ಷಕರು(2) ಪುತ್ತೂರು ವಲಯ ಇವರ ಮುಖೇನಾ ವಾಹನದ ಮಾಲೀಕರಿಗೆ ದಿ:31-1-09ರಂದು ಖುದ್ದಾಗಿ ಜಾರಿಗೊಳಿಸಲಾಗಿರುತ್ತದೆ. ಆದರೆ ಸದ್ರಿಯವರಿಂದ ಯಾವುದೇ ಸಮಂಜಾಯಿಷಿ ಉತ್ತರ ಈ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಪ್ರಕರಣದ ತನಿಖಾಧಿಕಾರಿಯಾದ ಅಬಕಾರಿ ಉಪ ನಿರೀಕ್ಷಕರು(2) ,ಪುತ್ತೂರು ವಲಯ ಇವರ ತನಿಖಾ ವರದಿ ಸಂ:ಸಿಆರ್‌ಎಂ:5:2008-09 ದಿ:1-9-2008ರ ವರದಿಯಲ್ಲಿ ತಕ್ಷೀರಿನಲ್ಲಿ ಜಪ್ತಾದ ಮದ್ಯಸಾರ ಮತ್ತು ಮದ್ಯದ ಮಾದರಿಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ, ರಾಸಾಯನಿಕ ವಿಶ್ಲೇಷಣಾ ವರದಿ ಸಂ:ಇ-317-43 ದಿ:4-8-2008ರ ವರದಿಯಲ್ಲಿ ಮಾದರಿಗಳಲ್ಲಿ ಮದ್ಯಸಾರದ ಪ್ರಮಾಣ 93.5% ಮತ್ತು ಮದ್ಯದಲ್ಲಿ ಮದ್ಯಸಾರದ ಪ್ರಮಾಣ 34.0% ಇರುವುದಾಗಿ ಹಾಗೂ ಮದ್ಯದ ಮಾದರಿಗಳಲ್ಲಿ ಕಶ್ಮಲಗಳು ಪತ್ತೆಯಾಗಿರುವುದಾಗಿ ಹಾಗೂ ಮದ್ಯಸಾರವನ್ನು ಮಾದಕ ಪಾನೀಯಗಳ ತಯಾರಿಕೆಗೆ ಮತ್ತು ಇತರ ಕೈಗಾರಿಕಾ ಉಪಯೋಗಕ್ಕೆ ಬಳಸಬಹುದಾಗಿದೆ ಎಂದು ದೃಢೀಕರಣ ಪತ್ರ ನೀಡಿರುತ್ತಾರೆ.

ಸದ್ರಿ ಮದ್ಯಸಾರ ಮತ್ತು ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಶಿಫಾರಸ್ಸು ಮಾಡಿರುವ ಮೇರೆಗೆ ಈ ಪ್ರಾದಿಕಾರದ ಮುಟ್ಟುಗೋಲು ಆದೇಶ ಸಂ:ಎಸ್‌ಡಿಕೆ/362/ಡಿಟಿಸಿಆರ್/2004-05, ದಿ:19-9-2008 ರಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳ ಪೈಕಿ ವಾಹನವನ್ನು ಹೊರತು ಪಡಿಸಿ ಉಳಿದ ಇತರ ಸೊತ್ತುಗಳಾದ 210 ಲೀ ಮದ್ಯಸಾರ (ಮಾದರಿಗಳನ್ನು ಹೊರತುಪಡಿಸಿ), ಪ್ರತಿ ಪೆಟ್ಟಿಗೆಯಲ್ಲಿ ತಲಾ 180ಮಿಲಿಯ 48 ಬಾಟಲಿಗಳಂತೆ ಒಟ್ಟು 36 ರಟ್ಟಿನ ಪೆಟ್ಟಿಗೆಗಳಲ್ಲಿದ್ದ 311.040 ಲೀಟರು ನಕಲಿ ಮದ್ಯ (ಮಾದರಿಗಳನ್ನು ಹೊರತುಪಡಿಸಿ), 100 ಲೀಟರು ಬ್ಲೆಂಡೆಂಡ್ ಬಲ್ಕ್ ಮದ್ಯ (ಮಾದರಿಗಳನ್ನು ಹೊರತುಪಡಿಸಿ) ಹಾಗೂ ಇತರ ಎಲ್ಲಾ ಸೊತ್ತುಗಳನ್ನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಎ ರಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಅಬಕಾರಿ ಉಪ ಅಧೀಕ್ಷಕರು, ಪುತ್ತೂರು ಉಪ ವಿಭಾಗ, ಪುತ್ತೂರು ಇವರ ಸಮಕ್ಷಮ ನಾಶಪಡಿಸಲು ಆದೇಶಿಸಲಾಗಿದ್ದು, ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಎಲ್ಲಾ ಸೊತ್ತುಗಳನ್ನು ಅಬಕಾರಿ ಉಪ ಅಧೀಕ್ಷಕರು, ಪುತ್ತೂರು ಉಪ ವಿಭಾಗ ಇವರ ಸಮಕ್ಷಮ ದಿ:18-10-2008ರಂದು ನಾಶಪಡಿಸಲಾಗಿದೆ ಎಂಬ ವರದಿಯನ್ನು ಈ ಪ್ರಾದಿಕಾರಕ್ಕೆ ಸಲ್ಲಿಸಿರುತ್ತಾರೆ.

ಅಬಕಾರಿ ಉಪ ನಿರೀಕ್ಷಕರು(2), ಪುತ್ತೂರು ವಲಯ ಇವರ ತನಿಖಾ ವರದಿ ಸಂ:ಸಿಆರ್ಎಂ:5:2008–09 ದಿ:1–9–2008 ರ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮಾರುತಿ 800 ಕಾರು ಸಂ:KA-19-P-6310 ಇದರ ನೊಂದಣಿ ಮಾಲೀಕತ್ವದ ಬಗ್ಗೆ ತನ್ನದೆಂದು ಹಕ್ಕು ಚಲಾಯಿಸಲು ಈ ಕಚೇರಿಗೆ ಯಾರೂ ಕೂಡಾ ಸಂಪರ್ಕಿಸಿರುವುದಿಲ್ಲ ಅಥವಾ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಕಾರಣ ಅಕ್ರಮ ಮದ್ಯ ತಯಾರಿಕೆ, ಸಾಗಾಣಿಕೆಗೆ ಹಾಗೂ ಅಕ್ರಮವಾಗಿ ತಯಾರಿಸಲಾದ ಮದ್ಯ ಸಾಗಾಣಿಕೆ ಬಳಸಿದ ವಾಹನ ಮಾರುತಿ 800 ಕಾರು ಸಂ:KA-19-P-6310ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಬೇಕಾಗಿ ಕೋರಿ ಶಿಫಾರಸ್ಸು ವರದಿ ಸಲ್ಲಿಸಿರುತ್ತಾರೆ.

1965ನೇ ಕರ್ನಾಟಕ ಅಬಕಾರಿ ಕಾಯ್ದೆ ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ, ಅಥವಾ ಪತ್ತೆಯಾಗುವ ಸಾಧ್ಯತೆ ಇಲ್ಲದಿದ್ದಲ್ಲಿ ಪ್ರಕರಣವನ್ನು ಪತ್ತೆಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಫ್ತಾಗಿರುವ ಸೊತ್ತುಗಳು ತಮ್ಮದೆಂದು ಅವುಗಳು ಕಾನೂನು ಬದ್ಧವಾಗಿದೆಯೆಂದು ಸಾಕ್ಷಧಾರಗಳೊಂದಿಗೆ ಸಾಭೀತು ಪಡಿಸದೇ ಇದ್ದಲ್ಲಿ, ಸದ್ರಿ ಸೊತ್ತುಗಳು, ಅಬಕಾರಿ ಕಾಯ್ದೆ ಕಲಂ 43ಸಿ ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ ಅಂತಹ ಸೊತ್ತುಗಳನ್ನು ಕಲಂ 43ಸಿ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಮಾರುತಿ 800 ಕಾರು ಸಂ: KA-19P-6310ರ ನೊಂದಣಿ ಮಾಲೀಕರಾದ ರಾಜೇಶ್ ರೈ, ಬಿನ್ ನಾರಾಯಣ ರೈ, ಮದಕ ಮನೆ, ನೆಟ್ಟಣಿಗೆ,ಮುಡ್ನೂರು ಗ್ರಾಮ ,ಪುತ್ತೂರು ತಾಲೂಕು ಇವರಿಗೆ ಮತ್ತು ವಾಹನದ ಹೆಚ್.ಪಿ.ದಾರರಾದ ಶ್ರೀ.ರಾಮ ಸಿಟಿ ಯುನಿಯನ್ ಫೈನಾನ್ಸ್ ಲಿಮಿಟೆಡ್, ಪುತ್ತೂರು ಇವರಿಗೆ ಈ ಪ್ರಾಧಿಕಾರದಿಂದ ಕಾರಣ ಕೇಳಿ ನೋಟಿಸುಗಳನ್ನು ನೊಂದಣಿ ಅಂಚೆ ಮೂಲಕ ಹಾಗೂ ಖುದ್ದಾಗಿ ಜ್ಯಾರಿ ಮಾಡಲಾಗಿದ್ದರೂ, ಅದನ್ನು ಸ್ವೀಕರಿಸಿ ಈ ಪ್ರಾಧಿಕಾರದ ಮುಂದೆ ವಾಹನ ನೊಂದಾಣಿ ಮಾಲೀಕರಾಗಲೀ ಹಾಗೂ ಅವರ ಪರ ವಕೀಲರಾಗಲೀ ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಕ್ಷಿರಿನಲ್ಲಿ ವಶಪಡಿಸಿಕೊಂಡ ಮಾರುತಿ 800 ಕಾರು ಅಪರಾಧದಲ್ಲಿ ಪಾಲ್ಗೊಂಡಿರುವುದಿಲ್ಲವೆಂದು ಸಾಭೀತುಪಡಿಸಲು ಹಾಗೂ ವಾಹನದ ಬಿಡುಗಡೆಗಾಗಿ ಯಾವುದೇ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಇದುವರೆಗೂ ಸಲ್ಲಿಸಿರುವುದಿಲ್ಲ.

ಅಲ್ಲದೇ ಸದ್ರಿ ವಾಹನದ ಮಾಲಿಕರಾದ ಶ್ರೀ.ರಾಜೇಶ್ ರೈಇವರು ದಿನಾಂಕ:27–4–2008ರಂದು ದಾಖಲಿಸಿರುವ ಮೊಕದ್ದಮೆ ಸಂ:1/2007–08ರಂತೆ ಒಂದನೇ ಅರೋಪಿಯಾಗಿರುತ್ತಾರೆ.

ಪ್ರಾಧಿಕಾರದಲ್ಲಿ ಲಭ್ಯವಾಗಿರುವ ದಾಖಲಾತಿಗಳ ಪ್ರಕಾರ ದಿನಾಂಕ:27–4–2008 ರಂದು ಅಕ್ರಮ ಮದ್ಯ ತಯಾರಿಕಾ ಘಟಕಕ್ಕೆ ಧಾಳಿ ನಡೆಸಿ ಅಕಮವಾಗಿ ಶೇಖರಿಸಿಟ್ಟ 210 ಲೀ ಮದ್ಯಸಾರ, ಪ್ರತಿ ಪೆಟ್ಟಿಗೆಯಲ್ಲಿ ತಲಾ 180ಮಿಲಿಯ 48 ಬಾಟಲಿಗಳಂತೆ ಒಟ್ಟು 36 ರಟ್ಟಿನ ಪೆಟ್ಟಿಗೆಗಳಲ್ಲಿದ್ದ 311.040 ಲೀಟರು ನಕಲಿ ಮದ್ಯ, ಪ್ಲಾಸ್ಟಿಕ್ ಬ್ಯಾರೆಲ್ ನಲ್ಲಿ ಶೇಖರಿಸಿಡಲಾದ 100 ಲೀಟರು ಬ್ಲೆಂಡೆಂಡ್ ಬಲ್ಕ್ ಮದ್ಯ ಮತ್ತು ಮದ್ಯ ತಯಾರಿಕೆಗೆ ಬಳಸುವ ಇತರ ಸೊತ್ತು ಗಳನ್ನು ಹಾಗೂ ಸಾಗಾಣಿಕೆಗೆ ಬಳಸಲಾದ ವಾಹನ ಸಂ: KA-19-P-6310 ಎಂದು ಸಂಖ್ಯಾ ಫಲಕ ಹೊಂದಿರುವ ಮಾರುತಿ 800 ಕಾರು ಇವುಗಳನ್ನು ಪತ್ತೆಹಚ್ಚಿ, ಎಲ್ಲಾ ಸೊತ್ತುಗಳನ್ನು ಜಪ್ತುಪಡಿಸಿಕೊಂಡು ಸ್ಥಳ ಮಹಜರು, ಪಂಚನಾಮೆಯ ಮುಖೇನಾ ಸ್ವಾಧೀನಪಡಿಸಿದ್ದು ಮತ್ತು ಘಟಕದಲ್ಲಿ ದೊರೆತ ಮದ್ಯಸಾರ, ಮದ್ಯದ ಮಾದರಿಗಳು ರಾಸಾಯನಿಕ ತಜ್ಞರ ವರದಿಯಂತೆ ಅಬಕಾರಿ ಸೊತ್ತುಗಳೆಂದು ದೃಢಪಟ್ಟಿರುವುದರಿಂದ ಹಾಗೂ ವಾಹನದ ಮಾಲೀಕರಿಗೆ ಪ್ರಾದಿಕಾರದಿಂದ ನೀಡಲಾದ ಕಾರಣ ಕೇಳಿ ನೋಟಿಸು ಜ್ಯಾರಿಯಾಗಿದ್ದರೂ, ಸದ್ರಿ ವಾಹನದ ಮಾಲೀಕತ್ವ ಕೋರಿ ಈ ಪ್ರಾಧಿಕಾರಕ್ಕೆ ಯಾವುದೇ ಅರ್ಜಿಯನ್ನು ಸಲ್ಲಿಸದೇ ಇರುವುದರಿಂದ ವಾಹನದ ಮಾಲೀಕರು ತನ್ನ ತಿಳುವಳಿಕೆಯಿಂದಲೇ ಅಕ್ರಮವಾಗಿ ಮದ್ಯವನ್ನು ತಯಾರಿಸಿ ಮತ್ತು ಸಾಗಾಣಿಕೆಗೆ ಸದ್ರಿ ವಾಹನವನ್ನು ಬಳಸಿರುವುದು ಸ್ಪಷ್ಟವಾಗಿ ಈ ಪ್ರಾದಿಕಾರಕ್ಕೆ ಮನದಟ್ಟವಾಗಿರುವುದರಿಂದ ಈ ಪ್ರಾದಿಕಾರವು ವಾಹನದ ಮುಟ್ಟುಗೋಲು ನಡವಳಿ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ಸದ್ರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ KA-19P-6310 ಎಂದು ಸಂಖ್ಯಾ ಫಲಕ ಹೊಂದಿರುವ ಮಾರುತಿ 800 ಕಾರನ್ನು ವಶಪಡಿಸಿಕೊಂಡು ಸುಮಾರು 11 ತಿಂಗಳು ಕಳೆದರೂ ವಾಹನ ಮಾಲೀಕರು ತಮ್ಮ ವಾಹನದ ಒಡೆತನವನ್ನು ಸಾಭೀತುಪಡಿಸಿಕೊಂಡು ಸಮಂಜಾಯಿಷಿಯನ್ನು ನೀಡಿರುವುದಿಲ್ಲ. ಹಾಗೂ ಮಾಲೀಕತ್ವವನ್ನು ಕೋರಿ ಯಾವುದೇ ಅರ್ಜಿಯನ್ನು ವಾಹನದ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಪ್ರಾಧಿಕಾರಕ್ಕೆ ಹಾಜರುಪಡಿಸಿರುವುದಿಲ್ಲ. ಈ ಕಾರಣದಿಂದಾಗಿ ಪ್ರಕರಣ ಸಂದರ್ಭದಲ್ಲಿ ಪರಾರಿಯಾದ ಅರೋಪಿ ರಾಜೇಶ್ ರೈ ಇವರು ವಾಹನದ ಮಾಲೀಕರಾಗಿದ್ದು ಇವರ ತಿಳುವಳಿಕೆಯಿಂದಲೇ ಶಾಮೀಲಾತಿಯೊಂದಿಗೆ ವಾಹನವನ್ನು ಅಕ್ರಮ ಮದ್ಯ ಸಾಗಾಣಿಕೆಗೆ ಬಳಸಿರುವುದು ಕಂಡು ಬರುತ್ತದೆ. ಅಲ್ಲದೇ ವಾಹನವನ್ನು ಪಡೆಯಲು ಮತ್ತು ತಕ್ಷೀರನ್ನು ನಡೆಸಲು ಉತ್ಸುಕರಾಗಿಲ್ಲ ಎಂಬುದಾಗಿ ಈ ಪ್ರಾದಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ. ಅಬಕಾರಿ ಉಪ ನಿರೀಕ್ಷಕರು(2) ಪುತ್ತೂರು ವಲಯ, ಪುತ್ತೂರುರವರು ಸದ್ರಿ ವಾಹನದಲ್ಲಿ ಅಕಮವಾಗಿ ತಯಾರಿಸಿದ ನಕಲಿ ಮದ್ಯವನ್ನು ಸಾಗಾಣಿಕೆ ಮಾಡುತ್ತಿರುವುದನ್ನು ಪತ್ತೆ ಮಾಡಿ, ಸ್ಥಳ ಮಹಜರಿನ ಮೂಲಕ ಸಾಗಾಣಿಕೆಗೆ ಬಳಸಿದ ವಾಹನವನ್ನು ಹಾಗೂ ಅಕ್ರಮ ಮದ್ಯಸಾರ, ನಕಲಿ ಮದ್ಯ ಮತ್ತು ಬ್ಲೆಂಡೆಂಡ್ ಮದ್ಯವನ್ನು

ಜಪ್ತು ಪಡಿಸಿರುವುದು ಮತ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಜಪ್ತು ಪಡಿಸಲಾದ ಪದಾರ್ಥವು ಮದ್ಯಸಾರ, ನಕಲಿ ಮದ್ಯ ಮತ್ತು ಬ್ಲೆಂಡೆಂಡ್ ಮದ್ಯವೆಂದು ದೃಡೀಕೃತವಾಗಿರುವುದು. ಇದು ಅಕ್ರಮವಾಗಿ ನಕಲಿ ಮದ್ಯವನ್ನು ವಾಹನದಲ್ಲಿ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಮೇಲಿನ ಎಲ್ಲಾ ದಾಖಲಾತಿಗಳಿಂದ ಸಾಬೀತಾಗಿರುತ್ತದೆ.

ಆದುದರಿಂದ ಸದ್ರಿ ಮಾರುತಿ 800 ಕಾರನ್ನು ವಶಪಡಿಸಿಕೊಂಡು ಸುಮಾರು 11 ತಿಂಗಳಿಗಿಂತ ಹೆಚ್ಚು ಸಮಯ ಕಳೆದಿದ್ದು, ವಾಹನದ ಆರ್.ಸಿ ಮಾಲೀಕರಿಗೆ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಬಿ ಪ್ರಕಾರ ಕಾರಣ ಕೇಳಿ ನೋಟಿಸು ನೀಡಿ ಕಾಲವಕಾಶ ನೀಡಿದ್ದರೂ ಅವರಾಗಲೀ ಅಥವಾ ಬೇರೆ ಯಾವ ವ್ಯಕ್ತಿಯು ಸೂಕ್ತ ದಾಖಲಾತಿಗಳೊಂದಿಗೆ ವಾಹನದ ಮಾಲೀಕತ್ವವನ್ನು ತಿಳಿಸಿ ವಾಹನದ ಬಿಡುಗಡೆ ಕೋರಿ ಈ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ. ಕಾರಣ ಅಕ್ರಮ ನಕಲಿ ಮದ್ಯ ಸಾಗಾಣಿಕೆಗೆ ಬಳಸಿದ KA-19P-6310 ಎಂದು ಸಂಖ್ಯಾ ಫಲಕ ಹೊಂದಿರುವ ಮಾರುತಿ 800 ಕಾರನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಿಲೇವಾರಿ ಮಾಡುವುದು ಯೋಗ್ಯವೆಂದು ಕಂಡುಬಂದ ಹಿನ್ನಲೆಯಲ್ಲಿ ಈ ಆದೇಶ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43ಬಿ ಅಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಕಲಂ 43 ಎ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು(2), ಪುತ್ತೂರು ವಲಯ ಇವರ ಪ್ರಥಮ ಮಾಹಿತಿ ವರದಿ ಸಂ: 1/2008-09, ದಿನಾಂಕ:27-4-2008 ರಲ್ಲಿ ಮದ್ಯಸಾರ, ನಕಲಿ ಮದ್ಯ ಮತ್ತು ಬ್ಲೆಂಡೆಂಡ್ ಮದ್ಯವನ್ನು ಹೊಂದಿ ನಕಲಿ ಮದ್ಯ ತಯಾರಿಸಿ ಅಕ್ರಮ ಸಾಗಾಣಿಕೆಗೆ ಬಳಸಿದ KA-19P-6310 ಎಂದು ಸಂಖ್ಯಾ ಫಲಕ ಹೊಂದಿರುವ ಜೀಪು (ಚಾಸೀಸ್ ಸಂ:MA3ECA12502532343 ಮತ್ತು ಇಂಜಿನ್ ನಂ:F8BIN355559) ಇದನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 43ಸಿ ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ:24-03-2009ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್

ಪಿ.ಆರ್.366

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ:ಎಸ್‌ಡಿಕೆ/1393/ಡಿಟಿಸಿಆರ್/96-97, ದಿನಾಂಕ:30ನೇ ಮಾರ್ಚ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ. ಮಂಗಳೂರು.

ಫಿರ್ಯಾದುದಾರರು:	**ಆರೋಪಿ:**
ಪೊಲೀಸ್ ಉಪ ನಿರೀಕ್ಷಕರು, ಬಜಪೆ ಪೊಲೀಸ್ ಠಾಣೆ, ಬಜಪೆ.	1) ರಂಗಯ್ಯ ಯಾನೆ ಬೊಮ್ಮಯ್ಯ, ಬಿನ್ ರಂಗಯ್ಯ, ಮತ್ತಿಕೆರೆ, 4ನೇ ಅಡ್ಡರಸ್ತೆ, ಮನೆ ನಂ:49, ಯಶವಂತಪುರ, ಬೆಂಗಳೂರು. (ವಾಹನ ಚಾಲಕರು) 2) ರಾಜ, ಬಿನ್ ರಾಮಚಂದ್ರ, ಶಾಮದಹಳ್ಳ ಮನೆ, 7ನೇ ಅಡ್ಡರಸ್ತೆ, ಸರ್ಕಾರಿ ಶಾಲೆಯ ಬಳಿ, ರಾಮನಗರ, ಬೆಂಗಳೂರು. 3) ಸುರೇಂದ್ರ ಪೂಜಾರಿ, ಬಿನ್ ಬಾಬು ಪೂಜಾರಿ ಮೊಡಂ ಕಾಪು, ಬಿ.ಸಿ. ರೋಡು, ಬಂಟ್ವಾಳ ತಾಲ್ಲೂಕು. **ವಾಹನ ಮಾಲೀಕರು** 1) ಶ್ರೀ ಟಿ.ಕೃಷ್ಣಮೂರ್ತಿ ಬಿನ್ ಹೆಚ್.ಕೆ.ತಿಮ್ಮರಾಯ ಶೆಟ್ಟಿ, ನಂ:54, ಟಿಂಬರ್‌ಯಾರ್ಡ್ ಲೇಔಟ್, ಮೈಸೂರು ರಸ್ತೆ, ಬೆಂಗಳೂರು-26.

ಪ್ರಕರಣದ ಮುಖ್ಯಾಂಶಗಳು:

ಪೊಲೀಸ್ ಉಪ ನಿರೀಕ್ಷಕರು, ಬಜಪೆ ಪೊಲೀಸ್ ಠಾಣೆ, ಬಜಪೆ ಇವರು ತಮ್ಮ ಸಿಬ್ಬಂದಿಯವರೊಂದಿಗೆ ದಿ: 23.6.1997ರಂದು ಕುಪ್ಪೆ ಪದವಿನ ಮುಖಾಂತರ ಬಂಟ್ವಾಳದ ಕಡೆಗೆ ಲಾರಿಯಲ್ಲಿ ಅಕ್ರಮವಾಗಿ ಸ್ಪಿರಿಟ್

ಸಾಗಾಟವಾಗುತ್ತಿರುವುದಾಗಿ ಮೊರೆತ ಖಚಿತ ವರ್ತಮಾನದ ಮೇರೆಗೆ ಸದ್ರಿ ಸ್ಥಳದಲ್ಲಿ ತಪಾಸಣೆ ನಡೆಸುತ್ತಿರುವ ಸಂದರ್ಭದಲ್ಲಿ ಮಧ್ಯಾಹ್ನ 2-30 ಗಂಟೆ ಸಮಯಕ್ಕೆ ಕುಪ್ಪೆಪದವು ಕಡೆಯಿಂದ KA-05A-669 ನಂಬ್ರದ ಲಾರಿ ಟ್ಯಾಂಕರ್ ಅತೀ ವೇಗವಾಗಿ ಬರುತ್ತಿರುವುವನ್ನು ಕಂಡು ಸಂಶಯದ ಮೇರೆಗೆ ನಿಲ್ಲಿಸಲು ಸೂಚನೆ ನೀಡಿದಾಗ, ಚಾಲಕನು ಲಾರಿಯನ್ನು ಸ್ವಲ್ಪ ದೂರದಲ್ಲಿ ನಿಲ್ಲಿಸಿ, ಸದ್ರಿ ಟ್ಯಾಂಕರನ್ನು ಪರಿಶೀಲಿಸಿದಾಗ, ಟ್ಯಾಂಕರಿನಲ್ಲಿ ಹೆಚ್ಚುವರಿಯಾಗಿ ಅಳವಡಿಕೆ ಮಾಡಲಾದ ಟ್ಯಾಂಕಿನಲ್ಲಿ 10,000 ಲೀ.ಸ್ಪಿರಿಟನ್ನು ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೇ ಸಾಗಾಟ ಮಾಡುತ್ತಿರುವುದನ್ನು ಪತ್ತೆಹಚ್ಚಿ, ತಕ್ಷೀರು ನಡೆದ ಸಂದರ್ಭದಲ್ಲಿ ಹಾಜರಿದ್ದ ಟ್ಯಾಂಕರ್ ಚಾಲಕ ಹಾಗೂ ಸಹಾ ಚಾಲಕರ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದಾಗ 1) ರಂಗಯ್ಯ ಯಾನೆ ಬೊಮ್ಮಯ್ಯ, ಬಿನ್ ರಂಗಯ್ಯ, ಮತ್ತಿಕೆರೆ, 4ನೇ ಅಡ್ಡರಸ್ತೆ, ಮನೆ ನಂ:49, ಯಶವಂತಪುರ, ಬೆಂಗಳೂರು (ವಾಹನ ಚಾಲಕರು) 2) ರಾಜ, ಬಿನ್: ರಾಮಚಂದ್ರ, ಶಾಮದಹಳ್ಳ ಮನೆ, 7ನೇ ಅಡ್ಡರಸ್ತೆ, ಸರ್ಕಾರಿ ಶಾಲೆಯ ಬಳಿ, ರಾಮ ನಗರ,ಬೆಂಗಳೂರು 3) ಸುರೇಂದ್ರ ಪೂಜಾರಿ, ಬಿನ್:ಬಾಬು ಪೂಜಾರಿ ಮೊಡಂಕಾಪು, ಬಿ.ಸಿ.ರೋಡು, ಬಂಟ್ವಾಳ ತಾಲೂಕು ಎಂದು ಹಾಗೂ ಲಾರಿಯ ಮಾಲೀಕ ಶ್ರೀ. ಕೃಷ್ಣ ಮೂರ್ತಿ ಮತ್ತು ಸದ್ರಿ ಸ್ಪಿರಿಟನ್ನು ಬಂಟ್ವಾಳದ ಸುರೇಶ ಎಂಬವರಿಗೆ ಕಳುಹಿಸಿಕೊಡಲಾಗಿರುವುದು ಎಂದು ತಿಳಿಸಿರುವ ಮೇರೆಗೆ ಇದು ಅಕ್ರಮ ಸಾಗಾಣಿಕೆಯಾಗಿರುವುದರಿಂದ, ಇದು ಕರ್ನಾಟಕ ಅಬಕಾರಿ ಕಾಯಿದೆ 33,34 ಮತ್ತು 43(3) ರ ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಹಾಜರಿದ್ದ ಮೂರು ಅರೋಪಿಗಳನ್ನು ಸ್ಥಳದಲ್ಲಿಯೇ ದಸ್ತಗಿರಿ ಮಾಡಿ, ಪಂಚರ ಸಮಕ್ಷಮ ಸದ್ರಿ ಸೊತ್ತುಗಳನ್ನು ಜಪ್ತು ಮಾಡಿ ಸ್ಥಳದಲ್ಲಿಯೇ ಮಹಜರನ್ನು ತಯಾರಿಸಿ, ಅರೋಪಿಗಳ ವಿರುದ್ಧ ತಕ್ಷೀರು ಸಂಖ್ಯೆ 67/1997, ದಿನಾಂಕ 23.6.1997ರಂತೆ ಪ್ರಕರಣವನ್ನು ನೋಂದಾಯಿಸಿ ಪ್ರಥಮ ಮಾಹಿತಿ ವರದಿ, ಮಹಜರು ಪ್ರತಿ ಹಾಗೂ ಸೊತ್ತುಗಳ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ವಶಪಡಿಸಿಕೊಂಡ ಸೊತ್ತುಗಳನ್ನು ಹಾಗೂ ಕಡತದೊಂದಿಗೆ ಮುಂದಿನ ತನಿಖೆಗಾಗಿ ಹಸ್ತಾಂತರಿಸಿರುವ ಬಗ್ಗೆ ಅಧಿಕೃತ ಅಧಿಕಾರಿ ಹಾಗೂ ಅಬಕಾರಿ ಅಧೀಕ್ಷಕರು, ದ.ಕ.ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ ದಿನಾಂಕ:24-6-1997ರಂದು ಪತ್ರ ಬರೆಯಲಾಗಿದ್ದು, ಅಧಿಕೃತ ಅಧಿಕಾರಿ ಹಾಗೂ ಅಬಕಾರಿ ಅಧೀಕ್ಷಕರು, ದ.ಕ.ಜಿಲ್ಲೆ ಮಂಗಳೂರು ಇವರ ಅದೇಶ ಸಂ: ಎಸ್ ಡಿಕೆ:1393:ಡಿಟಿಸಿಆರ್:96-97 ದಿನಾಂಕ:30-6-1997ರಲ್ಲಿ ಸದ್ರಿ ಮೊಕದ್ದಮೆಯಲ್ಲಿ ವಶಪಡಿಸಿ ಕೊಂಡ ಸೊತ್ತುಗಳನ್ನು ಅವುಗಳ ಸಂಪೂರ್ಣ ದಾಖಲಾತಿಗಳೊಂದಿಗೆ ಅಬಕಾರಿ ನಿರೀಕ್ಷಕರು, ಕುಲಶೇಖರ ವಲಯ ಇವರಿಗೆ ಹಸ್ತಾಂತರಿಸಲು ಅನುಮತಿಯನ್ನು ನೀಡಿರುತ್ತಾರೆ. ಸದ್ರಿ ಆದೇಶದಂತೆ ಪೊಲೀಸ್ ಉಪ ನಿರೀಕ್ಷಕರು, ಬಜಪೆ ಪೊಲೀಸ್ ಠಾಣೆ, ಬಜಪೆ ಇವರು ದಿ:9-7-1997ರಂದು ತಕ್ಷೀರಿಗೆ ಸಂಬಂಧಪಟ್ಟ ದಾಖಲೆ ಪತ್ರಗಳನ್ನು ಸೊತ್ತುಗಳನ್ನು ಮತ್ತು ಮಾದರಿ ಸೀಸೆಗಳನ್ನು ಅಬಕಾರಿ ಉಪ ನಿರೀಕ್ಷಕರು, ಗುರುಪುರ ಉಪ ವಲಯ ಇವರಿಗೆ ಹಸ್ತಾಂತರಿಸಿರುತ್ತಾರೆ.

ಶ್ರೀ ಟಿ.ಕೃಷ್ಣಮೂರ್ತಿ, ಬಿನ್ ಹೆಚ್.ಕೆ. ತಿಮ್ಮರಾಯಶೆಟ್ಟಿ, ನಂ:54, ಟಿಂಬರ್‌ಯಾರ್ಡ್ ಲೇಔಟ್, ಮೈಸೂರು ರಸ್ತೆ, ಬೆಂಗಳೂರು-26 ಇವರ ಜಿ.ಪಿ.ಎ ಹೋಲ್ಡರ್ ಶ್ರೀ ಬಿ.ಕೆ. ದೇವಾನಂದ ಬಿನ್ ಎಲ್.ಕೆ.ನಾಯ್ಕ್, ನಂ.54, ಟಿಂಬರ್‌ಯಾರ್ಡ್ ಲೇಔಟ್, ಮೈಸೂರು ರಸ್ತೆ, ಬೆಂಗಳೂರು-26 ಇವರು ತಮ್ಮ ವಕೀಲರ ಮುಖಾಂತರ ದಿ:4-7-1997ರಂದು ಈ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಲಾರಿ ಟ್ಯಾಂಕರ್ ಸಂ: KA-05A-669ನ್ನು ಮಧ್ಯಂತರ ಬಿಡುಗಡೆಗೆ ಕೋರಿದ್ದು, ಈ ಪ್ರಾಧಿಕಾರವು ಅರ್ಜಿದಾರರ ಮಧ್ಯಂತರ ಬಿಡುಗಡೆಯ ಅರ್ಜಿಯನ್ನು ಪುರಸ್ಕರಿಸಿ ಅಧಿಕೃತ ಅಧಿಕಾರಿ ಹಾಗೂ ಅಬಕಾರಿ ಅಧೀಕ್ಷಕರು, ದ.ಕ.ಜಿಲ್ಲೆ ಮಂಗಳೂರು ಇವರ ಆದೇಶ ಸಂ: ಎಸ್ ಡಿಕೆ:1393:ಡಿಟಿಸಿಆರ್:1996-97 ದಿ:8.10.1997ರ ಆದೇಶದಲ್ಲಿ ರೂ.1,00,000/- ಬ್ಯಾಂಕ್ ಗ್ಯಾರೆಂಟಿ ಮತ್ತು ರೂ.2,50,000/- ಮೊತ್ತದ ಇಂಡೆಮಿನ್ನಿಟಿ ಬಾಂಡನ್ನು ಭದ್ರತೆಯಾಗಿ ಪ್ರಾಧಿಕಾರಕ್ಕೆ ಒದಗಿಸುವ ಷರತ್ತಿಗೆ ಅನುಗುಣವಾಗಿ ಸದ್ರಿ ಟ್ಯಾಂಕರನ್ನು ವಾಹನದ ಮಾಲೀಕರಿಗೆ ತಾತ್ಕಾಲಿಕ ನೆಲೆಯಲ್ಲಿ ಮಧ್ಯಂತರ ಸುಪರ್ಧಿಗೆ ಬಿಡುಗಡೆ ಮಾಡಿ ಆದೇಶ ನೀಡಿರುತ್ತದೆ.

ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿದ್ದ ಮದ್ಯಸಾರದ ಮಾದರಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿದ್ದು, ಮದ್ಯಸಾರದ ಪ್ರಮಾಣ 94.76% ಇರುವುದೆಂದು ದೃಢಪಡಿಸಿ ಮದ್ಯಸಾರವು ಮಾನವ ಸೇವೆಗೆ ಯೋಗ್ಯವಾಗಿರುವುದರಿಂದ ಜಪ್ತು ಪಡಿಸಲಾಗಿರುವ 10,000 ಲೀ ಮದ್ಯಸಾರವನ್ನು (ಮಾದರಿಗಳನ್ನು ಹೊರತುಪಡಿಸಿ) ಈ ಪ್ರಾಧಿಕಾರದ ಅದೇಶ ಸಮ ಸಂಖ್ಯೆ ದಿ:30.7.1997ರಂದು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಮುಟ್ಟುಗೋಲು ಹಾಕಿಕೊಳ್ಳಲಾದ ಮದ್ಯಸಾರವನ್ನು ಮೆ:ಮೈಶುಗರ್ ಸಾರಾಯಿ ಸಂಸ್ಕರಣಾ ಘಟಕ, ಪಡೀಲ್, ಮಂಗಳೂರು ಇವರಿಗೆ ಹಂಚಿಕೆ ಮಾಡಿ ಅವರಿಂದ ರೂ.1,38,637.20 ವನ್ನು ಸರ್ಕಾರಕ್ಕೆ ಜಮೆ ಮಾಡಿರುವ ಬಗ್ಗೆ ಪ್ರಾಧಿಕಾರಕ್ಕೆ ವರದಿ ಮಾಡಲಾಗಿರುವ ದಾಖಲೆ ಲಭ್ಯವಾಗಿದೆ.

ಟ್ಯಾಂಕರಿನ ನೊಂದಾಣಿ ಮಾಲೀಕರಾದ ಶ್ರೀ ಟಿ. ಕೃಷ್ಣಮೂರ್ತಿ, ಬಿನ್ ಹೆಚ್.ಕೆ. ತಿಮ್ಮರಾಯಶೆಟ್ಟಿ, ನಂ:54, ಟಿಂಬರ್‌ಯಾರ್ಡ್ ಲೇಔಟ್, ಮೈಸೂರು ರಸ್ತೆ, ಬೆಂಗಳೂರು-26 ಇವರ ಜಿ.ಪಿ.ಎ ಹೋಲ್ಡರ್ ಶ್ರೀ ಬಿ.ಕೆ. ದೇವಾನಂದ ಬಿನ್ ಎಲ್.ಕೆ.ನಾಯ್ಕ್, ನಂ.54, ಟಿಂಬರ್‌ಯಾರ್ಡ್ ಲೇಔಟ್, ಮೈಸೂರು ರಸ್ತೆ, ಬೆಂಗಳೂರು-26 ಇವರಿಗೆ ಹಾಗೂ ಇವರ ಪರ ವಕೀಲರಿಗೆ ಈ ಪ್ರಾಧಿಕಾರವು ದಿ:18.8.1997 ರಂದು ಕಾರಣ ಕೇಳಿ ನೋಟಿಸುಗಳನ್ನು ನೀಡಲಾಗಿದ್ದು, ಸದ್ರಿ ನೋಟಿಸು ವಾಹನದ ಮಾಲೀಕರಿಗೆ ದಿ:26.8.1997ರಂದು ಜ್ಯಾರಿಯಾಗಿದ್ದು, ಜಾರಿ ಮಾಡಿದ ಸ್ವೀಕೃತ ಪತ್ರವು ಈ ಪ್ರಾಧಿಕಾರಕ್ಕೆ ಬಂದಿರುತ್ತದೆ.

ಶ್ರೀ ಟಿ. ಕೃಷ್ಣಮೂರ್ತಿ, ಬಿನ್ ಹೆಚ್.ಕೆ. ತಿಮ್ಮರಾಯಶೆಟ್ಟಿ, ನಂ:54, ಟಿಂಬರ್‌ಯಾರ್ಡ್ ಲೇಔಟ್, ಮೈಸೂರು ರಸ್ತೆ, ಬೆಂಗಳೂರು-26 ಇವರು ದಿ:5-8-1999ರಂದು ನಿಧನ ಹೊಂದಿರುತ್ತಾರೆಂದು ಅವರ ಪರ ವಕೀಲರು ತಿಳಿಸಿರುತ್ತಾರೆ.

ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾಧಾಂಶಗಳು ಉದ್ಭವಿಸುತ್ತದೆ.

1) **<u>ಮೊದಲನೇ ವಿವಾದಾಂಶ</u>:** ದಿನಾಂಕ:23-6-1997 ರಂದು ಟ್ಯಾಂಕರ್ ಲಾರಿ ಸಂ:KA-05A-669 ರಲ್ಲಿ ವಾಹನದ ಮಾಲೀಕರ ತಿಳಿವಳಿಕೆಯಿಂದಲೇ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) ಎರಡನೇ ವಿವಾಧಾಂಶ: ಸದ್ರಿ ವಾಹನದಲ್ಲಿ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನದ ಮಾಲೀಕರಿಗೆ ಅರಿವಿಲ್ಲದೆಂತೆ ಮತ್ತು ಅವರು ಶಾಮೀಲಾಗದೇ ನಡೆದಿದೆ ಹಾಗೂ ಇದರ ಬಗ್ಗ ಅವರು ಸಾಕಷ್ಟು ಮುಂಜಾಗ್ರತಾ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಅರೋಪಿ ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) **ಮೂರನೇ ವಿವಾದಾಂಶ:** ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ? ಅಥವಾ ಇಲ್ಲವೇ?

ಮೊದಲನೇ ವಿವಾಧಾಂಶಕ್ಕೆ ಉತ್ತರ – ನಕರತ್ಮಾಕವಾಗಿದೆ

ಪ್ರಾಸ್ಯಿಕ್ಯೂಶನ್ ಪರ ಪ್ರಕರಣದ ತನಿಖಾಧಿಕಾರಿಯಾದ ಶ್ರೀ ಎಂ.ಸಂಜೀವ ಗೌಡ, ನಿವೃತ್ತ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರು ದಿ:6-8-2008ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಎ.ಡಿ.ಪಿಯವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು ದಿ:9.7.1997 ರಂದು ಗುರುಪುರ ಉಪ ವಲಯದಲ್ಲಿ ಪ್ರಭಾರ ಅಬಕಾರಿ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು. ಸದ್ರಿ ದಿನ ಈ ತಕ್ಷೀರಿಗೆ ಸಂಬಂಧಪಟ್ಟ ದಾಖಲೆ ಪತ್ರಗಳನ್ನು ಹಾಗೂ ಮಾದರಿ ಸೀಸೆಗಳನ್ನು ಪೊಲೀಸ್ ಉಪ ನಿರೀಕ್ಷಕರು, ಬಜ್ಪೆ ಪೊಲೀಸ್ ಠಾಣೆ ರವರಿಂದ ಸ್ವೀಕರಿಸಿರುತ್ತೇನೆ. ದಿ:10-7-1997 ರಂದು ಕೋರಿಕೆ ಪತ್ರದೊಂದಿಗೆ 3 ಮಾದರಿ ಸೀಸೆಗಳನ್ನು ಮಂಗಳೂರು ವಲಯದ ರಾಸಾಯನಿಕ ವಿಶ್ಲೇಷಕರಲ್ಲಿ ವಿಶ್ಲೇಷಣೆಗಾಗಿ ಕಳುಹಿಸಿರುತ್ತೇನೆ. ದಿ:25-7-1997ರಂದು ರಾಸಾಯನಿಕ ವಿಶ್ಲೇಷಣಾ ವರದಿ ಬಂದ ಮೇಲೆ ಅದೇ ದಿನ ಈ ತಕ್ಷೀರಿನ ತನಿಖಾ ವರದಿಯನ್ನು ಮುಂದಿನ ನಡವಳಿ ಬಗ್ಗೆ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಿದ್ದು, ದಿ:31-7-1997ರಂದು ಈ ತಕ್ಷೀರಿನಲ್ಲಿ ಜಪ್ತು ಮಾಡಲ್ಪಟ್ಟ KA-05A-669 ಲಾರಿ ಟ್ಯಾಂಕರ್ ಹಾಗೂ ಮದ್ಯಸಾರವನ್ನು ಬಜ್ಪೆ ಠಾಣಾ ಹೆಚ್.ಸಿ -1233 ಶ್ರೀ ಮುತ್ತಪ್ಪ ಇವರು ಕಛೇರಿಯಲ್ಲಿ ಹಾಜರುಪಡಿಸಿರುತ್ತಾರೆ. ಸದ್ರಿ ಟ್ಯಾಂಕರ್ ಮತ್ತು ಮದ್ಯಸಾರವನ್ನು ಮಂಗಳೂರಿನ ಮರೋಳಿಯಲ್ಲಿರುವ ಕೆನರಾ ವರ್ಕ್ ಶಾಪ್‌ನ ತೂಕದ ಯಂತ್ರದಲ್ಲಿ ತೂಗಿನೋಡಲಾಗಿ 14,050 ಕಿ.ಲೋ ಗ್ರಾಂ ಇತ್ತು ನಂತರ ಸದ್ರಿ ಟ್ಯಾಂಕರನ್ನು ಮದ್ಯಸಾರ ಸಮೇತ ಮಂಗಳೂರಿನ ಪಡೀಲ್ ನಲ್ಲಿರುವ ಸಾರಾಯಿ ಸಂಸ್ಕರಣಾ ಘಟಕಕ್ಕೆ ಕೊಂಡು ಹೋಗಿ ಟ್ಯಾಂಕರಿನಲ್ಲಿದ್ದ ಮದ್ಯಸಾರವನ್ನು ಸದ್ರಿ ಘಟಕಕ್ಕೆ ಮೇಲ್ವಿಚಾರಕರಾದ ಶ್ರೀ.ಗೋವಿಂದಪ್ಪ ಹಾಗೂ ಅಬಕಾರಿ ನಿರೀಕ್ಷಕರಾದ ಶ್ರೀ ಪಿ.ಕೆ.ಯಶೋಧರ ಇವರ ಸಮಕ್ಷಮ ಟ್ಯಾಂಕರಿನಿಂದ ಸಾರಾಯಿ ಘಟಕದ ಶೇಖರಣಾ ವಾಟಿಗೆ ವರ್ಗಾವಣೆ ಮಾಡಲಾಯಿತು ನಂತರ ಖಾಲಿ ಮಾಡಲ್ಪಟ್ಟ ಸದ್ರಿ ಟ್ಯಾಂಕರನ್ನು ಈ ಮೊದಲೇ ಹೇಳಿರುವ ಮರೋಳಿಯಲ್ಲಿರುವ ಮಂಗಳೂರಿನ ಕೆನರಾ ವರ್ಕ್ಸ್ ಶಾಪಿಗೆ ಕೊಂಡು ಹೋಗಿ ತೂಕಮಾಡಿದಾಗ 6880 ಕಿ.ಗ್ರಾಂ ಭಾರ ಇತ್ತು. ಇದರಿಂದ ಲಾರಿ ಟ್ಯಾಂಕರಿನಲ್ಲಿದ್ದ ಮದ್ಯಸಾರದ ತೂಕ 7170 ಕಿ.ಗ್ರಾಂ ಎಂದು ತಿಳಿದು ಬಂದಿರುತ್ತದೆ. 1 ಕಿ.ಗ್ರಾಂ ತೂಕಕ್ಕೆ 1.250 ಲೀಟರ್ ಮದ್ಯಸಾರದಂತೆ ಲೆಕ್ಕಚಾರ ಮಾಡಲಾಗಿ ಸದ್ರಿ ಟ್ಯಾಂಕರ್ ನಲ್ಲಿ ಇದ್ದದ್ದು ಒಟ್ಟು 8962.500 ಲೀಟರು ಮದ್ಯಸಾರ ಎಂದು ತಿಳಿಯಲಾಯಿತು. ನಂತರ ಸದ್ರಿ ಮದ್ಯಸಾರವನ್ನು ಸಾರಾಯಿ ಸಂಸ್ಕರಣಾ ಘಟಕಕ್ಕೆ ಹಸ್ತಾಂತರಿಸಿ, ಇದರ ಬಗ್ಗೆ ಮಹಜರು ತಯಾರಿಸಲಾಯಿತು. ನಂತರ ಖಾಲಿಯಿಂದ ಸದ್ರಿ ಲಾರಿ ಟ್ಯಾಂಕರನ್ನು ಮೇಲಾಧಿಕಾರಿಗಳ ಮೌಖಿಕ ಅನುಮತಿ ಪಡೆದು ಉಳ್ಳಾಲ ಉಪವಿಭಾಗದ ವ್ಯಾಪ್ತಿಯೊಳಗೆ ಬರುವ ನೇತ್ರಾವತಿ ಡಿಸ್ಟಿಲರಿ ಸನ್ನದಿನ ಆವರಣಕ್ಕೆ ತೆಗೆದುಕೊಂಡು ಹೋಗಿ ಭದ್ರತೆ ಬಗ್ಗೆ ಸದ್ರಿ ಡಿಸ್ಟಿಲರಿ ಆವರಣದಲ್ಲಿ ಟ್ಯಾಂಕರನ್ನು ನಿಲ್ಲಿಸಿ ಮೇಲಾಧಿಕಾರಿಗಳಿಗೆ ದಿ:04-08-97ರಂದು ವರದಿಯನ್ನು ಸಲ್ಲಿಸಿರುತ್ತೇನೆ. ಸದ್ರಿ ವಾಹನದ ಮಾಲಿಕತ್ವದ ಬಗ್ಗೆ ದ.ಕ.ಜಿಲ್ಲಾ ಅಧಿಕೃತ ಅಧಿಕಾರಿ ಹಾಗೂ ಅಬಕಾರಿ ಅಧೀಕ್ಷಕರಿಗೆ ದಿ:7-8-1997ರಂದು ವರದಿ ಸಲ್ಲಿಸಿ ಮಾಲಿಕರ ಸರಿಯಾದ ವಿಳಾಸ ಪಡೆದು ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

ಪ್ರಕರಣದ ಫಿರ್ಯಾದುದಾರರಾದ ಶ್ರೀ.ವಿನಯ ಎ.ಗಾವಂಕರ್ ಇವರು ತಕ್ಷೀರು ದಾಖಲಿಸಿದ ಪೊಲೀಸ್ ಉಪ ನಿರೀಕ್ಷಕರು, ಬಜಪೆ ಪೊಲೀಸ್ ಠಾಣೆ, ಬಜಪೆ ಇವರಿಗೆ ಸಾಕ್ಷಿ ವಿಚಾರಣೆಗಾಗಿ ದಿನಾಂಕ:6.11.97, 4.12.97, 12-2-98, 19-2-98, 12-3-98, 16-4-98, 14-5-98, 1-6-98, 30-7-98, 20-9-98, 8-10-98, 20-5-99,6-8-99, 6-9-99, 2-4-06, 11-1-07, 16-3-07, 10-5-07, 29-6-07, 7-9-07, 4-10-07, 28-11-07, 16-1-08, 12-3-08, 16-4-08 ಮತ್ತು 11-6-08ರಂತೆ ಸುಮಾರು 26 ಬಾರಿ ನೋಟಿಸುಗಳನ್ನು ನೀಡಲಾಗಿದ್ದರೂ, ಸಾಕ್ಷಿದಾರರು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಮೊಕದ್ದಮೆ ದಾಖಲಿಸಿ, ಸೊತ್ತು ಹಾಗೂ ವಾಹನವನ್ನು ಜಪ್ತು ಪಡಿಸಿಕೊಂಡಿರುವ ಬಗ್ಗೆ ಸಾಕ್ಷಿ ನೀಡಲು ವಿಫಲರಾಗಿರುತ್ತಾರೆ.

ಪ್ರಕರಣದ ಮುಖ್ಯ ವಿಚಾರಣೆ ಯಾದ ತಕ್ಷಿರಿಗೆ ಸಂಬಂಧಿಸಿ ದಾಖಲಿಸಿದ ಫಿರ್ಯಾದುದಾರರು ಹಾಗೂ ಇತರ ಸಾಕ್ಷಿದಾರರು ಹಾಜರಿಲ್ಲದ ಪ್ರಯುಕ್ತ ಪ್ರಕರಣದ ಏಕೈಕ ತನಿಖಾದಿಕಾರಿಯಾಗಿರುವ ಶ್ರೀ ಸಂಜೀವ ಗೌಡ ನಿವೃತ್ತ ಅಬಕಾರಿ ನಿರೀಕ್ಷಕರು ಇವರ ಸಾಕ್ಷಿಯನ್ನು ಪಡೆದು ದಿ:6-8-2008ರಂದು ಪ್ರಕರಣದ ವಿಚಾರಣೆಯನ್ನು ಮುಕ್ತಾಯಗೊಳಿಸಬೇಕಾದ ಅನಿವಾರ್ಯತೆಯಿಂದಾಗಿ ಹೇಳಿಕೆ ವಿಚಾರಣೆಯನ್ನು ಮುಕ್ತಾಯಗೊಳಿಸಲಾಗಿದೆ.

ಈ ಕಾರಣದಿಂದ ಈ ಪ್ರಕರಣದಲ್ಲಿ ವಶಪಡಿಸಿಕೊಂಡ ವಾಹನ ಮಾಲೀಕರು ತಿಳುವಳಿಕೆಯಿಂದಲೇ ಈ ಕೃತ್ಯಕ್ಕೆ ವಾಹನ ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ಸಾಬೀತುಪಡಿಸಲು ಪ್ರಾಸಿಕ್ಯೂಶನ್ ವತಿಯಿಂದ ಸಾಬೀತುಪಡಿಸಲು ಸಾಧ್ಯವಾಗಿಲ್ಲ. ಪ್ರಕರಣದ ಇತರ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ಪ್ರಥಮ ವರ್ತಮಾನ ವರದಿಯಲ್ಲಿ ತಿಳಿಸಿದಂತೆ ಕರ್ನಾಟಕ ಅಬಕಾರಿ ಕಾನೂನು ಅಡಿಯಲ್ಲಿ ಅಪರಾಧ ಎಸಗಿದ ಬಗ್ಗೆ ಸಾಕಷ್ಟು ಸಾಕ್ಷಾದಾರಗಳು ಲಭ್ಯವಿಲ್ಲವೆಂಬ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ. ಹಾಗೂ ವಾಹನದಲ್ಲಿ ಆರ್.ಸಿ. ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಯಾಗಿದೆ ಎಂಬ ಅಂಶವನ್ನು ಸಾಬೀತುಪಡಿಸಲು ಮೊಕದ್ದಮೆ ಪತ್ತೆಮಾಡಿ ಸೊತ್ತುಗಳನ್ನು ವಶಪಡಿಸಿಕೊಂಡಿರುವ ಪ್ರಥಮ ಸಾಕ್ಷಿ ಪೊಲೀಸ್ ಉಪ ನಿರೀಕ್ಷಕರು, ಬಜಪೆ ಪೊಲೀಸ್ ಠಾಣೆ ಇವರು ವಿಚಾರಣೆಗೆ ಹಾಜರಾಗದೇ ಸಾಕ್ಷಿ ಹೇಳಿಕೆ ನೀಡದಿರುವ ಕಾರಣ, ಈ ಅಂಶವನ್ನು ಸಾಬೀತು ಮಾಡಲು ಪ್ರಾಸಿಕ್ಯೂಶನ್ ರವರು ವಿಫಲರಾಗಿರುತ್ತಾರೆ.

ಎರಡನೇ ವಿವಾಧಾಂಶಕ್ಕೆ ಉತ್ತರ (ಸಕರಾತ್ಮಕವಾಗಿ)

ಮೊದಲನೇಯ ವಿವಾಧಾಂಶಕ್ಕೆ ಪಡೆದ ಉತ್ತರದಲ್ಲಿ ಪ್ರಕರಣದಲ್ಲಿ ಜಪ್ತು ಮಾಡಲ್ಪಟ್ಟ ವಾಹನದಲ್ಲಿ ಮದ್ಯಸಾರ ಸಾಗಾಣಿಕೆಯಾಗಿದೆಯೇ ಎಂಬುದನ್ನು ಸಾಬೀತುಪಡಿಸಲು ಪ್ರಾಸಿಕ್ಯೂಶನ್ ವಿಫಲರಾಗಿರುವುದರಿಂದ ಸದ್ರಿ ವಾಹನದ ಮಾಲೀಕ ವಾಹನವನ್ನು ತನ್ನ ಸುಪರ್ದಿಗೆ ತಾತ್ಕಾಲಿಕ ನೆಲೆಯಲ್ಲಿ ಪಡೆದು ಈ ಪ್ರಾಧಿಕಾರಕ್ಕೆ ಒಪ್ಪಿಸಿರುವ ದಿ:4-7-2007ರ ಮನವಿಯಲ್ಲಿ ಕಂಡಿಕೆ 4ರಲ್ಲಿ ತಿಳಿಸಿರುವ ಅಂಶದಂತೆ, ವಾಹನದ ಮಾಲೀಕರು ,ವಾಹನವನ್ನು ಬಾಡಿಗೆ ಉದ್ಯಮಕ್ಕೆ ಉಪಯೋಗಿಸಿರುವ ವಾಹನವಾಗಿದ್ದು, ತನ್ನ ಚಾಲಕನು ಯಾವುದೇ ಅಕ್ರಮ ಸೊತ್ತುಗಳ ಸಾಗಾಣಿಕೆಗೆ ಬಳಕೆ ಮಾಡಬಾರದಾಗಿ ಸೂಚಿಸಿರುವ ಅಂಶವನ್ನು, ಈ ಪ್ರಾಧಿಕಾರದಲ್ಲಿ ಪರಿಗಣಿಸಿ ವಾಹನವನ್ನು ಮಧ್ಯಂತರ ಬಿಡುಗಡೆಗೆ ಆದೇಶಿಸಿರುವುದರಿಂದ ಆರ್.ಸಿ. ಮಾಲೀಕರ ತಿಳಿವಳಿಕೆಯಿಂದಲೇ ವಾಹನವನ್ನು ಅಕ್ರಮ ಸಾಗಾಣಿಕೆಗೆ ಉಪಯೋಗಿಸಲಾಗಿದೆ ಎಂಬುದು ಸಾಬೀತಾಗದಿರುವುದರಿಂದ ಎರಡನೇ ವಿವಾಧಾಂಶಕ್ಕೆ ಉತ್ತರ ಸಕರಾತ್ಮಕವಾಗಿದೆ.

ಮೂರನೇ ವಿವಾಧಾಂಶಕ್ಕೆ ಆದೇಶದಂತೆ

ಮೊದಲನೇ ಹಾಗೂ ಎರಡನೇ ವಿವಾಧಾಂಶದಿಂದ ಪಡೆದ ಉತ್ತರದಿಂದ ಪ್ರಕರಣದಲ್ಲಿ ಜಪ್ತು ಮಾಡಲ್ಪಟ್ಟ ವಾಹನವು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ವಿಚಾರಣೆ ಸಂದರ್ಭ ಲಭ್ಯವಿರುವ ಸಾಕ್ಷಿಗಳ ಹೇಳಿಕೆ ಹಾಗೂ ದಾಖಲೆಗಳ ಸಾಕ್ಷದಾರಗಳು ಯೋಗ್ಯವಾಗಿ ಕಾಣಬರುವುದಿಲ್ಲ. ಹಾಗೂ ಈ ಕೆಳಕಂಡ ಕಾರಣಗಳಿಂದ ಪ್ರಕರಣದ ಮುಂದಿನ ವಿಚಾರಣೆ ಅನುಪಯುಕ್ತ ಹಾಗೂ ಅನಾವಶ್ಯ ವಿಳಂಬಕ್ಕೆ ಅಸ್ಪದವಾಗಿರುವುದರಿಂದ, ವಿಚಾರಣೆಯನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

1) ಪ್ರಕರಣಕ್ಕೆ ಸಂಬಂಧಿಸಿ ವಶಪಡಿಸಿಕೊಳ್ಳಲಾಗಿರುವ ವಾಹನ ಸಂ:KA-05-A-669 ನ್ನು ದಿ:8-10-1997ರ ಮದ್ಯಂತರ ಬಿಡುಗಡೆ ಆದೇಶಗಳ ಷರತ್ತುಗಳನುಸಾರ ಈ ಹಿಂದೆ ಯಾವುದೇ ಸಂದರ್ಭದಲ್ಲಿ ಪ್ರಾಧಿಕಾರದ ಮುಂದೆ ಹಾಜರುಪಡಿಸಲು ಕ್ರಮ ಜರುಗಿಸಲಾಗಿರುವುದಿಲ್ಲ.

2) ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43 ಬಿ ರೀತ್ಯಾ ಪ್ರಾಧಿಕಾರದಿಂದ ಕಾರಣ ಕೇಳಿ ನೋಟಿಸನ್ನು ದಿ:18-8-1997ರಂತೆ ನೀಡಲಾಗಿದ್ದು, ಅರ್.ಸಿ. ಮಾಲೀಕರು ಸದ್ರಿ ನೋಟಿಸಿಗೆ ದಿ:6-10-1997 ರಂದು ಉತ್ತರ ಸಲ್ಲಿಸಲಾಗಿಯೂ, ಪ್ರಾಧಿಕಾರದಿಂದ ಮುಟ್ಟುಗೋಲು ನಡವಳಿಗಳನ್ನು ಹೊರಡಿಸದಿರುವ ಬಗ್ಗೆ ,ಕಡತದಲ್ಲಿ ಯಾವುದೇ ಸಮಂಜಸ ಕಾರಣಗಳು ಲಭ್ಯವಿರುವುದಿಲ್ಲ.

3) ಮೊಕದ್ದಮೆಗೆ ಸಂಬಂಧಿಸಿರುವ ವಾಹನದ ಮದ್ಯಂತರ ಬಿಡುಗಡೆ ಸಂದರ್ಭದಲ್ಲಿ ಪ್ರಾಧಿಕಾರಕ್ಕೆ ಒಪ್ಪಿಸಿರುವ ರೂ.1,00,000/- ಮೊತ್ತದ ಬ್ಯಾಂಕ್ ಶಾಖೆಯ ಭದ್ರತೆ ಪತ್ರದ ಅರ್ಹ ಮಿತಿಯನ್ನು ದಿ:26-9-1999 ನಂತರ ಮುಂದುವರಿಸಲು ಯಾವುದೇ ಕ್ರಮ ಅನುಸರಿಸದೇ ಭದ್ರತೆ ವಾಯಿದೆ ಮುಕ್ತಾಯಗೊಂಡಿರುತ್ತದೆ.

4) ಮೊಕದ್ದಮೆಗೆ ಸಂಬಂಧಿಸಿ ವಶಪಡಿಸಿಕೊಳ್ಳಲಾಗಿರುವ ಅಕ್ರಮ ಮದ್ಯಸಾರವನ್ನು ಈ ಪ್ರಾಧಿಕಾರದ ಮುಟ್ಟುಗೋಲು ಆದೇಶ ಸಂ:ಎಸ್‌ಡಿಕೆ/ಡಿಟಿಸಿಆರ್/1393/96-97 ದಿ:30-7-1997ರಂತೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದ್ದ ಅದರ ಮೌಲ್ಯವನ್ನು ಸರ್ಕಾರಕ್ಕೆ ಪಾವತಿಯಾಗಿರುವ ಬಗ್ಗೆ ದಾಖಲು ಲಭ್ಯವಿದೆ.

5) ಆರ್.ಸಿ. ಮಾಲೀಕರು ಮೊಕದ್ದಮೆ ದಾಖಲಾದ ನಂತರ ವಾಹನವನ್ನು ಮದ್ಯಂತರ ಬಿಡುಗಡೆ ಹೊಂದಿದ್ದು, ನಂತರ ವಿಚಾರಣೆ ಹಂತದಲ್ಲಿ ಮರಣ ಹೊಂದಿದ್ದು ವಾಹನವು ಯಾರ ವಶದಲ್ಲಿದೆ ಎಂಬುದು ಇಲ್ಲಿಯವರೆಗೆ ತಿಳಿಯಲಾಗಿಲ್ಲ.

6) ಈ ಪ್ರಾಧಿಕಾರದಿಂದ ಈ ಹಿಂದೆ 26ಬಾರಿ ಹಾಜರಾಗಲು ಅಭಿಯೋಜನ ಪರ ಸಾಕ್ಷಿದಾರರಿಗೆ ಹಾಗೂ ಮುಖ್ಯ ಸಾಕ್ಷಿದಾರರಿಗೆ ವಿಚಾರಣೆಗಳಿಗೆ ಹಾಜರಾಗಲು ಹಾಜರಾತಿ ನೋಟಿಸು ನೀಡಲಾಗಿದ್ದು ಯಾವುದೇ ಸಂದರ್ಭದಲ್ಲಿ ವಿಚಾರಣಾ ದಿನಾಂಕದಂದು ಈ ಪ್ರಾಧಿಕಾರದ ಮುಂದೆ ಹಾಜರಾಗದೇ ಇರುವುದು.

7) ಫಿರ್ಯಾದುದಾರರು ಪ್ರಕರಣಕ್ಕೆ ಸಂಬಂಧಿಸಿ ವಾಹನವನ್ನು ತಪಾಸಣೆ ಮಾಡುವ ಮೊದಲು ಮಾನ್ಯ ನ್ಯಾಯಾಲಯದಿಂದ ಸರ್ಚ್ ವಾರಂಟ್ ಪಡೆಯಬೇಕಾಗಿದ್ದು ಅಥವಾ ಸರ್ಚ್ ವಾರಂಟ್ ಪಡೆಯಲು ಕಾಲಾವಕಾಶಯಿಲ್ಲದ ಪ್ರಯುಕ್ತ ಸರ್ಚ್ ಮೆಮೊವನ್ನು ತಯಾರಿಸಿರುವುದಿಲ್ಲ ಹಾಗೂ ಮಾನ್ಯ ಸತ್ರ ನ್ಯಾಯಾಲಯ, ದ.ಕ.ಜಿಲ್ಲೆ, ಮಂಗಳೂರು ಇವರ ಕ್ರಿಮಿನಲ್ ಅಪೀಲ್ ಸಂ:63/2003 ದಿ:19-1-2004 ಮತ್ತು ಮಾನ್ಯ ಉಚ್ಚ ನ್ಯಾಯಾಲಯ, ಕರ್ನಾಟಕ, ಬೆಂಗಳೂರು ಇವರ ಕ್ರಿಮಿನಲ್ ರಿವಿಷನ್ ಪಿಟಿಷನ್ ಸಂ:802/2004 ದಿ:1-8-2007ರ ಆದೇಶದಲ್ಲಿ ಅಬಕಾರಿ ಕಾಯಿದೆಯನ್ವಯ ವಾಹನವನ್ನು ಶೋಧನೆ ಮಾಡುವ ಮೊದಲು ಮಾನ್ಯ ನ್ಯಾಯಾಲಯದಿಂದ ಸರ್ಚ್ ವಾರಂಟ್ ಪಡೆಯಬೇಕು ಅಥವಾ ಸರ್ಚ್ ವಾರೆಂಟ್ ಪಡೆಯಲು ಕಾಲಾವಕಾಶ ಇಲ್ಲದ ಕಾರಣ ಸರ್ಚ್ ಮೆಮೊವನ್ನು ತಯಾರಿಸಿ ಮಹಜರಿನಲ್ಲಿ ನಮೂದಿಸಿರಬೇಕು ಎಂಬ ಕಾರಣಕ್ಕೆ ಅಂದಿನ ಪ್ರಾಧಿಕಾರವು ನೀಡಿದ ಆದೇಶವನ್ನು ತಳ್ಳಿ ಹಾಕಿ ವಾಹನವನ್ನು ಅರ್ಜಿದಾರರ ವಶಕ್ಕೆ ಬಿಡುಗಡೆಗೊಳಿಸಬೇಕೆಂದು ತೀರ್ಪು ನೀಡಿರುತ್ತಾರೆ. ಈ ಪ್ರಕರಣದಲ್ಲಿ ಫಿರ್ಯಾದುದಾರರು ದಿ:23-6-1997 ರಂದು ಮಧ್ಯಾಹ್ನ 2-30 ಗಂಟೆಗೆ ವಾಹನ ಸಂಖ್ಯೆ: KA-05-A-669 ನ್ನು ಶೋಧಿಸಿದ ಸಂದರ್ಭದಲ್ಲಿ ಶೋಧನಾ ವಾರಂಟ್ ಪಡೆಯದಿದ್ದು, ರೆಕಾರ್ಡ್ಸ್ ಆಫ್ ರೀಜನ್ಸ್ ಮೆಮೊವನ್ನು ಸಹಾ ನ್ಯಾಯಾಲಯಕ್ಕೆ ಒಪ್ಪಿಸದಿರುವ ಕಾರಣ ಮೇಲಿನ ಘನ ಉಚ್ಚ ನ್ಯಾಯಾಲಯದ ತೀರ್ಪನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿರುತ್ತದೆ.

ಅಭಿಯೋಜಕ ಸಾಕ್ಷಿ ವಿಚಾರಣೆಯ ಬಗ್ಗೆ ಫಿರ್ಯಾದುದಾರರಿಗೆ ಈ ಪ್ರಾಧಿಕಾರದಿಂದ ಹಲವಾರು ಬಾರಿ ಹಾಜರಾತಿ ನೋಟೀಸುಗಳನ್ನು ನೀಡಲಾಗಿಯೂ ಈ ಪ್ರಾಧಿಕಾರದ ಮುಂದೆ ಸಾಕ್ಷಿ ನುಡಿಯಲು ವಿಫಲರಾಗಿರುತ್ತಾರೆ. ಪ್ರಕರಣ ದಾಖಲಿಸಿರುವ ಮುಖ್ಯ ಸಾಕ್ಷಿ ಮತ್ತು ಮಹಜರು ಸಾಕ್ಷಿದಾರರು ನ್ಯಾಯಾಲಯದ ಮುಂದೆ ಹಾಜರಾಗಿ ಅಪರಾಧವನ್ನು ಸಾಬೀತುಪಡಿಸುವ ಬಗ್ಗೆ ಅಭಿಯೋಜಕ ಸಾಕ್ಷಿ ನೀಡಲು ವಿಫಲರಾಗಿರುವುದರಿಂದ, ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಿಸಿದ ಅಪರಾಧಕ್ಕೆ ಸಂಬಂಧಿಸಿ ಸಾಕ್ಷ್ಯಾಧಾರಗಳು ಇಲ್ಲದಿರುವುದರಿಂದ ಪ್ರಾಸಿಕ್ಯೂಶನ್ ಆರೋಪವನ್ನು ಸಾಬೀತುಪಡಿಸಲು ವಿಫಲರಾಗಿರುತ್ತಾರೆ.

ರಕ್ಷಣಾ ಸಾಕ್ಷಿ ವಿಚಾರಣೆ ಅಂಶಗಳನ್ನು ಹಾಗೂ ಘನ ಉಚ್ಚ ನ್ಯಾಯಾಲಯದ CRP-808/2004 ರ ದಿ:1-8-2007ರ ತೀರ್ಪು ಆದೇಶವನ್ನು ಗಣನೆಗೆ ತೆಗೆದುಕೊಂಡಾಗಿ ಮೂರನೇ ವಿವಾದಾಂಶಕ್ಕೆ ನಕರಾತ್ಮಕವಾಗಿ ಉತ್ತರಿಸಲಾಗಿದೆ. ಆದುದರಿಂದ ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್ ಡಿಕೆ:1393:ಡಿಟಿಸಿಆರ್:97-98, ದಿ:30ನೇ ಮಾರ್ಚ್, 2008

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಅಧಿ ನಿಯಮ 1965 ಕಲಂ 43(ಎ)ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ)ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿದ ಮೊಕದ್ದಮೆಗೆ ಸಂಬಂಧಿಸಿರುವ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಮೇಲೆ ತಿಳಿಸಿರುವ ಅಂಶಗಳ ಕಾರಣಗಳನ್ನು ಗಣನೆಗೆ ತೆಗೆದುಕೊಂಡು ಪೊಲೀಸ್ ಉಪ ನಿರೀಕ್ಷಕರು, ಬಜಪೆ ಪೋಲೀಸ್ ಠಾಣಾ, ಬಜಪೆ ಇವರ ಮೊಕದ್ದಮೆ ಸಂ:67/1997, ದಿನಾಂಕ:23-6-1997 ರಲ್ಲಿ ವಶಪಡಿಸಿಕೊಂಡಿರುವ ಟ್ಯಾಂಕರ್ ಲಾರಿ ಸಂ:KA-05A-669 ನ್ನು ನಿಯಮ 43ಎ(2)ರನ್ವಯ ಈ ಪ್ರಾಧಿಕಾರದ ದಿನಾಂಕ:8-10-1997ರ ಆದೇಶದಲ್ಲಿ ಆರ್.ಸಿ. ಮಾಲೀಕರಾದ ಶ್ರೀ ಟಿ. ಕೃಷ್ಣಮೂರ್ತಿ, ಬಿನ್ ಹೆಚ್.ಕೆ. ತಿಮ್ಮರಾಯ ಶೆಟ್ಟಿ, ನಂ:54, ಟಿಂಬರ್‌ಯಾರ್ಡ್ ಲೇಔಟ್, ಮೈಸೂರುರಸ್ತೆ, ಬೆಂಗಳೂರು-26 ಇವರು ದೈವಾಧೀನರಾಗಿರುವುದರಿಂದ ಇವರ ಪರ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಿರುವ ಆದೇಶವನ್ನು ಅಂದಿನಿಂದಲೇ ಖಾಯಂಗೊಳಿಸಿ ಆದೇಶಿಸಿದೆ. ಸದ್ರಿ ಆರ್.ಸಿ.ಮಾಲೀಕರು ಪ್ರಾಧಿಕಾರಕ್ಕೆ ನೀಡಲಾಗಿರುವ ಬ್ಯಾಂಕ್ ಭದ್ರತೆ ಮೇಲೆ ತಿಳಿಸಿರುವ ಮೂರನೇ ಕಾರಣಕ್ಕಾಗಿ ಹಾಗೂ ಇಂಡೆಮ್ನಿಟಿ ಬ್ಯಾಂಡನ್ನು ರದ್ದುಪಡಿಸಿ ಆದೇಶಿಸಿದೆ.

ಈ ಆದೇಶವನ್ನು ಇಂದು ಅಂದರೆ ದಿನಾಂಕ:30-03-2009 ರಂದು ಶೀಘ್ರ ಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಮಾಡಿಸಿ ಕಂಪ್ಯೂಟರಿನಲ್ಲಿ ಮುದ್ರಿಸಿ ಪ್ರತಿಯನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ

ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-1

ಅಭಿಯೋಗದ ಪರ ಸಾಕ್ಷಿಗಳು

1) ಪ್ರಾ.ಸಾ-1 : ಶ್ರೀ ಎಂ. ಸಂಜೀವ ಗೌಡ, ನಿವೃತ್ತ ಅಬಕಾರಿ ನಿರೀಕ್ಷಕರು, ಪಡೀಲ್ "ಕೌಸ್ತುಭ" ಪುತ್ತೂರು ನಗರ, ಪುತ್ತೂರು.

ಅನುಬಂಧ-2

ಪ್ರತಿ ವಾದಿಗಳ ಪರ ಸಾಕ್ಷಿದಾರರು

-ಯಾರೂ ಇರುವುದಿಲ್ಲ-

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.435

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ:ಎಸ್‌ಡಿಕೆ/355/ಡಿಟಿಸಿಆರ್/93-94, ದಿನಾಂಕ:30ನೇ ಮಾರ್ಚ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ. ಮಂಗಳೂರು.

ಫಿರ್ಯಾದುದಾರರು:

ಪೊಲೀಸ್ ಉಪ ನಿರೀಕ್ಷಕರು, ಬೆಳ್ತಂಗಡಿ ಪೊಲೀಸ್ ಠಾಣೆ, ಬೆಳ್ತಂಗಡಿ.

ಆರೋಪಿ:

1) ಜಿ.ವೇಲು (50 ವ) ಬಿನ್ ಗೋವಿಂದ ರಾಜು, ವಾಸ: ಯಶವಂತಪುರ, ನಂ:462, 9ನೇ ಕ್ರಾಸ್, 13ನೇ ಮೇನ್, ಬೆಂಗಳೂರು.

2) ಪಿ.ಗುರು,(19 ವ) ಬಿನ್ ಪಾಂಡುರಂಗ ರಾವ್, ಅಜಾದ್ ನಗರ, ಬೆಂಗಳೂರು.

ವಾಹನ ಮಾಲೀಕರು

ಶ್ರೀಮತಿ ಜಿ.ಅಂಬಿಗ, ಕೋಂ ವೇಲು ಜೆ.
462, 9ನೇ ಕ್ರಾಸ್, 13ನೇ ಮುಖ್ಯ ರಸ್ತೆ, ಗೋಕುಲ ಎಕ್ಸ್ ಟೆನ್‌ಷನ್, ಮತ್ತಿಕೆರೆ ಲೇಔಟ್, ಬೆಂಗಳೂರು.

ಪ್ರಕರಣದ ಮುಖ್ಯಾಂಶಗಳು:

ಪೊಲೀಸ್ ಉಪ ನಿರೀಕ್ಷಕರು, ಬೆಳ್ತಂಗಡಿ ಪೊಲೀಸ್ ಠಾಣೆ, ಬೆಳ್ತಂಗಡಿ ಇವರು ತಮ್ಮ ಸಿಬ್ಬಂಧಿಯವರೊಂದಿಗೆ ದಿ: 17-9-1993 ರಂದು ದೊರೆತ ಖಚಿತ ವರ್ತಮಾನದ ಮೇರೆಗೆ ಬೆಳ್ತಂಗಡಿ ಠಾಣೆಯಿಂದ ಸುಮಾರು 6 ಕಿ.ಮೀಟರು ದೂರದಲ್ಲಿರುವ ಕುವೆಟ್ಟು ಗ್ರಾಮದ ಮದಡ್ಕ ರಸ್ತೆಯಲ್ಲಿ ಕಾಯುತ್ತಿರುವಾಗ ಬೆಳಿಗ್ಗೆ 5-45 ಗಂಟೆ ಸಮಯಕ್ಕೆ ಚಾರ್ಮಾಡಿ ಘಾಟಿ ಕಡೆಯಿಂದ ಮಂಗಳೂರು ಕಡೆಗೆ ಬರುತ್ತಿದ್ದ ಟ್ಯಾಂಕರ್ ಸಂ: ಸಿಎಎಸ್:817ನ್ನು ತಡೆದು ನಿಲ್ಲಿಸಿ ತಪಾಸಣೆ ನಡೆಸಿದಾಗ ಅದರಲ್ಲಿ 9000 ಲೀಟರು ಮದ್ಯಸಾರವಿರುವುದು ಕಂಡು ಬಂತು. ಸದ್ರಿ ಮದ್ಯಸಾರವನ್ನು ಸಾಗಾಣಿಕೆ ಮಾಡಲು ರಹದಾರಿ ಪತ್ರ ಹಾಜರುಪಡಿಸುವಂತೆ ಚಾಲಕ ಹಾಗೂ ಕ್ಲಿನರ್‌ನಲ್ಲಿ ವಿಚಾರಿಸಿದಾಗ ಸದ್ರಿ ಮದ್ಯಸಾರವನ್ನು ಹೊಂದಿ ಸಾಗಾಣಿಕೆ ಮಾಡಲು ಯಾವುದೇ ರಹದಾರಿ ಪತ್ರವನ್ನು ಹಾಜರು ಪಡಿಸಿರುವುದಿಲ್ಲ. ಇದು ಕರ್ನಾಟಕ ಅಬಕಾರಿ ಕಾಯಿದೆ 1965 ನಿಯಮ 32,34 ಹಾಗೂ 43 ರೀತ್ಯಾ ಶಿಕ್ಷಾಹ. ಅಪರಾಧವಾಗಿರುವುದರಿಂದ, ಸದ್ರಿ ಚಾಲಕ ಹಾಗೂ ಸಹ ಚಾಲಕರ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದಾಗ ಚಾಲಕ ಜಿ.ವೇಲು (50 ವ), ಬಿನ್ ಗೋವಿಂದ ರಾಜು, ವಾಸ:ಯಶವಂತಪುರ, ನಂ:462 9ನೇ ಕ್ರಾಸ್, 13ನೇ ಮೇನ್, ಬೆಂಗಳೂರು ಮತ್ತು ಕ್ಲೀನರ್‌ನ ಹೆಸರು ಪಿ.ಗುರು,(19 ವ) ಬಿನ್: ಪಾಂಡುರಂಗ ರಾವ್, ಆಜಾದ್ ನಗರ, ಬೆಂಗಳೂರು ಎಂದು ತಿಳಿಸಿದ್ದು, ಇದು ಅಕ್ರಮ ತೆರಿಗೆ ರಹಿತ ಮದ್ಯಸಾರವಾಗಿರುವುದರಿಂದ ಆರೋಪಿಗಳ ವಿರುದ್ಧ ತಕ್ಷೀರು ಸಂ: 133/93 ದಿ:17-9-1993ರಂತೆ ಮೊಕದ್ದಮೆಯನ್ನು ದಾಖಲೆ ಮಾಡಿ ಟ್ಯಾಂಕರ್‌ನಲ್ಲಿದ್ದ ಮದ್ಯಸಾರದಲ್ಲಿ ರಸಾಯನಿಕ ವಿಶ್ಲೇಷಣೆಗಾಗಿ 750 ಎಂಎಲ್‌ನ 6 ಸೀಸೆಗಳನ್ನು ಮಾದರಿಗಾಗಿ ತೆಗೆದು ಸಾಗಾಣಿಕೆ ಬಳಸಿದ ಟ್ಯಾಂಕರ್ ಸಂ: ಸಿಎಎಸ್:817 ಮತ್ತು ಅದರಲ್ಲಿದ್ದ 9,000 ಲೀಟರು ಮದ್ಯಸಾರವನ್ನು ಮುಂದಿನ ನಡವಳಿ ಬಗ್ಗೆ ಇಲಾಖಾ ವಶಕ್ಕೆ ತೆಗೆದುಕೊಂಡು ಸ್ಥಳದಲ್ಲಿಯೇ ಮಹಜರು ಕ್ರಮ ಜರುಗಿಸಿರುತ್ತಾರೆ. ತಕ್ಷೀರಿಗೆ ಸಂಬಂಧಿಸಿದ ಪ್ರಥಮ ಮಾಹಿತಿ ವರದಿ, ಮಹಜರು ಪ್ರತಿ ಹಾಗೂ ಸೊತ್ತುಗಳ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ವಶಪಡಿಸಿಕೊಂಡ ಸೊತ್ತುಗಳನ್ನು ಹಾಗೂ ಕಡತದೊಂದಿಗೆ ಮುಂದಿನ ತನಿಖೆಗಾಗಿ ಹಸ್ತಾಂತರಿಸಿರುವ ಬಗ್ಗೆ ಅಧಿಕೃತ ಅಧಿಕಾರಿ ಹಾಗೂ ಅಬಕಾರಿ ಅಧೀಕ್ಷಕರು, ದ.ಕ. ಜಿಲ್ಲೆ ಮಂಗಳೂರು ಇವರ ನ್ಯಾಯಾಲಯದಲ್ಲಿ ದಿನಾಂಕ:22-12-1993ರಂದು ಪತ್ರ ಬರೆಯಲಾಗಿದ್ದು, ಅಧಿಕೃತ ಅಧಿಕಾರಿ

ಹಾಗೂ ಅಬಕಾರಿ ಅಧೀಕ್ಷಕರು, ದ.ಕ.ಜಿಲ್ಲೆ ಮಂಗಳೂರು ಇವರ ಆದೇಶ ಸಂ: ಎಸ್‌ಡಿಕೆ:355:ಡಿಟಿಸಿಆರ್:93-94,ದಿನಾಂಕ: 5-2-93ರಲ್ಲಿ ಸದ್ರಿ ಮೊಕದ್ದಮೆಯಲ್ಲಿ ವಶಪಡಿಸಿ ಕೊಂಡ ಸೊತ್ತುಗಳನ್ನು ಅವುಗಳ ಸಂಪೂರ್ಣ ದಾಖಲಾತಿಗಳೊಂದಿಗೆ ಅಬಕಾರಿ ನಿರೀಕ್ಷಕರು, ಬೆಳ್ತಂಗಡಿ ವಲಯ ಇವರಿಗೆ ಹಸ್ತಾಂತರಿಸಲು ಅನುಮತಿಯನ್ನು ನೀಡಿರುತ್ತಾರೆ. ಸದ್ರಿ ಆದೇಶದಂತೆ ಪೊಲೀಸ್ ಉಪ ನಿರೀಕ್ಷಕರು, ಬೆಳ್ತಂಗಡಿ ಪೊಲೀಸ್ ಠಾಣೆ,ಬೆಳ್ತಂಗಡಿ ಇವರು ತಕ್ಷೀರಿಗೆ ಸಂಬಂಧಪಟ್ಟ ದಾಖಲೆ ಪತ್ರಗಳನ್ನು, ಸೊತ್ತುಗಳನ್ನು ಮತ್ತು ಮಾದರಿ ಸೀಸೆಗಳನ್ನು ಅಬಕಾರಿ ನಿರೀಕ್ಷಕರು, ಬೆಳ್ತಂಗಡಿ ವಲಯ ಇವರಿಗೆ ಹಸ್ತಾಂತರಿಸಿರುತ್ತಾರೆ.

ಅಬಕಾರಿ ನಿರೀಕ್ಷಕರು,ಬೆಳ್ತಂಗಡಿ ವಲಯ ಇವರ ತನಿಖಾ ವರದಿ ಸಂಖ್ಯೆ ದಿ:10-8-1994 ರಲ್ಲಿ ವಶಪಡಿಸಿಕೊಂಡ ಮದ್ಯಸಾರದಲ್ಲಿ ತೆಗೆದ ಸ್ಯಾಂಪಲ್‌ಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಕರ್ನಾಟಕ ಸರ್ಕಾರ ಸಹಾಯಕ ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರ ಪತ್ರ ಸಂ:ಇ-1085-6/93-94 ದಿ:11-1-94ರ ವರದಿಯಲ್ಲಿ ಮದ್ಯಸಾರದ ಪ್ರಮಾಣ 93.20% ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ಸದ್ರಿ ಮದ್ಯಸಾರವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಿಲೇವಾರಿ ಮಾಡಲು ತನಿಖಾಧಿಕಾರಿಗಳು ಶಿಫಾರಸ್ಸು ಮಾಡಿರುವ ಮೇರೆಗೆ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅದೀಕ್ಷಕರು, ದ.ಕ.ಜಿಲ್ಲೆ ಮಂಗಳೂರು ಇವರ ಆದೇಶ ಸಂ: ಎಸ್‌ಡಿಕೆ:355:ಡಿಟಿಸಿಆರ್:93-94 ದಿ:18-1-95ರ ಆದೇಶದಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ 9000 ಲೀಟರು ಮದ್ಯಸಾಗಪನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತಾರೆ. ಸದ್ರಿ ಅದೇಶದ ಅನುಸಾರ ಈ ಪ್ರಾದಿಕಾರದ ಅದೇಶ ಸಮ ಸಂಖ್ಯೆ ದಿ:24-1-95ರ ಆದೇಶದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಮದ್ಯಸಾರವನ್ನು ಸರ್ಕಾರದ ಆದಾಯದ ಹಿತದೃಷ್ಟಿಯಿಂದ ಸಾರಾಯಿ ತಯಾರಿಸಲು ಅಬಕಾರಿ ಆಯುಕ್ತರ ಸ್ಥಿರೀಕರಣಕ್ಕೆ ಒಳಪಟ್ಟಂತೆ ಮೆ:ಮೈಶುಗರ್ ಕಂಪೆನಿ ,ಸಾರಾಯಿ ಸಂಸ್ಕರಣಾ ಘಟಕ ಮಂಗಳೂರು ಇವರಿಗೆ ಹಂಚಿಕೆ ಮಾಡಲು ಆದೇಶಿಸಿರುತ್ತಾರೆ.

ಹಂಚಿಕೆ ಅದೇಶದ ಅನುಸಾರ ಅಬಕಾರಿ ಅಧೀಕ್ಷಕರು,ದ.ಕ.ಜಿಲ್ಲೆ ಮಂಗಳೂರು ಇವರ ರಹದಾರಿ ಸಂ:93906/ ಎಸ್‌ಡಿಕೆ/ಎಆರ್‌ಕೆ /ಆರ್‌ಎಸ್‌ಟಿ /ಎಬಿಜಿ/187/94-95 ದಿನಾಂಕ:25-1-95 ರಂತೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಮದ್ಯಸಾರವನ್ನು ಬೆಳ್ತಂಗಡಿ ವಲಯ ಕಛೇರಿಯಿಂದ ಮೈಶುಗರ್ ಸಾರಾಯಿ ಸಂಸ್ಕರಣಾ ಘಟಕ ,ಮಂಗಳೂರು ಇಲ್ಲಿಗೆ ಸಾಗಾಣಿಕೆ ಮಾಡಲು ರಹದಾರಿ ನೀಡಿಗುತ್ತಾರೆ. ಅಬಕಾರಿ ಉಪ ಅಧೀಕ್ಷಕರು, ಮೈಶುಗರ್ ಸಕ್ಕರೆ ಕಂಪನಿಯಿಂದ ಸಾರಾಯಿ ಸಂಸ್ಕರಣಾ ಘಟಕ ಮಂಗಳೂರು ಇವರು ಹಂಚಿಕೆಯಾದ ಮದ್ಯಸಾರಕ್ಕೆ ರೂ.1,05,204/-ನ್ನು ಚಲನ್ ನಂ:160, ದಿ:24-3-1995 ರಂದು ಮತ್ತು ಮಾರಾಟ ತೆರಿಗೆ ರೂ.24,196/- ಚಲನ್ ನಂ:161 ದಿ:8-4-1995ರಂದು ಎಸ್.ಬಿ.ಐ ಮಂಗಳೂರು ಶಾಖೆಯಲ್ಲಿ ಪಾವತಿಸಿರುತ್ತಾರೆ. ವಾಹನದ ಆರ್.ಸಿ. ಮಾಲೀಕರಾದ ಶ್ರೀಮತಿ ಜಿ.ಅಂಬಿಗ ಕೋಂ ವೇಲುಜೆ. 462, 9ನೇ ಕ್ರಾಸ್, 13ನೇ ಮುಖ್ಯ ರಸ್ತೆ, ಗೋಕುಲ ಎಕ್ಸ್‌ಟೆನ್‌ಷನ್ಸ್, ಮತ್ತಿಕೆರೆ ಲೇಔಟ್, ಬೆಂಗಳೂರು ಇವರು ತಮ್ಮ ವಕೀಲರ ಮುಖಾಂತರ ದಿ:29-7-1994ರಂದು ಈ ಪ್ರಾದಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಟ್ಯಾಂಕರ್ ಸಂ: CAS-817ನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಜಪ್ತಿ ಮಾಡಲ್ಪಟ್ಟ ಟ್ಯಾಂಕರನ್ನು ಹಾಗೂ ಮದ್ಯಸಾರವನ್ನು ಸರ್ಕಾರಕ್ಕೆ ಏಕೆ ಮುಟ್ಟುಗೋಲು ಹಾಕಿಕೊಳ್ಳಬಾರದೆಂದು ಕಾರಣ ಕೇಳಿ ನೋಟಿಸನ್ನು ನಿಯಮ 43 ಬಿ ರೀತ್ಯಾ ಅರ್ಜಿದಾರರಿಗೆ ಹಾಗೂ ವಾಹನ ಚಾಲಕರಿಗೆ ದಿ:27-8-1994ರಂದು ನೋಟಿಸುಗಳನ್ನು ನೀಡಲಾಗಿರುತ್ತದೆ. ಈ ನೋಟಿಸಿಗೆ ಉತ್ತರವಾಗಿ ಅರ್ಜಿದಾರರು ದಿ:19-9-94ರಂದು ಈ ಪ್ರಾದಿಕಾರಕ್ಕೆ ಲಿಖಿತ ಉತ್ತರವನ್ನು ನೀಡಿದ್ದು, ತಾನು ಟ್ಯಾಂಕರ್ ಸಂ: CAS-817ರ ಆರ್.ಸಿ. ಮಾಲೀಕನಾಗಿದ್ದು, ಸದ್ರಿ ಟ್ಯಾಂಕರಿನಲ್ಲಿ ಅಧಿಕೃತ ಪರವಾನಿಗೆಯೊಂದಿಗೆ ಇಂಡೋರ್ ನಿಂದ ಕಲ್ಲಿಕೋಟೆಗೆ ಮದ್ಯಸಾರವನ್ನು ಸಾಗಾಣಿಕೆ ಮಾಡುತ್ತಿರುವಾಗ ಬೆಳ್ತಂಗಡಿಯಲ್ಲಿ ಪೊಲೀಸರು ಟ್ಯಾಂಕರನ್ನು ತಡೆದು ನಿಲ್ಲಿಸಿ, ಅದರಲ್ಲಿ ಎಲ್ಲಾ ದಾಖಲಾತಿಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಸುಳ್ಳು ಮೊಕದ್ದಮೆಯನ್ನು ದಾಖಲಿಸಿರುತ್ತಾರೆಂದು ತಮ್ಮ ಉತ್ತರದಲ್ಲಿ ತಿಳಿಸಿರುತ್ತಾರೆ.

ಅರ್ಜಿದಾರರು ಸಲ್ಲಿಸಿದ ಉತ್ತರ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಮೊಕದ್ದಮೆಯಲ್ಲಿ ಸಂಬಂಧಿಸಿವ ದಾಖಲೆಗಳು ಒಂದಕ್ಕೊಂದು ಹೊಂದಾಣಿಕೆ ಇಲ್ಲದಿರುವ ಕಾರಣಕ್ಕೆ ಅಧಿಕೃತ ಅಧಿಕಾರಿ ಹಾಗೂ ಅಬಕಾರಿ ಅಧೀಕ್ಷಕರು, ದ.ಕ.ಜಿಲ್ಲೆ ಮಂಗಳೂರು ಇವರ ಆದೇಶ ಸಂ:ಎಸ್‌ಡಿಕೆ: 355:ಡಿಟಿಸಿಆರ್:1993-94, ದಿ:7-10-94ರ ಆದೇಶದಲ್ಲಿ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿರುತ್ತಾರೆ. ತಿರಸ್ಕರಿಸಿದ ಅದೇಶದ ವಿರುದ್ಧ ಅರ್ಜಿದಾರರು ಮಾನ್ಯ ಸೆಶನ್ಸ್ ನ್ಯಾಯಾಲಯ ಮಂಗಳೂರು ಇಲ್ಲಿಗೆ ಮೇಲ್ಮನವಿ ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯದ ಕ್ರಿಮಿನಲ್ ಅಪೀಲ್ ಸಂ: 166/94 ದಿ:13-1-95ರ ಆದೇಶದಲ್ಲಿ ಅರ್ಜಿದಾರರು ರೂ.3,00,000/-ಮೊತ್ತದ ಇಂಡೆಮ್ನಿಟಿ ಬಾಂಡ್ ಆಧಾರದ ಮೇಲೆ ಟ್ಯಾಂಕರನ್ನು ಆರ್.ಸಿ.ಮಾಲೀಕರಿಗೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲು ಆದೇಶಿಸಿರುವ ಮೇರೆಗೆ ಈ ಪ್ರಾದಿಕಾರದ ಆದೇಶ ಸಮ ಸಂಖ್ಯೆ ದಿ:17-2-1995ರ ಆದೇಶದಲ್ಲಿ ಆರ್.ಸಿ ಮಾಲೀಕರಿಂದ 3,00,000/- ವೈಯಕ್ತಿಕ ಮುಚ್ಚಳಿಕೆ (ಇಂಡೆಮ್ನಿಟಿ ಬಾಂಡ್) ಪಡೆದು ಮುಟ್ಟುಗೋಲು ನಡವಳಿಯನ್ನು ಕಾಯ್ದಿರಿಸಿ ಕೆಲವು ನಿರ್ದಿಷ್ಟ ಷರತ್ತುಗಳನ್ನು ಒಳಗೊಂಡಂತೆ ಟ್ಯಾಂಕರಿನ ಮಾಲೀಕರಾದ ಶ್ರೀಮತಿ ಜಿ. ಅಂಬಿಗ ಇವರಿಗೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆ ಮಾಡಲು ಆದೇಶ ನೀಡಿರುತ್ತದೆ.

ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) ಮೊದಲನೇ ವಿವಾದಾಂಶ: ದಿನಾಂಕ:17-9-1993 ರಂದು ಟ್ಯಾಂಕರ್ ಲಾರಿ ಸಂ:CAS-817ರಲ್ಲಿ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) ಎರಡನೇ ವಿವಾಧಾಂಶ: ಸದಿ ವಾಹನದಲ್ಲಿ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಯಾಗಿರುವುದರ ಬಗ್ಗೆ ತಮಗೆ ಅರಿವಿಲ್ಲದಂತೆ ಮತ್ತು ತಾವು ಶಾಮೀಲಾಗದೇ ನಡೆದಿದೆ ಹಾಗೂ ಇದರ ಬಗ್ಗೆ ವಾಹನದ ಮಾಲೀಕರು ಸಾಕಷ್ಟು ಮುಂಜಾಗ್ರತಾ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಅರೋಪಿ ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ? ಅಥವಾ ಇಲ್ಲವೇ?

ಮೊದಲನೇ ವಿವಾಧಾಂಶಕ್ಕೆ ಉತ್ತರ-ಸಕರಾತ್ಮಕ

ಅಭಿಯೋಗದ ಪರ ಸಾಕ್ಷಿ ನೀಡಲು ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರಿಗೆ ದಿ:2-9-03 ರಿಂದ ಮೊದಲ್ಗೊಂಡು ನಂತರದಲ್ಲಿ ದಿ:11-9-03, 15-10-03, 23-10-03, 12-4-06, 13-3-07, 27-4-07, 15-6-2007, 18-8-2007, 11-10-07, 12-12-07, 13-2-08, 9-4-08, 11-6-08 ಮತ್ತು 6-8-08ರಂತೆ ಹಲವು ಬಾರಿ ನೋಟಿಸುಗಳನ್ನು ನೀಡಲಾಗಿದ್ದರೂ, ಸಾಕ್ಷಿದಾರರು ಈ ಪ್ರಾದಿಕಾರದ ಮುಂದೆ ಹಾಜರಾಗಿರುವುದಿಲ್ಲ. ಪ್ರಕರಣವು ದಾಖಲಿಸಿ ಸುಮಾರು 15 ವರ್ಷಗಳು ಕಳೆದಿದ್ದು, ಪ್ರಕರಣವು ಇತ್ಯರ್ಥವಾಗದೇ ಈ ಪ್ರಾದಿಕಾರದಲ್ಲಿ ಬಾಕಿ ಇರುತ್ತದೆ.

ಪ್ರಾಸಿಕ್ಯೂಶನ್ ಪರ ಪ್ರಕರಣದ ಸ್ವತಂತ್ರ ಸಾಕ್ಷಿದಾರರಾದ ಶ್ರೀ ಪಿ.ಸೀತಾರಾಮ ಭಟ್ ಇವರು ದಿ:11-9-98ರಂದು ಈ ಪ್ರಾದಿಕಾರದ ಮುಂದೆ ಹಾಜರಾಗಿ ಎ.ಡಿ.ಪಿಯವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು ನಾಲ್ಕು ವರ್ಷಗಳ ಹಿಂದೆ ಬೆಳ್ತಂಗಡಿಯಲ್ಲಿರುವ ಪೊಲೀಸ್ ಸ್ಟೇಶನ್‌ಗೆ ಹೋಗಿದ್ದು ಅಬಕಾರಿ ಕೇಸಿನ ಬಗ್ಗೆ ದಾಖಲೆಗಳಿಗೆ ಸಹಿ ಹಾಕಿದೆನು ,ಆ ಸಹಿಯನ್ನು ನಿಶಾನೆಪಿ-1 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ.

ಈ ಕಾರಣದಿಂದ ಈ ಪ್ರಕರಣದಲ್ಲಿ ವಶಪಡಿಸಿಕೊಂಡ ವಾಹನ ಮಾಲೀಕರು ತಿಳುವಳಿಕೆಯಿಂದಲೇ ಈ ಕೃತ್ಯಕ್ಕೆ ವಾಹನ ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ಸಾಭೀತುಪಡಿಸಲು ಸಾಧ್ಯವಾಗಿಲ್ಲ. ಪ್ರಕರಣದ ಇತರ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ಪ್ರಥಮ ವರ್ತಮಾನ ವರದಿಯಲ್ಲಿ ತಿಳಿಸಿದಂತೆ ಕರ್ನಾಟಕ ಅಬಕಾರಿ ಕಾನೂನು ಅಡಿಯಲ್ಲಿ ಅಪರಾಧ ಎಸಗಿದ ಬಗ್ಗೆ ಸಾಕಷ್ಟು ಸಾಕ್ಷ್ಯಾದಾರಗಳು ಲಭ್ಯವಿಲ್ಲವೆಂಬ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ. ಹಾಗೂ ವಾಹನದಲ್ಲಿ ಅಕ್ರಮವಾಗಿ ಸಾಗಿಸಲಾಗಿರುವ ಮದ್ಯಸಾರ ಸಾಗಾಣಿಕೆ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ನಡೆದಿದೆ ಎಂಬ ಅಂಶವನ್ನು ಸಾಭೀತುಪಡಿಸಲು ಪ್ರಾಸಿಕ್ಯೂಶನ್‌ರವರು ವಿಫಲರಾಗಿರುತ್ತಾರೆ. ಈ ವಿವಾದಾಂಶದ ಬಗ್ಗೆ ಪ್ರಾದಿಕಾರದಲ್ಲಿ ಸಾಕ್ಷಿ ಮಾಡಿರುವ ಏಕೈಕ ಪಂಚ ಸಾಕ್ಷಿದಾರರಾದ ಶ್ರೀ.ಪಿ.ಸೀತಾರಾಮ ಭಟ್, ಬಿನ್:ಕೃಷ್ಣ ಭಟ್ ಇವರು ತಾನು ಅಪರಾಧ ಸ್ಥಳದಲ್ಲಿ ಹಾಜರಿದ್ದು ಮಹಜರಿಗೆ ಸಹಿ ಹಾಕಿರುವುದಿಲ್ಲ, ಬದಲಿಗೆ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕರ ಸೂಚನೆ ಮೇರೆಗೆ ಸಹಿ ಹಾಕಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ.

ಎರಡನೇ ವಿವಾಧಾಂಶಕ್ಕೆ ಉತ್ತರ ಇಲ್ಲ (ನಕರಾತ್ಮಕ)

ಮೊದಲನೇಯ ವಿವಾಧಾಂಶಕ್ಕೆ ಪಡೆದ ಉತ್ತರದಲ್ಲಿ ಪ್ರಕರಣದಲ್ಲಿ ಜಪ್ತು ಮಾಡಲ್ಪಟ್ಟ ವಾಹನದಲ್ಲಿ ಮದ್ಯಸಾರ ಸಾಗಾಣಿಕೆಯಾಗಿದೆಯೇ ಎಂಬುದನ್ನು ಸಾಭೀತುಪಡಿಸಲು ಪ್ರಾಸಿಕ್ಯೂಶನ್ ವಿಫಲರಾಗಿರುವುದರಿಂದ ಎರಡನೇ ವಿವಾಧಾಂಶಕ್ಕೆ ಉತ್ತರವನ್ನು ಪಡೆಯುವ ಅವಶ್ಯಕತೆ ಕಾಣಬರುವುದಿಲ್ಲ.

ಮೂರನೇ ವಿವಾಧಾಂಶಕ್ಕೆ ಉತ್ತರ ಇಲ್ಲ (ನಕರಾತ್ಮಕ)

ಮೊದಲನೇ ಹಾಗೂ ಎರಡನೇ ವಿವಾಧಾಂಶದಿಂದ ಪಡೆದ ಉತ್ತರದಿಂದ ಫಿರ್ಯಾದುದಾರರು ಪ್ರಕರಣಕ್ಕೆ ಸಂಬಂಧಿಸಿ ವಾಹನವನ್ನು ತಪಾ. ೆ ಮಾಡುವ ಮೊದಲು ಮಾನ್ಯ ನ್ಯಾಯಾಲಯದಿಂದ ಸರ್ಚ್ ವಾರಂಟ್ ಪಡೆಯಬೇಕಾಗಿದ್ದು ಅಥವಾ ಸರ್ಚ್ ವಾರಂಟ್ ಪಡೆಯಲು ಕಾಲಾವಕಾಶಯಿಲ್ಲದ ಪ್ರಯುಕ್ತ ಸರ್ಚ್ ಮೆಮೊವನ್ನು ತಯಾರಿಸಿರುವುದಿಲ್ಲ ಹಾಗೂ ಮಾನ್ಯ ಸತ್ರ ನ್ಯಾಯಾಲಯ, ದ.ಕ.ಜಿಲ್ಲೆ, ಮಂಗಳೂರು ಇವರ ಕ್ರಿಮಿನಲ್ ಅಪೀಲ್ ಸಂ: 63/2003 ದಿ:19-1-2004 ಮತ್ತು ಮಾನ್ಯ ಉಚ್ಚ ನ್ಯಾಯಾಲಯ, ಕರ್ನಾಟಕ, ಬೆಂಗಳೂರು ಇವರ ಕ್ರಿಮಿನಲ್ ರಿವಿಷನ್ ಪಿಟಿಷನ್ ಸಂ: 802/2004 ದಿ: 1-8-2007 ರ ಆದೇಶದಲ್ಲಿ ಅಬಕಾರಿ ಕಾಯಿದೆಯನ್ವಯ ವಾಹನವನ್ನು ಶೋಧನೆ ಮಾಡುವ ಮೊದಲು ಮಾನ್ಯ ನ್ಯಾಯಾಲಯದಿಂದ ಸರ್ಚ್ ವಾರಂಟ್ ಪಡೆಯಬೇಕು ಅಥವಾ ಸರ್ಚ್ ವಾರಂಟ್ ಪಡೆಯಲು ಕಾಲಾವಕಾಶ ಇಲ್ಲದ ಕಾರಣ ಸರ್ಚ್ ಮೆಮೊವನ್ನು ತಯಾರಿಸಿ ಮಹಜರಿನಲ್ಲಿ ನಮೂದಿಸಿರಬೇಕು ಎಂಬ ಕಾರಣಕ್ಕೆ ಅಂದಿನ ಪ್ರಾಧಿಕಾರವು ನೀಡಿದ ಆದೇಶವನ್ನು ತಳ್ಳಿ ಹಾಕಿ ವಾಹನವನ್ನು ಅರ್ಜಿದಾರರ ವಶಕ್ಕೆ ಬಿಡುಗಡೆಗೊಳಿಸಬೇಕೆಂದು ತೀರ್ಪು ನೀಡಿರುತ್ತಾರೆ. ಈ ಪ್ರಕರಣದಲ್ಲಿ ಫಿರ್ಯಾದುದಾರರು ದಿ:17-9-1993 ರಂದು ಬೆಳಿಗ್ಗೆ 5-45 ಗಂಟೆಗೆ ವಾಹನ ಸಂಖ್ಯೆ:CAS-817 ನ್ನು ಶೋಧಿಸಿದ ಸಂದರ್ಭದಲ್ಲಿ ಶೋಧನಾ ವಾರಂಟ್ ಪಡೆಯದಿದ್ದು, ರೆಕಾರ್ಡ್ಸ್ ಆಫ್ ರೀಜನ್ಸ್ ಮೆಮೊವನ್ನು ಸಹಾ ನ್ಯಾಯಾಲಯಕ್ಕೆ ಒಪ್ಪಿಸದಿರುವ ಕಾರಣ ಮೇಲಿನ ಘನ ಉಚ್ಚ ನ್ಯಾಯಾಲಯದ ತೀರ್ಪನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿರುತ್ತದೆ.

ಅಭಿಯೋಜಕ ಸಾಕ್ಷಿ ವಿಚಾರಣೆಯ ಬಗ್ಗೆ ಫಿರ್ಯಾದುದಾರರಿಗೆ ಈ ಪ್ರಾಧಿಕಾರದಿಂದ ಹಲವಾರು ಬಾರಿ ಹಾಜರಾತಿ ನೋಟೀಸುಗಳನ್ನು ನೀಡಲಾಗಿಯೂ ಈ ಪ್ರಾಧಿಕಾರದ ಮುಂದೆ ಸಾಕ್ಷಿ ನುಡಿಯಲು ವಿಫಲರಾಗಿರುತ್ತಾರೆ. ಪ್ರಕರಣ ದಾಖಲಿಸಿರುವ ಮುಖ್ಯ ಸಾಕ್ಷಿ ಮತ್ತು ಮಹಜರು ಸಾಕ್ಷಿದಾರರು ನ್ಯಾಯಾಲಯದ ಮುಂದೆ ಹಾಜರಾಗಿ ಅಪರಾಧವನ್ನು ಸಾಬೀತುಪಡಿಸುವ ಬಗ್ಗೆ ಅಭಿಯೋಜಕ ಸಾಕ್ಷಿ ನೀಡಲು ವಿಫಲರಾಗಿರುವುದರಿಂದ, ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಿಸಿದ ಅಪರಾಧಕ್ಕೆ ಸಂಬಂಧಿಸಿ ಸಾಕ್ಷ್ಯಾಧಾರಗಳು ಇಲ್ಲದಿರುವುದರಿಂದ ಪ್ರಾಸಿಕ್ಯೂಶನ್ ಆರೋಪವನ್ನು ಸಾಬೀತುಪಡಿಸಲು ವಿಫಲರಾಗಿರುತ್ತಾರೆ.

ರಕ್ಷಣಾ ಸಾಕ್ಷಿ ವಿಚಾರಣೆ ಅಂಶಗಳನ್ನು ಹಾಗೂ ಘನ ಉಚ್ಚ ನ್ಯಾಯಾಲಯದ CRP-808/2004ರ ದಿ:1-8-2007ರ ತೀರ್ಪು ಆದೇಶವನ್ನು ಗಣನೆಗೆ ತೆಗೆದುಕೊಂಡಾಗಿ ಮೂರನೇ ವಿವಾದಾಂಶಕ್ಕೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ. ಆದುದರಿಂದ ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್ ಡಿಕೆ:355:ಡಿಟಿಸಿಆರ್:93-94, ದಿನಾಂಕ:30ನೇ ಮಾರ್ಚ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ,ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಅಧಿ ನಿಯಮ 1965 ಕಲಂ 43(ಎ)ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ)ರಲ್ಲಿ ಅನುಸರಿಸ ಬೇಕಾದ ಕ್ರಮಗಳನ್ನು ಜರುಗಿಸಿದ ನಂತರ ಪೊಲೀಸ್ ಉಪ ನಿರೀಕ್ಷಕರು, ಬೆಳ್ತಂಗಡಿ ಪೋಲೀಸ್ ಠಾಣಾ, ಬೆಳ್ತಂಗಡಿ ಇವರ ಮೊಕದ್ದಮೆ ಸಂ: 133/1993, ದಿನಾಂಕ:17-9-1993ರಲ್ಲಿ ವಶಪಡಿಸಿಕೊಂಡಿರುವ ಟ್ಯಾಂಕರ್ ಸಂ: CAS-817ನ್ನು ನಿಯಮ 43ಎ(2)ರನ್ವಯ ಈ ಪ್ರಾದಿಕಾರದ ದಿನಾಂಕ:17-2-1995ರ ಆದೇಶದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆ ಮಾಡಿರುವ ಆದೇಶವನ್ನು ಖಾಯಂಗೊಳಿಸಿ ಸದ್ರಿ ವಾಹನವನ್ನು ಆರ್.ಸಿ. ಮಾಲೀಕರಾದ ಶ್ರೀಮತಿ ಜಿ.ಅಂಬಿಗ, ಕೋಂ ವೇಲುಚೆ. 462,9ನೇ ಕ್ರಾಸ್,13ನೇ ಮುಖ್ಯ ರಸ್ತೆ, ಗೋಕುಲ ಎಕ್ಸ್‌ಟೆಷನ್ಸ್ ಮತ್ತಿಕೆರೆ ಲೇಔಟ್, ಬೆಂಗಳೂರು ಇವರ ವಶಕ್ಕೆ ಶಾಶ್ವತವಾಗಿ ಬಿಡುಗಡೆ ಮಾಡಲು ಆದೇಶಿಸಿದೆ. ಸದ್ರಿ ಆರ್.ಸಿ.ಮಾಲೀಕರು ಪ್ರಾದಿಕಾರಕ್ಕೆ ನೀಡಲಾಗಿರುವ ಇಂಡೆಮ್ನಿಟಿ ಬ್ಯಾಂಡನ್ನು ರದ್ದುಪಡಿಸಿ ಹಿಂತಿರುಗಿಸಲಾಗಿದೆ.

ಈ ಆದೇಶವನ್ನು ಇಂದು ಅಂದರೆ ದಿನಾಂಕ:30-03-2009 ರಂದು ಶೀಘ್ರಲಿಪಿಗಾರರಿಗೆ ಉತ್ತಲೇಖನ ಕೊಟ್ಟು ಬೆರಳಚ್ಚು ಮಾಡಿಸಿ ಕಂಪ್ಯೂಟರಿನಲ್ಲಿ ಮುದಿಸಿ ಪ್ರತಿಯನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-1

ಅಭಿಯೋಗದ ಪರ ಸಾಕ್ಷಿಗಳು

1) ಪ್ರಾ.ಸಾ-1 : ಶ್ರೀ ಪಿ. ಸೀತಾರಾಮ ಭಟ್ (ಸ್ವತಂತ್ರ ಸಾಕ್ಷಿದಾರರು)

ಅನುಬಂಧ-2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು

1) ನಿಶಾನೆ ಪಿ-1 : ಶ್ರೀ ಪಿ. ಸೀತಾರಾಮ ಭಟ್‌ರವರು ಹಾಕಿದ ಸಹಿ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.436

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ:ಎಸ್‌ಡಿಕೆ/410/ಡಿಟಿಸಿಆರ್/1999-2000, ದಿನಾಂಕ:28ನೇ ಮಾರ್ಚ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ. ಮಂಗಳೂರು.

ಫಿರ್ಯಾದುದಾರರು:

ಶ್ರೀ ರವೀಂದ್ರ ಕೋಟೆಕಾರ್, ಅಬಕಾರಿ ನಿರೀಕ್ಷಕರು ಬಂಟ್ವಾಳ ಉಪ ವಿಭಾಗ, ಬಂಟ್ವಾಳ.

ಆರೋಪಿ:

1) ಸಂತೋಷ್ ಕುಮಾರ್, ಬಿನ್ ನಾರಾಯಣ ಶೆಟ್ಟಿ, ನಾಗಪ್ಪ ಕಾಂಪೌಂಡ್, ಬೋಳಾರ, ಮಂಗಳೂರು.

2) ಉಮೇಶ್ ರೈ, ಬಿನ್ ಲಿಂಗಪ್ಪ ರೈ, ನಾಗಪ್ಪ ಕಂಪೌಂಡ್, ಬೋಳಾರ, ಮಂಗಳೂರು.

3) ಪ್ರದೀಪ್ ಪೂಜಾರಿ, ಬಿನ್: ಬಾಬು ಪೂಜಾರಿ, ಕಾಮಧೇನು ಗ್ಯಾಸ್ ಏಜೆನ್ಸಿ, ತಾರೆತೋಟ, ಮಂಗಳೂರು.

ವಾಹನ ಮಾಲೀಕರು:

ಶ್ರೀಮತಿ ಶಾಲಿನಿ ಶ್ರೀನಿವಾಸ, ಪದ್ಮ ನಿಲಯ, ರಂಜಿತ್ ಗ್ಯಾರೇಜ್, ಮಂಕಿ ಸ್ಟ್ಯಾಂಡ್, ಮಂಗಳಾದೇವಿ, ಮಂಗಳೂರು.

III -F4-(0)

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:19-01-2000 ರಂದು ಫಿರ್ಯಾದುದಾರರು ಹಾಗೂ ಸಿಬ್ಬಂದಿಯೊಂದಿಗೆ ಬಂಟ್ವಾಳ ತಾಲೂಕು ಪಾಣೆಮಂಗಳೂರು ಮೆಲ್ಕಾರ್ ಕೂಡುರಸ್ತೆಯಲ್ಲಿ ವಾಹನಗಳನ್ನು ತಪಾಸಣೆ ಮಾಡುತ್ತಿರುವ ಸಂದರ್ಭದಲ್ಲಿ ಬರುತ್ತಿದ್ದ ಆಟೋರಿಕ್ಷಾವನ್ನು ತಪಾಸಣೆಗೆಂದು ನಿಲ್ಲಿಸಿದಾಗ, ಅದರೊಳಗೆ ಪ್ಲಾಸ್ಟಿಕ್ ಗೋಣಿ ಚೀಲಗಳಿಂದ ಸಾರಾಯಿ ವಾಸನೆ ಬರುತ್ತಿದ್ದು, ಆಟೋರಿಕ್ಷಾದಲ್ಲಿರುವ ಚಾಲಕ ಹಾಗೂ ಇತರರಲ್ಲಿ ಪ್ರಶ್ನಿಸಿದಾಗ, ತಾವು ಮಂಗಳೂರಿನಿಂದ ಸಾರಾಯಿ ಸ್ಯಾಚೆಟ್‌ಗಳನ್ನು ತಂದಿರುವುದು, ಇದಕ್ಕೆ ಯಾವುದೇ ರಹದಾರಿ ಪತ್ರ ಇರುವುದಿಲ್ಲವೆಂದು, ತಾನು ರಿಕ್ಷಾ ಚಾಲಕನಾಗಿದ್ದು, ತನ್ನ ಹೆಸರು ಸಂತೋಷ್ ಕುಮಾರ್, ಬಿನ್: ನಾರಾಯಣ ಶೆಟ್ಟಿ, ನಾಗಪ್ಪ ಕಂಪೌಂಡ್, ಬೋಳಾರ, ಮಂಗಳೂರು ಹಾಗೂ ಇನ್ನೊಬ್ಬ ವ್ಯಕ್ತಿಯ ಹೆಸರು ಉಮೇಶ್ ರೈ, ಬಿನ್: ಲಿಂಗಪ್ಪ ರೈ, ನಾಗಪ್ಪ ಕಂಪೌಂಡ್, ಬೋಳಾರ, ಮಂಗಳೂರು ಮತ್ತು ಮತ್ತೊಬ್ಬನ ಹೆಸರು ಪ್ರದೀಪ್ ಪೂಜಾರಿ, ಬಿನ್: ಬಾಬು ಪೂಜಾರಿ, ಕಾಮಧೇನು ಗ್ಯಾಸ್ ಏಜೆನ್ಸಿ, ತಾರೆತೋಟ, ಮಂಗಳೂರು ಎಂದು ತಿಳಿಸಿರುತ್ತಾರೆ. ಸದರಿ ರಿಕ್ಷಾದ ಹಿಂಭಾಗದಲ್ಲಿ ಕುಳಿತ್ತಿರುವ ಪ್ರಯಾಣಿಕರ ಕಾಲು ಬುಡದಲ್ಲಿ 3 ಪ್ಲಾಸ್ಟಿಕ್ ಗೋಣಿ ಚೀಲಗಳಿದ್ದು, ಸಿಬ್ಬಂದಿ ಸಮಕ್ಷಮ ಪರಿಶೀಲಿಸಿದಾಗ, ಅದರಲ್ಲಿ 100 ಎಂ.ಎಲ್.ನ ಒಟ್ಟು 750 ಸಾರಾಯಿ ಸ್ಯಾಚೆಟ್‌ಗಳಿರುವುದು ಕಂಡು ಬಂತು. ಸದರಿ ಸಾರಾಯಿ ಸ್ಯಾಚೆಟ್‌ಗಳಿಂದ ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕಿಸಿ ಅವುಗಳಿಗೆ ಬಟ್ಟೆದಾರ ಸುತ್ತಿ ಇಲಾಖಾ ಸೀಲ್‌ನಿಂದ ಸೀಲ್ ಮಾಡಿ ಗುರುತಿನ ಚೀಟಿ ಹಚ್ಚಿ, ಮಾವರಿ ಸೀಲ್ ಸ್ಥಳದಲ್ಲಿಯೇ ತಯಾರಿಸಲಾಯಿತು. ಇದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 12,14 ಮತ್ತು 34,38(ಎ) ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಸಾಗಾಣಿಕೆಗೆ ಬಳಸಿದ ಬಜಾಜ್ ಆಟೋರಿಕ್ಷಾ ಹಾಗೂ ಸಾರಾಯಿ ಸ್ಯಾಚೆಟ್‌ಗಳನ್ನು ವಶಪಡಿಸಿಕೊಂಡು ಮಹಜರನ್ನು ಸ್ಥಳದಲ್ಲಿಯೇ ಬರೆದು, ಆರೋಪಿಗಳ ವಿರುದ್ಧ ತಕ್ಷೀರು ಸಂಖ್ಯೆ:24/1999-2000 ರಂತೆ ಪ್ರಕರಣವನ್ನು ನೋಂದಾಯಿಸಿ ಮುಂದಿನ ತನಿಖೆಗಾಗಿ ಸೊತ್ತುಗಳನ್ನು ಹಾಗೂ ದಾಖಲಾತಿಗಳನ್ನು ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರಿಗೆ ಈ ಪ್ರಾಧಿಕಾರದ ಆದೇಶಾನುಸಾರ ಹಸ್ತಾಂತರಿಸಿರುತ್ತಾರೆ.

ವಾಹನದ ನೋಂದಣಿ ಮಾಲಕಿಯಾದ ಶ್ರೀಮತಿ.ಶಾಲಿನಿ ಶ್ರೀನಿವಾಸ, ಪದ್ಮ ನಿಲಯ, ರಂಜಿತ್ ಗ್ಯಾರೇಜ್ ಮಂಕಿಸ್ಟ್ಯಾಂಡ್, ಮಂಗಳಾದೇವಿ, ಮಂಗಳೂರು ಇವರು ತಮ್ಮ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ದಿ:28-1-2000 ರಂದು ಅರ್ಜಿ ಸಲ್ಲಿಸಿ, ಸದರಿ ಅರ್ಜಿಯಲ್ಲಿ ತಾನು ಜೀವನೋಪಾಯಕ್ಕಾಗಿ ವಾಹನವನ್ನು ಖರೀದಿಸಿರುವುದು, ತನ್ನ ಚಾಲಕನಿಗೆ ಸದರಿ ವಾಹನವನ್ನು ಬಾಡಿಗೆ ರೂಪದಲ್ಲಿ ನೀಡಿದ್ದು, ಸದರಿ ವಾಹನವನ್ನು ತನಗೆ ತಾತ್ಕಾಲಿಕ ನೆಲೆ ಯಲ್ಲಿ ಬಿಡುಗಡೆಗೊಳಿಸಬೇಕೆಂದು ತಮ್ಮ ಅರ್ಜಿಯಲ್ಲಿ ಕೋರಿರುತ್ತಾರೆ. ಸದರಿ ಅರ್ಜಿಯನ್ನು ಪರಿಶೀಲಿಸಿದ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು ದ.ಕ.ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದ ಆದೇಶ ಸಂಖ್ಯೆ: ಎಸ್‌ಡಿಕೆ/410/ ಡಿಟಿಸಿಆರ್/99-2000 ದಿ: 29-2-2000 ರ ಆದೇಶದಲ್ಲಿ ಅರ್ಜಿದಾರರು ಈ ಪ್ರಾಧಿಕಾರಕ್ಕೆ ರೂ.30,000/-ಗಳಿಗೆ ಷರತ್ತಿಲ್ಲದ ಬ್ಯಾಂಕ್ ಗ್ಯಾರಂಟಿ ಹಾಗೂ ಸದರಿ ಮೊತ್ತಕ್ಕೆ ಸಮಾನವಾದ ಒಬ್ಬ ಜಾಮೀನುದಾರರನ್ನು ನೀಡಿದಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾ ಸಂಖ್ಯೆ: ಕೆಎ-19-9692 ನ್ನು ಅರ್ಜಿದಾರರ ಸುಪರ್ಧಿಗೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲು ಆದೇಶಿಸಿರುತ್ತಾರೆ.

ಅರ್ಜಿದಾರರು ಸದರಿ ಆದೇಶದ ವಿರುದ್ಧ ಸತ್ರ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿದ್ದು, ಸದರಿ ಮೇಲ್ಮನವಿಯನ್ನು ಪರಿಗಣಿಸಿದ ಮೂರನೇ ಅಪರ ಸೆಷನ್ ನ್ಯಾಯಾಧೀಶರು ಕ್ರಿಮಿನಲ್ ಅಪೀಲ್ ಸಂಖ್ಯೆ: 62/2000 ದಿ: 23-3-2000 ರಂದು ಈ ಪ್ರಾಧಿಕಾರದ ಆದೇಶದಲ್ಲಿ ಬ್ಯಾಂಕ್ ಗ್ಯಾರಂಟಿಯನ್ನು ನೀಡಬೇಕೆಂಬ ಷರತ್ತನ್ನು ತಳ್ಳಿ ಹಾಕಿ, ಉಳಿದ ಷರತ್ತುಗಳಿಗೆ ಬದ್ಧರಾದಲ್ಲಿ ವಶಪಡಿಸಿಕೊಂಡ ವಾಹನವನ್ನು ಅರ್ಜಿದಾರರ ಸುಪರ್ಧಿಗೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆ ಮಾಡಲು ಆದೇಶಿಸಿರುತ್ತಾರೆ.

ಸದರಿ ಮಾನ್ಯ ಸತ್ರ ನ್ಯಾಯಾಲಯದ ಆದೇಶದ ಮೇರೆಗೆ ಅರ್ಜಿದಾರರು ರೂ.30,000/- ಗಳಿಗೆ ಸಮನಾದ ಇಂಡೆಮ್ನಿಟಿ ಬಾಂಡ್ ಹಾಗೂ ಒಬ್ಬರು ಜಾಮೀನುದಾರರನ್ನು ನೀಡಿರುವುದರಿಂದ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧಿಕಾರಿಗಳು ದ.ಕ.ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದ ಆದೇಶ ಸಂಖ್ಯೆ: ಎಸ್‌ಡಿಕೆ/410/ಡಿಟಿಸಿಆರ್/99-2000, ದಿ: 28-3-2000 ರ ಆದೇಶದಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾ ಸಂಖ್ಯೆ: ಕೆಎ-19-9692ನ್ನು ಮಾನ್ಯ ನ್ಯಾಯಾಲಯದ ಆದೇಶದ ಅನುಸಾರ ಅರ್ಜಿದಾರರ ಸುಪರ್ಧಿಗೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲಾಗಿರುತ್ತದೆ.

ವಾಹನದ ಮಾಲಕಿಯಾದ ಶ್ರೀಮತಿ.ಶಾಲಿನಿ ಶ್ರೀನಿವಾಸ ಇವರಿಗೆ ಈ ಪ್ರಾಧಿಕಾರದಿಂದ ದಿ: 12-9-2000 ರಂದು ಕಾರಣ ಕೇಳಿ ನೋಟೀಸನ್ನು ನೀಡಲಾಗಿದ್ದು, ಸದರಿ ನೋಟೀಸಿಗೆ ಅರ್ಜಿದಾರರು ತಮ್ಮ ವಕೀಲರ ಮುಖಾಂತರ ಉತ್ತರವನ್ನು ಈ ಪ್ರಾಧಿಕಾರಕ್ಕೆ ದಿ: 15-12-2000 ರಂದು ನೀಡಿರುತ್ತಾರೆ.

ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರ ತನಿಖಾ ವರದಿ ಸಂಖ್ಯೆ:ಬಿಎನ್‌ಟಿ/ಸಿಆರ್‌ಎಂ/ 52/99-2000 ದಿ:27-4-2000 ರ ತನಿಖಾ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿ ಕೊಂಡ ಸಾರಾಯಿ ಸ್ಯಾಚೆಟ್‌ಗಳ ಸ್ಯಾಂಪಲ್‌ಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ರಾಸಾಯನಿಕ ತಜ್ಞರು, ಮಂಗಳೂರು ಇವರ ಪತ್ರ ಸಂಖ್ಯೆ: ಇ-166-3/99-2000 ದಿ: 3-3-2000 ರಲ್ಲಿ ಸಾರಾಯಿಯ ಮದ್ಯಸಾರ ಪ್ರಮಾಣ ಶೇ.27% ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ಸದರಿ ಸಾರಾಯಿ ಸ್ಯಾಚೆಟ್‌ಗಳ

ಉಬ್ಬಿಕೊಂಡಿದ್ದು, ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಶಿಫಾರಸ್ಸು ಮಾಡಿರುತ್ತಾರೆ. ಅಬಕಾರಿ ನಿರೀಕ್ಷಕರ ಶಿಫಾರಸ್ಸಿನ ಮೇರೆಗೆ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ದ.ಕ.ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದ ಆದೇಶ ಸಂಖ್ಯೆ: ಎಸ್‌ಡಿಕೆ/ 410/ಡಿಟಿಸಿಆರ್/99-2000 ದಿ: 12-9-2000 ರ ಆದೇಶದಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಆದೇಶಿಸಲಾಗಿದ್ದು, ಸದರಿ ಸಾರಾಯಿ ಸ್ಯಾಚೆಟ್‌ಗಳನ್ನು ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರು ಸೂಕ್ತ ಮಹಜರು ಜರುಗಿಸಿ ದಿ:17-1-2001 ರಂದು ನಾಶಪಡಿಸಿ ವರದಿ ಸಲ್ಲಿಸಿರುತ್ತಾರೆ.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಸರಕಾರದ ಅಭಿಯೋಗದ ಪರ ಮೂರು ಸಾಕ್ಷಿಗಳ ಹೇಳಿಕೆಗಳನ್ನು ಪಡೆಯಲಾಗಿದೆ. ಈ ಪ್ರಕರಣದಲ್ಲಿ ಸರಕಾರದ ಪರ ಹಾಗೂ ವಾಹನ ಮಾಲೀಕರ ಪರ ಸಲ್ಲಿಸಿರುವ ಸಾಕ್ಷ್ಯಾಧಾರಗಳ ಮೇಲೆ ಈ ಕೆಳಗಿನ ವಿವಾದಾಂಶಗಳನ್ನು ತೀರ್ಮಾನಿಸಬೇಕಾಗಿರುವುದು ಅಗತ್ಯವಾಗಿರುವುದು ಪರಿಶೀಲನಾ ಅಂಶಗಳು ಈ ಕೆಳಗಿನಂತಿರುತ್ತದೆ.

1) ದಿ:19-1-2000 ರಂದು ಬಜಾಜ್ ಆಟೋರಿಕ್ಷಾ ಸಂಖ್ಯೆ: ಕೆಎ–19–9692 ರಲ್ಲಿ ಅಕ್ರಮ ಸಾರಾಯಿ ಸಾಗಾಟ ಮಾಡಲಾಗಿತ್ತೇ?

2) ಸದರಿ ವಾಹನದಲ್ಲಿ ಅಕ್ರಮ ಸಾರಾಯಿಯನ್ನು ತನ್ನ ತಿಳುವಳಿಕೆಗೆ ಬಾರದೆ ಮಾಡಲಾಗಿತ್ತೇ ಎಂಬುವುದನ್ನು ವಾಹನ ಮಾಲೀಕರು ಸಾಬೀತುಪಡಿಸಿದ್ದಾರೆಯೇ?

3) ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಈ ಮೇಲಿನ ಪರಿಶೀಲನಾಂಶಗಳನ್ನು ಲಭ್ಯವಿರುವ ಸಾಕ್ಷಿಗಳ ಆಧಾರದ ಮೇಲೆ ಈ ಕೆಳಗಿನಂತೆ ಉತ್ತರಿಸಲಾಗಿದೆ.

ಒಂದನೇ ಅಂಶವನ್ನು ಗುಣಾತ್ಮಕವಾಗಿ ಹೌದು ಎಂದು. ಎರಡನೇ ಅಂಶವನ್ನು ಸಕರಾತ್ಮಕವಾಗಿ ಹಾಗೂ ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಶ್ರೀ.ಎಂ.ಆರ್ ನಾಯರ್, ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರು ಈ ಪ್ರಕರಣದ ತನಿಖಾಧಿಕಾರಿಯಾಗಿದ್ದು, ಇವರು ದಿ:17-11-2004 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷಿ ಹೇಳಿಕೆಯನ್ನು ನೀಡಿರುತ್ತಾರೆ.

ತಾನು ತಕ್ಷೀರಿಗೆ ಸಂಬಂಧಿಸಿದ ದಾಖಲೆ ಪತ್ರಗಳನ್ನು ಹಾಗೂ ಮುದ್ದೆಮಾಲನ್ನು ದಿನಾಂಕ: 5-7-2000 ರಂದು ಶ್ರೀ.ಹೆಚ್.ಎನ್.ಹಳಿಯಾರ್‌ಕರ್, ಅಬಕಾರಿ ನಿರೀಕ್ಷಕರವರಿಂದ ಪಡೆದುಕೊಂಡಿದ್ದು, ತಕ್ಷೀರಿಗೆ ಸಂಬಂಧಿಸಿದ ತನಿಖೆಯನ್ನು ಮುಂದುವರಿಸಿ ಮಾನ್ಯ ನ್ಯಾಯಾಲಯಕ್ಕೆ ಆರೋಪಿಗಳ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ದಿ: 27-2-2001 ರಂದು ಸಲ್ಲಿಸಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ. ಅರ್ಜಿದಾರರ ಪರ ವಕೀಲರಿಂದ ಯಾವುದೇ ಪಾಟೀ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಪ್ರಾ.ಸಾ: 2

ಶ್ರೀ ಹೆಚ್.ಎನ್.ಹಳಿಯಾರ್‌ಕರ್,ಅಬಕಾರಿ ನಿರೀಕ್ಷಕರು, ಹಾವೇರಿ ಜಿಲ್ಲೆ ಇವರು ದಿ:12-1-05 ರಂದು ಹಾಜರಾಗಿ ಸಾಕ್ಷಿ ನುಡಿರುತ್ತಾರೆ. ಇವರು ಪ್ರಕರಣದ ತನಿಖಾಧಿಕಾರಿಯಾಗಿದ್ದು, ತಾನು ಮಾರ್ಚ್–1998 ರಿಂದ ಜುಲೈ–2000 ರವರೆಗೆ ಬಂಟ್ವಾಳ ವಲಯದಲ್ಲಿ ಅಬಕಾರಿ ನಿರೀಕ್ಷಕರಾಗಿ ಕೆಲಸ ನಿರ್ವಹಿಸಿದ್ದು, ಫಿರ್ಯಾದುದಾರರಿಂದ ತಕ್ಷೀರಿಗೆ ಸಂಬಂಧಿಸಿದ ದಾಖಲಾತಿ ಹಾಗೂ ಸೊತ್ತುಗಳನ್ನು ಸ್ವೀಕರಿಸಿದ್ದು, ತಾನು ದಿ: 3-3-2000 ರಂದು ಪ್ರಕರಣಕ್ಕೆ ಸಂಬಂಧಿಸಿದ ಮಾದರಿ ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತಜ್ಞರಿಗೆ ತಮ್ಮ ರಕ್ಷಕರ ಮುಖಾಂತರ ಕಳುಹಿಸಿರುತ್ತೇನೆ ಮತ್ತು ಈ ಪ್ರಾಧಿಕಾರದ ಆದೇಶದ ಅನುಸಾರ ವಾಹನವನ್ನು ಅರ್ಜಿದಾರರ ಸುಪರ್ದಿಗೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರ ಪಾಟೀ ಸವಾಲಿಗೆ ಉತ್ತರಿಸುತ್ತ, ತಾನು ಮಾದರಿ ಸೀಸೆಗಳನ್ನು ತಜ್ಞರಿಗೆ ಕಳುಹಿಸಿರುವುದಿಲ್ಲವೆಂದರೆ ಸರಿಯಲ್ಲ. ಮಾನ್ಯ ನ್ಯಾಯಾಲಯದಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ನಂತರ ವಿಚಾರಣೆ ಕೈಗೊಂಡು ಆರೋಪಿಗಳನ್ನು ಬಿಡುಗಡೆಗೊಳಿಸಿರುತ್ತಾರೆ ಎಂದು ತನಗೆ ಗೊತ್ತಿಲ್ಲ. ಅಪರಾಧ ಸ್ಥಳ, ಸಮಯ ಎಲ್ಲಿ ನಡೆದಿದೆ ಎಂದು ತನಗೆ ಗೊತ್ತಿಲ್ಲ. ತಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

ಪ್ರಾ.ಸಾ: 3

ಶ್ರೀ ರವೀಂದ್ರ ಕೋಟೆಕಾರ್, ನಿವೃತ್ತ ಅಬಕಾರಿ ನಿರೀಕ್ಷಕರು ಈ ಪ್ರಾಧಿಕಾರದ ಮುಂದೆ ದಿ: 31-12-2008 ರಂದು ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ. ಇವರು ಪ್ರಕರಣದ ಫಿರ್ಯಾದುದಾರರಾಗಿದ್ದು, ತಾನು ದಿ: 19-1-2000 ರಂದು ರಾತ್ರಿ ಸುಮಾರು 9-00 ಗಂಟೆಗೆ ಗಸ್ತು ತಿರುಗುತ್ತಿರುವ ಸಂದರ್ಭದಲ್ಲಿ ಪಾಣೆಮಂಗಳೂರು ಟೌನ್‌ನ ಮಧ್ಯಭಾಗಕ್ಕೆ ಬರುತ್ತಿರುವಾಗ, ಬಂಟ್ವಾಳ ಕಡೆಯಿಂದ ಆಟೋರಿಕ್ಷಾ ಬರುತ್ತಿದ್ದು, ಅದು ಜೀಪಿನ ಸಮೀಪ ಬಂದಾಗ ಸಾರಾಯಿಯ ಘಾಟು ವಾಸನೆ ಬಂದ ಕಾರಣ ಅನುಮಾನದ ಮೇಲೆಗೆ ತಡೆದು ನಿಲ್ಲಿಸಿ ಪರಿಶೀಲಿಸಿದಾಗ, ಅದರಲ್ಲಿ ಚಾಲಕನಲ್ಲದೆ ಇನ್ನೊಬ್ಬ ಯುವಕನು ಹಿಂಭಾಗದ ಸೀಟಿನಲ್ಲಿ ಕುಳಿತ್ತಿದ್ದು, ಕಾಲಿನ ಬುಡದಲ್ಲಿ ಸಾರಾಯಿ ತುಂಬಿದ ಗೋಣಿ ಚೀಲ ಇರುವುದು ಕಂಡು ಬಂತು. ಚಾಲಕನ ಹೆಸರು ವಿಚಾರಿಸಿದಾಗ ತಾನು

ಸಂತೋಷ್ ಕುಮಾರ್ ಮತ್ತು ಹಿಂದೆ ಕುಳಿತವರ ಪೈಕಿ ಒಬ್ಬ ಉಮೇಶ್ ರೈ ಮತ್ತು ಪ್ರದೀಪ್ ಪೂಜಾರಿ ಎಂಬುವುದು ತಿಳಿಯಿತು. ಸಾರಾಯಿಯ ಬಗ್ಗೆ ವಿಚಾರಿಸಿದಾಗ, ತಾನು ಮಂಗಳೂರಿನಿಂದ ಕ್ರಮವಾಗಿ ಯಾವುದೆ ರಹದಾರಿ ಪತ್ರವಿಲ್ಲದೆ ಸಾರಾಯಿಯನ್ನು ಪಾಣೆಮಂಗಳೂರಿಗೆ ಮಾರಾಟ ಮಾಡುವ ಉದ್ದೇಶದಿಂದ ತಂದಿರುವುದಾಗಿ ತಿಳಿಸಿರುತ್ತಾರೆ. ರಿಕ್ಷಾದಲ್ಲಿ ಒಟ್ಟು 3 ಗೋಣಿ ಚೀಲಗಳಲ್ಲಿ 100 ಎಂ.ಎಲ್. ನ 250 ಸಾರಾಯಿ ಸ್ಯಾಚೆಟ್‌ಗಳಂತೆ ಒಟ್ಟು 750 ಸಾರಾಯಿ ಸ್ಯಾಚೆಟ್‌ಗಳಿರುವುದು ಪತ್ತೆಯಾದವು. ನಂತರ ಸಾರಾಯಿ ಸ್ಯಾಚೆಟ್‌ಗಳಿಂದ ರಾಸಾಯನಿಕ ಪರೀಕ್ಷೆಗಾಗಿ ಸ್ಯಾಂಪಲ್‌ಗಳನ್ನು ತೆಗೆದು ಸ್ಥಳದಲ್ಲಿಯೇ ಗುರುತಿನ ಚೀಟಿ ಮಾದರಿ ಸೀಲನ್ನು ತಯಾರಿಸಿ ಸೊತ್ತುಗಳನ್ನು ಅಮಾನತ್ತುಪಡಿಸಿಕೊಂಡು ಆರೋಪಿಗಳನ್ನು ಸ್ಥಳದಲ್ಲಿಯೇ ದಸ್ತಗಿರಿ ಮಾಡಿ ಮಹಜರನ್ನು ಸ್ಥಳದಲ್ಲಿಯೇ ತಯಾರಿಸಿ ಆರೋಪಿಗಳ ವಿರುದ್ಧ ತಕ್ಷೀರನ್ನು ದಾಖಲಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರಿಗೆ ಹಸ್ತಾಂತರಿಸಿರುತ್ತೇನೆ. ಮಹಜರನ್ನು ನಿಶಾನೆ ಪಿ-1 ಎಂದು, ಸೊತ್ತುಗಳ ಪಟ್ಟಿಯನ್ನು ನಿಶಾನೆ ಪಿ-2 ಎಂದು ಮತ್ತು ಪ್ರಥಮ ಮಾಹಿತಿ ವರದಿಯನ್ನು ನಿಶಾನೆ ಪಿ-3 ಎಂದು ಸಾಕ್ಷಿ ವೇಳೆಯಲ್ಲಿ ಗುರುತಿಸಿ, ಸಾಕ್ಷಿ ನುಡಿದಿರುತ್ತಾರೆ. ವಾಹನ ಮಾಲೀಕರಾಗಲಿ, ಅವರ ಪರ ವಕೀಲರಾಗಲಿ ಹಾಜರಾಗದೆ ಇರುವುದಿಲ್ಲವಾದುದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮುಕ್ತಾಯಗೊಳಿಸಲಾಯಿತು.

ಮೇಲಿನ ಸಾಕ್ಷಿದಾರರ ಹೇಳಿಕೆಗಳ ಪ್ರಕಾರ ಜಪ್ತುಪಡಿಸಿರುವ ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸಾಗಾಟ ಮಾಡಿರುವುದು ಸಾಬೀತಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ, ಮೊದಲನೇ ವಿವಾದಾಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಈ ಪ್ರಕರಣದ ಎರಡನೇ ಅಂಶವನ್ನು ಪ್ರಕರಣದಲ್ಲಿ ವಶಪಡಿಸಿಕೊಂಡಿರುವ ವಾಹನದಲ್ಲಿ ವಾಹನ ಮಾಲೀಕರಿಗೆ ತಿಳಿಯದೆ ಈ ಕೃತ್ಯವು ಎಸಗಲಾಗಿದೆ ಎಂಬುವುದನ್ನು ಅರ್ಜಿದಾರರು ಸಾಬೀತುಪಡಿಸಬೇಕಾಗಿದ್ದು, ಈ ಪ್ರಾಧಿಕಾರದಿಂದ ಕೇಳಿದ ಕಾರಣ ಕೇಳಿ ನೋಟಿಸಿಗೆ ಅರ್ಜಿದಾರರು ತನ್ನ ವಕೀಲರ ಮೂಲಕ ಉತ್ತರಿಸುತ್ತಾ ಪ್ರಕರಣದಲ್ಲಿ ಜಪ್ತು ಪಡಿಸಿದ ವಾಹನವು ಸಾರ್ವಜನಿಕರ ಪ್ರಯಾಣಕ್ಕೆ ಉಪಯೋಗಿಸುವ ವಾಹನವಾಗಿದ್ದು, ಸದ್ರಿ ವಾಹನವನ್ನು ಬಾಡಿಗೆ ರೂಪದಲ್ಲಿ ತನ್ನ ಚಾಲಕನಿಗೆ ನೀಡಿರುತ್ತೇನೆ. ಸದರಿ ಚಾಲಕನು ಆಟೋರಿಕ್ಷಾವನ್ನು ಬಾಡಿಗೆಗೆ ಚಲಾಯಿಸಲು ಪ್ರತಿದಿನ ಉಪಯೋಗಿಸುತ್ತಿದ್ದು, ಪ್ರಯಾಣಿಕರನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಕೊಂಡೊಯ್ಯುತ್ತಿದ್ದು, ಪ್ರಯಾಣಿಕರು ತಮ್ಮೊಂದಿಗೆ ಕೊಂಡೊಯ್ಯುವ ಸರಕುಗಳು ಪ್ರಯಾಣಿಕರಿಗೆ ಸಂಬಂಧಿಸಿದ್ದು, ರಿಕ್ಷಾ ಚಾಲಕನಿಗೆ ಸರಕುಗಳ ಬಗ್ಗೆ ಯಾವುದೇ ಸಂಬಂಧವಿರುವುದಿಲ್ಲ. ಆದ ಕಾರಣ ಇಂತಹ ಯಾವುದೇ ಅಕ್ರಮ ಸೊತ್ತುಗಳು ತಾನು ರಿಕ್ಷಾದಲ್ಲಿ ಕೊಂಡುಹೋಗದೆ ಇರುವಂತೆ ಚಾಲಕನಿಗೆ ತಿಳುವಳಿಕೆ ನೀಡಿರುತ್ತೇನೆ ಎಂದು ಹಾಗೂ ತಾನು ಖಂಡಿತವಾಗಿಯೂ ನಿರಪರಾಧಿಯಾಗಿರುತ್ತೇನೆ ಎಂದು ತನ್ನ ಅರ್ಜಿಯಲ್ಲಿ ತಿಳಿಸಿರುತ್ತಾರೆ. ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಈ ಕೃತ್ಯ ನಡೆದಿದೆ ಎಂಬುದರ ಬಗ್ಗೆ ಯಾವುದೇ ನಂಬಲಾರ್ಹ ಅಂಶಗಳು ದೃಢವಾಗದೇ ಇರುವುದರಿಂದ ಎರಡನೇ ಅಂಶವನ್ನು ಸಕಾರಾತ್ಮಕವಾಗಿ ಪರಿಗಣಿಸಿದೆ.

3 ನೇ ವಿವಾದಾ ಶದ ಬಗ್ಗೆ:

ಪ್ರಕರಣದ ಪತ್ತೆ ಸಂದರ್ಭದಲ್ಲಿ ಅಬಕಾರಿ ನಿರೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರು ವಾಹನ ಶೋಧನೆ ಮಾಡಿದ ಸಂದರ್ಭದಲ್ಲಿ ವಾಹನ ಶೋಧನಾ ವಾರೆ ಟ್ ಪಡೆದಿರುವುದಿಲ್ಲ. ಹಾಗೂ ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 54 ರಡಿ ಶೋಧನಾ ವಾರೆಂಟ್ ಇಲ್ಲದೇ ಶೋಧನಾ ಕಾರ್ಯ ಜರುಗಿಸಿದ ಬಗ್ಗೆ ಕಾರಣ ತಿಳಿಸಿ ವರದಿಯನ್ನು ತಯಾರಿಸಿರುವುದಿಲ್ಲ ಹಾಗೂ ಮಹಜರಿನಲ್ಲಿ ನಮೂದಿಸಿರುವುದಿಲ್ಲ ಹಾಗೂ ಮಾನ್ಯ ಸತ್ರ ನ್ಯಾಯಾಲಯ, ದ.ಕ.ಜಿಲ್ಲೆ, ಮಂಗಳೂರು ಇವರ ಕ್ರಿಮಿನಲ್ 63/2003 ದಿ: 19-1-2004 ಮತ್ತು ಮಾನ್ಯ ಉಚ್ಚ ನ್ಯಾಯಾಲಯ, ಕರ್ನಾಟಕ, ಬೆಂಗಳೂರು ಇವರ ಕ್ರಿಮಿನಲ್ ರಿವಿಷನ್ ಪಿಟಿಷನ್ ಸಂ: 802/2004 ದಿ: 1-8-2007 ರ ಆದೇಶದಲ್ಲಿ ಅಬಕಾರಿ ಕಾಯಿದೆಯನ್ವಯ ವಾಹನವನ್ನು ಶೋಧನೆ ಮಾಡುವ ಮೊದಲು ಮಾನ್ಯ ನ್ಯಾಯಾಲಯದಿಂದ ಸರ್ಚ್ ವಾರಂಟ್ ಪಡೆಯಬೇಕು ಅಥವಾ ಸರ್ಚ್ ವಾರಂಟ್ ಪಡೆಯಲು ಕಾಲಾವಕಾಶ ಇಲ್ಲದ ಕಾರಣ ಸರ್ಚ್ ಮೆಮೊವನ್ನು ತಯಾರಿಸಿ ಮಹಜರಿನಲ್ಲಿ ನಮೂದಿಸಿರಬೇಕು ಎಂಬ ಕಾರಣಕ್ಕೆ ಅಂದಿನ ಪ್ರಾಧಿಕಾರವು ನೀಡಿದ ಆದೇಶವನ್ನು ತಳ್ಳಿ ಹಾಕಿ ವಾಹನವನ್ನು ಅರ್ಜಿದಾರರ ವಶಕ್ಕೆ ಬಿಡುಗಡೆಗೊಳಿಸಬೇಕೆಂದು ತೀರ್ಪು ನೀಡಿರುತ್ತಾರೆ. ಈ ಪ್ರಕರಣದಲ್ಲಿ ಫಿರ್ಯಾದುದಾರರು ದಿ: 19-1-2000 ರಂದು ರಾತ್ರಿ 10-15 ಗಂಟೆಗೆ ವಾಹನ ಸಂಖ್ಯೆ: ಕೆಎ-19-9692 ನ್ನು ಶೋಧಿಸಿದ ಸಂದರ್ಭದಲ್ಲಿ ಶೋಧನಾ ವಾರಂಟ್ ಪಡೆಯದಿದ್ದು, ರೆಕಾರ್ಡ್ಸ್ ಆಫ್ ರೀಜನ್ಸ್ ಮೆಮೊವನ್ನು ಸಹಾ ನ್ಯಾಯಾಲಯಕ್ಕೆ ಒಪ್ಪಿಸದಿರುವ ಕಾರಣ ಮೇಲಿನ ಘನ ಉಚ್ಚ ನ್ಯಾಯಾಲಯದ ತೀರ್ಪನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿರುತ್ತದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಕ್ಷ್ಯಾಧಾರಗಳು ಇಲ್ಲದಿರುವುದರಿಂದ ಪ್ರಾಸಿಕ್ಯೂಶನ್ ಆರೋಪವನ್ನು ಸಾಬೀತುಪಡಿಸಲು ವಿಫಲರಾಗಿರುತ್ತಾರೆ.

ವಾಹನ ಜಪ್ತು ಸಂದರ್ಭದಲ್ಲಿ ಚಾಲಕನೊಂದಿಗೆ ಹಿಂದಿನ ಸೀಟಿನಲ್ಲಿ ಪ್ರಯಾಣಿಸುತ್ತಿದ್ದ ಇಬ್ಬರು ವ್ಯಕ್ತಿಗಳು ಬಂಧಿತರಾಗಿದ್ದು, ಸದ್ರಿ ಜಪ್ತು ಆಗಿರುವ ಸಾರಾಯಿ ಸದ್ರಿ ವ್ಯಕ್ತಿಗಳಿಗೆ ಸಂಬಂಧಿಸಿದೆಯೇ ಎಂಬುದರ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳು ಸಿದ್ಧಪಡಿಸಿರುವುದಿಲ್ಲ.

ವಾಹನ ಮಾಲಕಿ ಈ ಪ್ರಕರಣದಲ್ಲಿ ದಿ:28-1-2000 ರಂದು ವಕೀಲರ ಮೂಲಕ ನೀಡಿರುವ ಅರ್ಜಿ ಯಲ್ಲಿ ತನ್ನ ವಾಹನವು ಸಾರ್ವಜನಿಕರ ಪ್ರಯಾಣಕ್ಕೆ ಉಪಯೋಗಿಸಿದ್ದು, ಬಾಡಿಗೆ ವಾಹನ ಆಗಿರುವುದು ಮತ್ತು ಸದ್ರಿ ವಾಹನ ದಿನನಿತ್ಯ ಬಾಡಿಗೆಗೆ ಸಾರ್ವಜನಿಕ ಸಾರಿಗೆ ವಾಹನವಾಗಿ ಸಂತೋಷ್ ಎಂಬ ಚಾಲಕನು ವಾಹನವನ್ನು ಚಲಾಯಿಸುತ್ತಿದ್ದು, ಇಂತಹ ಕೃತ್ಯಗಳನ್ನು ನಡೆಸಬಾರದಾಗಿ ಸದ್ರಿ ವಾಹನ ಚಾಲಕನಿಗೆ ಸೂಚನೆ ನೀಡಿರುವುದಾಗಿ ಮತ್ತು ಅರಿವಿಲ್ಲದೇ ಈ ಕೃತ್ಯದ ಬಗ್ಗೆ ಯಾವುದೇ ಅರಿವು ಇಲ್ಲವೆಂದು ತಿಳಿಸಿರುತ್ತಾರೆ. ಮೇಲಿನ ಕಾರಣಗಳಿಂದಾಗಿ ಎರಡನೇ ವಿವಾದಾಂಶಕ್ಕೆ ಸಕಾರಾತ್ಮಕವಾಗಿ ಹಾಗೂ ಮೂರನೇ ವಿವಾದಾ ಶಕ್ಕೆ ನಕಾರಾತ್ಮಕವಾಗಿ ನಿರ್ಣಯಿಸಬಹುದಾಗಿರುತ್ತದೆ. ಕಾರಣ ಈ ಆದೇಶ.

ಆದೇಶ ಸಂಖ್ಯೆ: ಎಸ್‌ಡಿಕೆ/410/ಡಿಟಿಸಿಆರ್/1999-00 ದಿ: 28ನೇ ಮಾರ್ಚ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43 (ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಕಾಲಂ 43 ಎ ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ನಿರೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರ ತಕ್ಷೀರು ಸಂ: 24/1999-00 ದಿ:19-1-2000 ರಲ್ಲಿ ಜಪ್ತುಪಡಿಸಿರುವ ವಾಪನ ಬಜಾಜ್ ಆಟೋರಿಕ್ಷಾ ಸಂಖ್ಯೆ: ಕೆಎ-19-9692 ನ್ನು ಈ ಪ್ರಾಧಿಕಾರದ ಆದೇಶದ ಸಂಖ್ಯೆ: ಎಸ್‌ಡಿಕೆ/410/ಡಿಟಿಸಿಆರ್/1999-2000 ದಿ: 28-3-2000 ರಲ್ಲಿ ವಾಹನದ ಆರ್.ಸಿ. ಮಾಲೀಕರಾದ ಶ್ರೀಮತಿ ಶಾಲಿನಿ ಶ್ರೀನಿವಾಸ, ಪದ್ಮ ನಿಲಯ, ರಂಜಿತ್ ಗ್ಯಾರೇಜ್, ಮಂಕಿಸ್ಟ್ಯಾಂಡ್, ಮಂಗಳಾದೇವಿ, ಮಂಗಳೂರು ಇವರ ಪರ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಿದ ಆದೇಶವನ್ನು ಖಾ ಯ ಗೊಳಿಸಿ ಆದೇಶಿಸಿದೆ ಹಾಗೂ ಸದ್ರಿ ವಾಹನ ಮಾಲೀಕರು ತಾತ್ಕಾಲಿಕ ಬಿಡುಗಡೆಗಾಗಿ ಒಪ್ಪಿಸಿರುವ ಭದ್ರತೆಯ ಇ ಡೆಮಿನ್ನಿಟಿ ಬಾಂಡ್ ಪತ್ರವನ್ನು ರದ್ದುಪಡಿಸಿ ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 28-03-2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ.-1: ಶ್ರೀ ಎಂ.ಆರ್ ನಾಯರ್, ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ.

ಪ್ರಾ.ಸಾ.-2: ಶ್ರೀ ಹೆಚ್.ಎನ್.ಹಳಿಯಾರ್‌ಕರ್, ಅಬಕಾರಿ ನಿರೀಕ್ಷಕರು, ಹಾವೇರಿ ಜಿಲ್ಲೆ.

ಪ್ರಾ.ಸಾ.-3: ಶ್ರೀ ರವೀಂದ್ರ ಕೋಟೆಕಾರ್, ನಿವೃತ್ತ ಅಬಕಾರಿ ನಿರೀಕ್ಷಕರು.

ಅನುಬಂಧ-2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ-1 : ಸ್ಥಳ ಮಹಜರು ಪ್ರತಿ

ನಿಶಾನೆ ಪಿ-2 : ಸೊತ್ತುಗಳ ಪಟ್ಟಿ

ನಿಶಾನೆ ಪಿ-3 : ಪ್ರಥಮ ಮಾಹಿತಿ ವರದಿ ಪ್ರತಿ

ಅನುಬಂಧ-3

ವಾಹನ ಮಾಲೀಕರ ಪರ ವಿಚಾರಣೆ ಮಾಡಿದ ಸಾಕ್ಷಿದಾರರು:-

-ಇಲ್ಲ-

ಅನುಬಂಧ-4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

-ಇಲ್ಲ-

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.437

AMANATH CO-OPERATIVE BANK LTD., SHIVAJINAGAR BRANCH

FORM-7

DISPUTE NO.JRD/UBF/9100/2005-2006

E.P.NO.AR/RO(U/R441)/CEP/12/2009-10

RULE 38(2) (C)

ATTACHMENT OF IMMOVABLE PROPERTY

Amanath Co-operative Bank Ltd., Shivajinagar Branch, Bangalore has obtained an award/ decree in the mentioned dispute against Mr. Mohammed Yousuff and Mr. Mohamed Asadulla after issuance of notices both residing at No.1022/47, 38th Cross, 4th T Block, Jayanagar, Bangalore to recovery an amount of Rs.1,29,39,621=00 along with further intrest @ 17% + 2% Penal intrest from 01.06.2006 which has not been paid by you. As the loanee Mr. Mohamed Yousuff you are due to the Bank a sum of Rs.2,15,15,022/- as on 30.04.2009 along with further intrest and other charges from 01.05.2009. This notice is to inform you that the following immovable property belonging to you has been attached and if the entire amount due to the Bank is not repaid by you along with intrest and other charges within 15 days of this notice the immovable properties which have been attached, shall be brought for action/ sale as per act/ law.

The immovable property belonging to the loanees.

ITEM NO.1:

All that piece and parcel of land in Sy.No.36, measuring to an extent of 35 Guntas situated at Kalikere Village, Jigani Hobli, Anekal Taluk, Bangalore Rural District, and being bounded on:

North by: Sakalwara Road.

South by: Part of Survey No.36.

East by: Sy.No.37 owned by Mr. Mohd. Yousuff.

West by: Bannerghatta Main Road.

ITEM NO.2

All that piece and parcel of vacant Agricultural Land situated at Kalkere Village, Jigani Hobli, Anekal Taluk, Bangalore Rural District, bearing Sy.No.37 dry land measuring 3.24 Acres with a bore-well, trees, fencing, bounded by as follows towards:

East by: Sy.No.38 & 39 (Narasamma, Lakshmaiah, Luddi Ramaiah Lands S.Nos. of 39 Vendors).

West by: Sy.No.36 belonging to the vendor which is awarded by L.T. Anekal Taluk.

North by: Sakalwara Road.

South by: Pillaiahs Property.

ITEM NO.3

All that piece and parcel of land in Sy.No.39/1 measuring 0-10 Guntan situated at Kalkere Village, Jigani Hobli, Anekal Taluk, Bangalore District, together with all rights, appurtenances, whatsoever whether underneath on above the surface and bounded as follows:

East by: Land belongs to K.R. Krishnappa.

West by: Land bearing Sy.No.37, belongs to Sri Mohamed Yousuff.

North by: Land belongs to Kaverappa.

South by: Land belongs to K.R. Krishnappa.

Sale Officer, Amanath Co-Operative Bank Ltd.,
Shivajinagar Branch.

PD-32

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ
ವಿಧಿ 28(4)ರ ಅಧಿಸೂಚನೆ

ಸಂಖ್ಯೆ: ಸಿಐ173 ಎಸ್‌ಪಿಕ್ಯೂ 2007, ಬೆಂಗಳೂರು, ದಿನಾಂಕ:19ನೇ ಮೇ, 2009

1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯ (1966ರ ಕರ್ನಾಟಕ ಕಾಯ್ದೆ ಸಂಖ್ಯೆ: 18) ವಿಧಿ 28(1)ರ ಪ್ರಕಾರ ದತ್ತವಾದ ಅಧಿಕಾರದ ಮೇರೆಗೆ ದಿನಾಂಕ:03.05.2002ರ ಅಧಿಸೂಚನೆ, ಕರ್ನಾಟಕ ವಿಶೇಷ ರಾಜ್ಯಪತ್ರ ಭಾಗ-3ರ ವಿಶೇಷ ಪತ್ರಿಕೆ ಪುಟ ಸಂಖ್ಯೆ 1 ರಿಂದ 9ರಲ್ಲಿ ಪ್ರಕಟವಾಗಿರುವ ಅಧಿಸೂಚನೆ ಸಂಖ್ಯೆ: ಸಿಐ 160 ಎಸ್.ಪಿ.ಕ್ಯೂ. 2002 ದಿನಾಂಕ:03.05.2002ರ ಭೂಸ್ವಾಧೀನಕ್ಕೆ ಒಳಪಟ್ಟ ಪ್ರದೇಶದ ಪ್ರಕಾರ ಸರ್ಕಾರಿ ಸದರಿ ಅಧಿಸೂಚನೆಯಲ್ಲಿ ನಮೂದಿಸಲ್ಪಟ್ಟಿರುವ ಜಮೀನುಗಳನ್ನು ಕೈಗಾರಿಕಾ ಪ್ರದೇಶ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಇಚ್ಚೆಪಟ್ಟಿದೆ.

ಮೇಲ್ಕಂಡ ಅಧಿಸೂಚನೆಯ ಷೆಡ್ಯೂಲ್‌ನಲ್ಲಿ ನಮೂದಿಸಲ್ಪಟ್ಟಿರುವ ಜಮೀನುಗಳನ್ನು ಪ್ರಕಟಿಸಲಾಗಿರುವ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಬೇಕಾಗಿರುವುದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿದೆ. ಈ ಬಗ್ಗೆ ಮೇಲ್ಕಂಡ ಕಾಯ್ದೆ ವಿಧಿ 28(3)ರ ಪ್ರಕಾರ ಆದೇಶ ಹೊರಡಿಸಲಾಗಿದೆ.

ಆದುದರಿಂದ 1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ ವಿಧಿ 28(4)ರ (1966ರ ಕರ್ನಾಟಕ ಕಾಯ್ದೆ ಸಂಖ್ಯೆ:18)ರ ಮೇರೆಗೆ ದತ್ತವಾದ ಅಧಿಕಾರದ ಮೇರೆಗೆ ಕರ್ನಾಟಕ ಸರ್ಕಾರ ಕೆಳಗೆ ನಮೂದಿಸಿರುವ ಜಮೀನುಗಳನ್ನು ಅಧಿಸೂಚನೆಯಲ್ಲಿ ತಿಳಿಸಿರುವ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ಘೋಷಿಸಲಾಗಿದೆ.

ಗ್ರಾಮ: ಪೆಮ್ಮನಹಳ್ಳಿ ಹೋಬಳಿ: ಸೋಂಪುರ ತಾಲ್ಲೂಕು: ನೆಲಮಂಗಲ ಜಿಲ್ಲೆ: ಬೆಂಗಳೂರು ಗ್ರಾಮಾಂತರ

ಕ್ರ. ಸಂ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ.	ಸ್ವಾಧೀನ ಪಡಿಸಿಕೊಳ್ಳುತ್ತಿರುವ ವಿಸ್ತೀರ್ಣ			ಆಕಾರ (ರೂ)	ತರಹೆ	ಚೆಕ್ಕುಬಂದಿ			
				ಐನ್ ಎ-ಗು	ಖರಾಬು ಎ-ಗು	ಉಳಿಕೆ ಎ-ಗು			ಪೂರ್ವ ಸ.ನಂ.	ಪಶ್ಚಿಮ ಸ.ನಂ.	ಉತ್ತರ ಸ.ನಂ.	ದಕ್ಷಿಣ ಸ.ನಂ.
1.	ತಿಮ್ಮರಾಯಪ್ಪ ಬಿನ್ ವೆಂಕಟನರಸಯ್ಯ, ಸಿದ್ದಪ್ಪ ಬಿನ್ ತಿಮ್ಮರಾಯಪ್ಪ, ಚಿಕ್ಕನರಸಿಂಹಯ್ಯ ಉ॥ ಪಾಪಯ್ಯ ಬಿನ್ ಚಿಕ್ಕವೆಂಕಟನರಸಯ್ಯ	ತಿಮ್ಮರಾಯಪ್ಪ, ಸಿದ್ದಪ್ಪ, ಚಿಕ್ಕನರಸಿಂಹಯ್ಯ ಉ॥ ಪಾಪಯ್ಯ	63	4–11	0–04	4–07	5–35	ಖುಷ್ಕಿ	60, 62	64	59	ಎಡೇಹಳ್ಳಿ ಗಡಿ
2.	ಬಿ.ವಿ. ನರಸಿಂಹಯ್ಯ ಬಿನ್ ದೊಡ್ಡವೆಂಕಟಯ್ಯ	ಬಿ.ವಿ. ನರಸಿಂಹಯ್ಯ	64/1	2–04	–	2–04	3–15	ಖುಷ್ಕಿ	64/2	65	74	ಎಡೇಹಳ್ಳಿ ಗಡಿ
3.	ಚಿಕ್ಕನರಸಿಂಹಯ್ಯ ಬಿನ್ ಚಿಕ್ಕವೆಂಕಟನರಸಯ್ಯ ಉ॥ ಪಾಪಯ್ಯ	ಚಿಕ್ಕನರಸಿಂಹಯ್ಯ	64/2	1–32	–	1–32	2–69	ಖುಷ್ಕಿ	63	64/1	59	ಎಡೇಹಳ್ಳಿ ಗಡಿ
4.	ಬಿ.ಎಸ್.ಮಾಯಣ್ಣ ಬಿನ್ ಬಿ.ವಿ.ನರಸಿಂಹಯ್ಯ	ಬಿ.ಎನ್.ಮಾಯಣ್ಣ	65/3	1–39	–	1–39	2–74	ಖುಷ್ಕಿ	64	65/2	34	ಎಡೇಹಳ್ಳಿ ಗಡಿ
	ಒಟ್ಟು			10–06	0–04	10–02						

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಎಂ. ವೀರಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ (ಕೈಅ)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಪಿ.ಆರ್.471

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ, ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರ ನಡವಳಿಗಳು

ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನೆಲಮಂಗಲ ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ ನಿರ್ಮಿಸಲು ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಸಂಬಂಧಿಸಿದ 400x100 ಅಡಿ ನಿವೇಶನವನ್ನು ಹಸ್ತಾಂತರಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ: ಇಡಿ:146: ಯೋಸಕ 2008 ದಿನಾಂಕ:13.11.2008 (ಇಡಿ-175-ಸ್ಪೀಮರ (ಯುನಿಕ್) 2008. ದಿನಾಂಕ:13.11.2008.

2) ದಿನಾಂಕ:04.12.2008 ಕಾಶಿಇ-20-ಯೋಜನೆ-2007-08 ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕರ ಪತ್ರ.

3) ದಿನಾಂಕ:22.12.2008 ಪಪೂಶಿಇ:ಕಟ್ಟಡ:ಅನು:12:08-09 ಜಂಟಿ ನಿರ್ದೇಶಕರು (ಶೈ.ಶಾ) ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಪತ್ರ.

4) ದಿನಾಂಕ:02.01.2009 ಸಂಖ್ಯೆ: ಉನಿಕ:ಪಪೂಶಿ:ವೃಶಿಇ:ಬೆಂಗ್ರಾಜಿ: ಪ್ರಥಮ ದರ್ಜೆ ಕಾಲೇಜು: ನಿವೇಶನ:2008-09, ಬೆಂಗಳೂರು ಗ್ರಾಮಾಂತರ ಜಿಲ್ಲೆ ಪದವಿ ಪೂರ್ವ ಹಾಗೂ ವೃತ್ತಿ ಶಿಕ್ಷಣ ಇಲಾಖೆ ಉಪನಿರ್ದೇಶಕರು ಇವರ ಪತ್ರ.

5) ದಿನಾಂಕ:05.01.2009 ಸಪಪೂಕಾಬಿಬಿ-005-129:2008-09 ಈ ಕಛೇರಿಯಿಂದ ನೆಲಮಂಗಲ ತಾಲ್ಲೂಕು ತಹಶೀಲ್ದಾರ್ ರವರಿಗೆ ರವಾನಿಸಿದ ಪತ್ರ.

6) ದಿನಾಂಕ:03.02.2009 ಸಂಖ್ಯೆ: ಎಲ್‌ಎನ್‌ಡಿಸಿಆರ್:120:2008-09, ನೆಲಮಂಗಲ ತಾಲ್ಲೂಕು, ತಹಶೀಲ್ದಾರ್‌ರವರ ಪತ್ರ.

ಪ್ರಸ್ತಾವನೆ:

ನೆಲಮಂಗಲ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಸರ್ವೆ ಸಂಖ್ಯೆ:210:1ಎ, 210:2 ಮತ್ತು 211ರ ಜಮೀನಿನ ಪಶ್ಚಿಮ:ನೈರುತ್ಯ ದಿಕ್ಕಿನಲ್ಲಿರುವ 400x100 ಅಡಿ ನಿವೇಶನವನ್ನು ನೆಲಮಂಗಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ ನಿರ್ಮಾಣ ಮಾಡಲು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಹಸ್ತಾಂತರಿಸಲು ನಿಯಮಾನುಸಾರ ಕ್ರಮಕೈಗೊಳ್ಳಲು ಆಯುಕ್ತರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಉಲ್ಲೇಖ (1)ರ ಆದೇಶದಲ್ಲಿ ಸರ್ಕಾರವು ಅನುಮತಿ ನೀಡಿದೆ. ಈ ಹಿನ್ನಲೆಯಲ್ಲಿ ಉಲ್ಲೇಖ (2)ರ ಕಾಲೇಜು ಶಿಕ್ಷಣ ನಿರ್ದೇಶಕರ ಪತ್ರದಲ್ಲಿ ಸದರಿ ಇಲಾಖೆಯ ಪರವಾಗಿ ಪ್ರಾಂಶುಪಾಲರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನೆಲಮಂಗಲ ಇವರಿಗೆ ಹಸ್ತಾಂತರಿಸಿ ಕಾಲೇಜನ್ನು ನಿರ್ಮಿಸಲು ಸಹಕಾರ ನೀಡುವಂತೆ ಕೋರಲಾಗಿದೆ. ಉಲ್ಲೇಖ (3)ರ ಪತ್ರದಲ್ಲಿ ಬೆಂಗಳೂರು ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರು ಸರ್ಕಾರದ ಆದೇಶದಂತೆ ಕ್ರಮ ಕೈಗೊಳ್ಳಲು ಬೆಂಗಳೂರು ಗ್ರಾಮಾಂತರ ಜಿಲ್ಲೆ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರು ಇವರಿಗೆ ಸೂಚಿಸಿರುತ್ತಾರೆ. ಸದರಿ ಉಪ ನಿರ್ದೇಶಕರು ಉಲ್ಲೇಖ (4) ರ ಪತ್ರದಲ್ಲಿ ಸಂಬಂಧಪಟ್ಟ ಕಂದಾಯ ಇಲಾಖಾ ಅಧಿಕಾರಿಗಳನ್ನು ಸಂಪರ್ಕಿಸಿ ನಿವೇಶನವನ್ನು ಅಳತೆ ಮಾಡಿಸಿ ಬೇರ್ಪಡಿಸಿದ ನಿವೇಶನದ ನಕಾಶೆಯನ್ನು ಸಿದ್ದಪಡಿಸಿ ಕ್ರಮಬದ್ಧವಾಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನೆಲಮಂಗಲ ಇಲ್ಲಿಯ ಪ್ರಾಚಾರ್ಯರಿಗೆ ಹಸ್ತಾಂತರಿಸಲು ಈ ಕಛೇರಿಗೆ ಸೂಚಿಸಲಾಗಿದೆ. ಈ ನಿಟ್ಟಿನಲ್ಲಿ ನೆಲಮಂಗಲ ತಾಲ್ಲೂಕು ತಹಶೀಲ್ದಾರ್‌ರವರಿಗೆ ಅಳತೆ ಮಾಡಿಸಿ ಕ್ರಮಬದ್ಧವಾಗಿ ಹಸ್ತಾಂತರಿಸಲು ಉಲ್ಲೇಖಿತ (5)ರ ಪತ್ರದಲ್ಲಿ ಈ ಕಛೇರಿಯಿಂದ ಕೋರಲಾಗಿದೆ. ಸದರಿ ತಹಶೀಲ್ದಾರ್‌ರವರು ಉಭಯ ಕಾಲೇಜುಗಳ ಪ್ರಾಂಶುಪಾಲರ ಸಮ್ಮುಖದಲ್ಲಿ ಅಳತೆ ಮಾಡಿಸಿ ನಕ್ಷೆಯೊಂದಿಗೆ ಉಲ್ಲೇಖಿತ (6)ರ ಪತ್ರದಲ್ಲಿ ನಿವೇಶನ ಹಸ್ತಾಂತರಿಸುವ ಅಂದರೆ ಸ್ವಾಧೀನಕ್ಕೆ ನೀಡುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಿರುತ್ತಾರೆ.

ಸದರಿ ಸರ್ಕಾರದ ಆದೇಶ ಹಾಗೂ ಮೇಲಾಧಿಕಾರಿಗಳ ಸೂಚನೆ ಅನುಸರಣೆಗಾಗಿ ಈ ಕಛೇರಿಯ ಆದೇಶ.

ಆದೇಶ ಸಂಖ್ಯೆ: ಸಪಪೂ:ಕಾಬಿಬಿ:005:129:2008-09, ನೆಲಮಂಗಲ, ದಿನಾಂಕ:4ನೇ ಫೆಬ್ರವರಿ, 2009

ಪ್ರಸ್ತಾವನೆಯಲ್ಲಿ ವಿವರಿಸುವಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಸೇರಿದ ಸರ್ವೆ ಸಂಖ್ಯೆ: 210:1ಎ, 210:2 ಮತ್ತು 211ರ ಜಮೀನಿನ ಪಶ್ಚಿಮ:ನೈರುತ್ಯ ದಿಕ್ಕಿನಲ್ಲಿರುವ 400x100 ಅಡಿ ನಿವೇಶನವನ್ನು ಕಂದಾಯ ಅಧಿಕಾರಿಗಳು ಅಳತೆ ಮಾಡಿರುವ ನಕ್ಷೆಯಂತೆ ನೆಲಮಂಗಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ನಿರ್ಮಾಣ ಮಾಡಲು ನೆಲಮಂಗಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರ ಸ್ವಾಧೀನಕ್ಕೆ ಈ ಮೂಲಕ ನೀಡಲಾಗಿದೆ.

ಪ್ರಾಂಶುಪಾಲರು,
ಸರ್ಕಾರಿ ಪದವಿ ಪೂರ್ವ ಕಾಲೇಜು, ನೆಲಮಂಗಲ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಪಿ.ಆರ್.476

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ:ಎಸ್‌ಡಿಕೆ/307/ಡಿಟಿಸಿಆರ್/2005–06, ದಿನಾಂಕ:28ನೇ ಮಾರ್ಚ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ. ಮಂಗಳೂರು.

ಫಿರ್ಯಾದುದಾರರು:

ಅಬಕಾರಿ ಉಪ ನಿರೀಕ್ಷಕರು (ನಂ.2), ಜಾರಿ ಮತ್ತು ತನಿಖೆ, ಸುಳ್ಯ.

ಆರೋಪಿ:

ವಿ.ವಿ.ಸಂಜೀವ, ಬಿನ್ ಕೆ.ಕೆ.ನಾಯರ್, ಮನೆ: ಬಿ.ಡಿ.ಒ. ಕಚೇರಿ ಹಿಂಬದಿ, ಸುಳ್ಯ. (ಪರಾರಿಯಾಗಿರುತ್ತಾನೆ)

ವಾಹನ ಮಾಲೀಕರು:

ಶ್ರೀ.ವಿ.ವಿ.ಸಂಜೀವ, ಬಿನ್ ಕೆ.ಕೆ.ನಾಯರ್, ವಾಸ: ಅಚಿರ ಬಿ.ಡಿ.ಒ ಕಚೇರಿ ಬಳಿ, ಸುಳ್ಯ ಕಸಬಾ ಗ್ರಾಮ, ಸುಳ್ಯ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:16-12-2005 ರಂದು ಫಿರ್ಯಾದುದಾರರು ಸಿಬ್ಬಂದಿಯೊಂದಿಗೆ ಸುಳ್ಯ ತಾಲೂಕು ಸುಳ್ಯ ಪೇಟೆಯ ಬಿ.ಡಿ.ಒ. ಕಚೇರಿ ಹಿಂಬದಿ ವಿ.ವಿ.ಸಂಜೀವನ್ ಇವರ ಮನೆ ನಂ: 73 ರ ಆವರಣದಲ್ಲಿ ಅಕ್ರಮವಾಗಿ ಮದ್ಯ ದಾಸ್ತಾನು ಹೊಂದಿ ಸರಬರಾಜು ಮಾಡುತ್ತಿರುತ್ತಾರೆ ಎಂದು ದೊರೆತ ಖಚಿತ ವರ್ತಮಾನದ ಮೇರೆಗೆ, ಸದರಿ ಮನೆಯ ಆವರಣದಲ್ಲಿ ಬಿಳಿ ಬಣ್ಣದ ಮಾರುತಿ ಕಾರು ಕೆಎ–19–ಎನ್–6190 ನಿಂತಿದ್ದು, ಇದನ್ನು ಪರಿಶೀಲಿಸಿ ನೋಡಿದಾಗ ಅದರ ಹಿಂಬದಿಯ ಡಿಕ್ಕಿನಲ್ಲಿ ಮದ್ಯದ ಪೆಟ್ಟಿಗೆಗಳು ಇರುವುದು ಖಚಿತವಾಗಿರುವುದರಿಂದ, ಅದನ್ನು ಪರಿಶೀಲಿಸಲು ಮಾನ್ಯ ನ್ಯಾಯಾಲಯದಿಂದ ಸರ್ಚ್ ವಾರಂಟ್ ತರಲು ವಿಳಂಬವಾದ ಕಾರಣ ಹಾಗೂ ವಿಳಂಬಿಸಿದಲ್ಲಿ ಪುರಾವೆಗಳು ನಾಶವಾಗುವ ಕಾರಣ ತನ್ನ ಸಿಬ್ಬಂದಿಯವರ ಸಮಕ್ಷಮ ಒಂದು ಸರ್ಚ್ ಮೆಮೊವನ್ನು ತಯಾರಿಸಿ, ಕಾರಿನ ಡಿಕ್ಕಿಯನ್ನು ಪರಿಶೀಲಿಸಿದಾಗ, ಅದರಲ್ಲಿ 2 ರಟ್ಟಿನ ಪೆಟ್ಟಿಗೆಗಳಿದ್ದು, ಒಂದೊಂದು ರಟ್ಟಿನ ಪೆಟ್ಟಿಗೆಯಲ್ಲಿ 180 ಎಂ.ಎಲ್. ನ 48 ಸೀಸೆಗಳ ಓಲ್ಡ್ ಮಾಂಕ್ ರಮ್ ಎಂಬ ನಕಲಿ ಲೇಬಲ್ ಇರುವ 2 ರಟ್ಟಿನ ಪೆಟ್ಟಿಗೆಗಳು ಪತ್ತೆಯಾದವು. ಆರೋಪಿಯು ಸಿಬ್ಬಂದಿಯವರನ್ನು ಕಂಡು ಮನೆಯ ಹಿಂದಿನ ಬಾಗಿಲಿನಿಂದ ಪರಾರಿಯಾದನು. ನಂತರ ಮನೆಯನ್ನು ಪರಿಶೀಲಿಸಲಾಗಿ, ಮನೆಯಲ್ಲಿ ಯಾವುದೇ ಮದ್ಯವು ದೊರಕಲಿಲ್ಲ. ರಾಸಾಯನಿಕ ಪರೀಕ್ಷೆಯ ಸಲುವಾಗಿ 2 ರಟ್ಟಿನ ಪೆಟ್ಟಿಗೆಯಿಂದ 180 ಎಂ.ಎಲ್. ನ ತಲಾ 2 ರಂತೆ ಒಟ್ಟು 4 ಬಾಟಲ್‌ಗಳನ್ನು ತೆಗೆದು ಬಟ್ಟೆ ದಾರವನ್ನು ಕಟ್ಟಿ ಇಲಾಖಾ ಸೀಲ್‌ನಿಂದ ಸೀಲ್ ಮಾಡಿ ಆರೋಪಿಯ ವಿಳಾಸವಿರುವ ಗುರುತಿನ ಚೀಟಿಯನ್ನು ಮಾದರಿ ಬಾಟಲ್‌ಗಳಿಗೂ ಹಾಗೂ 2 ರಟ್ಟಿನ ಪೆಟ್ಟಿಗೆಗಳಿಗೂ ಅಂಟಿಸಲಾಯಿತು. ಮಾದರಿಯ ಮೊಹರನ್ನು ಸ್ಥಳದಲ್ಲಿಯೇ ತಯಾರಿಸಿ ಮಹಜರನ್ನು ಸ್ಥಳದಲ್ಲಿಯೇ ಬರೆಯಲಾಯಿತು. ಇದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 11 ಮತ್ತು 14 ರ ಪ್ರಕಾರ ಅಪರಾಧವಾಗಿದ್ದು, ಕಲಂ 32, 34, 38(ಎ) ಶಿಕ್ಷಾರ್ಹವಾಗಿರುವುದರಿಂದ, 17-280 ಲೀಟರ್ ಮದ್ಯ ಮತ್ತು ಸಾಗಾಣಿಕೆಗೆ ಬಳಸಿದ ಮಾರುತಿ 800 ಕಾರು ಸಂಖ್ಯೆ: ಕೆಎ–19–ಎನ್–6190 ನ್ನು ವಶಪಡಿಸಿಕೊಂಡು ಪರಾರಿಯಾದ ಆರೋಪಿಯ ವಿರುದ್ದ ತಕ್ಷೀರು ಸಂ: 5/2005-06 ದಿ: 16-12-2005 ರಂತೆ ಪ್ರಕರಣವನ್ನು ನೋಂದಾಯಿಸಿ ಮಾನ್ಯ ನ್ಯಾಯಾಲಯಕ್ಕೂ ಹಾಗೂ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಪ್ರಕರಣದ ತನಿಖೆಯನ್ನು ಫಿರ್ಯಾದುದಾರರು ಮುಂದುವರಿಸುತ್ತ, ಇವರ ತನಿಖಾ ವರದಿ ಸಂ: ಸಿಆರ್.ನಂ.17/2005-06 ದಿ: 6-4-2006 ರ ತನಿಖಾ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿ, ಸದರಿ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯದ ಮಾದರಿ ಬಾಟಲ್‌ಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿದ್ದು, ಸಹಾಯಕ ರಾಸಾಯನಿಕ ವಿಶ್ಲೇಷಕರು, ದ.ಕ.ಜಿಲ್ಲೆ, ಮಂಗಳೂರು ಇವರ ವರದಿ ಸಂ: ಇ–43 ದಿ: 25-1-2006 ರಲ್ಲಿ ಮದ್ಯದ ಮದ್ಯಸಾರ ಪ್ರಮಾಣ ಶೇ.33% ಇರುವುದಾಗಿ, ಸದರಿ ಮದ್ಯವು ಮಾನವನ ಸೇವನೆಗೆ ಯೋಗ್ಯವಲ್ಲವೆಂದು ದೃಢೀಕರಣ ಪತ್ರ ನೀಡಿರುತ್ತಾರೆ ಹಾಗೂ ಸದರಿ ಪ್ರಕರಣದಲ್ಲಿ ವಶಪಡಿಸಿಕೊಂಡ ಮಾರುತಿ 800 ಕಾರು ಸಂಖ್ಯೆ: ಕೆಎ–19–ಎನ್–6190 ರ ಆರ್.ಸಿ. ಮಾಲೀಕರ ಹೆಸರು ಮತ್ತು ವಿಳಾಸವನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿ, ದ.ಕ.ಜಿಲ್ಲೆ, ಮಂಗಳೂರು ಇವರನ್ನು ಸಂಪರ್ಕಿಸಿ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯಲ್ಲಿ ಶ್ರೀ ವಿ.ವಿ.ಸಂಜೀವ, ಬಿನ್: ಕೆ.ಕೆ.ನಾಯರ್, ವಾಸ: ಅಚಿರ ಬಿ.ಡಿ.ಒ ಕಚೇರಿ ಬಳಿ, ಸುಳ್ಯ ಕಸಬಾ ಗ್ರಾಮ, ಸುಳ್ಯ ಇವರು ವಾಹನದ ನೋಂದಣಿ ಮಾಲೀಕರೆಂದು ದೃಢೀಕರಿಸಿ ನೀಡಿರುತ್ತಾರೆ.

ಪ್ರಾದೇಶಿಕ ಸಾರಿಗೆ ಅಧಿಕಾರಿ, ದ.ಕ.ಜಿಲ್ಲೆ, ಮಂಗಳೂರು ಇವರು ನೀಡಿರುವ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯ ಪ್ರಕಾರ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮಾರುತಿ 800 ಕಾರಿನ ವಾಹನದ ನೋಂದಣಿ ಮಾಲೀಕರಾದ ಶ್ರೀ ವಿ.ವಿ.ಸಂಜೀವ, ಬಿನ್: ಕೆ.ಕೆ.ನಾಯರ್, ವಾಸ: ಅಚಿರ ಬಿ.ಡಿ.ಒ ಕಚೇರಿ ಬಳಿ, ಸುಳ್ಯ ಕಸಬಾ ಗ್ರಾಮ, ಸುಳ್ಯ ಇವರಿಗೆ ಕರ್ನಾಟಕ ಅಬಕಾರಿ ಕಾಯಿದೆ 1965 ಸೆಕ್ಷನ್ 43(ಬಿ) ಪ್ರಕಾರ ಕಾರಣ ಕೇಳಿ ನೋಟೀಸನ್ನು ಈ ಪ್ರಾಧಿಕಾರದಿಂದ ದಿ: 3-6-2006 ರಂದು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ಸದರಿ ನೋಟೀಸನ್ನು ದಿ: 21-6-2006 ರಂದು ಸ್ವೀಕೃತಿ ಪಡೆದು, ಅಂಚೆಯ ಸ್ವೀಕೃತಿ ರಶೀದಿ ಈ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುತ್ತದೆ.

ವಾಹನದ ನೋಂದಣಿ ಮಾಲೀಕರಿಗೆ ಈ ಪ್ರಾಧಿಕಾರದಿಂದ ನೀಡಿದ ಕಾರಣ ಕೇಳಿ ನೋಟೀಸಿಗೆ ಅವರ ಪರ ವಕೀಲರ ಮುಖಾಂತರ ದಿ: 22-6-2006 ರಂದು ಉತ್ತರವನ್ನು ಸಲ್ಲಿಸಿರುತ್ತಾರೆ.

ವಾಹನದ ನೋಂದಣಿ ಮಾಲೀಕರಾದ ಶ್ರೀ.ವಿ.ವಿ.ಸಂಜೀವ, ಬಿನ್: ಕೆ.ಕೆ.ನಾಯರ್, ವಾಸ: ಆಚಿರ ಬಿ.ಡಿ.ಓ ಕಚೇರಿ ಬಳಿ, ಸುಳ್ಯ ಕಸಬಾ ಗ್ರಾಮ, ಸುಳ್ಯ ಇವರು ತಮ್ಮ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ದಿ: 22-6-2006 ರಂದು ಅರ್ಜಿ ಸಲ್ಲಿಸಿ, ಸದರಿ ಅರ್ಜಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನವನ್ನು ತನ್ನ ಮಧ್ಯಂತರ ಸುಪರ್ಧಿಗೆ ಬಿಡುಗಡೆಗೊಳಿಸಬೇಕೆಂದು ಕೋರಿರುತ್ತಾರೆ. ಸದರಿ ಅರ್ಜಿಯನ್ನು ಈ ಪ್ರಾಧಿಕಾರವು ಪರಿಶೀಲಿಸಿ, ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಸಲ್ಲಿಸಿರುವ ಅರ್ಜಿಯ ಬಗ್ಗೆ ಸಹಾಯಕ ಅಭಿಯೋಜಕ ನಿರ್ದೇಶಕರು, ದ.ಕ.ಜಿಲ್ಲೆ, ಮಂಗಳೂರು ಇವರಿಗೆ ದಿ: 5-8-2006 ರಂದು ಪತ್ರ ಬರೆಯಲಾಗಿರುತ್ತದೆ ಹಾಗೂ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ, ಪುತ್ತೂರು ಇವರಿಗೆ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮಾರುತಿ 800 ಕಾರು ಸಂಖ್ಯೆ: ಕೆಎ-19-ಎನ್-6190 ರ ಅಂದಾಜು ಮೌಲ್ಯವನ್ನು ನಿರ್ಧರಿಸಿ ದೃಢೀಕರಣ ಪತ್ರ ನೀಡುವ ಬಗ್ಗೆ ದಿ: 2-9-2006 ರಂದು ಪತ್ರ ಬರೆಯಲಾಗಿದೆ.

ವಾಹನದ ಮಧ್ಯಂತರ ಬಿಡುಗಡೆಗಾಗಿ ತನಿಖಾಧಿಕಾರಿಗಳಾದ ಅಬಕಾರಿ ಉಪ ನಿರೀಕ್ಷಕರು(ನಂ.2), ಜಾರಿ ಮತ್ತು ತನಿಖೆ, ಸುಳ್ಯ ತಾಲೂಕು ಇವರಲ್ಲಿ ಮಧ್ಯಂತರ ಬಿಡುಗಡೆಗೆ ಸಂಬಂಧಿಸಿ ಆಕ್ಷೇಪಣೆಗಳನ್ನು ಸಲ್ಲಿಸಲು ಈ ಪ್ರಾಧಿಕಾರದಿಂದ ನೋಟೀಸನ್ನು ನೀಡಲಾಗಿದ್ದು, ಅವರು ದಿ: 19-9-2006 ರಂದು ತಕ್ಷೀರಿನಲ್ಲಿ ಪರಾರಿಯಾದ ಆರೋಪಿಯು, ವಶಪಡಿಸಿಕೊಂಡ ಮಾರುತಿ 800 ಕಾರು ಸಂಖ್ಯೆ: ಕೆಎ-19-ಎನ್-6190 ರ ಮೂಲ ನೋಂದಣಿ ಮಾಲೀಕರಾಗಿದ್ದು, ಇವರೇ ಸ್ವತ: ತಮ್ಮ ವಾಹನವನ್ನು ಅಕ್ರಮ ಚಟುವಟಿಕೆಗಳಿಗೆ ಬಳಸಿರುವುದರಿಂದ, ಸದರಿ ಆರೋಪಿತ ವ್ಯಕ್ತಿಯ ಕೋರಿಕೆಯನ್ನು ತಿರಸ್ಕರಿಸಿ ಹಾಗೂ ಸರಕಾರದ ಆದಾಯದ ಹಿತದೃಷ್ಟಿಯಿಂದ ಸರಕಾರದ ವಶಕ್ಕೆ ಪಡೆದು ವಿಲೇವಾರಿ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಪುತ್ತೂರು ಇವರ ಮೌಲ್ಯಮಾಪನ ಪತ್ರ ದಿ: 6-11-2006 ರಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಮಾರುತಿ 800 ಕಾರು ಸಂಖ್ಯೆ: ಕೆಎ-19-ಎನ್-6190 ರ ಈಗಿನ ಮಾರುಕಟ್ಟೆ ಬೆಲೆ ರೂ.1,15,000/- ಗಳಾಗಬಹುದೆಂದು ದೃಢೀಕರಣ ಪತ್ರ ನೀಡಿರುತ್ತಾರೆ.

ಅಬಕಾರಿ ಉಪ ನಿರೀಕ್ಷಕರು (ನಂ.2), ಜಾರಿ ಮತ್ತು ತನಿಖೆ, ಸುಳ್ಯ ಇವರ ತನಿಖಾ ವರದಿ ಸಂಖ್ಯೆ:17/2005-06 ದಿ:6-4-2006 ರ ತನಿಖಾ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಶಿಫಾರಸ್ಸು ಮಾಡಿರುತ್ತಾರೆ. ತನಿಖಾಧಿಕಾರಿಯವರ ಶಿಫಾರಸ್ಸಿನ ಮೇರೆಗೆ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇ.ಐ.ಬಿ. ದ.ಕ.ಜಿಲ್ಲೆ, ಮಂಗಳೂರು ಇವರ ಆದೇಶ ಸಂಖ್ಯೆ: ಇ.ಐ.ಬಿ/ಡಿಟಿಸಿಆರ್/ 307/2005-06 ದಿ: 29-11-2006 ರಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ 17-280 ಲೀಟರ್ ನಕಲಿ ಮದ್ಯವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43(ಸಿ) ರಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಅಬಕಾರಿ ಉಪ ಅಧೀಕ್ಷಕರು, ಪುತ್ತೂರು ವಿಭಾಗರವರ ಸಮಕ್ಷಮದಲ್ಲಿ ನಾಶಪಡಿಸಲು ಆದೇಶಿಸಲಾಗಿದೆ.

ವಾಹನದ ಮಧ್ಯಂತರ ಬಿಡುಗಡೆಗಾಗಿ ಸಲ್ಲಿಸಿದ ಅರ್ಜಿಯ ಬಗ್ಗೆ ವಿಚಾರಣೆಗಾಗಿ ಅರ್ಜಿದಾರರಿಗೂ ಹಾಗೂ ಅವರ ಪರ ವಕೀಲರಿಗೂ ಹಾಜರಾತಿ ನೋಟೀಸುಗಳನ್ನು ನೀಡಲಾಗಿದ್ದು, ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇ.ಐ.ಬಿ. ದ.ಕ.ಜಿಲ್ಲೆ, ಮಂಗಳೂರು ಇವರ ಆದೇಶ ಸಂಖ್ಯೆ: ಇ.ಐ.ಬಿ/ಡಿಟಿಸಿಆರ್/307/2005-06 ದಿ: 28-12-2006 ರ ಆದೇಶದಲ್ಲಿ ವಾಹನ ಮಾಲೀಕರು ವಾಹನದ ಮೌಲ್ಯಕ್ಕೆ ಸಮನಾದ ರೂ.1,15,000/- ಗಳಿಗೆ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಬ್ಯಾಂಕ್ ಭದ್ರತೆಯನ್ನು ನೀಡಿದಲ್ಲಿ, ಸದರಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನವನ್ನು ತಾತ್ಕಾಲಿಕ ನೆಲೆಯಲ್ಲಿ ಅರ್ಜಿದಾರರ ವಶಕ್ಕೆ ಬಿಡುಗಡೆಗೊಳಿಸಲು ಆದೇಶಿಸಿದೆ. ಸದರಿ ಆದೇಶದ ವಿರುದ್ಧ ಅರ್ಜಿದಾರರು ಮಾನ್ಯ 2ನೇ ಹೆಚ್ಚುವರಿ ಸೆಷನ್ ನ್ಯಾಯಾಲಯ, ದ.ಕ.ಜಿಲ್ಲೆ, ಮಂಗಳೂರು ಇವರಲ್ಲಿ ಮೇಲಿನ ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿ, ಮಾನ್ಯ 2ನೇ ಹೆಚ್ಚುವರಿ ಸೆಷನ್ ನ್ಯಾಯಾಲಯ, ದ.ಕ.ಜಿಲ್ಲೆ, ಮಂಗಳೂರುರವರ ಕ್ರಿಮಿನಲ್ ಅಪೀಲ್ ಸಂ: 40/2007 ದಿ:26-3-2007 ರ ಆದೇಶದಲ್ಲಿ ಅರ್ಜಿದಾರರು ಸಲ್ಲಿಸಿದ ಮೇಲ್ಮನವಿಯ ವಿಚಾರಣೆಯನ್ನು ಕೈಗೊಂಡು, ಈ ಪ್ರಾಧಿಕಾರವು ಹೊರಡಿಸಿದ ಆದೇಶವನ್ನು ಒಪ್ಪಿ, ವಾಹನದ ಮಧ್ಯಂತರ ಬಿಡುಗಡೆಗೆ ಅನುವು ಮಾಡಿ ಅರ್ಜಿದಾರರು ಸಲ್ಲಿಸಿದ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಅರ್ಜಿದಾರರ ಪರ ವಕೀಲರು ಈ ಪ್ರಾಧಿಕಾರಕ್ಕೆ ದಿ:23-3-2008 ರಂದು ಪ್ರಾಧಿಕಾರದ ನ್ಯಾಯಾಲಯದಲ್ಲಿ ವಾದವನ್ನು ಮಂಡಿಸುತ್ತ, ಮಧ್ಯಂತರ ಬಿಡುಗಡೆಗೆ ಬಾಕಿ ಉಳಿದಿರುವ ವಾಹನವನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ಕೋರಿರುತ್ತಾರೆ. ವಕೀಲರ ವಾದವನ್ನು ಪರಿಗಣಿಸಿ ಪ್ರಕರಣವು ಈಗಾಗಲೇ 3 ವರ್ಷಗಳಿಂದ ತನಿಖೆಯಲ್ಲಿದ್ದು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಪ್ರಸ್ತುತ ವಾಹನಕ್ಕೆ ಮರು ಮೌಲ್ಯಮಾಪನಗೊಳಿಸಿ ನೀಡಿದ ಮೌಲ್ಯ ರೂ.12,250/-, ಇದು ಅತ್ಯಂತ ಕಡಿಮೆ ಎಂದು ಪ್ರಾಧಿಕಾರವು ಮನಗಂಡು ವಾಹನದ ಮೌಲ್ಯವನ್ನು ರೂ.30,000/- ಎಂದು ನಿಗಧಿಪಡಿಸಿ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇ.ಐ.ಬಿ. ದ.ಕ.ಜಿಲ್ಲೆ, ಮಂಗಳೂರು ಇವರ ಆದೇಶ ಸಂಖ್ಯೆ: ಇ.ಐ.ಬಿ/ ಡಿಟಿಸಿಆರ್/307/2005-06 ದಿ: 29-11-2006 ರ ಆದೇಶದಲ್ಲಿ ರೂ.30,000/-ರ ಬ್ಯಾಂಕ್ ಭದ್ರತೆಯನ್ನು ನೀಡಲು ಹಾಗೂ ಕೆಲವು ಷರತ್ತುಗಳೊಂದಿಗೆ ವಾಹನವನ್ನು ಅರ್ಜಿದಾರರ ಸುಪರ್ಧಿಗೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲು ಆದೇಶಿಸಿದೆ. ಆದರೆ ಅರ್ಜಿದಾರರು

ಇದುವರೆಗೂ ಯಾವುದೇ ಬ್ಯಾಂಕ್ ಭದ್ರತೆಯ ಪತ್ರವನ್ನು ಈ ಪ್ರಾಧಿಕಾರಕ್ಕೆ ನೀಡದೆ ತನ್ನ ವಾಹನವನ್ನು ತಾತ್ಕಾಲಿಕ ನೆಲೆಯಲ್ಲಿ ತನ್ನ ಸುಪರ್ಧಿಗೆ ಪಡೆದುಕೊಂಡಿರುವುದಿಲ್ಲ.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಸರಕಾರದ ಅಭಿಯೋಜನೆ ಪರ ಎರಡು ಸಾಕ್ಷಿಗಳ ಹೇಳಿಕೆಗಳನ್ನು ಪಡೆಯಲಾಗಿದೆ. ಈ ಪ್ರಕರಣದಲ್ಲಿ ಸರಕಾರದ ಪರ ಹಾಗೂ ವಾಹನ ಮಾಲೀಕರ ಪರ ಪ್ರತಿರಕ್ಷಾ ಸಾಕ್ಷಿಗಳು ಹಾಜರಾಗದೇ ಇರುವುದರಿಂದ, ಪ್ರತಿರಕ್ಷಾ ಸಾಕ್ಷಿಗಳ ಹೇಳಿಕೆಯನ್ನು ಪಡೆಯಲಾಗಿರುವುದಿಲ್ಲ.

ಈ ಪ್ರಕರಣದಲ್ಲಿ ಸರಕಾರದ ಅಭಿಯೋಜನಾ ಪರ ಸಲ್ಲಿಸಿರುವ ಸಾಕ್ಷ್ಯಾಧಾರಗಳ ಮೇಲೆ ಈ ಕೆಳಗಿನ ವಿವಾದಾಂಶಗಳನ್ನು ತೀರ್ಮಾನಿಸಬೇಕಾಗಿರುವುದು ಅಗತ್ಯವಾಗಿರುವುದರಿಂದ, ಪರಿಶೀಲನಾ ಅಂಶಗಳು ಈ ಕೆಳಗಿನಂತಿರುತ್ತದೆ.

1) ದಿ: 16-12-2005 ರಂದು ಮಾರುತಿ 800 ಕಾರು ಸಂಖ್ಯೆ: ಕೆಎ–19–ಎನ್–6190 ರಲ್ಲಿ ಅಕ್ರಮವಾಗಿ ನಕಲಿ ಮದ್ಯ ಸಾಗಾಟ ಮಾಡಲಾಗಿತ್ತೇ?

2) ಸದರಿ ವಾಹನದಲ್ಲಿ ಅಕ್ರಮ ನಕಲಿ ಮದ್ಯವನ್ನು ತನ್ನ ತಿಳುವಳಿಕೆಗೆ ಬಾರದೆ ಮಾಡಲಾಗಿತ್ತೇ ಎಂಬುವುದನ್ನು ವಾಹನ ಮಾಲೀಕರು ಸಾಬೀತುಪಡಿಸಿದ್ದಾರೆಯೇ?

3) ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಈ ಮೇಲಿನ ಪರಿಶೀಲನಾಂಶಗಳನ್ನು ಲಭ್ಯವಿರುವ ಸಾಕ್ಷಿಗಳ ಆಧಾರದ ಮೇಲೆ ಈ ಕೆಳಗಿನಂತೆ ಉತ್ತರಿಸಲಾಗಿದೆ.

ಒಂದನೇ ಅಂಶವನ್ನು ಗುಣಾತ್ಮಕವಾಗಿ ಹೌದು ಎಂದು, ಎರಡನೇ ಅಂಶವನ್ನು ಸಕರಾತ್ಮಕವಾಗಿ ಇಲ್ಲವೆಂದು ಹಾಗೂ ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಶ್ರೀ ಎಸ್.ಪದ್ಮಯ್ಯ ಗೌಡ, ಅಬಕಾರಿ ರಕ್ಷಕ, ಸುಳ್ಯ ಇವರು ಈ ಪ್ರಕರಣದ ಕೆಮಿಕಲ್ ಕ್ಯಾರಿಯರ್ ಆಗಿದ್ದು, ಇವರು ದಿ:28-11-2007 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷಿ ಹೇಳಿಕೆಯನ್ನು ನೀಡಿರುತ್ತಾರೆ.

ತಾನು ದಿ: 20-01-2006 ರಂದು ಪ್ರಕರಣಕ್ಕೆ ಸಂಬಂಧಿಸಿದ 4 ಮದ್ಯದ ಬಾಟಲ್‌ಗಳನ್ನು ಹಾಗೂ ಕೋರಿಕೆಯ ಪತ್ರ ಮತ್ತು ಮಾದರಿ ಸೀಲ್‌ಗಳೊಂದಿಗೆ ರಾಸಾಯನಿಕ ತಜ್ಞರಿಗೆ ತಲುಪಿಸಿರುತ್ತೇನೆ. ದಿ: 25-1-2006 ರಂದು ಪರಿಶೀಲಿಸಿದ ಬಾಟಲ್‌ಗಳನ್ನು ಹಾಗೂ ವಿಶ್ಲೇಷಣಾ ವರದಿಯನ್ನು ಅಬಕಾರಿ ಉಪ ನಿರೀಕ್ಷಕರು, ಸುಳ್ಯ ಇವರಿಗೆ ಸಲ್ಲಿಸಿರುತ್ತೇನೆ. ಕೋರಿಕೆಯ ಪತ್ರವನ್ನು ನಿಶಾನೆ ಪಿ–1 ಎಂದು ಮತ್ತು ಮಾದರಿ ಸೀಲ್‌ನ ಪ್ರತಿಯನ್ನು ನಿಶಾನೆ ಪಿ-2 ಎಂದು ಮತ್ತು ರಾಸಾಯನಿಕ ವಿಶ್ಲೇಷಣಾ ವರದಿಯನ್ನು ನಿಶಾನೆ ಪಿ–3 ಎಂದು ಗುರುತಿಸಲಾಯಿತು. ಅರ್ಜಿದಾರರು ಹಾಗೂ ಅವರ ಪರ ವಕೀಲರು ಹಾಜರಾಗದಿರುವುದರಿಂದ, ಯಾವುದೇ ಪಾಟೀ ಸವಾಲು ಇರುವುದಿಲ್ಲವೆಂದು ಪರಿಗಣಿಸಿ ಮುಕ್ತಾಯಗೊಳಿಸಲಾಯಿತು.

ಪ್ರಾ.ಸಾ: 2

ಕುಮಾರಿ. ಗೀತಾ, ಅಬಕಾರಿ ಉಪ ನಿರೀಕ್ಷಕರು, ಜಾರಿ ಮತ್ತು ತನಿಖೆ, ಸುಳ್ಯ ಇವರು ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯಾಗಿದ್ದು, ಇವರು ದಿ:19-03-2008 ರಂದು ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ. ತಾನು ಮೇ–2005 ರಿಂದ ಇಲ್ಲಿಯವರೆಗೆ ಸುಳ್ಯ ಜಾರಿ ಮತ್ತು ತನಿಖೆ ಕಚೇರಿಯಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ತಾನು ದಿ:16-12-2005 ರಂದು ಮಧ್ಯಾಹ್ನ 1-30 ಗಂಟೆಗೆ ತನ್ನ ಸಿಬ್ಬಂದಿಯೊಂದಿಗೆ ಕಚೇರಿ ಹಿಂಭಾಗದಲ್ಲಿರುವ ಸಜೀವನ್ ಎಂಬವರ ಮನೆಯಲ್ಲಿ ಖಚಿತ ವರ್ತಮಾನದ ಮೇರೆಗೆ ದಾಳಿ ನಡೆಸಿರುತ್ತೇನೆ. ಅವರ ಅಂಗಳದಲ್ಲಿ ಬಿಳಿ ಬಣ್ಣದ ಮಾರುತಿ 800 ಕಾರು ಸಂಖ್ಯೆ: ಕೆಎ–19–ಎನ್–6190 ನಿಂತಿದ್ದು, ಕಾರನ್ನು ಪರಿಶೀಲಿಸಿ ನೋಡುವಾಗ ಡಿಕ್ಕಿಯಲ್ಲಿ 2 ರಟ್ಟಿನ ಪೆಟ್ಟಿಗೆಗಳಿದ್ದು, ಸದರಿ ವಾಹನವನ್ನು ತನಿಖೆ ಮಾಡಲೆಂದು ನ್ಯಾಯಾಲಯದಿಂದ ವಾರಂಟ್ ಪಡೆಯಲು ಕಾಲಾವಕಾಶ ಇಲ್ಲದಿರುವುದರಿಂದ, ಸರ್ಚ್ ಮೆಮೊವನ್ನು ತಯಾರಿಸಿ ತನಿಖೆ ಮಾಡಲಾಯಿತು. ಕಾರಿನ ಡಿಕ್ಕಿಯಲ್ಲಿ ಯಾವುದೇ ಭದ್ರತಾ ಚೀಟಿಯಿಲ್ಲದೆ 180 ಎಂ.ಎಲ್.ನ 48 ಬಾಟಲ್‌ಗಳಂತೆ 2 ರಟ್ಟಿನ ಪೆಟ್ಟಿಗೆಗಳಲ್ಲಿ ಓಲ್ಡ್ ಮಾಂಕ್ ರಮ್ ಇರುವುದು ಖಚಿತವಾಯಿತು. ಇದು ನಕಲಿ ಮದ್ಯವೆಂದು ತನಗೆ ಮನವರಿಕೆಯಾಯಿತು ಎಂದು ಸಿಬ್ಬಂದಿಯವರ ಸಮಕ್ಷಮ ಪ್ರತಿ ರಟ್ಟಿನ ಪೆಟ್ಟಿಗೆಯಿಂದ ತಲಾ 180 ಎಂ.ಎಲ್. ನ 2 ಸೀಸೆಗಳನ್ನು ಮಾದರಿಗಾಗಿ ತೆಗೆದು ಕಚೇರಿ ಸೀಲ್ ಮಾಡಿ ಗುರುತಿನ ಚೀಟಿ ಅಂಟಿಸಿರುತ್ತಾರೆ. ಹಾಗೆಯೇ ಕಾರು ನಿಂತಿದ್ದ ಮನೆಯನ್ನು ಕೂಡಾ ತಪಾಸಣೆ ಮಾಡಿರುತ್ತಾರೆ. ಆದರೆ ಮನೆಯಲ್ಲಿ ಯಾವುದೇ ಮದ್ಯ ಸಿಕ್ಕಿರುವುದಿಲ್ಲ. ಸ್ಥಳದಲ್ಲಿಯೇ ಮಹಜರನ್ನು ತಯಾರಿಸಿ ಮದ್ಯ ಹಾಗೂ ಕಾರನ್ನು ವಶಪಡಿಸಿಕೊಂಡು ಪ್ರಥಮ ಮಾಹಿತಿ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಯಿತು. ನಂತರ ತನಿಖೆಯನ್ನು ಮುಂದುವರಿಸಿ ಪ್ರಾದೇಶಿಕ ಸಾರಿಗೆ ಅಧಿಕಾರಿಯವರಿಂದ ಬಿ ವರದಿಯನ್ನು ಪಡೆದು, ಪರಾರಿಯಾದ ಆರೋಪಿ ವಾಹನದ ನೋಂದಣಿ ಮಾಲೀಕನೆಂದು ತಿಳಿದು ಬಂದಿದ್ದು, ನಂತರ ದಿ:21-1-2006 ರಂದು ಸದರಿ ಮಾದರಿ ಬಾಟಲ್‌ಗಳನ್ನು ಅಬಕಾರಿ ರಕ್ಷಕರ ಮೂಲಕ ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಲಾಗಿದ್ದು, ದಿ: 4-2-2006 ರಂದು ರಾಸಾಯನಿಕ ವಿಶ್ಲೇಷಣಾ ವರದಿಯ ಮೇರೆಗೆ ಕಾರಿನಲ್ಲಿದ್ದ ನಕಲಿ ಮದ್ಯವೆಂದು ತನಗೆ ತಿಳಿದು ಬಂದಿರುತ್ತದೆ. ತಾನು ದಿ: 6-4-2006 ರಂದು ವಶಪಡಿಸಿಕೊಂಡ ಕಾರು ಹಾಗೂ ಮದ್ಯವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಶಿಫಾರಸ್ಸು ಮಾಡಿರುತ್ತೇನೆ. ಸ್ಥಳದಲ್ಲಿಯೇ

ತಯಾರಿಸಿದ ಮಾದರಿ ಪ್ರತಿಯನ್ನು ನಿಶಾನೆ ಪಿ-4 ಎಂದು, ಸೊತ್ತು ಪಟ್ಟಿಯ ಪ್ರತಿಯನ್ನು ನಿಶಾನೆ ಪಿ-5 ಎಂದು, ಪ್ರಥಮ ಮಾಹಿತಿ ವರದಿಯನ್ನು ನಿಶಾನೆ ಪಿ-6 ಎಂದು, ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ನಿಶಾನೆ ಪಿ-7 ಎಂದು ಮತ್ತು ತನಿಖಾ ವರದಿಯನ್ನು ನಿಶಾನೆ ಪಿ-8 ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಅರ್ಜಿದಾರರ ಪರ ಪಾಟೀ ಸವಾಲಿಗೆ ಉತ್ತರಿಸುತ್ತ, ಶ್ರೀ.ಕೆ.ಕೇಶವ ಪೂಜಾರಿ ಎಂಬವರು ಈ ಕೇಸಿನಲ್ಲಿ ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ. ತನಗೆ ಕೇಶವ ಪೂಜಾರಿಯವರು ಮಾಹಿತಿಯನ್ನು ನೀಡಿರುತ್ತಾರೆ. ಅವರು ಸುಳ್ಯ ನಿವಾಸಿಯಾಗಿರುತ್ತಾರೆ. ತಾವು ಖಾಸಗಿ ಜೀಪಿನಲ್ಲಿ ದಾಳಿ ಮಾಡಿರುತ್ತೇನೆ. ಜೀಪಿನ ಚಾಲಕ ಮಹಜರಿಗೆ ಸಹಿ ಹಾಕಿರುವುದಿಲ್ಲ. ತಾನು ಸುಳ್ಳು ಮೊಕದ್ದಮೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಸಾಕ್ಷಿದಾರರು ನೀಡಿರುವ ಹೇಳಿಕೆಗಳು ದಾಖಲಿಸಿದ ತಕ್ಷೀರಿಗೆ ಸಂಬಂಧಿಸಿ ಮಹಜರಿಗೆ ಒಂದಕ್ಕೊಂದು ಪೂರಕವಾಗಿದ್ದು, ಅದಲ್ಲದೆ ಸ್ಥಳದಲ್ಲಿ ತಯಾರಿಸಿದ ಮಹಜರು ಮತ್ತು ಪ್ರಕರಣದ ಪ್ರಥಮ ಮಾಹಿತಿ ವರದಿಯು ಈ ಸಾಕ್ಷಿದಾರರ ಹೇಳಿಕೆಯನ್ನು ಪುಷ್ಟೀಕರಿಸುತ್ತೇನೆ. ಆದುದರಿಂದ ಜಪ್ತುಪಡಿಸಿರುವ ವಾಹನದಲ್ಲಿ ಅಕ್ರಮವಾಗಿ ನಕಲಿ ಮದ್ಯ ದಾಸ್ತಾನು ಹೊಂದಿ ಸಾಗಾಟ ಮಾಡಿರುವುದು ಸ್ಪಷ್ಟವಾಗಿ ಸಾಬೀತಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ, ಮೊದಲನೇ ವಿವಾದಾಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಈ ಪ್ರಕರಣದ ಎರಡನೇ ಅಂಶವನ್ನು ಪ್ರಕರಣದಲ್ಲಿ ವಶಪಡಿಸಿಕೊಂಡಿರುವ ವಾಹನದಲ್ಲಿ ವಾಹನ ಮಾಲೀಕರಿಗೆ ತಿಳಿಯದೆ ಈ ಕೃತ್ಯವು ಎಸಗಲಾಗಿದೆ ಎಂಬುವುದನ್ನು ಅರ್ಜಿದಾರರು ಸಾಬೀತುಪಡಿಸಬೇಕಾಗಿದ್ದು, ಅರ್ಜಿದಾರರಿಗೂ ಹಾಗೂ ಅವರ ಪರ ವಕೀಲರಿಗೆ ಈ ಪ್ರಾಧಿಕಾರದಿಂದ ಹಲವಾರು ಬಾರಿ ಹಾಜರಾತಿ ನೋಟೀಸುಗಳನ್ನು ಮತ್ತು ಪ್ರತಿರಕ್ಷೆ ಸಾಕ್ಷಿಗಳನ್ನು ಹಾಜರುಪಡಿಸಲು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ಸದರಿ ನೋಟೀಸುಗಳನ್ನು ಅರ್ಜಿದಾರರು ಹಾಗೂ ಅವರ ಪರ ವಕೀಲರು ಸ್ವೀಕರಿಸಿದರೂ ಈ ಪ್ರಾಧಿಕಾರದ ಮುಂದೆ ಸಾಕ್ಷಿ ವಿಚಾರಣೆಗಾಗಿ ಹಾಜರಾಗಿರುವುದಿಲ್ಲ. ವಾಹನದ ಮಾಲೀಕರಿಗೆ ಹಲವಾರು ಬಾರಿ ಕಾಲಾವಕಾಶ ನೀಡಲಾಗಿದ್ದರೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನೀಡಲು ಹಾಜರಾಗದಿರುವುದನ್ನು ಗಮನಿಸಿದಾಗ, ವಾಹನದ ಮಾಲೀಕರು ತನ್ನ ತಿಳುವಳಿಕೆಯಿಂದಲೇ ವಾಹನದಲ್ಲಿ ಅಕ್ರಮವಾಗಿ ನಕಲಿ ಮದ್ಯ ಸಾಗಾಣಿಕೆಗೆ ತೊಡಗಿರುವುದು ನಿಸ್ಸಂದೇಹವಾಗಿ ಸಾಬೀತಾಗಿರುತ್ತದೆ.

ತನಿಖಾಧಿಕಾರಿಗಳು ಸಲ್ಲಿಸಿದ ವರದಿ ಹಾಗೂ ರಾಸಾಯನಿಕ ವಿಶ್ಲೇಷಕರು, ದ.ಕ.ಜಿಲ್ಲೆ, ಮಂಗಳೂರು ಇವರ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮಾದರಿ ಸೀಸೆಗಳಲ್ಲಿ ಮದ್ಯದ ಮದ್ಯಸಾರ ಅಂಶ ಶೇ.30% ಇರುವುದಾಗಿ, ಇದು ನಕಲಿ ಮದ್ಯವೆಂದು ದೃಢೀಕರಣ ಪತ್ರ ನೀಡಿರುತ್ತಾರೆ.

ಪರಾರಿಯಾದ ಆರೋಪಿಯು ವಾಹನದ ಮೂಲ ನೋಂದಣಿ ಮಾಲೀಕರಾಗಿದ್ದು, ಅವರ ತಿಳುವಳಿಕೆಯಿಂದಲೇ ವಾಹನದಲ್ಲಿ ಅಕ್ರಮವಾಗಿ ನಕಲಿ ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುವುದರಿಂದ ಹಾಗೂ ಈ ಮೇಲಿನ ಕಾರಣಗಳಿಂದ ಎರಡನೇ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಎಲ್ಲಾ ಕಾರಣಗಳು ಮತ್ತು ಪುರಾವೆಗಳಿಂದ ಈ ಪ್ರಕರಣದಲ್ಲಿ ಜಪ್ತುಗೊಳಿಸಿರುವ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಸೂಕ್ತವೆಂದು ಪ್ರಾಧಿಕಾರವು ತೀರ್ಮಾನಿಸಿ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಮಾರುತಿ 800 ಕಾರು ಸಂಖ್ಯೆ: ಕೆಎ-19-ಎನ್-6190 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಆದೇಶ.

ಆದೇಶ ಸಂಖ್ಯೆ: ಎಸ್‌ಡಿಕೆ/307/ಡಿಟಿಸಿಆರ್/2005-06 ದಿ: 28ನೇ ಮಾರ್ಚ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43 (ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಕಾಲಂ 43ಎ ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು(ನಂ.2), ಜಾಗೃತಿ ಮತ್ತು ತನಿಖೆ, ಸುಳ್ಯ ಇವರ ತಕ್ಷೀರು ಸಂ: 5/2005-06 ದಿ:16-12-2005 ರಲ್ಲಿ ಜಪ್ತುಪಡಿಸಿರುವ ವಾಹನ ಮಾರುತಿ 800 ಕಾರು ಸಂ:ಕೆಎ-19-ಎನ್-6190 ನ್ನು ಈ ಪ್ರಾಧಿಕಾರದ ಆದೇಶದ ಸಂಖ್ಯೆ: ಎಸ್‌ಡಿಕೆ/307/ಡಿಟಿಸಿಆರ್/2005-06 ದಿ: 20-03-2008 ರಲ್ಲಿ ವಾಹನದ ಆರ್.ಸಿ. ಮಾಲೀಕರಾದ ಶ್ರೀ.ವಿ.ವಿ.ಸಂಜೀವ, ಬಿನ್: ಕೆ.ಕೆ.ನಾಯರ್, ವಾಸ: ಅಚಿರ ಬಿ.ಡಿ.ಒ ಕಚೇರಿ ಬಳಿ, ಸುಳ್ಯ ಕಸಬಾ ಗ್ರಾಮ, ಸುಳ್ಯ ಇವರ ಪರ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಿದ ಆದೇಶವನ್ನು ರದ್ದುಗೊಳಿಸಿ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ:28-03-2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ

ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ.–1: ಶ್ರೀ.ಎನ್.ಪದ್ಮಯ್ಯ ಗೌಡ, ಅಬಕಾರಿ ರಕ್ಷಕ, ಸುಳ್ಯ ವಲಯ.

ಪ್ರಾ.ಸಾ.–2: ಕುಮಾರಿ. ಗೀತಾ, ಅಬಕಾರಿ ಉಪ ನಿರೀಕ್ಷಕರು, ಸುಳ್ಯವಲಯ.

ಅನುಬಂಧ–2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

1	ನಿಶಾನೆ ಪಿ–1	:	ಕೋರಿಕೆ ಪತ್ರ
2	ನಿಶಾನೆ ಪಿ–2	:	ಮಾದರಿ ಸೀಲ್‌ನ ಪ್ರತಿ
3	ನಿಶಾನೆ ಪಿ–3	:	ರಾಸಾಯನಿಕ ವಿಶ್ಲೇಷಣಾ ವರದಿ
4	ನಿಶಾನೆ ಪಿ–4	:	ಮಾದರಿ ಪ್ರತಿ
5	ನಿಶಾನೆ ಪಿ–5	:	ಸೊತ್ತಿನ ಪಟ್ಟಿ
6	ನಿಶಾನೆ ಪಿ–6	:	ಪ್ರಥಮ ಮಾಹಿತಿ ವರದಿ ಪ್ರತಿ
7	ನಿಶಾನೆ ಪಿ–7	:	ಬಿ ಅಬ್‌ಸ್ಟ್ರಾಕ್ಟ್ ವರದಿಯ ಪ್ರತಿ
8	ನಿಶಾನೆ ಪಿ–8		ತನಿಖಾ ವರದಿ

ಅನುಬಂಧ–3

ವಾಹನ ಮಾಲೀಕರ ಪರ ವಿಚಾರಣೆ ಮಾಡಿದ ಸಾಕ್ಷಿದಾರರು:

–ಇಲ್ಲ–

ಅನುಬಂಧ–4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

–ಇಲ್ಲ–

ನೂರ್ ಮಹಮ್ಮದ್ ಹುಸೇನ್

ಪಿ.ಆರ್.438 ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ

ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ:ಎಸ್‌ಡಿಕೆ/155/ಡಿಟಿಸಿಆರ್/2007–08, ದಿನಾಂಕ:25ನೇ ಏಪ್ರಿಲ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ. ಮಂಗಳೂರು.

ಫಿರ್ಯಾದುದಾರರು:	**ಆರೋಪಿ:**
ಪೊಲೀಸ್ ಉಪ ನಿರೀಕ್ಷಕರು, ಉಳ್ಳಾಲ ಪೊಲೀಸ್ ಠಾಣೆ, ಉಳ್ಳಾಲ.	1) ಅನಿಲ್ ಯಾನೆ ಪಿಯೂಸ್ ಪೆರಾವೋ ಬಿನ್: ದಿ:ಸ್ಟ್ಯಾನಿ ಪೆರಾವೋ, ಮೊನಪು ಮನೆ, ಕಲ್ಲಾಪು, ಪೆರ್ಮನ್ನೂರು ಅಂಚೆ, ಮಂಗಳೂರು. 2) ನವೀನ್ ಸ್ವಿಕ್ವೇರಾ, ಬಿನ್ ಮೊಹಂತು ಸ್ವಿಕ್ವೇರಾ ಚೆಂಬುಗುಡ್ಡೆ, ಪೆರ್ಮನ್ನೂರು ಅಂಚೆ, ಮಂಗಳೂರು. **ವಾಹನ ಮಾಲೀಕರು:** ಶ್ರೀ ಪಿಯುಸ್ ಪೆರಾವೋ, ಬಿನ್ ದಿ:ಸ್ಟ್ಯಾನಿ ಪೆರಾವೊ, ಡೋರ್‌ನಂ: 2–58(2), ಮೊನಪು ಮನೆ, ಕಲ್ಲಾಪು, ಪೆರ್ಮನ್ನೂರು ಅಂಚೆ, ಮಂಗಳೂರು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:12–7–2008 ರಂದು ಪೊಲೀಸ್ ನಿರೀಕ್ಷಕರು, ಸಾರಾಯಿ ಮತ್ತು ಲಾಟರಿ ನಿಷೇಧ ದಳ, ಮಂಗಳೂರು ತಾಲೂಕು ಇವರು ಪೆರ್ಮನ್ನೂರು ಗ್ರಾಮದ ಕಲ್ಲಾಪು ಎಂಬಲ್ಲಿ ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಟದ ಬಗ್ಗೆ ಗುಮಾನಿಯ ಮೇಲೆ ರಸ್ತೆ ತಪಾಸಣೆ ನಡೆಸುತ್ತಿದ್ದಾಗ ತೊಕ್ಕೊಟ್ಟು ಕಡೆಯಿಂದ ಪಂಪ್‌ವೆಲ್ ಕಡೆಗೆ ಬರುತ್ತಿದ್ದ ಮೋಟಾರು ಸೈಕಲ್‌ನಲ್ಲಿ ಚಾಲಕ ಸಮೇತ ಇಬ್ಬರು ವ್ಯಕ್ತಿಗಳಿದ್ದು ಸಹ ಪ್ರಯಾಣಿಕನ ಕೈಯಲ್ಲಿರುವ ಗೋಣಿ ಚೀಲದ ಕಟ್ಟನ್ನು ಕಂಡು ಸಂಶಯಗೊಂಡು ಪರಿಶೀಲನೆಗಾಗಿ ಮೋಟಾರ್ ಬೈಕನ್ನು ನಿಲ್ಲಿಸಲು ಸನ್ನೆ ಮಾಡಿದಾಗ ಸದ್ರಿ ವ್ಯಕ್ತಿಗಳು ಬೈಕ್ ಮತ್ತು

ಗೋಣಿಚೀಲದ ಕಟ್ಟನ್ನು ಅಲ್ಲಿಯೇ ಬಿಟ್ಟು ಓಡಿಹೋಗಿದ್ದು, ನಂತರ ಗೋಣಿಚೀಲದ ಕಟ್ಟನ್ನು ಪರಿಶೀಲಿಸಲಾಗಿ ಕಪ್ಪು ಬಣ್ಣದ ಕ್ಯಾನಿನಲ್ಲಿ 35 ಲೀಟರು ಕಳ್ಳಭಟ್ಟಿ ಸಾರಾಯಿ ಇರುವುದನ್ನು ಪತ್ತೆ ಹಚ್ಚಿ ಹಾಗೂ ಮೋಟಾರ್ ಬೈಕನ್ನು ಪರಿಶೀಲಿಸಲಾಗಿ ಓರೋ ಹೊಂಡಾ Hank ಕಂಪೆನಿ ನಿರ್ಮಿತ ನೀಲಿ ಮತ್ತು ಕಪ್ಪು ಬಣ್ಣದಾಗಿದ್ದು ಸದ್ರಿ ಬೈಕ್‌ನ ಹಿಂದೆ ಹಾಗೂ ಮುಂದೆ ಯಾವುದೇ ನಂಬರ್ ಪ್ಲೇಟು ಇಲ್ಲದೇ ಇರುವುದು ಹಾಗೂ ಈ ಪ್ರಯುಕ್ತ ಮೋಟಾರ್ ಬೈಕನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಇಂಜಿನ್ ಸಂ: KC13EASCC01948 ಹಾಗೂ ಚಾಸೀಸ್ ನಂ:MBLKC13EA8BC01696 ಎಂದು ನಮೂದಿಸುವುದು ಪತ್ತೆಯಾಗಿ, ಇದು ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಟವಾಗಿರುವುದರಿಂದ ಇದು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 3+… ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಸದ್ರಿ ಸೊತ್ತುಗಳನ್ನು ಪಂಚರ ಸಮಕ್ಷಮ ಜಪ್ತುಮಾಡಿ, ಸ್ಥಳದಲ್ಲಿಯೇ ಮಹಜರು ತಯಾರಿಸಿ, ಸೊತ್ತುಗಳನ್ನು ಜಪ್ತು ಮಾಡಿ ಪ್ರಕರಣದ ವರದಿಯನ್ನು ಠಾಣಾಧಿಕಾರಿ,ಉಳ್ಳಾಲ ಪೊಲೀಸ್ ಠಾಣೆ ಇವರಿಗೆ ವರದಿ ಮಾಡಿರುತ್ತಾರೆ. ಪೊಲೀಸ್ ಉಪ ನಿರೀಕ್ಷಕರು, ಉಳ್ಳಾಲ ಪೊಲೀಸ್ ಠಾಣೆ, ಉಳ್ಳಾಲ ಇವರು ಆರೋಪಿಗಳಾದ ಅನಿಲ್ ಯಾನೆ ಪಿಯೂಸ್ ಪೆರಾವೊ ಮತ್ತು ನವೀನ್ ಸಿಕ್ವೇರಾ ಇವರುಗಳ ವಿರುದ್ದ ತಕ್ಷೀರು ಸಂಖ್ಯೆ:159/2008, ದಿನಾಂಕ:12-7-2008 ರಂದು ಮೊಕದ್ದಮೆಯನ್ನು ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿ, ಮಹಜರು ಮತ್ತು ಸೊತ್ತುಗಳ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಸೊತ್ತುಗಳನ್ನು ಮತ್ತು ಕಡತವನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸುವರೇ ಠಾಣಾಧಿಕಾರಿಗಳು, ಉಳ್ಳಾಲ ಪೊಲೀಸ್ ಠಾಣೆ,ಉಳ್ಳಾಲ ಇವರು ಪ್ರಾಧಿಕಾರದಲ್ಲಿ ಕೋರಿದ ಮೇರೆಗೆ, ಪ್ರಾಧಿಕಾರದ ದಿ:21-7-2008ರ ಆದೇಶದಲ್ಲಿ ಸೊತ್ತುಗಳನ್ನು ಅಬಕಾರಿ ನಿರೀಕ್ಷಕರು,ಮಂಗಳೂರು ದಕ್ಷಿಣ ವಲಯ-II ಇವರಿಗೆ ಹಸ್ತಾಂತರಿಸಲು ಅದೇಶಿಸಲಾಗಿರುತ್ತದೆ. ಆ ಪ್ರಕಾರ ಮೊಕದ್ದಮೆಗೆ ಸಂಬಂಧಿಸಿ ಸೊತ್ತುಗಳನ್ನು ಹಾಗೂ ಕಡತಗಳನ್ನು ದಿ:31-10-2008ರಂದು ಅಬಕಾರಿ ನಿರೀಕ್ಷಕರು,ಮಂಗಳೂರು ದಕ್ಷಿಣ ವಲಯ-II ಇವರಿಗೆ ಹಸ್ತಾಂತರಿಸಲಾಗಿರುತ್ತದೆ.

ಸದ್ರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿಯಿಂದ ತೆಗೆದ ಮಾದರಿ ಸೀಸೆಗಳನ್ನು ಪ್ರಕರಣ ಪತ್ತೆ ಹಚ್ಚಿದ ಪೊಲೀಸ್ ಅಧಿಕಾರಿಗಳು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಸದ್ರಿ ಮಾದರಿಗಳನ್ನು ವಿಶ್ಲೇಷಿಸಿದ ಕರ್ನಾಟಕ ಸರ್ಕಾರದ ಸಹಾಯಕ ರಾಸಾಯನಿಕ ತಜ್ಞರು, ಮಂಗಳೂರುರವರ ಪತ್ರ ಸಂ:ಇ-441-1, ದಿ:6-10-2008ರ ವರದಿಯಲ್ಲಿ ಕಳ್ಳಭಟ್ಟಿ ಸಾರಾಯಿಯ ಮದ್ಯಸಾರ ಪ್ರಮಾಣ 41.0% ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ಪ್ರಕರಣದ ತನಿಖಾಧಿಕಾರಿಯವರು ಜಪ್ತುಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ದಿ:31-10-08 ರಂದು ನೀಡಿದ ತನಿಖಾ ವರದಿಯನ್ನು ಆಧರಿಸಿ, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ ಜಿಲ್ಲೆ ಮಂಗಳೂರು ಇವರು ಈ ಪ್ರಾಧಿಕಾರದ ಆದೇಶ ಸಂ:ಎಸ್‌ಡಿಕೆ/155/ಡಿಟಿಸಿಆರ್/2008-09, ದಿ:26-11-2008ರ ಪ್ರಕಾರ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡಿರುವ ಸೊತ್ತುಗಳ ಪೈಕಿ ವಾಹನದ ಮುಟ್ಟುಗೋಲು ನಡವಳಿಯನ್ನು ಕಾಯ್ದಿರಿಸಿ, ಕ್ಯಾನಿನಲ್ಲಿದ್ದ 35 ಲೀ ಕಳ್ಳಭಟ್ಟಿ ಸಾರಾಯಿಯನ್ನು (ಮಾದರಿಗಳನ್ನು ಹೊರತು ಪಡಿಸಿ) ಕರ್ನಾಟಕ ಅಬಕಾರಿ ಕಾಯಿದೆ ಕಲಂ 43ಸಿ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಅಬಕಾರಿ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ-II ಇವರ ಸಮಕ್ಷಮ ಮಹಜರು ಜರುಗಿಸಿ ನಾಶಪಡಿಸಲು ಆದೇಶಿಸಲಾಗಿರುತ್ತದೆ.

ಸದ್ರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಮೋಟಾರ್ ಬೈಕ್‌ಗೆ ಪ್ರಕರಣ ಸಂದರ್ಭದಲ್ಲಿ ನಂಬರು ಪ್ಲೇಟು ಅಳವಡಿಸದೇ ಇದುದ್ದರಿಂದ ವಾಹನದ ಇಂಜಿನ ಸಂಖ್ಯೆ ಮತ್ತು ಚಾಸೀಸ್ ಸಂಖ್ಯೆ ಆಧಾರದ ಮೇಲೆ ವಾಹನದ ನೊಂದಾಯಿತ ಮಾಲೀಕರ ವಿವರಗಳ ಬಿ ಎಕ್ಸ್‌ಟ್ರಾಕ್ಟ್ ವರದಿಯನ್ನು ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಪಡೆದು ವರದಿ ಸಲ್ಲಿಸುವಂತೆ ಪ್ರಕರಣದ ತನಿಖಾಧಿಕಾರಿಗಳಿಗೆ ಈ ಪ್ರಾಧಿಕಾರದಿಂದ ದಿ:17-1-08ರಂದು ಆದೇಶಿಸಲಾಗಿದ್ದು, ಸದ್ರಿ ಆದೇಶಕ್ಕೆ ಅನುಗುಣವಾಗಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಗಳೂರುರವರ ಪತ್ರ ಸಂ:ಪ್ರಾ. ಸಾ.ಅ/ ಎನ್‌ಜಿ/KA-19-X-9135/08-09 ದಿ:3-2-2009ರೊಂದಿಗೆ ಅಡಕಗೊಳಿಸಲಾದ ಬಿ ಎಕ್ಸ್‌ಟ್ರಾಕ್ಟ್ ವರದಿಯನ್ನು ಪ್ರಾಧಿಕಾರದಲ್ಲಿ ಪಡೆಯಲಾಗಿದ್ದು, ಸದ್ರಿ ವರದಿಯ ಪ್ರಕಾರ ಮೋಟಾರು ಬೈಕ್‌ನ ನೊಂದಣಿ ಸಂ: KA-19-X -9135 ಎಂಬುವುದಾಗಿ ತಿಳಿಯಲಾಗಿದ್ದು, ವಾಹನದ ಇಂಜಿನ್ ಸಂ: KC13EA8GC 01948 ಹಾಗೂ ಚಾಸೀಸ್ ನಂ:MBLKC13EA8GC01696 ಆಗಿರುತ್ತದೆ. ಇದು 2008ರ ಮಾಡೆಲ್ ಆಗಿದ್ದು, ಶ್ರೀ ಪಿಯುಸ್ ಪೆರಾವೋ, ಬಿನ್ ದಿ:ಸ್ಟ್ಯಾನಿ ಪೆರಾವೊ, ಡೋರ್ ನಂ: 2-58(2), ಮೊಸಪು ಮನೆ, ಕಲ್ಲಾಪು, ಪೆರ್ಮನ್ನೂರು ಅಂಚೆ, ಮಂಗಳೂರು ಇವರು ವಾಹನದ ಮಾಲೀಕರು ಎಂದು ಮತ್ತು I.C.I.C.I Bank Ltd., K.S.Rao Road, Mangalore ಇವರು ದಿ:2-6-2008ರಿಂದ ಅನ್ವಯವಾಗುವಂತೆ ಸದ್ರಿ ವಾಹನದ ಹೆಚ್.ಪಿ.ಎದಾರರು ಎಂದು ದೃಢೀಕರಣ ಪತ್ರ ನೀಡಿರುತ್ತಾರೆ.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು,ದ.ಕ.ಜಿಲ್ಲೆ ಮಂಗಳೂರುರವರು ನೀಡಿರುವ ಬಿ ಎಕ್ಸ್‌ಟ್ರಾಕ್ಟ್ ವರದಿಯ ಪ್ರಕಾರ ವಾಹನದ ನೊಂದಾಣಿ ಮಾಲೀಕರಾದ ಶ್ರೀ ಪಿಯುಸ್ ಪೆರಾವೋ, ಬಿನ್ ದಿ:ಸ್ಟ್ಯಾನಿ ಪೆರಾವೊ, ಡೋರ್ ನಂ:2-58(2), ಮೊನಪು ಮನೆ, ಕಲ್ಲಾಪು, ಪೆರ್ಮನ್ನೂರು ಅಂಚೆ, ಮಂಗಳೂರು ಮತ್ತು I.C.I.C.I Bank Ltd., K.S.Rao Road, Mangalore ಇವರಿಗೆ ಜಪ್ತು ಪಡಿಸಿದ ವಾಹನವನ್ನು ಯಾಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬ ಬಗ್ಗೆ

ಏಳು ದಿವಸಗಳೊಳಗೆ ಉತ್ತರ ಸಲ್ಲಿಸಲು ಈ ಪ್ರಾಧಿಕಾರದಿಂದ ಕರ್ನಾಟಕ ಅಬಕಾರಿ ಕಾಯಿದೆ 1965ರ ಸೆಕ್ಷನ್ 43 ಬಿ ಪ್ರಕಾರ ಕಾರಣ ಕೇಳಿ ನೋಟಿಸುಗಳನ್ನು ದಿ:17–3–2009ರಂದು ನೊಂದಾಣಿ ಅಂಚೆ ಮೂಲಕ ಹಾಗೂ ತನಿಖಾಧಿಕಾರಿಯವರ ಮುಖಾಂತರ ನೀಡಲಾಗಿದ್ದು, ನೊಂದಾಣಿ ಅಂಚೆ ಮೂಲಕ ನೀಡಿದ ನೋಟಿಸು ವಾಹನದ ಮಾಲೀಕರಿಗೆ ದಿ:30–3–2009 ರಂದು ಜಾರಿಯಾಗಿದ್ದು ಅಬಕಾರಿ ನಿರೀಕ್ಷಕರು ಮಂಗಳೂರು ದಕ್ಷಿಣ ವಲಯ–II ಇವರು ವಾಹನದ ನೊಂದಾಣಿ ಮಾಲೀಕರಾದ ಶ್ರೀ.ಪಿಯುಸ್ ಪೆರಾವೋ ಇವರಿಗೆ ಖುದ್ದಾಗಿ ದಿ:30–3–2009 ರಂದು ಜ್ಯಾರಿ ಮಾಡಿ, ಜಾರಿ ಮಾಡಿದ ಸ್ವೀಕೃತಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಪ್ರಕರಣವು ದಾಖಲಾಗಿ ಸುಮಾರು 9 ತಿಂಗಳು ಕಳೆದಿದ್ದರೂ, ವಾಹನದ ಮಾಲೀಕರಾಗಲೀ ಅಥವಾ ಅವರ ಪರ ವಕೀಲರಾಗಲೀ ಮತ್ತು ಅರೋಪಿಗಳಾಗಲೀ ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಾಹನ ಬಿಡುಗಡೆಗೆ ಆಧಾರಿತವಾದ ದಾಖಲಾತಿಗಳೊಂದಿಗೆ ಯಾವುದೇ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಕಾರಣ ಕೇಳಿ ನೋಟಿಸನ್ನು ದಿ:30–3–2009ರಂದು ಜ್ಯಾರಿಯಾಗಿದ್ದರೂ ಈ ಪ್ರಾದಿಕಾರದ ಮುಂದೆ ಇದುವರೆಗೂ ಯಾವುದೇ ಉತ್ತರ ನೀಡಿ ವಾಹನ ತನ್ನದೆಂದು ತಿಳಿಸಿರುವುದಿಲ್ಲ.

1965ನೇ ಕರ್ನಾಟಕ ಅಬಕಾರಿ ಕಾಯ್ದೆ ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ, ಅಥವಾ ಪತ್ತೆಯಾಗುವ ಸಾಧ್ಯತೆ ಇಲ್ಲದಿದ್ದಲ್ಲಿ ಪ್ರಕರಣವನ್ನು ಪತ್ತೆಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು ಅವುಗಳು ಕಾನೂನು ಬದ್ಧವಾಗಿದೆಯೆಂದು ಸಾಕ್ಷಧಾರಗಳೊಂದಿಗೆ ಸಾಬೀತು ಪಡಿಸದೇ ಇದ್ದಲ್ಲಿ, ಸದ್ರಿ ಸೊತ್ತುಗಳು, ಅಬಕಾರಿ ಕಾಯ್ದೆ ಕಲಂ 43ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯ ವಾಗಿರುವ ಸೊತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಲಂ 43ಸಿ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಪ್ರಾಧಿಕಾರದಲ್ಲಿ ಲಭ್ಯವಿರುವ ದಾಖಲಾತಿಗಳ ಪ್ರಕಾರ ದಿನಾಂಕ:12–7–2008ರಂದು ನಂಬರ್ ಪ್ಲೇಟು ಅಳವಡಿಸದೇ ಇದ್ದ ಮೋಟಾರ್ ಬೈಕ್(ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಪಡೆದ ಬಿ ಎಕ್ಸ ಟ್ರಾಕ್ಟ್ ಪ್ರಕಾರ ಪಡೆದ ನೊಂದಣಿ ಸಂ: KA-19-X-9135) ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೇ ಅರೋಪಿಗಳು 35 ಲೀ ಕಳ್ಳಭಟ್ಟಿ ಸಾರಾಯಿಯನ್ನು ಹೊಂದಿ ಸಾಗಾಟ ಮಾಡುತ್ತಿದ್ದು, ತಪಾಸಣೆ ಕರ್ತವ್ಯದಲ್ಲಿದ್ದ ಪೊಲೀಸ್ ಅಧಿಕಾರಿಗಳು ಗಮನಿಸಿ ಪ್ರಕರಣ ಸಂದರ್ಭದಲ್ಲಿ ಆರೋಪಿಗಳು ತಲೆಮರೆಸಿಕೊಂಡಿರುವುದನ್ನು ಪೊಲೀಸ್ ನಿರೀಕ್ಷಕರು ಸಾರಾಯಿ ಮತ್ತು ಲಾಟರಿ ನಿಷೇಧ ದಳ, ಮಂಗಳೂರು ಇವರು ಪತ್ತೆಹಚ್ಚಿ ಅಕ್ರಮವಾಗಿ ಕಳ್ಳಭಟ್ಟಿ ಸಾಗಾಣಿಕೆಗೆ ಬಳಸಲಾದ ವಾಹನವನ್ನು ಸ್ಥಳ ಮಹಜರು, ಪಂಚನಾಮೆಯ ಮುಖೇನಾ ಸ್ವಾಧೀನಪಡಿಸಿಕೊಂಡು ಈ ಬಗ್ಗೆ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ತಕ್ಷೀರು ಸಂ:159/2008 ದಿ:12–7–2008ರ ಪ್ರಕಾರ ಪ್ರಕರಣ ದಾಖಲಿಸಿಕೊಂಡು, ವಾಹನದಲ್ಲಿ ಜಪ್ತು ಮಾಡಲ್ಪಟ್ಟಿರುವ ಕಳ್ಳಭಟ್ಟಿ ಸಾರಾಯಿ ರಾಸಾಯನಿಕ ತಜ್ಞರ ವರದಿಯಂತೆ ಕಳ್ಳಭಟ್ಟಿ ಸಾರಾಯಿ ಎಂಬುವುದಾಗಿ ದೃಢಪಡಿಸಿರುವುದರಿಂದ. ಸದ್ರಿ ವಾಹನವನ್ನು ಕರ್ನಾಟಕ ಅಬಕಾರಿ ಕಾಯ್ದೆಯಡಿ ಅಪರಾಧಕ್ಕೆ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾದಿಕಾರವು ಮನಗಂಡು ವಾಹನದ ಮುಟ್ಟುಗೋಲು ನಡವಳಿ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ಅಬಕಾರಿ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ–II ಇವರು ಪ್ರಕರಣದ ತನಿಖಾ ವರದಿಯನ್ನು ದಿ:31–10–2008 ರಂತೆ ಒಪ್ಪಿಸಿ, ಸದರಿ ವಾಹನ ಹಾಗೂ ಜಪ್ತುಪಡಿಸಿದ ಕಳ್ಳಭಟ್ಟಿ ಸಾರಾಯಿಯನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ವರದಿ ಸಲ್ಲಿಸಿದ್ದು, ಸದರಿ ವರದಿಯನ್ನು ಅಬಕಾರಿ ಉಪ ಅಧೀಕ್ಷಕರು, ಮಂಗಳೂರು ಉಪವಿಭಾಗ–1, ಮಂಗಳೂರು ಇವರು ಅವಲೋಕಿಸಿ ದಿ:14–11–2008ರಂತೆ ಪ್ರಸ್ತಾವನೆಯನ್ನು ಅಂಗೀಕರಿಸಲು ಈ ಪ್ರಾಧಿಕಾರಕ್ಕೆ ವರದಿ ಒಪ್ಪಿಸಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಪೊಲೀಸ್ ನಿರೀಕ್ಷಕರು. ಸಾರಾಯಿ ಮತ್ತು ಲಾಟರಿ ನಿಷೇಧ ದಳ, ಮಂಗಳೂರು ಇವರು ವಶಪಡಿಸಿಕೊಂಡ ನಂಬರ್ ಪ್ಲೇಟು ಅಳವಡಿಸದೇ ಇದ್ದ ಹಾಗೂ ತನಿಖಾ ವೇಳೆಯಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಪಡೆಯಲಾದ ಬಿ ಎಕ್ಸ್ ಟ್ರಾಕ್ಟ್ ವರದಿಯಲ್ಲಿ ನಮೂದಿಸಿದಂತೆ ನೊಂದಣಿ ಸಂ: KA-19-X-9135 ಎಂದು ಇರುವ ಮೋಟಾರ್ ಬೈಕನ್ನು ವಶಪಡಿಸಿಕೊಂಡು ಸುಮಾರು ಒಂಭತ್ತು ತಿಂಗಳಿಗಿಂತ ಹೆಚ್ಚು ಸಮಯ ಕಳೆದಿದ್ದು, ಈ ಪ್ರಾದಿಕಾರದ ಮುಂದೆ ವಾಹನ ಬಿಡುಗಡೆಗಾಗಿ ಮತ್ತು ವಾಹನವು ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಟದಲ್ಲಿ ತೊಡಗಿಲ್ಲವೆಂದು ಸಾಬೀತುಪಡಿಸಲು ಈ ಪ್ರಾಧಿಕಾರದಿಂದ ನೀಡಲಾಗಿರುವ ನೋಟೀಸಿಗೆ ಆರ್.ಸಿ. ಮಾಲೀಕರು ಯಾವುದೇ ಸಮಂಜಸವಾದ ಉತ್ತರ ಈ ಪಾದಿಕಾರದ ಮುಂದೆ ಒಪ್ಪಿಸದೇ ಇರುವುದರಿಂದ ಮತ್ತು ವಾಹನ ಮಾಲೀಕರು ಅಥವಾ ಸಂಬಂಧಪಟ್ಟವರು ತನ್ನ ನಿರಪರಾಧಿತ್ವವನ್ನು ಸಾಬೀತುಪಡಿಸಿಕೊಂಡು ಸೂಕ್ತ ದಾಖಲಾತಿಗಳೊಂದಿಗೆ ವಾಹನದ ಮಾಲೀಕತ್ವವನ್ನು ಕೋರಿ ಈ ಪಾದಿಕಾರದ ಮುಂದೆ ಹಾಜರಾಗದಿರುವ ಕಾರಣ ಹಾಗೂ ಪ್ರಕರಣ ಸಂದರ್ಭದಲ್ಲಿ ವಾಹನಕ್ಕೆ ಅಧಿಕೃತ ನಂಬರ್ ಪ್ಲೇಟು ಅಳವಡಿಸದೇ ವಾಹನವನ್ನು ಅಕ್ರಮ ಕಳ್ಳಭಟ್ಟಿ ಸಾರಾಯಿ ಮಾರಾಟಕ್ಕೆ ಬಳಸಿರುವುದು ಹಾಗೂ ಪ್ರಕರಣ ದಾಖಲಿಸಿ ಇಷ್ಟು ಸುದೀರ್ಘ ಅವಧಿಯವರೆಗೂ ವಾಹನದ ಮಾಲೀಕತ್ವವನ್ನು ಕೋರಿ ಈ ಪ್ರಾದಿಕಾರಕ್ಕೆ ಯಾರೊಬ್ಬರೂ ಅರ್ಜಿಯನ್ನು ಸಲ್ಲಿಸದೇ ಇರುವುದರಿಂದ ವಾಹನದ ಮಾಲೀಕರು ತನ್ನ ಸ್ವಇಚ್ಛೆಯಿಂದಲೇ ವಾಹನವನ್ನು ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಾಗಾಟ

ಮಾಡಲು ಬಳಸಿಕೊಂಡಿರುವುದು ಪ್ರಾಧಿಕಾರಕ್ಕೆ ಮನಗಂಡಿದ್ದು, ಸದಿ ದ್ವಿಚಕ್ರ ವಾಹನದಲ್ಲಿ ಅಕ್ರಮವಾಗಿ 35 ಲೀಟರ್ ಕಳ್ಳಭಟ್ಟಿ ಸಾರಾಯಿಯನ್ನು ನಂಬರ್ ಪ್ಲೇಟು ಅಳವಡಿಸದ ಮೋಟಾರು ಬೈಕ್‌ನಲ್ಲಿ ಸಾಗಾಣಿಕೆಗೆ ಬಳಸಿರುವುದು ಲಭ್ಯವಿರುವ ಲಿಖಿತ ಸಾಕ್ಷಿಯ ದಾಖಲಾತಿಗಳ ಆಧಾರದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಕಾರಣ ಈ ಆದೇಶ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43ಬಿ ಅಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಕಲಂ 43ಎ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪೊಲೀಸ್ ನಿರೀಕ್ಷಕರು, ಸಾರಾಯಿ ಮತ್ತು ಲಾಟರಿ ನಿಷೇಧ, ಮಂಗಳೂರು ಇವರು ವರದಿ ಮಾಡಿ, ಅಪರಾಧವನ್ನು ಉಳ್ಳಾಲ ಪೊಲೀಸ್ ಠಾಣೆ,ಉಳ್ಳಾಲ ಇವರ ತಕ್ಷೀರು ಸಂ:159/2008, ದಿ:27-9-2007ರಲ್ಲಿ ಜಪ್ತು ಪಡಿಸಿರುವ ವಾಹನ ಮೋಟಾರು ಬೈಕಿನ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ಸಮೂದಿಸಿರುವ ನೊಂದಣಿ ಸಂ: KA-19-X-9135 (ಇಂಜಿನ್ ಸಂ: KC13EA8GC 01948 ಹಾಗೂ ಚಾಸೀಸ್ ನಂ:MBLKC13EA8GC01696) ನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 43ಸಿ ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ:25-04-2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

-ಯಾವುದು ಇಲ್ಲ-

ಅನುಬಂಧ-2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

-ಯಾವುದು ಇಲ್ಲ-

ಅನುಬಂಧ-3

ವಾಹನ ಮಾಲೀಕರ ಪರ ವಿಚಾರಣೆ ಮಾಡಿದ ಸಾಕ್ಷಿದಾರರು

-ಇಲ್ಲ-

ಅನುಬಂಧ-4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

-ಇಲ್ಲ-

ನೂರ್ ಮಹಮ್ಮದ್ ಹುಸೇನ್
ಪಿ.ಆರ್.439 ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ:ಎಸ್‌ಡಿಕೆ/89/ಡಿಟಿಸಿಆರ್/2007-08, ದಿನಾಂಕ:20ನೇ ಏಪ್ರಿಲ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ. ಮಂಗಳೂರು.

ಫಿರ್ಯಾದುದಾರರು:	**ಆರೋಪಿ:**
ಪೊಲೀಸ್ ಉಪ ನಿರೀಕ್ಷಕರು, ಸುಳ್ಯ ಪೊಲೀಸ್ ಠಾಣೆ, ಸುಳ್ಯ.	ಕೆ.ಪುರುಷೋತ್ತಮ , (26 ವ) ಬಿನ್ ಈಶ್ವರ ನಾಯ್ಕ್, ಮರ್ಕಂಜ ಕೋಡಿಕಾನ, ಮರ್ಕಂಜ ಗಾಮ, ಸುಳ್ಯ ತಾಲ್ಲೂಕು.
	ವಾಹನ ಮಾಲೀಕರು:
	ಪುರುಷೋತ್ತಮ, (26 ವ) ಬಿನ್ ಈಶ್ವರ ನಾಯ್ಕ್, ಮರ್ಕಂಜ ಕೊಚ್ಚಿಕಾನ, ಮರ್ಕಂಜ ಗ್ರಾಮ, ಸುಳ್ಯ ತಾಲ್ಲೂಕು.

ಪ್ರಕರಣದ ಮುಖ್ಯಾಂಶಗಳು:

ಪೊಲೀಸ್ ಉಪ ನಿರೀಕ್ಷಕರು, ಸುಳ್ಯ ಪೊಲೀಸ್ ಠಾಣೆ, ಸುಳ್ಯ ಇವರು ದಿ:11-9-2007 ರಂದು ತಮ್ಮ ಸಿಬ್ಬಂಧಿಯವರೊಂದಿಗೆ ಸುಳ್ಯ ತಾಲೂಕು ಬೆಳ್ಳಾರೆ ಮರ್ಕಂಜ ಗ್ರಾಮದ ಬೊಳಿಯಡ್ಕ ಎಂಬಲ್ಲಿ ವಾಹನಗಳನ್ನು ತಪಾಸಣೆ

ಮಾಡುತ್ತಿರುವ ಸಂದರ್ಭದಲ್ಲಿ ರಸ್ತೆ ಬದಿಯಲ್ಲಿದ್ದ ಜೀಪೊಂದನ್ನು ನಿಲ್ಲಿಸಿ ಅದರಲ್ಲಿದ್ದ ವ್ಯಕ್ತಿ ಪೋಲೀಸ್‌ರವರನ್ನು ಕಂಡು ಓಡಿಹೋಗಲು ಪ್ರಯತ್ನಿಸಿದನು. ಇದರ ಅನುಮಾನದ ಮೇರೆಗೆ ಸದ್ರಿ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದಾಗ ಪುರುಷೋತ್ತಮ, (26 ವ) ಬಿನ್ ಈಶ್ವರನಾಯ್ಕ್. ಮರ್ಕಂಜ, ಕೊಚ್ಚಿಕಾನ, ಮರ್ಕಂಜ ಗ್ರಾಮ, ಸುಳ್ಯ ತಾಲೂಕು ಹಾಗೂ ಸದ್ರಿ ಜೀಪಿನ ಚಾಲಕನಾಗಿದೆನೆಂದು ತಿಳಿಸಿದನು. ಹಾಗೂ 180ಮಿಲಿ ಪ್ರಮಾಣದ 10 ಬಾಟ್ಲಿ ಸೂಪರ್ ಚಾಕ್ ವಿಸ್ಕಿ ಮದ್ಯದ ಬಾಟಲಿಗಳನ್ನು ಮಾರಾಟಕ್ಕಾಗಿ ತೆಗೆದುಕೊಂಡು ಹೋಗುತ್ತಿದ್ದಾಗಿ ಅದ್ದರ ಬಗ್ಗೆ ಯಾವುದೇ ದಾಖಲಾತಿಗಳಿಲ್ಲ ಎಂದು ತಿಳಿಸಿರುತ್ತಾನೆ. ಇದು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 34 ರ ಪ್ರಕಾರ ಅಪರಾಧ ಎಸಗಿರುವುದರಿಂದ. ಈ ಕೆಳಕಂಡ ಸೊತ್ತುಗಳನ್ನು ಅವನಿಂದ ಸ್ವಾಧೀನಪಡಿಸಿಕೊಳ್ಳಲಾಗಿದೆ.

1) ಒಂದು ಪ್ಲಾಸ್ಟಿಕ್ ತೊಟ್ಟೆಯಲ್ಲಿ ಸೂಪರ್ ಚಾಕ್ ಕ್ಲಾಸಿಕ್ ವಿಸ್ಕಿ 180 ಎಂಎಲ್‌ನ 10 ಸೀಸೆಗಳು–1.800 ಲೀಟರು ಮದ್ಯ.
2) ಜೀಪು ಸಂ:KA-18-M-3565

ಸದ್ರಿ ಸೊತ್ತುಗಳನ್ನು ವಶಪಡಿಸಿಕೊಂಡು ಆರೋಪಿಯನ್ನು ಸ್ಥಳದಲ್ಲಿ ದಸ್ತಗಿರಿ ಮಾಡಿ ಹಾಗೂ ಮಹಜರನ್ನು ಸ್ಥಳದಲ್ಲಿಯೇ ಬರೆದು ಆರೋಪಿಯ ವಿರುದ್ಧ ತಕ್ಷೀರು ಸಂಖ್ಯೆ:157/2007, ದಿನಾಂಕ:11–9–2007 ರಂದು ಮೊಕದ್ದಮೆಯನ್ನು ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿ, ಮಹಜರು ಮತ್ತು ಸೊತ್ತುಗಳ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ವಶಪಡಿಸಿಕೊಂಡ ಸೊತ್ತುಗಳನ್ನು ಕಡತದೊಂದಿಗೆ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇಎಬಿ, ದ.ಕ.ಜಿಲ್ಲೆ ಮಂಗಳೂರು ಇವರ ಆದೇಶ ಸಮ ಸಂಖ್ಯೆ ದಿನಾಂಕ:24–9–2007ರ ಆದೇಶದ ಮೇರೆಗೆ ಅಬಕಾರಿ ಉಪ ನಿರೀಕ್ಷಕರು(1), ಜಾರಿ ಮತ್ತು ತನಿಖೆ ಸುಳ್ಯ ತಾಲೂಕು ಇವರಿಗೆ ಹಸ್ತಾಂತರಿಸಿರುತ್ತಾರೆ.

ಪೊಲೀಸ್ ಉಪ ನಿರೀಕ್ಷಕರು, ಸುಳ್ಯ ಪೊಲೀಸ್ ಠಾಣೆ ,ಸುಳ್ಯ ಇವರು ಅಬಕಾರಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಅಬಕಾರಿ. ಸೊತ್ತುಗಳನ್ನು ದಿ:2–10–2007ರಂದು ಅಬಕಾರಿ ಉಪ ನಿರೀಕ್ಷಕರು(1), ಜಾರಿ ಮತ್ತು ತನಿಖೆ ಸುಳ್ಯ ಇವರಿಗೆ ಹಸ್ತಾಂತರಿಸಿರುತ್ತಾರೆ.

ಮೊಕದ್ದಮೆಯ ತನಿಖೆಯನ್ನು ಕೈಗೊಂಡ ಅಬಕಾರಿ ಉಪ ನಿರೀಕ್ಷಕರು(1) ಜಾರಿ ಮತ್ತು ತನಿಖೆ ಸುಳ್ಯ ಇವರ ತನಿಖಾ ವರದಿ ಸಂ:ಸಿಆರ್‌ಎಂ:16:2007–08 ದಿ:8–1–2007ರ ವರದಿಯಲ್ಲಿ ವಶಪಡಿಸಿಕೊಂಡ ಮದ್ಯದಿಂದ ತೆಗೆದ ಮಾದರಿಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಸದ್ರಿ ಮಾದರಿಗಳನ್ನು ವಿಶ್ಲೇಷಿಸಿದ ಸಹಾಯಕ ರಾಸಾಯನಿಕ ವಿಶ್ಲೇಷಕರು, ಮಂಗಳೂರುರವರು ದಿ:11–10–2007ರಂದು ನೀಡಿದ ರಾಸಾಯನಿಕ ಪರೀಕ್ಷಾ ಫಲಿತಾಂಶದ ವರದಿಯಲ್ಲಿ ಮದ್ಯದ ಮದ್ಯಸಾರ ಪ್ರಮಾಣ 42% ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ಹಾಗೂ ವಶಪಡಿಸಿಕೊಂಡ ಜೀಪು ಸಂ: KA-18M-3565 ರ ಬಿಎಕ್ಸ್ ಟ್ರಾಕ್ಟ್ ವರದಿಯನ್ನು ಸಾರಿಗೆ ಅಧಿಕಾರಿ, ಪುತ್ತೂರು ಇವರಿಂದ ಪಡೆದು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಬಿ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ವಾಹನದ ನೊಂದಾಣಿ ಮಾಲೀಕ ಕೆ. ಪುರುಷೋತ್ತಮ ಬಿನ್: ಈಶ್ವರ ನಾಯ್ಕ್ ಕೋಡಿಕಾನ ಹೌಸ್, ಮರ್ಕಂಜ, ಸುಳ್ಯ ತಾಲೂಕು ಎಂದು ಇದರ ಚಾಸಿಸ್ ನಂ:CL500MD-4GV-DV205357 ಹಾಗೂ ಇಂಜಿನ್ ನಂ: DV205357 ಎಂದು ನಮೂದಿಸಿ ದೃಢೀಕರಣ ಪತ್ರ ನೀಡಿರುತ್ತಾರೆ.

ವಾಹನ ಮಾಲೀಕರಾದ ಶ್ರೀ ಕೆ.ಪುರುಷೋತ್ತಮ ಇವರು ತಮ್ಮ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ದಿ:21–9–2007 ರಂದು ಅರ್ಜಿ ಸಲ್ಲಿಸಿ ಸದ್ರಿ ಅರ್ಜಿಯಲ್ಲಿ ವಾಹನವನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ಕೋರಿರುತ್ತಾರೆ.

ಈ ಪ್ರಾಧಿಕಾರದಿಂದ ದಿ:17–1–2008ರಂದು ವಾಹನದ ನೋಂದಾಣಿ ಮಾಲೀಕರಾದ ಶ್ರೀ ಪುರುಷೋತ್ತಮ ಬಿನ್ ಈಶ್ವರ ನಾಯ್ಕ್ ಕೋಡಿಕಾನ ಹೌಸ್, ಮರ್ಕಂಜ , ಸುಳ್ಯ ತಾಲೂಕು ಇವರಿಗೆ ಕರ್ನಾಟಕ ಅಬಕಾರಿ ಕಾಯಿದೆ 1965 ಸೆಕ್ಷನ್ 43 ಬಿ ಪ್ರಕಾರ ಕಾರಣ ಕೇಳಿ ನೋಟಿಸನ್ನು ನೊಂದಾಣಿ ಅಂಚೆಯ ಮೂಲಕ ನೀಡಲಾಗಿದ್ದು, ಇವರು ದಿ:24–1–2008ರಂದು ಸ್ವೀಕರಿಸಿ, ಸ್ವೀಕೃತಿ ಪ್ರತಿ ಈ ಪ್ರಾಧಿಕಾರಕ್ಕೆ ಬಂದಿರುತ್ತದೆ. ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ನೀಡಿದ ನೋಟಿಸಿಗೆ ದಿ:8–2–2008 ರಂದು ಉತ್ತರವನ್ನು ನೀಡಿರುತ್ತಾರೆ.

ಸದ್ರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಜೀಪು ಸಂ:KA-18-M-3565 ಇದರ ಮಧ್ಯಂತರ ಬಿಡುಗಡೆಗಾಗಿ ಸಲ್ಲಿಸಿದ ಅರ್ಜಿಯ ಬಗ್ಗೆ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇಎಬಿ.ದ.ಕ. ಜಿಲ್ಲೆ ಮಂಗಳೂರು ಇವರ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿದ್ದು, ಈ ಪ್ರಾಧಿಕಾರದ ಆದೇಶ ಸಮ ಸಂಖ್ಯೆ ದಿ:13–2–2008ರಂದು ವಶಪಡಿಸಿಕೊಂಡ ಜೀಪನ್ನು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಎ ಮತ್ತು ಬಿ ರಡಿಯಲ್ಲಿ ಮುಂದಿನ ಮುಟ್ಟುಗೋಲು ವಿಚಾರಣೆಯನ್ನು ಕಾಯ್ದಿರಿಸಿ ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಎ (2) (1) ತಿದ್ದುಪಡಿ ನಿಯಮಾನುಸಾರ ಷರತ್ತಿಗೊಳಪಟ್ಟು ರೂ. 55,000/– ಬ್ಯಾಂಕ್ ಗ್ಯಾರೆಂಟಿ ಅಧಾರದ ಮೇಲೆ ವಾಹನದ ನೊಂದಾಣಿ ಮಾಲೀಕರಾದ ಶ್ರೀ ಕೆ. ಪುರುಷೋತ್ತಮ ಇವರಿಗೆ ಮಧ್ಯಂತರ ಸುಪರ್ದಿಗೆ ವಾಹನವನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲಾಗಿದೆ.

III -F5-(0)

ಪ್ರಕರಣದ ಎಲ್ಲಾ ದಾಖಲಾತಿಗಳನ್ನು, ಅರ್ಜಿದಾರರ ಅರ್ಜಿ ಹಾಗೂ ತನಿಖಾಧಿಕಾರಿಯವರ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಕರ್ನಾಟಕ ಅಬಕಾರಿ ಕಾಯಿದೆ (ಸ್ವಾಧೀನತೆ ಮತ್ತು ಸಾಗಾಣಿಕೆ ಇತರೆ) ನಿಯಮಗಳು 1967ರ ನಿಯಮ 21ರ ಪ್ರಕಾರ ಒಬ್ಬ ವ್ಯಕ್ತಿ 4.600 ಲೀಟರು ಗರಿಷ್ಠ ಪ್ರಮಾಣದ ಮದ್ಯವನ್ನು ಹೊಂದಲು ಅಥವಾ ಸಾಗಾಣಿಕೆ ಮಾಡಲು ಯಾವುದೇ ರಹದಾರಿ ಅಥವಾ ಸನ್ನದಿನ ಅವಶ್ಯಕತೆ ಇರುವುದಿಲ್ಲ. ಪೊಲೀಸ್ ಉಪ ನಿರೀಕ್ಷಕರು, ಸುಳ್ಯ ಪೊಲೀಸ್ ಠಾಣೆ, ಸುಳ್ಯ ಇವರು ದಿ:11-9-2007ರಂದು ದಾಖಲಿಸಿದ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಮದ್ಯದ ಒಟ್ಟು ಪ್ರಮಾಣ ಕೇವಲ 1.800 ಲೀಟರು ಕಡಿಮೆ ಪ್ರಮಾಣವಾಗಿದ್ದು, ಒಬ್ಬ ವ್ಯಕ್ತಿಯು ರಹದಾರಿ ಅಥವಾ ಲೈಸನ್ಸು ಇಲ್ಲದೆ ಹೊಂದಬಹುದಾದ ಮದ್ಯದ ಪ್ರಮಾಣಕ್ಕಿಂತ ಕಡಿಮೆ ಪ್ರಮಾಣದಲ್ಲಿ ಮಿತಿಯೊಳಗೆ ಮದ್ಯವನ್ನು ಹೊಂದಿರುವುದರಿಂದ, ಇದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 34ರ ಪ್ರಕಾರ ಆರೋಪಿಯು ಅಪರಾಧವೆಸಗಿರುವುದಿಲ್ಲವಾದ ಕಾರಣ ಕಲಂ 34 ರಡಿ ಅಪರಾಧವಾಗದಿದ್ದು, ಕಲಂ 43(ಎ) ರಡಿ ಮುಟ್ಟುಗೋಲಿಗೆ ಅರ್ಹವಾಗಿರುವುದಿಲ್ಲ ಹಾಗೂ ಫಿರ್ಯಾದುದಾರರು ಪ್ರಕರಣಕ್ಕೆ ಸಂಬಂಧಿಸಿ ವಾಹನವನ್ನು ತಪಾಸಣೆ ಮಾಡುವ ಮೊದಲು ಮಾನ್ಯ ನ್ಯಾಯಾಲಯದಿಂದ ಸರ್ಚ್ ವಾರಂಟ್ ಪಡೆಯಬೇಕಾಗಿದ್ದು ಅಥವಾ ಸರ್ಚ್ ವಾರಂಟ್ ಪಡೆಯಲು ಕಾಲಾವಕಾಶಯಿಲ್ಲದ ಪ್ರಯುಕ್ತ ಸರ್ಚ್ ಮೆಮೊವನ್ನು ತಯಾರಿಸಿರುವುದಿಲ್ಲ ಹಾಗೂ ಮಾನ್ಯ ಸತ್ರ ನ್ಯಾಯಾಲಯ, ದ.ಕ.ಜಿಲ್ಲೆ ಮಂಗಳೂರು ಇವರ ಕ್ರಿಮಿನಲ್ 63/2003 ದಿ:ಸಾಂಕ19-1-2004 ಮತ್ತು ಮಾನ್ಯ ಉಚ್ಚ ನ್ಯಾಯಾಲಯ, ಕರ್ನಾಟಕ ಬೆಂಗಳೂರು ಇವರ ಕ್ರಿಮಿನಲ್ ರಿವಿಷನ್ ಪಿಟಿಷನ್ ಸಂ: 802/2004 ದಿ: 1-8-2007 ರ ಆದೇಶದಲ್ಲಿ ಅಬಕಾರಿ ಕಾಯಿದೆಯನ್ವಯ ವಾಹನವನ್ನು ಶೋಧನೆ ಮಾಡುವ ಮೊದಲು ಮಾನ್ಯ ನ್ಯಾಯಾಲಯದಿಂದ ಸರ್ಚ್ ವಾರಂಟ್ ಪಡೆಯಬೇಕು ಅಥವಾ ಸರ್ಚ್ ವಾರಂಟ್ ಪಡೆಯಲು ಕಾಲಾವಕಾಶ ಇಲ್ಲದ ಕಾರಣ ಸರ್ಚ್ ಮೆಮೊವನ್ನು ತಯಾರಿಸಿ ಮಹಜರಿನಲ್ಲಿ ನಮೂದಿಸಿರಬೇಕು ಎಂಬ ಕಾರಣಕ್ಕೆ ಅಂದಿನ ಪ್ರಾಧಿಕಾರವು ನೀಡಿದ ಆದೇಶವನ್ನು ತಳ್ಳಿ ಹಾಕಿ ವಾಹನವನ್ನು ಅರ್ಜಿದಾರರ ವಶಕ್ಕೆ ಬಿಡುಗಡೆಗೊಳಿಸಬೇಕೆಂದು ತೀರ್ಪು ನೀಡಿರುತ್ತಾರೆ. ಈ ಪ್ರಕರಣದಲ್ಲಿ ಫಿರ್ಯಾದುದಾರರು ದಿ: 11-09-2007 ರಂದು ಮಧ್ಯಾಹ್ನ 3-00 ಗಂಟೆಗೆ ವಾಹನ ಸಂಖ್ಯೆ: ಕೆಎ-18-ಎಂ-3565 ನ್ನು ಶೋಧಿಸಿದ ಸಂದರ್ಭದಲ್ಲಿ ಶೋಧನಾ ವಾರಂಟ್ ಪಡೆಯದಿದ್ದು ರೆಕಾರ್ಡ್ಸ್ ಆಫ್ ರೀಜನ್ಸ್ ಮೆಮೊವನ್ನು ಸಹಾ ನ್ಯಾಯಾಲಯಕ್ಕೆ ಒಪ್ಪಿಸದಿರುವ ಕಾರಣ ಮೇಲಿನ ಘನ ಉಚ್ಚ ನ್ಯಾಯಾಲಯದ ತೀರ್ಪನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿರುತ್ತದೆ. ಆದುದರಿಂದ ಇದು ಘೋರ ಮೊಕದ್ದಮೆ ಆಗದೇ ಇರುವುದರಿಂದ ಅರ್ಜಿದಾರರಿಗೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಿದ ಜೀಪನ್ನು ಖಾಯಂ ರೀತಿಯಲ್ಲಿ ಬಿಡುಗಡೆಗೊಳಿಸುವುದು ಸೂಕ್ತವೆಂದು ಕಂಡುಬಂದ ಕಾರಣ ಈ ಕೆಳಕಂಡ ಆದೇಶ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,ದ.ಕ.ಜಿಲ್ಲೆ ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43ಎ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43ಬಿ ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿದ ನಂತರ ಪೊಲೀಸ್ ಉಪ ನಿರೀಕ್ಷಕರು, ಸುಳ್ಯ ಪೊಲೀಸ್ ಠಾಣಾ, ಸುಳ್ಯ ಇವರ ಮೊಕದ್ದಮೆ ನಂಬ್ರ :157/2007, ದಿನಾಂಕ: 11-9-2007 ರಲ್ಲಿ ಆರೋಪಿಯಾದ ಶ್ರೀ ಪುರುಷೋತ್ತಮ, ಬಿನ್ ಈಶ್ವರ ನಾಯ್ಕ್, ಮರ್ಕಂಜ, ಕೊಚ್ಚಿಕಾನ, ಮರ್ಕಂಜ ಗ್ರಾಮ, ಸುಳ್ಯ ಇವರ ವಿರುದ್ಧ ದಾಖಲಿಸಿರುವ ಮೊಕದ್ದಮೆ ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 34 ರಂತೆ ಪರಿಗಣಿಸಲು ಅರ್ಹವಾಗದಿರುವ ಕಾರಣ ಕರ್ನಾಟಕ ಅಬಕಾರಿ ಕಾಯಿದೆ 1965 ಕಲಂ 43(ಎ) ರಡಿ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿಲ್ಲದ ಕಾರಣ ಜಪ್ತು ಪಡಿಸಿಕೊಂಡಿರುವ ಜೀಪು ಸಂ:KA-18-M-3565ನ್ನು ನಿಯಮ 43ಎ (2)ರನ್ವಯ ಈ ಪ್ರಾಧಿಕಾರದ ದಿ:13-2-2008 ರ ಆದೇಶದಂತೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆ ಮಾಡಿದ ಆದೇಶವನ್ನು ಖಾಯಂಗೊಳಿಸಿ ಸದ್ರಿ ವಾಹನವನ್ನು ಆರ್.ಸಿ.ಮಾಲೀಕರಾದ ಶ್ರೀ ಕೆ. ಪುರುಷೋತ್ತಮ, ಬಿನ್ ಈಶ್ವರ ನಾಯ್ಕ್ ಕೋಡಿಕಾನ ಹೌಸ್, ಮರ್ಕಂಜ, ಸುಳ್ಯ ತಾಲೂಕು ಇವರ ವಶಕ್ಕೆ ಶಾಶ್ವತವಾಗಿ ಬಿಡುಗಡೆ ಮಾಡಲು ಆದೇಶಿಸಿದೆ. ಹಾಗೂ ಈ ಪ್ರಾಧಿಕಾರಕ್ಕೆ ನೀಡಲಾಗಿರುವ ಬ್ಯಾಂಕ್ ಭದ್ರತೆ ರೂ.55,000/-ವನ್ನು ಯಾವುದೇ ಬೇಡಿಕೆಯಿಲ್ಲವೆಂದು ರದ್ದುಗೊಳಿಸಿ ಹಿಂತಿರುಗಿಸಲು ಆದೇಶಿಸಿದೆ.

ತಕ್ಶೀರಿನಲ್ಲಿ ಜಪ್ತುಪಡಿಸಿಕೊಳ್ಳಲಾಗಿರುವ 180 ಎಂ.ಎಲ್. ನ 9 ಬಾಟಲ್ ಸೂಪರ್ ಜಾಕ್ ವಿಸ್ಕಿ ಜಪ್ತುಪಡಿಸಿ ಸುಮಾರು ಒಂದು ವರ್ಷಕ್ಕಿಂತಲೂ ಮೇಲ್ಪಟ್ಟು ಇಲಾಖಾ ಸ್ವಾಧೀನದಲ್ಲಿದ್ದು, ರಾಸಾಯನಿಕ ವಿಶ್ಲೇಷಣಾ ವರದಿ ಪ್ರಕಾರ ಮಾನವನ ಸೇವನೆಗೆ ಯೋಗ್ಯವಲ್ಲವೆಂದು ದೃಢಪಟ್ಟಿರುವುದರಿಂದ, ಸದರಿ ಮದ್ಯವನ್ನು ಅಬಕಾರಿ ನಿರೀಕ್ಷಕರು, ಸುಳ್ಯ ವಲಯ, ಸುಳ್ಯ ಇವರ ಸಮಕ್ಷಮ ಮಹಜರು ಜರುಗಿಸಿ ನಾಶಪಡಿಸಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 20-04-2008 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಪಿ.ಆರ್.440

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ. ಸಾಗರ ಇವರ ನ್ಯಾಯಾಲಯ

ಬಿ3:ಅಮೊ:ವಾಹನ: 24/08-09, ದಿನಾಂಕ:7ನೇ ಫೆಬ್ರವರಿ,2009

ಉಪಸ್ಥಿತರು : ಶ್ರೀ ಮಹೇಶ್ ಬಿ. ಶಿರೂರ್, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

ಪಿರ್ಯಾಧಿದಾರರು : ವಲಯ ಅರಣ್ಯಾಧಿಕಾರಿ, ಶಿಕಾರಿಪುರ ವಲಯ, ಶಿಕಾರಿಪುರ.
(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)

ಆರೋಪಿಗಳು : (1) ಕುಮಾರ್ (2) ಸುರೇಶ್

ಭಾದ್ಯತೆದಾರರು : ಯಾರೂ ಹಕ್ಕು ಬಾಧ್ಯತೆ ಅರ್ಜಿ ಸಲ್ಲಿಸಿರುವುದಿಲ್ಲ.

ಪ್ರಸ್ತಾವನೆ:

ದಿನಾಂಕ:13-09-2008ರಂದು ವಲಯ ಅರಣ್ಯಾಧಿಕಾರಿ, ಶಿಕಾರಿಪುರ ಮತ್ತು ಅಂಬ್ಲಿಗೊಳ ವಲಯ ಇವರಿಗೆ ಬಂದ ಖಚಿತ ವರ್ತಮಾನದ ಮೇರೆಗೆ ಶಿಕಾರಿಪುರ ತಾ॥ ಅಂಜನಾಪುರ ಹೋಬಳಿ ಚುರ್ಚಿಗುಂಡಿಯಿಂದ ತರಲಘಟ್ಟಕ್ಕೆ ಹೋಗುವ ರಸ್ತೆಯ ಜೋಗಿಹಳ್ಳಿ ಸಮೀಪ ಇಬ್ಬರು ವಲಯ ಅರಣ್ಯಾಧಿಕಾರಿಗಳು ಮತ್ತು ಸಿಬ್ಬಂದಿಯವರು ಇಲಾಖಾ ವಾಹನ ಕೆಎ-15-ಜಿ-250ರಲ್ಲಿ ಕಾಯುತ್ತಿರುವಾಗ ಸುಮಾರು ಬೆಳಿಗ್ಗೆ 10 ಗಂಟೆ ಸಮಯದಲ್ಲಿ ಒಂದು ವಾಹನ ಓಮಿನಿ ಬರುತ್ತಿರುವುದನ್ನು ನಿಲ್ಲಿಸಲು ಸೂಚಿಸಿದಾಗ ಅದು ನಿಲ್ಲಿಸದೇ ವೇಗವಾಗಿ ಮುಂದೆ ಹೋದಾಗ ಇಲಾಖಾ ವಾಹನದಿಂದ ಬೆನ್ನಟ್ಟಿದಾಗ ತರಲಘಟ್ಟದ ಸಮೀಪ ನಿಲ್ಲಿಸಿ ಅದರಲ್ಲಿದ್ದ ಜನರು ಓಡಿ ಪರಾರಿಯಾದರು. ಅವರನ್ನು ಶ್ರೀ ಎಸ್. ರಾಮಪ್ಪ, ವನಪಾಲಕರು, ಕಲ್ಮನೆ ಶಾಖೆ ಇವರು 1ನೇಯ ಕುಮಾರ್ ಬಿನ್ ಈಶ್ವರಪ್ಪ, ಅಂದಾಜು ವರ್ಷ 48. ಕಲ್ಮನೆ ವಾಸಿ. 2ನೇಯ ಸುರೇಶ್ ಬಿನ್ ಪಿ.ಕೆ. ಬಸವರಾಜಪ್ಪ, ಅಂದಾಜು ವರ್ಷ, 28, ಕಲ್ಮನೆ ವಾಸಿ ಎಂದು ಗುರುತಿಸಿರುತ್ತಾರೆ. ನಂತರ ವಾಹನದಲ್ಲಿದ್ದ ಸಾಗುವಾನಿ ಸೈಜ್ ಅಳತೆ ಮಾಡಿ 80=0.506ಎಂ3 ಇದ್ದು, ಕ್ರಮ ಸಂಖ್ಯೆ ಕೊಟ್ಟು ಈ ಸೈಜುಗಳನ್ನು ನಾಡ ಗರಗಸದಿಂದ ಕೊಯ್ದು ಮಾಡಿದ್ದು, ಈ ಸೈಜುಗಳ ತುದಿ, ಬುಡದಲ್ಲಿ ಇಲಾಖಾ ಯಾವುದೇ ಛಾಪಾದ ಗುರುತಿರಲಿಲ್ಲ. ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ ಓಮಿನಿಯು ನೀಲಿ ಬಣ್ಣದ್ದಾಗಿದ್ದು, ನಂ: ಕೆಎ-14-ಎಂ-1598, ಛಾಸ್ಸಿಸ್ ನಂ: ST-91-IN-985106 ಇದ್ದು, ಈ ಸೈಜುಗಳಿಗೆ KNFD-G-83-EE ಛಾಪಾ ಹೊಡೆದು ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತಿ ವರದಿಯೊಂದಿಗೆ ವಾಹನ. ಅರಣ್ಯ ಉತ್ಪನ್ನವನ್ನು ಇಲಾಖಾ ಪರ ವಶಪಡಿಸಿಕೊಂಡು ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 24, 62, 71(ಎ) ಮತ್ತು ಕರ್ನಾಟಕ ಅರಣ್ಯ ಕಾನೂನು 1969 ಉಪನಿಯಮ 144, 165ರ ಪ್ರಕಾರ ಶಿಕಾರಿಪುರ ವಲಯದ ಅ.ಮೊ.ಸಂ. 38/08-09ನ್ನು ದಾಖಲಿಸಿ, ವಾಹನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ನಂತರ ಈ ವಾಹನವನ್ನು ಸುರಕ್ಷತೆಗಾಗಿಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ದಿಗೆ ಕೊಡಲು ದಿ: 07-10-2008ರಂದು ಆದೇಶವಾಗಿರುತ್ತದೆ.

ಈ ವಾಹನದ ಬಿ ಪ್ರತಿಯನ್ನು ಈ ನ್ಯಾಯಾಲಯಕ್ಕೆ ಒದಗಿಸಲು ಪ್ರಾದೇಶಿಕ ಸಾರಿಗೆ ಅಧಿಕಾರಿ, ಶಿವಮೊಗ್ಗ ಇವರಿಗೆ ಪತ್ರ ಸಂಖ್ಯೆ: ಬಿ3:ಅಮೊ:ವಾಹನ-24/08-09 ದಿ:22-10-2008ರಲ್ಲಿ ಪತ್ರ ಬರೆದು ಕೋರಲಾಗಿತ್ತು. ಅದರಂತೆ ಶಿವಮೊಗ್ಗದ ಪ್ರಾದೇಶಿಕ ಸಾರಿಗೆ ಅಧಿಕಾರಿ ಅವರ ಪತ್ರ ಸಂಖ್ಯೆ:ಪ್ರಾಸಾಅ:ಶಿ.ಕೆಎ-14-ಎಂ-1598/08-09 ದಿ:24-10-2008ರ ಪತ್ರವನ್ನು ದಿನಾಂಕ:04-11-08ರಂದು ಈ ನ್ಯಾಯಾಲಯದಲ್ಲಿ ಸ್ವೀಕರಿಸಲಾಗಿದೆ. ಬಿ ಪ್ರತಿಯಲ್ಲಿ ನಮೂದಿಸಿದ ಆರ್.ಸಿ. ಮಾಲೀಕರಾದ ಶ್ರೀ ಆರ್. ದಿನೇಶ್ ಬಿನ್ ಎಂ. ರಾಮಚಂದ್ರಪ್ಪ, ಲಕ್ಷ್ಮಿ ನಿವಾಸ, 4ನೇ ತಿರುವು, ವೆಂಕಟೇಶ ನಗರ, ಶಿವಮೊಗ್ಗ ಇವರಿಗೆ ದಿ: 29-11-2008 ರಂದು 30 ದಿನಗಳ ಕಾಲಾವಕಾಶ ನೀಡಿ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 71(ಬಿ) (1)ರ ಪ್ರಕಾರ ನೋಟೀಸನ್ನು ನೊಂದಣಿ ಅಂಚೆ ಮೂಲಕ ಜಾರಿಮಾಡಿದ ಪತ್ರವನ್ನು ಶ್ರೀ ಜಿ.ಎಂ. ನಾಗರಾಜ್ ರವರು ಸ್ವೀಕರಿಸಿದ್ದು, ಅದಕ್ಕೆ ಶ್ರೀ ಡಿ. ದಿನೇಶ್ ಬದಲು ಅವರ ಮಾವನಾದ ಶ್ರೀ ಜಿ.ಎಂ. ನಾಗರಾಜ್, ಎಂಜಿಬಿಎಸ್., ಡಿ.ಎ. ಶ್ರೀ ಹರಿ ಕ್ಲಿನಿಕ್ ವಿಜಯನಗರ 2ನೇ ಹಂತ, ಬೇಲೂರು ರಸ್ತೆ, ಹಾಸನ-573201 ರವರು ಈ ನ್ಯಾಯಾಲಯಕ್ಕೆ ಪತ್ರ ಬರೆದು ಈ ರೀತಿ ಕೋರಿರುತ್ತಾರೆ. "ನನ್ನ ಅಳಿಯನಾದ ಶ್ರೀ ಆರ್. ದಿನೇಶ್ ರವರು ವಾಹನ ಮಾರುತಿ ವ್ಯಾನ್ ಕೆಎ-14-ಎಂ-1598ನ್ನು ಶ್ರೀ ಎಸ್. ಕುಮಾರ್ ಬಿನ್ ಫಿಲಿಫ್ಸ್ ಡಿಸೋಜ, 2ನೇ ಕ್ರಾಸ್, ವಿದ್ಯಾನಗರ, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ ಇವರಿಗೆ ಆಗಸ್ಟ್ 2008ರ ಮೊದಲ ವಾರದಲ್ಲಿ ಮಾರಾಟ ಮಾಡಿರುತ್ತಾರೆಂದು. ಈ ವಿಚಾರವನ್ನು ಆರ್.ಟಿ.ಓ. ಶಿವಮೊಗ್ಗ ಇವರಿಗೆ ಲಿಖಿತವಾಗಿ 12-08-08ರಂದು ನೊಂದಣಿ ಅಂಚೆ ಮೂಲಕ ತಿಳಿಸಿರುತ್ತಾರೆಂದು. ಈ ಪತ್ರ ಸ್ವೀಕೃತಿ ದಿ:14-08-2008ರಂದು ನಮಗೆ ಬಂದಿರುತ್ತದೆಂದು, ಈ ವಾಹನಕ್ಕೂ, ನಮಗೂ ಮತ್ತು ನನ್ನ ಅಳಿಯನಿಗೂ ಯಾವುದೇ ಸಂಬಂಧವಿರುವುದಿಲ್ಲವೆಂದು. ಈ ಕೃತ್ಯಕ್ಕೆ ಕುಮಾರ್ ರವರೇ ಜವಾಬ್ದಾರರೆಂದು ಮತ್ತು ತಾವು ಕಾನೂನು ಪ್ರಕಾರ ವಾಹನವನ್ನು ಮುಟ್ಟುಗೋಲು ಹಾಕಿಕೊಳ್ಳಲು ನಮ್ಮದು ಯಾವ ತಕರಾರು ಇಲ್ಲವೆಂದು ಮತ್ತು ಶ್ರೀ ಆರ್. ದಿನೇಶ್ ರವರು ಭಾರತದಲ್ಲಿಲ್ಲವೆಂದು, ಅವರ ಪರ ನಾನು ತಮಗೆ ಲಿಖಿತವಾಗಿ ನಿಮ್ಮ ಪತ್ರಕ್ಕೆ ಉತ್ತರಿಸುತ್ತಿದ್ದೇನೆ" ಎಂದು ತಿಳಿಸಿರುತ್ತಾರೆ.

ವಲಯ ಅರಣ್ಯಾಧಿಕಾರಿ, ಶಿಕಾರಿಪುರ ಇವರು ದಿನಾಂಕ:14–11–2008ರಂದು ಈ ನ್ಯಾಯಾಲಯಕ್ಕೆ ವಿಚಾರಣಾ ವರದಿ ಸಲ್ಲಿಸಿ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ. ಅದರಂತೆ ಇಬ್ಬರು ಅಸಾಮಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಲು ಈ ನ್ಯಾಯಾಲಯದಿಂದ ಫಾರಂ 24 ಸಂಖ್ಯೆ: 2914ನ್ನು ದಿನಾಂಕ: 25–11–2008ರಂದು ನೀಡಿ ಅನುಮತಿ ನೀಡಲಾಗಿರುತ್ತದೆ.

ಸಹಾಯಕ ಸರ್ಕಾರಿ ಅಭಿಯೋಜಕರು ದಿನಾಂಕ:31–01–2009 ರಂದು ವಾದ ಮಂಡಿಸಿ ಈ ವಾಹನದಲ್ಲಿ ಸಾಗುವಾನಿ ಸೈಜುಗಳನ್ನು ಸಾಗಿಸಿದ ಬಗ್ಗೆ ವಲಯ ಅರಣ್ಯಾಧಿಕಾರಿ, ಶಿಕಾರಿಪುರ ವಲಯ, ಶಿಕಾರಿಪುರ ಇವರು ಮಹಜರ್ ಪ್ರತಿ ಮತ್ತು ಪ್ರಥಮ ವರ್ತಮಾನ ವರದಿ, ಜಪ್ತಿ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುವುದರಿಂದ ಈ ವಾಹನದಲ್ಲಿ ಸಾಗುವಾನಿ ಸೈಜುಗಳನ್ನು ಅಕ್ರಮವಾಗಿ ಸಾಗಿಸಿರುವುದು ಸಾಬೀತಾಗಿರುತ್ತದೆ. ಆರ್.ಸಿ. ಮಾಲೀಕರಿಗೆ ನೋಟಿಸ್ ನೀಡಿದ್ದರೂ ಸಹ ವಾಹನ ಮಾಲೀಕರಾಗಲೀ ಅಥವಾ ಅವರ ಪ್ರತಿನಿಧಿಗಳಾಗಲೀ ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುವುದಿಲ್ಲ. ಆದ್ದರಿಂದ ವಾಹನ ಮತ್ತು ಸಾಗುವಾನಿ ಸೈಜುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಅಭಿಯೋಜಕರ ವಾದವನ್ನು ಕೇಳಿ ಕರ್ನಾಟಕ ಅರಣ್ಯ ಕಾಯ್ದೆ 1963 ಉಪನಿಯಮ 71(ಬಿ)(1)ರ ಪ್ರಕಾರ ಆರ್.ಸಿ. ಮಾಲೀಕರಿಗೆ ನೋಟಿಸ್ ಜಾರಿ ಮಾಡಿದ್ದು ಹಾಗೂ ಈ ವಾಹನದ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿರುತ್ತದೆ. ಈ ಪ್ರಕಟಣೆಯು ರಾಜ್ಯ ಗೆಜೆಟ್‌ನಲ್ಲಿ ಮತ್ತು ದಿನಪತ್ರಿಕೆಯಲ್ಲಿ ಪ್ರಕಟಗೊಂಡು 30 ದಿನಗಳಾದರೂ ಯಾರೂ ಹಕ್ಕು ಬಾಧ್ಯತೆಯ ಅರ್ಜಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದುದ್ದರಿಂದ ಈ ಪ್ರಕರಣದ ವಿದ್ಯಾಮಾನಗಳನ್ನು ಅರಿತು ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಶ್ರೀ ಮಹೇಶ್ ಬಿ. ಶಿರೂರ್, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು, ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ)ಪ್ರಕಾರ ಹಾಗೂ ಈವರೆಗಿನ ತಿದ್ದುಪಡಿ ಅನುಸಾರ ವಲಯ ಅರಣ್ಯಾಧಿಕಾರಿ, ಶಿಕಾರಿಪುರ ವಲಯ, ಶಿಕಾರಿಪುರ ಇವರು ಜಪ್ತು ಮಾಡಿದ ವಾಹನ ಓಮ್ನಿ ಕೆಎ–14–ಎಂ–1598ನ್ನು (ಛಾಸ್ಸಿಸ್ ನಂ: ST-91-IN-98506, ಇಂಜಿನ್ ನಂಬರ್: ಕಾಣಿಸುತ್ತಿಲ್ಲ) ಮತ್ತು ಈ ವಾಹನದಲ್ಲಿದ್ದ ಸಾಗುವಾನಿ ಸೈಜ್ 80=0.506ಎಂ3 ಕರ್ನಾಟಕ ಸರ್ಕಾರದ ಸಂಪತ್ತು ಆಗಿರುವುದರಿಂದ ಅಂತಿಮವಾಗಿ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಸರಿಪಡಿಸಿ ದಿ: 07–02–2009 ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30(ಮೂವತ್ತು) ದಿನಗಳ ಒಳಗಾಗಿ. ಯಾರು ಈ ನ್ಯಾಯಾಲಯಕ್ಕೆ ಹಕ್ಕುಭಾಧ್ಯತೆ ಅರ್ಜಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ
ಪಿ.ಆರ್.160 ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಗರ ವಿಭಾಗ ಸಾಗರ ಇವರ ನ್ಯಾಯಾಲಯ
ಬಿ3:ಅಮೊ:ವಾಹನ: 26/08–09, ದಿನಾಂಕ:7ನೇ ಫೆಬ್ರವರಿ, 2009

ಉಪಸ್ಥಿತರು :	ಶ್ರೀ ಮಹೇಶ್ ಬಿ. ಶಿರೂರ್, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.
ಫಿರ್ಯಾಧಿದಾರರು :	ವಲಯ ಅರಣ್ಯಾಧಿಕಾರಿ, ಸಾಗರ ವಲಯ, ಸಾಗರ. (ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)
ಆರೋಪಿ :	ಅರುಣ
ಭಾದ್ಯತೆದಾರರು :	ಯಾರೂ ಹಕ್ಕು ಬಾಧ್ಯತೆ ಅರ್ಜಿ ಸಲ್ಲಿಸಿರುವುದಿಲ್ಲ.

ಪ್ರಸ್ತಾವನೆ:

ದಿನಾಂಕ:07–10–2008ರಂದು ಸಾಗರ ವಲಯದ ಕಸಬಾ ಶಾಖೆ ಮತ್ತು ತ್ಯಾಗರ್ತಿ ಶಾಖೆಯ ವನಪಾಲಕರು ಮತ್ತು ಸಿಬ್ಬಂದಿಯವರು ಹಾಗೂ ರಾತ್ರಿ ಗಸ್ತಿನ ಸಿಬ್ಬಂದಿಗಳು ಸಾಗರ ತಾಲ್ಲೂಕು ಕಸಬಾ ಹೋಬಳಿ ಪಡವಗೋಡು ಗ್ರಾಮದ ಹಿರಳೆ ಮರೂರಿನಿಂದ ಜಂಬಾನಿಗೆ ಹೋಗುವ ಜಲ್ಲಿ ರಸ್ತೆಯಲ್ಲಿ ಇಲಾಖಾ ವಾಹನದಲ್ಲಿ ಗಸ್ತು ಮಾಡಿಕೊಂಡು ಹೋಗುತ್ತಿರಲು

ಎದುರಿನಿಂದ ಒಂದು ಮಾರುತಿ ಓಮಿನಿಯು ಬರುತ್ತಿರುವುದನ್ನು ಕಂಡು ಅನುಮಾನಗೊಂಡು ನಿಲ್ಲಿಸಲು ಕೈಮಾಡಿ ಸೂಚಿಸಿದಾಗ ವಾಹನವು ವೇಗವಾಗಿ ಮುಂದೆ ಚಲಿಸಿದಾಗ ಸಿಬ್ಬಂದಿಗಳು ಇಲಾಖಾ ವಾಹನದಿಂದ ಬೆನ್ನಟ್ಟಿ ಪಡವಗೋಡು ಗ್ರಾಮದ ಕೆರೆಯ ಹತ್ತಿರ ಗಾಳಿಯಲ್ಲಿ ಒಂದು ಸುತ್ತು ಗುಂಡು ಹಾರಿಸಿದಾಗ, ಸದರಿ ಓಮಿನಿಯು ರಸ್ತೆ ಪಕ್ಕ ತೋಟದ ಬೇಲಿಗೆ ಡಿಕ್ಕಿ ಹೊಡೆದು ನಿಂತಿತು. 2-3 ಜನ ಓಡಿ ಪರಾರಿಯಾದರು. ಓಡಿಹೋದವರಲ್ಲಿ ಒಬ್ಬನು ಅರುಣ್ ಬಿನ್ ನಾರಾಯಣಪ್ಪ, ಅಂದಾಜು ವರ್ಷ 25, ಶಿರವಂತೆ ಗ್ರಾಮ, ಎಂಡಗೆರೆ ವಾಸಿ ಎಂದು ಗುರುತಿಸಲಾಯಿತು. ಉಳಿದವರು ಯಾರೆಂದು ತಿಳಿದುಬಂದಿಲ್ಲ. ನಂತರ ಓಮಿನಿ ಪರಿಶೀಲಿಸಲಾಗಿ ಮಾರುತಿ ಓಮ್ನಿ ಜಿಎ-02- ಸಿ-7462 (ಛಾಸ್ಸಿಸ್ ನಂ: ST-9-N-947337, ಇಂಜಿನ್ ನಂಬರ್: ಕಾಣಿಸುತ್ತಿಲ್ಲ) ಆಗಿದ್ದು, ಅದರ ಒಳಗಡೆ ಇದ್ದ ಹೊನ್ನೆ ನಾಟಾ ಮತ್ತು ಸೈಜ್ ಅಳತೆ ಮಾಡಿದಾಗ ಒಟ್ಟು 13=0.514ಎಂ3 ಇದ್ದು; ಅವುಗಳಿಗೆ ನಂಬರ್ ಕೊಟ್ಟು ಈ ನಾಟಾ ಸೈಜುಗಳಿಗೆ ಇಲಾಖೆಯ ಯಾವುದೇ ಛಾಪಾದ ಗುರುತು ಕಂಡುಬರಲಿಲ್ಲ. ಇದು ಅಕ್ರಮ ಎಂದು ಪರಿಗಣಿಸಿ ಈ ನಾಟಾಗಳಿಗೆ KNFD G-5-EE ಎಂದು ಛಾಪಾ ಹೊಡೆದು, ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತು ವರದಿಯೊಂದಿಗೆ ಇಲಾಖಾ ಪರ ವಶಪಡಿಸಿಕೊಂಡು ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 25, 62, 71(ಎ) ಮತ್ತು ಕರ್ನಾಟಕ ಅರಣ್ಯ ಕಾನೂನು 1969 ಉಪನಿಯಮ 144, 165ರ ಪ್ರಕಾರ ಸಾಗರ ವಲಯದ ಅ.ಮೊ.ಸಂ. 69/08-09ನ್ನು ದಾಖಲಿಸಿ, ವಾಹನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ನಂತರ ಈ ವಾಹನವನ್ನು ಸುರಕ್ಷತೆಗಾಗಿಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ಧಿಗೆ ಕೊಡಲು ದಿ: 10-10-2008ರಂದು ಆದೇಶವಾಗಿರುತ್ತದೆ.

ಈ ವಾಹನದ ಬಿ ಪ್ರತಿಯನ್ನು ಈ ನ್ಯಾಯಾಲಯಕ್ಕೆ ಒದಗಿಸಲು ದಿ ಡೈರೆಕ್ಟರ್ ಆಫ್ ಟ್ರಾನ್ಸ್‌ಪೋರ್ಟ್ ಕಮಿಷನರ್, ಪಣಜಿ, ಗೋವಾ ಇವರಿಗೆ ಈ ನ್ಯಾಯಾಲಯದ ಪತ್ರ ಸಂಖ್ಯೆ : B3:FOC:VEH-25/08-09 ದಿ: 16-10-2008ರಲ್ಲಿ ಪತ್ರ ಬರೆದು ಕೋರಲಾಗಿತ್ತು. ಅದಕ್ಕೆ ದಿ ಡೈರೆಕ್ಟರ್ ಆಫ್ ಟ್ರಾನ್ಸ್‌ಪೋರ್ಟ್ ಕಮಿಷನರ್, ಪಣಜಿ, ಗೋವಾ ಇವರು ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಟ್ರಾನ್ಸ್‌ಪೋರ್ಟ್ (ಸೌತ್), ವಾಸ್ಕೋ, ಗೋವಾ ಇವರಿಗೆ ಪತ್ರ ಬರೆದು ಬಿ ಪ್ರತಿಯನ್ನು ಈ ನ್ಯಾಯಾಲಯಕ್ಕೆ ನೇರವಾಗಿ ಸಲ್ಲಿಸಲು ದಿ: 24-10-2008ರ ಪತ್ರದಲ್ಲಿ ತಿಳಿಸಿದಂತೆ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಟ್ರಾನ್ಸ್‌ಪೋರ್ಟ್ (ಸೌತ್), ವಾಸ್ಕೋ, ಗೋವಾ ರವರು ಈ ವಾಹನದ ಬಿ ಪ್ರತಿಯನ್ನು ದಿ: 11-11-2008ರಂದು ಈ ನ್ಯಾಯಾಲಯಕ್ಕೆ ಒದಗಿಸಿರುತ್ತಾರೆ. ಬಿ ಪ್ರತಿಯಲ್ಲಿ ನಮೂದಿಸಿದ ಆರ್.ಸಿ. ಮಾಲೀಕರಾದ ಶ್ರೀ ಶ್ಯಾಮಸುಂದರ್ ವೈ. ಮಹೇಂಕರ್, ಬಿನ್ ಮಹೇಂಕರ್, ಮನೆ ನಂ: 22/1, ಕಿರ್ಟಾಲಿಮ್, ಬೈನಾ, ವಾಸ್ಕೋ, ಗೋವಾ ಇವರಿಗೆ ಈ ನ್ಯಾಯಾಲಯದಿಂದ ದಿ: 01-12-2008ರಂದು 30 ದಿನಗಳ ಕಾಲಾವಕಾಶ ನೀಡಿ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 71(ಬಿ) (1)ರ ಪ್ರಕಾರ ನೋಟಿಸನ್ನು ನೊಂದಣಿ ಅಂಚೆ ಮೂಲಕ ಜಾರಿಮಾಡಿದೆ. ಅದಕ್ಕೆ ಅವರು ಈ ವಾಹನವನ್ನು ದಿ: 28-12-2006ರಂದು ಚೌಗುಲೆ ಇಂಡಸ್ಟ್ರೀಸ್ ಲಿ., ಡಿ.ಬಿ. ಭಂಡಾರ್ಕರ್ ಮಾರ್ಗ, ಪಣಜಿ, ಗೋವಾ ಇವರಿಗೆ ರೂ. 19,000/-ಕ್ಕೆ ಮಾರಾಟ ಮಾಡಿದ್ದೀನೆಂದು, ಮತ್ತು ಈ ವಾಹನದ ಮೂಲ ದಾಖಲೆಗಳನ್ನು ಸಹ ಕಂಪನಿಗೆ ಕೊಟ್ಟಿದ್ದೇನೆಂದು ದಿ: 28-12-2006ರ ನಂತರ ಈ ವಾಹನವನ್ನು ಹೊಂದಿಲ್ಲವೆಂದು, ಚೌಗುಲೆ ಇಂಡಸ್ಟ್ರೀಸ್ ಲಿ.ನ್ನು ಕೇಳಿ ಕ್ರಮ ಕೈಗೊಳ್ಳಿ ಎಂದು ತಿಳಿಸಿರುತ್ತಾರೆ.

ವಲಯ ಅರಣ್ಯಾಧಿಕಾರಿ, ಸಾಗರ ಇವರು ಈ ಪ್ರಕರಣದ ವಿಚಾರಣಾ ವರದಿ ಸಲ್ಲಿಸಿ ತಲೆಮರೆಸಿಕೊಂಡ ಆರೋಪಿಗಳ ವಿರುದ್ದ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಲು ಅನುಮತಿ ಕೋರಿದಂತೆ ಫಾರಂ ನಂ: 24ರ ಕ್ರ:3157ನ್ನು ದಿ:19-01-2009ರಂದು ನೀಡಿ ಈ ನ್ಯಾಯಾಲಯದಿಂದ ಅನುಮತಿ ನೀಡಿದೆ.

ಸಹಾಯಕ ಸರ್ಕಾರಿ ಅಭಿಯೋಜಕರು ದಿ: 31-01-2009 ರಂದು ವಾದ ಮಂಡಿಸಿ ಈ ವಾಹನದಲ್ಲಿ ಹೊನ್ನೆ ನಾಟಾ ಮತ್ತು ಸೈಜುಗಳನ್ನು ಸಾಗಿಸಿದ ಬಗ್ಗೆ ವಲಯ ಅರಣ್ಯಾಧಿಕಾರಿ, ಸಾಗರ ವಲಯ, ಸಾಗರ ಇವರು ಮಹಜರ್ ಪ್ರತಿ ಮತ್ತು ಪ್ರಥಮ ವರ್ತಮಾನ ವರದಿ, ಜಪ್ತಿ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುವುದರಿಂದ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಅಕ್ರಮವಾಗಿ ಸಾಗಿಸಿರುವುದು ಸಾಬೀತಾಗಿರುತ್ತದೆ. ಆರ್.ಸಿ. ಮಾಲೀಕರಿಗೆ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 71(ಬಿ) (1) ಪ್ರಕಾರ ನೋಟಿಸ್ ಜಾರಿಮಾಡಲಾಗಿದೆ. ಆದ್ದರಿಂದ ಅರಣ್ಯ ಉತ್ಪನ್ನಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಅಭಿಯೋಜಕರ ವಾದವನ್ನು ಕೇಳಿ ಕರ್ನಾಟಕ ಅರಣ್ಯ ಕಾಯ್ದೆ 1963 ಉಪನಿಯಮ 71(ಬಿ)(1)ರ ಪ್ರಕಾರ ಆರ್.ಸಿ. ಮಾಲೀಕರಿಗೆ ನೋಟಿಸ್ ಜಾರಿ ಮಾಡಿ 30 ದಿನಗಳು ಕಳೆದರೂ ವಾಹನ ಮಾಲೀಕರು ಹಕ್ಕು ಬಾಧ್ಯತೆಯ ಅರ್ಜಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದುದರಿಂದ ಈ ಪ್ರಕರಣದ ವಿದ್ಯಮಾನಗಳನ್ನು ಅರಿತು ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಶ್ರೀ ಮಹೇಶ್ ಬಿ. ಶಿರೂರ್, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು, ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ)ಪ್ರಕಾರ ಹಾಗೂ ಈವರೆಗಿನ ತಿದ್ದುಪಡಿ ಅನುಸಾರ ವಲಯ ಅರಣ್ಯಾಧಿಕಾರಿ, ಸಾಗರ ವಲಯ, ಸಾಗರ ಇವರು ಜಪ್ತು ಮಾಡಿದ ವಾಹನ ಮಾರುತಿ ಓಮ್ನಿ ಜಿಎ-02- ಸಿ-7462 (ಛಾಸ್ಸಿಸ್ ನಂ: 947337, ಇಂಜಿನ್ ನಂಬರ್: 885382) ರಲ್ಲಿ ಕರ್ನಾಟಕ ಸರ್ಕಾರದ ಸಂಪತ್ತು ಆದ ಹೊನ್ನೆ ನಾಟಾ ಮತ್ತು ಸೈಜ್ ಒಟ್ಟು 13=0.514ಎಂ3ನ್ನು ಕಳ್ಳ ಸಾಗಾಣಿಕೆ ಮಾಡಿರುವುದರಿಂದ ವಾಹನ ಮಾರುತಿ ಓಮ್ನಿ ಜಿಎ-02- ಸಿ-7462 (ಛಾಸ್ಸಿಸ್ ನಂ: 947337, ಇಂಜಿನ್ ನಂಬರ್: 885382) ಮತ್ತು ಹೊನ್ನೆ ನಾಟಾ ಮತ್ತು ಸೈಜ್ ಒಟ್ಟು 13=0.514ಎಂ3ನ್ನು ಅಂತಿಮವಾಗಿ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ, ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಸರಿಪಡಿಸಿ ದಿ: 07-02-2009 ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30 (ಮೂವತ್ತು) ದಿನಗಳ ಒಳಗಾಗಿ ಯಾರು ಈ ನ್ಯಾಯಾಲಯಕ್ಕೆ ಹಕ್ಕುಭಾಧ್ಯತೆ ಅರ್ಜಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ
ಪಿ.ಆರ್.161 ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ನ್ಯಾಯಾಲಯ

ಬಿ3:ಅಮೊ:ವಾಹನ: 28/08-09, ದಿನಾಂಕ:7ನೇ ಫೆಬ್ರವರಿ, 2009

ಉಪಸ್ಥಿತರು : ಶ್ರೀ ಮಹೇಶ್ ಬಿ. ಶಿರೂರ್, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

ಫಿರ್ಯಾಧಿದಾರರು : ವಲಯ ಅರಣ್ಯಾಧಿಕಾರಿ, ಹೊಸನಗರ ವಲಯ, ಹೊಸನಗರ. (ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)

ಆರೋಪಿಗಳು : (1) ಸ್ಶೆಯದ್ ಮುಫ್ತಾರ್ (2) ಗದಿಗಪ್ಪ (3) ರಿಯಾಜ್

ಭಾದ್ಯತೆದಾರರು : ಯಾರೂ ಹಕ್ಕು ಬಾಧ್ಯತೆ ಅರ್ಜಿ ಸಲ್ಲಿಸಿರುವುದಿಲ್ಲ.

ಪ್ರಸ್ತಾವನೆ:

ದಿನಾಂಕ:25-10-2008ರಂದು ಹೊಸನಗರ ವಲಯದ ಬಟ್ಟೆಮಲ್ಲಪ್ಪ ಶಾಖೆಯ ಪ್ರಭಾರ ವನಪಾಲಕರು ಮತ್ತು ಸಿಬ್ಬಂದಿಯವರಿಗೆ ಕೆ. ಹುಣಸೆಹಳ್ಳಿ ಗ್ರಾಮದ ಸ.ನಂ: 96ರ ಮೀಸಲು ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಮರ ಕಡಿದು ಸಾಗಿಸುತ್ತಿದ್ದಾರೆಂದು ಬಂದ ಖಚಿತ ವರ್ತಮಾನದ ಮೇರೆಗೆ ಹೊಸನಗರ ತಾ॥ ಕೆರೆಹಳ್ಳಿ ಹೋಬಳಿ ಕೆ. ಹುಣಸೆಹಳ್ಳಿ ಗ್ರಾಮದ ಸ.ನಂ: 96ರ ಮೀಸಲು ಅರಣ್ಯದ ಹೊಸನಗರದಿಂದ ಮರಾಠಿ ಕೇರಿಗೆ ಹೋಗುವ ರಸ್ತೆಯಲ್ಲಿ ಗಸ್ತು ಹೋಗುತ್ತಿರುವಾಗ ಒಂದು ವಾಹನ ಬರುತ್ತಿರುವುದನ್ನು ನಿಲ್ಲಿಸಿದಾಗ ವಾಹನದಲ್ಲಿದ್ದ 3 ಜನ ಅಸಾಮಿಗಳಲ್ಲಿ 2 ಜನ ಕೈಗೆ ಸಿಗದೆ ಪರಾರಿಯಾದರು. ಒಬ್ಬನನ್ನು ಹಿಡಿದರು. ಸಿಕ್ಕಿಬಿದ್ದ ಅಸಾಮಿಯೊಂದಿಗೆ ವಾಹನವನ್ನು ಪರಿಶೀಲಿಸಲಾಗಿ ಕೆಂಪು ಮಾಸು ಬಣ್ಣದ ಕ್ಯಾಂಟರ್ ಆಗಿದ್ದು, ನೊಂದಣಿ ಸಂಖ್ಯೆ:ಕೆಎ-35-2350. ಛಾಸ್ಸಿಸ್ ನಂ:H-96-WEL-4-C-7-M-0037018, ಇಂಜಿನ್ ನಂಬರ್: SLC-6-H-29469 ಇದ್ದು ವಾಹನದೊಳಗೆ ಪರಿಶೀಲಿಸಲಾಗಿ ಬೀಟೆ ನಾಟಾ ಅಳತೆ ಮಾಡಿ 13=0.277ಇದ್ದು, ಈ ನಾಟಾಗಳ ತುದಿ ಬುಡಗಳ ಮೇಲೆ ಇಲಾಖೆಯ ಯಾವುದೇ ಛಾಪಾದ ಗುರುತಿರಲಿಲ್ಲ ಮತ್ತು ಅವುಗಳನ್ನು ಆಗತಾನೆ ಕೈ ಗರಗಸದಿಂದ ಕೊಯ್ದ ತುಂಡುಗಳಾಗಿದ್ದವು. ಸಿಕ್ಕಿಬಿದ್ದ ಅಸಾಮಿಯ ಹೆಸರು ಸೈಯದ್ ಮುಫ್ತಾರ್ ಬಿನ್ ಸೈಯದ್ ಮೆಹಬೂಬ್ ಸಾಬ್, ಚಾಲಕ, 29 ವರ್ಷ, ಗಾಂಧಿನಗರ, ಮನೆ ನಂ: 458, ಹರಿಹರ, ದಾವಣಗೆರೆ ಜಿಲ್ಲೆ ಎಂದು, ಓಡಿಹೋದವರ ಹೆಸರು (1) ಗದಿಗಪ್ಪ, 35 ವರ್ಷ, ಈಸೂರು ಗ್ರಾಮ, ಶಿಕಾರಿಪುರ ತಾಲ್ಲೂಕು (2) ರಿಯಾಜ್, 30 ವರ್ಷ, ಹೊಸಕ್ಯಾಂಪ್, ಹರಿಹರ, ದಾವಣಗೆರೆ ಜಿಲ್ಲೆ ಎಂದು ತಿಳಿಸಿದನು. ಮತ್ತು ಲಾರಿಯಲ್ಲಿದ್ದ ಬೀಟೆ ನಾಟಾ ಸಾಗಾಣಿಕೆ ಮಾಡಲು ರಹದಾರಿ ಕೇಳಲಾಗಿ ನನ್ನ ಹತ್ತಿರ ಇಲಾಖೆಯ ಯಾವುದೇ ವಿಧವಾದ ರಹದಾರಿ ಇಲ್ಲವೆಂತಲೂ, ಸರ್ಕಾರಿ ಕಾಡಿನಲ್ಲಿ ಕಡಿದ ಮರದ ತುಂಡೆಂದು ತಿಳಿಸಿದನು. ಈ ರೀತಿ ಇಲಾಖೆಯ ಅನುಮತಿ ಇಲ್ಲದೇ ಸರ್ಕಾರಿ ಕಾಡಿನಿಂದ ಅಕ್ರಮವಾಗಿ ಕಡಿದು ಲಾರಿಯಲ್ಲಿ ಸಾಗಿಸಿರುವುದೆಂದು ಪರಿಗಣಿಸಿ ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತಿ ವರದಿಯೊಂದಿಗೆ ವಾಹನ, ಅಸಾಮಿ, ಗರಗಸ ಮತ್ತು ಬೀಟೆ ನಾಟಾಗಳನ್ನು ಇಲಾಖಾ ಪರ ವಶಪಡಿಸಿಕೊಂಡು ನಾಟಾದ ತುಂಡುಗಳಿಗೆ KNFD G-120-EE ಛಾಪಾದ ಗುರುತು ಹೊಡೆದು, ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 24(ಇ), 62, 71(ಎ), 104(ಎ) ಮತ್ತು ಕರ್ನಾಟಕ

ಅರಣ್ಯ ಕಾನೂನು 1969 ಉಪನಿಯಮ 144, 165ರ ಪ್ರಕಾರ ಹೊಸನಗರ ವಲಯದ ಅ.ಮೊ.ಸಂ.82/08-09ನ್ನು ದಾಖಲಿಸಿ, ಆಸಾಮಿಯನ್ನು ಹೊಸನಗರದ ನ್ಯಾಯಾಲಯಕ್ಕೆ ಒಪ್ಪಿಸಿ ವಾಹನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ನಂತರ ಈ ವಾಹನವನ್ನು ಸುರಕ್ಷತೆಗಾಗಿಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ದಿಗೆ ಕೊಡಲು ದಿನಾಂಕ: 18-11-2008ರಂದು ಆದೇಶವಾಗಿರುತ್ತದೆ.

ಈ ವಾಹನದ ಬಿ ಪ್ರತಿಯನ್ನು ಈ ನ್ಯಾಯಾಲಯಕ್ಕೆ ಒದಗಿಸಲು ಸಾರಿಗೆ ಅಧಿಕಾರಿ, ಹೊಸಪೇಟೆ ಇವರಿಗೆ ಪತ್ರ ಸಂಖ್ಯೆ : ಬಿ3:ಅಮೊ:ವಾಹನ-28/08-09 ದಿ: 31-10-2008ರಲ್ಲಿ ಪತ್ರ ಬರೆದು ಕೋರಲಾಗಿತ್ತು. ಅದರಂತೆ ಹೊಸಪೇಟೆ ಪ್ರಾದೇಶಿಕ ಸಾರಿಗೆ ಅಧಿಕಾರಿ ಅವರ ಪತ್ರ ಸಂಖ್ಯೆ: RTO:HPT:RGN:NT:TR/08-09 ದಿ: 11-11-2008ರ ಪತ್ರವು ದಿನಾಂಕ: 24-11-2008ರಂದು ಈ ನ್ಯಾಯಾಲಯದಲ್ಲಿ ಸ್ವೀಕರಿಸಲಾಗಿದೆ. ಬಿ ಪ್ರತಿಯಲ್ಲಿ ನಮೂದಿಸಿದ ಆರ್.ಸಿ. ಮಾಲೀಕರಾದ ಶ್ರೀ ಎಂ. ಶ್ರೀನಿವಾಸ ಬಿನ್ ಎಂ. ದೊಡ್ಡ ಅಂಬಣ್ಣ, ರಾಮನಗರ, ಹೆಚ್.ಬಿ. ಹಳ್ಳಿ, ಹೊಸಪೇಟೆ ಇವರಿಗೆ ದಿ: 01-12-2008ರಂದು 30 ದಿನಗಳ ಕಾಲಾವಕಾಶ ನೀಡಿ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 71(ಬಿ) (1)ರ ಪ್ರಕಾರ ನೋಟಿಸನ್ನು ನೊಂದಣಿ ಅಂಚೆ ಮೂಲಕ ಜಾರಿಮಾಡಿದೆ. ಅದಕ್ಕೆ ಶ್ರೀ ಎಂ. ಶ್ರೀನಿವಾಸ್ ಇವರು ದಿ: 22-12-2008ರ ಪತ್ರವನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿ ಈ ರೀತಿ ಉತ್ತರಿಸಿರುತ್ತಾರೆ. "ನಾನು 2007ನೇ ಇಸ್ವಿಯಲ್ಲಿ ಪಿ ಗಣೇಶ ತಂದೆ ಶಿವಪ್ಪ, 45 ವರ್ಷ, ರಾಮ್-ರಹೀಂ ನಗರ, ಹಗರಿ ಬೊಮ್ಮನಹಳ್ಳಿ ಇವರಿಗೆ ಕ್ಯಾಂಟರ್ ಕೆಎ-35-2350ನ್ನು ಮಾರಾಟ ಮಾಡಿರುತ್ತೇನೆ. ಪಿ. ಗಣೇಶ ರವರು ಅದೇ ದಿನ ರೂ. 20,000/- ನಗದು ನನಗೆ ನೀಡಿದ್ದು, ಉಳಿದ ರೂ. 1,00,000/-ಮೊತ್ತವನ್ನು ಶ್ರೀ ರಾಮ್ ಟ್ರಾನ್ಸ್‌ಪೋರ್ಟ್ ಫೈನಾನ್ಸ್ ಕಂಪನಿ ಲಿಮಿಟೆಡ್., ಪಿ.ಬಿ. ರಸ್ತೆ, ದಾವಣಗೆರೆಯಲ್ಲಿ ಸಾಲವನ್ನು ಚೆಕ್ ನಂ: 029243-400006002 ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಮುಂಬಯಿ ಮುಖ್ಯ ಶಾಖೆ, ನಾರಿಯಮೆನ್ ಪಾಯಿಂಟ್, ಮುಂಬಯಿ-40021 ಖಾತೆಯ ಸಂಖ್ಯೆ: 54030683206 ಚೆಕ್ ನೀಡಿರುತ್ತಾರೆ. ನಾನು ಅದೇ ದಿನ ಶ್ರೀರಾಮ್ ಟ್ರಾನ್ಸ್‌ಪೋರ್ಟ್ ಫೈನಾನ್ಸ್ ಕಂಪನಿ, ಹಗನೂರು ಶ್ರೀನಿವಾಸ ಎಂಬುವವರಿಗೆ ಲಾರಿಯನ್ನು ಒಪ್ಪಿಸಿರುತ್ತೇನೆ. ಪಿ. ಗಣೇಶ ಮತ್ತು ಫೈನಾನ್ಸ್ ಕಂಪನಿ ಹೆಸರಿಗೆ ಬದಲಾಗುವವರೆಗೂ ರಸ್ತೆಯಲ್ಲಿ ಬಿಡುವುದಿಲ್ಲವೆಂದು ತಿಳಿಸಿರುತ್ತಾರೆ. ಲಾರಿಯ ಮೂಲ ದಾಖಲಾತಿಗಳನ್ನು ಫೈನಾನ್ಸ್‌ನ ರಾಜೇಶ್, ಫೀಲ್ಡ್ ಆಫೀಸರ್ ಹತ್ತಿರ ಒಪ್ಪಿಸಿರುತ್ತೇನೆ. ಸದರಿ ಲಾರಿಗೆ ನಾನು 2007ನೇ ಇಸ್ವಿಯಿಂದ ಮಾಲೀಕನಾಗಿರುವುದಿಲ್ಲ. ತಾವು ಯಾವುದೇ ಕ್ರಮ ಕೈಗೊಳ್ಳಬೇಕಾದರೆ ಮೇಲೆ ತಿಳಿಸಿದವರ ಮೇಲೆ ಕ್ರಮ ಕೈಗೊಳ್ಳಬೇಕು" ಎಂದು ಉತ್ತರ ನೀಡಿರುತ್ತಾರೆ.

ವಲಯ ಅರಣ್ಯಾಧಿಕಾರಿ, ಹೊಸನಗರ ಇವರು ಈ ಪ್ರಕರಣದ ವಿಚಾರಣಾ ವರದಿ ಸಲ್ಲಿಸಲು ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಲು ಮತ್ತು ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿದಂತೆ ಈ ಫಾರಂ ನಂ.2953,ದಿ:04-11-09ರಲ್ಲಿ ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಲು ನ್ಯಾಯಾಲಯದಿಂದ ಅನುಮತಿ ನೀಡಿದೆ.

ಸಹಾಯಕ ಸರ್ಕಾರಿ ಅಭಿಯೋಜಕರು ದಿನಾಂಕ:31-01-2009 ರಂದು ವಾದ ಮಂಡಿಸಿ ಈ ವಾಹನದಲ್ಲಿ ಬೀಟೆ ನಾಟಾಗಳನ್ನು ಸಾಗಿಸಿದ ಬಗ್ಗೆ ವಲಯ ಅರಣ್ಯಾಧಿಕಾರಿ, ಹೊಸನಗರ ವಲಯ, ಹೊಸನಗರ ಇವರು ಮಹಜರ್ ಪ್ರತಿ ಮತ್ತು ಪ್ರಥಮ ವರ್ತಮಾನ ವರದಿ, ಜಪ್ತಿ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುವುದರಿಂದ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಅಕ್ರಮವಾಗಿ ಸಾಗಿಸಿರುವುದು ಸಾಬೀತಾಗಿರುತ್ತದೆ. ಆರ್.ಸಿ. ಮಾಲೀಕರಿಗೆ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 71(ಬಿ) (1) ಪ್ರಕಾರ ನೋಟಿಸ್ ಜಾರಿಮಾಡಲಾಗಿದೆ. ವಾಹನ ಮತ್ತು ಬೀಟೆ ಸೈಜನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಅಭಿಯೋಜಕರ ವಾದವನ್ನು ಕೇಳಿ ಕರ್ನಾಟಕ ಅರಣ್ಯ ಕಾಯ್ದೆ 1963 ಉಪನಿಯಮ 71(ಬಿ)(1)ರ ಪ್ರಕಾರ ಆರ್.ಸಿ. ಮಾಲೀಕರಿಗೆ ನೋಟಿಸ್ ಜಾರಿ ಮಾಡಿ 30 ದಿನಗಳಾದರೂ ಯಾರೂ ಹಕ್ಕು ಬಾಧ್ಯತೆಯ ಅರ್ಜಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದುದ್ದರಿಂದ ಈ ಪ್ರಕರಣದ ವಿದ್ಯಮಾನಗಳನ್ನು ಅರಿತು ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಶ್ರೀ ಮಹೇಶ್ ಬಿ. ಶಿರೂರ್, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು, ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ)ಪ್ರಕಾರ ಹಾಗೂ ಈವರೆಗಿನ ತಿದ್ದುಪಡಿ ಅನುಸಾರ ವಲಯ ಅರಣ್ಯಾಧಿಕಾರಿ, ಹೊಸನಗರ ವಲಯ, ಹೊಸನಗರ ಇವರು ಜಪ್ತು ಮಾಡಿದ ವಾಹನ ಕ್ಯಾಂಟರ್ ಕೆಎ-35-2350 (ಛಾಸ್ಸಿಸ್

ನಂ: H-96-WEL-4-C-7-M-0037018, ಇಂಜಿನ್ ನಂಬರ್: SLC-6-H-29469) ನ್ನು ಕರ್ನಾಟಕ ಸರ್ಕಾರದ ಸಂಪತ್ತು ಬೀಟೆ ನಾಟಾ 13=2.277ಎಂ3ನ್ನು ಕಳ್ಳ ಸಾಗಾಣಿಕೆ ಮಾಡಲು ಉಪಯೋಗಿಸಿರುವುದರಿಂದ ವಾಹನ ಕ್ವಾಲಿಸ್ ಕೆಎ-35-2350 (ಛಾಸ್ಸಿಸ್ ನಂ: H-96-WEL-4-C-7-M-0037018, ಇಂಜಿನ್ ನಂಬರ್: SLC-6-H-29469) ಮತ್ತು ಬೀಟೆ ನಾಟಾ 13=2.277ಎಂ3ನ್ನು ಅಂತಿಮವಾಗಿ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಸರಿಪಡಿಸಿ ದಿನಾಂಕ:07-02-2009 ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30 (ಮೂವತ್ತು) ದಿನಗಳ ಒಳಗಾಗಿ ಯಾರು ಈ ನ್ಯಾಯಾಲಯಕ್ಕೆ ಹಕ್ಕುಭಾಧ್ಯತೆ ಅರ್ಜಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ

ಪಿ.ಆರ್.162

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕರ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ದಾವಣಗೆರೆ ಜಿಲ್ಲೆ, ದಾವಣಗೆರೆ

ಪ್ರ.ಸಂ. ಕಾಅದಾ:ಕಾನಪ:ಸಿಆರ್-24/09, ದಿನಾಂಕ:24ನೇ ಫೆಬ್ರವರಿ, 2009

ಅರ್ಜಿದಾರರು:

1) ಡಾಕ್ಯಾನಾಯ್ಕ್ ಬಿನ್ ಸೇವಾನಾಯ್ಕ, 68 ವರ್ಷ.
2) ರುಕ್ಕುಬಾಯಿ ಕೋಂ ಡಾಕ್ಯಾನಾಯ್ಕ್, 65 ವರ್ಷ.
3) ಪರಮೇಶ್ ನಾಯ್ಕ್ ಬಿನ್ ಪಾಕ್ಯನಾಯ್ಕ್, 29 ವರ್ಷ.
4) ಕವಿತಾಬಾಯಿ ಬಿನ್ ಡಾಕ್ಯಾನಾಯ್ಕ್, 32 ವರ್ಷ.
5) ಆಶಾಬಾಯಿ ಬಿನ್ ಡಾಕ್ಯಾನಾಯ್ಕ್, 21 ವರ್ಷ.
6) ಸರಸ್ವತಿ ಬಾಯಿ ಬಿನ್ ಡಾಕ್ಯಾನಾಯ್ಕ್, 19 ವರ್ಷ.

ಹುಡಂಗಿಪುರ ಗ್ರಾಮ, ಬಿಳಿಚೋಳು ಹೋಬಳಿ, ಜಗಳೂರು ತಾ: ದಾವಣಗೆರೆ ಜಿಲ್ಲೆ.

ವಿರುದ್ಧ

ಪ್ರತಿವಾದಿಗಳು:

1) ನಾಗರಾಜ ಬಿನ್ ವೆಂಕಟೇಶಲು, ಲಾರಿ ಚಾಲಕರು, ನಂ.ಎ.ಪಿ.02 ವಿ.4405, ಸೋಲುಗದ್ದಿ ರಸ್ತೆ, ಅಂಬೇಡ್ಕರ್‌ನಗರ, ಚಳ್ಳಕೆರೆ.
2) ಲಕ್ಷ್ಮಣ ಬಿನ್ ಈರಯ್ಯ, ಲಾರಿ ಚಾಲಕರು ನಂ.ಕೆಎ-02-ಎಎ-201, ಮಂಜುನಾಥನಗರ, ಬೆಂಗಳೂರು.
3) ವಿ. ಶ್ರೀನಿವಾಸ ಬಿನ್ ವೆಂಕಟೇಶಲು, ಲಾರಿ ಮಾಲೀಕರು, ನಂ.ಎಡಿ.02, ವಿ.4405, ಅಂಬೇಡ್ಕರ್‌ನಗರ, ಚಳ್ಳಕೆರೆ.
4) ಭೈರಪ್ಪ ಬಿನ್ ಸಿದ್ದಪ್ಪ, ಲಾರಿ-ಮಾಲೀಕರು ನಂ.ಕೆಎ-02, ಎಎ201, ಕಂಠೀರವಸ್ಟುಡಿಯೋ ಹತ್ತಿರ, ಬೆಂಗಳೂರು.
5) ದಿ ಬ್ರಾಂಚ್ ಮ್ಯಾನೇಜರ್, ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂ.ಲಿ., ಚಿತ್ರದುರ್ಗ.
6) ದಿ ಬ್ರಾಂಚ್ ಮ್ಯಾನೇಜರ್ ಬಜಾಜ್ ಅಲಿಯನ್ಸ್ ಜನರಲ್ ಇನ್ಶೂರೆನ್ಸ್ ಕಂ.ಲಿ.,

ಪ್ರಕಟಣೆ

ಶ್ರೀ:ಶ್ರೀಮತಿ: ಡಾಕ್ಯಾನಾಯ್ಕ, ರುಕ್ಕುಬಾಯಿ, ಪರಮೇಶ್‌ನಾಯ್ಕ್, ಕವಿತಾಬಾಯಿ ಇವರುಗಳಾದ ತಾವು ಮೃತ ಸುರೇಶ್‌ನಾಯ್ಕ್ ಇವರ ತಂದೆ, ತಾಯಿ ಮತ್ತು ಸಹೋದರ ಎಂದೂ, ಅವರ ಸಾವಿಗಾಗಿ ನಷ್ಟ ಪರಿಹಾರ ಕೋರಿ ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತಾರೆ ಮೃತ ಸುರೇಶ್‌ನಾಯ್ಕ್ ರವರು ಒಂದನೇ ಪ್ರತಿವಾದಿಗಳಾದ ವಿ. ಶ್ರೀನಿವಾಸ್ ಬಿನ್ ವೆಂಕಟೇಶಲು ಇವರ ಲಾರಿಯಲ್ಲಿ ಹಮಾಲಿಯಾಗಿ ಕೆಲಸ ನಿರ್ವಹಿಸುತ್ತಿದ್ದಾಗ ಸಂಭವಿಸಿದ ಅಪಘಾತದಲ್ಲಿ ಮರಣ ಹೊಂದಿದರೆಂದು ಸದರಿ ಅರ್ಜಿದಾರರು ತಿಳಿಸಿರುತ್ತಾರೆ, ಈ ಸಂಬಂಧವಾಗಿ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಾಗಲೀ ಅಥವಾ ಬೇರೆ ಯಾರಾದರೂ ಮೃತರ ಶಾಸನಬದ್ಧ ವಾರಸುದಾರರು ಎಂದು ಪರಿಗಣಿಸಬೇಕೆಂದು ಪ್ರಾರ್ಥಿಸುವುದಾದರೇ, ಅಂತಹವರು ಪ್ರಕಟಣೆಯು ಈ ನ್ಯಾಯಾಲಯದಲ್ಲಿ ನಾಮಫಲಕದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಅಂತಹ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಕಾರ್ಮಿಕ ಅಧಿಕಾರಿ ಮತ್ತು ಆಯುಕ್ತರು, ಕಾರ್ಮಿಕ ನಷ್ಟ ಪರಿಹಾರ ದಾವಣಗೆರೆ ಜಿಲ್ಲೆ, ದಾವಣಗೆರೆ.

ಪಿ.ಆರ್.266

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ನ್ಯಾಯಾಲಯ

ಬಿ3:ಅಮೊ:ವಾಹನ: 18/07-08, ದಿನಾಂಕ:7ನೇ ಮಾರ್ಚ್, 2009

ಉಪಸ್ಥಿತರು : ಶ್ರೀ ಮಹೇಶ್ ಬಿ. ಶಿರೂರ್, ಭಾ.ಅ.ಸೇ.,
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

ಫಿರ್ಯಾಧಿದಾರರು: ವಲಯ ಅರಣ್ಯಾಧಿಕಾರಿ, ನಗರ ವಲಯ, ನಗರ. (ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)

ಆರೋಪಿಗಳು ಮಂಜುನಾಥ

ಬಾಧ್ಯತೆದಾರರು : ಯಾರೂ ಹಕ್ಕು ಬಾಧ್ಯತೆ ಅರ್ಜಿ ಸಲ್ಲಿಸಿರುವುದಿಲ್ಲ.

ಪ್ರಸ್ತಾವನೆ:

ದಿನಾಂಕ:25-10-2007ರಂದು ನಗರ ವಲಯದ ನಾಗೋಡಿ ಅರಣ್ಯ ತನಿಖಾ ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ವನಪಾಲಕರು ಮತ್ತು ಸಿಬ್ಬಂದಿಯವರು ಕೊಲ್ಲೂರು ಕಡೆಯಿಂದ ಒಂದು ಸ್ಕೂಟರ್ ಬರುತ್ತಿರುವುದನ್ನು ತಡೆದು ತನಿಖೆ ಮಾಡಲು ನಿಲ್ಲಿಸಲು ಸೂಚಿಸಿದಾಗ ಚಾಲಕನು ವಾಹನವನ್ನು ಕೆಳಗೆ ಬೀಳಿಸಿ ಓಡಲು ಪ್ರಾರಂಭಿಸಿದನು. ತಕ್ಷಣ ಸಿಬ್ಬಂದಿಯವರು ಬೆನ್ನಟ್ಟಿ ಹಿಡಿದರು. ನಂತರ ವಾಹನದ ಸೈಡ್ ಬಾಕ್ಸ್ ಮತ್ತು ಹ್ಯಾಂಡಲ್ ಕೆಳಭಾಗದ ಬಾಕ್ಸನ್ನು ತೆಗೆದು ನೋಡಲಾಗಿ ಕೆಲವು ಮರದ ಹಸಿ ತುಂಡುಗಳಿದ್ದು, ಅವುಗಳ ಶ್ರೀಗಂಧದ ತುಂಡುಗಳಾಗಿದ್ದು ಈ ತುಂಡುಗಳ ಒಟ್ಟು ತೂಕ 4.5 ಕೆ.ಜಿ. ಇದ್ದು, ಈ ತುಂಡುಗಳನ್ನು ಸಾಗಿಸಲು ಯಾವುದೇ ರಹದಾರಿ ಇರಲಿಲ್ಲ. ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ ಅಸಾಮಿ ಮಂಜುನಾಥ ಬಿನ್ ವೀರಭದ್ರನಾಯ್ಕ ಯಾನೆ ಡಬ್ಬಾನಾಯ್ಕ, ಅಂದಾಜು ವರ್ಷ 28, ವರದಾಮೂಲ ಅಂಚೆ, ಸಾಗರ ತಾಲ್ಲೂಕು ರವರನ್ನು ಮತ್ತು ವಾಹನ ಬಜಾಜ್ ಚೇತಕ್ ಕೆಎ-18-ಇ-3368, ಇಂಜಿನ್ ನಂ:E-06-DL-454028, ಛಾಸ್ಸಿಸ್ ನಂ: C-06-DL-454034 ನ್ನು, ಶ್ರೀಗಂಧವನ್ನು ಪ್ರಥಮ ವರ್ತಮಾನ ವರದಿ, ಮಹಜರ್ ವರದಿಯೊಂದಿಗೆ ಇಲಾಖಾ ಪರ ಜಪ್ತುಮಾಡಿ ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ), 84, 86, 87 ಮತ್ತು ಕರ್ನಾಟಕ ಅರಣ್ಯ ಕಾನೂನು 1969 ಉಪನಿಯಮ 144, 165ರ ಪ್ರಕಾರ ಉಲ್ಲಂಘಿಸಿರುವುದರಿಂದ ನಗರ ವಲಯದ ಅ.ಮೊ.ಸಂ. 73/07-08ನ್ನು ದಾಖಲಿಸಿ, ವಾಹನವನ್ನು 71(ಎ) ವಿಚಾರಣೆಗೆ ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ನಂತರ ಈ ವಾಹನವನ್ನು ಸುರಕ್ಷತೆಗಾಗಿಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ಧಿಗೆ ಕೊಡಲು ಆದೇಶವಾಗಿರುತ್ತದೆ.

ಈ ವಾಹನದ ಬಿ ಪ್ರತಿಯನ್ನು ಈ ನ್ಯಾಯಾಲಯಕ್ಕೆ ಒದಗಿಸಲು ಸಾರಿಗೆ ಅಧಿಕಾರಿ, ಚಿಕ್ಕಮಗಳೂರು ಇವರಿಗೆ ಈ ನ್ಯಾಯಾಲಯದ ಪತ್ರ ಸಂಖ್ಯೆ: ಬಿ3:ಅಮೊ:ವಾಹನ-18/07-08 ದಿ:16-11-2007ರಲ್ಲಿ ಕೋರಿದಂತೆ ಈ ವಾಹನದ ಬಿ ಪ್ರತಿಯನ್ನು ಸಾರಿಗೆ ಅಧಿಕಾರಿ, ಚಿಕ್ಕಮಗಳೂರು ಇವರು ಪತ್ರ ಸಂಖ್ಯೆ: RTO:CHM:KA-18-E-3368/07-08 ದಿನಾಂಕ:23-11-2007 ರಲ್ಲಿ ಸಲ್ಲಿಸಿದಂತೆ ಆರ್.ಸಿ. ಮಾಲೀಕರಾದ ಶ್ರೀ ನೇರಿ ಮೆನೇಜಸ್ ಬಿನ್ ಲೂಯಿಸ್ ಮೆನೇಜಸ್, ಬಿ.ಎಂ. ರಸ್ತೆ, ಚನ್ನರಾಯ ಪಟ್ಟಣ, ಹಾಸನ ಜಿಲ್ಲೆ ಇವರಿಗೆ ಈ ನ್ಯಾಯಾಲಯದಿಂದ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 71(ಬಿ) (1)ರ ಪ್ರಕಾರ ಕಾರಣ ಕೇಳಿ ಪತ್ರವನ್ನು ದಿನಾಂಕ:14-01-2008ರಂದು ಜಾರಿ ಮಾಡಿದೆ. ಈ ಪತ್ರಕ್ಕೆ ಆರ್.ಸಿ. ಮಾಲೀಕರು ಈ ವಾಹನವನ್ನು ದಿ: 14-07-1999ರಂದು ಕೆ. ನಾಗರಾಜ ಇವರಿಗೆ ಮಾರಾಟ ಮಾಡಿರುತ್ತೇನೆಂದು ಮತ್ತು ಈ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ನನ್ನ ತಕರಾರು ಇರುವುದಿಲ್ಲವೆಂದು ದಿ:24-01-2008ರ ಪತ್ರದಲ್ಲಿ ತಿಳಿಸಿರುತ್ತಾರೆ.

ಈ ನಡುವೆ ಅಂದರೆ ದಿ: 05-01-2008ರಂದು ಈ ವಾಹನದ ಹೆಚ್ಚಿನ ಪ್ರಚಾರಕ್ಕಾಗಿ ಈ ನ್ಯಾಯಾಲಯದಿಂದ ಪತ್ರಿಕಾ ಪ್ರಕಟಣೆಯನ್ನು ಪತ್ರ ಸಂಖ್ಯೆ: ಬಿ3:ಅಮೊ:ವಾಹನ-20/07-08ರಲ್ಲಿ 30 ದಿನಗಳ ಕಾಲಾವಕಾಶ ನೀಡಿ ಹೊರಡಿಸಿ ಪ್ರತಿಯನ್ನು ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯ ಪತ್ರ ವಿಭಾಗ, ಬೆಂಗಳೂರು ಮತ್ತು ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸಿ ಗೆಜೆಟ್ ಪತ್ರಿಕೆಯಲ್ಲಿ ಪ್ರಕಟಿಸಲು ಕೋರಿದಂತೆ ದಿ: 28-02-2008 ರಂದು ಸಾಗರ ಸಂದೇಶ ದಿನಪತ್ರಿಕೆಯಲ್ಲಿ, ದಿ: 17-01-2008ರಂದು ಗೆಜೆಟ್‌ನಲ್ಲಿ ಪ್ರಕಟಣೆಯು ಪ್ರಕಟಗೊಂಡಿರುತ್ತವೆ. ಅಲ್ಲದೇ ಈ ಪ್ರಕಟಣೆ ಪ್ರಕಟವಾಗಿ 30 ದಿನಗಳಾದರೂ ಯಾರೂ ಈ ವಾಹನವನ್ನು ಬಿಡಿಸಿಕೊಳ್ಳಲು ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುವುದಿಲ್ಲ.

ಸಹಾಯಕ ಸರ್ಕಾರಿ ಅಭಿಯೋಜಕರು ದಿ: 07-03-2009 ರಂದು ವಾದ ಮಂಡಿಸಿ ಈ ವಾಹನದಲ್ಲಿ ಶ್ರೀಗಂಧವನ್ನು ಸಾಗಿಸಿದ ಬಗ್ಗೆ ವಲಯ ಅರಣ್ಯಾಧಿಕಾರಿ, ನಗರ ವಲಯ, ನಗರ ಇವರು ಮಹಜರ್ ಪ್ರತಿ ಮತ್ತು ಪ್ರಥಮ ವರ್ತಮಾನ ವರದಿ, ಜಪ್ತಿ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುವುದರಿಂದ ಈ ವಾಹನದಲ್ಲಿ ಶ್ರೀಗಂಧವನ್ನು ಅಕ್ರಮವಾಗಿ ಸಾಗಿಸಿರುವುದು ಸಾಬೀತಾಗಿರುತ್ತದೆ. ಆರ್.ಸಿ. ಮಾಲೀಕರಿಗೆ ನೋಟಿಸ್ ನೀಡಿದ್ದರೂ ಸಹ ವಾಹನ ಮಾಲೀಕರಾಗಲೀ ಅಥವಾ ಅವರ ಪ್ರತಿನಿಧಿಗಳಾಗಲೀ ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುವುದಿಲ್ಲ. ಆದ್ದರಿಂದ ವಾಹನ ಮತ್ತು ಶ್ರೀಗಂಧವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ವಾಹನದ ಆರ್.ಸಿ. ಮಾಲೀಕರಾದ ಶ್ರೀ ನೇರಿ ಮೆನೇಜಸ್ ಬಿನ್ ಲೂಯಿಸ್ ಮೆನೇಜಸ್, ಬಿ.ಎಂ. ರಸ್ತೆ, ಚನ್ನರಾಯ ಪಟ್ಟಣ, ಹಾಸನ ಜಿಲ್ಲೆ ಇವರಿಗೆ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 71(ಜಿ) (1)ರ ಪ್ರಕಾರ ಕಾರಣ ಕೇಳಿ ಪತ್ರವನ್ನು ಜಾರಿ ಮಾಡಿದೆ. ಈ ವಾಹನವನ್ನು ಬೇರೆಯವರಿಗೆ ಮಾರಾಟ ಮಾಡಿದ್ದೇನೆಂದು, ಈ ವಾಹನದ ಮೇಲೆ ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳಲು ತಕರಾರು ಇಲ್ಲವೆಂದು ತಿಳಿಸಿರುತ್ತಾರೆ. ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 71(ಜಿ) (1)ರ ಪ್ರಕಾರ ಆರ್.ಸಿ. ಮಾಲೀಕರ ಅಭಿಪ್ರಾಯ ತಿಳಿದು ಮತ್ತು ಅವರಿಗೆ ಅಹವಾಲು ಮಂಡಿಸಲು ಒಂದು ಅವಕಾಶ ನೀಡಿದ ನಂತರ ಈ ವಾಹನದ ಬಗ್ಗೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಆದ್ದರಿಂದ ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಶ್ರೀ ಮಹೇಶ್ ಬಿ. ಶಿರೂರ್, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು, ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ) ಪ್ರಕಾರ ಹಾಗೂ ಈವರೆಗಿನ ತಿದ್ದುಪಡಿ ಅನುಸಾರ ವಲಯ ಅರಣ್ಯಾಧಿಕಾರಿ, ನಗರ ವಲಯ, ನಗರ ಇವರು ಜಪ್ತು ಮಾಡಿದ ವಾಹನ ಬಜಾಜ್ ಚೇತಕ್ ಕೆಎ–18–ಇ–3368 (ಇಂಜಿನ್ ನಂ:E-06-DL-454028, ಛಾಸ್ಸಿಸ್ ನಂ:C-06-DL-454034)ನ್ನು ಕರ್ನಾಟಕ ಸರ್ಕಾರದ ಸಂಪತ್ತು ಆದ 4.5 ಕೆ.ಜಿ. ಶ್ರೀಗಂಧವನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿರುವುದರಿಂದ ವಾಹನ ಬಜಾಜ್ ಚೇತಕ್ ಕೆಎ–18–ಇ–3368 (ಇಂಜಿನ್ ನಂ:E-06-DL-454028, ಛಾಸ್ಸಿಸ್ ನಂ:C-06-DL-454034) ಮತ್ತು ವಾಹನದಲ್ಲಿದ್ದ 4.5 ಕೆ.ಜಿ. ಶ್ರೀಗಂಧವನ್ನು ಅಂತಿಮವಾಗಿ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ. ನಂತರ ಸರಿಪಡಿಸಿ ದಿ: 07–03–2009 ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30 (ಮೂವತ್ತು) ದಿನಗಳ ಒಳಗಾಗಿ ಯಾರು ಈ ನ್ಯಾಯಾಲಯಕ್ಕೆ ಹಕ್ಕುಭಾಧ್ಯತೆ ಅರ್ಜಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ
ಪಿ.ಆರ್.298 ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ನ್ಯಾಯಾಲಯ
ಬಿ3:ಅಮೊ:ವಾಹನ–25/07–08, ದಿನಾಂಕ:7ನೇ ಮಾರ್ಚ್, 2009

ಉಪಸ್ಥಿತರು: ಶ್ರೀ ಮಹೇಶ್ ಬಿ. ಶಿರೂರ್ ಭಾ.ಅ.ಸೇ.,
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.
ಫಿರ್ಯಾದಿದಾರರು: ವಲಯ ಅರಣ್ಯಾಧಿಕಾರಿ, ಶಿಕಾರಿಪುರ ವಲಯ, ಶಿಕಾರಿಪುರ.
(ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)
ಆರೋಪಿಗಳು: ಪತ್ತೆಯಾಗಿಲ್ಲ
ಭಾಧ್ಯತೆದಾರರು: ಯಾರೂ ಹಕ್ಕುಬಾಧ್ಯತೆಯ ಅರ್ಜಿ ಸಲ್ಲಿಸಿಲ್ಲ.

ಪ್ರಸ್ತಾವನೆ:

ದಿನಾಂಕ: 20–03–2008ರಂದು ಶಿಕಾರಿಪುರ ವಲಯದ ನಗರ ತನಿಖಾ ವನಪಾಲಕರು ಮತ್ತು ಸಿಬ್ಬಂದಿಯವರು ಹಾಗೂ ಶಿಕಾರಿಪುರ ಅರಣ್ಯ ಸಂಚಾರಿದಳದ ವನಪಾಲಕರು ಮತ್ತು ಸಿಬ್ಬಂದಿಯವರು ವಲಯ ಅರಣ್ಯಾಧಿಕಾರಿಗಳ ಮಾರ್ಗದರ್ಶನದಂತೆ ಶಿಕಾರಿಪುರ ತಾಲ್ಲೂಕು ಕಸಬಾ ಶಾಖೆ ವ್ಯಾಪ್ತಿಯಲ್ಲಿ ಬರುವ ಗಾಮ ಕ್ರಾಸ್ ಬಳಿ ರಾತ್ರಿ ಸುಮಾರು 12ಗಂಟೆಯ ಸಮಯದಲ್ಲಿ ಗಸ್ತು ಕಾಯುತ್ತಾ ರಸ್ತೆಯಲ್ಲಿ ಓಡಾಡುವ ವಾಹನವನ್ನು ತಪಾಸಣೆ ಮಾಡುತ್ತಿರುವಾಗ, ಆನಂದಪುರಂ ಕಡೆಯಿಂದ ಒಂದು ವಾಹನ ಬರುತ್ತಿರುವುದನ್ನು ಬ್ಯಾಟರಿ ಬೆಳಕಿನಿಂದ ನಿಲ್ಲಿಸಲು ಸೂಚಿಸಿದಾಗ ವಾಹನವನ್ನು ನಿಲ್ಲಿಸದೇ ಮುಂದೆ ವೇಗವಾಗಿ ಚಲಿಸಿದಾಗ ಇಲಾಖಾ ವಾಹನದಿಂದ ಸುಮಾರು 2 ಕಿ.ಮೀ., ದೂರ ಬೆನ್ನಟ್ಟಿ ಗಾಮ ಗ್ರಾಮದ ಹೊರಭಾಗದಲ್ಲಿ ಇಲಾಖಾ ವಾಹನದಿಂದ ಅಡ್ಡಕಟ್ಟಿ ನಿಲ್ಲಿಸಲಾಯಿತು. ವಾಹನದಲ್ಲಿದ್ದ ಇಬ್ಬರು ಅಸಾಮಿಗಳು ಮಾರುತಿ ವ್ಯಾನಿನಿಂದ ಇಳಿದು ಕತ್ತಲೆಯಲ್ಲಿ ಓಡಿ ಪರಾರಿಯಾಗಿರುತ್ತಾರೆ. ನಂತರ ವಾಹನವನ್ನು ಪರಿಶೀಲಿಸಲಾಗಿ 2 ಬೀಟೆ ತುಂಡುಗಳಿದ್ದು, ಈ ತುಂಡುಗಳನ್ನು ಕೊಯ್ತು ಮಾಡಿದ ಹಾಗೂ ಇಲಾಖಾ ಯಾವುದೇ ಛಾಪಾದ ಗುರುತು ಇರದ ತುಂಡುಗಳಾಗಿದ್ದು, ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತು ವರದಿಯೊಂದಿಗೆ ಬೀಟೆ ನಾಟಾಕ್ಕೆ ಸಂಖ್ಯೆ ನೀಡಿ, ಅಳತೆ ಮಾಡಿ 2=0.211ಎಂ3 ಇದ್ದು, ವಾಹನ ಬಿಳಿ ಬಣ್ಣದ ಮಾರುತಿ ವ್ಯಾನ್ ಎಂಹೆಚ್–01–6958 (ಇಂಜಿನ್ ನಂ: T-91-IN-8273, ಛಾಸ್ಸಿಸ್ ನಂ: ಕಾಣಿಸುತ್ತಿಲ್ಲ)ನ್ನು ಇಲಾಖಾ ಪರ ಜಪ್ತುಮಾಡಿ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 24, 62, 71(ಎ), 104(ಎ) ಮತ್ತು ಕರ್ನಾಟಕ ಅರಣ್ಯ ಕಾನೂನು 1969ರ

ಉಪನಿಯಮ 144, 165ರ ಪ್ರಕಾರ ಶಿಕಾರಿಪುರ ವಲಯದ ಅರಣ್ಯ ಮೊಕದ್ದಮೆ ಸಂಖ್ಯೆ: 76/07-08ನ್ನು ದಾಖಲಿಸಿ ನಂತರ ವಾಹನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ನಂತರ ಈ ವಾಹನವನ್ನು ಸರ್ಕಾರಿ ನಾಟಾ ಸಂಗ್ರಹಾಲಯದಲ್ಲಿರುವ ವಾಹನ ಶೆಡ್ಡಿನಲ್ಲಿ ಸುರಕ್ಷತೆಗಾಗಿ ಇಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ದಿಗೆ ಕೊಡಲು ದಿ: 29-03-2008ರಂದು ಆದೇಶವಾಗಿದೆ.

ಈ ವಾಹನದ ಬಿ ಪ್ರತಿಯನ್ನು ಈ ನ್ಯಾಯಾಲಯಕ್ಕೆ ಒದಗಿಸುವಂತೆ The director of transport commissioner, Mitol towers, Nariman point, Bombay ರವರಿಗೆ ಈ ನ್ಯಾಯಾಲಯದ ಪತ್ರ ಸಂಖ್ಯೆ: B3:FOC:VEH:25/07-08 ದಿ:22-04-2008ರಲ್ಲಿ ಪತ್ರ ಬರೆದು ಕೋರಲಾಯಿತು. ಆದರೆ ಅವರಿಂದ ಯಾವುದೇ ಮಾಹಿತಿ ಈ ನ್ಯಾಯಾಲಯಕ್ಕೆ ಇಲ್ಲಿಯವರೆವಿಗೂ ಬಂದಿರುವುದಿಲ್ಲ.

ಈ ನಡುವೆ ಈ ವಾಹನದ ಬಗ್ಗೆ ಸಂಬಂಧಪಟ್ಟ ಆರ್.ಸಿ. ಮಾಲೀಕರು ದಾಖಲೆಗಳನ್ನು ಹಾಜರ್ಪಡಿಸಲು 30 ದಿನಗಳ ಕಾಲಾವಕಾಶ ನೀಡಿ ಈ ನ್ಯಾಯಾಲಯದಿಂದ ಪ್ರಕಟಣೆಯನ್ನು ಬಿ3:ಅಮೊ:ವಾಹನ-01/08-09 ದಿ:10-04-2008ರಂದು ಹೊರಡಿಸಿ ಪ್ರತಿಯನ್ನು ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ ಬೆಂಗಳೂರು ಮತ್ತು ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯ ಪತ್ರ ವಿಭಾಗ, ಬೆಂಗಳೂರು ಇವರಿಗೆ ಕಳುಹಿಸಿ ರಾಜ್ಯ ಮಟ್ಟದ ಪ್ರಚಲಿತ ದೈನಿಕ ಪತ್ರಿಕೆಯಲ್ಲಿ ಮತ್ತು ಗೆಜೆಟ್‌ನಲ್ಲಿ ಪ್ರಕಟಿಸಿ ಪ್ರತಿಯನ್ನು ಕಳುಹಿಸಿಕೊಡಲು ಕೋರಲಾಗಿತ್ತು. ಅದರಂತೆ ಈ ಪ್ರಕಟಣೆಯು ದಿ: 17-04-08ರಂದು ಗೆಜೆಟ್ ಪತ್ರಿಕೆಯಲ್ಲಿ ಪ್ರಕಟಗೊಂಡು 30 ದಿನಗಳಾದರು ವಾಹನ ಮಾಲೀಕರಾಗಲೀ ಅಥವಾ ಅವರ ಪರ ವಕೀಲರಾಗಲೀ ಈ ನ್ಯಾಯಾಲಯಕ್ಕೆ ಹಕ್ಕುಬಾಧ್ಯತೆಯ ಅರ್ಜಿ ಸಲ್ಲಿಸಿರುವುದಿಲ್ಲ.

ಸಹಾಯಕ ಸರ್ಕಾರಿ ಅಭಿಯೋಜಕರು ದಿ: 07-03-2009 ರಂದು ವಾದ ಮಂಡಿಸಿ ಈ ವಾಹನದಲ್ಲಿ ಬೀಟೆ ನಾಟಾವನ್ನು ಸಾಗಿಸಿದ ಬಗ್ಗೆ ವಲಯ ಅರಣ್ಯಾಧಿಕಾರಿ, ಶಿಕಾರಿಪುರ ವಲಯ, ಶಿಕಾರಿಪುರ ಇವರು ಮಹಜರ್ ಪ್ರತಿ ಮತ್ತು ಪ್ರಥಮ ವರ್ತಮಾನ ವರದಿ, ಜಪ್ತಿ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುವುದರಿಂದ ಈ ವಾಹನದಲ್ಲಿ ಬೀಟೆ ನಾಟಾವನ್ನು ಅಕ್ರಮವಾಗಿ ಸಾಗಿಸಿರುವುದು ಸಾಬೀತಾಗಿರುತ್ತದೆ. ಈ ವಾಹನದ ಬಗ್ಗೆ ಗೆಜೆಟ್ ಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿ 30 ದಿನಗಳಿಗಿಂತಲೂ ಹೆಚ್ಚು ಕಾಲವಾಗಿದ್ದರೂ ವಾಹನ ಮಾಲೀಕರಾಗಲೀ ಅಥವಾ ಅವರ ಪ್ರತಿನಿಧಿಗಳಾಗಲೀ ಯಾರೂ ಈ ವಾಹನ ಬಿಡಿಸಿಕೊಳ್ಳಲು ಕ್ಲೈಮು ಅರ್ಜಿ ಸಲ್ಲಿಸಿರುವುದಿಲ್ಲ. ಆದ್ದರಿಂದ ವಾಹನ ಮತ್ತು ಬೀಟೆ ನಾಟಾಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಅಭಿಯೋಜಕರ ವಾದವನ್ನು ಕೇಳಿ, ಈ ವಾಹನದ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿರುತ್ತದೆ. ಈ ಪ್ರಕಟಣೆಯು ರಾಜ್ಯ ಗೆಜೆಟ್‌ನಲ್ಲಿ ಪ್ರಕಟಗೊಂಡು 30 ದಿನಗಳಾದರೂ ಯಾರೂ ಹಕ್ಕು ಬಾಧ್ಯತೆಯ ಅರ್ಜಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದುದ್ದರಿಂದ ಈ ಪ್ರಕರಣದ ವಿದ್ಯಾಮಾನಗಳನ್ನು ಅರಿತು ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ಶ್ರೀ ಮಹೇಶ್ ಬಿ. ಶಿರೂರ್, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು, ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ) ಪ್ರಕಾರ ಹಾಗೂ ಈವರೆಗಿನ ತಿದ್ದುಪಡಿ ಅನುಸಾರ ವಲಯ ಅರಣ್ಯಾಧಿಕಾರಿ, ಶಿಕಾರಿಪುರ ವಲಯ ಇವರು ಜಪ್ತಿಮಾಡಿದ ಬಿಳಿ ಬಣ್ಣದ ಮಾರುತಿ ವ್ಯಾನ್ ಎಂಹೆಚ್-01-6958 (ಇಂಜಿನ್ ನಂ:T-91-IN-8273, ಛಾಸ್ಸಿಸ್ ನಂ: ಕಾಣಿಸುತ್ತಿಲ್ಲ)ಈ ವಾಹನದಲ್ಲಿ ಕರ್ನಾಟಕ ಸರ್ಕಾರದ ಸಂಪತ್ತು ಆದ ಬೀಟೆ ನಾಟಾ 2=0.211ಎಂ3 ನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿರುತ್ತಾರೆ. ಆದ್ದರಿಂದ ಬಿಳಿ ಬಣ್ಣದ ಮಾರುತಿ ವ್ಯಾನ್ ಎಂಹೆಚ್-01-6958 (ಇಂಜಿನ್ ನಂ: T-91-IN-8273, ಛಾಸ್ಸಿಸ್ ನಂ: ಕಾಣಿಸುತ್ತಿಲ್ಲ) ಮತ್ತು ಈ ವಾಹನದಲ್ಲಿದ್ದ ಬೀಟೆ ನಾಟಾ 2=0.211ಎಂ3 ನ್ನು ಅಂತಿಮವಾಗಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ಏಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಸರಿಪಡಿಸಿ ದಿ:07-03-2009 ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30 (ಮೂವತ್ತು) ದಿನಗಳೊಳಗಾಗಿ ಯಾರೂ ಈ ನ್ಯಾಯಾಲಯಕ್ಕೆ ಹಕ್ಕುಬಾಧ್ಯತೆಯ ಅರ್ಜಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ
ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ

ಪಿ.ಆರ್.299

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ನ್ಯಾಯಾಲಯ
ಬಿ3:ಅಮೊ:ವಾಹನ-22/07-08, ದಿನಾಂಕ:7ನೇ ಮಾರ್ಚ್, 2009

ಉಪಸ್ಥಿತರು: ಶ್ರೀ ಮಹೇಶ್ ಬಿ. ಶಿರೂರ್ ಭಾ.ಅ.ಸೇ.,
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

ಫಿರ್ಯಾಧಿದಾರರು: ವಲಯ ಅರಣ್ಯಾಧಿಕಾರಿ, ಸಾಗರ ವಲಯ, ಸಾಗರ.
(ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)

ಆರೋಪಿಗಳು : 1) ರಾಘವೇಂದ್ರ (2) ತಿಮ್ಮಪ್ಪ

ಭಾದ್ಯತೆದಾರರು : ಯಾರೂ ಹಕ್ಕುಬಾಧ್ಯತೆಯ ಅರ್ಜಿ ಸಲ್ಲಿಸಿಲ್ಲ.

ಪ್ರಸ್ತಾವನೆ:

ದಿನಾಂಕ:14-01-2008ರಂದು ಮಧ್ಯಾಹ್ನ 3-00ಗಂಟೆಗೆ ಸಾಗರ ವಲಯದ ಶಿರವಂತೆ ಶಾಖೆಯ ವನಪಾಲಕರು ಮತ್ತು ಸಿಬ್ಬಂದಿಯವರಿಗೆ ಬಂದ ಖಚಿತ ವರ್ತಮಾನದ ಮೇರೆಗೆ ಸಾಗರ ತಾಲ್ಲೂಕು ಆವಿನಹಳ್ಳಿ ಹೋಬಳಿ ಕೆಸವಿನಮನೆ ತಂಗುದಾಣದ ಹಿಂಭಾಗ ಶರಾವತಿ ಹಿನ್ನೀರಿನ ಪಕ್ಕದಲ್ಲಿ ಒಂದು ಬಿಳಿ ಬಣ್ಣದ ಮಾರುತಿ ಓಮಿನಿ ನಿಂತಿರುವುದು ಕಂಡುಬಂದಿದ್ದು, ಈ ಓಮಿನಿಯ ಹತ್ತಿರ ಇಬ್ಬರು ಅಸಾಮಿಗಳಿದ್ದು, ಇಲಾಖೆಯವರನ್ನು ನೋಡಿ ಓಡಲು ಪ್ರಯತ್ನಿಸಿದರು. ಇಲಾಖೆಯವರು ಅವರಲ್ಲಿ ಒಬ್ಬನನ್ನು ಹಿಡಿದಿದ್ದು, ಮತ್ತೊಬ್ಬನು ತಪ್ಪಿಸಿಕೊಂಡು ಪರಾರಿಯಾಗಿರುತ್ತಾನೆ. ಹಿಡಿದ ಅಸಾಮಿಯನ್ನು ಓಮಿನಿ ಹತ್ತಿರ ಹೋಗಿ ಪರಿಶೀಲಿಸಿದಾಗ ಮಾರುತಿ ಓಮಿನಿಯೊಳಗೆ ಗರಗಸದಿಂದ ಕೊಯ್ತು ಮಾಡಿದ ಬೀಟೆ ನಾಟಾಗಳಿರುವುದು ಕಂಡುಬಂದಿತು. ಈ ಬೀಟೆ ನಾಟಾಗಳಿಗೆ ಇಲಾಖೆಯ ಯಾವುದೇ ಛಾಪಾದ ಗುರುತಿರಲಿಲ್ಲ. ಈ ಬೀಟೆ ನಾಟಾ ಸಾಗಿಸಲು ರಹದಾರಿ ಕೇಳಿದಾಗ ಅಸಾಮಿಯು ಯಾವುದೇ ರಹದಾರಿ ಇಲ್ಲವೆಂದು ತಿಳಿಸಿದನು. ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ ಪ್ರಥಮ ವರ್ತಮಾನ ವರದಿ, ಜಪ್ತುವರದಿಯೊಂದಿಗೆ ವಾಹನ, ಅಸಾಮಿ, ಬೀಟೆ ನಾಟಾಗಳನ್ನು ಇಲಾಖಾ ಪರ ವಶಪಡಿಸಿಕೊಂಡು ಓಮಿನಿ ನಂ: ಜಿಎ-01-ಎ-6314, ಛಾಸ್ಸಿಸ್ ನಂ: 884929, ಇಂಜಿನ್ ನಂಬರ್: 660348 ಆಗಿದ್ದು,ಈ ಓಮಿನಿಯೊಳಗಿದ್ದ 5 ಬೀಟೆ ತುಂಡುಗಳಿಗೆ ನಂಬರ್ ಕೊಟ್ಟು, ಅಳತೆ ಮಾಡಿ, 5=0.392ಎಂ3 ಇದ್ದು, ಸಿಕ್ಕಿದ ಅಸಾಮಿಯನ್ನು ವಿಚಾರಿಸಲಾಗಿ ನನ್ನ ಹೆಸರು ರಾಘವೇಂದ್ರ ಬಿನ್ ಗಣಪನಾಯ್ಕ, ಸುಮಾರು 24 ವರ್ಷ, ಬಾನುಕುಳಿ ಗ್ರಾಮ, ಪಂಜುಳ್ಳಿ ವಾಸಿ, ಸಾಗರ ತಾ॥ ಎಂದು, ಓಡಿಹೋದ ಅಸಾಮಿ ಹೆಸರು ತಿಮ್ಮಪ್ಪ ಬಿನ್ ಕನ್ನನಾಯ್ಕ, 25 ವರ್ಷ, ಮೇಲಮಂಜಿವಾಸಿ, ಕೋಗಾರ ಅಂಚೆ, ಸಾಗರ ತಾ॥ ಎಂದು ತಿಳಿಸಿದ್ದು, ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 33, 62, 71(ಎ), 104(ಎ) ಮತ್ತು ಕರ್ನಾಟಕ ಅರಣ್ಯ ಕಾನೂನು 1969ರ ಉಪನಿಯಮ 144, 165ರ ಪ್ರಕಾರ ಸಾಗರ ವಲಯದ ಅರಣ್ಯ ಮೊಕದ್ದಮೆ ಸಂಖ್ಯೆ: 91/07-08ನ್ನು ದಾಖಲಿಸಿ ನಂತರ ವಾಹನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ನಂತರ ಈ ವಾಹನವನ್ನು ಸರ್ಕಾರಿ ನಾಟಾ ಸಂಗ್ರಹಾಲಯದಲ್ಲಿರುವ ವಾಹನ ಶೆಡ್ಡಿನಲ್ಲಿ ಸುರಕ್ಷತೆಗಾಗಿ ಇಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ಧಿಗೆ ಕೊಡಲು ದಿ: 04-02-2008ರಂದು ಆದೇಶವಾಗಿದೆ.

ಈ ವಾಹನದ ಬಿ ಪ್ರತಿಯನ್ನು ಈ ನ್ಯಾಯಾಲಯಕ್ಕೆ ಒದಗಿಸುವಂತೆ The director of transport commissioner, Panji, Goa ಇವರಿಗೆ ಈ ನ್ಯಾಯಾಲಯದ ಪತ್ರ ಸಂಖ್ಯೆ: B3:FOC:VEH:22/07-08 ದಿ:12-06-2008ರಲ್ಲಿ ಪತ್ರ ಬರೆಯಲಾಗಿದೆ. ಆದರೆ ಅವರಿಂದ ಯಾವುದೇ ಮಾಹಿತಿ ಇಲ್ಲಿಯವರೆವಿಗೂ ಬಂದಿರುವುದಿಲ್ಲ.

ಈ ನಡುವೆ ಈ ವಾಹನದ ಬಗ್ಗೆ ಸಂಬಂಧಪಟ್ಟ ಆರ್.ಸಿ. ಮಾಲೀಕರು ದಾಖಲೆಗಳನ್ನು ಹಾಜರ್ಪಡಿಸಲು 30 ದಿನಗಳ ಕಾಲಾವಕಾಶ ನೀಡಿ ಈ ನ್ಯಾಯಾಲಯದಿಂದ ಪ್ರಕಟಣೆಯನ್ನು ಬಿ3:ಅಮೊ:ವಾಹನ-01/08-09 ದಿ: 10-04-2008ರಂದು ಹೊರಡಿಸಿ ಪ್ರತಿಯನ್ನು ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ ಬೆಂಗಳೂರು ಮತ್ತು ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯ ಪತ್ರ ವಿಭಾಗ, ಬೆಂಗಳೂರು ಇವರಿಗೆ ಕಳುಹಿಸಿ ರಾಜ್ಯ ಮಟ್ಟದ ಪ್ರಚಲಿತ ದೈನಿಕ ಪತ್ರಿಕೆಯಲ್ಲಿ ಪ್ರಕಟಿಸಿ ಪ್ರತಿಯನ್ನು ಕಳುಹಿಸಿಕೊಡಲು ಕೋರಲಾಗಿತ್ತು. ಅದರಂತೆ ಈ ಪ್ರಕಟಣೆಯು ದಿ: 17-04-08ರಂದು ಗೆಜೆಟ್ ಪತ್ರಿಕೆಯಲ್ಲಿ ಪ್ರಕಟಗೊಂಡು 30 ದಿನಗಳಾದರು ವಾಹನ ಮಾಲೀಕರಾಗಲೀ ಅಥವಾ ಅವರ ಪರ ವಕೀಲರಾಗಲೀ ಈ ನ್ಯಾಯಾಲಯಕ್ಕೆ ಹಕ್ಕುಬಾಧ್ಯತೆಯ ಅರ್ಜಿ ಸಲ್ಲಿಸಿರುವುದಿಲ್ಲ.

ಸಹಾಯಕ ಸರ್ಕಾರಿ ಅಭಿಯೋಜಕರು ದಿ: 07-03-2009 ರಂದು ವಾದ ಮಂಡಿಸಿ ಈ ವಾಹನದಲ್ಲಿ ಬೀಟೆ ನಾಟಾವನ್ನು ಸಾಗಿಸಿದ ಬಗ್ಗೆ ವಲಯ ಅರಣ್ಯಾಧಿಕಾರಿ, ಸಾಗರ ವಲಯ, ಸಾಗರ ಇವರು ಮಹಜರ್ ಪ್ರತಿ ಮತ್ತು ಪ್ರಥಮ ವರ್ತಮಾನ ವರದಿ, ಜಪ್ತಿ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುವುದರಿಂದ ಈ ವಾಹನದಲ್ಲಿ ಬೀಟೆ ನಾಟಾವನ್ನು ಅಕ್ರಮವಾಗಿ ಸಾಗಿಸಿರುವುದು ಸಾಬೀತಾಗಿರುತ್ತದೆ. ಈ ವಾಹನದ ಬಗ್ಗೆ ಗೆಜೆಟ್ ಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿ 30 ದಿನಗಳಿಗಿಂತಲೂ ಹೆಚ್ಚು ಕಾಲವಾಗಿದ್ದರೂ ವಾಹನ ಮಾಲೀಕರಾಗಲೀ ಅಥವಾ ಅವರ ಪ್ರತಿನಿಧಿಗಳಾಗಲೀ ವಾಹನ

ಬಿಡಿಸಿಕೊಳ್ಳಲು ಈ ನ್ಯಾಯಾಲಯಕ್ಕೆ ಕ್ಲೈಮು ಅರ್ಜಿ ಸಲ್ಲಿಸಿರುವುದಿಲ್ಲ. ಆದ್ದರಿಂದ ವಾಹನ ಮತ್ತು ಬೀಟೆ ನಾಟಾಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಅಭಿಯೋಜಕರ ವಾದವನ್ನು ಕೇಳಿ, ಈ ವಾಹನದ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿರುತ್ತದೆ. ಈ ಪ್ರಕಟಣೆಯು ರಾಜ್ಯ ಗೆಜೆಟ್‌ನಲ್ಲಿ ಪ್ರಕಟಗೊಂಡು 30 ದಿನಗಳಾದರೂ ಯಾರೂ ಹಕ್ಕು ಬಾಧ್ಯತೆಯ ಅರ್ಜಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದುದ್ದರಿಂದ ಈ ಪ್ರಕರಣದ ವಿದ್ಯಾಮಾನಗಳನ್ನು ಅರಿತು ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ಶ್ರೀ ಮಹೇಶ್ ಬಿ. ಶಿರೂರ್, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು, ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ) ಪ್ರಕಾರ ಹಾಗೂ ಈವರೆಗಿನ ತಿದ್ದುಪಡಿ ಅನುಸಾರ ವಲಯ ಅರಣ್ಯಾಧಿಕಾರಿ, ಸಾಗರ ವಲಯ ಇವರು ಜಪ್ತಿಮಾಡಿದ ವಾಹನ ಮಾರುತಿ ಓಮಿನಿ ನಂ:ಜಿಎ-01-ಎ-6314 (ಛಾಸ್ಸಿಸ್ ನಂ: 884929, ಇಂಜಿನ್ ನಂಬರ್: 660348) ಈ ವಾಹನದಲ್ಲಿ ಕರ್ನಾಟಕ ಸರ್ಕಾರದ ಸಂಪತ್ತು ಆದ ಬೀಟೆ ನಾಟಾ 5=0.392ಎಂ3 ನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿರುತ್ತಾರೆ. ಆದ್ದರಿಂದ ಮಾರುತಿ ಓಮಿನಿ ನಂ: ಜಿಎ-01-ಎ-6314 (ಛಾಸ್ಸಿಸ್ ನಂ: 884929, ಇಂಜಿನ್ ನಂಬರ್: 660348) ಮತ್ತು ಈ ವಾಹನದಲ್ಲಿದ್ದ ಬೀಟೆ ನಾಟಾ 5=0.392ಎಂ3 ನ್ನು ಅಂತಿಮವಾಗಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಪರಿಶೀಲಿಸಿ ದಿ: 07-03-2009ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30 (ಮೂವತ್ತು) ದಿನಗಳೊಳಗಾಗಿ ಯಾರೂ ಈ ನ್ಯಾಯಾಲಯಕ್ಕೆ ಹಕ್ಕುಬಾಧ್ಯತೆಯ ಅರ್ಜಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ
ಪಿ.ಆರ್.300 ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ನ್ಯಾಯಾಲಯದಲ್ಲಿ
ಬಿ3:ಅಮೊ:ವಾಹನ-04/08-09, ದಿನಾಂಕ:7ನೇ ಮಾರ್ಚ್, 2009

ಉಪಸ್ಥಿತರು : ಶ್ರೀ ಮಹೇಶ್ ಬಿ. ಶಿರೂರ್ ಭಾ.ಅ.ಸೇ.,
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

ಫಿರ್ಯಾಧಿದಾರರು : ವಲಯ ಅರಣ್ಯಾಧಿಕಾರಿ, ಕಾರ್ಗಲ್ ವಲಯ, ಕಾರ್ಗಲ್.
(ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)

ಆರೋಪಿಗಳು : (1) ಮಂಜುನಾಥ (2) ಎಂ. ಗಣೇಶ (3) ಜಯಂತ

ಬಾಧ್ಯತೆದಾರರು : ಯಾರೂ ಹಕ್ಕುಬಾಧ್ಯತೆಯ ಅರ್ಜಿ ಸಲ್ಲಿಸಿಲ್ಲ.

ಪ್ರಸ್ತಾವನೆ:

ದಿ:30-04-2008ರಂದು ಹೆನ್ನಿಯಿಂದ ಭರಣಿಗೆ ಸೈಜ್. ನಾಟಾಗಳನ್ನು ಜಿಎ-02 ಎ-2990ರಲ್ಲಿ ಅಕ್ರಮವಾಗಿ ಸಾಗರಕ್ಕೆ ಸಾಗಿಸುತ್ತಿದ್ದಾರೆಂದು ವಲಯ ಅರಣ್ಯಾಧಿಕಾರಿ, ಕಾರ್ಗಲ್ ಮತ್ತು ಸಿಬ್ಬಂದಿಯವರಿಗೆ ಬಂದ ಖಚಿತ ವರ್ತಮಾನದ ಮೇರೆಗೆ ಸಾಗರ ತಾಲ್ಲೂಕು ಭಾರಂಗಿ ಹೋಬಳಿ ತಲಕಳಲೆ ಗ್ರಾಮದ ಬ್ರಿಡ್ಜ್ ಕ್ಯಾಂಪ್ ಹತ್ತಿರ ಕಣಿಕಾರ್‌ಗೆ ಹೋಗುವ ರಸ್ತೆಯು ಬಳಿ ಕಾಯುತ್ತಿರುವಾಗ ಬ್ರಿಡ್ಜ್ ಗೇಟ್ ಕಡೆಯಿಂದ ಒಂದು ಮಾರುತಿ ಓಮಿನಿ ವಾಹನವು ಎಸ್.ವಿ.ಪಿ. ಜೋಗ್‌ಫಾಲ್ಸ್ ಕಡೆಯಿಂದ ಬರುತ್ತಿರುವುದನ್ನು ದೂರದಿಂದಲೇ ಗಮನಿಸಿ ವಾಹನ ನಿಲ್ಲಿಸಲು ಸೂಚಿಸಿದಾಗ ವಾಹನವನ್ನು ಸ್ವಲ್ಪ ದೂರ ಹೋಗಿ ನಿಲ್ಲಿಸಿ ವಾಹನದಲ್ಲಿದ್ದ ಆಸಾಮಿಗಳು ಓಡಲಾರಂಭಿಸಿದರು. ಇಲಾಖೆಯ ಸಿಬ್ಬಂದಿ ಅವರನ್ನು ಹಿಡಿಯಲು ಬೆನ್ನಟ್ಟಿದರೂ ಕೈಗೆ ಸಿಗದೆ ಕಾಡಿನಲ್ಲಿ ಓಡಿ ಪರಾರಿಯಾಗಿರುತ್ತಾರೆ. ಓಡಿಹೋದವರನ್ನು ಗುರುತಿಸಲಾಗಿ (1)ನೇ ಆಸಾಮಿ ಮಂಜುನಾಥ ಮಹದೇವ ನಾಯ್ಕ ಬಿನ್ ಮಹದೇವ ನಾಯ್ಕ, 26 ವರ್ಷ, ಹಿರೇಹೆನ್ನಿ, ಜೋಗ ಅಂಚೆ, ಸಾಗರ ತಾ॥ (2)ನೇ ಗಣೇಶ ಬಿನ್ ಮುನಿರತ್ನಂ, 38 ವರ್ಷ, ವಡನ್‌ಬೈಲು ವಾಸಿ, ಕೆಪಿಸಿ ಮೆಕ್ಯಾನಿಕಲ್ ಹೆಲ್ಪರ್, ಜೋಗ ಅಂಚೆ, ಸಾಗರ ತಾ॥ (3) ಜಯಂತ ಬಿನ್ ಮಹದೇವ 24 ವರ್ಷ, ಕೂಲಿ ಕೆಲಸ, ಹಿರೇಹೆನ್ನಿ, ಜೋಗ ಅಂಚೆ, ಸಾಗರ ತಾ॥ ಎಂಬುದಾಗಿ ತಿಳಿದುಬಂದಿರುತ್ತದೆ. ನಂತರ ವಾಹನವನ್ನು ಪರಿಶೀಲಿಸಿ ನೋಡಿದಾಗ ಕಡುನೀಲಿ ಬಣ್ಣದ ಮಾರುತಿ ಓಮಿನಿ ಜಿಎ-02-ಎ-2990, ಛಾಸ್ಸಿಸ್ ನಂ: 943763, ಇಂಜಿನ್ ನಂ: 868943 ಆಗಿದ್ದು, ವಾಹನದೊಳಗೆ ಭರಣಿಗೆ ಸೈಜ್ 18=0.369ಎಂ3 ಆಳತೆಯಿದ್ದು, ಅವುಗಳಿಗೆ ಕ್ರಮ ಸಂಖ್ಯೆ ನೀಡಿ, ಇಲಾಖಾ ಛಾಪಾ ಕೆಎಸ್‌ಎಫ್‌ಡಿ ಜಿ-14-ಇಇ ಗುರುತು ಹೊಡೆದು ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತುವರದಿಯೊಂದಿಗೆ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಇಲಾಖಾ ಪರ ಜಪ್ತುಮಾಡಿ ಕರ್ನಾಟಕ ಅರಣ್ಯ ಕಾಯ್ದೆ 1963

ಸೆಕ್ಷನ್ 24, 62, 71(ಎ), 50, 80 ಮತ್ತು ಕರ್ನಾಟಕ ಅರಣ್ಯ ಕಾನೂನು 1969ರ ಉಪನಿಯಮ 144, 165ರ ಪ್ರಕಾರ ಕಾರ್ಗಲ್ ವಲಯದ ಅರಣ್ಯ ಮೊಕದ್ದಮೆ ಸಂಖ್ಯೆ: 04/08–09ನ್ನು ದಾಖಲಿಸಿ ನಂತರ ವಾಹನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ನಂತರ ಈ ವಾಹನವನ್ನು ಸರ್ಕಾರಿ ನಾಟಾ ಸಂಗ್ರಹಾಲಯದಲ್ಲಿರುವ ವಾಹನ ಶೆಡ್ಡಿನಲ್ಲಿ ಸುರಕ್ಷತೆಗಾಗಿ ಇಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ದಿಗೆ ಕೊಡಲು ದಿ: 07–08–2008ರಂದು ಆದೇಶವಾಗಿದೆ.

ಈ ವಾಹನದ ಬಿ ಪ್ರತಿಯನ್ನು ಈ ನ್ಯಾಯಾಲಯಕ್ಕೆ ಒದಗಿಸುವಂತೆ ಈ ನ್ಯಾಯಾಲಯದ ಪತ್ರ ಸಂಖ್ಯೆ:ಬಿ3: ಅಮೊ:ವಾಹನ–04/08–09 ದಿ:16–10–2008ರಂದು ಡೈರೆಕ್ಟರ್ ಆಫ್ ಟ್ರಾನ್ಸ್‌ಪೋರ್ಟ್ ಕಮಿಷನರ್, ಪಣಜಿ, ಗೋವಾ ರವರಿಗೆ ನೊಂದಣಿ ಅಂಚೆ ಮೂಲಕ ಪತ್ರ ಬರೆದು ಕೋರಲಾಯಿತು. ಅದರಂತೆ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಟ್ರಾನ್ಸ್‌ಪೋರ್ಟ್, ಮಾರ್ಗೋವ ಇವರು ಪತ್ರ ಸಂಖ್ಯೆ:SG/ADT/(S)RGN/2008/1188 ದಿ:31–10–2008ರಲ್ಲಿ ಈ ವಾಹನದ ಬಿ ಪ್ರತಿ ಸಲ್ಲಿಸಿರುತ್ತಾರೆ ಮತ್ತು ಈ ವಾಹನದ ಸಿ.ಸಿ.ಯನ್ನು ದಿ:20–02–2008ರಂದು ಆರ್.ಟಿ.ಓ. ಸಾಗರ ಇವರಿಗೆ ವರ್ಗಾಯಿಸಿರುತ್ತದೆಂದು, ರೀ ರಿಜಿಸ್ಟ್ರೇಶನ್ ಬಗ್ಗೆ ಎಂ. ಗಣೇಶ ಬಿನ್ ಮುನಿರತ್ನಂ, ಜೋಗ ಫಾಲ್ಸ್, ಸಾಗರ, ಕರ್ನಾಟಕ ಇವರ ಹೆಸರಿಗೆ ನೊಂದಣಿ ಮಾಡಲು ಕಳುಹಿಸಲಾಗಿದೆಯೆಂದು ತಿಳಿಸಿರುತ್ತಾರೆ. ಅದರಂತೆ ಈ ನ್ಯಾಯಾಲಯದ ಬಿ3:ಅಮೊ:ವಾಹನ–04/08–09 ದಿ:11–11–2008ರಂದು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ, ಸಾಗರ ಇವರಿಗೆ ಪತ್ರ ಬರೆದು ಕೋರಲಾಯಿತು. ಸಾಗರದ ಸಾರಿಗೆ ಅಧಿಕಾರಿಯು ತಮ್ಮ ಕಛೇರಿ ಪತ್ರ ಸಪ್ರಾಸಾಅ: ಸಾಗರ:ಆರ್‌ಜಿಎನ್:ಟಿಆರ್/08–09 ದಿ: 18–11–2008ರಂದು ನ್ಯಾಯಾಲಯಕ್ಕೆ ಪತ್ರ ಬರೆದು ಈ ವಾಹನದ ನೊಂದಣಿ ಯಾರ ಹೆಸರಿನಲ್ಲಿಯೂ ಈ ಕಛೇರಿಯಲ್ಲಿ ಆಗಿಲ್ಲವೆಂದು ತಿಳಿಸಿರುತ್ತಾರೆ. ಮಾರ್ಗೋವಾದಿಂದ ಬಂದ ಬಿ ಪ್ರತಿಯಲ್ಲಿ ನಮೂದಿಸಿದ ಆರ್.ಸಿ. ಮಾಲೀಕರಾದ ಶ್ರೀ ಆಗ್ನೆಲೊ ಗೊನ್ಸಾಲ್ವಿಸ್ ಮನೆ ನಂ: 52, ಕಾಂಬೋ, ಮಾರ್ಗೋವ, ಗೋವಾ ರಾಜ್ಯ ಇವರಿಗೆ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 71(ಬಿ)(1) ಪ್ರಕಾರ ಕಾರಣ ಕೇಳಿ ಪತ್ರವನ್ನು ದಿ:01–12–2008ರಂದು ನೊಂದಣಿ ಅಂಚೆ ಮೂಲಕ ಜಾರಿಮಾಡಿದ್ದು ಸ್ವೀಕೃತಿ ಈ ನ್ಯಾಯಾಲಯಕ್ಕೆ ಬಂದಿರುತ್ತದೆ. ಆದರೆ ಆರ್.ಸಿ. ಮಾಲೀಕರು ಇಲ್ಲಿಯವರೆವಿಗೂ ಈ ಕಾರಣ ಕೇಳಿ ಪತ್ರಕ್ಕೆ ಉತ್ತರ ನೀಡಿರುವುದಿಲ್ಲ.

ಈ ನಡುವೆ ಈ ವಾಹನದ ಬಗ್ಗೆ ಸಂಬಂಧಪಟ್ಟ ಆರ್.ಸಿ. ಮಾಲೀಕರು ದಾಖಲೆಗಳನ್ನು ಹಾಜರ್ಪಡಿಸಲು 30 ದಿನಗಳ ಕಾಲಾವಕಾಶ ನೀಡಿ ಈ ನ್ಯಾಯಾಲಯದಿಂದ ಪ್ರಕಟಣೆಯನ್ನು ಬಿ3:ಅಮೊ:ವಾಹನ–01/08–09 ದಿ: 03–07–2008ರಂದು ಹೊರಡಿಸಿ ಪ್ರತಿಯನ್ನು ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ ಬೆಂಗಳೂರು ಮತ್ತು ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯ ಪತ್ರ ವಿಭಾಗ, ಬೆಂಗಳೂರು ಇವರಿಗೆ ಕಳುಹಿಸಿ ರಾಜ್ಯ ಮಟ್ಟದ ಪ್ರಚಲಿತ ದೈನಿಕ ಪತ್ರಿಕೆಯಲ್ಲಿ ಪ್ರಕಟಿಸಿ ಪ್ರತಿಯನ್ನು ಕಳುಹಿಸಿಕೊಡಲು ಕೋರಲಾಗಿತ್ತು. ಅದರಂತೆ ಈ ಪ್ರಕಟಣೆಯು ದಿ: 31–07–08ರಂದು ಗೆಜೆಟ್ ಪತ್ರಿಕೆಯಲ್ಲಿ ಮತ್ತು ದಿ: 19–07–2008ರಂದು ಮಲೆನಾಡು ಮಿತ್ರ ದಿನಪತ್ರಿಕೆಯಲ್ಲಿ ಪ್ರಕಟಗೊಂಡು 30 ದಿನಗಳಾದರು ವಾಹನ ಮಾಲೀಕರಾಗಲೀ ಅಥವಾ ಅವರ ಪರ ವಕೀಲರಾಗಲೀ ಈ ನ್ಯಾಯಾಲಯಕ್ಕೆ ಹಕ್ಕುಬಾಧ್ಯತೆಯ ಅರ್ಜಿ ಸಲ್ಲಿಸಿರುವುದಿಲ್ಲ.

ಸಹಾಯಕ ಸರ್ಕಾರಿ ಅಭಿಯೋಜಕರು ದಿ: 07–03–2009ರಂದು ವಾದ ಮಂಡಿಸಿ ಈ ವಾಹನದಲ್ಲಿ ಭರಣಿಗೆ ಸೈಜುಗಳನ್ನು ಸಾಗಿಸಿದ ಬಗ್ಗೆ ವಲಯ ಅರಣ್ಯಾಧಿಕಾರಿ, ಕಾರ್ಗಲ್ ವಲಯ, ಕಾರ್ಗಲ್ ಇವರು ಮಹಜರ್ ಪ್ರತಿ ಮತ್ತು ಪ್ರಥಮ ವರ್ತಮಾನ ವರದಿ, ಜಪ್ತಿ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುವುದರಿಂದ ಈ ವಾಹನದಲ್ಲಿ ಭರಣಿಗೆ ಸೈಜುಗಳನ್ನು ಅಕ್ರಮವಾಗಿ ಸಾಗಿಸಿರುವುದು ಸಾಬೀತಾಗಿರುತ್ತದೆ. ಈ ವಾಹನದ ಬಗ್ಗೆ ಗೆಜೆಟ್ ಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿ 30 ದಿನಗಳಿಗಿಂತಲೂ ಹೆಚ್ಚು ಕಾಲವಾಗಿದ್ದರೂ ವಾಹನ ಮಾಲೀಕರಾಗಲೀ ಅಥವಾ ಅವರ ಪ್ರತಿನಿಧಿಗಳಾಗಲೀ ಯಾರೂ ಈ ವಾಹನದಲ್ಲಿ ಅಕ್ರಮವಾಗಿ ಅರಣ್ಯ ಉತ್ಪನ್ನ ಸಾಗಾಣಿಕೆ ಮಾಡದಿರುವ ಬಗ್ಗೆ ಈ ನ್ಯಾಯಾಲಯಕ್ಕೆ ಯಾವುದೇ ಸಾಕ್ಷಾಧಾರಗಳನ್ನು ಹಾಜರ್ಪಡಿಸಿರುವುದಿಲ್ಲ. ಆದ್ದರಿಂದ ವಾಹನ ಮತ್ತು ಭರಣಿಗೆ ಸೈಜ್‌ಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಅಭಿಯೋಜಕರ ವಾದವನ್ನು ಕೇಳಿ, ಈ ವಾಹನದ ಬಗ್ಗೆ ಆರ್.ಸಿ. ಮಾಲೀಕರಿಗೆ ನೋಟಿಸ್ ನೀಡಿರುತ್ತದೆ ಮತ್ತು ಪತ್ರಿಕಾ ಪ್ರಕಟಣೆ ಹೊರಡಿಸಿರುತ್ತದೆ. ಈ ಪ್ರಕಟಣೆಯು ರಾಜ್ಯ ಗೆಜೆಟ್‌ನಲ್ಲಿ ಪ್ರಕಟಗೊಂಡು 30 ದಿನಗಳಾದರೂ ಯಾರೂ ಹಕ್ಕು ಬಾಧ್ಯತೆಯ ಅರ್ಜಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದುದ್ದರಿಂದ ಈ ಪ್ರಕರಣದ ವಿದ್ಯಾಮಾನಗಳನ್ನು ಅರಿತು ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಆದೇಶ

ಮೇಲ್ಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ಶ್ರೀ ಮಹೇಶ್ ಬಿ. ಶಿರೂರ್, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು, ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ) ಪ್ರಕಾರ ಹಾಗೂ ಈವರೆಗಿನ ತಿದ್ದುಪಡಿ ಅನುಸಾರ ವಲಯ ಅರಣ್ಯಾಧಿಕಾರಿ, ಕಾರ್ಗಲ್ ವಲಯ ಇವರು ಜಪ್ತಿಮಾಡಿದ ಮಾರುತಿ ಓಮಿನಿ ಜಿಎ–02–ಎ–2990 (ಛಾಸ್ಸಿಸ್ ನಂ: 943763, ಇಂಜಿನ್ ನಂ: 868943) ಈ ವಾಹನದಲ್ಲಿ

ಕರ್ನಾಟಕ ಸರ್ಕಾರದ ಸಂಪತ್ತು ಆದ ಭರಣಿಗೆ ಸೈಜ್ 18=0.369ಎಂ3 ನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿರುತ್ತಾರೆ. ಆದ್ದರಿಂದ ಮಾರುತಿ ಓಮಿನಿ ಜಿಎ-02-ಎ-2990 (ಛಾಸ್ಸಿಸ್ ನಂ: 943763, ಇಂಜಿನ್ ನಂ: 868943) ಮತ್ತು ಈ ವಾಹನದಲ್ಲಿದ್ದ ಭರಣಿಗೆ ಸೈಜ್ 18=0.369ಎಂ3 ನ್ನು ಅಂತಿಮವಾಗಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರವಲ್ಲಿ ಮುದ್ರಿಸಿ, ನಂತರ ಸರಿಪಡಿಸಿ ದಿ: 07-03-2009ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30 (ಮೂವತ್ತು) ದಿನಗಳೊಳಗಾಗಿ ಯಾರೂ ಈ ನ್ಯಾಯಾಲಯಕ್ಕೆ ಹಕ್ಕುಬಾಧ್ಯತೆಯ ಅರ್ಜಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ
ಪಿ.ಆರ್.335 ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ನ್ಯಾಯಾಲಯದಲ್ಲಿ
ಬಿ3:ಅಮೊ:ವಾಹನ-16/08-09, ದಿನಾಂಕ:7ನೇ ಮಾರ್ಚ್, 2009

ಉಪಸ್ಥಿತರು : ಶ್ರೀ ಮಹೇಶ್ ಬಿ. ಶಿರೂರ್ ಭಾ.ಅ.ಸೇ.,
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

ಫಿರ್ಯಾದಿದಾರರು : ವಲಯ ಅರಣ್ಯಾಧಿಕಾರಿ, ಶಿಕಾರಿಪುರ ವಲಯ, ಶಿಕಾರಿಪುರ.
(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)

ಆರೋಪಿಗಳು : 1) ಶಂಕರ ನಾಯ್ಕ (2) ಮಾಬುಲಿ

ಬಾಧ್ಯತೆದಾರರು : ಯಾರೂ ಹಕ್ಕುಬಾಧ್ಯತೆಯ ಅರ್ಜಿ ಸಲ್ಲಿಸಿರುವುದಿಲ್ಲ.

ಪ್ರಸ್ತಾವನೆ:

ದಿನಾಂಕ:30-08-2008ರಂದು ವಲಯ ಅರಣ್ಯಾಧಿಕಾರಿ, ಶಿಕಾರಿಪುರ ವಲಯ ಮತ್ತು ಸಿಬ್ಬಂದಿಯವರಿಗೆ ಬಂದ ಖಚಿತ ವರ್ತಮಾನದ ಮೇರೆಗೆ ಶಿಕಾರಿಪುರ ಕಛೇರಿಯಲ್ಲಿ ಸಂಜೆ 5-30ಕ್ಕೆ ಬಿಟ್ಟು ಸಂಜೆ 5-45ಕ್ಕೆ ಶಿಕಾರಿಪುರ ತಾಲ್ಲೂಕು ಶಿಕಾರಿಪುರದಿಂದ ಮಾಸೂರಿಗೆ ಹೋಗುವ ಪಿಡಬ್ಲ್ಯೂಡಿ ರಸ್ತೆಯ ನೆಲವಾಗಿಲು ಗ್ರಾಮದ ಹತ್ತಿರ ಕಾಯುತ್ತಿರುವಾಗ ಶಿಕಾರಿಪುರ ಕಡೆಯಿಂದ ಒಂದು ಬಿಳಿಯ ಮಾರುತಿ ಓಮಿನಿ ನಂ: ಕೆಎ-14-ಎಂ-4018ನ್ನು ನಿಲ್ಲಿಸಲು ಪ್ರಯತ್ನಿಸಿದಾಗ ಆ ವಾಹನವನ್ನು ನಿಲ್ಲಿಸದೇ ಮುಂದೆ ವೇಗವಾಗಿ ಹೋದಾಗ ಇಲಾಖಾ ವಾಹನದಿಂದ ಬೆನ್ನಟ್ಟಿ, ಅಡ್ಡವಾಗಿ ನಿಲ್ಲಿಸಿ, ವಾಹನ ಪರಿಶೀಲಿಸಿದಾಗ ವಾಹನದಲ್ಲಿ 2 ಜನ ಇರುವುದು ಕಂಡುಬಂದಿದ್ದು, ಮೊದಲನೆಯ ಅಸಾಮಿ ಶಂಕರನಾಯ್ಕ ಬಿನ್ ಉಮೇಶ್‌ನಾಯ್ಕ 39 ವರ್ಷ, ವಿನಾಯಕ ನಗರ, ಶಿಕಾರಿಪುರ ಎಂದು ಮತ್ತು ಈ ವಾಹನ ನನ್ನದೆಂದು, ಇದರ ದಾಖಲೆಗಳು ಮನೆಯಲ್ಲಿವೆಯೆಂದು ತಿಳಿಸಿದನು. ಎರಡನೇ ಅಸಾಮಿ ಮಾಬೂಲಿ ಬಿನ್ ಫಕ್ರುಸಾಬ್, 26 ವರ್ಷ, ಈಸೂರು ಗ್ರಾಮದ ವಾಸಿ ಎಂದು ಹಾಗೂ ಬೀಟೆ ಸೈಜ್‌ಗಳು ನನಗೆ ಸೇರಿರುವುದು ಎಂದು, ಇವನ್ನು ಬಾಬುಸಾಬ್‌ಬಿನ್ ಫೀರುಸಾಬ್, ಮೇದೂರು ಗ್ರಾಮ, ಹಿರೇಕೆರೂರು ತಾಲ್ಲೂಕು ಇವರಿಗೆ ತೆಗೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿದನು. ವಾಹನದ ಛಾಸ್ಸಿಸ್ ನಂ: ST-91-IN-423117 ಇದ್ದು, ವಾಹನದ ಚಾಲಕ ಹಾಗೂ ಮಾಲೀಕನೆಂದು ತಿಳಿಸಿದ ಶಂಕರನಾಯ್ಕನು ಈ ವಾಹನವು 2000ರ ಮಾಡೆಲ್ ಎಂದು ತಿಳಿಸಿದನು. ಈ ವಾಹನದಲ್ಲಿ ಒಟ್ಟು 60 ಬೀಟೆ ಸೈಜ್ 0.160ಎಂ3 ಇದ್ದು, ಈ ಬೀಟೆ ಸೈಜ್ ಸಾಗಿಸಲು ರಹದಾರಿ ಇಲ್ಲವೆಂದು ಚಾಲಕ ತಿಳಿಸಿದನು. ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ ಈ ನಾಟಾಗಳಿಗೆ KNFD F-19-EE ಎಂದು ಛಾಪಾ ಹೊಡೆದು, ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತು ವರದಿಯೊಂದಿಗೆ ವಾಹನ, ಅಸಾಮಿ ಮತ್ತು ಅರಣ್ಯ ಉತ್ಪನ್ನವನ್ನು ಇಲಾಖಾ ಪರ ಜಪ್ತುಮಾಡಿ ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 62 71(ಎ), 104(ಎ) ಮತ್ತು ಕರ್ನಾಟಕ ಅರಣ್ಯ ಕಾನೂನು 1969 ಉಪನಿಯಮ 144, 165ರ ಪ್ರಕಾರ ಶಿಕಾರಿಪುರ ವಲಯದ ಅ.ಮೊ.ಸಂ. 31/08-09ನ್ನು ದಾಖಲಿಸಿ, ಅಸಾಮಿಯನ್ನು ಜೆ.ಎಂ.ಎಫ್.ಸಿ. ಶಿಕಾರಿಪುರಕ್ಕೆ ಒಪ್ಪಿಸಿ ನಂತರ ವಾಹನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ನಂತರ ಈ ವಾಹನವನ್ನು ಸುರಕ್ಷತೆಗಾಗಿಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ದಿಗೆ ಕೊಡಲು ದಿ:01-09-2008ರಂದು ಆದೇಶವಾಗಿರುತ್ತದೆ.

ನಂತರ ಈ ವಾಹನದ ಬಿ ಪ್ರತಿಯನ್ನು ಈ ನ್ಯಾಯಾಲಯಕ್ಕೆ ಒದಗಿಸುವಂತೆ ಈ ನ್ಯಾಯಾಲಯದ ಪತ್ರ ಸಂ: ಬಿ3:ಅಮೊ:ವಾಹನ-16/08-09 ದಿ: 06-09-2008ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿ, ಶಿವಮೊಗ್ಗ ರವರಿಗೆ ಪತ್ರ ಬರೆದು ಕೋರಲಾಯಿತು. ಪ್ರಾದೇಶಿಕ ಸಾರಿಗೆ ಅಧಿಕಾರಿ, ಶಿವಮೊಗ್ಗ ಇವರ ಪತ್ರ ಸಂಖ್ಯೆ:ಪ್ರಾಸಾಅ:ಶಿ:ಕೆಎ-14-ಎಂ-4018/08-09 ದಿ:11-09-08ರ ಪತ್ರದಲ್ಲಿ ಈ ವಾಹನದ ಬಿ ಪ್ರತಿಯನ್ನು ಒದಗಿಸಿ ಸಿ.ಸಿ.ಯನ್ನು ಚಿಕ್ಕಮಗಳೂರು ಪ್ರಾದೇಶಿಕ ಕಛೇರಿಗೆ

ವರ್ಗಾಯಿಸಿರುವುದಾಗಿ ತಿಳಿಸಿರುತ್ತಾರೆ. ಅದರಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿ, ಚಿಕ್ಕಮಗಳೂರು ಇವರಿಗೆ ಬಿ3:ಅಮೊ:ವಾಹನ-16/08-09 ದಿ:25-10-2008ರಂದು ಶಿವಮೊಗ್ಗರವರ ಪತ್ರ ಅಡಕಗೊಳಿಸಿ ಬಿ ಪ್ರತಿ ಒದಗಿಸಲು ಕೋರಿದಂತೆ, ಪ್ರಾದೇಶಿಕ ಸಾರಿಗೆ ಅಧಿಕಾರಿ, ಚಿಕ್ಕಮಗಳೂರು ಇವರ ಪತ್ರ ಸಂಖ್ಯೆ: ಪ್ರಾಸಾಅ:ಚಿಮ:ಕೆಎ-14-ಎಂ-4018/08-09 ದಿ:18-11-2008ರ ಪತ್ರದಲ್ಲಿ ಈ ವಾಹನದ ಬಿ ಪ್ರತಿಯನ್ನು ಒದಗಿಸಿರುತ್ತಾರೆ. ಈ ಬಿ ಪ್ರತಿಯಲ್ಲಿ ನಮೂದಿಸಿದ ಆರ್.ಸಿ. ಮಾಲೀಕರಾದ ಶ್ರೀ ಎಲ್.ಕೆ. ಚಂದ್ರ ಬಿನ್ ಕುಮಾರ್, ಮನೆ ನಂ: 75, ಹಳೇ ಲಕ್ಕವಳ್ಳಿ, ತರಿಕೆರೆ ತಾಲ್ಲೂಕು ಇವರಿಗೆ ಈ ನ್ಯಾಯಾಲಯದಿಂದ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 71(ಬಿ) (1)ರ ಪ್ರಕಾರ ನೋಟಿಸನ್ನು 30 ದಿನಗಳ ಕಾಲಾವಕಾಶ ನೀಡಿ ಈ ವಾಹನದ ದಾಖಲೆಗಳನ್ನು ಹಾಜರ್ಪಡಿಸಲು ಮತ್ತು ಇಲ್ಲವಾದಲ್ಲಿ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದೆಂದು ಮತ್ತು ಆರ್.ಸಿ. ಮಾಲೀಕರು ಉತ್ತರಿಸಬೇಕೆಂದು ದಿ: 01-12-2008ರಂದು ನೋಂದಣಿ ಅಂಚೆ ಮೂಲಕ ಜಾರಿಮಾಡಲಾಯಿತು. ಸ್ವೀಕೃತಿಯಲ್ಲಿ ದಿ: 18-12-2008ರಂದು ಆರ್.ಸಿ. ಮಾಲೀಕರು ಈ ನೋಟಿಸನ್ನು ಪಡೆದ ಬಗ್ಗೆ ನಮೂದಿಸಿರುತ್ತದೆ.

ಈ ನಡುವೆ ಈ ವಾಹನದ ಹೆಚ್ಚಿನ ಪ್ರಚಾರಕ್ಕಾಗಿ 30 ದಿನಗಳ ಕಾಲಾವಕಾಶ ನೀಡಿ ಈ ನ್ಯಾಯಾಲಯದಿಂದ ಪ್ರಕಟಣೆಯನ್ನು ಬಿ3:ಅಮೊ:ವಾಹನ-09/08-09 ದಿ: 08-09-2008ರಂದು ಹೊರಡಿಸಿ ಪ್ರತಿಯನ್ನು ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ ಬೆಂಗಳೂರು ಮತ್ತು ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯ ಪತ್ರ ವಿಭಾಗ, ಬೆಂಗಳೂರು ಇವರಿಗೆ ಕಳುಹಿಸಿ ರಾಜ್ಯ ಮಟ್ಟದ ಪ್ರಚಲಿತ ದೈನಿಕ ಪತ್ರಿಕೆ ಮತ್ತು ಗೆಜೆಟ್‌ನಲ್ಲಿ ಪ್ರಕಟಿಸಿ ಪ್ರತಿಯನ್ನು ಕಳುಹಿಸಿಕೊಡಲು ಕೋರಲಾಗಿತ್ತು. ಅದರಂತೆ ಈ ಪ್ರಕಟಣೆಯು ದಿ: 18-09-08ರಂದು ಗೆಜೆಟ್ ಪತ್ರಿಕೆಯಲ್ಲಿ ಮತ್ತು ದಿ: 27-10-2008ರಂದು ಉದಯವಾಣಿ ದಿನಪತ್ರಿಕೆಯಲ್ಲಿ ಪ್ರಕಟಗೊಂಡು 30 ದಿನಗಳಾದರು ವಾಹನ ಮಾಲೀಕರಾಗಲೀ ಅಥವಾ ಅವರ ಪರ ವಕೀಲರಾಗಲೀ ಈ ನ್ಯಾಯಾಲಯಕ್ಕೆ ಹಕ್ಕುಬಾಧ್ಯತೆಯ ಅರ್ಜಿ ಸಲ್ಲಿಸಿರುವುದಿಲ್ಲ.

ಸಹಾಯಕ ಸರ್ಕಾರಿ ಅಭಿಯೋಜಕರು ದಿ: 07-03-2009ರಂದು ವಾದ ಮಂಡಿಸಿ ಈ ವಾಹನವಲ್ಲಿ ಬೀಟೆ ಸೈಜುಗಳನ್ನು ಸಾಗಿಸಿದ ಬಗ್ಗೆ ವಲಯ ಅರಣ್ಯಾಧಿಕಾರಿ, ಶಿಕಾರಿಪುರ ವಲಯ, ಶಿಕಾರಿಪುರ ಇವರು ಮಹಜರ್ ಪ್ರತಿ ಮತ್ತು ಪ್ರಥಮ ವರ್ತಮಾನ ವರದಿ, ಜಪ್ತಿ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುವುದರಿಂದ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಅಕ್ರಮವಾಗಿ ಸಾಗಿಸಿರುವುದು ಸಾಬೀತಾಗಿರುತ್ತದೆ. ಆರ್.ಸಿ. ಮಾಲೀಕರಿಗೆ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 71(ಬಿ) (1) ಪ್ರಕಾರ ನೋಟಿಸ್ ಜಾರಿಮಾಡಲಾಗಿದೆ. ಅವರಿಂದ ಯಾವುದೇ ಉತ್ತರ ಈ ನ್ಯಾಯಾಲಯಕ್ಕೆ ಸ್ವೀಕೃತವಾಗಿಲ್ಲ. ಆದ್ದರಿಂದ ಅರಣ್ಯ ಉತ್ಪನ್ನಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಅಭಿಯೋಜಕರ ವಾದವನ್ನು ಕೇಳಿ ಕರ್ನಾಟಕ ಅರಣ್ಯ ಕಾಯ್ದೆ 1963 ಉಪನಿಯಮ 71(ಬಿ)(1)ರ ಪ್ರಕಾರ ಆರ್.ಸಿ. ಮಾಲೀಕರಿಗೆ ನೋಟಿಸ್ ಜಾರಿ ಮಾಡಿ 30 ದಿನಗಳು ಕಳೆದರೂ ವಾಹನ ಮಾಲೀಕರು ಹಕ್ಕು ಬಾಧ್ಯತೆಯ ಅರ್ಜಿಯನ್ನು ಮತ್ತು ಉತ್ತರವನ್ನು ಸಹಾ ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದುದ್ದರಿಂದ ಈ ಪ್ರಕರಣದ ವಿದ್ಯಾಮಾನಗಳನ್ನು ಅರಿತು ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಶ್ರೀ ಮಹೇಶ್ ಬಿ. ಶಿರೂರ್, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು, ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ)ಪ್ರಕಾರ ಹಾಗೂ ಈವರೆಗಿನ ತಿದ್ದುಪಡಿ ಅನುಸಾರ ವಲಯ ಅರಣ್ಯಾಧಿಕಾರಿ, ಶಿಕಾರಿಪುರ ವಲಯ, ಶಿಕಾರಿಪುರ ಇವರು ಜಪ್ತು ಮಾಡಿದ ವಾಹನ ಮಾರುತಿ ಓಮಿನಿ ನಂ: ಕೆಎ-14-ಎಂ-4018 (ಛಾಸ್ಸಿಸ್ ನಂ: ST-91-IN-423117 ಇಂಜಿನ್ ನಂಬರ್: F-8-BIN-2065002) ರಲ್ಲಿ ಕರ್ನಾಟಕ ಸರ್ಕಾರದ ಸಂಪತ್ತು ಆದ ಬೀಟೆ ಸೈಜ್ 0.160ಎಂ3 ನ್ನು ಕಳ್ಳ ಸಾಗಾಣಿಕೆ ಮಾಡಿರುವುದರಿಂದ ವಾಹನ ಮಾರುತಿ ಓಮಿನಿ ನಂ: ಕೆಎ-14-ಎಂ-4018 (ಛಾಸ್ಸಿಸ್ ನಂ:ST-91-IN-423117 ಇಂಜಿನ್ ನಂಬರ್:F-8-BIN-2065002) ಮತ್ತು ಬೀಟೆ ಸೈಜ್ 0.160ಎಂ3 ನ್ನು ಅಂತಿಮವಾಗಿ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಸರಿಪಡಿಸಿ ದಿನಾಂಕ:07-03-2009 ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30 (ಮೂವತ್ತು) ದಿನಗಳ ಒಳಗಾಗಿ ಯಾರು ಈ ನ್ಯಾಯಾಲಯಕ್ಕೆ ಹಕ್ಕುಬಾಧ್ಯತೆ ಅರ್ಜಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ
ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ

ಪಿ.ಆರ್.336

KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಜೂನ್ ೨೫, ೨೦೦೯ (ಆಷಾಢ ೪, ಶಕ ವರ್ಷ ೧೯೩೧)	ಸಂಚಿಕೆ ೨೬

ಭಾಗ – ೫

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

ಪೊಲೀಸ್ ಅಧೀಕ್ಷಕರ ಕಛೇರಿ, ಕರಾವಳಿ ಕಾವಲು ಪೊಲೀಸ್, ಉಡುಪಿ

ಅಧಿಸೂಚನೆ

ಸಂಖ್ಯೆ:31:ವಾ.ಸಾ.ವಿ:ಕ.ಕಾ.ಪೊ:ಉ:2009–10, ದಿನಾಂಕ: 23ನೇ ಮೇ 2009

ವಿಷಯ: ವಾಹನಗಳ ನಿರುಪಯುಕ್ತಗೊಳಿಸಲಾದ ಟಯರ್, ಟ್ಯೂಬ್, ಬ್ಯಾಟರಿ ಇತ್ಯಾದಿ ಬಿಡಿಭಾಗಗಳನ್ನು ಟೆಂಡರ್ ಕಂ. ಬಹಿರಂಗ ಹರಾಜಿನಲ್ಲಿ ಸಾರ್ವಜನಿಕರಿಗೆ ದಿನಾಂಕ: 28.07.2009 ರಂದು ವಿಲೇವಾರಿ ಮಾಡುವ ಕುರಿತು.

ಉಲ್ಲೇಖ: 1. ಮಹಾನಿರ್ದೇಶಕರು ಮತ್ತು ಪೊಲೀಸ್ ಮಹಾನಿರೀಕ್ಷಕರು, ಕರ್ನಾಟಕ ರಾಜ್ಯ, ಬೆಂಗಳೂರುರವರ ಆದೇಶ ಸಂಖ್ಯೆ:ವಾ.ಸಾ(3)1:1997–08, ದಿ. 04.07.2004.

2. ಸರ್ಕಾರದ ಆದೇಶ ಸಂಖ್ಯೆ:ಹೆಚ್.ಡಿ 198/ಇ.ಎಂ.ವಿ/2000 ಬೆಂಗಳೂರು ದಿನಾಂಕ: 19.06.2003.

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಉಲ್ಲೇಖಿತ ಆದೇಶದಲ್ಲಿ ವಾಹನಗಳ ನಿರುಪಯುಕ್ತಗೊಳಿಸಲಾಗಿರುವ ಟಯರ್, ಟ್ಯೂಬ್, ಬ್ಯಾಟರಿ ಇತ್ಯಾದಿ ಬಿಡಿಭಾಗಗಳನ್ನು ಕರಾವಳಿ ಕಾವಲು ಪೊಲೀಸ್, ಉಡುಪಿ. ಎನ್.ಹೆಚ್. 17, ಬಿ.ಕೆ. ಶೆಟ್ಟಿ ಕಾಂಪೌಂಡ್, ಕಿನ್ನಿಮೂಲ್ಕಿ. ಕಛೇರಿಯ ಆವರಣದಲ್ಲಿ ದಿನಾಂಕ: 28.07.2009 ರಂದು 10.30 ಗಂಟೆಗೆ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು. ಆಸಕ್ತಿಯುಳ್ಳ ಸಾರ್ವಜನಿಕರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಖರೀದಿಸಬಹುದಾಗಿದೆ.

ಟೆಂಡರ್ ಕಂ. ಬಹಿರಂಗ ಹರಾಜನ್ನು ಈ ಕೆಳಗೆ ತಿಳಿಸಿದ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಂತೆ ನಡೆಸಲಾಗುವುದು.

1) ಈ ನಿರುಪಯುಕ್ತ ವಾಹನಗಳ ಟಯರ್, ಟ್ಯೂಬ್, ಬ್ಯಾಟರಿ ಇತ್ಯಾದಿ ಬಿಡಿಭಾಗಗಳನ್ನು ಪೊಲೀಸ್ ಅಧೀಕ್ಷಕರು, ಕರಾವಳಿ ಕಾವಲು ಪೊಲೀಸ್ ಕಛೇರಿ ಉಡುಪಿ ಆವರಣದಲ್ಲಿಟ್ಟಿದ್ದು, ಕಛೇರಿಯ ಯಾವುದೇ ದಿನಗಳಂದು ಸಾರ್ವಜನಿಕರು ನೋಡಬಹುದು.

2) ಹರಾಜಿನಲ್ಲಿ ಭಾಗವಹಿಸಲು ಇಚ್ಚಿಸುವ ಪ್ರತಿಯೊಬ್ಬರು ರೂ.1000/– (ರೂ ಒಂದು ಸಾವಿರಗಳು ಮಾತ್ರ) ಠೇವಣಿ ಹಣವನ್ನು ಹರಾಜಿಗೆ ಮುನ್ನ ನಗದಾಗಿ ಪಾವತಿಸತಕ್ಕದ್ದು. ಅಥವಾ ಪ್ರತೀ ಟೆಂಡರುದಾರರು ರೂ.1000/– (ರೂ. ಒಂದು ಸಾವಿರ ರೂಪಾಯಿಗಳು) ಪೊಲೀಸ್ ಅಧೀಕ್ಷಕರು, ಕರಾವಳಿ ಕಾವಲು ಪೊಲೀಸ್, ಉಡುಪಿ. ಇವರ ಹೆಸರಿನಲ್ಲಿ ತಿಳಿಸಿದ ಡಿಡಿಯನ್ನು ಲಗತ್ತಿಸಬೇಕು. ಹರಾಜಿನಲ್ಲಿ ಭಾಗವಹಿಸುವ ಸಾರ್ವಜನಿಕರೂ ಸಹ ಠೇವಣಿ ಹಣವನ್ನು ಹರಾಜಿಗೆ ಮುಂಚಿತವಾಗಿ ಪಾವತಿ ಮಾಡಿರತಕ್ಕದ್ದು. ಠೇವಣಿ ಪಾವತಿಸದವರು ಹರಾಜಿನಲ್ಲಿ ಭಾಗವಹಿಸುವಂತಿಲ್ಲ.

3) ಟೆಂಡರುಗಳನ್ನು ಸಲ್ಲಿಸಬಯಸುವ ಸಾರ್ವಜನಿಕರು ಮೊಹರು ಮಾಡಿದ ಲಕೋಟೆಗಳನ್ನು ಪೊಲೀಸ್ ಅಧೀಕ್ಷಕರು, ಕರಾವಳಿ ಕಾವಲು ಪೊಲೀಸ್, ಉಡುಪಿ ಇವರ ವಿಳಾಸಕ್ಕೆ ಲಕೋಟೆಯ ಮೇಲೆ 'ನಿರುಪಯುಕ್ತ ಟಯರ್,

ಟ್ಯೂಬ್, ಬ್ಯಾಟರಿ, ಮತ್ತು ಬಿಡಿ ಭಾಗಗಳಿಗಾಗಿ' ಎಂದು ಸ್ಪಷ್ಟವಾಗಿ ನಮೂದಿಸಿ ಖುದ್ದಾಗಿ ಇಲ್ಲವೇ ಅಂಚೆ ಮೂಲಕ ದಿನಾಂಕ:15.07.2009ರ ಒಳಗಾಗಿ ಈ ಕಛೇರಿಗೆ ತಲುಪುವಂತೆ ಸಲ್ಲಿಸತಕ್ಕದ್ದು.

4) ಟೆಂಡರ್ ಫಾರಂನಲ್ಲಿ ಬಿಡ್ಡು ಮೊತ್ತವನ್ನು ಅಂಕಿ ಮತ್ತು ಅಕ್ಷರ ಎರಡರಲ್ಲಿಯೂ ಸ್ಪಷ್ಟವಾಗಿ ನಮೂದಿಸಿರಬೇಕು ಏನಾದರೂ ತಿದ್ದುಪಡಿ ಮಾಡಿದ್ದಲ್ಲಿ ಟೆಂಡರುದಾರರು ತಮ್ಮ ಪೂರ್ಣ ಸಹಿ ಮಾಡಿ ತಿದ್ದುಪಡಿಯನ್ನು ಧೃಢೀಕರಿಸಬೇಕು.

5) ಟೆಂಡರು ಫಾರಂಗಳನ್ನು ವರ್ಗಾವಣೆ ಮಾಡಲಾಗದು.

6) ಸ್ವೀಕೃತವಾದ ಟೆಂಡರ್ ಲಕೋಟೆಗಳನ್ನು ಪೊಲೀಸ್ ಅಧೀಕ್ಷಕರು, ಕರಾವಳಿ ಕಾವಲು ಪೊಲೀಸ್, ಉಡುಪಿ ಅವರಾಗಲೀ ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿಯಾಗಲೀ ಸಾರ್ವಜನಿಕರ ಸಮ್ಮುಖದಲ್ಲಿ ಕರೆದು ಬಹಿರಂಗಪಡಿಸುವುದು. ಹರಾಜಿನಲ್ಲಿ ದಾಖಲಾದ ಅತೀ ಹೆಚ್ಚಿನ ಬೆಲೆ ಅಥವಾ ಟೆಂಡರಿನಲ್ಲಿ ದಾಖಲಿಸಿದ ಅತಿ ಹೆಚ್ಚಿನ ಬೆಲೆ ಇವೆರಡರಲ್ಲಿ ಅತೀ ಹೆಚ್ಚಿನ ದರ ದಾಖಲಿಸಿದವರನ್ನು ಯಶಸ್ವಿ ಟೆಂಡರ್ ಬಿಡ್‌ದಾರರೆಂದು ಪರಿಗಣಿಸಲಾಗುವುದು.

7) ಯಶಸ್ವಿ ಟೆಂಡರು/ ಬಿಡ್ಡುದಾರರು ಅಂಗೀಕೃತ ಹೆಚ್ಚಿನ ಬೆಲೆಯಲ್ಲಿ ಪೂರ್ತಿ ಹಣವನ್ನು ಹರಾಜಿನ ಸ್ಥಳದಲ್ಲಿ ಹರಾಜಿನ ದಿನವೇ ತುಂಬತಕ್ಕದ್ದು. ಹರಾಜು ಮಾಡಿದವರಿಗೆ ವಾಹನದ ನಿರುಪಯುಕ್ತಗೊಳಿಸಿದ ಟಯರ್ ಟ್ಯೂಬ್ ಬ್ಯಾಟರಿ, ಇತ್ಯಾದಿ ಬಿಡಿಭಾಗಗಳನ್ನು ವಹಿಸಿಕೊಡಲಾಗುವುದು. ಬಿಡ್ಡುದಾರರು ತಮ್ಮ ಸ್ವಂತ ಖರ್ಚಿನಲ್ಲಿ ತೆಗೆದುಕೊಂಡು ಹೋಗುವುದು.

8) ಎಲ್ಲಾ ಹಣವನ್ನು ಪೊಲೀಸ್ ಅಧೀಕ್ಷಕರು, ಕರಾವಳಿ ಕಾವಲು ಪೊಲೀಸ್, ಉಡುಪಿ ಇವರ ಕಛೇರಿಯ ನಗದು ಶಾಖೆಯಲ್ಲಿ ನಗದಾಗಿಯೇ ತುಂಬಬೇಕು. ಚೆಕ್ ಅಥವಾ ಡಿಡಿ ಮೂಲಕ ಹಣ ಸ್ವೀಕರಿಸುವುದಿಲ್ಲ.

9) ಹರಾಜು ಮಾಡಿದ ನಂತರ ಯಶಸ್ವಿಯಾಗದ ಟೆಂಡರು ಬಿಡ್‌ದಾರರ ಠೇವಣಿ ಹಣವನ್ನು ಕೂಡಲೆ ಹಿಂತಿರುಗಿಸಲಾಗುವುದು. ಹರಾಜಿನಲ್ಲಿ ಭಾಗವಹಿಸುವ ಸಾರ್ವಜನಿಕರು ಇಲಾಖಾ ನಿಯಮಗಳಿಗೆ ಬದ್ದರಾಗಿರುತ್ತಾರೆ.

10) ಹರಾಜಿನಲ್ಲಿ ಯಾವುದೇ ಸವಾಲನ್ನು ಯಾವುದೇ ಕಾರಣಕ್ಕಾಗಿ ರದ್ದು ಮಾಡುವ ಇಲ್ಲವೇ ತಿರಸ್ಕರಿಸುವ ಅಧಿಕಾರವನ್ನು ಪೊಲೀಸ್ ಅಧೀಕ್ಷಕರು, ಕರಾವಳಿ ಕಾವಲು ಪೊಲೀಸ್, ಉಡುಪಿ. ಇವರು ಹೊಂದಿರುತ್ತಾರೆ ಮತ್ತು ಅವರ ತೀರ್ಮಾನವೇ ಅಂತಿಮವಾದುದ್ದು.

11) ಟೆಂಡರು ಹರಾಜಿನಲ್ಲಿ ಭಾಗವಹಿಸಿದ ಯಶಸ್ವಿಯಾಗದ ಬಿಡ್ಡುದಾರರು ತಮ್ಮ ತಪ್ಪು ಗ್ರಹಿಕೆಯಿಂದ ಇಲಾಖೆಗೆ ನಷ್ಟವಾಗುವಂತಹ ಸಂದರ್ಭ ಉದ್ಭವಿಸಿದಲ್ಲಿ ಅಂತಹವರು ಮುಂಗಡವಾಗಿ ಪಾವತಿಸಿದ ಹಣದಲ್ಲಿ ನಷ್ಟವನ್ನು ವಸೂಲಿ ಮಾಡಿಕೊಳ್ಳುವ ಅಧಿಕಾರವನ್ನು ಕಾಯ್ದಿರಿಸಲಾಗಿದೆ. ಈ ರೀತಿ ವಸೂಲಿ ಮಾಡಲು ತೀರ್ಮಾನಿಸಿದ ಹಣವನ್ನು ಸ್ಥಳದಲ್ಲಿಯೇ ಪಾವತಿಸತಕ್ಕದ್ದು. ತಪ್ಪಿದಲ್ಲಿ ಸಂಬಂಧಪಟ್ಟವರ ವಿರುದ್ಧ ಕಾನೂನು ರೀತಿಯ ಕ್ರಮ ಜರುಗಿಸಲಾಗುವುದು.

12) ಹರಾಜಿನಲ್ಲಿ ಭಾಗವಹಿಸುವ ಎಲ್ಲಾ ಬಿಡ್ಡುದಾರರು ತಮ್ಮ ಸಂಪೂರ್ಣ ವಿಳಾಸವನ್ನು ಬರೆದಿರುವ ಚೀಟಿಯೊಂದಿಗೆ ಠೇವಣಿ ಹಣವನ್ನು ಪಾವತಿ ಮಾಡತಕ್ಕದ್ದು.

13) ಮೇಲೆ ತಿಳಿಸಿರುವ ಹರಾಜಿನ ವಿಷಯದಲ್ಲಿ ಯಾವುದೇ ವಾದ, ವಿವಾದ ಉಂಟಾದಲ್ಲಿ ಪೊಲೀಸ್ ಅಧೀಕ್ಷಕರು, ಕರಾವಳಿ ಕಾವಲು ಪೊಲೀಸ್, ಉಡುಪಿ ಇವರು ಮಾಡುವ ನಿರ್ಣಯವೇ ಅಂತಿಮವಾಗಿರುತ್ತದೆ.

14) ಭರ್ತಿ ಮಾಡಿದ ಟೆಂಡರ್ ಫಾರಂಗಳಲ್ಲಿ ಟೆಂಡರ್‌ದಾರರು ತಮ್ಮ ಸಂಪೂರ್ಣ ವಿಳಾಸವನ್ನು ಸ್ಪಷ್ಟವಾಗಿ ನಮೂದಿಸಿರಬೇಕು. ಟೆಂಡರ್ ಫಾರಂ ನಮೂನೆಯನ್ನು ಇದರೊಂದಿಗೆ ಲಗತ್ತಿಸಿದೆ.

ಪೊಲೀಸ್ ಅಧೀಕ್ಷಕರು, ಕರಾವಳಿ ಕಾವಲು ಪೊಲೀಸ್, ಉಡುಪಿ.

"ಟೆಂಡರ್ ಫಾರಂ ನಮೂನೆ"

"ನಿರುಪಯುಕ್ತ ವಾಹನಗಳಿಗೆ ಟೆಂಡರ್"

ರಿಗೆ,

ಪೊಲೀಸ್ ಅಧೀಕ್ಷಕರು,

ಕರಾವಳಿ ಕಾವಲು ಪೊಲೀಸ್, ಉಡುಪಿ.

ಮಾನ್ಯರೇ,

ತಮ್ಮ ಕಛೇರಿಯ ಅಧಿಸೂಚನೆ ಸಂಖ್ಯೆ: 31:ವಾ.ಸ.ವಿ/ಕ.ಕಾ.ಪೊ/2009-10, ದಿ. 28.07.2009ರಲ್ಲಿ ತಿಳಿಸಿರುವ ವಾಹನಗಳ ನಿರುಪಯುಕ್ತ ಟಯರ್, ಟ್ಯೂಬ್, ಬ್ಯಾಟರಿ, ಇತ್ಯಾದಿ ಬಿಡಿಭಾಗಗಳನ್ನು ರೂ-------------(ಅಕ್ಷರಗಳಲ್ಲಿ ರೂ-------------------) ಗಳಿಗೆ ಖರೀದಿಸಲು ನಾನು ಇಚ್ಛಿಸಿರುತ್ತೇನೆ.

ಸ್ಥಳ: ತಮ್ಮ ವಿಶ್ವಾಸಿ

ದಿನಾಂಕ: ( )

ಪಿ.ಆರ್. 394 ಟೆಂಡರುದಾರರ ಪೂರ್ಣ ಅಂಚೆ ವಿಳಾಸ

ಸಹಾಯಕ ಕೃಷಿ ನಿರ್ದೇಶಕರ ಕಾರ್ಯಾಲಯ, ಶಿರಾ ತಾಲ್ಲೂಕು, ಶಿರಾ, ತುಮಕೂರು ಜಿಲ್ಲೆ

ಟೆಂಡರ್ ಕಂ ಬಹಿರಂಗ ಹರಾಜು ಪ್ರಕಟಣೆ

ಸಂಖ್ಯೆ:ಸಕೃನಿ/ಶಿ/ಸಿಬ್ಬಂದಿ-2/ಜಡ.ವ.ವಿ/2009-10, ದಿನಾಂಕ: 30ನೇ ಮೇ 2009

ವಿಷಯ: ಸಹಾಯಕ ಕೃಷಿ ನಿರ್ದೇಶಕರು, ಶಿರಾ ಇವರ ಕಾರ್ಯಾಲಯದಲ್ಲಿರುವ ಅನುಪಯುಕ್ತ ಜಡವಸ್ತುಗಳನ್ನು ಬಹಿರಂಗ ಹರಾಜಿನಲ್ಲಿ ಹರಾಜು ಮಾಡುವ ಬಗ್ಗೆ.

ಉಲ್ಲೇಖ:
1. ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು-1 ಇವರ ಪತ್ರ ಸಂಖ್ಯೆ: ಸಾಮಾನ್ಯ.ಜ.ವ/ಅನುಪ/10/2008-09 ದಿ: 16.12.08
2. ಜಂಟಿ ಕೃಷಿ ನಿರ್ದೇಶಕರು, ತುಮಕೂರು ಇವರ ಪತ್ರ ಸಂಖ್ಯೆ: ಜಕೃನಿ/ತು/ಲೆಕ್ಕ-4/ಜಡವಸ್ತು. ವಿ.ವ56/2008-09 ದಿ:4.11.08
3. ಈ ಕಛೇರಿ ಪ್ರಕಟಣೆ ಪತ್ರ ಸಂಖ್ಯೆ: ಸಕೃನಿ/ಶಿ/ಸಿಬ್ಬಂದಿ-2/ಜಡವಸ್ತು.ವಿ.ವ/ 2009-10 ದಿನಾಂಕ: 30.05.2009.

ಸಹಾಯಕ ಕೃಷಿ ನಿರ್ದೇಶಕರು, ಶಿರಾ ಕಾರ್ಯಾಲಯದ ಅನುಪಯುಕ್ತ ಜಡವಸ್ತುಗಳನ್ನು ಹರಾಜು ಮಾಡುವ ಮೂಲಕ ಹೇಗಿದೆಯೋ ಹಾಗೆ ಈ ಕಛೇರಿಯ ಆವರಣದಲ್ಲಿ ಈ ಕಛೇರಿಯ ಹರಾಜು ಪ್ರಕಟಣೆಯಲ್ಲಿ ಹೊರಡಿಸಿರುವ ಷರತ್ತಿಗೆ ಒಳಪಟ್ಟು ಬಹಿರಂಗ ಹರಾಜು ಮೂಲಕ ದಿನಾಂಕ: 30.07.2009 ರಂದು ಮಧ್ಯಾಹ್ನ 3.00 ಗಂಟೆಗೆ ಸರಿಯಾಗಿ ವಿಲೇ ಮಾಡಲಾಗುವುದು.

ವಿಕ್ರಯದ ಮಾದರಿ	ಟೆಂಡರುಗಳನ್ನು ಸ್ವೀಕರಿಸುವ ಸ್ಥಳ	ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	ಹರಾಜಿನ ದಿನಾಂಕ ಮತ್ತು ವೇಳೆ	ಇ.ಎಂ.ಸಿ. ಠೇವಣಿ	ಬಹಿರಂಗ ಹರಾಜು ಮಾಡುವ ಸ್ಥಳ
ಟೆಂಡರ್ ಕಂ ಬಹಿರಂಗ ಹರಾಜು	ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಶಿರಾ	29.07.2009	29.07.2009 ಮಧ್ಯಾಹ್ನ 3.00	ರೂ.5000/ಡಿ.ಡಿ. ಸಹಾಯಕ ಕೃಷಿ ನಿರ್ದೇಶಕರ ಪದನಾಮದಲ್ಲಿ ಶಿರಾ	ಸಹಾಯಕ ಕೃಷಿ ನಿರ್ದೇಶಕರು, ಶಿರಾ ಕಾರ್ಯಾಲಯ, ಟೌನ್ ಪೊಲೀಸ್ ಸ್ಟೇಷನ್ ಹತ್ತಿರ, ಶಿರಾ.

	ಪ್ಲಾಟ್ ನಂ.1		
ಕ್ರ. ಸಂ.	ವಸ್ತುಗಳು	ಸಂಖ್ಯೆ	ಷರಾ
1	ಸ್ಟೀಲ್ ಮಡಚುವ ಕುರ್ಚಿಗಳು	23	
2	ಎಸ್. ಆಕಾರದ ಕುರ್ಚಿಗಳು	20	
3	ಟಪಾಲಿನ ತೂಕದ ಕಡ್ಡಿ	1	
4	ಟೇಬಲ್ ಫ್ಯಾನ್	4	
5	ಟೀಕ್ ವುಡ್ ರಾಟಂ ಬಾಟಂ ಕುರ್ಚಿಗಳು	3	
6	ಎಲೆಕ್ಟ್ರಾನಿಕ್ ಕ್ಯಾಲ್ಕ್ಯುಲೇಟರ್	2	
7	ಎಲೆಕ್ಟ್ರಾನಿಕ್ ಗಡಿಯಾರ	2	
8	ಪಿಕಾಸಿಗಳು	415	
9	ಮಮ್ಮಟಿಗಳು	178	
10	ಕಬ್ಬಿಣದ ಬಾಂಡ್ಲಿಗಳು	160	

ಷರತ್ತುಗಳು:

1) ಅನುಪಯುಕ್ತ ಜಡವಸ್ತುಗಳಿಗೆ ಟೆಂಡರ್ ಸಲ್ಲಿಸುವವರು ಬಿಳಿಯ ಹಾಳೆಯಲ್ಲಿ ಲಾಟ್ ವಾರು ಪ್ರತ್ಯೇಕವಾಗಿ ಗರಿಷ್ಠ ಮೊತ್ತವನ್ನು ಅಂಕಿಗಳಲ್ಲಿ ಮತ್ತು ಅಕ್ಷರಗಳಲ್ಲಿ ನಮೂದಿಸಿ ಸಹಾಯಕ ಕೃಷಿ ನಿರ್ದೇಶಕರು, ಶಿರಾ ಇವರ ಹೆಸರಿನಲ್ಲಿ ಪಡೆದ ರೂ. 5000-00 ಕ್ರಾಸ್ ಮಾಡಿದ ಡಿ.ಡಿ.ಯನ್ನು ಲಗತ್ತಿಸಿ ಮೊಹರು ಮಾಡಿದ ಲಕೋಟೆಯಲ್ಲಿಟ್ಟು ಲಕೋಟೆಯ ಮೇಲೆ ಅನುಪಯುಕ್ತ ಜಡವಸ್ತುಗಳಿಗೆ ಎಂದು ದಪ್ಪ ಅಕ್ಷರಗಳಲ್ಲಿ ನಮೂದಿಸುವುದು ಮತ್ತು ಟೆಂಡರ್‌ದಾರರ ವಿಳಾಸವನ್ನು ಸ್ಪಷ್ಟವಾಗಿ ಬರೆದು ಸಲ್ಲಿಸಬೇಕು. ಡಿ.ಡಿ. ಇಲ್ಲದಿರುವ ಟೆಂಡರ್‌ಗಳನ್ನು ಮಾನ್ಯ ಮಾಡಲಾಗುವುದಿಲ್ಲ.

2) ದಿನಾಂಕ: 30.07.2009 ರಂದು ಬಹಿರಂಗ ಹರಾಜು ಪ್ರಕ್ರಿಯೆ ಮುಕ್ತಾಯದ ನಂತರ ಟೆಂಡರ್ ಲಕೋಟೆಗಳನ್ನು ಬಿಡ್‌ದಾರರ ಹಾಗೂ ಟೆಂಡರ್‌ದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ಆಖೈರು ಬಿಡ್ಡು ಅಥವಾ ಟೆಂಡರ್ ಮೊಬಲಗು ಇವುಗಳಲ್ಲಿ ಗರಿಷ್ಠ ಮೊತ್ತವನ್ನು ಅಂಗೀಕರಿಸಲಾಗುವುದು.

3) ಹರಾಜಿನಲ್ಲಿ ಭಾಗವಹಿಸುವರು ರೂ. 5000/- (ರೂ. ಐದು ಸಾವಿರ) ಮಾತ್ರ ಠೇವಣಿ ಇಟ್ಟು ಹರಾಜಿನಲ್ಲಿ ಭಾಗವಹಿಸುವುದು.

4) ಟೆಂಡರ್ ಹಾಕಿರುವವರು ಸಹ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಇಚ್ಚಿಸಿದಲ್ಲಿ ರೂ. 5000/- ಠೇವಣಿ ಇಟ್ಟು ಹರಾಜಿನಲ್ಲಿ ಭಾಗವಹಿಸುವುದು.

5) ಯಶಸ್ವಿ ಬಿಡ್ಡುದಾರರು/ಟೆಂಡರ್‌ದಾರರು ಠೇವಣಿ ಮೊಬಲಗು ಹೊರತುಪಡಿಸಿ ಗರಿಷ್ಠ ಬಿಡ್/ಟೆಂಡರ್ ಮೊತ್ತದ ಶೇ. 25 ರಷ್ಟು ಮೊಬಲಗು ಸ್ಥಳದಲ್ಲಿಯೇ ಪಾವತಿಸಬೇಕು. ತಪ್ಪಿದಲ್ಲಿ ಅವರು ನೀಡಿರುವ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಟೆಂಡರ್ ಹರಾಜನ್ನು ಕೃಷಿ ಆಯುಕ್ತರು, ಬೆಂಗಳೂರು ರವರು ಅನುಮೋದಿಸಿದ ನಂತರ ಬಾಕಿ ಮೊತ್ತವನ್ನು ಮತ್ತು ನಿಯಮಾನುಸಾರ ತೆರಿಗೆಯನ್ನು ಈ ಕಛೇರಿಯ ತಿಳುವಳಿಕೆ ಪತ್ರ ಸ್ವೀಕರಿಸಿದ 10 ದಿನದೊಳಗೆ ಪಾವತಿಸಿ ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ಅನುಪಯುಕ್ತ ಜಡವಸ್ತುಗಳನ್ನು ತೆಗೆದುಕೊಂಡು ಹೋಗತಕ್ಕದ್ದು. ತಪ್ಪಿದಲ್ಲಿ ಅವರು ಪಾವತಿಸಿದ ಒಟ್ಟು ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ಆ ಬಗ್ಗೆ ಯಾವುದೇ ಹಕ್ಕು ಅವರಿಗೆ ಇರುವುದಿಲ್ಲ.

6) ಯಶಸ್ವಿ ಬಿಡ್: ಟೆಂಡರುದಾರರು ತಮ್ಮ ಖರ್ಚಿನಲ್ಲಿ ಜಡವಸ್ತುಗಳ ಸಾಗಣೆ ಮಾಡಿಕೊಳ್ಳತಕ್ಕದ್ದು.

7) ಯಶಸ್ವಿ ಬಿಡ್: ಟೆಂಡರುದಾರರು ಹೊರತುಪಡಿಸಿ ಉಳಿದವರಿಗೆ ಠೇವಣಿ ಹಣ ಡಿ.ಡಿ.ಯನ್ನು ಹರಾಜು ಪ್ರಕ್ರಿಯೆ ಮುಕ್ತಾಯವಾದ ನಂತರ ಅವರಿಂದ ಲಿಖಿತ ಬೇಡಿಕೆ ನೀಡಿದ ತರುವಾಯ ಹಿಂದಿರುಗಿಸಲಾಗುವುದು.

8) ಹರಾಜು ಕೈಗೊಳ್ಳುವ/ರದ್ದುಪಡಿಸುವ/ಮುಂದೂಡುವ ಹಾಗೂ ಬಿಡದ ಅಂಗೀಕರಿಸುವ ಮತ್ತು ತಿರಸ್ಕರಿಸುವ ಹಕ್ಕು ಕಾಯ್ದಿರಿಸಲಾಗಿದೆ.

9) ಎಲ್ಲಾ ವಿಷಯಗಳಲ್ಲಿ ಸಹಾಯಕ ಕೃಷಿ ನಿರ್ದೇಶಕರು, ತುಮಕೂರು, ಇವರ ತೀರ್ಮಾನವೇ ಅಂತಿಮವಾಗಿರುತ್ತದೆ. ಈ ತೀರ್ಮಾನಕ್ಕೆ ಎಲ್ಲಾ ಬಿಡ್‌ದಾರರು/ಟೆಂಡರ್‌ದಾರರು ಬದ್ದರಾಗಿರಬೇಕಾಗಿರುತ್ತದೆ.

10) ಅನುಪಯುಕ್ತ ಜಡವಸ್ತುಗಳನ್ನು ಈಗ ಇದ್ದ ಪರಿಸ್ಥಿತಿಯಲ್ಲಿಯೇ ಹರಾಜು ಮಾಡಲಾಗುವುದು. ಕಛೇರಿ ಕೆಲಸದ ದಿನಗಳಲ್ಲಿ ಕಛೇರಿ ವೇಳೆಯಲ್ಲಿ ವೀಕ್ಷಿಸಬಹುದು.

ಜಡವಸ್ತುಗಳ ವಿವರದ ಪಟ್ಟಿಯನ್ನು ಕಛೇರಿಯ ನಾಮಫಲಕದಲ್ಲಿ ಪ್ರಕಟಿಸಿದೆ.

ಪಿ.ಆರ್. 405 ಸಹಾಯಕ ಕೃಷಿ ನಿರ್ದೇಶಕರು, ಶಿರಾ ತಾಲ್ಲೂಕು, ಶಿರಾ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ಟೆಂಡರ್ ಅಧಿಸೂಚನೆ

ಸಂಖ್ಯೆ: ಸಿಆಸುಇ 27 ಡಿಸಭೆ 2009, ಬೆಂಗಳೂರು, ದಿನಾಂಕ: 2ನೇ ಜೂನ್ 2009

ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ನಡೆಯುವ ಸಭೆ:ಸಮಾರಂಭಗಳಿಗೆ ಮತ್ತು ರಾಜಭವನದಲ್ಲಿ ನಡೆಯುವ ಪ್ರಮಾಣ ವಚನ ಸ್ವೀಕಾರ ಮುಂತಾದ ಸಮಾರಂಭಗಳಿಗೆ ಈ ಕೆಳಕಂಡ ಪೀಠೋಪಕರಣಗಳು, ಶಾಮಿಯಾನ, ವೇದಿಕೆ ಮುಂತಾದವುಗಳನ್ನು ದಿನಾಂಕ: 13.08.2009 ರಿಂದ ಒಂದು ವರ್ಷ ಅವಧಿಗೆ ದರಗುತ್ತಿಗೆ ಆಧಾರದ ಮೇಲೆ ಬಾಡಿಗೆಗೆ ಸರಬರಾಜು ಮಾಡುವ ಬಗ್ಗೆ ಅನುಭವಸ್ಥ ಹಾಗೂ ಪ್ರಸಿದ್ಧ ಸಂಸ್ಥೆಗಳಿಂದ ಟೆಂಡರ್‌ಗಳನ್ನು ಕರೆಯಲಾಗಿದೆ.

ಕ್ರ. ಸಂ.	ಪೀಠೋಪಕರಣಗಳ ವಿವರ	ಕ್ವಾಂಟಿಟಿ	ಮೊತ್ತ ರೂ.
1.	ಸ್ಟೀಲ್ ಫೋಲ್ಡಿಂಗ್ ಚೇರ್	100 ನಂ.	
2.	ಡೆಲ್ಲಿ ಕೇನ್ ಚೇರ್	100 ನಂ.	
3.	ಪೋಡಿಯಂ	ಪ್ರತಿಯೊಂದಕ್ಕೆ	
4.	ಪೋಡಿಯಂ ವೆಲ್ವೆಟ್	ಪ್ರತಿಯೊಂದಕ್ಕೆ	
5.	ಫೆದರ್‌ಲೈಟ್ ಕುಷನ್ ಚೇರ್	ಪ್ರತಿಯೊಂದಕ್ಕೆ	
6.	ಫೆದರ್‌ಲೈಟ್ ದರ್ಬಾರ್ ಚೇರ್	ಪ್ರತಿಯೊಂದಕ್ಕೆ	
7.	ವುಡನ್ ಟೇಬಲ್ಸ್ 6 x 2	ಪ್ರತಿಯೊಂದಕ್ಕೆ	
8.	ವುಡನ್ ಟೇಬಲ್ಸ್ 2 1/2 x 2 1/2	ಪ್ರತಿಯೊಂದಕ್ಕೆ	
9.	ಸ್ಟೀಲ್ ಫ್ರೇಮ್ಸ್ ಟೇಬಲ್ಸ್ ವಿತ್ ಸ್ಟೀಲ್ ಲೆಗ್ಸ್	ಪ್ರತಿಯೊಂದಕ್ಕೆ	
10.	ಟೇಬಲ್ ಕ್ಲಾತ್ 7 x 4	ಪ್ರತಿಯೊಂದಕ್ಕೆ	

ಕ್ರ. ಸಂ.	ಪೀಠೋಪಕರಣಗಳ ವಿವರ	ಕ್ವಾಂಟಿಟಿ	ಮೊತ್ತ ರೂ.
11.	ಟೇಬಲ್ ಕ್ಲಾತ್ 4 x 4	ಪ್ರತಿಯೊಂದಕ್ಕೆ	
12.	ವುಡನ್ ಸ್ಟೇಜ್ ವಿತ್ ಸ್ಟೆಪ್ಸ್ 1 ½' ಎತ್ತರ	ಸ್ಕ್ವೇರ್‌ಫೀಟ್	
13.	ವುಡನ್ ಸ್ಟೇಜ್ ವಿತ್ ಸ್ಟೆಪ್ಸ್ 2 ½' ಎತ್ತರ	ಸ್ಕ್ವೇರ್‌ಫೀಟ್	
14.	ಶಾಮಿಯಾನ (ಆರ್ಡಿನರಿ)	ಸ್ಕ್ವೇರ್‌ಫೀಟ್	
15.	ಪೈಪ್ ಶಾಮಿಯಾನ	ಸ್ಕ್ವೇರ್‌ಫೀಟ್	
16.	ಸೈಡ್‌ವಾಲ್	ಸ್ಕ್ವೇರ್‌ಫೀಟ್	
17.	ಬೆಂಚುಗಳು	ಪ್ರತಿಯೊಂದಕ್ಕೆ	
18.	ಸ್ಟೀಲ್ ಫ್ರೇಮ್ ಬೆಂಚ್ ವಿತ್ ಸ್ಟೀಲ್ ಲೆಗ್ಸ್	ಪ್ರತಿಯೊಂದಕ್ಕೆ	
19.	ರೆಡ್ ಕಾಯಿರ್‌ಮ್ಯಾಟ್	ಸ್ಕ್ವೇರ್‌ಫೀಟ್	
20.	ಫೆದರ್ ಲೈಟ್ ಫೋಮ್ ಕುಷನ್–ಚೇರ್ ವಿತ್ ಆರ್ಮ್ಸ್	ಪ್ರತಿಯೊಂದಕ್ಕೆ	
21.	ಟೀಪಾಯ್ (ಬಿಗ್)	ಪ್ರತಿಯೊಂದಕ್ಕೆ	
22.	ವಾಟರ್ ಡ್ರಮ್ಸ್	ಪ್ರತಿಯೊಂದಕ್ಕೆ	
23.	ಸಿಂಟೆಕ್ಸ್ ಟ್ಯಾಂಕ್ಸ್	ಪ್ರತಿಯೊಂದಕ್ಕೆ	
24.	ವಾಟರ್ ಡ್ರಮ್ (ಹಾಫ್ ಡ್ರಮ್)	ಪ್ರತಿಯೊಂದಕ್ಕೆ	
25.	ಮಗ್ಸ್	100 ನಂ.	
26.	ವಾಷ್ ಬೇಸಿನ್ (ಸ್ಟೀಲ್)	ಪ್ರತಿಯೊಂದಕ್ಕೆ	
27.	ಸೂಪರ್ ಸ್ಟ್ರಚರ್	ಸ್ಕ್ವೇರ್‌ಫೀಟ್	
28.	ಡೀಲಕ್ಸ್ ವೈರ್ ಚೇರ್ಸ್	100 ನಂ.	
29.	ಫ್ಲಾಟ್ ಫಾರ್ಮ್ ಟೀಪಾಯ್ಸ್	ಪ್ರತಿಯೊಂದಕ್ಕೆ	
30.	ರೆಡ್ ಫ್ರಿಲ್ಸ್	ಪ್ರತಿಯೊಂದಕ್ಕೆ	
31.	ಬ್ಲೂ ಫ್ರಿಲ್ಸ್	ಪ್ರತಿಯೊಂದಕ್ಕೆ	
32.	ಸ್ಟೆಪ್ ಕಾರ್ಪೆಟ್	ಪ್ರತಿಯೊಂದಕ್ಕೆ	
33.	ರೆಡ್ ಕಾರ್ಪೆಟ್	ಪ್ರತಿಯೊಂದಕ್ಕೆ	
34.	ನಯಾಗರ ಫೌಂಟೇನ್ (ಬಿಗ್)	ಪ್ರತಿಯೊಂದಕ್ಕೆ	
35.	ಬೆಡ್ ಶೀಟ್ 15 x 15	ಪ್ರತಿಯೊಂದಕ್ಕೆ	
36.	ಕಾರ್ಪೆಟ್	ಸ್ಕ್ವೇರ್‌ಫೀಟ್	
37.	ಡೆಲ್ಲಿ ಡರ್ಬಾರ್ ಚೇರ್ಸ್	ಪ್ರತಿಯೊಂದಕ್ಕೆ	
38.	ಪರ್ಷಿಯನ್ ಕಾರ್ಪೆಟ್	ಸ್ಕ್ವೇರ್‌ಫೀಟ್	
39.	ಸಿಲ್ಕ್ ಕ್ಲಾತ್	ಸ್ಕ್ವೇರ್‌ಫೀಟ್	
40.	ವೈಟ್ ಕ್ಲಾತ್	ಸ್ಕ್ವೇರ್‌ಫೀಟ್	
41.	ವೆಲ್ವೆಟ್ ಸ್ಕ್ರೀನ್	ಸ್ಕ್ವೇರ್‌ಫೀಟ್	
42.	ಪ್ಲಾಸ್ಟಿಕ್ ಚೇರ್ಸ್	100 ನಂ.	
43.	ಪ್ಲಾಸ್ಟಿಕ್ ಚೇರ್ಸ್ ವಿತ್ ಆರ್ಮ್ಸ್	100 ನಂ.	
44.	ಫ್ಲ್ಯಾಗ್ ಪೋಲ್ ವಿತ್ ಕ್ಲಾತ್ ಬ್ಯಾಂಡ್	ಪ್ರತಿಯೊಂದಕ್ಕೆ	
45.	ಟಬುಲರ್ ಸೋಫಾ (ಸಿಂಗಲ್)	ಪ್ರತಿಯೊಂದಕ್ಕೆ	
46.	ಟಬುಲರ್ ಸೋಫಾ (ಡಬಲ್)	ಪ್ರತಿಯೊಂದಕ್ಕೆ	
47.	ಟಬುಲರ್ ಸೋಫಾ (3 ಸೀಟರ್)	ಪ್ರತಿಯೊಂದಕ್ಕೆ	
48.	ಡ್ರೆಸ್ಸಿಂಗ್ ಮಿರರ್ಸ್	ಪ್ರತಿಯೊಂದಕ್ಕೆ	
49.	ಕ್ಯಾಸೋಪಿ	ಪ್ರತಿಯೊಂದಕ್ಕೆ	

ಕ್ರ. ಸಂ.	ಪೀಠೋಪಕರಣಗಳ ವಿವರ	ಕ್ವಾಂಟಿಟಿ	ಮೊತ್ತ ರೂ.
50.	ವುಲನ್ ಕಾರ್ಪೆಟ್ಸ್	ಸ್ಕ್ವೇರ್‌ಫೀಟ್	
51.	ಸೋಫಾ (ಬ್ರ್ಯಾಸ್)	ಪ್ರತಿಯೊಂದಕ್ಕೆ	
52.	ಸಿಂಥೆಟಿಕ್ ಕಾರ್ಪೆಟ್	ಸ್ಕ್ವೇರ್‌ಫೀಟ್	
53.	ದೊಡ್ಡ ದೀಪದ ಕಂಬ	ಪ್ರತಿಯೊಂದಕ್ಕೆ	
54.	ಬ್ಯಾಕ್ ಡ್ರಪ್	ಪ್ರತಿಯೊಂದಕ್ಕೆ	
55.	ರೌಂಡ್ ಟೇಬಲ್ ವಿತ್ ಟೇಬಲ್ ಕ್ಲಾತ್	ಪ್ರತಿಯೊಂದಕ್ಕೆ	
56.	VVIP ಕುರ್ಚಿ	ಪ್ರತಿಯೊಂದಕ್ಕೆ	
57.	ಸ್ಟೀಲ್ ಬ್ಯಾರಿಕ್ಯಾಡಿಂಗ್	ಸ್ಕ್ವೇರ್‌ಫೀಟ್	
58.	ರೈಲಿಂಗ್ಸ್	ಪ್ರತಿಯೊಂದಕ್ಕೆ	

ಷರತ್ತು ಮತ್ತು ನಿಬಂಧನೆಗಳು:

1) ನಮೂದಿಸಿರುವ ದರಗಳಲ್ಲಿ ಪೀಠೋಪಕರಣಗಳ ಸಾಗಾಣಿಕೆ ವೆಚ್ಚ ಹಾಗೂ ಲೇಬರ್ ವೆಚ್ಚವನ್ನು ಸೇರಿಸಿ ನಮೂದಿಸತಕ್ಕದ್ದು.
2) ಪೀಠೋಪಕರಣಗಳನ್ನು ಎರಡನೇ ದಿನ ಮತ್ತು ನಂತರದ ದಿನಗಳಿಗೆ ಉಪಯೋಗಿಸಿಕೊಂಡಲ್ಲಿ ಸಂಸ್ಥೆಯು ಬಾಡಿಗೆ ವೆಚ್ಚದಲ್ಲಿ ಶೇಕಡಾ 25 ರಿಯಾಯಿತಿಯನ್ನು ನೀಡತಕ್ಕದ್ದು.
3) ಒಳ್ಳೆಯ ಗುಣಮಟ್ಟದ ಹಾಗೂ ಸ್ವಚ್ಛವಾಗಿರುವ ಪೀಠೋಪಕರಣಗಳನ್ನೇ ಸಂಸ್ಥೆಯು ಸರಬರಾಜು ಮಾಡತಕ್ಕದ್ದು.
4) ಟೆಂಡರ್‌ನೊಂದಿಗೆ ಇ.ಎಂ.ಡಿ. (ಠೇವಣಿ) ಮೊತ್ತ ರೂ. 25,000–00ಕ್ಕೆ ಬ್ಯಾಂಕ್ ಡ್ರಾಫ್ಟ್‌ನ್ನು **ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಲೆಕ್ಕಪತ್ರ)** ಇವರ ಹೆಸರಿನಲ್ಲಿ ಸಲ್ಲಿಸತಕ್ಕದ್ದು. ಇ.ಎಂ.ಡಿ. ಸಂಬಂಧ ಬ್ಯಾಂಕ್ ಡ್ರಾಫ್ಟ್ ಲಗತ್ತಿಸಿರದ ಟೆಂಡರನ್ನು ತಿರಸ್ಕರಿಸಲಾಗುವುದು.
5) ಅಗತ್ಯ ಬಂದಾಗ ರಜಾ ದಿನಗಳಲ್ಲೂ ಹಾಗೂ ತುರ್ತು ಪ್ರಕರಣಗಳಲ್ಲಿ ಅತ್ಯಂತ ಕಡಿಮೆ ಕಾಲಾವಕಾಶದಲ್ಲಿ ಪೀಠೋಪಕರಣಗಳನ್ನು ಸರಬರಾಜು ಮಾಡಲು ಸಂಸ್ಥೆಯು ಬದ್ಧವಾಗಿರತಕ್ಕದ್ದು.
6) ದೊಡ್ಡ ಪ್ರಮಾಣದಲ್ಲಿ ಸಭೆ/ಸಮಾರಂಭಗಳಿಗೆ ಪೀಠೋಪಕರಣ, ವೇದಿಕೆಗಳನ್ನು ಏರ್ಪಾಡು ಮಾಡಿ ಅನುಭವ ಇರುವಂತಹ ಸಂಸ್ಥೆಗಳು ಮಾತ್ರ ಟೆಂಡರ್‌ನಲ್ಲಿ ಭಾಗವಹಿಸತಕ್ಕದ್ದು.
7) ಟೆಂಡರ್‌ನೊಂದಿಗೆ ದಿನಾಂಕ: 31.03.2009ಕ್ಕೆ ಅನ್ವಯಿಸುವ ಆದಾಯ ತೆರಿಗೆ ಮತ್ತು ಸೇವಾ ತೆರಿಗೆ ಪಾವತಿ ಮಾಡಿರುವ ರಶೀತಿಗಳನ್ನು ಸಲ್ಲಿಸತಕ್ಕದ್ದು.
8) ಸರಬರಾಜು ಮಾಡುವ ಪೀಠೋಪಕರಣಗಳ ಏರ್ಪಾಡು ತೃಪ್ತಿಕರವಾಗಿರದಿದ್ದಲ್ಲಿ ಅಥವಾ ಉತ್ತಮ ಗುಣಮಟ್ಟದ ಹಾಗೂ ಸ್ವಚ್ಛವಾದ ಪೀಠೋಪಕರಣ, ಶಾಮಿಯಾನ ಇತ್ಯಾದಿಗಳನ್ನು ಸಂಸ್ಥೆಯು ಸರಬರಾಜು ಮಾಡದಿದ್ದಲ್ಲಿ ಮತ್ತು ಕಡಿಮೆ ಕಾಲಾವಕಾಶದಲ್ಲಿ ಪೀಠೋಪಕರಣಗಳನ್ನು ಸರಬರಾಜು ಮಾಡಲು ವಿಫಲರಾದಲ್ಲಿ, ಅವಧಿಗೆ ಮೊದಲೇ ಗುತ್ತಿಗೆಯನ್ನು ರದ್ದುಗೊಳಿಸಲು ಮತ್ತು ಇ.ಎಂ.ಡಿ. ಮೊತ್ತ (ಭದ್ರತಾ ಠೇವಣಿ)ವನ್ನು ಮುಟ್ಟುಗೋಲು ಹಾಕಿಕೊಳ್ಳುವ ಹಕ್ಕನ್ನು ಸರ್ಕಾರ ಕಾದಿರಿಸಿದೆ.
9) ಮೊಹರಾದ ಟೆಂಡರ್‌ಗಳ ಲಕೋಟೆಯ ಮೇಲೆ **ಬಾಡಿಗೆ ಆಧಾರದ ಮೇಲೆ ಪೀಠೋಪಕರಣಗಳ ಸರಬರಾಜು ದರಗುತ್ತಿಗೆ** ಎಂದು ನಮೂದಿಸತಕ್ಕದ್ದು.
10) ಯಶಸ್ವಿ ಟೆಂಡರ್‌ದಾರರ ಇ.ಎಂ.ಡಿ. ಹಣವನ್ನು ಭದ್ರತಾ ಠೇವಣಿಯಾಗಿ ಇಟ್ಟುಕೊಳ್ಳಲಾಗುವುದು. ಗುತ್ತಿಗೆ ಅವಧಿ ಮುಗಿದ ನಂತರ ಈ ಹಣವನ್ನು ಯಾವುದೇ ದೂರು ಇಲ್ಲದಿದ್ದಲ್ಲಿ, ಬಡ್ಡಿರಹಿತವಾಗಿ ಹಿಂದಿರುಗಿಸಲಾಗುವುದು.
11) ತುರ್ತು ಪ್ರಕರಣದಲ್ಲಿ ಕೇವಲ 4 ಅಥವಾ 5 ಗಂಟೆಯ ಕಾಲಾವಕಾಶದಲ್ಲಿ ಪೀಠೋಪಕರಣ, ಶಾಮಿಯಾನ, ವೇದಿಕೆ ಸಿದ್ಧಪಡಿಸುವ ಸಂದರ್ಭಗಳಿದ್ದು, ಈ ಸಂಬಂಧ ಎಲ್ಲ ಏರ್ಪಾಡುಗಳನ್ನು ಯಾವುದೇ ಕಾರಣ ನೀಡದೆ ಸಿದ್ಧಗೊಳಿಸಲು ಶಕ್ತ ಇರುವ ಸಂಸ್ಥೆಗಳು ಮಾತ್ರ ಟೆಂಡರ್‌ನಲ್ಲಿ ಭಾಗವಹಿಸತಕ್ಕದ್ದು.
12) ಗುತ್ತಿಗೆ ಅವಧಿಯು ದಿನಾಂಕ: 13.08.2009 ರಿಂದ ಒಂದು ವರ್ಷದ ಅವಧಿಯವರೆಗೆ ಇರುತ್ತದೆ.
13) ಅಯಶಸ್ವಿ ಟೆಂಡರ್‌ದಾರರ ಬ್ಯಾಂಕ್ ಡ್ರಾಫ್ಟ್‌ನ್ನು ಹಿಂದಿರುಗಿಸಲಾಗುವುದು.
14) ಟೆಂಡರ್‌ನ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ, ಗುತ್ತಿಗೆಯನ್ನು ರದ್ದುಪಡಿಸಲು ಮತ್ತು ಇ.ಎಂ.ಡಿ (ಭದ್ರತಾ ಠೇವಣಿ)ಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಹಕ್ಕನ್ನು ಸರ್ಕಾರ ಕಾಯ್ದಿರಿಸಿದೆ.

15) ಗುತ್ತಿಗೆದಾರರು ತಮ್ಮಲ್ಲಿರುವ ಮಾನವ ಶಕ್ತಿ, ಪೀಠೋಪಕರಣ, ಶಾಮಿಯಾನ ಇತ್ಯಾದಿಗಳ ವಿವರಗಳನ್ನು ಒದಗಿಸತಕ್ಕದ್ದು.
16) ಟೆಂಡರ್‌ಗಳನ್ನು ದಿನಾಂಕ: 03.07.2009ರಂದು ಮಧ್ಯಾಹ್ನ 3.00 ಗಂಟೆಯೊಳಗೆ ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಕಾರ್ಯಕಾರಿ), ಕೊಠಡಿ ಸಂಖ್ಯೆ: 23, ನೆಲಮಹಡಿ, ವಿಧಾನಸೌಧ, ಬೆಂಗಳೂರು–01 ಇಲಿ ಸಲ್ಲಿಸತಕ್ಕದ್ದು. ನಂತರ ಬಂದ ಟೆಂಡರ್ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
17) ಟೆಂಡರ್‌ಗಳನ್ನು ದಿನಾಂಕ: 04.07.2009ರಂದು ಮಧ್ಯಾಹ್ನ 3.00 ಗಂಟೆಗೆ ಸರ್ಕಾರದ ಉಪ ಕಾರ್ಯದರ್ಶಿ, ಸಿಆಸುಇ (ಕಾರ್ಯಕಾರಿ), ಕೊಠಡಿ ಸಂಖ್ಯೆ: 23, ವಿಧಾನಸೌಧ, ಇವರ ಕಛೇರಿಯಲ್ಲಿ ತೆರೆಯಲಾಗುವುದು. ಟೆಂಡರ್ ತೆರೆಯುವ ದಿನ ಯಾವುದಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ, ಟೆಂಡರ್‌ನ್ನು ನಂತರದ ಕರ್ತವ್ಯದ ದಿನದಂದು ಅದೇ ಸ್ಥಳ ಮತ್ತು ವೇಳೆಯಲ್ಲಿ ತೆರೆಯಲಾಗುವುದು. ಟೆಂಡರ್‌ನ್ನು ತೆರೆಯುವ ಸಮಯದಲ್ಲಿ ಟೆಂಡರ್‌ದಾರರು ಅಥವಾ ಅವರ ಅಧಿಕೃತ ಪ್ರತಿನಿಧಿ ಹಾಜರಿರಬಹುದು.
